ಶೃಂಗಾರ



ಪದ್ಮಾ ಶ್ರೀಧರ್

ಹೊಣೆಗಾರ

ಪದ್ಮಾ ಶ್ರೀಧರ್

ಸೌಮ್ಯ ಎಂ.
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು,
ನಂ. 7/1, ಎಂ.ಎಸ್. ಕೃಷ್ಣರಾವ್ ಪಾರ್ಕ್ ಎದುರು,
ಬಸವನಗುಡಿ, ಬೆಂಗಳೂರು - 560 004.

HONEGARA - A Kannada Novel by Padma Shridhar, Published by Sowmya M., No. 7 / 1, Opp. M. N. Krishna Rao Park, Basavanagudi, Bangalore - 560 004.

ಪುಟಗಳು : 272

ಮುದ್ರಣ : 2004

ಬೆಲೆ : **ರೂ. 135-00**

ಮುಖಪುಟ ವಿನ್ಯಾಸ : ಶಶಿಧರ

ಅಕ್ಷರ ಜೋಡಣೆ : ಡೇಟಾ ಸೆಲ್ಯೂಷನ್ಸ್
ಬೆಂ - 85. ಫೋನ್ : 9342211944/2

ಮುದ್ರಣ : ಸ್ಟ್ಯಾಂಡರ್ಡ್ ಪ್ರಿಂಟರ್ಸ್,
ಶಂಕರಮಠ ರಸ್ತೆ, ಬೆಂಗಳೂರು - 04.

ಮುನ್ನುಡಿ

ಮಾನವನಾಗಿ ಹುಟ್ಟಿದ ಪ್ರತಿಯೊಬ್ಬನಿಗೂ ಅವನೊಂದಿಗೇ ಅವನ ಹೆಗಲನ್ನೇರುವ ಹೊಣೆ ಅವನೊಂದಿಗೇ ಮುಕ್ತಾಯವಾಗುತ್ತದೆ. ಕೆಲವರು ಹೊಣೆಯನ್ನು ಹೆಚ್ಚಿಸಿಕೊಂಡರೆ, ಕೆಲವರು ಅದರಿಂದ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸುತ್ತಾರೆ. ಆದರೂ ಹೊಣೆ ಯಾರನ್ನೂ ಬಿಡುವುದಿಲ್ಲ. ಕೆಲವೊಮ್ಮೆ ಅದು ಜವಾಬ್ದಾರಿ ಎನಿಸಿಕೊಳ್ಳುತ್ತದೆ. ಕೆಲವೊಮ್ಮೆ ಅದು ಕರ್ತವ್ಯವಾಗುತ್ತದೆ. ಹೀಗೆ ಹೊಣೆ ಹೆಚ್ಚುತ್ತಲೇ ಹೋಗುತ್ತದೆ. ಹೀಗೆಯೇ ಅನಿವಾರ್ಯ ಕಾರಣಗಳಿಂದ ''ಹೆಗಲನ್ನೇರುವ ಹೊಣೆ'' ಯೇ ಈ ಕಾದಂಬರಿಯ ಕಥಾವಸ್ತು. ಆ ಹೊಣೆ ಹೇಗೆ ಶುರುವಾಗುತ್ತದೆ, ಹೇಗೆ ಬೆಳೆಯುತ್ತಾ ಹೋಗುತ್ತದೆ, ಎಲ್ಲಿಗೆ ತಲುಪುತ್ತದೆ ಎನ್ನುವುದು ಈ ಕಾದಂಬರಿಯ ಪುಟಗಳಲ್ಲಿ ಗೋಚರವಾಗುತ್ತದೆ. ಈ ಹೊಣೆಯ ಪರಮಾವಧಿ ಎಲ್ಲಿಯವರೆಗೆ ಎಂದರೆ, ಒಬ್ಬ 'ಆಧುನಿಕ ವ್ಯಾಸ'ನಾಗುತ್ತಾನೆ ; ಮತ್ತೊಬ್ಬ 'ಕಲಿಯುಗದ ಭೀಷ್ಮ'ನಾಗುತ್ತಾನೆ. ಆದರೆ, ಇವರಿಬ್ಬರಲ್ಲಿ ನಿಜವಾದ 'ಹೊಣೆಗಾರ' ಯಾರು ಎನ್ನುವುದನ್ನು ಓದುಗರ ಮತಕ್ಕೇ ಬಿಟ್ಟು ಬಿಡುತ್ತೇನೆ.

ಈ ಸಾಮಾಜಿಕ ಕಾದಂಬರಿಯಲ್ಲಿ, ಯಾವುದೇ ಪೌರಾಣಿಕ ಕೃತಿಯ ಛಾಯೆ ಕಂಡು ಬಂದರೂ, ಇದು ಅದರ ಪ್ರತಿಕೃತಿಯಲ್ಲ. ನನ್ನಲ್ಲೇ ಮೂಡಿದ ಕಥಾವಸ್ತುವನ್ನು ಹೆಣೆದು ಕಾದಂಬರಿಯನ್ನಾಗಿ ಬರೆದಿರುವುದು ನನ್ನ ಹೊಣೆ. ಓದುಗರಿಗೆ ಮೆಚ್ಚುಗೆಯಾಗುವುದೆಂದು ನನ್ನ ಆಶಯ.

ಕಾದಂಬರಿಯನ್ನು ಅಚ್ಚುಕಟ್ಟಾಗಿ ಪುಸ್ತಕದ ರೂಪದಲ್ಲಿ ಪ್ರಕಟಿಸಿ ಹೊರತಂದ ಪ್ರಕಾಶಕ ಬಳಗದವರಿಗೆ ನನ್ನ ಕೃತಜ್ಞತೆಗಳು. ಮುಖಪುಟವನ್ನು ಅಂದವಾಗಿ ಬರೆದುಕೊಟ್ಟು ಕಾದಂಬರಿಯ ಸೊಗಸನ್ನು ಹೆಚ್ಚಿಸಿರುವ ಕಲಾವಿದ ಶ್ರೀ ಶಶಿಧರ ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ನಮಸ್ಕಾರಗಳೊಂದಿಗೆ,

ತಮ್ಮ ವಿಶ್ವಾಸಿ
ಪದ್ಮಾ ಶ್ರೀಧರ್

ಪ್ರಕಾಶಕರ ನುಡಿ

'ಹೊಣೆಗಾರ' ಕನ್ನಡ ಕಾದಂಬರಿ ಅನಿವಾರ್ಯ ಕಾರಣಗಳಿಂದಾಗಿ ಹೆಗಲನ್ನೇರುವ ಹೊಣೆಯನ್ನು ನಿಭಾಯಿಸುವ ಕಥಾವಸ್ತುವನ್ನು ಹೊಂದಿದ್ದು ಬಹಳ ಅಚ್ಚುಕಟ್ಟಾಗಿ, ಸರಳವಾಗಿ ನಿರೂಪಿಸಲ್ಪಟ್ಟಿದೆ.

ಲೇಖಕಿ ಶ್ರೀಮತಿ ಪದ್ಮಾ ಶ್ರೀಧರ್‌ರವರಿಗೆ, ಅಕ್ಷರ ಜೋಡಣೆ ಮಾಡಿಕೊಟ್ಟ ಡೇಟಾ ಸೆಲ್ಯೂಷನ್ಸ್ ರವರಿಗೂ, ಮುಖಚಿತ್ರ ವಿನ್ಯಾಸಕಾರರಾದ ಶ್ರೀ ಶಶಿಧರ್‌ರವರಿಗೂ ಮತ್ತು ಮುದ್ರಣ ಜವಾಬ್ದಾರಿ ಹೊತ್ತ ಸ್ಟ್ಯಾಂಡರ್ಡ್ ಪ್ರಿಂಟರ್ಸ್ ಇವರೆಲ್ಲರಿಗೂ ಕೃತಜ್ಞತೆಗಳು.

ಪ್ರಕಾಶಕರು

ಹೊಣೆಗಾರ

ಹೆದ್ದಾರಿಯಲ್ಲಿ ವೇಗವಾಗಿ ಚಲಿಸುತ್ತಿದ್ದ ಕಾರು ಕೈ ಕೊಟ್ಟು ಚಲಿಸದೇ ನಿಂತಾಗ ನಾಗೇಶ ಬೇಸರಗೊಂಡ. ಅವನ ಬೇಸರವನ್ನು ಗಮನಿಸಿ, ಡ್ರೈವರ್ ನಂಜಪ್ಪ ಹೇಳಿದ್ದ ಮಾತಿಗೆ ನಾಗೇಶ ತಲೆ ಅಡ್ಡಡ್ಡ ತೂಗಿ, ತನ್ನ ನಕಾರವನ್ನು ಸೂಚಿಸಿದ್ದ. ಬೇರೆ ಯಾರದೋ ಕಾರನ್ನು ನಿಲ್ಲಿಸಿ ಬೆಂಗಳೂರಿನ ತನಕ ಲಿಫ್ಟ್ ಕೊಡಿ ಎಂದು ಕೇಳುವುದು ಅವನಿಗೆ ಇಷ್ಟವಿಲ್ಲದ ವಿಷಯ.

''ಇಲ್ಲೆಲ್ಲಾದರೂ ಹತ್ತಿರ ಮೆಕ್ಯಾನಿಕ್ ಸಿಗ್ತಾರಾ ಅಂತ ನೋಡಿ ಬರ್ತೀನಿ'' ಎಂದು ನಂಜಪ್ಪ ಇಳಿದು ಹೊರಟಾಗ ಹೇಳಿದ.

''ಹಾಗೇ ಎಲ್ಲಿಂದಾದ್ರೂ ಫೋನು ಮಾಡಿ ಮನೆಗೆ. ಸ್ವಲ್ಪ ಬರುವುದು ತಡವಾಗುತ್ತೆ ಅಂತ ತಿಳಿಸಿ. ಕಾರು ಕೆಟ್ಟಿದೆ ಅಂತ ಹೇಳಬೇಡಿ. ಅಪ್ಪ ಗಾಬರಿಯಾಗ್ತಾರೆ.''

''ಆಗಲಿ ಸಾರ್'' ಎಂದು ನುಡಿದ ನಂಜಪ್ಪ ಅತ್ತ ಹೋದ ನಂತರ ನಾಗೇಶ ಸೀಟಿಗೆ ಒರಗಿ ಕೂತು ಕಿಟಕಿಯಿಂದಾಚೆ ಸುಮ್ಮನೇ ನೋಡತೊಡಗಿದ. ಕಾರಿನ ಪಕ್ಕದಲ್ಲಿ ಹಾದು ಹೋದ ಹುಡುಗನೊಬ್ಬ ಇವನ ಕಣ್ಣಿಗೆ ಬಿದ್ದ. ಅವನ ಕೈಯಲ್ಲಿದ್ದ ಟಿಫಿನ್ ಕ್ಯಾರಿಯರ್‌ನ್ನು ಇವನು ಕಂಡ ಕೂಡಲೇ ತನ್ನ ಹೊಟ್ಟೆ ಹಸಿಯುತ್ತಿದೆ ಎಂಬ ಅನುಭವವಾಯಿತು. ಹುಡುಗನನ್ನು ಕೈ ಸನ್ನೆ ಮಾಡಿ ಕರೆದ.

''ಏಯ್.... ಬಾ ಇಲ್ಲಿ ..... ಕೇಳಿಲ್ಲಿ..... ಇಲ್ಲೆಲ್ಲಾದರೂ ಹತ್ತಿರದಲ್ಲಿ ತಿನ್ನೋಕ್ಕೆ ಏನಾದ್ರೂ ಸಿಗುತ್ತಾ ...? ''

''ಇಲ್ಲ... ಕುಡಿಯುಕ್ಕೆ ಎಳೆನೀರು ಸಿಗುತ್ತೆ ತಂದುಕೊಡ್ಲಾ ?''

''ಹುಂ ತಂದುಕೊಡು....'' ಎನ್ನುತ್ತಾ ಹತ್ತರ ನೋಟೊಂದನ್ನು ಕೈಗಿತ್ತ.

''ಪರವಾಗಿಲ್ಲ ಆಮೇಲೆ ಕೊಡಿ ಸಾರ್..'' ಎಂದು ಬಾಯಿ ಮಾತಿಗೆ

ಹೇಳಿದರೂ ಹಣವನ್ನು ತೆಗೆದುಕೊಂಡು ಓಡಿದ. ಅಲ್ಲಿಯೇ ಸಮೀಪದಲ್ಲಿ ಮರದ ಕೆಳಗೆ ಎಳನೀರು ಮಾರುತ್ತಿದ್ದವನಿಂದ ಎರಡು ಎಳನೀರನ್ನು ಕೊಚ್ಚಿಸಿಕೊಂಡು ಎರಡು ಸ್ಟ್ರಾಗಳೊಡನೆ ಮತ್ತೆ ಓಡಿ ಬಂದ. ನಾಗೇಶನಿಗೆ ಖುಷಿಯಾಯ್ತು.... ಒಂದು ಎಳನೀರನ್ನು ಕೈಗೆತ್ತಿಕೊಂಡ.

''ನನಗೆ ಒಂದು ಸಾಕು.... ಇನ್ನೊಂದನ್ನು ನೀನು ಕುಡಿ''

ಹುಡುಗ ಸಂಕೋಚಗೊಂಡರೂ ನಾಗೇಶನನ್ನೇ ನೋಡಿ ಎಳನೀರಿನ ಬುರುಡೆಯನ್ನೆತ್ತಿ ಹಾಗೇ ಗಟಗಟನೆ ಕುಡಿದ. ನಾಗೇಶ ಅಚ್ಚರಿಯಿಂದ ಆ ಹುಡುಗನನ್ನೇ ದಿಟ್ಟಿಸಿದ. 'ಪರವಾಗಿಲ್ಲ ಹುಡುಗ ಬಹಳ ಚೂಟಿಯಾಗಿದ್ದಾನೆ' ಎಂದುಕೊಂಡು, ಹುಡುಗನ ಕೈಗೆ ಐದು ರೂಗಳ ನೋಟನ್ನು ಕೊಟ್ಟ. ಅವನು ಭಕ್ಷೀಸಿಗೆ ಕಾದಿದ್ದವನಂತೆ ಹಣ ಕೈಗೆತ್ತಿಕೊಂಡು ಮತ್ತೆ ಅಲ್ಲೇ ನಿಂತ. ''ಮತ್ತೇನಾದ್ರೂ ಬೇಕಿತ್ತಾ ಸಾರ್ ?'' ಕೇಳಿದ.

''ಹತ್ತಿರ ಎಲ್ಲಾದ್ರೂ ಹೋಟೆಲ್ಲಿದೆಯಾ ?'' ನಾಗೇಶ ಅತ್ತಿತ್ತ ನೋಡುತ್ತಾ ಕೇಳಿದಾಗ ಹುಡುಗ ತಲೆ ಆಡಿಸಿದ.

''ಊಟ ಬೇಕಿತ್ತಾ ಸಾರ್.... ನಮ್ಮ ಮನೆಗೇ ಬನ್ನಿ ಊಟ ಮಾಡೋರಂತೆ....'' ನಾಗೇಶ ಅನುಮಾನಿಸಿದ.

''ಬಿಡು ಪರವಾಗಿಲ್ಲ... ಇನ್ನು ಸ್ವಲ್ಪ ಹೊತ್ತಿಗೆ ಗಾಡಿ ಸರಿ ಹೋಗಬಹುದು. ತಕ್ಷಣ ಊರಿಗೇ ವಾಪಸ್ಸು ಹೊರಟುಬಿಡ್ತೀವಿ.''

ಆ ಹುಡುಗ ಮತ್ತೇನೂ ಆಡದೇ ಹೊರಟು ಹೋದ. ಕಾರಿನಲ್ಲೇ ಕೂತು ಕೂತು ನಾಗೇಶನಿಗೆ ಬೇಸರವಾಗತೊಡಗಿತು. ಯಾವ ಹಳ್ಳಿಯೋ ಏನೋ... ನಂಜಪ್ಪ ಎಷ್ಟು ದೂರ ಹೋದರೋ... ಇನ್ನೂ ಎಷ್ಟು ಹೊತ್ತಾಗುತ್ತೋ ಏನೋ ಅಂತಂದುಕೊಳ್ಳುತ್ತಾ ಕೆಳಗಿಳಿದು, ಮೈ ಮುರಿದ. ಸುಡು ಬೇಸಗೆ. ಮರದ ನೆರಳಿದ್ದುದರಿಂದ ಗಾಳಿ ಬೀಸುತ್ತಿದ್ದುದರಿಂದ ಅಷ್ಟೇನೂ ಶೆಕೆ ಆಗುತ್ತಿರಲಿಲ್ಲ. ಹಾಗೇ ಸುತ್ತಲೂ ಕಣ್ಣಾಡಿಸಿದ. ದೂರ ದಿಂದೆಲ್ಲೋ ಬಟ್ಟೆ ಒಗೆಯುವ ಸದ್ದು ಕೇಳಿ ಬಂದಾಗ, ಸುತ್ತಮುತ್ತ ಹಳ್ಳಿಗಳಿರಬಹುದು ಎಂದು ಭಾವಿಸಿದ....

ಅಷ್ಟರಲ್ಲಿ ಡ್ರೈವರ್ ನಂಜಪ್ಪ ಒಬ್ಬ ಮೆಕ್ಯಾನಿಕ್‌ನೊಡನೆ ಸ್ಕೂಟರಿನಲ್ಲಿ ಬಂದಿಳಿದ. ನಾಗೇಶ ಗೆಲುವಾದ. ''ಒಳಗೇ ಕೂತು ಕೂತು ಬೇಸರವಾಗು ತ್ತಿತ್ತು.... ನಾನು ಸ್ವಲ್ಪ ಹಾಗೇ ತಿರುಗಾಡಿ ಬರ್ತೀನಿ... ಕಾರು ಸಿದ್ಧವಾದ

ಕೂಡಲೇ ಹಾರ್ನ್ ಮಾಡಿ ಬಂದುಬಿಡ್ತೀನಿ'' ಎಂದು ಹೇಳಿ ಪ್ಯಾಂಟಿನ ಎರಡೂ ಜೇಬಿನೊಳಗೆ ಕೈ ತೂರಿಸಿ ಪಕ್ಕದ ಕಾಲುದಾರಿಯಲ್ಲಿ ನಡೆದ. ಸ್ವಲ್ಪ ದೂರ ನಡೆಯುತ್ತಿದ್ದಂತೆಯೇ, ಹಿತವಾದ ತಣ್ಣನೆಯ ಗಾಳಿ ಮೈಯನ್ನು ಸೋಂಕಿತು. ಸಮೀಪದಲ್ಲೇ ಇದ್ದ ಕೆರೆಯನ್ನು ಕಂಡ. ಒಂದಿಬ್ಬರು ಹೆಂಗಸರು ಬಟ್ಟೆಗಳನ್ನು ನೀರಿನಲ್ಲಿ ಜಾಲಾಡಿ ಹಿಂಡುತ್ತಿದ್ದರು. ಹಾಗೇ ನೋಡುತ್ತಾ ನಿಂತನು. ಅವರಿಬ್ಬರೂ ಕೆಲಸವನ್ನು ಮುಗಿಸಿ, ತೊಳೆದ ಪಾತ್ರೆಗಳನ್ನು, ಒಗೆದ ಬಟ್ಟೆಗಳನ್ನು ಕುಕ್ಕೆಗಳಿಗೆ ತುಂಬಿಟ್ಟು, ಎದ್ದು ನಿಂತು ಸೀರೆಯ ನೆರಿಗೆಗಳನ್ನು ಸರಿ ಪಡಿಸಿಕೊಂಡು ಇತ್ತ ನೋಡಿದರು.

'ಯಾರೋ ಏನೋ ತಮ್ಮನ್ನೇ ಮಿಕಿಮಿಕಿ ನೋಡುತ್ತಿದಾರಲ್ಲ' ಎಂದು ಕೊಂಡು ಗಾಭರಿಯಿಂದ ಕುಕ್ಕೆಗಳನ್ನೆತ್ತಿಕೊಂಡು ಪಕ್ಕದ ದಾರಿಯಲ್ಲಿ ನಡೆದು ಮರೆಯಾದರು. ಮತ್ತೆ ಯಾರೂ ಕಂಡು ಬರಲಿಲ್ಲವಾದ್ದರಿಂದ, ನಾಗೇಶ್ ಅದೇ ದಾರಿಯಲ್ಲಿ ಮುಂದುವರೆದ. ಒಂದು ಮನೆಯ ಬಳಿ ಬಹುಶಃ ಅದೇ ಹೆಂಗಸಿರಬೇಕು, ಬಟ್ಟೆಗಳನ್ನು ಹರವುತ್ತಿದ್ದುದನ್ನು ಗಮನಿಸಿ ಆ ಮನೆಯನ್ನು ಸಮೀಪಿಸಿದ. ಅವಳು ಕತ್ತೆತ್ತಿ ನೋಡಿದಳು. ಆದರೆ ಹೆದರುತ್ತಿದ್ದಂತೆ ಅನ್ನಿಸಲಿಲ್ಲ, ನಕ್ಕಂತೆ ಮಾಡಿದ.

''ಯಾರು ನೀವು ? ಏನು ಬೇಕಾಗಿತ್ತು ?'' ಅವಳೇ ಪ್ರಶ್ನಿಸಿದಳು.

''ನಮ್ಮ ಕಾರು ಕೆಟ್ಟು ಹೋಗಿದೆ.... ತುಂಬಾ ಬಿಸಿಲು.... ಕುಡಿಯೋಕೆ ನೀರು ಬೇಕಾಗಿತ್ತು....''

''ಬನ್ನಿ... ಒಳಗೆ ಬನ್ನಿ... ಕೊಡ್ತೀನಿ'' ಅವಳು ಬಾಗಿಲನ್ನು ದಾಟಿ ಒಳಗೆ ನಡೆದಳು. ಅವಳನ್ನೇ ಹಿಂಬಾಲಿಸಿದ. ''ಇಲ್ಲಿ ಕೂತ್ಕೊಳ್ಳಿ.... ನೀರು ತರ್ತೀನಿ'' ಎನ್ನುತ್ತಾ ಅಲ್ಲಿದ್ದ ಒಂದೇ ಒಂದು ಕುರ್ಚಿಯ ಕಡೆ ಕೈ ತೋರಿದಳು. ಇವನು ಅನುಮಾನಿಸುತ್ತಾ ಕುಳಿತ. ಕೆಲವೇ ನಿಮಿಷಗಳಲ್ಲಿ ಅವಳು ಒಂದು ಲೋಟವನ್ನೂ, ನೀರಿನ ತಂಬಿಗೆಯನ್ನೂ ತಂದಳು. ಒಂದು ಸಣ್ಣ ತಟ್ಟೆಯಲ್ಲಿ ಬೆಲ್ಲದ ಸಣ್ಣ ಸಣ್ಣ ಉಂಡೆಗಳಿದ್ದವು.

''ಬೆಲ್ಲ ತಿಂದು ನೀರು ಕುಡಿಯಿರಿ... ದಾಹ ಕಡಿಮೆಯಾಗುತ್ತೆ'' ಎಂದು ಹೇಳಿ ಮತ್ತೆ ಒಳಗೆ ಹೋರಟುಹೋದಳು.

''ಯಾರದು ?'' ಪಕ್ಕದ ರೂಮಿನಿಂದ ಗಂಡಸಿನ ಧ್ವನಿ ಕೇಳಿದಾಗ ಇವನಿಗೆ ಸ್ವಲ್ಪ ಧೈರ್ಯ ಬಂತು.ತಿರುಗಿ ನೋಡಿದ. ಒಬ್ಬ ವ್ಯಕ್ತಿ ನಿಂತಿದ್ದರು.

''ತಾಯೀ... ಯಾರೇ.... ನೋಡು ಬಾ....'' ಆ ವ್ಯಕ್ತಿ ನಾಗೇಶನನನ್ನು ಸಮೀಪಿಸಿದರು. ಅಷ್ಟರಲ್ಲಿ ಅವಳೂ ಬಂದು ನಿಂತಿದ್ದಳು.

''ನೀರು ಕುಡಿಯೋಕೆ ಅಂತ ಬಂದಿದ್ದೆ... ನಾನು ಬರ್ತೀನಿ... ಥ್ಯಾಂಕ್ಸ್'' ಇಬ್ಬರೂ ಸುಮ್ಮನೇ ನೋಡಿದರು. ಅಡಿಗೆಮನೆಯಿಂದ ಹೊರ ಹೊಮ್ಮುತ್ತಿದ್ದ ಘಮ್ಮೆನ್ನುವ ವಾಸನೆ ಅವನ ಹಸಿವನ್ನು ಕೆರಳಿಸಿತು.

''ಇಲ್ಲಿ ಹತ್ತಿರದಲ್ಲಿ ಯಾವುದಾದ್ರೂ ಹೋಟೆಲ್ಲಿದೆಯಾ ?'' ಪ್ರಶ್ನಿಸಿದ.

''ಹುಂ... ಇನ್ನು ಸ್ವಲ್ಪ ಮುಂದೆ ಹೋದರೆ, ಒಂದೆರಡು ಪಂಜಾಬಿ ಡಾಬಾಗಳಿವೆ....'' ಆ ವ್ಯಕ್ತಿ ನುಡಿದರು.

''ಕಾರು ಕೆಟ್ಟು ನಿಂತಿದೆ. ರಿಪೇರಿಯಾಗುತ್ತಿದೆ. ಇದು ಯಾವ ಹಳ್ಳಿಯೋ ತಿಳಿಯಲಿಲ್ಲ... ಊಟದ ಹೊತ್ತಿಗೆ ನಮ್ಮೂರನ್ನು ಸೇರುತ್ತೀವೋ ಇಲ್ಲವೋ.... ಡಾಬಾ ಹೋಟೆಲ್ಲಿನ ಊಟ ಚೆನ್ನಾಗಿರುತ್ತಾ ?''

''ನಮಗೇನು ಗೊತ್ತು? .. ನಾವೆಂದೂ ತಿಂದಿಲ್ಲ....'' ಆ ವ್ಯಕ್ತಿ ನಗುತ್ತಾ ನುಡಿದಾಗ, ನಾಗೇಶ ಪೆಚ್ಚಾದ. ಆ ಹೆಂಗಸು ನುಡಿದಳು,

''ನಮ್ಮ ಮನೇಲೇ ಊಟ ಮಾಡೋದಾದ್ರೆ ಮಾಡಿ... ಅಡಿಗೆ ಯಾಗಿದೆ.'' ನಾಗೇಶ ತಬ್ಬಿಬ್ಬುಗೊಂಡ. ಆ ವ್ಯಕ್ತಿ ಕಡೆ ನೋಡಿದ. ಅವರ ಮನಸ್ನಲ್ಲಿ ಏನಿದೆ ಎಂದು ತಿಳಿಯಲಿಲ್ಲ. ಅನುಮಾನಿಸುತ್ತಾ ನುಡಿದ.

''ನಾನು ಒಬ್ಬನೇ ಅಲ್ಲ, ನಮ್ಮ ಡ್ರೈವರೂ ಜೊತೆಲಿದಾರೆ...''

''ಪರವಾಗಿಲ್ಲ ಇಬ್ಬರಿಗೂ ಆಗುವಷ್ಟು ಇದೆ.... ನೀವು ಕೈಕಾಲು ತೊಳೆದು ಬನ್ನಿ...'' ಎಂದು ಹಿಂಬಾಗಿಲ ಕಡೆ ಕೈ ತೋರಿದಳು. ಬಕೇಟುಗಳಲ್ಲಿ ತುಂಬಿಟ್ಟಿದ್ದ ನೀರಿನಲ್ಲಿ ಕೈ ಕಾಲು ತೊಳೆದು ಒಳಗೆ ಬಂದ. ನೆಲದ ಮೇಲೆ ಊಟದ ಚಾಪೆಯನ್ನು ಹಾಕಿ, ಮುತ್ತುಗದ ಎಲೆಯನ್ನು ಇಟ್ಟು ಕುಡಿಯಲು ನೀರನ್ನು ಇಟ್ಟು ಬಡಿಸತೊಡಗಿದಳು. ಸ್ವಲ್ಪ ಕಸಿವಿಸಿಯಾದರೂ ಅನುಮಾನಿಸುತ್ತಾ ಕುಳಿತ.

ಮಿಡಿ ಮಾವಿನ ಉಪ್ಪಿನಕಾಯಿ, ಹಲಸಿನಕಾಯಿ ಪಲ್ಯವನ್ನು ಸಾರಿನ ಅನ್ನಕ್ಕೆ ನೆಂಜಿಕೊಂಡು ನಿಧಾನವಾಗಿ ಊಟ ಮಾಡಿದ. ಬಿಸಿ ಬಿಸಿ ಸಾರು, ಘಮ್ಮೆನ್ನುವ ತುಪ್ಪ, ಹಸಿದ ಹೊಟ್ಟೆಗೆ ಊಟ ತುಂಬಾ ರುಚಿಯಾಗಿತ್ತು. ಸಂಕೋಚವನ್ನು ಬದಿಗಿಟ್ಟು ಊಟ ಮಾಡಿದ. ಉಪ್ಪು, ಕರಿಬೇವು, ಶುಂಠಿಯನ್ನು

ಹಾಕಿ ಕಡೆದು ತಯಾರಿಸಿದ ನೀರ ಮಜ್ಜಿಗೆಯೊಂದಿಗೆ ಅನ್ನವನ್ನು ಕಲೆಸಿ ತಿಂದು ಊಟವನ್ನು ಮುಗಿಸಿದ. ಶುಚಿ ರುಚಿಯಿಂದ ಕೂಡಿದ ಅಪರೂಪದ ಊಟ, ಇದನ್ನು ತಾನೆಂದಿಗೂ ಮರೆಯುವಂತಿಲ್ಲ ಎಂದುಕೊಂಡು ಎದ್ದ. ಅವನು ಎಂಜಲು ಕೈಯನ್ನು ತೊಳೆದು ಬರುವಷ್ಟರಲ್ಲಿ, ಅವಳು ಒಂದು ಟಿಫಿನ್ ಕ್ಯಾರಿಯರ್‌ನ ತಂದಿತ್ತಳು.

''ಇದರಲ್ಲಿ ನಿಮ್ಮ ಡ್ರೈವರಿಗೆ ಊಟ ಇಟ್ಟಿದೀನಿ....'' ಈಗ ನಾಗೇಶನಿಗೆ ಸಂಕೋಚವಾಗತೊಡಗಿತ್ತು. ಹಸಿವು ದಾಹ ಎರಡೂ ತೀರಿದ ಮೇಲೆ, ಈಗ ಸಂಕೋಚವಾಗುತ್ತಿದೆಯಲ್ಲ ಎಂದುಕೊಂಡು,

''ಊಟ ತುಂಬಾ ರುಚಿಯಾಗಿತ್ತು. ನಾನ್ಯಾರೋ... ನೀವ್ಯಾರೋ... ಯಾವ ಸಂದೇಹಗಳಿಲ್ಲದೇ ಹಸಿದವನಿಗೆ ಊಟ ಹಾಕಿದೀರಿ... ನಾನು ಬೆಂಗಳೂರಿನ ಒಂದು ಪ್ರೈವೇಟ್ ಕಂಪೆನಿಯ ಮಾಲೀಕ... ನಿಮಗೆ ಯಾವಾಗ ನನ್ನ ಸಹಾಯ ಬೇಕಾದ್ರೂ ಸಂಕೋಚವಿಲ್ಲದೇ ಕೇಳಬಹುದು. ಇದು ನನ್ನ ವಿಸಿಟಿಂಗ್ ಕಾರ್ಡ್...'' ಎಂದು ನುಡಿದು ಅವಳ ಕೈಗೆ ಕಾರ್ಡನ್ನು ಕೊಟ್ಟು, ಅವಳು ಕೊಟ್ಟ ಟಿಫಿನ್ ಕ್ಯಾರಿಯರ್‌ನ್ನು ಹಿಡಿದು ತನ್ನ ಕಾರು ಕೆಟ್ಟು ನಿಂತಿದ್ದ ಜಾಗಕ್ಕೆ ಬಂದ. ರಿಪೇರಿ ಇನ್ನೂ ಮುಗಿದಿರಲಿಲ್ಲ. ಮೆಕ್ಯಾನಿಕ್ ಮತ್ತೇನೋ ಪಾರ್ಟ್ ತರಲೆಂದು ಹೊರಟುಹೋಗಿದ್ದ.

''ನಂಜಪ್ಪ... ಬಿಸಿಬಿಸಿ ಊಟ ತಂದಿದೀನಿ. ಬೇಗ ಬೇಗ ತಿಂದು ಬಿಡಿ'' ಎಂದು ಮುಗುಳ್ನಗುತ್ತಾ ಹೇಳಿದಾಗ, ನಂಜಪ್ಪ ವಿಚಿತ್ರವಾಗಿ ನೋಡಿದ.

''ಎಲ್ಲಿಗೆ ಹೋಗಿದ್ರಿ ಸಾರ್ ? ನನಗ್ಯಾಕೆ ಊಟಾನ ತಂದ್ರಿ ?'' ಕೇಳಿದ.

''ಇರಲಿ ಮೊದಲು ಊಟ ಮಾಡಿ, ನಂತರ ಮಾತಾಡೋಣ. ಇಲ್ಲೇ ಹತ್ತಿರದಲ್ಲಿ ಒಂದು ಕೆರೆ ಇದೆ. ಡಬ್ಬಿಗಳನ್ನು ತೊಳೆದು, ಅದರಲ್ಲಿ ಈ ಹಣವನ್ನು ಇಟ್ಟುಬಿಡಿ...'' ಎನ್ನುತ್ತಾ ನೂರರ ಎರಡು ನೋಟುಗಳನ್ನು ಡ್ರೈವರ್‌ನ ಕೈಗಿತ್ತ. ನಂಜಪ್ಪ ತಲೆ ಆಡಿಸಿದ. ''ಅಲ್ಲಿಂದ ಸ್ವಲ್ಪ ದೂರದಲ್ಲೇ ಇದೆ ಅವರ ಮನೆ ಎನ್ನುತ್ತಾ ಕೈ ಮಾಡಿ ದಿಕ್ಕನ್ನು ಹೇಳಿ, ''ಈ ಕ್ಯಾರಿಯರ್‌ನ್ನು ಅವರಿಗೆ ತಲುಪಿಸಿ ಬಿಡಿ'' ಎಂದು ಹೇಳಿ ತಾನು ಕಾರಿನ ಹಿಂದಿನ ಸೀಟಿನಲ್ಲಿ ಹತ್ತಿ ಕುಳಿತು ಒರಗಿಕೊಂಡು ಹಾಗೇ ಕಣ್ಣುಗಳನ್ನು ಮುಚ್ಚಿಕೊಂಡ.

''ಈ ದಿನ ಹೀಗೇಕಾಯ್ತು ? ಈ ಹೆದ್ದಾರಿಯಲ್ಲಿ ಎಷ್ಟೋ ಸಾರಿ ತಿರುಗಾಡಿದೀನಿ. ಆದರೆ ಎಂದೂ ಹೀಗೆ ಯಾವುದೋ ಅಪರಿಚಿತ ಸ್ಥಳದಲ್ಲಿ ಇಳಿದು ನಿಲ್ಲಬೇಕಾದ ಸ್ಥಿತಿ ಒದಗಿರಲಿಲ್ಲ. ಯಾರೋ ಎಂದೂ ಕಂಡರಿಯದ

ಕೇಳರಿಯದ ಮನೆಗೆ ಹೋಗಿ, ಊಟ ಮಾಡುವ ಅವಕಾಶಂವಂತೂ ಎಂದೂ ಬಂದಿರಲಿಲ್ಲ. ಏನೋ ಸುಯೋಗವೇ ಇರಬೇಕು... ಇಲ್ಲದಿದ್ದರೆ ಹೀಗೇಕಾಗುತ್ತಿತ್ತು?'' ತನ್ನಲ್ಲೇ ಆಶ್ಚರ್ಯಗೊಂಡು ಚಿಂತಿಸಿದ.

* * * *

ಊರಿಗೆ ವಾಪಸ್ಸಾಗಿ ಒಂದು ವಾರದ ಮೇಲಾಗಿತ್ತು. ಒಂದು ದಿನ ಅವನ ಹೆಸರಿಗೆ ಇನ್ನೂರು ರೂಗಳ ಎಂ.ಓ. ಬಂದಿತ್ತು. ತನಗೆ ಯಾರು ಹಣ ಕಳಿಸಿರಬಹುದು ಎಂದುಕೊಂಡು ವಿಳಾಸ ಓದಿದ. ''ನಳಿನಿ'' ಎನ್ನುವ ಹೆಸರನ್ನು ಓದಿಕೊಂಡ. ಆದರೆ ತಕ್ಷಣಕ್ಕೆ ಯಾರೆಂದು ಗೊತ್ತಾಗಲಿಲ್ಲ. ಈ ವಿಷಯವನ್ನು ತನ್ನ ತಂದೆ ಸುಬ್ಬರಾಯರಿಗೆ ತಿಳಿಸಿದಾಗ, ಅವರೂ ಚಕಿತಗೊಂಡರು. ಆದರೆ ಯಾರು ಈ ನಳಿನಿ ? ಎಂದು ತಿಳಿಯಲಿಲ್ಲ.

ಆದರೆ ರಾತ್ರಿ ಒಂದು ಹೊತ್ತನಲ್ಲಿ ನೆನಪಿಗೆ ಬಂತು. ನಳಿನಿ...! ಅವಳಿರಬಹುದೇ... ? ತಾನು ಊಟದ ಡಬ್ಬಿಯಲ್ಲಿಟ್ಟ ಹಣವನ್ನು ವಾಪಸ್ಸು ಕಳಿಸಿದ್ದಾಳೆ. ಮನಸ್ಸು ಹುಳ್ಳಗಾಯಿತು. ತಾನು ಹಣ ಕೊಟ್ಟುದುದನ್ನು ಅವಳು ಅವಮಾನವೆಂದು ಭಾವಿಸಿರಬಹುದು. ಹೋಟೆಲ್ಲಿಗೆ ಹೋಗಿದ್ದರೆ ತಾನು ಕಣ ಕೊಡುತ್ತಿರಲಿಲ್ಲವೇ... ಹಾಗೇ ಭಾವಿಸಿ, ಎರಡು ಊಟಕ್ಕೆ ಅಗತ್ಯಕ್ಕಿಂತ ಹೆಚ್ಚಿನ ಹಣವನ್ನು ಇಟ್ಟಿದ್ದ. ಹಳ್ಳಿಯ ಜೀವನ ಕಷ್ಟ... ಬಹುಶಃ ಅನುಕೂಲಸ್ಥರಲ್ಲವೆಂದು ಭಾವಿಸಿ, ಹೆಚ್ಚು ಹಣವನ್ನಿಟ್ಟಿದ್ದ. ಸ್ವಾಭಿಮಾನಿ ಹೆಂಗಸು.. ಎಂದುಕೊಂಡ.

ಕೆಲವು ದಿನಗಳ ನಂತರ, ಯಾವುದೋ ಕೆಲಸದ ಮೇಲೆ ಮತ್ತೊಮ್ಮೆ ಅದೇ ಹೆದ್ದಾರಿಯಲ್ಲಿ ಹೋಗಬೇಕಾಗಿ ಬಂತು. ಆ ಸ್ಥಳ ಬಂದಾಗ, ಡ್ರೈವರನಿಗೆ ನಿಲ್ಲಿಸುವಂತೆ ಹೇಳಿ ತಾನೊಬ್ಬನೇ ಇಳಿದು ಕಾಲುದಾರಿಯಲ್ಲಿ ನಡೆದ. ತಾನೇ ಖುದ್ದಾಗಿ ಹೋಗಿ ಕ್ಷಮೆ ಕೇಳಿ ಬರಬೇಕೆಂದುಕೊಂಡಿದ್ದ. ನಂಜಪ್ಪ ಬೆರಗಾಗಿ ನಾಗೇಶನನ್ನೇ ನೋಡುತ್ತಿದ್ದ.

ಮನೆಯಲ್ಲಿ ಅವಳು ಇದ್ದಂತೆ ಕಾಣಲಿಲ್ಲ. ಅವಳ ತಂದೆ, ಆ ವ್ಯಕ್ತಿ ಒಬ್ಬರೇ ಇದ್ದರು. ಅವರಿಗೆ ಎಲ್ಲಾ ವಿಷಯವನ್ನು ತಿಳಿಸಿ ಕ್ಷಮೆ ಕೋರಿದ. ಆತ ದೇಶಾವರಿ ನಗೆ ನಕ್ಕರು.

''ಇದರಲ್ಲಿ ಕ್ಷಮೆ ಕೇಳಬೇಕಾದ್ದೇನಿದೆ ! ನನ್ನ ಮಗಳಿಗೆ ಪ್ರಪಂಚ ಜ್ಞಾನ ಸಾಲದು. ಅವಳಿಗೆ ಹಣದ ಬೆಲೆ ಗೊತ್ತಿಲ್ಲ. ಕಾಲ ಎಷ್ಟು ಕಷ್ಟವಾಗಿದೆ.

ನೀವಾಗಿಯೇ ಕೊಟ್ಟ ಹಣವನ್ನು ಹಿಂತಿರುಗಿಸುವ ಹಕ್ಕು ಅವಳಿಗಿಲ್ಲ, ಇಲ್ಲಿ ಕೊಡಿ. ಮನೆ ಖರ್ಚಿಗಾಗುತ್ತೆ'' ಅಂತ ನುಡಿದಾಗ ಇವಸು ಸುಸ್ತು! ಆದರೂ ಮರು ನುಡಿಯದೇ ಹಣವನ್ನು ಆತನ ಕೈಗಿತ್ತ. ಆತ ನೋಟನ್ನು ಮಡಿಸಿ ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡಾಗ ಇವನು ಹೊರಟ. ಬಾಗಿಲ ಬಳಿ ಅವಳು ಎದುರಾದಳು. ಆದರೂ ಏನನ್ನೂ ಆಡದೇ ತನ್ನ ಪಾಡಿಗೆ ತಾನು ಒಳಕ್ಕೆ ಹೊರಟು ಹೋದಳು. ಇವನು ಮುಜುಗರಗೊಂಡ. ಆದರೆ ತಂದೆ, ತಾನು ಬಂದುದರ ಉದ್ದೇಶವನ್ನು ಮಗಳಿಗೆ ತಿಳಿಸಲಿಲ್ಲ. ಮಗಳೂ ಏನನ್ನೂ ಆಡದಿದ್ದಾಗ ''ಬರ್ತೀನಿ'' ಎಂದಷ್ಟೇ ಹೇಳಿ ಹೊರ ನಡೆದ.

ಮನೆಯ ಸ್ಥಿತಿ ನೋಡಿದರೆ ಬಡತನ ಎಂದೆನಿಸುತ್ತದೆ. ತಂದೆಗೆ ಹಣದ ಆಸೆ... ಅವಳೋ ಸ್ವಾಭಿಮಾನಿ ! ಅವರವರೇ ಇತ್ಯರ್ಥ ಮಾಡಿಕೊಳ್ಳಲಿ ಅಂತನ್ನಿಸಿದರೂ ತಾನೊಮ್ಮೆ ಅವಳೊಡನೆ ಮಾತನಾಡುವುದು ಒಳಿತು ಎಂದುಕೊಂಡು ಮತ್ತೆ ಬಂದವನು ಸೀದಾ ಹಿಂಬಾಗಿಲ ಬಳಿಗೆ ಬಂದ. ಇವನಿಗೆ ಬೆನ್ನು ಮಾಡಿ ನಿಂತು ಬಟ್ಟೆ ಹರವುತ್ತಿದ್ದವಳು ಇವನನ್ನು ಗಮನಿಸಲಿಲ್ಲ. ಒಂದು ಗಳಿಗೆ ಹಾಗೇ ನೋಡಿ ಕೆಮ್ಮಿದ ಸಣ್ಣಗೆ. ಅವಳು ತಿರುಗಿ ನೋಡಿದಳು.

''ಸ್ವಲ್ಪ ನೀರು ಬೇಕಿತ್ತು ಕುಡಿಯಕ್ಕೆ'' ಅಂತಂದ. ಅವಳು ಸೀರೆಯ ಸೆರಗು, ನೆರಿಗೆಗಳನ್ನು ಸರಿ ಮಾಡಿಕೊಂಡು ಅವನನ್ನು ದಾಟಿಕೊಂಡೇ ಅಡಿಗೆಮನೆಗೆ ಹೋಗಿ, ಮರುಕ್ಷಣವೇ ನೀರಿನ ಲೋಟವನ್ನು ತಂದಿತ್ತಳು. ''ನಿಮ್ಮ ಎಂ.ಓ. ತಲುಪಿತು. ಯಾಕೆ ನಾನು ಮಾಡಿದ್ದು ತಪ್ಪಾ ?'' ನೀರು ಕುಡಿಯುತ್ತಾ ಕೇಳಿದ.

''ಹೌದು ತಪ್ಪು, ಊಟಕ್ಕೆ ದುಡ್ಡು ತಗೊಳ್ಳಲು ನಮ್ಮ ಮನೆ ಹೋಟೆಲಲ್ಲ'' ಎಂದಳು.

''ಊಟ ತುಂಬಾ ಹಿತವಾಗಿ ರುಚಿಯಾಗಿತ್ತು. ಏನಾದ್ರೂ ಕೊಡಬೇಕಾಗಿತ್ತೆನಿಸಿತು, ತಪ್ಪಾಗಿದ್ರೆ ಕ್ಷಮಿಸಿ.''

''ಹಾಗೆ ಏನಾದ್ರೂ ಕೊಡಲೇ ಬೇಕು ಅಂತನ್ನಿಸಿದ್ರೆ... ನಿಮ್ಮ ಕಂಪೆನಿಯಲ್ಲಿ ನನಗೆ ಒಂದು ಕೆಲಸ ಕೊಡಿಸಿ'' ಅವನು ಗಲಿಬಿಲಿಗೊಂಡು ಅವಳನ್ನೇ ನೋಡಿದ.

''ನಿಮಗೆ ಕೆಲಸಾನಾ ? ಇಲ್ಲಿ ಹಾಯಾಗಿದೀರಲ್ಲ.''

''ನೋಡಿದೋರ ಕಣ್ಣಿಗೆ ಹಾಯಾಗಿದೀವಿ ಅಷ್ಟೇ.... ನಮ್ಮ ಬವಣೆ ನಮಗೇ ಗೊತ್ತು.'' ನಾಗೇಶ ಪೆಚ್ಚಾದ.

“ನಿಮ್ಮ ಕಷ್ಟ ಏನೂಂತ ನನಗೆ ಗೊತ್ತಿಲ್ಲ. ನಾನು ಆದಷ್ಟು ಬೇಗ ನಿಮಗೆ ಒಂದು ಕೆಲಸ ಕೊಡಿಸಲು ಪ್ರಯತ್ನ ಮಾಡ್ತೀನಿ.... ನಿಮ್ಮ ಬಯೋಡೇಟಾ ಕೊಡಿ” ಅವಳು ಮಿಕಮಿಕನೇ ಅವನನ್ನೇ ನೋಡಿದಳು.

“ನೀವು ಏನು ಓದಿದೀರಿ ? ಯಾವ ಯಾವ ಕೆಲಸದ ಅನುಭವಗಳಿವೆ ಅಂತ ತಿಳಿಸಿದರೆ, ಅದಕ್ಕೆ ತಕ್ಕ ಕೆಲಸ ಕೊಡಿಸಬಹುದು.”

“ನಾನು ಬಿ.ಕಾಂ. ಮಾಡಿದೀನಿ. ಟೈಪಿಂಗ್ ಬರುತ್ತೆ.”

“ಓ... ಬೇಕಾದಷ್ಟಾಯಿತು. ಇನ್ನೊಂದು ವಾರದೊಳಗೆ ನಮ್ಮಲ್ಲಿಗೆ ಬನ್ನಿ. ನಾನು ಎಲ್ಲಾ ಏರ್ಪಾಡುಗಳನ್ನು ಮಾಡ್ತೀನಿ. ಸರ್ಟಿಫಿಕೇಟ್ಸ್‌ಗಳನ್ನು ಮರೆಯದೇ ತನ್ನಿ” ಎಂದು ಹೇಳಿ ಅವನು ಹೊರಟ. ಅವಳ ತಂದೆ ಅವನ ಹಿಂದೆಯೇ ಬಂದರು.

“ನೀವು ಏನಂದುಕೊಂಡಿರೋ ಏನೋ... ನಮಗೆ ಹಣದ ಅಗತ್ಯ ತುಂಬಾ ಇದೆ. ನನ್ನ ಆರೋಗ್ಯ ಸಹ ಚೆನ್ನಾಗಿಲ್ಲ. ಒಂದು ಸ್ವಲ್ಪ ಅಡ್ವಾನ್ಸ್ ಹಣ ಕೊಟ್ಟರಿ. ಆಮೇಲೆ ಅವಳ ಸಂಬಳದಲ್ಲಿ ಮುರಿದುಕೊಳ್ಳೋರಂತೆ.”

ಆತನ ಮಾತು ಇವನಿಗೆ ಹಿಡಿಸಲಿಲ್ಲ. ಅಸಹ್ಯವೆನಿಸಿತು. ಎಂಥಾ ಮಗಳಿಗೆ ಎಂಥಾ ತಂದೆ ! ಆದರೂ ಜೇಬಿನಿಂದ ಐನೂರು ರೂಗಳನ್ನು ತೆಗೆದು ಆತನ ಕೈಗಿತ್ತು “ಇದು ಬಸ್ಸುಛಾರ್ಜಿಗೆ ಅಂತ ಕೊಡ್ತಿದೀನಿ” ಎಂದ.

ದಾರಿಯಲ್ಲಿ ಕಾರು ಓಡುತಿರುವಾಗ ನಂಜಪ್ಪನೊಡನೆ ಎಲ್ಲಾ ವಿಷಯು ಗಳನ್ನು ಹೇಳಿದ. ನಂಜಪ್ಪ ಕೇವಲ ಡ್ರೈವರ್ ಅಲ್ಲ ; ಕೆಲವು ವಿಷಯಗಳಲ್ಲಿ ಆಪ್ತಸ್ನೇಹಿತನಂತೆ. ಕಾರು ಮುಂದೆ ಮುಂದೆ ಓಡುತ್ತಿದ್ದಂತೆ ನಾಗೇಶನ ಯೋಚನಾಲಹರಿ ಹಿಂದಕ್ಕೆ ಹೋಗಿತ್ತು.

“ನಾಗೇಶ ಸುಬ್ಬರಾಯಪ್ಪನ ಒಬ್ಬನೇ ಮಗ. ಶ್ರೀಮಂತ ಕುಟುಬದಲ್ಲಿ ಬೆಳೆದ ಅವನು ಒಂದು ದಿನವೂ ಯಾವುದಕ್ಕೂ ಕಷ್ಟಪಡಬೇಕಾಗಿರಲಿಲ್ಲ. ಬಟ್ಟೆ ವ್ಯಾಪಾರವನ್ನು ಪ್ರಾರಂಭಿಸಿದ್ದ ಅವರ ತಾತನ ಬಿಸಿನೆಸ್‌ನ್ನು ತಂದೆ ಮುಂದುವರೆಸಿ ಶ್ರೀಮಂತರಾಗಿದ್ದರು. ಈಗ ಅವರದೇ ಸ್ವಂತ ಬಟ್ಟೆ ಮಿಲ್ಲುಗಳಿವೆ. ಆ ಕಂಪೆನಿಗಳ ಮಾಲೀಕ ಈಗ ನಾಗೇಶ. ಸುಬ್ಬರಾಯರು ವಹಿವಾಟುಗಳನ್ನೆಲ್ಲ ಮಗನಿಗೇ ವಹಿಸಿಕೊಟ್ಟು ಬಿಟ್ಟಿದ್ದರು.

ಪ್ರಾಪ್ತ ವಯಸ್ಸಿನಲ್ಲಿ ನಾಗೇಶನ ಮದುವೆ ಸುಮನಳೊಂದಿಗೆ ಜರುಗಿತು. ಶ್ರೀಮಂತರ ಮನೆಯಿಂದ ಈ ಮನೆಗೆ ಸೊಸೆಯಾಗಿ ಬಂದ ಸುಮನ

ಮನೆಯವರೆಲ್ಲರ ಕಣ್ಮಣಿ. ನಡೆದರೆ ಸವೆದು ಹೋಗುತ್ತಾಳೇನೋ ಎನ್ನುವಷ್ಟು ಸೂಕ್ಷ್ಮ. ಮಾವನ ಮೆಚ್ಚಿನ ಸೊಸೆ, ಮದುವೆಯಾದ ಒಂದು ವರ್ಷದೊಳಗೇ ಒಂದು ಗಂಡು ಮಗುವಿನ ತಾಯಿಯಾದಳು. ಮನೆಯಲ್ಲೆಲ್ಲಾ ಸಂಭ್ರಮದ ವಾತಾವರಣ ತುಂಬಿಕೊಂಡಿತು. ತಮಗೆ ನಾಗೇಶ ಒಬ್ಬನೇ ಮಗ, ಈಗ ತಮ್ಮ ಮಗನಿಗಾದರೂ ನಾಲ್ಕಾರು ಮಕ್ಕಳಾದರೆ ಮನೆಯೆಲ್ಲಾ ತುಂಬಿದಂತಾಗುತ್ತದೆ ಎಂದು ಸುಬ್ಬರಾಯಪ್ಪನ ಆಸೆ. ಆದರೆ ಆ ಆಸೆ ಹಾಗೇ ಉಳಿಯಿತು. ಸುಮನ ಮತ್ತೆ ತಾಯಿಯಾಗಲು ಇಷ್ಟಪಡಲಿಲ್ಲ. ಹಾಗಾಗಿ ಪೃಥ್ವಿ ಮನೆಯವರ ಅತಿಶಯದ ಕಂದನಾಗಿ ಬೆಳೆದ. ಪೃಥ್ವಿಯ ಅಳು, ಚೇಷ್ಟೆ, ಆಟ, ಪಾಠ, ಮಾತುಕತೆ ಎಲ್ಲವೂ ಚೆಂದವೇ. ಮುದ್ದಾಗಿದ್ದ ಪೃಥ್ವಿ ತಾತನ ಮೆಚ್ಚಿನ ಮೊಮ್ಮಗ.

ಪೃಥ್ವಿ ಎರಡು ವರ್ಷದ ಮಗುವಾಗಿದ್ದಾಗ ಒಮ್ಮೆ ಮನೆಯವರೆಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಬರಲೆಂದು ಹೊರಟರು. ಕೆಲವು ಸ್ಥಳಗಳಲ್ಲಿ ಸುತ್ತಾಡಿ ವಾಪಸ್ಸು ಬರುವಾಗ ಕಾರು ಅಪಘಾತಕ್ಕೀಡಾಯಿತು. ಸ್ಥಳದಲ್ಲೇ ಅತ್ತೆ-ಸೊಸೆ ಇಬ್ಬರೂ ತೀರಿಕೊಂಡರು. ಇದು ಭರಿಸಲಾಗದ ಅನಿರೀಕ್ಷಿತ ಆಘಾತ. ತಾತನ ತೊಡೆಯ ಮೇಲೆ ಕೂತಿದ್ದ ಪೃಥ್ವಿಗೆ ಯಾವ ಪೆಟ್ಟುಗಳಾಗಿರಲಿಲ್ಲ. ಡ್ರೈವರನ ಸೀಟಿನಲ್ಲಿದ್ದ ನಾಗೇಶ ಸಣ್ಣಪುಟ್ಟ ಗಾಯಗಳಿಂದ ಪಾರಾಗಿದ್ದರೂ ಕೆಲವೇ ಕ್ಷಣಗಳಹಿಂದೆ ತನ್ನ ಪಕ್ಕ ಕುಳಿತಿದ್ದ ಪತ್ನಿ ಬದುಕಿಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಸಾಕಷ್ಟು ಸಮಯವೇ ಹಿಡಿಯಿತು.

ವಿಷಯ ತಿಳಿದ ನೆಂಟರಿಷ್ಟರೆಲ್ಲಾ ಬಂದು ನೋಡಿ ಸಮಾಧಾನದ ಮಾತುಗಳನ್ನಾಡಿ ಹೋಗಿದ್ದರು. ಆದರೆ ನಡೆದ ಘಟನೆಯನ್ನು ಮರೆತು, ಸಮಾಧಾನದಿಂದ ಇರಲು ಸಾಧ್ಯವೇ ? ಒಂದೆರಡು ತಿಂಗಳು ಕಳೆದ ನಂತರ ಹಿತೈಷಿಗಳು ತಿಳುವಳಿಕೆ ಹೇಳಿದ್ದರು ಸುಬ್ಬರಾಯಪ್ಪನಿಗೆ.,

''ಆದದ್ದು ಆಗಿ ಹೋಯ್ತು... ಹೋದವರು ತಿರುಗಿ ಬರುವುದಿಲ್ಲ. ನಿನ್ನ ಮಗ ಇನ್ನೂ ಚಿಕ್ಕವನು. ಅವನಿಗೆ ಮತ್ತೆ ಮದುವೆ ಮಾಡಿದರೆ, ನಿನ್ನ ಮಗನ, ಮೊಮ್ಮಗನ ಬಾಳು ಸುಧಾರಿಸುತ್ತದೆ. ಮನೆಗೆ ಕಳೆ ಬರುತ್ತದೆ... ಕ್ರಮೇಣ ಎಲ್ಲಾ ಸರಿಹೋಗುತ್ತದೆ. ಮನೆಗೆ ಕಳೆ ಬರುತ್ತದೆ... ಕ್ರಮೇಣ ಎಲ್ಲಾ ಸರಿ ಹೋಗುತ್ತದೆ'' ಅಂತ.

ಆದರೆ ಆ ಮಾತು ಸರಿ ಎನಿಸುತ್ತಿರಲಿಲ್ಲ ಅವರಿಗೆ. ಎಲ್ಲಾ ಮತ್ತೆ ಸರಿಹೋಗುವುದಾದರೂ ಹೇಗೆ ? ನಾನು ನನ್ನ ಮಡದಿಯನ್ನು ಮರೆಯಲು

ಸಾಧ್ಯವೇ ? ಹಾಗೇ ನಾಗೇಶ ತನ್ನ ಹೆಂಡತಿಯನ್ನು ಮರೆಯಲು ಸಾಧ್ಯವೇ ? ಖಾಲಿಯಾಗಿರು ಜಾಗವನ್ನು ಮತ್ತೆ ಮದುವೆ ಮಾಡಿ ತುಂಬಬಹುದು, ಆದರೆ ಖಾಲಿಯಾಗಿರುವ ಮನವನ್ನು ತುಂಬುವುದು ಸುಲಭವೇ ?.... ಹೀಗೆ ಮತ್ತೂ ಕೆಲವಾರು ತಿಂಗಳುಗಳು ಕಳೆದುಹೋದವು. ತಾಯಿಯಿಲ್ಲದೇ ಮಂಕಾಗಿ ಓಡಾಡಿಕೊಂಡಿದ್ದ ಪೃಥ್ವಿಯನ್ನು ನೋಡುವಾಗ ಹೃದಯ ಕಲಕಿ ಹೋಗುತ್ತಿತ್ತು. ತಾವು ಅವನಿಗೆ ಅನ್ಯಾಯ ಮಾಡುತ್ತಿರಬಹುದೇ ಅಂತೆನಿಸುತ್ತಿತ್ತು. ಆಗ ಮಗನಿಗೆ ಮರುಮದುವೆ ಮಾಡುವ ಆಲೋಚನೆ ಬರುತ್ತಿತ್ತು. ವರ್ಷದ ಕರ್ಮಾಂತರಗಳೆಲ್ಲಾ ಕಳೆದ ನಂತರ ಒಂದು ದಿನ ಮಗನನ್ನು ಬಳಿಗೆ ಕರೆದು ಕೂರಿಸಿಕೊಂಡು ಹೇಳಿದರು.

''ನಾನು ಹೇಳುವ ಮಾತು ನಿನಗೆ ಸರಿ ಅಂತ ಅನ್ನಿಸದೇ ಇರಬಹುದು. ಆದರೆ ದೊಡ್ಡವನಾಗಿ ನಾನು ಸುಮ್ಮನಿರಬಾರದು... ನಾನು ಹೇಳಲೇಬೇಕು. ನೀನು ಇನ್ನೊಂದು ಮದುವೆಯಾಗು...'' ಅವನ ಕಡೆ ನೋಡುವ ಧೈರ್ಯ ಬರಲಿಲ್ಲ.

''ಇಲ್ಲಪ್ಪಾ.... ನಾನು ಮತ್ತೆ ಮದುವೆಯಾಗುಲ್ಲ'' ತತ್‌ಕ್ಷಣವೇ ಹೇಳಿದ.

''ಹಾಗೆಂದರೆ ಹೇಗೆ ? ಪೃಥ್ವಿ ಇನ್ನೂ ಮಗು. ತಾಯಿಯ ಆರೈಕೆ ಇಲ್ಲದೇ ಅವನು ಬೆಳೆಯಲು ಸಾಧ್ಯವೇ ?''

''ಅದೇನೋ... ನನಗದೆಲ್ಲ ಗೊತ್ತಿಲ್ಲ''

''ನಾನು ಹೇಳೋದನ್ನು ಕೇಳಪ್ಪ... ಹೀಗೇ ಒಂಟಿಯಾಗಿ ಎಷ್ಟು ವರ್ಷ ಇರಲು ಸಾಧ್ಯ ? ಆದದ್ದನ್ನ ಮರೆತು ಮುಂದಿನದನ್ನು ಆಲೋಚಿಸಬೇಕು... ಪೃಥ್ವಿ ಈಗಿನ್ನೂ ಚಿಕ್ಕವನು. ಹೊಸ ತಾಯಿಗೆ ಹೊಂದಿಕೊಳ್ಳುವುದು ಕಷ್ಟವಾಗುಲ್ಲ..''

''ಹಾಗಂತ... ? ನೀವೇ ಹೇಳಿ ಅಪ್ಪ, ನಡೆದದ್ದನ್ನೆಲ್ಲ ಮರೆಯಲು ಸಾಧ್ಯವೇನಪ್ಪಾ...? ನನ್ನ ಹಾಗೇ ನೀವೂ ಒಂಟಿಯೇ ಅಲ್ಲವೇ ? ನಾನೂ ತಾಯಿಯಿಲ್ಲದೇ ಬದುಕುತ್ತಿಲ್ಲವೇ ? ಹಾಗೇ ಪೃಥ್ವಿಯೂ ಬದುಕಲಿ... ನಿಮ್ಮ ಹಾಗೆ ನಾನೂ ಒಂಟಿಯಾಗಿ ಬದುಕಬಲ್ಲೆ...''

''ಅದು ಹಾಗಲ್ಲ ನಾಗೇಶ... ಒಂಟಿಯಾಗಿದ್ದರೂ, ಇಲ್ಲದಿದ್ದರೂ ಬದುಕು ಮುಂದುವರೆಯುತ್ತದೆ.... ಆದರೆ ಅದಕ್ಕೊಂದು ಅರ್ಥವೂ ಬೇಕು. ನಾನು ಒಂಟಿಯಾಗಿರುವುದಕ್ಕೂ, ನೀನು ಒಂಟಿಯಾಗಿರುವುದಕ್ಕೂ ಬಹಳ ವ್ಯತ್ಯಾಸವಿದೆ.''

"ನಿಮ್ಮ ಮಾತು ನನಗೆ ಅರ್ಥವಾಗುತ್ತೆ. ಆದರೆ ನನಗೆ ಯಾವ ಆಸಕ್ತಿಯೂ ಇಲ್ಲ. ಸುಮನಳ ಹೊರತು ನಾನು ಬೇರೆ ಯಾವ ಹೆಣ್ಣಿನ ಕಡೆ ತಿರುಗಿಯೂ ನೋಡಿರಲಿಲ್ಲ. ಇನ್ನು ಮುಂದೆಯೂ ಹಾಗೇ ಇರ್ತೀನಿ..."

ಮಗನ ಮಾತು ತಂದೆಯನ್ನು ಮೆಚ್ಚಿಸಿತು. ಆದರೆ ಮಗನ ಯೌವನದ ಮೇಲೆ ನಂಬಿಕೆಯಿರಲಿಲ್ಲ. ತಮಗೆ ತಿಳಿಯದಂತೆ ತಮ್ಮ ಮಗ ಬೇರೆ ಹೆಣ್ಣಿನ ಸಹವಾಸ ಮಾಡಬಹುದೇನೋ ಅಂತ ಅನ್ನಿಸಿದ್ದರೂ ಅದು ಒಂದು ದೊಡ್ಡ ತಪ್ಪು ಅಂತ ಭಾವಿಸಿರಲಿಲ್ಲ. ಆದರೆ ಮಗ ಹೀಗೆ ಹೇಳುತ್ತಿದ್ದಾನೆ. ಮಗನಿಗೆ ಮದುವೆ ಮಾಡಿಕೋ ಎಂದು ತಿಳುವಳಿಕೆ ಹೇಳಬಹುದು. ಆದರೆ... ಒಂಟಿಯಾಗಿರುವವನಿಗೆ, ಬೇರೆ ಹೆಣ್ಣಿನ ಸಂಗ ಮಾಡಬೇಡ ಎಂದು ತಾನು ಹೇಳುವುದು ಸಾಧ್ಯವೇ ...? ಇಂಥ ಒಂದು ಸನ್ನಿವೇಶ ನಮ್ಮ ಮನೆಯಲ್ಲೇ ಒದಗುತ್ತದೆ ಅಂತ ಎಂದೂ ಅಂದುಕೊಂಡಿರಲಿಲ್ಲ. ಇಂಥ ಒಂದು ದುರಂತ ನಮ್ಮ ಮನೆಯಲ್ಲೇ ನಡೆಯಬೇಕೆ ? ಮನಸ್ಸು ಭಾರವಾಯಿತು.

ಹೆಂಗಸಿಲ್ಲದ ಮನೆ ಏನು ಚೆಂದ ? ಮನೆಯಲ್ಲಿ ಹೆಂಗಸಿನ ಕೈಯ ಬಳೆಗಳ ನಾದ, ಕಾಲುಂಗುರದ ಸದ್ದು ಕೇಳಿ ಬರುತ್ತಿರಬೇಕು... ಬಣ್ಣಬಣ್ಣದ ಸೀರೆ, ರವಿಕೆಗಳನ್ನುಟ್ಟು ಮೆರೆಯುವ ಹೆಣ್ಣಿದ್ದರೇ ಆ ಮನೆಗೆ ಕಳೆ ! ನಮ್ಮ ಮನೇಲಿ ಗಂಡಸರ ಬಿಳೀ ಬಟ್ಟೆಗಳೇ ಜಾಸ್ತಿ. ಮನೆಯಲ್ಲಿರುವವರು ನಾವು ಮೂರೇ ಜನ. ಮನೆಯಲ್ಲಿ ಗಲಾಟೆಯೇ ಇಲ್ಲ. ಮನೆಯಲ್ಲಿ ಸಂಭ್ರಮ ಉತ್ಸಾಹ ಹೆಂಗಸರಿಂದ ಮಾತ್ರ... ಈ ಭಾವನೆ ಮತ್ತೆ ಮತ್ತೆ ತಲೆದೋರುತಿತ್ತು. ತಾವು ಎಲ್ಲದರಿಂದ ವಂಚಿತರಾಗುತ್ತಿದ್ದೇವೆ ಅಂತನ್ನಿಸುತ್ತಿತ್ತು. ಹಾಗಾಗಿ ಮಗನ ಮುಂದೆ ಮತ್ತೆ ಮತ್ತೆ ಈ ಮಾತುಗಳನ್ನು ಆಡುತ್ತಿದ್ದರು. ನಾಗೇಶ ತನಗೂ ಈ ಮಾತಿಗೂ ಏನೂ ಸಂಬಂಧವೇ ಇಲ್ಲವೆನ್ನುವಂತೆ ಆ ಜಾಗದಿಂದ ಎದ್ದು ಹೋಗುತ್ತಿದ್ದ.

ದುರಂತದ ನಂತರ ಹೊಸದಾಗಿ ನೇಮಿಸಿಕೊಂಡಿದ್ದ ಡ್ರೈವರ್ ನಂಜಪ್ಪನನ್ನು ಆತ್ಮೀಯವಾಗಿ ಮತನಾಡಿಸಿ, ಅವನಿಂದ ಕೆಲವು ವಿಷಯಗಳನ್ನು ಸಂಗ್ರಹಿಸುತ್ತಿದ್ದರು. ಆದರೆ ಮಗನ ಬಗ್ಗೆ ಅನುಮಾನ ಪಡುವಂತಹ ಯಾವುದೇ ವಿಷಯಗಳಿರುತ್ತಿರಲಿಲ್ಲ. ಮಗನ ಬಗ್ಗೆ ಹೆಮ್ಮೆ ಮೂಡುತ್ತಿತ್ತು. ಆದರೂ ಮಗ ಮತ್ತೆ ಸಂಸಾರಿಯಾಗಲಿ ಎಂದು ಮನಸ್ಸು ಬಯಸುತ್ತಿತ್ತು.

ಮನೆಯಲ್ಲಿ ಸಕಲ ಸೌಲಭ್ಯವೂ ಇತ್ತು. ಪೃಥ್ವಿಗಾಗಿ ಒಬ್ಬಳು ಆಯಾಳನ್ನು ಗೊತ್ತು ಮಾಡಿದ್ದರು. ಆದರೆ ಸ್ವಲ್ಪ ದೊಡ್ಡವನಾಗುತ್ತಿದ್ದಂತೆ ಪೃಥ್ವಿ ಸ್ನಾನ, ಡ್ರೆಸ್ಸು, ತಿಂಡಿ ಇತ್ಯಾದಿಗಳನ್ನು ಕೆಲಸದವರಿಂದ ಮಾಡಿಸಿಕೊಳ್ಳಲು ತಕರಾರು ಮಾಡಲು

ಪ್ರಾರಂಭಿಸಿದ. ಸುಬ್ಬರಾಯಪ್ಪನಿಗೆ ಆತಂಕ ಶುರುವಾಯಿತು. ನಾಗೇಶನಿಗೂ ಚಿಂತೆ ಪ್ರಾರಂಭವಾಯಿತು. ಕೆಲವೇ ದಿನಗಳಲ್ಲಿ ಯಾವ ಮುಲಾಜೂ ಇಲ್ಲದೆ ಬೇರೆ ಊರಿನ ಬೋರ್ಡಿಂಗ್ ಸ್ಕೂಲಿಗೆ ಸೇರಿಸಿದ. ಅವನು ತಾತನನ್ನು ಬಿಟ್ಟು ಹೋಗುಲ್ಲ ಅಂತ ಹಠ ಮಾಡಿದಾಗ ತಾತ ಮುದ್ದಿಸಿ ನುಡಿದರು.

''ಇಲ್ಲಿ ನಿನಗೆ ಬೇಜಾರಾಗುವುದಿಲ್ವಾ ಪೃಥ್ವಿ ? ನಿನ್ನ ಜತೆ ಆಟ ಆಡುಕ್ಕೆ ಯಾರೂ ಇಲ್ಲ... ನಾನು ನಿನ್ನ ತಾತ, ಬರೀ ಮುದ್ದು ಮಾಡಬಲ್ಲೆ... ನಿಮ್ಮಪ್ಪ ಮನೇಲಿರುವುದೇ ಕಡಿಮೆ. ಬೋರ್ಡಿಂಗ್ ಸ್ಕೂಲಿನಲ್ಲಿ ನಿನ್ನ ವಯಸ್ಸಿನ ಹುಡುಗರು, ನಿನ್ನ ಸ್ನೇಹಿತರಾಗ್ತಾರೆ, ಸಹಪಾಠಿಗಳಾಗ್ತಾರೆ, ಆಟ, ಪಾಠ, ಊಟಗಳಿಗೆ ಜತೆ ಸಿಗ್ತಾರೆ... ಚೆನ್ನಾಗಿರುತ್ತೆ. ನೀನು ಜಾಣ ಅಲ್ವಾ ! ತುಂಬಾ ಓದಿ ಮುಂದೆ ಬರಬೇಕು ಅಲ್ವಾ ? ರಜದಲ್ಲಿ ಊರಿಗೆ ಬಂದಾಗ ನಾವುಗಳು ಹೊರಗೆ ನಾಲ್ಕಾರು ದಿನ ತಿರುಗಾಡಿ ಬರೋಣ...'' ತಾತನ ಮಾತನ್ನು ಮೀರಲಾಗದೇ ಪೃಥ್ವಿ ಬೋರ್ಡಿಂಗ್ ಸ್ಕೂಲಿಗೆ ಹೋಗಿ ಸೇರಿದ. ಕ್ರಮೇಣ ಆ ವಾತಾವರಣ ಅವನಿಗೆ ಇಷ್ಟವಾಗತೊಡಗಿತು. ರಜದಲ್ಲಿ ಊರಿಗೆ ಬಂದಾಗ ತಾತನೊಡನೆ ತನ್ನ ಅನುಭವಗಳನ್ನು ಉತ್ಸಾಹದಿಂದ ಹೇಳಿಕೊಳ್ಳುತ್ತಿದ್ದ. ತಾತ ಆಸಕ್ತಿಯಿಂದ ಆಲಿಸುತ್ತಿದ್ದರು. ರಜ ಮುಗಿದು ಅವನು ಮತ್ತೆ ವಾಪಸ್ಸು ಹೊರಟು ಹೋದಾಗ, ತಾತ ಮತ್ತೆ ಒಂಟಿಯಾಗುತ್ತಿದ್ದರು. ಒಂದೆರಡು ದಿನ ಮಂಕಾಗಿರುತ್ತಿದ್ದರು.

''ಈಗ ಮನೇಲಿ ಪೃಥ್ವೀನೂ ಇಲ್ಲ, ಹೊತ್ತು ಹೋಗುವುದೇ ಕಷ್ಟವಾಗ್ತಿದೆ. ನಾನೂ ನಿನ್ನ ಜತೇಲಿ ಆಫೀಸಿಗೆ ಬರ್ತೀನಿ'' ಎಂದಿದ್ದರು.

''ಬೇಡ... ಆರಾಮಾಗಿ ಮನೇಲಿರಿ... ವಾಕಿಂಗ್ ಹೋಗಿ, ದೇವಸ್ಥಾನಕ್ಕೆ ಹೋಗಿ.... ಟಿ.ವಿ. ನೋಡಿ.... ಕಾಲ ಸುಲಭವಾಗಿ ಕಳೆಯುತ್ತೆ.''

ಮಗನ ಮಾತಿಗೆ ಇಲ್ಲವೆನ್ನಲಾಗದೇ ಕ್ಲಬ್ಬಿಗೆ ಸದಸ್ಯರಾದರು. ವಾಕಿಂಗ್ ಹೋಗಲು ಪ್ರಾರಂಭಿಸಿದರು. ಉಪನ್ಯಾಸ ಕೇಳಲು ದೇವಸ್ಥಾನಕ್ಕೆ ಹೋಗಿ ಬರುತ್ತಿದ್ದರು. ಟಿ.ವಿ. ಮುಂದೆ ಕೂತು ಕ್ರಿಕೆಟ್ ಮ್ಯಾಚ್‌ಗಳನ್ನು ವೀಕ್ಷಿಸುತ್ತಿದ್ದರು. ಅಷ್ಟಾದರೂ ಏನೋ ಕೊರತೆ. ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ತನಗೆ ಪತ್ನಿ ಇಲ್ಲ, ನನಗಿಂತ ಇಪ್ಪತ್ತೆಂಟು, ಮೂವತ್ತು ವರ್ಷಕ್ಕೆ ಚಿಕ್ಕವನು ತನ್ನ ಮಗ, ಅವನ ಮನಸ್ಸಿನ ಭಾವನೆಗಳನ್ನು ಹಂಚಿಕೊಳ್ಳಲು ಅವನಿಗೆ ಸಂಗಾತಿಯರಿಲ್ಲ... ಈ ವಿಷಯ ಅವರನ್ನು ಕುಗ್ಗಿಸುತ್ತಿತ್ತು.''

* * * *

ಹೀಗೇ ಹತ್ತು ವರ್ಷಗಳು ಉರುಳಿ ಹೋದವು. ಹನ್ನೆರಡು ವರ್ಷದ ಪೃಥ್ವಿ ತುಂಬಾ ಬೆಳೆದಿದ್ದ. ಆದರೆ ಈಗಲೂ ಅವನಿಗೆ ತಾತನೇ ಸ್ನೇಹಿತ ; ತಂದೆಯೊಡನೆ ಎಷ್ಟೋ ಅಷ್ಟೇ ಮಾತುಕತೆ. ಸಲುಗೆ ಕಡಿಮೆ.

''ತಾತಾ ಈಗ ನನ್ನ ಕೆಲಸಗಳನ್ನೆಲ್ಲ ನಾನೇ ಮಾಡಿಕೊಳ್ತೀನಲ್ಲ. ಹೈಸ್ಕೂಲಿಗೆ ಇಲ್ಲೇ ಸೇರಿಕೊಳ್ತೀನಿ...'' ತಾತನಿಗೆ ಹೇಳಿದ.

''ಹುಂ, ಹಾಗೇ ಮಾಡುವಂತೆ, ನಾನು ನಾಗೇಶನಿಗೆ ಹೇಳ್ತೀನಿ'' ಎಂದಿದ್ದರು. ಆದರೆ ಮಗನೊಡನೆ ಮಾತಾಡುವ ಮೊದಲೇ ಡ್ರೈವರ್ ನಂಜಪ್ಪ ತಿಳಿಸಿದ ಸುದ್ದಿಯಿಂದ ಕಸಿವಿಸಿಗೊಂಡಿದ್ದರು. ಕಾರು ಕೆಟ್ಟು ಹೋದುದೇ ಕಾರಣವಾಗಿ, ನಾಗೇಶನಿಗೆ ಪರಿಚಯವಾದ ಆ ಹೆಂಗಸು ಯಾರು ? ಅವಳ ಮನೆಯಲ್ಲಿ ಊಟ ಮಾಡಿ ಅವಳಿಗೆ ಹಣ ಕೊಟ್ಟು, ಪರಿಚಯವನ್ನು ಮುಂದುವರೆಸಿದ್ದಾನೆ. ತಾನಾಗಿಯೇ ಮತ್ತೆ ಅವಳ ಮನೆಗೆ ಹೋಗಿ ಬಂದ ವಿಷಯವನ್ನು ತಿಳಿದಾಗಿನಿಂದ ಸುಬ್ಬರಾಯಪ್ಪ ಮಗನ ಬಗ್ಗೆ ಅತಿಯಾಗಿ ಆತಂಕಗೊಂಡಿದ್ದರು. ''ಈ ಹೊಸ ಸ್ನೇಹ ಈಗೇಕೆ ?''

ನಾಗೇಶ್ ಬಿಸಿನೆಸ್ ವ್ಯವಹಾರದ ಮೇಲೆ ನಾಲ್ಕಾರು ದಿನಗಳ ಮಟ್ಟಿಗೆ ಬೊಂಬಾಯಿಗೆ ಹೋಗಿದ್ದ ಸಮಯದಲ್ಲಿ ಸುಬ್ಬರಾಯಪ್ಪ ಕಾರಿನಲ್ಲಿ ನಳಿನಿಯ ಮನೆಗೆ ಬಂದರು. ನಳಿನಿಯನ್ನು ಕಂಡು ಅವರಿಗೆ ಪಿಚ್ಚೆನಿಸಿತು. ಅವಳು ಯುವತಿ ಅಲ್ಲ; ನೋಡಿದವರ ಕಣ್ಣು ಕುಕ್ಕುವಂತಹ ಸೌಂದರ್ಯವತಿ ಅಲ್ಲ. ಯಾವ ಆಕರ್ಷಣೆ ಇವಳಲ್ಲಿ ತನ್ನ ಮಗನಿಗೆ ? ಕೇವಲ ರುಚಿಯಾದ ಅನ್ನ ಸಾರಿನ ಊಟಕ್ಕೆ ತನ್ನ ಮಗ ಇವಳಿಗೆ ಸೋತಿರಲಾರ... ಯಾರಿಗೂ ತಿಳಿಯದಂತೆ ಇವಳನ್ನು ಭೇಟಿಯಾಗುತ್ತಿರಬಹುದೇ... ಏನು ಸಂಬಂಧವಿರ ಬಹುದು ಅಂತಂದುಕೊಂಡಾಗ, ಮಗ ತಮ್ಮಿಂದ ದೂರವಾಗುತ್ತಿರಬಹುದೇ ಎಂಬ ಅನುಮಾನ ಮೂಡಿ ದುಃಖವಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ನಳಿನಿಯ ತಂದೆಯ ಮಾತು ಹೆಚ್ಚು ಬೇಸವನ್ನುಂಟು ಮಾಡಿತ್ತು.

ಊರಿನಿಂದ ವಾಪಸ್ಸಾದ ಮಗನನ್ನು ಕಂಡು ವ್ಯಥೆಯಾಯಿತು. ಗಂಡಸಿನ ಬಳಲಿಕೆಯನ್ನು, ಪ್ರೀತಿಯ ಹೆಂಡತಿಯ ಒಂದು ಮುಗುಳ್ನಗೆ ಪರಿಹರಿಸಬಲ್ಲದು ಎಂದು ಅವರು ಅರಿತಿದ್ದರು. ''ಮದುವೆಯಾಗು ಅಂತಂದರೆ ಆಗಲಿಲ್ಲ... ಬಾಂಬೇಲಿ ಎಲ್ಲೆಲ್ಲಿ ಹೋಗಿದ್ದನೋ.. ? ಏನೇನು ಸಹವಾಸವೋ'' ಎಂದುಕೊಳ್ಳಲು ಅವರ ಮನೆ ಹಿಂಜರಿಯಿತು. ಅವನನ್ನು ಪರೀಕ್ಷಿಸುವಂತೆ,

''ನಳಿನಿ ಅಂತ ಒಬ್ಬ ಹೆಂಗಸು, ಯಾವುದೋ ಹಳ್ಳಿಯವಳು, ನಿನ್ನನ್ನು ಕೇಳಿಕೊಂಡು ಬಂದಿದ್ದಳು. ಅವಳು ಯಾರು ? ಯಾಕೆ ಬಂದಿದ್ದಳು ?'' ಅಂತ ಕೇಳಿದಾಗ ನಾಗೇಶ ನಕ್ಕು ನಡೆದುದನ್ನೆಲ್ಲ ತಿಳಿಸಿದ. ''ಅವಳಿಗೆ ಕೆಲಸದ ಅಗತ್ಯವಿದೆ, ಕೆಲಸ ಕೊಡಿಸ್ತೀನಿ ಅಂತ ಅಂದಿದ್ದೆ. ಅದಕ್ಕೇ ಬಂದಿರ ಬಹುದು...'' ಎಂದು ಸಮಾಧಾನವಾಗಿ ನುಡಿದಾಗ ಇವರ ಮನಸ್ಸು ಹಗುರವಾಯಿತು. ಆಲೋಚನೆ ಬೇರೆ ದಿಕ್ಕಿನಲ್ಲಿ ಓಡಿತು.

''ಅವಳನ್ನು ನೋಡಿದರೆ ಆಫೀಸಿನಲ್ಲಿ ಕೆಲಸ ಮಾಡುವವಳಂತೆ ಕಾಣಿಸುವುದಿಲ್ಲ. ಅಡಿಗೆಯವಳಂತೆ ಕಾಣ್ತಾಳೆ'' ನಾಗೇಶ ತಂದೆಯ ಕಡೆ ನೋಡದೇ ಪ್ರಶ್ನಿಸಿದ.

''ಅಡಿಗೆ ಮಾಡೋರು ಆಫೀಸಿನ ಕೆಲಸವನ್ನೇಕೆ ಮಾಡಬಾರದು ?''

''ನನಗನ್ನಿಸಿದ್ದನ್ನು ನಾನು ಹೇಳಿದೆ. ಇನ್ನು ನಿನ್ನ ಇಷ್ಟ'' ತಂದೆಯ ಮಾತುಗಳು ಅವನಿಗೆ ಹಿಡಿಸಲಿಲ್ಲ. 'ಕೆಲಸ ಕೊಡಿಸ್ತೀನಿ ಬಾ ಅಂತ ಹೇಳಿದ್ದು ತಪ್ಪಾಯಿತೇ ? ನಾನಿಲ್ಲದಾಗ ಯಾಕೆ ಬಂದಳೋ...? ಮತ್ತೊಮ್ಮೆ ಅವಳಿಗೆ ಬೇಸರವಾಗಿರಬಹುದೇ...?' ಮನಸ್ಸಿಗೆ ಮುಜುಗರವೆನಿಸಿತು.

ಆ ರಾತ್ರಿ ಮೊಟ್ಟಮೊದಲ ಬಾರಿಗೆ ಅವನು ಸುಮನಳ ಬದಲು ನಳಿನಿಯನ್ನು ಕುರಿತು ಆಲೋಚಿಸಿದ. ಅವಳ ಬಗ್ಗೆ ಯಾವ ಕುಂದುಕೊರತೆ ಕಾಣಲಿಲ್ಲ ಇವನಿಗೆ. ದೃಢಕಾಯವಾಗಿದಾಳೆ. ಆರೋಗ್ಯದಿಂದಿದಾಳೆ. ಮನೆಯ ಕೆಲಸವನ್ನೆಲ್ಲಾ ನಿಭಾಯಿಸುತ್ತಾಳೆ. ನೋಡಿದರೆ, ತಂದೆಯ ಹೊರತು ಅವಳಿಗೆ ಇನ್ಯಾರಿಲ್ಲ ಅಂತ ಕಾಣಿಸುತ್ತೆ. ಆ ತಂದೆಯೋ... ಮಗಳನ್ನು ಸುಖವಾಗಿಟ್ಟು ಕೊಂಡಿರಲಾರ... ಏಕೋ ಏನೋ ನಳಿನಿಯ ನಿರುತ್ಸಾಹದ ಮುಖ ಅವನ ಮುಖದ ಮುಂದೆ ಪದೇ ಪದೇ ಕಾಣಲಾರಂಭಿಸಿತು...

ಇದ್ದಕ್ಕಿದ್ದಂತೆಯೇ 'ತಾನೇಕೆ ಅವಳನ್ನು ಮದುವೆಯಾಗಬಾರದು...?' ಎಂಬ ಆಲೋಚನೆ ಮೂಡಿದೊಡನೆ ಎದ್ದು ಕೂತ. ಮೈಯೆಲ್ಲಾ ಬೆವೆತು, ರಕ್ತದ ಒತ್ತಡ ಏರಿರಬಹುದು ಎನಿಸಿತ್ತು. ಎದ್ದು ಶತಪಥ ಅತ್ತಿಂದಿತ್ತ ಹತ್ತಾರು ಬಾರಿ ತಿರುಗಾಡಿದ. ಆದರೂ ತನಗನ್ನಿಸಿದ್ದು ತಪ್ಪು ಎನಿಸಿರಲಿಲ್ಲ. ಅಥವಾ ಭ್ರಮೆ ಎನಿಸಿರಲಿಲ್ಲ. ಕಡೆಗೆ ತಾನೇ ಒಂದು ತೀರ್ಮಾನಕ್ಕೆ ಬಂದ. ಮೊದಲು ತಾನು ಅವಳನ್ನು ಭೇಟಿಯಾಗಿ, ಅವಳೊಡನೆ ಮಾತನಾಡಿ, ಅವಳ ಮನಸ್ಸಿನಲ್ಲಿ ಏನಿದೆ ಅಂತ ತಿಳಿದುಕೊಳ್ಳಬೇಕು... ಆನಂತರ ಅವನಿಗೆ ನಿದ್ದೆ ಬರಲಿಲ್ಲ.

ಹೊರಳಾಡುತ್ತಾ ಬೆಳಗಾಗುವುದನ್ನೇ ಎದುರು ನೋಡುತ್ತಿದ್ದ.

ಮಗ ನಿತ್ಯಕ್ಕಿಂತ ಮೊದಲು ಎದ್ದು, ಸಿದ್ಧನಾಗುತ್ತಿರುವುದನ್ನು ತಂದೆ ಗಮನಿಸಿದರು. ಮಗನ ನಿದ್ರಾರಹಿತವಾದ ಮುಖ ಅವರ ಆತಂಕವನ್ನು ಹೆಚ್ಚಿಸಿತ್ತು. ಕಾರಣ ಏನೆಂದು ತಾವೇ ಕೇಳಲಾರರು... ಆದರೂ ಏನೋ ಅನುಮಾನ ಕಾಡುತ್ತಿತ್ತು.

ನಾಗೇಶ ಅದೇ ಮಧ್ಯಾಹ್ನ ನಳಿನಿಯನ್ನು ಕಾಣಲೆಂದು ಹೊರಟ. ನಳಿನಿ ಮನೆಯಲ್ಲಿರಲಿಲ್ಲ. ಬೇರೆಲ್ಲಿಯಾದರೂ ಕೆಲಸ ಸಿಕ್ಕಿರಬಹುದೇ ಅಂತಂದು ಕೊಂಡಾಗ ಮನ ಮುದುಡಿತು.

''ನಾನು ನಳಿನಿಯನ್ನು ಕರೆದುಕೊಂಡು ಹೋಗೋಣ ಅಂತ ಬಂದಿದೀನಿ'' ತಡವರಿಸುತ್ತಾ ನುಡಿದ.

''ಏನು ಕೆಲಸ ? ಎಷ್ಟು ಸಂಬಳ ? ಮನೆ ಕೊಡ್ತೀರಾ ?'' ಆತ ಪ್ರಶ್ನಿಸಿದಾಗ ಇವನ ಬೇಸರ ಹೆಚ್ಚಾಗಿತ್ತು.

''ನಿಮಗೆ ಒಪ್ಪಿಗೆಯಾದರೆ ನಾನು ಇಂದೇ ನಳಿನಿಯನ್ನು ಮದುವೆಯಾಗಿ, ನಮ್ಮ ಮನೆಗೆ ಕರೆದೊಯ್ಯುವ ನಿರ್ಧಾರದಿಂದ ಬಂದಿದೀನಿ''

ಆತ ಕೆಟ್ಟದಾಗಿ ನಕ್ಕು ಒರಟಾಗಿ ನುಡಿದ.

''ನೀವು.... ನಮ್ಮ ನಳಿನೀನ ಮದುವೆಯಾಗ್ತೀರಾ ?.... ಸುಮ್ಮನೆ ತಮಾಷೆ ಮಾಡಬೇಡಿ... ಹೊರಟು ಹೋಗಿ...'' ನಾಗೇಶನಿಗೆ ಅವಮಾನ ವಾದಂತಾಯ್ತು. ಆದರೂ ನುಡಿದ.

''ನಾನು ತಮಾಷೆ ಮಾಡುವವನಲ್ಲ... ನಿರ್ಧಾರ ತಗೊಂಡೇ ಬಂದಿದೀನಿ... ಅವರು ಯಾವುದಾದ್ರೂ ಕೆಲಸ ಕೊಡಿಸಿ ಅಂತ ಹೇಳಿದ್ರು.....''

''ಅಂದ್ರೇ ? ಮದುವೆ ಅಂತ ಮಾಡಿಕೊಂಡು, ಅಡಿಗೆ ಕೆಲಸಕ್ಕೆ ಇಟ್ಟುಕೊಳ್ತೀರಾ ?'' ಹಂಗಿಸಿ ನುಡಿದರು ಆತ.

''ನೀವು ದೊಡ್ಡೋರು ಹೀಗೆಲ್ಲಾ ಮಾತನಾಡಬಾರದು...''

''ನನಗೆಲ್ಲಾ ಗೊತ್ತೀ... ನಿಮ್ಮಂಥ ದೊಡ್ಡವರ ಸಹವಾಸ ! ಮನೇಲಿ ಹೆಂಗಸಿನ ಅವಶ್ಯಕತೆ ಇರುತ್ತೆ... ಬಡಹೆಂಗಸನ್ನು ಮದುವೆಯಾಗಿ, ಬಿಟ್ಟಿ ಅನ್ನ ಹಾಕ್ತೀನಲ್ಲ ಅಂತ ಚಾಕರಿ ಮಾಡಿಸಿಕೊಳ್ತೀರಿ.... ಅಷ್ಟೆ....''

''ಸುಮ್ನಿರಿ, ನಿಮಗೆ ಏನೋ ಅನುಮಾನ... ಹೆಂಡತಿ ಅಂದ ಮೇಲೆ

ಮನೆ ಕೆಲಸ ಮಾಡಿದ್ರೆ ತಪ್ಪಾ...?''

''ಅದು ತಪ್ಪಲ್ಲ... ಈ ಬಡತನ ಇದ್ಯೆಲ್ಲಾ ಅದು ಮಹಾತಪ್ಪು. ನಿಮ್ಮಂತೋರಿಗೆ... ನಿಮ್ಮಂಥ ಶ್ರೀಮಂತರಿಗೆ ಕಾರಿನಲ್ಲಿ ನಿಮ್ಮ ಪಕ್ಕ ಕೂರಿಸಿಕೊಂಡು ಊರೆಲ್ಲಾ ಮೆರೆಸೋಕೆ ಒಬ್ಬ ಹೆಂಡತಿ ಬೇಕು... ಮನೆಗೆ ಸುಸ್ತಾಗಿ ಬಂದಾಗ, ಬಿಸಿ ಬಿಸಿ ಅಡುಗೆ ಉಪಚಾರ ಮಾಡೋಕೆ ಇನ್ನೊಬ್ಬಳು ಹೆಂಡತಿ ಬೇಕು...''

ನಾಗೇಶ್ ಬೇಸರದಿಂದ ಮುಖ ಕೆಟ್ಟದು ಮಾಡಿದ. ''ನಿಮ್ಮ ಮನಸ್ಸಿನಲ್ಲಿ ಏನೇನೋ ಆಲೋಚನೆಗಳು ತುಂಬಿವೆ. ನಿಮ್ಮ ಹತ್ತಿರ ಮಾತೇಕೆ ? ನಿಮ್ಮ ಮಗಳು ಬರಲಿ, ಅವರ ಹತ್ತಿರಾನೇ ಮಾತಾಡ್ತೀನಿ.''

''ನನ್ನ ಮಗಳ ಬಳಿ ಮಾತನಾಡಲು ನಿಮಗೇನ್ರೀ ಅಧಿಕಾರ ? ನನ್ನ ಒಪ್ಪಿಗೆ ಇಲ್ಲದೇ ಅವಳು ಹೇಗೆ ಮದುವೆಯಾಗ್ತಾಳೆ ನಾನೂ ನೋಡ್ತೀನಿ.'' ಆತ ಅಧಿಕಾರವಾಣಿಯಿಂದ ನುಡಿದಾಗ ಪೆಚ್ಚಾದ.

''ಸರಿ ನಿಮ್ಮಿಷ್ಟ. ನನ್ನಿಂದ ನಿಮ್ಮ ಮಗಳಿಗೆ ಅನುಕೂಲವಾದೀತು ಎಂದು ಭಾವಿಸಿದೆ. ಮದುವೆ ಇಲ್ಲದೇ ಹಾಗೇ ನಿಮ್ಮ ಮನೆಯಲ್ಲಿ ನಿಮ್ಮ ಮಗಳನ್ನು ಇಟ್ಟುಕೊಂಡಿದ್ದರೆ ಅದರಿಂದ ನಿಮಗೇನು ಲಾಭವೋ ನನಗಂತೂ ತಿಳಿಯದು...'' ಎಂದು ಅವನು ಎದ್ದು ಹೊರಟಾಗ, ಆತ ಮಾತಿನ ಜಾಡನ್ನೇ ಬದಲಾಯಿಸಿದರು.

''ನನ್ನ ಮಾತಿನಿಂದ ನಿಮಗೆ ಬೇಸರವಾಗಿರಬಹುದು. ನಾನೇ ಶತ ಒರಟ. ನಿಮ್ಮ ಹಾಗೆ ನಯವಾಗಿ ಮಾತನಾಡಲು ನನಗೆ ಬರುವುದೇ ಇಲ್ಲ... ಅದೇನು ವಿಷಯ ಅಂತಂದ್ರೆ, ಒಂದು ಸಲ ಇವಳ ಮದುವೆ ವಿಷಯದಲ್ಲಿ ಕೈ ಸುಟ್ಟುಕೊಂಡು ನೊಂದವನು ನಾನು...'' ನಾಗೇಶನಿಗೆ ಈ ವಿಷಯ ಹೊಸದು... ಬೆರಗಾಗಿ ಆತನನ್ನೇ ನೋಡಿದ.

''ನನಗೆ ಹುಟ್ಟಿದ ಆರು ಜನ ಹೆಣ್ಣು ಮಕ್ಕಳಲ್ಲಿ, ಕಡೆಗೆ ಉಳಿದವಳು ಇವಳೊಬ್ಬಳೇ.... ನನ್ನ ಹೆಂಡತಿಗೋ ಸದಾ ಒಂದಲ್ಲ ಒಂದು ಬೇನೆ. ಹಾಗಾಗಿ ಇವಳನ್ನು ಸ್ಕೂಲಿಗೆ ಸಹ ಕಳಿಸುತ್ತಿರಲಿಲ್ಲ. ಈ ಹಳ್ಳಿಗೆ ಹೊಸದಾಗಿ ವರ್ಗವಾಗಿ ಬಂದ ಸರ್ಕಾರಿ ಶಾಲೆಯ ಮಾಸ್ತರರೊಬ್ಬರು ಆಗ ಈಗ ನಮ್ಮ ಮನೆಗೆ ಬರುತ್ತಿದ್ದರು. ಆಗ ಮನೆಯಲ್ಲೇ ಒಂದು ಸಣ್ಣ ಪೆಟ್ಟಿಗೆ ಅಂಗಡಿಯನ್ನಿಟ್ಟಿದ್ದೆವು. ಬೀಡಿ, ಸಿಗರೇಟು, ಎಲೆ ಅಡಿಕೆ ಹೊಗೆಸೊಪ್ಪಿನ ಚಿಕ್ಕ ವ್ಯಾಪಾರ. ನನ್ನ

ಮಗಳಿಗೂ ಆತನಿಗೂ ಹೇಗೆ ಸ್ನೇಹ ಬೆಳೆಯಿತೋ ನನಗೆ ತಿಳಿಯಲಿಲ್ಲ. ಥಳುಕು ಥಳುಕಿನ ಮಾತುಗಳನ್ನಾಡಿ ನನ್ನ ಮಗಳ ಮನಸ್ಸನ್ನೇ ಕೆಡಿಸಿಬಿಟ್ಟ. ಅಕ್ಷರ ಕಲಿಸಿ ಪಾಠ ಹೇಳಿಕೊಡುತ್ತೇನೆಂಬ ನೆವದಲ್ಲಿ ದಿನಾ ನಮ್ಮ ಮನೆಗೆ ಬರುತ್ತಿದ್ದ... ಹೊರಗಿನ ಜನರು ಆಡಿಕೊಳ್ಳಲು ಪ್ರಾರಂಭಿಸಿದರು. ಆಗ ನಾನು ಎಚ್ಚೆತ್ತು ಕೊಂಡೆ. ಮನೆ ಅಳಿಯನಾಗಿರಲು ಆ ಮೇಷ್ಟ್ರನ್ನು ಒಪ್ಪಿಸಿ, ನಾಲ್ಕು ಜನರ ಎದುರು ಮದುವೆಯ ಶಾಸ್ತ್ರವನ್ನು ಮಾಡಿ ಮುಗಿಸಿದೆ. ಅದಾದ ಒಂದು ತಿಂಗಳಿನೊಳಗೆ ನಮಗೆ ಯಾವ ಆಸ್ತಿ ಪಾಸ್ತಿಯೂ ಇಲ್ಲ, ಮೋಸ ಮಾಡಿ ಮಗಳನ್ನು ತಲೆಗೆ ಕಟ್ಟಿದೆವು ಎಂದು ಸದಾ ಜಗಳವಾಡಿ, ಒಂದು ದಿನ ಯಾರಿಗೂ ತಿಳಸದೇ ಈ ಮನೆಯನ್ನು ಬಿಟ್ಟು ಹೊರಟುಹೋದ. ಆನಂತರ ಇದುವರೆಗೂ ನಮಗೆ ಅವನ ಸುದ್ದಿ ತಿಳಿದಿಲ್ಲ.

ಅವನ ಮಗನೇ ಈ ವಿಶ್ವ... ಇವನದೂ ಅದೇ ದಾರಿ. ಸ್ಕೂಲಿಗೆ ಸೇರಿಸಿದರೂ ಹೋಗುಲ್ಲ. ಉಂಡಾಡಿಯಂತೆ ಓಡಾಡಿಕೊಂಡಿದಾನೆ. ತಾಯಿಯೊಡನೆ ಜಗಳವಾಡಿ ಹಣ ಕಿತ್ಕೊಂಡು ಮನೆ ಬಿಟ್ಟು ಹೋಗ್ತಾನೆ. ಮನೆಗೆ ಬಂದರೆ ಬಂದ, ಇಲ್ಲದಿದ್ದರೆ ಇಲ್ಲ, ತಾನಂತೂ ನಾಲ್ಕು ಕಾಸು ಸಂಪಾದಿಸುವುದಿಲ್ಲ. ಖರ್ಚಿಗೆ ಹಣ ಬೇಕಾದಾಗ ಅವನಿಗೆ ಮನೆಯ ನೆನಪು ಬರುತ್ತೆ... ಹೀಗಿದೆ ನಮ್ಮ ಸಂಸಾರ ತಾಪತ್ರಯ. ನಮ್ಮ ನಳಿನಿ ನಾಲ್ಕಾರು ಹುಡುಗರಿಗೆ ಪಾಠ ಹೇಳಿಕೊಟ್ಟು ಸಂಪಾದಿಸ್ತಾಳೆ. ಹಬ್ಬ ಹರಿದಿನಗಳಲ್ಲಿ ಕೆಲವರ ಮನೆಗೆ ಅಡಿಗೆ ಕೆಲಸದಲ್ಲಿ ಸಹಾಯ ಮಾಡಿ ಒಂದಿಷ್ಟು ಪುಡಿಗಾಸು ಸಂಪಾದಿಸ್ತಾಳೆ. ಇದಿಷ್ಟೇ ನಮಗೆ ಆಧಾರ. ಈಗ ನೀವೂ ಅವಳನ್ನು ಮದುವೆ ಯಾಗಿ ಬಿಟ್ಟರೆ ನಮ್ಮ ಗತಿ ? ಅದರ ಬದಲು ಅವಳಿಗೆ ಒಂದು ಕೆಲಸ ಕೊಡಿಸಿ, ನಾವೂ ಹಾಯಾಗಿರ್ತೀವಿ.''

ನಾಗೇಶ ಕಸಿವಿಸಿಗೊಂಡ. ನಳಿನಿಗೆ ಈ ಮೊದಲೇ ಮದುವೆಯಾಗಿ ಒಬ್ಬ ಮಗನಿದಾನೆ ಎನ್ನುವ ವಿಷಯ ತಿಳಿದದ್ದು ಈಗಲೇ... ತಾನೀಗ ದುಡುಕಬಾರದು ಆಲೋಚಿಸಬೇಕು. ನಳಿನಿ ಸಂಭಾವಿತೆ ಇರಬಹುದು. ಆ ಗಂಡನೇ ಮೋಸ ಮಾಡಿರಬಹುದು.... ಈತನ ಮಾತು ನಿಜವಿರಬಹುದು... ಆದರೆ ಈತನಿಗೆ ಹಣದ ದಾಹವಿರುವಂತೆ ಕಾಣುತ್ತದೆ... ಇನ್ನು ಆ ಮಗ ? ಅವನು ಹೇಗೋ ? ಅವನ ಜವಾಬ್ದಾರಿ ತನಗೇಕೆ ? ಈ ವಿಷಯಗಳನ್ನೆಲ್ಲ ಅಪ್ಪನಿಗೆ ತಿಳಿಸುವುದಾದರೂ ಹೇಗೆ ?

''ಏಕೆ ? ಏಕೆ ಸುಮ್ಮನಾಗಿಬಿಟ್ರಿ ? ಹಿಂದೆ ಮುಂದೆ ಯೋಚಿಸದೇ

ಹಾಗೆಲ್ಲಾ ಮದುವೆ ಬಗ್ಗೆ ತೀರ್ಮಾನ ತಗೊಳ್ಳಲೇಬಾರದು. ನಮ್ಮ ನಳಿನಿಗೆ ಗಿಣೀಗೆ ಹೇಳಿದ ಹಾಗೆ ಹೇಳಿದ್ದೆ... ಆಗ ನನ್ನ ಮಾತನ್ನು ಕೇಳಲಿಲ್ಲ, ಹಾಳಾದಳು. ಒಮ್ಮೆ ಮೋಸ ಹೋದವಳು, ಮತ್ತೆ ಮೋಸ ಹೋಗುವುದಿಲ್ಲ ಅಂತ ಏನು ಗ್ಯಾರಂಟಿ ?'' ಆತ ಅಂಗೈ ಮೇಲೆ ಕೈ ಕುಟ್ಟಿ ಕೇಳಿದಾಗ ನಾಗೇಶ ಬೆಚ್ಚಿದ.

''ನಿಮಗೆ ಏನು ಗ್ಯಾರಂಟಿ ಬೇಕು ?''

''ನಿಮ್ಮ ವಿಚಾರ ಏನೂಂತ ನಮಗೆ ಸರಿಯಾಗಿ ತಿಳಿಯದು. ನಿಮಗೆ ಯಾವ ರೀತಿಯಿಂದಲೂ ಸರಿಸಮಾನಳಲ್ಲ ನಮ್ಮ ನಳಿನಿ. ಅಂಥೋಳನ್ನ ನೀವಾಗಿಯೇ ಮದುವೆಯಾಗಲು ನಿರ್ಧರಿಸಿದ್ದೀರಿ. ಅದೂ ಕೇವಲ ಎರಡೇ ಭೇಟಿಗಳ ನಂತರ... ನನಗೆ ಏನೋ ಅನುಮಾನ... ನಿಮ್ಮಲ್ಲಿ ಏನೋ ಐಬು ಇರಬಹುದು ಅನ್ನೋ ಅನುಮಾನ ನನಗೆ.'' ನಾಗೇಶ ಕೆಂಪಾದ.

''ಏನೂ ಐಬಿಲ್ಲ, ಇರೋ ವಿಷಯ ಹೇಳ್ತೀನಿ, ನಂಬಿದರೆ ನಂಬಿ ಬಿಟ್ಟರೆ ಬಿಡಿ. ಬಲವಂತವೇನೂ ಇಲ್ಲ. ಹತ್ತು ವರ್ಷದ ಕೆಳಗೆ ನನ್ನ ಹೆಂಡತಿ ತೀರಿ ಹೋದಳು. ನನಗೆ ಹನ್ನೆರಡು ವರ್ಷದ ಒಬ್ಬ ಮಗನಿದಾನೆ. ಈವರೆಗೂ ನಾನು ಮರುಮದುವೆಯಾಗುವ ಆಲೋಚನೆಯನ್ನೇ ಮಾಡಿರಲಿಲ್ಲ. ನಳಿಯನ್ನು ಕಂಡೆ, ಅವರ ಸ್ವಾಭಿಮಾನ ನನಗೆ ಮೆಚ್ಚುಗೆಯಾಯಿತು... ಆನಂತರ ನಾನು ಮದುವೆಯಾಗುವುದಾಗಿ ತೀರ್ಮಾನಿಸಿದೆ ಅಷ್ಟೇ...''

''ನೀವು ಹೇಳುತ್ತಿರುವುದು ನಿಜ ಅಂತ ಹೇಗೆ ನಂಬಲಿ ?''

''ಹೇಳಿದ್ನಲ್ಲ, ನಂಬಿದರೆ ನಂಬಿ ಬಿಟ್ಟರೆ ಬಿಡಿ. ಸುಳ್ಳು ಹೇಳಿ ಮೋಸ ಮಾಡಬೇಕಾಗಿಲ್ಲ ನಾನು....''

''ಸರಿಯಪ್ಪಾ... ಈ ಕಾಲದಲ್ಲಿ ನಂಬಿಕೆಗೆ ಅರ್ಹರೇ ಕಡಿಮೆ. ಯಾವ ಹುತ್ತದಲ್ಲಿ ಎಂಥಾ ಹಾವೋ ...? ಒಂದು ಸಲದ ಅನುಭವವೇ ಬೇಕಾದಷ್ಟು... ನಾನು ನನ್ನ ಮಗಳೊಡನೆ ಮಾತನಾಡಿ, ನಮ್ಮ ನಿರ್ಧಾರ ತಿಳಿಸ್ತೀವಿ. ಅವಳು ಒಪ್ಪಿಗೆ ಕೊಟ್ಟರೂ ನನ್ನ ಕೆಲವು ಕಂಡೀಷನ್ಸ್‌ಗೆ ನೀವು ಒಪ್ಪಬೇಕು.''

ಈ ಮಾತುಗಳು ನಾಗೇಶನನ್ನು ರೇಗಿಸಿತು. ಇವರು ಹಾಕುವ ಕಂಡೀಷನ್ಸ್‌ಗಳನ್ನು ನಾನು ಒಪ್ಪಬೇಕೆ ? ಸಾಧ್ಯವಿಲ್ಲ ಎಂದುಕೊಂಡು ''ಬರ್ತೀನಿ'' ಎಂದಷ್ಟೇ ಹೇಳಿ ಅಲ್ಲಿಂದ ಹೊರಟ. ದಾರಿಯಲ್ಲಿ ನಳಿನಿ ಎದುರಾದಳು. ಇವನೇ ಮುಗುಳ್ನಕ್ಕು ಮಾತನಾಡಿಸಿದ.

''ನಿಮ್ಮ ಮನೆಗೇ ಹೋಗಿದ್ದೆ...'' ಎಂದ.

''ಪಾಠದ ಮನೆಗೆ ಹೋಗಿದ್ರು... ಬನ್ನಿ ಮನೆಗೆ... ಕಾಫಿನೋ, ಮಜ್ಜಿಗೇನೋ ಕುಡಿಯೋರಂತೆ...'' ಅವಳ ಮಾತಿಗೆ ಇಲ್ಲವೆನ್ನಲಾಗದೇ, ಅವಳೊಡನೆ ಹೆಜ್ಜೆ ಹಾಕಿದ. ಮಗಳೊಡನೆ ಮತ್ತೆ ಬಂದವನನ್ನು ಕಂಡು, ಅವಳ ತಂದೆ ಹಾಗೇ ಎಲ್ಲೋ ಮಾಯವಾದರು.

ಅವಳು ಕೊಟ್ಟ ತಿಳಿ ಮಜ್ಜಿಗೆ ಹಿತವಾಗಿತ್ತು. ಗಟಗಟನೆ ಕುಡಿದ. ಅವಳೊಡನೆ ಮಾತನಾಡುವ ಅವಕಾಶ ಸಿಕ್ಕಿದರೂ ತಡೆದಿಟ್ಟುಕೊಂಡ. ತಂದೆ ಮಗಳು ಇಬ್ಬರೇ ಮಾತನಾಡಿ ಒಂದು ಒಪ್ಪಂದಕ್ಕೆ ಬರಲಿ. ಆಸಕ್ತಿ ಇದ್ದರೆ ತನಗೆ ತಿಳಿಸಲಿ. ತಾನಾಗಿಯೇ ಮತ್ತೆ ಬರುವುದಿಲ್ಲ ಎಂದುಕೊಂಡು ಅಲ್ಲಿಂದ ಹೊರಬಿದ್ದ. ಅವನು ಅತ್ತ ಹೋದ ಕೂಡಲೇ, ಅವಳ ತಂದೆ ಅವಳೆದುರಿಗೆ ಪ್ರತ್ಯಕ್ಷವಾದರು.

''ಅವನ್ಯಾಕೆ ಮತ್ತೆ ಬಂದಿದ್ದ ? ನಿನ್ನೊಡನೆ ಏನು ಮಾತನಾಡಿದ ?'' ಎಂದು ಕೇಳಿದಾಗ, ಅವಳು ಏನನ್ನೂ ಆಡಲಿಲ್ಲ ಎಂದು ನಿಜವನ್ನೇ ನುಡಿದಳು. ಅವನು ಮಗಳೊಡನೆ, ತನ್ನೊಡನೆ ಆಡಿದ ಯಾವುದೇ ವಿಷಯವನ್ನು ಪ್ರಸ್ತಾಪ ಮಾಡಿಲ್ಲ ಎಂದುಕೊಂಡು ಸಮಾಧಾನಗೊಂಡರು... ಆದರೆ ಮಗಳಿಗೆ ಏನನ್ನೂ ಹೇಳಲಿಲ್ಲ.

ಎಲ್ಲಾ ಇಷ್ಟಕ್ಕೇ ಮುಗಿದು ಹೋಯ್ತೇನೋ ಎನ್ನುವಂತೆ ದಿನಗಳು ಉರುಳಿ ಹೋದವು. ಯಾವ ವಿಷಯ ತಿಳಿಯದಿದ್ದರೂ ಮಗ ಒಳಗೊಳಗೇ ಕೊರಗುತ್ತಿದ್ದಾನೆಂದು ಸುಬ್ಬರಾಯಪ್ಪ ಭಾವಿಸಿ, ನಂಜಪ್ಪನನ್ನು ವಿಚಾರಿಸಿದರು. ನಾಗೇಶ ಮತ್ತೆ ಹಳ್ಳಿಗೆ ಒಬ್ಬನೇ ಹೋಗಿ ಬಂದ ವಿಷಯ ತಿಳಿದು ಮತ್ತೂ ಚಿಂತಿತರಾದರು. ಆ ಹೆಂಗಸೇ ಇವನ ಕೊರಗಿಗೆ ಕಾರಣ ಎನಿಸಿತು. ನಾಗೇಶನಿಗೆ ತಿಳಿಯದಂತೆ ತಾವು ಮತ್ತೆ ನಳಿನಿಯ ಮನಗೆ ಹೊರಟರು. ದಿಢೀರನೇ ಬಂದ ಸುಬ್ಬರಾಯಪ್ಪನನ್ನು ಕಂಡು ಬೆಪ್ಪಾದರು. ಆದರೂ ಈ ನಡುವೆ ಕಾರಿನಲ್ಲಿ ತಮ್ಮ ಮನೆಗೆ ಶ್ರೀಮಂತರು ಬರುವಂತಾಯ್ತು ಎಂದು ತಮಗೆ ತಾವೇ ಹೆಮ್ಮೆ ಪಟ್ಟುಕೊಂಡು, ಒಳಗೆ ಬರುವಂತೆ ಮರ್ಯಾದೆಯಿಂದ ಆಹ್ವಾನಿಸಿದರು.

''ನಾನು ನಾಗೇಶನ ತಂದೆ... ಸುಬ್ಬರಾಯಪ್ಪ...'' ಎಂದು ತಮ್ಮ ಪರಿಚಯವನ್ನು ಹೇಳಿಕೊಂಡರು.

''ನಮಸ್ಕಾರ ನಾನು ಶ್ರೀಕಂಠಯ್ಯ... ನಳಿನಿಯ ತಂದೆ'' ತಾನೂ ಪರಿಚಯ ಹೇಳಿಕೊಂಡರು. ಸುಬ್ಬರಾಯಪ್ಪ ಬಂದ ಉದ್ದೇಶವನ್ನು ತಿಳಿಸಲು ಮಾತಿಗೆ ಪ್ರಾರಂಭಿಸಿದರು.

''ನನ್ನ ಮಗ ಒಂಟಿಯಾಗಿ ಹತ್ತು ವರ್ಷದಿಂದ ಕಾಲ ಕಳೆದ. ಈಗ ಅವನಿಗೆ ಮರುಮದುವೆಯಾಗುವ ಆಸೆ ಬಂದಿದೆ. ಆದ್ದರಿಂದ ನಾನಾಗಿಯೇ ಬಂದಿದೀನಿ. ನಿಮ್ಮ ಮಗಳನ್ನು ನಮ್ಮ ಸೊಸೆಯನ್ನಾಗಿ ಮಾಡಿಕೊಳ್ಳುತ್ತೇನೆ'' ಶ್ರೀಕಂಠಯ್ಯ ಅವರನ್ನೇ ನೋಡುತ್ತಾ ಅವರ ಮಾತನ್ನು ಆಲಿಸಿದ. ಮಗ ತಂದೆಯನ್ನು ಕಳಿಸಿದ್ದಾನೆ ಎಂದೇ ಭಾವಿಸಿದರು.

''ನೀವು ಶ್ರೀಮಂತರು... ನಿಮ್ಮ ಮಗನಿಗೆ ಹೆಂಡತಿ ಇಲ್ಲ... ಹತ್ತು ವರ್ಷಗಳಿಂದ ಒಂಟಿಯಾಗಿ ಕಾಲ ಕಳೆದಿದಾನೆ ಅಂತ ನೀವೇ ಹೇಳ್ತಿದೀರಿ... ಅದನ್ನು ನಾನು ಹೇಗೆ ನಂಬಲಿ ?''

''ನೀವು ನಂಬಲಿ ಅಂತ ನಾನು ಹೇಳಲಿಲ್ಲ... ನನ್ನ ಮಗನ ಬಗ್ಗೆ ನನಗೆ ನಂಬಿಕೆ ಇದೆ. ಅದಕ್ಕೆ ಹೇಳಿದೆ... ನಿಮಗೆ ಒಪ್ಪಿಗೆಯೇ ಇಲ್ಲವೇ ಅಷ್ಟು ತಿಳಿಸಿ ಸಾಕು.''

''ನನ್ನದೇ ಕೆಲವು ಕಂಡೀಷನ್ಸ್‌ಗಳಿವೆ. ಅದಕ್ಕೆ ನೀವುಗಳೂ ಒಪ್ಪಿಕೊಂಡರೆ ನನ್ನ ಅಭ್ಯಂತರವೇನೂ ಇಲ್ಲ'' ಎಂದು ನುಡಿದು ಮತ್ತೆ ತಾವೇ ಮಾತನ್ನು ಮುಂದುವರೆಸಿದರು.

''ನನಗೆ ಮಗಳೂ ಇವಳೇ, ಮಗನೂ ಇವಳೇ... ಇವಳ ಸಂಪಾದನೆಯಿಂದಲೇ ನಮ್ಮ ಸಂಸಾರ ನಡೆಯುತ್ತಿದೆ... ಇವಳನ್ನು ಕಳಿಸಿಕೊಟ್ಟು ಬಿಟ್ಟರೆ ನಮ್ಮ ಗತಿ ?''

''ನಾವು ಅಂದರೇ... ಇನ್ನು ಯಾರ್‍ಯಾರು ಇದೀರಿ ?''

''ನನಗೆ ಒಬ್ಬ ಮೊಮ್ಮಗನಿದಾನೆ... ಅವನು ನಳಿನಿಯ ಮಗ.''

ಸುಬ್ಬರಾಯಪ್ಪನಿಗೆ ಆ ವಿಷಯ ತಿಳಿದಿರಲಿಲ್ಲವಾದರೂ ಅದನ್ನು ತೋರಗೊಡಲಿಲ್ಲ. ''ನನ್ನ ಮೊಮ್ಮಗನೂ ಓದಿ ವಿದ್ಯಾವಂತನಾಗಿ ದೊಡ್ಡ ಅಧಿಕಾರಿಯಾಗಿ ಶ್ರೀಮಂತನಾಗಿ ನಿಮ್ಮಂತೆ ಕಾರಿನಲ್ಲಿ ಓಡಾಡಲಿ ಅಂತ ನಮಗೂ ಆಸೆ ಇದೆ. ಆದರೆ....''

‘‘ನಮಗೂ ನಿಮ್ಮ ಪರಿಸ್ಥಿತಿ ಅರ್ಥ ಆಗುತ್ತೆ... ಅದಕ್ಕೂ ಉಪಾಯವಿದೆ.’’

‘‘ಅವಳು ಒಳ್ಳೆಯ ಕೆಲಸಕ್ಕೆ ಸೇರಿ, ಹೆಚ್ಚು ಹೆಚ್ಚು ಸಂಪಾದಿಸಿದರೆ ನಮಗೆ ಲಾಭವಲ್ಲವೇ... ಅವಳು ಮದುವೆಯಾಗಿ ನಿಮ್ಮ ಮನೆ ಸೇರಿಬಿಟ್ಟರೆ ನಮಗೆ ಸಿಗುವುದೇನು ?’’

‘‘ಹಾಗಾದರೆ... ನಿಮ್ಮ ಮಗಳು ಸುಖವಾಗಿರಲಿ ಅಂತ ನಿಮಗೆ ಅನ್ನಿಸುವುದೇ ಇಲ್ಲವೇ ...?’’

‘‘ಖಂಡಿತಾ ಆ ಆಸೆ ಇದೆ... ಅವಳು ಮಾತ್ರ ಶ್ರೀಮಂತಳಾಗಿ ಮೆರೆದರೆ ನಮಗೆ ಸಿಗುವ ಭಾಗ್ಯವೇನು ?... ನಾವು ಭಿಕ್ಷೆ ಬೇಡಬೇಕಾಗುತ್ತದೆ.’’

‘‘ನಿಮಗೆ ನಿಮ್ಮ ಮಗಳ ಸುಖಕ್ಕಿಂತ ನಿಮ್ಮ ಚಿಂತೆಯೇ ನಿಮಗೆ ಜಾಸ್ತಿ... ಒಬ್ಬ ತಂದೆ ಇಷ್ಟು ಸ್ವಾರ್ಥಿಯಾಗಲು ಹೇಗೆ ಸಾಧ್ಯ ?’’

ಶ್ರೀಕಂಠಯ್ಯ ನಕ್ಕರು. ‘‘ನಾನು ಸ್ವಾರ್ಥಿ. ಈ ಕಾಲದಲ್ಲಿ ಎಲ್ಲರೂ ಸ್ವಾರ್ಥಿಗಳೇ ಸಾರ್... ಈಗ ನೀವಿನ್ನೇನು ? ನಿಮ್ಮ ಮಗನ ಸುಖಕ್ಕಾಗಿ ಸ್ವಾರ್ಥಿಯಾಗಿ ನಮ್ಮ ಮನೆ ಬಾಗಿಲಿಗೆ ಬಂದಿಲ್ಲವೇ ?’’

ಸುಬ್ಬರಾಯಪ್ಪನಿಗೆ ಆ ಮಾತು ತಗುಲಿತು. ಆದರೂ ಸಹಿಸಿದರು. ಹೌದು... ಈತ ಹೇಳುತ್ತಿರುವುದೂ ನಿಜವೇ... ನಾನೂ ಒಂದು ತರಹ ಸ್ವಾರ್ಥಿಯೇ... ನಮಗೆ ಸೊಸೆಯ ಅಗತ್ಯವಿದೆ, ಇವರಿಗೆ ಹಣದ ಅಗತ್ಯವಿದೆ... ಅದನ್ನು ಸೂಚ್ಯವಾಗಿ ತಿಳಿಸುತ್ತಿದ್ದಾರೆ ಈತ ಎಂದುಕೊಂಡು ಸಹನೆಯಿಂದ ನುಡಿದರು.

‘‘ಆಗಲಿ ನಿಮ್ಮ ಮಗಳ ಮದುವೆಯಿಂದ ನೀವು ನಿರ್ಗತಿಕರಾಗುವುದಿಲ್ಲ... ಖರ್ಚೆಲ್ಲಾ ನಮಗೇ ಇರಲಿ... ನಿಮ್ಮ ಮೊಮ್ಮಗನ ವಿದ್ಯಾಭ್ಯಾಸದ ಖರ್ಚನ್ನು ನಾವು ನೋಡಿಕೊಳ್ತೀವಿ.’’ ·

‘‘ಅವನ ಓದಿಗೆ ಎಷ್ಟು ಖರ್ಚಾಗುತ್ತೆ ಮಹಾ ? ನನಗೆ ಅನಾರೋಗ್ಯ, ನನ್ನ ಔಷಧ ಪಥ್ಯ, ಮನೆಯ ಸಾಮಾನು ಸರಂಜಾಮು ಎಲ್ಲಾ ಖರ್ಚನ್ನು ನಳಿನಿಯೇ ನೋಡಿಕೊಳ್ಳುತ್ತಿದ್ದಾಳೆ. ನನ್ನ ಮೊಮ್ಮಗ ಇನ್ನೂ ಚಿಕ್ಕವನು. ಅವನು ಓದಿ, ವಿದ್ಯಾವಂತನಾಗಿ, ಸಂಪಾದಿಸಿ ನನ್ನನ್ನು ನೋಡಿಕೊಳ್ಳುವುದು ಯಾವಾಗಲೋ... ಅಲ್ಲಿಯವರೆಗೂ ನಾನು ಬದುಕಿರುತ್ತೀನೋ ಇಲ್ಲವೋ...’’

ಶ್ರೀಕಂಠಯ್ಯ ಕೆಟ್ಟದಾಗಿ ನಕ್ಕು ಸುಬ್ಬರಾಯಪ್ಪನ ಕಡೆ ನೋಡಿದಾಗ ಅವರ ಇಂಗಿತ ಅರ್ಥವಾಗಿತ್ತು.

ಈತನ ಸ್ವಾರ್ಥಕ್ಕೆ ಮಿತಿಯೇ ಇಲ್ಲ... ಎಂದುಕೊಂಡು,

''ಸರಿ ನಿಮ್ಮಿಷ್ಟ... ನಾವು ಬಲವಂತ ಮಾಡುವುದಿಲ್ಲ'' ಎಂದು ಹೊರಟು ನಿಂತಾಗ ಶ್ರೀಕಂಠಯ್ಯ ಚುರುಕಾದರು.

''ಒಂದೂ ಇತ್ಯರ್ಥ ಮಾಡದೇ ಎದ್ದು ಬಿಟ್ಟರೆ ಹೇಗೆ ? ಅವಳು ಮದುವೆಯಾಗಿ ಹೊರಟು ಹೋದರೆ ನಮಗೆ ಬಿಕ್ಕಟ್ಟು ಹೇಳಿದೆನೇ ಹೊರತು, ಅವಳಿಂದ ಸಹಾಯ ಸಿಗುವುದು ಬೇಡ ಅಂತ ಅಂದೆನೇ ?''

''ಅದೇನು ಹೇಳಬೇಕೋ ಅದನ್ನು ನೇರವಾಗಿ ಹೇಳಿಬಿಡಿ. ಹೀಗೆ ಸುತ್ತಿ ಬಳಸಿ ಆಡುವ ಮಾತುಗಳು ನಮಗೆ ಅರ್ಥವಾಗುವುದಿಲ್ಲ.''

''ಬಡವರು ಬಾಯಿ ಬಡುಕರು ಸಾರ್... ಮಾತಿನಲ್ಲೇ ಹೊಟ್ಟೆ ತುಂಬಿಸಿಕೊಳ್ತಾರೆ. ನನ್ನ ಮಗಳನ್ನು ನಿಮ್ಮ ಮಗ ಮದುವೆಯಾಗುವುದು, ನಮ್ಮ ಅದೃಷ್ಟದ ಬಾಗಿಲು ತೆರೆದಂತೆ... ಆದರೆ ಮೊದಲೇ ಹೇಳಿದ್ನಲ್ಲ ಹಾಗೆ, ಕೆಲವು ಕಂಡೀಷನ್‌ಗಳಿವೆ. ಒಂದನೇದು, ಅವಳು ತಿಂಗಳಿಗೆ ಸಾವಿರದಿಂದ ಸಾವಿರದ ಐನೂರರವರೆಗೆ ಸಂಪಾದಿಸುತ್ತಾಳೆ. ಆದರೂ ಸಂಸಾರ ತೂಗಿಸುವುದು ಕಷ್ಟವೇ... ಆದ್ದರಿಂದ ನೀವು ತಿಂಗಳಿಗೆ ಎರಡು ಸಾವಿರ ರೂಪಾಯಿಗಳನ್ನು ನಮಗೆ ಕೊಡಬೇಕು. ಎರಡನೇದು, ಅವಳು ಇಲ್ಲಿ ಇಲ್ಲದಿದ್ದ ಮೇಲೆ ನಾವು ಎಲ್ಲಿದ್ದರೇನು ? ನಾವೂ ಅವಳ ಜೊತೆಯಲ್ಲಿರುತ್ತೇವೆ.''

ಸುಬ್ಬರಾಯಪ್ಪ ಮಾತಿಲ್ಲದಾದರು. ಎಂಥಾ ಚಾಣಾಕ್ಷ ಈತ ! ಮಗಳನ್ನು ಮುಂದಿಟ್ಟುಕೊಂಡು ವ್ಯಾಪಾರಸ್ಥನಂತೆ ಮಾತಾಡುತ್ತಾನಲ್ಲ ಈತ ಎಂದು ಅಸಹ್ಯವಾಗತೊಡಗಿತ್ತು.

''ನೋಡಿದ್ರಾ ? ಕಂಡೀಷನ್ ಹಾಕಿದ ಕೂಡಲೇ ಹೇಗೆ ಸುಮ್ಮನಾಗಿಬಿಟ್ರಿ ? ಎಂಥಾ ಶ್ರೀಮಂತರಾದರೇನು ? ಹಣದ ವಿಷಯ ಬಂದ ಕೂಡಲೇ ಜಾಣರಾಗಿಬಿಡ್ತಾರೆ. ನಮ್ಮ ಪರಿಸ್ಥಿತಿ ನಿಮಗೆ ಅರ್ಥವಾಗುವುದಿಲ್ಲ ಅಲ್ಲವೇ ? ನಿಮ್ಮ ಮಗನ ಮೊದಲು ಮದುವೆಯಲ್ಲಿ ನೀವು ಸಾಕಷ್ಟು ವರದಕ್ಷಿಣೆ ತಗೊಂಡಿರಬಹುದು. ಅದೊಂದು ಕಾಲ... ಅದರಿಂದ ಅವರಿಗೆ ಬಡತನ ಬರಲಿಲ್ಲ. ಈಗ ಇದೊಂದು ಕಾಲ... ನಾವು ವಧುದಕ್ಷಿಣೆಯನ್ನು ಕೇಳ್ತಿದೀವಿ. ಇದರಿಂದ ನಿಮಗೆ ಬಡತನ ಬರುವುದಿಲ್ಲ...''

"ನಿಮ್ಮ ಮಾತುಗಳು ನಿಧಾನವಾಗಿ ಅರ್ಥವಾಗ್ತಿದೆ. ಆದರೆ ಈ ರೀತಿಯ ಮಾತುಕತೆಗಳು ನಮಗೆ ಹೊಸದು."

"ಹೌದು ಹೌದು ನಾವುಗಳು ಆಡುವ ಮಾತೆಲ್ಲಾ ಹೊಸದೇ... ಯಾಕೆಂದರೇ ನಮಗೆ ಪದೇ ಪದೇ ಇಂತಹ ಅವಕಾಶಗಳೆಲ್ಲಿ ಸಿಗುತ್ತವೆ !" ಆತನ ಮಾತು ಜಿಗುಪ್ಸೆಯನ್ನು ಹುಟ್ಟಿಸಿತ್ತು. ಮಗನ ಮೇಲೆ ಕೋಪವೂ ಮೂಡಿತ್ತು. ಮರುಮದುವೆಯಾಗು ಅಂತ ಎಷ್ಟೋ ವಿಧದಲ್ಲಿ ಹೇಳಿದ್ದರೂ ನಿರಾಕರಿಸಿದ್ದ. ಈಗ ಹತ್ತು ವರ್ಷಗಳ ನಂತರ ತಮಗೆ ತಿಳಿಸದೇ ಈ ಹೆಂಗಸಿಗೆ ಆಕರ್ಷಿತನಾಗಿದ್ದಾನೆ. ಆದರೆ ಮಗನ ನಡೆವಳಿಕೆಯಿಂದ ತಮಗೆ ಆ ರಹಸ್ಯ ತಿಳಿದೇ ಹೋಯಿತು. ಅದರಿಂದ ತಮಗೆ ದುಃಖವೇನೂ ಆಗಲಿಲ್ಲ. ನನಗೆ ಅವನ ಸಂತೋಷವೇ ಮುಖ್ಯ. ಆದರೆ ಈಗ... ಈತನ ಮಾತುಗಳನ್ನು ಕೇಳಿದರೆ, ಮಗ ದುಡುಕಿದ ಅಂತೆನ್ನಿಸುತ್ತಿದೆ... ಈಗ ಸುಮ್ಮನೆ ಈತನ ಹತ್ತಿರ ವ್ಯರ್ಥಾಲಾಪವಕೆ ? ಮಗ ಒಪ್ಪಿದರೆ ಬೇರೆ ಹೆಣ್ಣುಗಳಿಗೇನು ಬರವೆ ? ಈತನಲ್ಲದಿದ್ದರೆ ಇನ್ನೊಬ್ಬ ಕನ್ಯಾಪಿತೃ ಸಿಗುವುದಿಲ್ಲವೇ ? ... ನಾನು ಮೊದಲು ನಾಗೇಶನೊಡನೆ ಮಾತನಾಡಬೇಕು ಎಂದುಕೊಂಡು ಹೊರಟರು.

"ಹೊರಟು ಬಿಟ್ರಾ ? ಸಾರ್, ನೀವೇ ಹೇಳಿ... ನಾನು ಆಡಿದ್ದರಲ್ಲಿ ಏನಾದ್ರೂ ತಪ್ಪಿತ್ತಾ? ಬಡತನ ತುಂಬಾ ಕೆಟ್ಟದ್ದು. ಹಣವಿಲ್ಲದೇ ಬದುಕುವುದು ಬಹಳ ದುಸ್ತರ. ಏನು ಮಾಡೋದು ? ನಮಗೂ ಬದುಕುವ ಆಸೆ ಇದೆ" ವಿಚಿತ್ರವಾಗಿ ನಕ್ಕರು ಶ್ರೀಕಂಠಯ್ಯ.

"ಹಾಗಂತ ಮದುವೆಯನ್ನು ಮಾರಾಟದ ವಸ್ತು ಮಾಡ್ತಿದೀರಲ್ಲ... ಅದು ಸರೀನಾ ?"

"ಛೇ, ಛೇ, ನೀವು ತಪ್ಪು ತಿಳಿದುಕೊಂಡಿದೀರಿ. ಈಗ್ಲೇ ಹದಿನೈದು ವರ್ಷಗಳ ಹಿಂದೆ, ನನ್ನ ಮಗಳು ಒಬ್ಬ ಬಡ ಮೇಷ್ಟ್ರನ್ನು ಪ್ರೀತಿಸಿ ಮದುವೆಯಾದಳು. ನನಗೆ ಇಷ್ಟವಿರದಿದ್ದರೂ ಮಗಳ ಮೇಲಿನ ಪ್ರೀತಿಯಿಂದ ಒಪ್ಪಿಕೊಂಡಿದ್ದೆ. ಆದರೆ ಏನಾಯ್ತು? ಅವನು ನಾವು ಬಡವರು ಅಂತ, ನನ್ನ ಮಗಳಿಗೆ ಕೈ ಕೊಟ್ಟು ಹೋದ. ಅದರಿಂದ ನಷ್ಟವಾದುದು ಯಾರಿಗೆ? ನಮಗೇ ತಾನೇ... ಹರೆಯದ ಹುಡುಗಿ, ಗಂಡನಿಲ್ಲದವಳು, ಎಷ್ಟು ಪಾಡು ಪಟ್ಟಿರಬಹುದು ನೀವೇ ಯೋಚಿಸಿ. ಜತೆಗೆ ಮಡಿಲಲ್ಲಿ ಒಂದು ಕೂಸು ಬೇರೆ... ಆದರೆ ನನ್ನ ಮಗಳು ಅಂಜಲಿಲ್ಲ; ಅಳುಕಲಿಲ್ಲ. ಯಾವುದೇ ಕೆಟ್ಟದಾರಿಯನ್ನು

ತುಳಿಯಲಿಲ್ಲ. ಅದು ಅವಳ ಹಿರಿಗುಣ. ಅವಳು ಹಾಗೆ ತಿರುಗಿ ಬಿದ್ದಿದ್ದರೆ, ನಿಮ್ಮಂಥ ಹತ್ತಾರು ಶ್ರೀಮಂತರ ಸಹವಾಸ ಅವಳಿಗಿರುತ್ತಿತ್ತು... ಅಲ್ಲವೆ? ನಾವು ಬಾಯಿ ಬಿಟ್ಟು ಹಣವನ್ನು ಬಯಸಬೇಕಾಗಿರಲಿಲ್ಲ... ತಾನಾಗಿಯೇ ನಮ್ಮ ಕಾಲ ಬಳಿ ಬಂದು ಬಿದ್ದಿರುತ್ತಿತ್ತು. ನಾಚಿಕೆಗೆಟ್ಟ ಮನುಷ್ಯ. ಇದೇನಪ್ಪಾ ಹೀಗೆಲ್ಲಾ ಮಾತಾಡ್ತಾನೆ ಅಂತ ನೀವು ಯೋಚಿಸಬಹುದು. ಆದರೆ ನಳಿನಿ ಗಂಡಾಗಿ ಹುಟ್ಟಿದ್ದರೆ ನನಗೆ ಯಾವ ಚಿಂತೆಯೂ ಇರುತ್ತಿರಲಿಲ್ಲ. ನಿಮ್ಮ ಮುಂದೆ ಹಲ್ಲು ಕಿರಿದು ನಿಲ್ಲುವ ಸ್ಥಿತಿಯೂ ಬರುತ್ತಿರಲಿಲ್ಲ... ಅಲ್ಲವೆ? ನನ್ನ ಮಾತಿನಲ್ಲಿ ನಿಜಾಂಶ ಇದೇ ತಾನೇ? ಪ್ರೀತಿಸುವ ನಾಟಕವಾಡಿ, ನನ್ನ ಮಗಳಿಗೆ ದ್ರೋಹ ಮಾಡಿ ಹೋದವನೂ ನನ್ನ ಅಳಿಯನೇ.... ಈಗ ನಾನು ಎಚ್ಚೆತ್ತುಕೊಂಡಿದ್ದೇನೆ. ನೀವಾಗಿಯೇ ನಿಮ್ಮ ಲಾಭಕ್ಕಾಗಿ ನನ್ನ ಮನೆ ಬಾಗಿಲಿಗೆ ಬಂದಿರುವಾಗ, ನಾನು ಲಾಭಗಳಿಸುವ ಯೋಚನೆ ಮಾಡಿದರೆ ತಪ್ಪೇ? ಹೇಳಿ''

ಆತನ ಮಾತಿಗೆ ಏನು ಹೇಳಬೇಕೆಂದು ತಿಳಿಯದೇ ಸುಮ್ಮನೇ ಕೈಕಟ್ಟಿ ನಿಂತರು ಸುಬ್ಬರಾಯಪ್ಪ.

''ಸರಿ ಹೋಗಿಬನ್ನಿ... ಇವೆಲ್ಲಾ ಇಷ್ಟು ಸುಲಭದಲ್ಲಿ ಇತ್ಯರ್ಥವಾಗುವ ವಿಷಯವಲ್ಲ...'' ಬಾಗಿಲ ಕಡೆ ಕೈ ಮಾಡಿದವನನ್ನೇ ನೋಡಿ ನುಡಿದರು.

''ಹೌದು ಇದು ಬಹಳ ಯೋಚಿಸಬೇಕಾದ ವಿಷಯವೇ ಸರಿ. ದುಡುಕಿದರೆ ಪ್ರಯೋಜನವಿಲ್ಲ. ಋಣಾನುಬಂಧವಿದ್ದಂತೆ ಆಗುತ್ತೆ ಬಿಡಿ...''

''ಹಾಗಾದರೆ... ಈಗ ಏನೂಂತ....?''

''ನೀವು ಕಂಡೀಷನ್ ಹಾಕಿದಂತೆ, ನಮ್ಮದೂ ಒಂದೆರಡು ಕಂಡೀಷನ್ಸ್‌ಗಳಿವೆ. ಅದಕ್ಕೆ ನೀವು ಒಪ್ಪಬೇಕು. ನಿಮಗೆ ಹಣದ ಚಿಂತೆ ಬೇಡ. ನಿಮ್ಮ ತಿಂಗಳ ಖರ್ಚಿಗೆ ಸಾಕಾಗುವಷ್ಟು ಹಣ ನಿಮಗೆ ಸಿಗುವಂತೆ ನಾನು ವ್ಯವಸ್ಥೆ ಮಾಡ್ತೀನಿ. ಆದರೆ ನೀವುಗಳ ಮಾತ್ರ ನಮ್ಮ ಮನೆಗೆ ಬಂದು ನಮ್ಮ ಜತೆಯಲ್ಲಿರುವುದು ನನಗೆ ಸಮ್ಮತವಿಲ್ಲ. ನಮ್ಮ ನಾಗೇಶನ ಮಗನಿಗೆ ಈಗ ಹನ್ನೆರಡು ವರ್ಷ.... ಅವನಿಗೀಗ ಅರೆತಿಳುವಳಿಕೆಯ ವಯಸ್ಸು.... ತಂದೆ ಮರುಮದುವೆಯಾಗುವುದೇ ಸರಿ ಅಂತ ಅನ್ನಿಸದೇ ಇರಬಹುದು... ಅಂಥಾದ್ದರಲ್ಲಿ, ಹೆಚ್ಚು ಕಡಿಮೆ ಅವನ ವಯಸ್ಸಿನ ಹುಡುಗ, ನಿಮ್ಮ ಮೊಮ್ಮಗ ಅವನಿಗೆ ಪ್ರತಿಸ್ಪರ್ಧಿಯಾಗುತ್ತಾನೆ. ಅದು ಅವನ ಮನಸ್ಸಿನ ಮೇಲೆ ಪರಿಣಾಮ ಬೀರಬಹುದು. ಆದ್ದರಿಂದ... ಕೆಲವು ವಿಷಯಗಳ ನಿರ್ಧಾರವನ್ನು ಈಗಲೇ ತೆಗೆದುಕೊಳ್ಳುವುದು ಉತ್ತಮ...''

''ಅದೂ ಸರಿಯೇ, ನಮ್ಮ ವಿಶ್ವನೂ ಏನೂ ಚಿಕ್ಕವನಲ್ಲ. ಅವನಿಗೂ ಅವನ ತಾಯಿ ಮರುಮದುವೆಯಾಗುವುದು ಸರಿ ಅಂತ ಅನ್ನಿಸದೇ ಇರಬಹುದು. ಅವನು ನನ್ನಜತೆಯಲ್ಲೇ ಇರುವಂತೆ ಅವನನ್ನು ಒಪ್ಪಿಸುತ್ತೇನೆ. ಆದರೆ ನಾವುಗಳು ಇರುವುದೆಲ್ಲಿ ? ನಮಗೂ ಈ ಕೊಂಪೆಯಲ್ಲಿರುವುದು ಇಷ್ಟವಿಲ್ಲ...''

''ಯಾಕೆ ? ಏನಾಗಿದೆ ಇಲ್ಲಿ ?''

''ವಿಧಿ ಇಲ್ಲದೇ ಈ ಹಳ್ಳಿಯಲ್ಲಿ ಇದೀವಿ. ನಮಗೂ ಬೆಂಗಳೂರಿನಂತಹ ಪಟ್ಟಣದಲ್ಲಿ ಇರಬೇಕೆಂಬ ಆಸೆ ಸಹಜ...'' ಹ್ಹೆ.... ಹ್ಹೆ.... ಎಂದರು.

''ಅಂದರೇ....?''

''ನಮಗೇ ಅಂತ ಒಂದು ಮನೆ ಕೊಡಿಸಿ ಬಿಡಿ, ನಿಮ್ಮೂರಲ್ಲಿ. ನಾವು ಹಾಯಾಗಿರ್ತೀವಿ.''

ಆತನ ದುರಾಸೆಗೆ ಮಿತಿ ಇಲ್ಲ ಅಂತನ್ನಿಸಿತ್ತು... ಸ್ವಲ್ಪ ಖಾರವಾಗಿಯೇ ನುಡಿದರು. ''ಪರವಾಗಿಲ್ಲ ನೀವೂನೂ... ಈ ನೆವದಲ್ಲಿ ಕೊಳ್ಳೆ ಹೊಡೆಯುವ ಆಲೋಚನೆ ನಿಮಗೆ... ಈ ದುರಾಸೆ ಒಳ್ಳೇದಲ್ಲ.''

''ನಮ್ಮ ಪಾಡಿಗೆ ನಾವು ಇದ್ದೆವು. ನೀವಾಗಿಯೇ ಬಂದು, ನಮಗೆ ಆಸೆ ತೋರಿಸಿ, ಈಗ ದುರಾಸೆ ಅಂತ ಂತೀರಲ್ಲ....''

''ಮತ್ತಿನ್ನೇನ್ರೀ..... ನಿಮ್ಮ ಮಗಳು ಹಾಯಾಗಿರ್ತಾಳೆ ಅವಳಿಗೆ ಒಂದು ನೆಲೆ ಸಿಗುತ್ತೆ ಅಂತ ಸಂತೋಷ ಪಡುವ ಬದಲು, ಕಂಡೀಷನ್ಸ್ ಹಾಕಿ ಸುಲಿಗೆ ಮಾಡ್ತಿದೀರಲ್ಲ...''

''ಸುಲಿಗೆ, ದರೋಡೆ, ಕೊಳ್ಳೆ ಅಂತ ಏನು ಬೇಕಾದ್ರೂ ತಿಳ್ಕೊಳ್ಳಿ. ನಿಮಗೇಕೆ ಕೋಪ ? ನಿಮಗೆ ಒಪ್ಪಿಗೆಯಾಗದಿದ್ದರೆ, ನನಗೆ ಬೇಸರವೇನಿಲ್ಲ. ನಿಮ್ಮ ದಾರಿ ನಿಮಗೆ ; ನಮ್ಮ ದಾರಿ ನಮಗೆ. ಕಾಲ ಬಹಳ ಕಷ್ಟ. ನಮಗೂ ಬದುಕುವ ಆಸೆ, ಮಾರ್ಗ ಕಂಡಿತು. ಕೇಳಿದೆ.... ಆದರೆ ಆಯ್ತು ಇಲ್ಲದಿದ್ದರೆ ಇಲ್ಲ. ಶ್ರೀಮಂತಿಕೆ ಹೃದಯದಲ್ಲೂ ಇರಬೇಕು ತಿಳೀತೇ ? ನನಗೆ ಅನಾರೋಗ್ಯ... ನಾನು ಇನ್ನೆಷ್ಟು ವರ್ಷ ಬದುಕಿಯೇನು ? ನನ್ನ ಮೊಮ್ಮಗ ಓದಿ ವಿದ್ಯಾವಂತನಾಗಿ, ಕೆಲಸಕ್ಕೆ ಸೇರಿ ಸಂಪಾದಿಸಲು ಪ್ರಾರಂಭಿಸಿದ ಮೇಲೆ ಅವನಿಗೆ ನಿಮ್ಮ ಶ್ರೀಮಂತಿಕೆ ಏಕೆ ? ಅವನೇ ನಾಲ್ಕಾರು ಬಂಗಲೆಗಳನ್ನು

ಕಟ್ಟಿಸುವಷ್ಟು ದೊಡ್ಡ ಶ್ರೀಮಂತನಾಗಬಹುದು. ಆಮೇಲೆ ನಮಗೆ ನಿಮ್ಮ ಸಹಾಯಬೇಕಾಗುವುದಿಲ್ಲ.... ಏನೋ ಈಗ ನಾಲ್ಕಾರು ವರ್ಷ ನಿಮ್ಮ ಹೆಸರನ್ನು ಹೇಳಿಕೊಂಡು ಹಾಯಾಗಿರೋಣ ಅಂತ... ನಿಮಗೆ ಅದೂ ಸಹಿಸುವುದಿಲ್ಲವೇ......?''

ಈ ಮಾತುಗಳು ಸುಬ್ಬರಾಯಪ್ಪನ ಮುಖಕ್ಕೆ ತಿವಿದಂತಾಯಿತು. ಈ ಮೊದಲು ತಾನು ಯಾರೊಡನೆಯೂ ಇಷ್ಟೊಂದು ಮಾತನಾಡಿರಲೇ ಇಲ್ಲ. ಈಗ ಮಗನ ಸುಖಕ್ಕಾಗಿ, ಇಂಥ ಮನುಷ್ಯನೊಡನೆ ಮಾತಾಡುವ ಪೇಚಾಟಕ್ಕೆ ಸಿಕ್ಕಿ ಬಿದ್ದಿದೀನಲ್ಲ, ಎಲ್ಲೋ ನಾಗೇಶನೊಡನೆಯೂ ಈತ ಹೀಗೇ ಮಾತುಗಳ ನ್ನಾಡಿರಬಹುದು. ಅದಕ್ಕೇ ಅವನು ತನಗೂ ಹೇಳದೇ ತನ್ನಲ್ಲೇ ಕೊರಗುತ್ತಿರ ಬಹುದು. ಈ ಮಾತುಗಳಿಗೆ ಒಂದು ಮುಕ್ತಾಯ ಹಾಕಲೇ ಬೇಕು ಎಂದುಕೊಂಡರು.

''ಸರಿ ನಿಮ್ಮ ಕಂಡೀಷನ್ಸ್‌ಗಳಿಗೆ ನಾವು ಒಪ್ಪಿದೆವು ಅಂತ ಇಟ್ಕೊಳ್ಳಿ.... ನೀವು ಯಾವುದೇ ಕಾರಣಕ್ಕೂ ನಮ್ಮ ಮನೆಗೆ ಬರಬಾರದು.... ಈ ಒಪ್ಪಂದ ನನ್ನ ಮಗನಿಗಾಗಲೀ, ಮೊಮ್ಮಗನಿಗಾಗಲೀ ತಿಳಿಯಕೂಡದು. ನಿಮಗೆ ನಿಮ್ಮ ಮಗಳನ್ನು ನೋಡಿ ಮಾತನಾಡಬೇಕು ಅಂತನ್ನಿಸಿದಾಗ, ಫೋನು ಮಾಡಿದರೆ ಅವಳೇ ನಿಮ್ಮ ಮನೆಗೆ ಬರುತ್ತಾಳೆ.''

''ಸರಿ ಇದರಲ್ಲೇನು ತೊಂದರೆ ? .... ಆದರೆ ಈ ಒಪ್ಪಂದ ನನ್ನ ಮಗಳಿಗೂ ತಿಳಿಯಕೂಡದು. ಅವಳು ತುಂಬಾ ಸ್ವಾಭಿಮಾನಿ. ಮದುವೆಗೇ ಒಪ್ಪಿಗೆ ಕೊಡದಿರಬಹುದು, ಆಗ ನಿಮ್ಮ ಮಗನಿಗೂ ಬೇಸರವಾಗಬಹುದು.''

'ಅಪ್ಪನ ಆಸೆಯೇ ಇಷ್ಟಾದರೆ, ಇನ್ನು ಮಗಳ ಕಂಡೀಷನ್ಸ್‌ಗಳು ಇನ್ನೆಷ್ಟೋ... ಇವಳು ಮದುವೆಯಾದರೆ ನಾಗೇಶ ಸುಖಿಯಾಗಿರುತ್ತಾನೋ... ಅಸುಖಿಯಾಗುತ್ತಾನೋ... ನಾಗೇಶನಂತೆ ನಾನೂ ಇಲ್ಲಿಗೆ ಬಂದು ಅವಿವೇಕಿಯಾದೆನಲ್ಲ ಅಂತನ್ನಿಸಿದರೂ, ಮಾತು ಬೆಳೆದು ಮುಂದುವರೆದಿತ್ತು. ಈಗ ಹಿಂಜರಿದರೆ ಈತ ಹಂಗಿಸದೇ ಬಿಡುವವನಲ್ಲ ಅಂತಂದುಕೊಂಡು ''ಸರಿ''' ಎಂದರು ಮರ್ಯಾದೆಯ ಸ್ವರದಿಂದ. ಆದರೂ... ಇಬ್ಬರ ಮುಖದಲ್ಲೂ ಏನೋ ಅಸಮಾದಾನದ ಕಳೆ ! ತಮ್ಮ ತಮ್ಮ ಮಾತುಕತೆಗಳಿಂದ ತಮಗೆ ತಾವೇ ಮರುಗುವಂತಾಗಿತ್ತು. ಆದರೆ ಮಾತು ಮೀರಿತ್ತು. ಪಾತದ ಮನೆಯಿಂದ ಬಂದ ನಳಿನಿ ಇಬ್ಬರನ್ನೇ ಚಕಿತಳಾಗಿ ನೋಡಿದಳು. ಆದರೆ

ಯಾರೂ ಏನೂ ಮಾತಾಡಲಿಲ್ಲ. ಸುಬ್ಬರಾಯಪ್ಪ ಅವಳನ್ನೇ ನೋಡುತ್ತಾ ತಮ್ಮ ಸೊಸೆಯಾಗುವ ಲಕ್ಷಣಗಳನ್ನು ಅವಳಲ್ಲಿ ಹುಡುಕತೊಡಗಿದರು. ನಾಗೇಶನಿಗೆ ನಂಬಿಕಸ್ಥ ಪತ್ನಿಯಾಗಬಲ್ಲಳೇ ..... ಪೃಥ್ವಿಗೆ ಆದರದ ತಾಯಿಯಾಗ ಬಲ್ಲಳೇ....? ಈ ಮನೆಯ ವಾತಾವರಣಕ್ಕೂ ನಮ್ಮ ಮನೆಯ ಪರಿಸರಕ್ಕೂ ಅಜಗಜಾಂತರದ ಅಂತರ.... ಸೊಸೆಯಾಗಿ ಬರುವವಳ ಹೊರರೂಪವನ್ನು ತಿಳಿಯಬಹುದೇ ಹೊರತು, ಗುಣವನ್ನು ಅರಿಯುವುದು ಹೇಗೆ ? ಆದದ್ದಾಗಲಿ... ಮಗ ಇವಳನ್ನು ಮೆಚ್ಚಿದ್ದಾನೆ.... ಮತ್ತೊಮ್ಮೆ ಅವನಿಗೆ ಸಂಸಾರಿ ಯಾಗುವ ಯೋಗ ಬರುತ್ತಿರುವಾಗ, ತಾವು ಯಾವುದೇ ಕಾರಣದಿಂದಲೂ ಅದಕ್ಕೆ ಅಡ್ಡಿ ಬರಬಾರದು... ಭಗವಂತ ಮಾಡಿಸಿದಂತಾಗಲಿ....' ಎಂದುಕೊಂಡು ನಳಿನಿಗೆ ಹೇಳಿದರು.

''ಕೆಲಸ ಬೇಕೂಂತ ಒಮ್ಮೆ ಬಂದಿದ್ದೆಯಲ್ಲಮ್ಮ... ಮತ್ತೆ ಬರಲೇ ಇಲ್ಲ ನೀನು... ಆದಷ್ಟು ಬೇಗ ಒಮ್ಮೆ ಬಾ... ಇಲ್ಲದಿದ್ದರೆ ನನ್ನ ಮಗ ಮರೆತೇ ಬಿಡ್ತಾನೆ.''

''ಆಗಲಿ...'' ಎಂದಳು ನಳಿನಿ ಸಂಕೋಚದಿಂದ. ಸಂದೇಹ, ಆಶ್ಚರ್ಯಗಳಿಂದ ಕಸಿವಿಸಿಗೊಂಡಿದ್ದಳು.

* * * *

ತಂದೆ ನಳಿನಿಯ ಮನೆಗೆ ಹೋಗಿದ್ದಾಗಲೀ, ಮಾತನಾಡಿದ್ದಾಗಲೀ ನಾಗೇಶನಿಗೆ ತಿಳಿಯಲಿಲ್ಲ. ಈಗಲೇ ತಿಳಿಸುವುದು ಬೇಡವೆಂದು ಡ್ರೈವರ್ ನಂಜಪ್ಪನಿಗೂ ಹೇಳಿದರು. ಕೆಲವು ದಿನಗಳ ನಂತರ, ಇದ್ದಕ್ಕಿದ್ದಂತೆ ನಳಿನಿ ಬಂದಾಗ, ನಾಗೇಶ ಚಕಿತಗೊಂಡ. ಅವಳು ಸಂಕೋಚವಿಲ್ಲದೇ ನೇರವಾಗಿ ಮಾತನಾಡಿದಳು.

''ಕೆಲಸ ಬೇಕೂಂತ ಕೇಳಿದ್ದೆ ಅದರ ಬಗ್ಗೆ ಯಾವ ವಿಷಯವೂ ತಿಳಿಯಲಿಲ್ಲ. ಒಮ್ಮೆ ಹೋಗಿ ನೋಡಿಕೊಂಡು ಬಾ ಅಂತ ನಮ್ಮ ತಂದೆಯೇ ಕಳಿಸಿದವರು ....'' ನಾಗೇಶ ಬೆರಗಾದ. ಅವಳಿಗಾಗಿಯೇ ಬಂದಿರುವಾಗ, ತಕ್ಷಣಕ್ಕೆ ಏನು ಮಾತಾಡಬೇಕೆಂದು ತಿಳಿಯಲಿಲ್ಲ. ತಂದೆಯನ್ನು ಕರೆದು ಪರಿಚಯ ಮಾಡಿಕೊಟ್ಟ. ತಂದೆ ಯಾವ ಗುಟ್ಟನ್ನೂ ಬಿಟ್ಟುಕೊಡದಿದ್ದಾಗ ನಳಿನಿಯೂ ಸುಮ್ಮನಾದಳು. ದೊಡ್ಡವರ ಸಹವಾಸ ಹೇಗೋ ಏನೋ ಅಂತಂದುಕೊಂಡಳು. ನಾಗೇಶನಿಗೆ ಒಳಗೆ ಬರುವಂತೆ ಕರೆದರು.

“ಹಿಂದೊಮ್ಮೆ ಕೆಲಸ ಬೇಕು ಅಂತ ಬಂದ ಹೆಂಗಸೇ ಅಲ್ಲವೆ ? ನಮ್ಮ ಮನೆಯ ಅಡಿಗೆ ಕೆಲಸವನ್ನೇಕೆ ವಹಿಸಿ ಕೊಡಬಾರದು ?”

“ಏನಪ್ಪಾ... ನೀವು ಏನು ಹೇಳ್ತಿದೀರಿ ? ಅಡಿಗೆಯವರು ಇದಾರಲ್ಲ.... ಅಲ್ಲದೇ....”

“ನೋಡಿದ್ರೆ.... ಮನೆಕೆಲಸಕ್ಕೆ ಮಾತ್ರ ಲಾಯಖ್ಖು ಅಂತ ನನಗನ್ನಿಸುತ್ತೆ.... ಆಫೀಸಿನ ಕೆಲಸಕಾರ್ಯ ಮನೆಕೆಲಸದಷ್ಟು ಸುಲಭವಲ್ಲ.”

“ಒಂದು ವಿಷಯ ನಿಮಗೆ ಹೇಳಬೇಕು.... ನಿಮಗೆ ಒಪ್ಪಿಗೆಯಾದರೆ.... ನಾನು ಇವಳನ್ನು ಮದುವೆಯಾಗ್ತೀನಿ....” ದೃಷ್ಟಿ ಕೆಳಗೆ ಮಾಡಿದ್ದ.

“ಎಲಾ ಮಗನೇ... ಹೀಗೋ ವಿಷಯ ? ಮೊದಲೇ ಏಕೆ ತಿಳಿಸಬಾರದಾಗಿತ್ತು ?”

“ಅವಳಾಗಿಯೇ ಬರಲಿ ಅಂತ ಕಾದಿದ್ದೆ... ಈಗ ಬಂದಿದಾಳಲ್ಲ...” ತಂದೆ ಮಗಳು ಒಂದು ನಿರ್ಧಾರಕ್ಕೆ ಬಂದು ಆತನೇ ಮಗಳನ್ನು ಕಳಿಸಿದ್ದಾರೆ ಎಂದು ನಾಗೇಶ ಭಾವಿಸಿದ್ದ. ಖಿಲಾಡಿ ತಂದೆ, ತಾನು ಹಿಂದೆ ನಿಂತು ಮಗಳನ್ನು ಇಲ್ಲಿಯ ಸ್ಥಿತಿಗತಿ ಹೇಗಿದೆ ಅಂತ ನೋಡಿಕೊಂಡು ಬಾ ಅಂತ ಕಳಿಸಿರ ಬಹುದೇ... ಎಂದುಕೊಂಡರು ಸುಬ್ಬರಾಯಪ್ಪ. ಏನಾದರಾಗಲೀ, ಈಗ ಅವಳು ಬಂದಿರುವಾಗ ಒಂದು ಇತ್ಯರ್ಥ ಮಾಡಲೇಬೇಕು. ಇದುವರೆಗೂ ಸುಮ್ಮನಿದ್ದ ಮಗ ಈಗ ಬಾಯಿ ಬಿಟ್ಟಿದ್ದಾನೆ... ಅಂದರೆ ಇವಳಿಗಾಗಿ ಎದುರು ನೋಡುತ್ತಿದ್ದುದಂತೂ ಖಾತ್ರಿ ಆಯಿತು ಎಂದುಕೊಂಡು,

“ಈಗ, ಇಲ್ಲಿ ಈ ವಿಷಯಗಳನ್ನು ಮಾತನಾಡುವುದು ಬೇಡ... ನಾವುಗಳು ಅವರ ಮನೆಗೇ ಹೋಗಿ ಮಾತನಾಡೋಣ... ಈಗ, ನೀನು ಅವಳನ್ನು ಅವಳ ಮನೆಗೆ ತಲುಪಿಸಿ ಬಿಟ್ಟು ಬಾ...” ಎಂದು ಅಪ್ಪಣೆ ಕೊಟ್ಟವರಂತೆ ನುಡಿದಾಗ ತಂದೆಗೆ ಒಪ್ಪಿಗೆಯಾಗಿದೆ ಎಂದು ಸಂತೋಷ ವಾಗಿತ್ತು. ಹೋಗುವ ಮಾರ್ಗದಲ್ಲಿ ಅವಳೊಡನೆ ಇದೇ ಮಾತನ್ನು ಹೇಳಿ ಅವಳ ಒಪ್ಪಿಗೆಯನ್ನು ಕೇಳಿದ. ಅವಳು ತನ್ನ ಒಪ್ಪಿಗೆಯನ್ನು ತಿಳಿಸಿ, “ನಮ್ಮ ತಂದೆಯ ಹತ್ತಿರ ಮಾತನಾಡಿ” ಎಂದಿದ್ದಳು. ಅಲ್ಲಿಗೆ ಎಲ್ಲಾ ಇತ್ಯರ್ಥವಾಗಿತ್ತು. ಸುಬ್ಬರಾಯಪ್ಪ ತಾವೇ ಖುದ್ದಾಗಿ ನಿಂತು, ಎಲ್ಲಾ ವ್ಯವಸ್ಥೆಗಳನ್ನು ಮಾಡಿದರು. ಒಂದು ಶುಭಮುಹೂರ್ತದಲ್ಲಿ ಅದೇ ಊರಿನ ಒಂದು ದೇವಸ್ಥಾನದಲ್ಲಿ ಹಳ್ಳಿಯ ಪ್ರಮುಖರ ಎದುರಿನಲ್ಲಿ ನಾಗೇಶ ನಳಿನಿಯರ ವಿವಾಹ ನೆರವೇರಿತು.

ಆದರೆ ಪೃಥ್ವಿಗೆ ಈವಿಷಯವನ್ನು ತಿಳಿಸಿರಲಿಲ್ಲ. ಪರೀಕ್ಷೆ ಮುಗಿದು ರಜದಲ್ಲಿ ಊರಿಗೆ ಬಂದವನಿಗೆ ಒಂದು ಅಚ್ಚರಿ ಕಾದಿತ್ತು. ನಾಗೇಶ ಮಗನನನ್ನು ತನ್ನ ಬಳಿಗೆ ಕರೆದು, ತನ್ನ ಪತ್ನಿಯ ಪರಿಚಯ ಮಾಡಿಕೊಟ್ಟ.

''ಇವರು ನಿನ್ನ ತಾಯಿ... ನಮಸ್ಕಾರ ಹೇಳು'' ಎಂದಿದ್ದ. ವಿಧೇಯನಂತೆ ಪೃಥ್ವಿ ಕೈ ಮುಗಿದು ನಮಸ್ಕಾರ ಅಂತ ನುಡಿದರೂ ತಲೆ ಎತ್ತಿ ನೋಡದೇ ತಾತನ ಬಳಿಗೆ ಓಡಿ ಹೋಗಿದ್ದ.

''ತಾತಾ... ನನ್ನ ತಾಯಿ ಸತ್ತು ಹೋಗಿದಾಳೆ ಅಂತ ಹೇಳಿದ್ರಿ... ಮತ್ತೆ ಇವರು ಹೇಗೆ ನನ್ನ ತಾಯಿಯಾಗ್ತಾರೆ ?...''

''ನಮ್ಮ ಮನೇಲಿ ಯಾರೂ ಹೆಂಗಸರೇ ಇರಲಿಲ್ಲ ಅಲ್ವಾ ? ಮನೆಯ ಯೋಗಕ್ಷೇಮ ನೋಡಿಕೊಳ್ಳೋಕೆ ಒಬ್ಬಯಜಮಾನಿ ಬೇಕೇ ಬೇಕು. ಅದಕ್ಕೆ ನಿನ್ನ ಅಪ್ಪ ಮತ್ತೆ ಮದುವೆ ಮಾಡಿಕೊಂಡಿದಾನೆ. ಈಗ ಅವಳು ನಿನಗೆ ತಾಯೀನೇ ತಾನೇ...?'' ಪೃಥ್ವಿ ಏನೂ ಹೇಳದಿದ್ದಾಗ ಅವನಿಗೆ ಅಸಮಾಧಾನ ವಾಗಿದೆ ಅಂತಂದುಕೊಂಡರು.

''ನೋಡು ಮಗು ನೀನಿನ್ನೂ ಚಿಕ್ಕವನು... ನಾನು ವಯಸ್ಸಾದವನು. ನೀನು ದೊಡ್ಡವನಾದ ಮೇಲೆ ನಿನಗೆ ಎಲ್ಲಾರ್ಥವಾಗುತ್ತೆ. ಈಗ ಬೇರೆ ಏನೂ ಯೋಚಿಸಬೇಡ. ನಿನ್ನ ವಿದ್ಯಾಭ್ಯಾಸದ ಕಡೆ ಗಮನ ಕೊಡು ಅಷ್ಟೇ ಸಾಕು'' ಮೊಮ್ಮಗನ ತಲೆ ಸವರಿದರು.

ಆದರೂ ಪೃಥ್ವಿಗೆ ಏನನ್ನೋ ಕಳೆದುಕೊಂಡ ಅನುಭವ. ತಾತನ ಬಳಿ ಇದ್ದ ಸಲುಗೆ ತಂದೆಯೊಡನೆ ಇರಲಿಲ್ಲ. ಹತ್ತು ವರ್ಷಗಳಿಂದ 'ತಾನು ತಾಯಿಯಿಲ್ಲದೇ ಬೆಳೆದೆ. ಈಗ ಇವರನ್ನು ತಾಯಿ ಅಂತ ಹೇಗೆ ಒಪ್ಪಿಕೊಳ್ಳುವುದು...? ನನಗೆ ಅಜ್ಜಿಯೂ ಇಲ್ಲ, ಹಾಗಂತ ಈ ತಾತ ಮತ್ತೆ ಮದುವೆಯಾಗಿ ಅಜ್ಜಿಯನ್ನೇಕೆ ತರಲಿಲ್ಲ? ಇದೇ ಮಾತನ್ನು ತಾನಿಗೆ ಹೇಳಿದ. ತಾತ ಬಿದ್ದು ಬಿದ್ದು ನಕ್ಕರು.

''ನನಗೆ ಬೇಕೂಂತ ಅನ್ನಿಸಿದರೂ, ಈಗ ನಿನಗಾಗಿ ನಾನು ಯಾವ ಜ್ಜಿಯನ್ನೂ ಮದುವೆಯಾಗಲು ಸಾಧ್ಯವಿಲ್ಲ... ಆದರೆ ನಾನು ಬದುಕಿರುವಾಗಲೇ ನಿನ್ನ ಮದುವೆಯನ್ನು ನೋಡಬೇಕು. ಅದಷ್ಟೇ ನನ್ನ ಆಸೆ.''

''ಇಲ್ಲ ತಾತಾ... ನಾನು ಮದುವೇನೇ ಆಗುಲ್ಲ...''

''ಹೋಗೋ ಹುಚ್ಚು ಮುಂಡೇದೇ. ಈಗ ಹಾಗೆ ಹೇಳ್ತೀಯ... ಅಷ್ಟೇ

ಮದುವೆ ವಯಸ್ಸು ಬಂದಾಗ ನನ್ನನ್ನ ಕೇಳ್ತೀಯಾ ?'' ಅವರು ನಗುತ್ತಾ ನುಡಿದರು. ''ಹೋಗು... ಮೊದಲು ಸ್ನಾನ ಮಾಡಿ ಬಾ ಎಲ್ಲರೂ ಒಟ್ಟಿಗೇ ಕೂತು ಊಟ ಮಾಡೋಣ... ನಿನ್ನ ಹೊಸತಾಯಿ ತುಂಬಾ ಚೆನ್ನಾಗಿ ಅಡಿಗೆ ಮಾಡ್ತಾಳೆ.''

ಪೃಥ್ವಿ ಮೌನವಾಗಿ ಊಟ ಮಾಡುತ್ತಿದ್ದಾಗ, ನಾಗೇಶ ತಂದೆಯ ಮುಖವನ್ನೇ ನೋಡಿದ. ಅವರು ಮಗನ ಕಳವಳವನ್ನು ಗಮನಿಸಿದರು. ಅವರಿಗೂ ಆತಂಕವುಂಟಾಗಿತ್ತು. ಹತ್ತು ವರ್ಷದ ಕೆಳಗೆ ಮದುವೆಯ ಆಸೆ ಹುಟ್ಟಲಿಲ್ಲ ಇವನಿಗೆ. ಈಗೇಕೆ ಈ ಆಸೆ ಹುಟ್ಟಿತೋ...? ಮೊದಲೇ ಆ ಅಪ್ಪ-ಮಗನಲ್ಲಿ ಸಲುಗೆ ಇಲ್ಲ. ಈ ಕಾರಣದಿಂದ ಪೃಥ್ವಿ ಈ ಮನೆಯಿಂದಲೇ ದೂರವಾಗಿ ಬಿಟ್ಟರೇ ....? ಅವರಿಗೂ ಊಟ ಸೇರದಂತಾಗಿತ್ತು.

ರಜೆ ಮುಗಿದು, ಪೃಥ್ವಿ ವಾಪಸ್ಸು ಹೊರಟು ಹೋದ. ರೇಳು ತಿಂಗಳ ನಂತರ ಪರೀಕ್ಷೆ ಮುಗಿಸಿಕೊಂಡು ಮತ್ತೆ ವಾಪಸ್ಸು ಬಂದಾಗ, ಅವನಿಗೆ ಮತ್ತೂ ಒಂದು ಅಚ್ಚರಿ ಕಾದಿತ್ತು. ತಾತಾ ಅವನ ಕೈಹಿಡಿದುಕೊಂಡು ಒಳಗಿನ ರೂಮಿಗೆ ಕರೆದುಕೊಂಡು ಹೋದರು. ಅಲ್ಲಿ ಎರಡು ತೊಟ್ಟಿಲುಗಳಲ್ಲಿ ಮಲಗಿದ್ದ ಎರಡು ಮುದ್ದಾದ ಮಕ್ಕಳನ್ನು ಕಂಡ.

''ನೋಡು ಪೃಥ್ವಿ... ಇವರು ನಿನ್ನ ತಮ್ಮಂದಿರು.... ಎಷ್ಟು ಮುದ್ದಾಗಿದಾರೆ ಅಲ್ವಾ ?''

''ಹುಂ....'' ಎನ್ನುತ್ತಾ ಕುತೂಹಲ ಆಶ್ಚರ್ಯಗಳಿಂದ ಕಣ್ಣುಮುಚ್ಚಿ ಮಲಗಿ ನಿದ್ರಿಸುತ್ತಿದ್ದ ಮಕ್ಕಳನ್ನೇ ನೋಡಿದ. ಒಂದು ಮಗು ನಿದ್ರೆಯಲ್ಲೇ ಅಳುತ್ತಿದ್ದರೆ, ಇನ್ನೊಂದು ಮುಗುಳ್ನಗುತ್ತಿತ್ತು. ಇದುವರೆಗೆ ಈ ಮನೆಗೆ ತಾನೇ ಎಲ್ಲರಿಗಿಂತ ಚಿಕ್ಕವನಾಗಿದ್ದೆ.... ಈಗ ತನಗೆ ತಮ್ಮಂದಿರು...! ಇದ್ದಕ್ಕಿದ್ದಂತೇ ತಾನು ಬೆಳೆದು ದೊಡ್ಡವನಾಗಿ ಬಿಟ್ಟಿದೀನಿ ಎನ್ನುವ ಅನುಭವವುಂಟಾಯಿತು. ಗಂಭೀರತೆ ಆವರಿಸಿಕೊಂಡಿತು.

''ನಿನ್ನ ತಮ್ಮಂದಿರಿಗೆ ಏನು ಹೆಸರಿಡೋಣ ?'' ತಾತಾ ಅವನ ಭುಜದ ಮೇಲೆ ಕೈ ಇಟ್ಟು ಪ್ರಶ್ನಿಸಿದರು.

''ನನಗೆ ಹೆಸರನ್ನು ಇಟ್ಟೋರು ಯಾರು ಯ''

''ನಿನ್ನ ಅಮ್ಮ...''

''ಹಾಗಾದರೆ ಇವರಿಬ್ಬರಿಗೂ ಅವರ ತಾಯಿಯೇ ಹೆಸರನ್ನಿಡಲಿ'' ಎಂದು ಹಿಂದಕ್ಕೆ ಸರಿದ. ತಾತಾ ಅವನ ಕೈ ಹಿಡಿದು ನಿಲ್ಲಿಸಿದರು.

''ನೀನು ಹುಟ್ಟಿದಾಗ ನೀನೇ ಮೊದಲನೆಯವನು.... ಆದರೆ ಈಗ ನೀನು ಇವರಿಬ್ಬರಿಗೆ ಅಣ್ಣ... ಅದಕ್ಕೇ ನಿನಗೆ ಅಧಿಕಾರ ಹೆಚ್ಚು''

''ಅಜಯ, ವಿಜಯ ಅಂತ ಹೆಸರುಗಳನ್ನಿಡೋಣ....''

''ತುಂಬಾ ಚೆನ್ನಾಗಿದೆ...'' ತಾತಾ ಅವನನನ್ನು ಹೊಗಳಿದರು. ಆನಂತರ ಮಕ್ಕಳಿಬ್ಬರಿಗೂ ಅದೇ ಹೆಸರುಗಳನ್ನಿಡಲಾಯಿತು ಪೃಥ್ವಿ ಮಕ್ಕಳ ಆಟಗಳನ್ನು ನೋಡುತ್ತಾ ಆ ರಜವನ್ನು ಕಳೆದ. ಸಮಯ ಹೋದುದೇ ತಿಳಿಯಲಿಲ್ಲ. ಅಜಯ ವಿಜಯರಿಗೆ ಎರಡು ವರ್ಷವಾಗುವಷ್ಟರಲ್ಲಿ ಪೃಥ್ವಿ ಇದೇ ಊರಿಗೆ ವಾಪಸ್ಸಾಗಿ, ಇಲ್ಲಿಯ ಹೈಸ್ಕೂಲೊಂದಕ್ಕೆ ಸೇರಿಕೊಂಡ. ಹೈಸ್ಕೂಲು ವಿದ್ಯಾರ್ಥಿ... ಆಟಕ್ಕಿಂತ ಪಾಠದ ಕಡೆ ಹೆಚ್ಚು ಗಮನಕೊಡುತ್ತಿದ್ದ. ತಮ್ಮಂದಿರೊಡನೆ ಹೆಚ್ಚುಹೆಚ್ಚು ಬೆರೆಯುತ್ತಿದ್ದ. ಅವರ ಚೇಷ್ಟೆ ಅವನಿಗೆ ಬೇಸರ ವನ್ನುಂಟು ಮಾಡುತ್ತಿರಲಿಲ್ಲ. ಅವನು ಹೈಸ್ಕೂಲಿನ ವಿದ್ಯಾಭ್ಯಾಸವನ್ನು ಮುಗಿಸುವ ಹೊತ್ತಿಗೆ, ಅಜಯ ವಿಜಯರನ್ನು ನರ್ಸರಿ ಸ್ಕೂಲಿಗೆ ಸೇರಿಸ ಲಾಗಿತ್ತು. ಈಗ ದಿನಗಳು ಬೇಗ ಬೇಗ ಕಳೆಯುತ್ತಿದೆ ಎಂದೆನಿಸಿತ್ತು. ಎಲ್ಲರಿಗೂ ಅವರವರ ಕೆಲಸ ಕಾರ್ಯಗಳಿಂದ ಬಿಡುವು ಸಿಗುತ್ತಿದ್ದುದೇ ಕಡಿಮೆ.

ಸುಬ್ಬರಾಯಪ್ಪನಿಗೆ ಈಗ ಒಂಟಿತನ ಬಾಧಿಸುತ್ತಿರಲಿಲ್ಲ. ಅಜಯ ವಿಜಯರ ಮಾತುಕತೆ, ಜಗಳ, ವಾಗ್ವಾದ ಅವರನ್ನು ರಂಜಿಸುತ್ತಿತ್ತು. ಒಮ್ಮೊಮ್ಮೆ ಪೃಥ್ವಿಯೂ ಸೇರಿಕೊಳ್ಳುತ್ತಿದ್ದ. ಇತ್ತೀಚಿನ ದಿನಗಳಲ್ಲಿ ಯಾಕೋ ಏನೋ ನಾಗೇಶನ ಆರೋಗ್ಯ ಅಷ್ಟು ಸಮರ್ಪಕವಾಗಿರಲಿಲ್ಲ. ಆಗಾಗ್ಗೆ ಬರುತ್ತಿದ್ದ ಕೆಮ್ಮು ಜಾಸ್ತಿಯಾಗತೊಡಗಿತ್ತು. ಬೆನ್ನು ನೋವು ಹಿಂಸಿಸುತ್ತಿತ್ತು. ಕಂಪೆನಿಯ ಕೆಲಸದ ಒತ್ತಡದಿಂದ ಸ್ವಲ್ಪ ಬಿಡುವು ಮಾಡಿಕೊಳ್ಳಬೇಕೆಂದು ಡಾಕ್ಟರು ಸಲಹೆ ನೀಡಿದ್ದರು. ಆದರೆ ನಾಗೇಶ ಹೆಚ್ಚು ಗಮನ ಕೊಟ್ಟಿರಲಿಲ್ಲ. ನಳಿನಿಗೆ, ಮನೆಯ ಕೆಲಸ, ಮಕ್ಕಳ ಯೋಗಕ್ಷೇಮ ಹಾಗೂ ಗಂಡನ ಆರೋಗ್ಯದ ಗಮನಗಳಿಂದ ಬಿಡುವು ಸಿಗುತ್ತಿದ್ದುದೇ ಕಡಿಮೆ. ಮನೆಯಲ್ಲಿ ಆಳುಕಾಳುಗಳಿಗೇನೂ ಕೊರತೆ ಇರಲಿಲ್ಲ. ಅಡಿಗೆಯವರೂ ಇದ್ದರು. ಆದರೂ ತನ್ನ ಮನೆಯ ಕೆಲಸವನ್ನು ತಾನೇ ಆಸಕ್ತಿವಹಿಸಿ ಮಾಡಬೇಕಾದುದು ತನ್ನ ಕರ್ತವ್ಯವೆಂದು ಭಾವಿಸಿದ್ದಳು. ಒಮ್ಮೊಮ್ಮೆ ಅವಳಿಗೆ ತನ್ನ ತಂದೆಯ ಹಾಗೂ ತನ್ನ ಮಗ ವಿಶ್ವನ ನೆನಪು ಬಾಧಿಸುತ್ತಿತ್ತು.

ಅಜಯ ವಿಜಯರು ಹುಟ್ಟಿದಾಗ, ಮಕ್ಕಳನ್ನು ನೋಡಲೆಂದು ಶ್ರೀಕಂಠಯ್ಯ ನರ್ಸಿಂಗ್ ಹೋಂಗೆ ಬಂದಿದ್ದರು.

''ಅಪ್ಪಾ ನನ್ನನ್ನು ಮರತೇ ಬಿಟ್ಟಿದೀರ... ವಿಶ್ವ ಏಕೆ ಬರಲಿಲ್ಲ?'' ಎಂದು ಕೇಳಿದ್ದಳು.

''ವಿಶ್ವ ಈಗ ಮೊದಲಿಗಿಂತ ಬೇಜವಾಬ್ದಾರಿ ಹುಡುಗನಾಗಿ ಬಿಟ್ಟಿದಾನೆ. ಮನೇಲಿ ಇರುವುದೇ ಕಡಿಮೆ. ಬಂದರೆ ಬಂದ ಇಲ್ಲದಿದ್ದರೆ ಇಲ್ಲ'' ಎಂದು ಹೇಳಿದಾಗ ಅವಳಿಗೆ ದುಃಖವಾಗಿತ್ತು.

ತಾನು ಮತ್ತೆ ಮದುವೆಯಾಗಿ, ವಿಶ್ವನಿಗೆ ದ್ರೋಹ ಮಾಡಿದೆನೇನೋ ಅಂತನ್ನಿಸಿದರೂ, ಅವನು ಚಿಕ್ಕಹುಡುಗನಾಗಿದ್ದಿದ್ದರೆ, ಅಥವಾ ಪೋಕರಿ ಯಾಗದೆ ಇದ್ದಿದ್ದರೆ ತನ್ನ ಜೊತೆ ಕರೆತರಬಹುದಾಗಿತ್ತು ಅಂತೆನ್ನಿಸಿತ್ತು.

ಗಂಡನೊಡನೆ ವಿಶ್ವನನ್ನು ಕುರಿತು ಮಾತನಾಡಲು ಹಿಂಜರಿಯುತ್ತಿದ್ದಳು. ಒಳ್ಳೆಯ ಸ್ಕೂಲಿನಲ್ಲಿ ಓದಿ, ಸುಶಿಕ್ಷಿತನಾಗಿರುವ ಪೃಥ್ವಿಯನ್ನು ಕಂಡಾಗ, ವಿಶ್ವ ಇವನಂತೆ ಆಗುವುದು ಖಂಡಿತಾ ಸಾಧ್ಯವಿಲ್ಲ ಎಂದೆನಿಸುತ್ತಿತ್ತು. ತನ್ನ ತಂದೆಯೂ ವಿಶ್ವನನ್ನು ಚೆನ್ನಾಗಿ ನೋಡಿಕೊಳ್ಳಲಿಲ್ಲ ಎಂದುಕೊಂಡಾಗ ವ್ಯಥೆಯಾಗುತ್ತಿತ್ತು... ಇದಕ್ಕೆ ಕಾರಣ ಯಾರು ಎಂದು ಸ್ಪಷ್ಟವಾಗಿ ತಿಳಿಯುತ್ತಿರಲಿಲ್ಲ. ಬಡತನವೇ... ಎಂದು ಯೋಚಿಸುವಾಗ, ತಾನೀಗ ಶ್ರೀಮಂತನ ಪತ್ನಿ.... ಆದರೆ ತನ್ನ ಕರ್ತವ್ಯ ಈ ಸಂಸಾರಕ್ಕೆ ಮಾತ್ರ ಸೀಮಿತವಾದುದು.... ಎಂದುಕೊಳ್ಳುವಾಗ ವಿಶ್ವನೂ ತನ್ನ ಮಗನೇ ಅವನ ಬಗ್ಗೆಯೂ ಕೆಲವು ಕರ್ತವ್ಯಗಳಿವೆ. ಅದನ್ನು ತಾನು ಪಾಲಿಸಲು ಆಗುತ್ತಿಲ್ಲ ಎಂದು ವ್ಯಥೆ ಪಡುವಳು. ಆದರೆ ಈ ವಿಷಯ ಕುರಿತು ನಾಗೇಶನೊಡನೆ ಮಾತನಾಡಲು ಏನೋ ಹಿಂಜರಿಕೆ.

''ಅಪ್ಪಾ ವಿಶ್ವನ್ನ ಒಮ್ಮೆ ಕರೆದುಕೊಂಡು ಬನ್ನಿ. ಅವನನ್ನು ನೋಡಬೇಕು ಅಂತನ್ನಿಸಿದೆ'' ಎಂದಿದ್ದಳು.

''ಅವೆಲ್ಲಿದಾನೆ ಅಂತ ಹುಡುಕಲಿ ? ಎಂದಾದರೂ ಮನೆಗೆ ಬಂದಾಗ ಹೇಳಿಕಳಿಸ್ತೀನಿ. ಆದರೆ... ಅವನು ಬರ್ತಾನೋ ಇಲ್ಲವೋ... ಬಂದರೂ ನಿನ್ನ ಗಂಡನ ಮನೆಯವರು ಸೇರಿಸ್ತಾರೋ ಇಲ್ಲವೋ....? ಅವನಿಗೋಸ್ಕರ ನಿನ್ನ ತಲೆ ಯಾಕೆ ಕೆಡಿಸಿಕೊಳ್ತೀಯ ? ... ಗಂಡು ಹುಡುಗ, ಎಲ್ಲಿದ್ದರೂ ಜೈ ಅಂತ ಇರ್ತಾನೆ... ಮೊದಲ್ನಿಂದ ಹೇಗೆ ಬೆಳೆದ ಅಂತ ನಿನಗೇನೂ ತಿಳೀದಾ ? ಈಗ ಎರಡೆರಡು ಗಂಡು ಮಕ್ಕಳು ಹುಟ್ಟಿವೆ... ಅವುಗಳನ್ನು ಚೆನ್ನಾಗಿ ನೋಡ್ಕೋ...

ಇದು ನಿನ್ನ ಮೊದಲ ಕರ್ತವ್ಯ...'' ತಂದೆಯ ಈ ಮಾತುಗಳು ಅವಳಿಗೆ ಕೃತಕವಾಗಿ ಕಂಡವು.

''ಅವನೀಗ ಅಪ್ಪನ ಜೊತೆಯಲ್ಲಿಯೂ ಇಲ್ಲವಂತೆ ಅವನನ್ನು ಎಲ್ಲಿ ಅಂತ ಹುಡುಕಿಸಲಿ ? ಅವನಿಗೆ ನಿನ್ನ ಮೇಲೆ ಕೋಪ... ಜಗಳವಾಡಿಕೊಂಡು ಹೊರಟುಹೋದ..'' ಎಂದು ಅಪ್ಪ ತಿಳಿಸಿದ್ದರಲ್ಲ ಈಗೇನು ಮಾಡಲಿ ?

ವಿಶ್ವನಿಗೆ ನನ್ನ ಮೇಲೆ ಕೋಪ ಬರುವುದು ಸಹಜವೇ. ತಾನು ಮರು ಮದುವೆಯಾಗಲಿರುವ ವಿಷಯವನ್ನು ಅವನಿಗೆ ತಿಳಿಸಿರಲಿಲ್ಲ. ''ಅವನೇನು ಚಿಕ್ಕವಲ್ಲ, ಅವನಿಗೆ ತಿಳಿದರೆ ರಂಪ ಮಾಡಿ ನಿನ್ನ ಮದುವೆಯನ್ನು ನಿಲ್ಲಿಸ ಬಹುದು. ಈಗ ಸದ್ಯಕ್ಕೆ 'ನಿನಗೆ ಕೆಲಸ ಸಿಕ್ಕಿದೆ ಬೆಂಗಳೂರಿಗೆ ಹೋಗ್ತಿದೀಯ' ಅಂತ ತಿಳಿಸಿದರೆ ಸಾಕು' ಅಂತ ಹೇಳಿಕೊಟ್ಟಿದ್ದರು.

ಮದುವೆಗೆ ಎರಡು ದಿನಗಳಿವೆ ಎನ್ನುವಾಗ, ಅವನ ಕೈಗೆ ನೂರು ರೂಪಾಯಿಗಳನ್ನು ಕೊಟ್ಟು ಎಲ್ಲಾದರೂ ಸುತ್ತಾಡಿಕೊಂಡು ಬಾ ಅಂತ ಅವರೇ ಕಳಿಸಿಬಿಟ್ಟಿದ್ದರು...

ವಿಶ್ವನಿಂದ ದೂರವಾಗಿ ಇರುವ ನನಗೆ ಈ ಮದುವೆ ಬೇಡವೇ ಬೇಡ ಎಂದು ನುಡಿದಾಗ, ತಿಳುವಳಿಕೆ ಹೇಳಿ ಒಪ್ಪಿಸಿದ್ದರು.

''ಅವರಾಗಿಯೇ ಕೇಳಿಕೊಂಡು ಬಂದಿರುವಾಗ, ನೀನು ಇಂಥ ಅವಕಾಶವನ್ನು ಕಳೆದುಕೊಂಡರೆ, ಮೂರ್ಖಳಾಗ್ತೀಯ. ಅಲ್ಲಾದರೆ ನೀನೇ ಯಜಮಾನಿ. ರಾಣಿಯಂತೆ ಇರಬಹುದು. ನಿನ್ನ ದಯೆಯಿಂದ ನಾವೂ ಶ್ರೀಮಂತರಾಗಿರಬಹುದು. ವಿಶ್ವ ಓದಿ ಬರೆದು, ವಿದ್ಯಾವಂತನಾಗಿ, ಸಂಪಾದಿಸಿ ನಾಲ್ಕು ಜನರಂತೆ ಹಾಯಾಗಿರಲಿ ಅಂತ ನಿನಗೆ ಆಸೆ ಇಲ್ಲವೇ ?.. ಅವನ ಜವಾಬ್ದಾರಿ ನನಗಿರಲಿ. ಕೈಗೆ ಹಣ ಸಿಕ್ಕರೆ ನಾನು ಹೇಳಿದಂತೆ ಕೇಳುತ್ತಾನೆ... ನೀನು ನಿಶ್ಚಿಂತೆಯಾಗಿರು'' ಎಂದಿದ್ದರು.

ಆದರೆ ಈಗ ವಿಶ್ವ ಎಲ್ಲಿದ್ದಾನೋ ತಿಳಿಯದು. ತಂದೆ ಸಹ ಅವಳಿಗೆ ಹೇಳಿ ಕಳಿಸದೇ ವರ್ಷಗಳೇ ಕಳೆದು ಹೋದವು. ಒಮ್ಮೆ ವಿಚಾರಿಸಲೆಂದು ಯಾರನ್ನೋ ಹಳ್ಳಿಗೆ ಕಳಿಸಿದ್ದಳು. ಆದರೆ ಶ್ರೀಕಂಠಯ್ಯ ಆ ಊರನ್ನು ಬಿಟ್ಟು ಎಷ್ಟೋ ವರ್ಷಗಳಾಯಿತು ಅಂತ ತಿಳಿಸಿದ್ದರು. ಅಪ್ಪ ಹೀಗೇಕೆ ಮಾಡಿದರು ? ತನಗೆ ಒಂದು ಮಾತೂ ತಿಳಿಸದೇ ಎಲ್ಲಿಗೆ ಹೋದರು ? ಗಂಡನೊಡನೆ ಅಪ್ಪನ ಬಗ್ಗೆಯಾಗಲೀ, ಅಥವಾ ವಿಶ್ವನ ಬಗ್ಗೆಯಾಗಲೀ ಮಾತನಾಡಲು

ಇಷ್ಟವಾಗುತ್ತಿರಲಿಲ್ಲ. ಗಂಡನಾಗಲೀ, ಮಾವನಾಗಲೀ ಒಂದು ದಿನವೂ ಅವರುಗಳ ಬಗ್ಗೆ ವಿಚಾರಿಸಿರಲಿಲ್ಲ... ತಾನೇನೋ ಮದುವೆಯಾಗಿ ಇಲ್ಲಿಗೆ ಬಂದುಬಿಟ್ಟೆ. ಅಲ್ಲಿ ಅವರುಗಳು ಹೇಗಿದ್ದಾರೋ ಎಂದು ಚಿಂತೆಯಾಗುತ್ತಿತ್ತು. ತನ್ನ ಅಸಹಾಯಕತೆಯ ಬಗ್ಗೆ ತನ್ನ ಮೇಲೇ ಕೋಪ ಬರುತ್ತಿತ್ತು. ತಾನು ದುಡುಕಿದೆನೇನೋ ಎಂದೆನಿಸುತ್ತಿತ್ತು. ಆದರೆ ನಾಗೇಶನ ಪ್ರೀತಿ, ಮಾವನ ಆದರ, ಪೃಥ್ವಿಯ ಗೌರವ, ಮಕ್ಕಳ ಲಾಲನೆ ಪಾಲನೆ ಆ ಚಿಂತೆಯನ್ನು ಮರೆಸುತ್ತಿತ್ತು.

ಆ ತಂದೆಗೆ ತಕ್ಕ ಮಗ. ಆಗಲೂ ಅವನಿಗೆ ಅಮ್ಮನ ಮೇಲೆ ಇದ್ದ ಪ್ರೀತಿ ಅಷ್ಟರಲ್ಲೇ ಇತ್ತು. ಈಗ ಕೋಪಗೊಂಡರೆ ? ಇದಕ್ಕೆಲ್ಲ ಹೊಣೆ ಯಾರು ? ಅವನ ಅಪ್ಪನೇ ? ನಮ್ಮ ಬಡತನವೇ...? ಈಗ ವಿಶ್ವ ತನಗೆ ತಾನು ಬದುಕುವ ದಾರಿಯನ್ನು ಕಂಡುಕೊಂಡಿರುತ್ತಾನೆ. ಅಪ್ಪ, ತನಗೆ ಕಷ್ಟವೆಂದು ಹೇಳಿಕೊಂಡಿರಲಿಲ್ಲ. ಈಗ ತಾನು ಎಷ್ಟೇ ಚಿಂತಿಸಿದರೂ ಇಷ್ಟೇ ಎಂದುಕೊಂಡು ಸುಮ್ಮನಾಗುವಳು. ಆದರೂ ಅಪ್ಪನಂತೆ ತಾನು ಹಾಯಾಗಿರಲು ಸಾಧ್ಯವೇ ? ಅವನನ್ನು ಹೊತ್ತು ಹೆತ್ತು ಸಾಕಿ ಸಲಹಿ ಬೆಳೆಸಿದವಳು ತಾನು... ವಿಶ್ವನನ್ನು ಒಮ್ಮೆಯಾದರೂ ಕಾಣಲೇ ಬೇಕೆಂದು ಹಂಬಲಿಸುತ್ತಿದ್ದಳು.

ತಾನೀಗ ಶ್ರೀಮಂತೆ ನಿಜ. ಅದರಿಂದ ಅಪ್ಪನಿಗಾಗಲೀ, ವಿಶ್ವನಿಗಾಗಲೀ ಸಹಾಯವಾಗುತ್ತಿಲ್ಲವೆಂದುಕೊಂಡು, ಒಮ್ಮೆ ಗಂಡನೊಡನೆ ಕೇಳಿದ್ದಳು. ಆಗ ನಾಗೇಶ ಹೇಳಿದ್ದ.

''ನಿಮ್ಮ ತಂದೆ, ನಿನಗೆ ಕೆಲಸ ಕೊಡಿಸುವಂತೆ ಕೇಳಿದ್ದರು... ಆದ್ದರಿಂದ ಅವರು ಕೇಳದೇನೇ ನಾನು ಅವರಿಗೆ ತಿಂಗಳಿಗೆ ಮೂರು ಸಾವಿರ ರೂಪಾಯಿಗಳನ್ನು ಅವರ ಹೆಸರಿಗೆ ಜಮಾ ಮಾಡಿಸಿಬಿಡುತ್ತೀನಿ. ಇನ್ನೂ ಜಾಸ್ತಿ ಕೊಡಬೇಕು ಅಂತ ಇದ್ದರೆ ಹೇಳು ಕೊಡೋಣ ಅದಕ್ಕೇನಂತೆ'' ಅಂತ ಅಂದಿದ್ದ.

ಅವಳಿಗೆ ಸಂತಸದೊಂದಿಗೆ ಹೀನಾಯವಾಗಿತ್ತು. ನನ್ನ ಗಂಡ ನಿಜಕ್ಕೂ ಒಳ್ಳೆಯವನು. ಅಪ್ಪನ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದಾರೆ. ತನಗಿನ್ನೇನು ಬೇಕು ಅಂತ ಅನ್ನಿಸಿದರೂ ಅಪ್ಪ ಈ ಮಾತನ್ನು ತನಗೆಂದೂ ಹೇಳಿರಲೇ ಇಲ್ಲ ಎಂದುಕೊಂಡಾಗ, ಅಪ್ಪನ ಮೇಲೆ ಕೋಪ ಬಂದಿತ್ತು. ತನ್ನನ್ನೇನೂ ದೂಷಿಸುವಂತಿಲ್ಲ, ಆದರೆ ಈ ವಿಷಯ ಮಾವನವರಿಗೆ ತಿಳಿದರೆ ಏನೆಂದು ಕೊಳ್ಳುವರೋ ಎಂದು ಚಿಂತಿಸುವಾಗ ಮನಸ್ಸು ಕುಗ್ಗಿ ಹೋಗುತ್ತಿತ್ತು.

ಇಷ್ಟಾದರೂ ವಿಶ್ವ ಏಕೆ ಅಪ್ಪನ ಚಿಂತೆಯಲ್ಲಿ ಇಲ್ಲ ? ಪ್ಪ ಏಕೆ ಹುಡುಕಿಸುತ್ತಿಲ್ಲ? ಈಗ ತಾನೂ ಎಲ್ಲೋ ನಾಪತ್ತೆಯಾಗಿ ಬಿಟ್ಟರಲ್ಲ... ಯಾರಿಗೆ ಹೇಳುವುದು ? ಯಾರನ್ನು ಕೇಳುವುದು ? ಎಲ್ಲಿ ಅಲೆದಾಡಿಕೊಂಡಿದಾನೋ... ಎಂದುಕೊಳ್ಳುವಾಗ ಹಿಂಸೆಯಾಗುತ್ತಿತ್ತು. ಈಗ ವಿಶ್ವ ತನ್ನ ಬಳಿಗೆ ಬರುವಂತಾದರೇ... ತನಗೂ ಸಹಾಯಕನಾಗುತ್ತಾನೆ. ಇಷ್ಟು ವರ್ಷಗಳ ನಂತರ ಮಗ ತನ್ನ ಬಳಿಯೇ ಇರುತ್ತಾನೆ. ತಾಯಿಯ ಸ್ವಾರ್ಥ ಮಗನನ್ನು ಕಾಣಲು ಕಾತರಿಸಿತು. ಅಜಯ, ವಿಜಯರಂತೆ, ಪೃಥ್ವಿಯಂತೆ ವಿಶ್ವನೂ ತನಗೆ ಮಗನೇ ತಾನೇ ?

ಇನ್ನೊಂದರೆಡು ವರ್ಷಗಳು ಕಳೆದರೆ ಪೃಥ್ವಿ ನಿನಗೆ ಸಹಾಯಕ ನಾಗುತ್ತಾನೆ ನಿನ್ನ ಕಷ್ಟ ಕಡಿಮೆಯಾಗುತ್ತದೆ ಎಂದು ನಾಗೇಶ ಆಗಾಗ ಹೇಳುತ್ತಿದ್ದ. ಆಗ ವಿಶ್ವನನ್ನು ಕುರಿತು ಮಾತನಾಡುವ ತವಕವಾದರೂ ತಡೆದುಕೊಳ್ಳುತ್ತಿದ್ದಳು. ಈಗ ಗಂಡನಿಗೆ ಅನಾರೋಗ್ಯ. ಈಗ ವಿಶ್ವನ ಬಗ್ಗೆ ಮಾತನಾಡಿದರೆ ಏನೆಂದುಕೊಳ್ಳುವನೋ... ಅದರ ಪರಿಣಾಮ ಏನಾಗುವುದೋ ? ಇದುವರೆಗೂ ಎಂದೂ ಆಡಿಲ್ಲ, ಈಗ ಆ ಮಾತು ಆಡುವುದು ಹೇಗೆ ? ಎಂದುಕೊಂಡು ಸುಮ್ಮನಾಗುತ್ತಿದ್ದಳು. ನಾಗೇಶನ ಆರೋಗ್ಯ ದಿನದಿನಕ್ಕೆ ಸೂಕ್ಷ್ಮವಾಗತೊಡಗಿತ್ತು.

ಕಡೆಗೂ ಆ ದಿನ ಬಂದೇ ಬಿಟ್ಟಿತು. ಅನಿರೀಕ್ಷಿತವಲ್ಲವಾದರೂ ಆಘಾತವೇ. ಉಸಿರಾಟದ ತೊಂದರೆ ಹೆಚ್ಚಾದುದರಿಂದ ನರ್ಸಿಂಗ್ ಹೋಂಗೆ ಸೇರಿಸಿದರು. ಆದರೆ ಒಂದು ರಾತ್ರಿಯೂ ಅಲ್ಲಿ ಕಳೆಯಲಿಲ್ಲ. ಕೆಲವೇ ಗಂಟೆಗಳ ನಂತರ ಹೃದಯಸ್ತಂಭನದಿಂದ ನಾಗೇಶ ನಿಧನನಾಗಿದ್ದ.

ಪೃಥ್ವಿ ಮತ್ತೊಮ್ಮೆ ಅನಾಥನಾಗಿದ್ದ. ತಾತನ ವೇದನೆ ಅವನಿಗೆ ಅರ್ಥವಾಗಿತ್ತು. ಆದರೆ ಅವರಿಗೆ ಏನು ಸಮಾಧಾನ ಹೇಳಬಲ್ಲ ? ತನ್ನ ತಮ್ಮಂದಿರ ಕಡೆ ನೋಡಿದಾಗ ತನ್ನ ಜವಾಬ್ದಾರಿ ಹೆಚ್ಚಿತು ಅಂತೆನ್ನಿಸಿತು. ಹತ್ತು ವರ್ಷ ಸಹ ತುಂಬದ ಅವರಿಬ್ಬರಿಗೆ ತಮಗಾಗಿರುವ ಅನ್ಯಾಯದ ಅರಿವೂ ಸಹ ಇದೆಯೋ ಇಲ್ಲವೋ.... ? ಅವನಿಗೆ ಚಿಕ್ಕಮ್ಮನ ಕಡೆ ನೋಡುವ ಧೈರ್ಯವಿರಲಿಲ್ಲ. ಅವರಿಗೆ ಹೇಗೆ ಸಮಾಧಾನ ಹೇಳುವುದು ?

ಪೃಥ್ವಿ ನಾಗೇಶನ ಅಂತಿಮಕ್ರಿಯೆಗಳನ್ನೆಲ್ಲ ತನ್ನ ಕರ್ತವ್ಯವೆನ್ನುವಂತೆ ಮಾಡಿದಾಗ, ನಳಿನಿಗೆ ವಿಶ್ವನ ನೆನಪು ಒತ್ತರಿಸಿಕೊಂಡು ಬಂದಿತು. ತಾನು ಸತ್ತ ನಂತರ, ತನಗೆ ಇದನ್ನೆಲ್ಲ ಮಾಡಲು ವಿಶ್ವ ಬಳಿಯಲ್ಲಿಲ್ಲ. ಪೃಥ್ವಿ

ಮಾಡುತ್ತಾನೇನೋ... ಆದರೆ ಅವನು ಸ್ವಂತ ಮಗನಲ್ಲ. ಇವನು ಮಾಡುಲ್ಲ ಅಂತ ಅಂದು ಬಿಟ್ಟರೇ... ತಾನು ಅಂತರ ಪಿಶಾಚಿಯಾಗಿ ತಿರುಗುವ ಪರಿಸ್ಥಿತಿ ಒದಗಿದರೇ... ಏನೇನೋ ಅನಿಸಿಕೆಗಳಿಂದ ಅವಳಿಗೆ ದುಃಖ ಹೆಚ್ಚಾಯಿತು. ವಿಷಯವನ್ನು ಪೇಪರ್ರಿನಲ್ಲಿ ಪ್ರಕಟಿಸಿದ್ದರು. ನಾಲ್ಕಾರು ದಿನಗಳಾದರೂ ತಂದೆ ಬರದಿದ್ದಾಗ, ಅವರೂ ಬದುಕಿದ್ದಾರೋ ಇಲ್ಲವೋ ಎಂಬ ಅನುಮಾನ ಕಾಡಿತು. ನನ್ನ ಪತಿಯೇ ನನ್ನಿಂದ ದೂರವಾದ ಮೇಲೆ, ನನ್ನ ಭಾಗಕ್ಕೆ ಯಾರೂ ಇಲ್ಲ ಎಂದುಕೊಳ್ಳುವಾಗ ಕಣ್ಣೀರು ಕೋಡಿಯಾಗಿ ಹರಿಯುತ್ತಿತ್ತು.

ಅವಳ ವ್ಯಥೆಯನ್ನು ಗಮನಿಸಿದ ಸುಬ್ಬರಾಯಪ್ಪ, ನಳಿನಿಯ ತಂದೆಗೆ ಹೇಳಿ ಕಳಿಸಿದ್ದರು.

''ಎಂಥಾ ತಂದೇರಿ ನೀವು ? ಮಗಳಿಗೆ ನಾಲ್ಕು ಸಮಾಧಾನದ ಮಾತುಗಳನ್ನು ಹೇಳುವುದಕ್ಕೂ ಬರಬಾರದಾ ?'' ಹಂಗಿಸಿ ನುಡಿದರು.

''ನೀವೇ ಹೇಳಿದ್ರಲ್ಲ... ನಮ್ಮ ಮನೆಗೆ ಮಾತ್ರ ಬರಬಾರದು ಅಂತ..'' ಶ್ರೀಕಂಠಯ್ಯನೂ ಪ್ರತಿಯಾಗಿ ನುಡಿದ.

''ಚೆನ್ನಾಗಿದೆ ನಿಮ್ಮ ತರ್ಕ ! ನಿಮ್ಮ ಮಗಳ ಶ್ರೀಮಂತಿಕೆಯಲ್ಲಿ ನಿಮಗೆ ಪಾಲು ಬೇಕು... ಅದೇ ಮಗಳ ದುಃಖದಲ್ಲಿ ಪಾಲುದಾರರಾಗಲು ಜಿಪುಣತನ ! ಅಲ್ಲವೇನ್ರೀ...?''

''ಅದೆಲ್ಲಾ ಏನಿಲ್ಲ... ನನಗೂ ಅವಳ ದುಃಖ ಅರ್ಥವಾಗುತ್ತೆ. ನಿಮಗಿಂತ ಹೆಚ್ಚು ಅರ್ಥವಾಗುತ್ತೆ. ಆದರೆ ಹಾಗಂತ ಅವಳನ್ನು ಕರೆದುಕೊಂಡು ಹೋಗಿ ನಮ್ಮ ಮನೇಲಿಟ್ಟುಕೊಳ್ಳೋಕೆ ಆಗುತ್ತಾ ?''

''ಎಂಥಾ ಸಣ್ಣ ಬುದ್ಧಿ ಜನಾರಿ ನೀವು ? ನಳಿನಿ ನಮ್ಮ ಸೊಸೆ... ಅವಳ ಮಕ್ಕಳು, ನನ್ನ ಮೊಮ್ಮಕ್ಕಳು. ಅನಾಥರಲ್ಲ, ನೀನು ಕೇಳಿಕೊಂಡರೂ ನಾವು ಕಳಿಸುವುದಿಲ್ಲ ತಿಳೀತೇ ?'' ಒರಟಾಗಿ ನುಡಿದರು. ಶ್ರೀಕಂಠಯ್ಯ ಸಮಾಧಾನದ ನಿಟ್ಟುಸಿರನ್ನು ಬಿಟ್ಟಾಗ ಸುಬ್ಬರಾಯಪ್ಪನಿಗೆ ಅಸಹ್ಯವೆನಿಸಿತು.

''ಮನುಷ್ಯನಿಗೆ ಅವನದೇ ಆದ ಕೆಲವು ಕರ್ತವ್ಯಗಳಿರುತ್ತವೆ. ಅದನ್ನು ನಿಭಾಯಿಸಲು ಹಿಂಜರಿಯುವಾಗ ಇಂತಹ ಸ್ವಾಭಾವಿಕ ಯೋಚನೆಗಳು ಬರುವುದು ಸಹಜ... ಮೊದಲು ನಿಮ್ಮ ಮಗಳಿಗೆ ನಾಲ್ಕು ಸಮಾಧಾನದ ಮಾತುಗಳನ್ನು ಹೇಳಿ ಅಷ್ಟು ಸಾಕು'' ಶ್ರೀಕಂಠಯ್ಯನನ್ನು ಒಳಗಿನ ಕೋಣೆಗೆ ಕರೆದುಕೊಂಡು ಹೋದರು. ತಂದೆಯನ್ನು ಕಂಡ ನಳಿನಿ ತಲೆತಗ್ಗಿಸಿದಳು.

ಕಣ್ಣಂಚಿನಲ್ಲಿ ನೀರು ಜಿನುಗಿತು. ಮಗಳಿಗೆ ಏನು ಸಮಾಧಾನದ ಮಾತುಗಳನ್ನು ಹೇಳಬೇಕೆಂದು ಅವರಿಗೆ ತೋಚಲಿಲ್ಲ.

''ಅಪ್ಪಾ... ವಿಶ್ವ ಸಿಕ್ಕಿದ್ನಾ? ಈಗ ಎಲ್ಲಿದಾನೆ ?''

''ವಿಶ್ವಾ... ವಿಶ್ವಾ... ಅವನ ಚಿಂತೆ ಬಿಡು. ಈಗ ಅವನು ಬಂದು ಏನ್ಮಾಡ್ತಾನೆ ನಿನಗೆ ? ಇಲ್ಲಿ ನಿನ್ನ ಸ್ಥಿತಿಗತಿಗಳ ಬಗ್ಗೆ ಮೊದಲು ಚಿಂತಿಸು.''

''ಏನಾಗಿದೆ ಇಲ್ಲಿ ನನಗೆ ? ನನಗೆ ಇಲ್ಲಿ ಯಾವ ಕೊರತೆಯೂ ಇಲ್ಲ''

''ಈಗೇನೋ ಸರಿ... ನಿನ್ನ ಮಕ್ಕಳು ಇನ್ನೂ ಚಿಕ್ಕವರು... ಅವನು, ಅದೇ ಅವನು... ಆ ಹಿರೀ ಹೆಂಡ್ತಿ ಮಗ, ನಿಮ್ಮನ್ನೆಲ್ಲ ಮುಂದೆ ಚೆನ್ನಾಗಿ ನೋಡಿಕೊಳ್ತಾನೆ ಅಂತ ಏನು ಗ್ಯಾರಂಟಿ ?''

''ಅಪ್ಪಾ ಏನಪ್ಪಾ ನಿಮ್ಮ ಮಾತು ? ಎಲ್ಲರೂ ತುಂಬಾ ಒಳ್ಳೆಯವರು.''

''ಎಲ್ಲರ ಒಳ್ಳೆತನ ಬದಲಾಯಿಸೋಕ್ಕೆ ಎಷ್ಟು ಹೊತ್ತು ಬೇಕು ?''

''ದಯವಿಟ್ಟು ಇಂಥ ಮಾತುಗಳನ್ನಾಡಬೇಡಿ.''

''ನನ್ನ ಮಾತು ನಿನಗೆ ಅರ್ಥವಾಗುಲ್ಲ. ಒಮ್ಮೆ ಮೋಸ ಹೋದರೂ ಬುದ್ಧಿ ಬರಲಿಲ್ಲವಲ್ಲ ನಿನಗೆ ?''

''ಆ ಮನುಷ್ಯನಂತೆ ನೀಚರಲ್ಲ ಇವರು....''

''ಅಧಿಕಾರ ಕೈಗೆ ಬಂದ ಕೂಡಲೇ ನೀಚರಾಗುಕ್ಕೆ ಸಮಯ ಬೇಕಾಗುಲ್ಲ ತಾಯೀ... ನೀನು ಈಗಲಿಂದ ಹುಷಾರಾಗಿರಬೇಕು.''

''ಹಾಗೆಲ್ಲಾ ಏನೂ ಆಗುಲ್ಲ. ಪೃಥ್ವಿ ತುಂಬಾ ಒಳ್ಳೆಯ ಹುಡುಗ... ನಮ್ಮ ವಿಶ್ವನಿಗಿಂತ ತುಂಬಾ ಒಳ್ಳೆಯವನು. ನೀವು ಇಲ್ಲದ್ದನ್ನೆಲ್ಲಾ ಆಡಿ ನನ್ನ ತಲೆ ಕೆಡಿಸಬೇಡಿ. ದಯವಿಟ್ಟು ಎದ್ದು ಹೋಗಿ....''

''ಹೋಗ್ತೀನಿ... ಆದರೆ ನನ್ನ ಮಾತುಗಳನ್ನು ನೆನಪಿನಲ್ಲಿಟ್ಕೋ... ಆ ಮುಠ್ಠಾಳ ನಿನಗೆ ಕೈ ಕೊಟ್ಟು ಹೋದ... ವಿಶ್ವನ್ನ ಮುಂದೆ ತರುವ ಆಸೆಯಿಂದ ಇಲ್ಲಿಗೆ ಬಂದು ಸೇರಿಕೊಂಡೆ... ಈಗ ಇವನೂ ನೆಗೆದಬಿದ್ದ... ಇಲ್ಲಿಂದ ಎಲ್ಲಿಗೆ ಹೋಗ್ತೀಯಾ ? ನಿನಗೇನು ಆಸ್ತಿಯೇ ಪಾಸ್ತಿಯೇ ? ಮನೆಯೇ ಮಠವೇ... ? ಎಲ್ಲಾ ಆ ಹುಡುಗನದು...''

''ಅಪ್ಪಾ... ಸುಮ್ಮನಾಗಿ ಯಾರಾದ್ರೂ ಕೇಳಿಸ್ಕೊಂಡ್ರೆ ಏನಂದು ಕೊಂಡಾರು ? ಇವರೆಲ್ಲಾ ನನ್ನವರೇ... ನನಗೆ ಮೋಸ ಮಾಡುವ ಆಲೋಚನೆ

ಯಾರಿಗೂ ಇಲ್ಲ. ಒಂದು ವೇಳೆ ಹಾಗಾದರೂ ನಾನು ನಿಮ್ಮ ಮನೆಯ ಬಾಗಿಲಿಗೆ ಖಂಡಿತಾ ಬರುವುದಿಲ್ಲ... ತಿಳೀತೆ ?'' ಬಿಕ್ಕುತ್ತಾ ನುಡಿದಳು.

''ತಿರುಪೆ ಬೇಡು... ನನಗೇನಂತೆ ?'' ಎಂದು ಕೋಪದಿಂದ ನುಡಿದು ಶ್ರೀಕಂಠಯ್ಯ ಹೊರಗೆ ಬಂದರು. ಎದುರಿಗೆ ಸುಬ್ಬರಾಯರು ನಿಂತಿದ್ದರು. ದುರುದುರನೆ ಅವರನ್ನೇ ನೋಡಿದರು.

''ನೀವು ಎಂಥಾ ಮನುಷ್ಯರು ಅಂತ ನನಗೀಗ ಚೆನ್ನಾಗಿ ಅರ್ಥವಾಯ್ತು. ನಿಮ್ಮ ಮೈಯಲ್ಲಿ ಸ್ವಾರ್ಥದ ವಿಷ ತುಂಬಿದೆ. ಯಾರನ್ನೂ ಸುಖವಾಗಿರಲು ಬಿಡೋರಲ್ಲ ನೀವು. ನಮ್ಮ ದುಃಖವೇ ನಮಗೆ ಸಾಕಾಗಿದೆ. ನೀವು ಗಾಯಕ್ಕೆ ಉಪ್ಪು ಹಾಕಿ ಉರಿ ಹೆಚ್ಚು ಮಾಡಲು ಬಂದಿರುವಂತಿದೆ. ದಯವಿಟ್ಟು ಇಲ್ಲಿಂದ ಹೊರಟು ಹೋಗಿ....''

''ಈಗ ಹೋಗ್ತೀನಿ... ಆದರೆ ಮತ್ತೆ ಬರ್ತೀನಿ. ಇಲ್ಲಿ ತೊಂದರೆಗೆ ಸಿಕ್ಕಿ ಬೀಳುವವಳು ನನ್ನ ಮಗಳು ತಿಳೀತೇ ?''

''ನನಗೆಲ್ಲಾ ಗೊತ್ತು. ನೀವೀಗ ಹೋಗಿ...'' ಎಂದು ಬಲವಂತವಾಗಿ ಅವರನ್ನು ಆಚೆಗೆ ಕಳಿಸಿ ಒಳಗೆ ಬಂದಾಗ ಪೃಥ್ವಿ ಎದುರಾದ.

''ತಾತಾ ಅವರು ಯಾರು ? ಅದೇನು ಗಲಾಟೆ ?''

''ಏನಿಲ್ಲ ಮಗು... ಇನ್ನೊಂದು ದಿನ ನಿಧಾನವಾಗಿ ಎಲ್ಲಾ ಹೇಳ್ತೀನಿ....'' ಪೃಥ್ವಿಯ ಕೆನ್ನೆ ಸವರಿದರು.

ನಾಗೇಶನ ಕರ್ಮಾಂತರಗಳನ್ನೆಲ್ಲ ಪೃಥ್ವಿ ಶ್ರದ್ಧೆಯಿಂದ ಮಾಡಿದ. ತಂದೆಯ ಬಗ್ಗೆಯೇ ಚಿಂತಿಸುತ್ತಿದ್ದವನಿಗೆ ಆ ದಿನ ಬಂದಿದ್ದ ವ್ಯಕ್ತಿ ನೆನಪಿಗೆ ಬಂದರು. ತಕ್ಷಣವೇ ತಾತನ ಬಳಿಗೆ ಬಂದ.

''ತಾತಾ ಆದಿನ ಯಾರೋ ಒಬ್ಬರು ಬಂದಿದ್ರು... ಆಮೇಲೆ ಹೇಳ್ತೀನಿ ಅಂತ ಅಂದಿದ್ರಿ... ಅವರು ಯಾರು ?''

''ಯಾರೋ ಹೋಗಲಿ ಬಿಡು... ಆತ ಮತ್ತೆ ಬರುವುದಿಲ್ಲ''

''ಹೇಳಲೇ ಬೇಕು... ನಾನೀಗ ಮೆಜಾರಿಟಿಗೆ ಬಂದಿದೀನಿ.... ನನಗೆ ಎಲ್ಲಾ ಕೇಳಿ ತಿಳಿದುಕೊಳ್ಳುವ ಹಕ್ಕಿದೆ.''

''ನಿಜ ಪೃಥ್ವಿ... ನಿನಗೇ ಎಲ್ಲಾ ಹಕ್ಕುಗಳು ಇರುವುದು... ಹಾಗೇ ಈಗ ನಿನ್ನ ಜವಾಬ್ದಾರಿ ಸಹ ಹೆಚ್ಚಿದೆ. ಕಂಪೆನಿಯ ವ್ಯವಹಾರಗಳನ್ನು, ಮನೆಯ

ಆಗುಹೋಗುಗಳನ್ನು ನೀನು ನಿನ್ನ ತಾಯಿ ಇಬ್ಬರೂ ಸೇರಿ ನೋಡಿ ಕೊಳ್ಳಬೇಕು... ನನಗೂ ವಯಸ್ಸಾಯಿತಲ್ಲವೇ... ನನ್ನದೇನು ಗ್ಯಾರಂಟಿ? ನಾನು ಸರಿಯಾಗಿರುವಾಗಲೇ ನಿನಗೆ ಕೆಲವು ವಿಷಯಗಳನ್ನು ತಿಳಿಸಿಬಿಡಬೇಕು...'' ಇಲ್ಲದಿದ್ದರೆ ಮುಂದೆ ಏನೇನು ಎದುರಿಸ ಬೇಕಾಗುತ್ತದೋ ಎಂದುಕೊಂಡು ಅವನನ್ನು ತಮ್ಮೊಡನೆ ಕೂರಿಸಿಕೊಂಡು ನುಡಿದರು.

''ಆತ... ನಳಿನಿಯ ತಂದೆ. ಆತನಿಗೆ ಅತೀ ದುರಾಸೆ. ಮಗಳ ಶ್ರೀಮಂತಿಕೆಯ ಮೇಲೆ ಕಣ್ಣು. ಈಗ ಏನೋ ಅನುಮಾನ. ನಳಿನಿಯ ತಲೆ ಕೆಡಿಸಲು ನೋಡುತ್ತಾನೆ. ನಾವು ನಳಿನಿಗೆ ಅವಳ ಮಕ್ಕಳಿಗೆ ಏನೋ ಮೋಸ ಮಾಡಿಬಿಡುತ್ತೇವೆ ಅನ್ನೋ ತರಹ ಮಾತನಾಡಿದ. ಆ ಮನುಷ್ಯ ಸರಿಯಿಲ್ಲ.''

ಪೃಥ್ವಿಯ ಮನಸ್ಸು ಕಲಕಿ ಹೋಯಿತು. ಆ ಮನುಷ್ಯನ ಅನುಮಾನ ಪರಿಹಾರವಾಗಲು ತಾನೇನು ಮಾಡಬೇಕು ಎಂದು ಯೋಚಿಸಿ ಒಂದು ತೀರ್ಮಾನಕ್ಕೆ ಬಂದ. ''ತಾತಾ.... ಅಪ್ಪ ಸತ್ತು ಕೆಲವೇ ತಿಂಗಳುಗಳು ಕಳೆದಿವೆ. ಆದರೂ ನಾನು ಈಗ ಒಂದು ಇತ್ಯರ್ಥ ಮಾಡಲೇಬೇಕು. ಎಲ್ಲಾ ಆಸ್ತಿಯನ್ನೂ ಚಿಕ್ಕಮ್ಮನ ಹೆಸರಿಗೆ ಬರೆಸಿಬಿಡಿ. ಆಗ ಯಾವ ಹಗರಣವೂ ಆಗುವುದಿಲ್ಲ.''

''ಅದೆಲ್ಲಾ ಏನೂ ಬೇಡ... ನಮ್ಮ ಬಗ್ಗೆ ನಮಗೆ ನಂಬಿಕೆ ಇದೆಯಲ್ಲ ಅಷ್ಟೇ ಸಾಕು... ನಳಿನಿ ಒಳ್ಳೆಯವಳು...''

''ಹೌದು, ಚಿಕ್ಕಮ್ಮ ಒಳ್ಳೆಯವರೇ ಆದರೂ ನಮ್ಮ ಬಗ್ಗೆ ತಪ್ಪು ತಿಳಿದುಕೊಳ್ಳುವಂತಾಗಬಾರದು.''

''ಹಾಗೆಲ್ಲಾ ಏನೂ ಆಗೊಲ್ಲ. ನೀನು ಇನ್ನೂ ಚಿಕ್ಕವನು. ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳಬೇಡ. ಮೊದಲು ನಿನ್ನ ವ್ಯಾಸಂಗ ಮುಗಿಯಲಿ...'' ಎಂದು ಹೇಳಿ ಮಾತು ಮುಗಿಸಿದರೂ, ಆ ನಂತರ ತಾವು ಆ ಕುರಿತು ಚಿಂತಿಸಿದ್ದರು.

'ಹೇಗೂ ಕಂಪನಿಯ ಆಡಳಿತವೆಲ್ಲಾ ಈಗ ಅವಳ ಕೈಯಲ್ಲಿದೆ. ಅದೆಲ್ಲಾ ಅವಳಿಗೇ ಇರಲಿ. ಇನ್ನು ಈ ಮನೆ.... ಈ ಮನೆ ತಮ್ಮ ಹೆಸರಿನಲ್ಲಿದೆ. ಈ ಮನೆ ಹಾಗೂ ನನ್ನ ಅಕೌಂಟ್‌ನಲ್ಲಿರೋ ಹಣವೆಲ್ಲಾ ಪೃಥ್ವಿಗೆ ಸೇರಬೇಕು. ನಾಗೇಶನ ಹೆಸರಿನಲ್ಲಿರುವ ಹಣವೆಲ್ಲಾ ನಳಿನಿಗೆ ಸೇರಬೇಕು. ಅಜಯ-ವಿಜಯರು ಮೆಜಾರಿಟಿಗೆ ಬರುವ ತನಕ ಎಲ್ಲಾ ವಹಿವಾಟನ್ನು ನಳಿನಿ ಹಾಗೂ ಪೃಥ್ವಿ ಒಂದಾಗಿ ನೋಡಿಕೊಳ್ಳಬೇಕು. ಅದೇ ನ್ಯಾಯ... ನಳಿನಿ, ಪೃಥ್ವಿ

ಒಗ್ಗಟ್ಟಾಗಿದ್ದರೆ ಯಾರೂ ಏನೂ ಮಾಡಲಾಗುವುದಿಲ್ಲ' ಎಂದುಕೊಂಡು ಅದೇ ರೀತಿ ಉಯಿಲನ್ನು ಬರೆಸಬೇಕೆಂದು ತೀರ್ಮಾನಿಸಿದರು.

ಅದರಂತೆ ಲಾಯರನ್ನು ಕರೆಸಿ ಮಾತನಾಡಿ ಸಮಸ್ತ ಆಸ್ತಿಯ ವಿವರಗಳನ್ನೆಲ್ಲಾ ಕೊಟ್ಟು ಉಯಿಲನ್ನು ಬರೆಸಿದರು. ನಾಗೇಶನ ಹೆಸರಿನಲ್ಲಿದ್ದ ಕಂಪೆನಿಗಳು, ಶೇರ್ಸ್, ಬ್ಯಾಂಕಿನ ಹಣವೆಲ್ಲಾ ನಳಿನಿಗೆ ಸೇರತಕ್ಕದ್ದು.... ನನ್ನ ಹೆಸರಿನಲ್ಲಿರುವ ಈ ಮನೆ, ನನ್ನ ಅಕೌಂಟ್ ಹಣ ಮಾತ್ರ ಪೃಥ್ವಿಗೆ ಸೇರಬೇಕೆಂದು ವಿಶದವಾಗಿ ಬರೆಸಿದರು. ನಂತರ ಆ ಉಯಿಲನ್ನು ರಿಜಿಸ್ಟರ್ ಮಾಡಿಸಿ ಬ್ಯಾಂಕಿನ ಲಾಕರೊಂದರಲ್ಲಿ ಭದ್ರವಾಗಿಟ್ಟರು.

ಹಾಗೇ ನಳಿನಿಯ ತಂದೆಗೆಂದು ತಾವು ಕೊಡಿಸಿದ್ದ ಮನೆಯ ಹಾಗೂ ತಾವು ಪ್ರತಿತಿಂಗಳೂ ಕೊಡುತ್ತಿದ್ದ ಹಣದ ವಿವರಗಳನ್ನೆಲ್ಲ ಒಂದು ಡೈರಿಯಲ್ಲಿ ಬರೆದು ಅದನ್ನು ಲಾಕರಿನಲ್ಲಿಟ್ಟರು. ಅಲ್ಲಿಗೆ ಏನೋ ಸಮಾಧಾನವಾದಂತಾಗಿತ್ತು. ಯಾರಿಗೂ ಆ ವಿಷಯಗಳನ್ನು ತಿಳಿಸಲಿಲ್ಲ. ಆದರೆ ತಾವು ಒಮ್ಮೆ ಶ್ರೀಕಂಠಯ್ಯನನ್ನು ಕಂಡು, ತಾವಾಗಿಯೇ ಈ ವಿಷಯಗಳನ್ನು ಹೇಳಿಬಿಡಬೇಕು ಎಂದುಕೊಂಡು, ಆತನಿಗೆ ಹೇಳಿಕಳಿಸಿದರು. ಆದರೆ ಆತ ಆ ಮನೆಯಲ್ಲಿ ವಾಸವಾಗಿಲ್ಲ ಎನ್ನುವ ವಿಷಯ ತಿಳಿಯಿತು. ಏನೋ ಅನುಮಾನ ಬಂದು, ತಾವೇ ಖುದ್ದಾಗಿ ವಿಚಾರಿಸಿದಾಗ ಶ್ರೀಕಂಠಯ್ಯ ಮಾಡಿದ್ದು ತಿಳಿಯಿತು.

ಕೆಲವೇ ದಿನಗಳ ಹಿಂದೆ, ಆತ ಯಾರಿಗೂ ತಿಳಿಸದೇ, ತಮ್ಮ ಹೆಸರಿನಲ್ಲಿದ್ದ ಆ ಮನೆಯನ್ನು ಮಾರಿ, ಬ್ಯಾಂಕಿನಲ್ಲಿ ಜಮಾ ಆಗಿದ್ದ ತಮ್ಮ ಹಣವನ್ನೆಲ್ಲಾ ತೆಗೆದುಕೊಂಡು ಆ ಊರನ್ನೇ ಬಿಟ್ಟು ಪರಾರಿಯಾಗಿದ್ದರು. ಎಲ್ಲಾ ಹಣವನ್ನೂ ನಳಿನಿಯ ಹೆಸರಿಗೆ ವರ್ಗಾಯಿಸಿರಬಹುದೇ ಎಂಬ ಅನುಮಾನ ಬಂದರೂ ಅದನ್ನು ನಂಬುವುದು ಕಷ್ಟವೇ...? ನಳಿನಿಯನ್ನು ಕೇಳುವಂತಿಲ್ಲ. ನಳಿನಿಗಾಗಿ ತಾವು ಆ ಒಪ್ಪಂದವನ್ನು ಒಪ್ಪಿಕೊಂಡಿದ್ದರು. ಆತ ತಮಗೆ ತಿಳಿಸದೇ ಹೀಗೆ ಮಾಡಿದ್ದು ತಪ್ಪು... ಪೋಲೀಸ್ ಕಂಪ್ಲೆಂಟ್ ಕೊಟ್ಟರೇ... ಎಂಬ ಉಪಾಯ ಹೊಳೆಯಿತಾದರೂ ಅದನ್ನು ಕಾರ್ಯಗತ ಮಾಡಲು ಹೆದರಿದರು. ಎಲ್ಲರಿಗೂ ಈ ವಿಷಯ ಬಹಿರಂಗವಾಗುತ್ತದೆ. ಈ ವಿಷಯ ಸಧ್ಯಕ್ಕೆ ಯಾರಿಗೂ ತಿಳಿಯಕೂಡದು ಎಂದುಕೊಂಡರು.

ತಮಗೆ ತಿಳಿಯದಂತೆ ಶ್ರೀಕಂಠಯ್ಯ ಮಗಳನ್ನು ಭೇಟಿಯಾಗಿರಬಹುದೇ... ನಳಿನಿ ತಮಗೆ ಏನನ್ನೂ ಹೇಳಿಲ್ಲ... ಅವಳಾಗಿಯೇ

ಹೇಳುವಳೇನೋ ಎಂದು ಕೆಲವು ದಿನ ಕಾದರು. ದಿನಗಳು ಉರುಳಿದಂತೆ ತನಗೆ ತಾನೇ ಸಮಾಧಾನ ಹೇಳಿಕೊಂಡು ಕಂಪೆನಿಯ ಬಿಸಿನೆಸ್ ವ್ಯವಹಾರಗಳನ್ನು ನೋಡಿಕೊಳ್ಳಲಾರಂಭಿಸಿದಳು. ಆನಂತರ ಒಂದು ದಿನ ಸುಬ್ಬರಾಯಪ್ಪ ನಳಿನಿಯೊಡನೆ ಮಾತನಾಡಲೆಂದು ಆಫೀಸಿಗೆ ಬಂದರು. ಇದ್ದಕ್ಕಿದ್ದಂತೆ, ಮಾವನವರು ಆಫೀಸಿಗೆ ಅವಳಿಗೆ ಮುಜುಗರವನ್ನುಂಟು ಮಾಡಿತ್ತು. ಎಷ್ಟೋ ವರ್ಷಗಳಿಂದ ಆಫೀಸಿನ ಕಡೆ ಬರದಿದ್ದವರು... ಇಂದು ಬಂದಿರಬೇಕಾದರೆ ಅವರಿಗೆ ನನ್ನ ಮೇಲೆ ನಂಬಿಕೆ ಇಲ್ಲವೇ ಎಂಬ ಅನುಮಾನ ಕಾಡಿತು. ಆದರೂ ಮರ್ಯಾದೆಯಿಂದ ಒಳಗೆ ಬರಮಾಡಿಕೊಂಡಳು.

''ಎಲ್ಲಾ ಹೇಗೆ ನಿಬಾಯಿಸ್ತಿದೀಯಮ್ಮಾ... ಇನ್ನೆರಡು ವರ್ಷ ಕಳೀಲಿ. ಪೃಥ್ವಿಯ ಕೋರ್ಸು ಮುಗಿಯುತ್ತದೆ. ಆಗ ನಿನಗೆ ಸಹಾಯಕನಾಗುತ್ತಾನೆ. ಅಲ್ಲೀವರೆಗೂ ಸ್ವಲ್ಪ ಕಷ್ಟ... ನಿನಗೆ ತುಂಬಾ ಕಷ್ಟವಾಗುವುದಾದರೆ, ಯಾರಾದರೂ ಒಬ್ಬ ಮ್ಯಾನೇಜರ್‌ನನ್ನು ನೇಮಕ ಮಾಡಿಕೊಳ್ಳೋಣ.''

''ನಾನೂ ಅದನ್ನೇ ಯೋಚಿಸುತ್ತಿದ್ದೆ. ಪೇಪರಿನಲ್ಲಿ ಪ್ರಕಟಣೆ ಹಾಕಿಸೋಣವಾ ?''

''ಹುಂ, ಹಾಗೇ ಮಾಡು. ಓದಿರುವ, ಅನುಭವವಿರುವ ಹಾಗೂ ನಂಬಿಕಸ್ಥ ಮನುಷ್ಯನಾಗಿರಬೇಕು. ಇಲ್ಲದಿದ್ದರೆ........ ನಾಗೇಶ ಗಳಿಸಿದ್ದೆಲ್ಲಾ ಕಳೆದುಹೋಗುವ ಸಾಧ್ಯತೆ ಇರುತ್ತದೆ.''

''ಹೌದು ಮಾವಯ್ಯ... ನನಗೂ ಅದೇ ದಿಗಿಲು''

''ನನ್ನ ನಂತರ, ಈ ಕಂಪೆನಿಗಾಗಿ ಶ್ರಮಿಸಿ ಬೇಕಾದಷ್ಟು ಗಳಿಸಿ, ಉಳಿಸಿದವನು, ನಮ್ಮ ನಾಗೇಶ... ಇನ್ನು ಮುಂದೆ ಎಲ್ಲಾ ಅವನ ಮಕ್ಕಳಿಗೇ ದೊರಕಬೇಕು.''

ಮಾವನ ಮನಸ್ಸಿನಲ್ಲಿ ಏನಿರಬಹುದು ಎಂದು ಚಿಂತಿಸತೊಡಗಿದಳು.

''ಪೃಥ್ವಿ ಈ ಮನೆಗೆ ಹಿರಿಯ ಮಗ. ಚಿಕ್ಕವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡವನು. ಅವನಿಗೆ ತಂದೆಯ ಪ್ರೀತಿ ಸಹ ಹೆಚ್ಚಿಗೆ ಸಿಗಲಿಲ್ಲ. ಅವನಿನ್ನೂ ಮೆಜಾರಿಟಿಗೆ ಬಂದಿಲ್ಲ. ಆದರೆ ಅವನ ಜವಾಬ್ದಾರಿ ಹೆಚ್ಚಿದೆ ತಾಯಿ... ಆದರೆ....''

''ನೀವು ಏನೋ ಸಂದೇಹವಿಟ್ಟುಕೊಂಡು ಮಾತಾಡ್ತಿದೀರಿ ಮಾವಯ್ಯ ಅವನು ಬೇರೆ, ಅಜಯ ವಿಜಯರು ಬೇರೆ ಅಂತ ನಾನೆಂದೂ ಭಾವಿಸಿಲ್ಲ.

ಅವನು ನನ್ನ ಹಿರಿಯ ಮಗ. ಈಗ ಅವನ ಜವಾಬ್ದಾರಿ ಸಹ ನನಗೆ ಸೇರಿದ್ದು... ನೀವು ಆತಂಕಪಟ್ಟುಕೋ ಬೇಡಿ...''

''ಹಾಗಲ್ಲ ಅವನು ತುಂಬಾ ಸೂಕ್ಷ್ಮ... ಹೆಚ್ಚಿಗೆ ಬೇಜಾರಾದರೆ... ಎಲ್ಲಿ ದೇಶಾಂತರ ಹೊರಟು ಹೋಗ್ತಾನೋ ಅಂತ ಆತಂಕವಾಗುತ್ತೆ. ಹಾಗಾಗದಂತೆ ನೋಡಿಕೋ ತಾಯಿ.....''

''ನೀವು ಆತಂಕ ಪಡಬೇಡಿ ಹಾಗೇನೂ ಆಗದಂತೆ ಅವನನ್ನು ಚೆನ್ನಾಗಿ ನೋಡಿಕೊಳ್ತೀನಿ. ನಾನು ಭರವಸೆ ಕೊಡ್ತೀನಿ.''

''ನನಗೆ ನಿನ್ನ ಮೇಲೆ ಪೂರ್ಣ ನಂಬಿಕೆ ಇದೆ ತಾಯೀ...''

ನಮ್ಮ ಮನೆಯ ವಿಷಯದಲ್ಲಿ ಹೊರಗಿನವರು ಯಾರೂ ಕೈ ಬಾಯಿ ಹಾಕಲು ನಾನು ಆಸ್ಪದ ಕೊಡವುದಿಲ್ಲ ನೀವು ನಿಶ್ಚಿಂತೆಯಾಗಿರಿ ಎಂದು ಅವಳು ಒತ್ತಿ ಹೇಳಿದ ಮೇಲೇ ಅವರಿಗೆ ನೆಮ್ಮದಿ... ನಳಿನಿ ಒಳ್ಳೆಯವಳೇ... ಅವಳ ತಂದೆಯ ಮೇಲೆ ಚಾಡಿ ಹೇಳಿ, ಅವಳ ಮನಸ್ಸನ್ನೂ ಕೆಡಿಸಬಾರದು ಎಂದು ತಡೆದುಕೊಂಡಿದ್ದರು. ಆದರೂ ಮುಂದೆ ಎಂದಾದರೂ ಅವಳಿಗೆ ನಿಜಾಂಶ ತಿಳಿದೇ ತಿಳಿಯುತ್ತದೆ ಎಂದು ತಮಗೆ ತಾವೇ ಹೇಳಿಕೊಂಡು ಎದ್ದು ಹೊರಟರು.

ಈಗ ಕಾಲ ಅತೀ ನಿದಾನವಾಗಿ ಸರಿಯುತ್ತಿವೆ ಅಂತೆನ್ನಿಸುತ್ತಿತ್ತು. ಪೃಥ್ವಿಯ ವಿದ್ಯಾಭ್ಯಾಸ ಇನ್ನೂ ಒಂದು ಘಟ್ಟವನ್ನೂ ತಲುಪಿಲ್ಲ. ಅವನಿಂದ ಈಗ ಕೆಲಸಕಾರ್ಯಗಳಲ್ಲಿ ಸಹಾಯವನ್ನು ಅಪೇಕ್ಷಿಸುವುದು ಸರಿಯಲ್ಲ. ತನ್ನ ಮಕ್ಕಳೋ ಇನ್ನೂ ಹಸುಳೆಗಳು ! ಹೀಗೆ ಅನ್ನಿಸಿದಾಗಲೆಲ್ಲಾ ವಿಶ್ವನ ನೆನಪು ಪದೇ ಪದೇ ಬರುತ್ತಿತ್ತು. ಎಲ್ಲಿದಾನೋ...? ಹೇಗಿದಾನೋ... ಏನು ಮಾಡಿಕೊಂಡಿದಾನೋ... ಅವನನ್ನು ಹುಡುಕಿಸಿ ಕರೆಸಿಟ್ಟುಕೊಂಡರೆ ತನಗೂ ಸಹಾಯಕನಾಗುತ್ತಾನೆ.... ತನಗೂ ತನ್ನ ಮಗನ ಕೈ ಬಿಡಲಿಲ್ಲವೆಂಬ ನೆಮ್ಮದಿ ಸಿಗುತ್ತದೆ... ಆದರೆ ತನಗೆ ಅವನ ವಿಳಾಸ ತಿಳಿಯದು.. ಇದುವರೆವಿಗೂ ಅವನನ್ನು ಹುಡುಕಿಸದೇ ತಾನು ತಪ್ಪು ಮಾಡಿದೆ ಅಂದುಕೊಂಡಳು.

* * * *

ಒಂದು ದಿನ ಇದ್ದಕ್ಕಿದ್ದಂತೆ, ನಳಿನಿಯ ತಂದೆ ಅವಳನ್ನು ಅವಳ ಆಫೀಸಿನಲ್ಲೇ ಭೇಟಿಯಾದರು. ಅವಳು ಅವರ ಬರವನ್ನು ನಿರೀಕ್ಷಿಸಿರ

ಲಿಲ್ಲವಾದರೂ ಅವರು ಬಂದುದು ಒಳ್ಳೇದೇ ಆಯ್ತು ಎಂದುಕೊಂಡು ವಿಶ್ವನ ಬಗ್ಗೆ ಪ್ರಶ್ನಿಸಿದಳು. ಅವರು ಸರಿಯಾಗಿ ಉತ್ತರಿಸಲಿಲ್ಲ.

''ನೀವು ಅವನನ್ನು ಚೆನ್ನಾಗಿ ನೋಡಿಕೊಳ್ಳಲಿಲ್ಲ ಅಪ್ಪಾ... ಅದಕ್ಕೆ ಅವನು ಮನೆ ಬಿಟ್ಟು ಹೋದ'' ಆಕ್ಷೇಪಣೆ ಮಾಡಿದಳು.

''ಈಗ... ಇಷ್ಟು ವರ್ಷಗಳ ನಂತರ, ಅವನ ಚಿಂತೆ ಹೆಚ್ಚಾಗಿದೆಯಲ್ಲ. ಅವನ ಪಾಡಿಗೆ ಅವನು ಎಲ್ಲೋ ಇದಾನೆ... ಬಿಡು ಅತ್ಲಾಗೆ.''

''ಹಾಗಂದ್ರೆ ಹೇಗೆ... ನನಗೆ ಅವನನ್ನು ನೋಡಬೇಕೆನಿಸುತ್ತಿದೆ. ಅವನನ್ನು ಮೊದಲು ಹುಡುಕಿಸಿ.''

''ಅವನಿಗೆ ನಿನ್ನ ಮೇಲೆ ಕೋಪ... ಹುಡುಕಿಸಿದರೂ ಅವನು ನಿನ್ನನ್ನು ನೋಡೋಕೆ ಬರೋಲ್ಲ....''

''ಅವನು ಎಲ್ಲಿದಾನೆ ಅಂತ ಹುಡುಕಿಸಿ. ನಾನೇ ಹೋಗಿ ನೋಡಿ ಮಾತಾಡಿಸಿಕೊಂಡು ಬರ್ತೀವಿ'' ಶ್ರೀಕಂಠಯ್ಯ ಮೆಲ್ಲನೆ ನಕ್ಕರು.

''ನೀನು... ಅವನ ತಾಯಿಯಾಗಿಯೂ ಈ ಸುಖಕ್ಕಾಗಿ ಅವನನ್ನು ಬಿಟ್ಟು ಬರಲಿಲ್ಲವೇ ? ಅವನೀಗ ನೀನು ಕರೆದ್ರೂ ಬರುಲ್ಲ''

''ಏನಪ್ಪಾ ಈಗ ಹೀಗೆ ಮಾತನಾಡ್ತೀರಿ ? ಈ ಮದುವೆಗೆ ನನ್ನನ್ನು ಒಪ್ಪಿಸಿದವರೇ ನೀವು.... ನಿಮಗೆ, ವಿಶ್ವನಿಗೆ ಲಾಭವಾಗಲಿ ಅಂತ ನಾನು ಈ ಮದುವೆಗೆ ಒಪ್ಪಿಕೊಂಡೆ...'' ಅವಳಿಗೆ ದುಃಖವುಂಟಾಗಿತ್ತು.

''ಈಗ ಯಾಕೆ ಈ ಮಾತೆಲ್ಲಾ ? ನೀನು ಶ್ರೀಮಂತೆಯಾದೆ. ನಮ್ಮಿಂದ ದೂರ ಆದೆ... ಈಗ ಅತ್ತು ಏನು ಪ್ರಯೋಜನ ? ನೀನು ಸ್ವಾರ್ಥಿಯಾಗಿಬಿಟ್ಟೆ.''

''ನಾನಾಗಿ ಬಯಸಿ ಈ ಮದುವೆಯಾಗಲಿಲ್ಲ. ನಿಮ್ಮಗಳ ಅನುಕೂಲಕ್ಕೆ ಮದುವೆಯಾದೆ. ನೀವೇ ಆಗಾಗ ಬರಬಹುದಾಗಿತ್ತಲ್ಲ''

''ನಾನು ? ನಾನು ಹೇಗೆ ಬರುಕ್ಕಾಗುತ್ತಿತ್ತು ? ನಮ್ಮಿಬ್ಬರನ್ನು ನಿಮ್ಮ ಮನೆಯವರು ಸೇರಿಸುತ್ತಿರಲಿಲ್ಲ. ಎಂದಾದರೂ ನನ್ನ ಅಥವಾ ವಿಶ್ವನ ಬಗ್ಗೆ ನಿನ್ನನ್ನು ವಿಚಾರಿಸುತ್ತಿದ್ರಾ ? ಜ್ಞಾಪಿಸ್ಕೋ....''

ಈ ಮಾತು ನಿಜವೆಂದೆನಿಸಿತ್ತು. ಆದರೆ ಇದರಲ್ಲಿ ತಪ್ಪು ಯಾರದು ಎಂದು ತಿಳಿದಿರಲಿಲ್ಲ. ಈ ಮನೆಗೆ ಬಂದ ಹೊಸದರಲ್ಲಿ ಆ ಮನೆಯ ಶಿಸ್ತು

ಅಚ್ಚುಕಟ್ಟುಗಳನ್ನು ತನ್ನ ಮನೆಗೆ ಹೋಲಿಸಿಕೊಂಡಿದ್ದಳು. ಮನಸ್ಸು ಕುಗ್ಗಿತ್ತು. ಯೂನಿಫಾರಂ ಧರಿಸಿ ಶಿಸ್ತಿನಿಂದ ಸ್ಕೂಲಿಗೆ ಹೋಗಿಬರುತ್ತಿದ್ದ ಪೃಥ್ವಿಯನ್ನು ವಿಶ್ವನಿಗೆ ಹೋಲಿಸಿನೋಡಿದಾಗ, ವಿಶ್ವ ಅತೀ ಶೊಬಚ, ಈ ಪರಿಸರದಿಂದ ಅವನು ದೂರವಿರುವುದೇ ಸರಿ ಎಂದೆನಿಸಿತ್ತು. ಹೇಗೂ ತನ್ನ ಗಂಡ ಹಣದ ಸಹಾಯ ಒದಗಿಸುತ್ತಿದ್ದಾನೆ. ವಿಶ್ವ ಮೊದಲು ವಿದ್ಯಾವಂತನಾದರೆ ತಾನಾಗಿಯೇ ಎಲ್ಲ ಸರಿ ಹೋಗುತ್ತದೆ ಎಂದು ಭಾವಿಸಿದ್ದಳು. ಆದರೆ ಆದದ್ದೇ ಬೇರೆ....

''ನಿಮಗೆ ಹಣಕಾಸಿನ ತೊಂದರೆ ಇಲ್ಲದಿದ್ದರೂ ನೀವೇಕೆ ಹೀಗೆ ಮಾಡಿದ್ರಿ ? ಅಪ್ಪಾ...?''

''ನಾನು ಆಗ ಈಗ ಬರುತ್ತಿದ್ರೆ ಎಲ್ಲಾ ಸರಿ ಹೋಗುತ್ತಿತ್ತು. ಆದರೆ ಆದದ್ದೇ ಬೇರೆ... ನಿನ್ನ ಮನೆಯವರು, ನಿನ್ನನ್ನು ನಮ್ಮಿಂದ ದೂರ ಮಾಡಿಬಿಟ್ಟರು...'' ನಳಿನಿಯ ಮನಸ್ಸಿಗೆ ಕಹಿಯನ್ನು ತುಂಬಲು ನೋಡಿದರು.

''ಆಗ ಹಾಗೆ ಇದ್ದುದ್ದೇ ಸರಿ ಅಂತ ನನಗೂ ಅನ್ನಿಸುತ್ತಿತ್ತು ಅಪ್ಪಾ... ಆದರೆ... ಈಗ ನನಗೆ ವಿಶ್ವನ ಅಗತ್ಯವಿದೆ. ಅವನನ್ನು ದಯವಿಟ್ಟು ಹುಡುಕಿಸಿ, ನಿಮ್ಮ ವಿಳಾಸವನ್ನು ಕೊಡಿ... ನಾನೇ ನಿಮ್ಮನ್ನು ಬಂದು ಭೇಟಿ ಮಾಡ್ತೀನಿ'' ಶ್ರೀಕಂಠಯ್ಯ ಮತ್ತೆ ನಕ್ಕರು.

''ನನಗೇ ಅಂತ ಒಂದು ನಿರ್ದಿಷ್ಟವಾದ ವಿಳಾಸವಿಲ್ಲ... ನಾನು ಬರುವುದು ಬೇಡ ಅಂತ ನಿನಗೂ ಅನ್ನಿಸಿದರೆ ಹಾಗೇ ಹೇಳಿಬಿಡು... ಇನ್ನು ಮುಂದೆ ನಾನು ಇಲ್ಲಿಗೂ ಬರುವುದಿಲ್ಲ'' ಅವರ ವ್ಯಂಗ್ಯ ಅವಳಿಗೆ ಅರ್ಥವಾಯಿತು.

''ಈಗ ನೀವೂ ನನ್ನ ಕೈ ಬಿಟ್ಟರೆ ವಿಶ್ವನನ್ನು ಹುಡುಕಿ ಕೊಡುವವರು ಯಾರು ? ಎಷ್ಟೇ ಖರ್ಚಾದರೂ ಪರವಾಗಿಲ್ಲ... ನಾನು ಕೊಡ್ತೀನಿ''

''ಬಿಡು ನಳಿನಿ ಕಳೆದು ಹೋಗಿರುವ ಮಗನಿಗಾಗಿ ಯಾಕೆ ಖರ್ಚು ಮಾಡ್ತೀಯ ? ನಿನ್ನ ಮಾವನಿಗೆ ತಿಳಿದರೆ ಹಗರಣವಾದೀತು...''

''ಏನೂ ಹಗರಣವಾಗುವುದಿಲ್ಲ, ಅವರು ತುಂಬಾ ಒಳ್ಳೆಯವರು.''

''ಅಂದರೆ... ನಾನು ಕೆಟ್ಟವನು ಅಂತಲೇ ನಿನ್ನ ಅರ್ಥ ? ನೀನು ತುಂಬಾ ಸ್ವಾರ್ಥಿಯಾಗಿ ಬಿಟ್ಟೆ ನಳಿನಿ.''

''ಹೌದು... ನಾನು ಸ್ವಾರ್ಥಿ... ಆದರೆ ಹೇಳಿ ಅಪ್ಪ... ನೀನೂ ಸ್ವಾರ್ಥಿ

ಅಲ್ಲವೇ...?'' ಈ ಮಾತು ಅವರನ್ನು ಚುಚ್ಚಿತು. ಅವಳು ಹಾಗೇಕೆ ಹೇಳಿದಳೋ ಎಂದುಕೊಂಡು ನುಡಿದರು.

''ನಿನ್ನ ಒಳಿತಿಗಾಗಿಯೇ ನಾನು ಸ್ವಾರ್ಥಿ ಆದದ್ದು.... ಇಲ್ಲದಿದ್ದರೆ ನನಗೇನಾಗಬೇಕಾಗಿತ್ತು?'' ಅಪ್ಪನ ಈ ಮಾತು ಅವಳಿಗೆ ಹಿಡಿಸಲಿಲ್ಲ. ಅಪ್ಪನಿಗೆ ಹಣದ ವ್ಯಾಮೋಹ ಜಾಸ್ತಿ ಎನ್ನುವುದನ್ನು ಅರಿತಿದ್ದಳು. ತನ್ನ ಗಂಡ ಕಳಿಸುತ್ತಿದ್ದ ಹಣವನ್ನು ಅಪ್ಪ ಏನು ಮಾಡಿರಬಹುದು? ವಿಶ್ವನೂ ಜೊತೆಯಲ್ಲಿಲ್ಲದ ಮೇಲೆ ವೇತನದಂತೆ ಪ್ರತಿತಿಂಗಳೂ ಹಣವನ್ನು ಕಳಿಸುವ ಅವಶ್ಯಕತೆ ಏನು ? ಇನ್ನು ಮುಂದೆ ನಿಲ್ಲಿಸಿಬಿಡಬೇಕು ಎಂದು ನಿರ್ಧರಿಸಿದಳು.

ಶ್ರೀಕಂಠಯ್ಯ ಆಫೀಸಿಗೆ ಬಂದು ತಮ್ಮ ಮಗಳನ್ನು ಭೇಟಿಯಾಗಿ ಹೋದ ವಿಷಯ ಡ್ರೈವರ್ ನಂಜಪ್ಪನವರಿಂದ ಸುಬ್ಬರಾಯಪ್ಪನಿಗೆ ತಿಳಿಯಿತು. ಮನಸ್ಸಿಗೆ ಅಹಿತವೆನಿಸಿತು. ಏಕೆ ಬಂದಿರಬಹುದು ? ಏನು ಕೇಳಿರಬಹುದು ? ತಾನು ಕೊಟ್ಟ ಮನೆಯನ್ನು ಮಾರಿಕೊಂಡು ತಿಂದಿರುವುದು ಸಾಲದೆ ? ಪ್ರತಿ ತಿಂಗಳೂ ಬ್ಯಾಂಕಿನಲ್ಲಿ ಜಮಾ ಆಗುತ್ತಿದ್ದ ಹಣವನ್ನೇನು ಮಾಡಿದರೋ... ಕುದುರೆಯ ಬಾಲಕ್ಕೆ ಕಟ್ಟಿದರೋ... ಜೂಜಾಡಿ ಕಳೆದರೋ... ಈಗ ಮನುಷ್ಯನಿಗೆ ಮತ್ತೆ ಹಣ ಬೇಕಾಗಿ ಮಗಳನ್ನು ನೋಡಲು ಬಂದಿರಬಹುದೇ...? ನಳಿನಿ ಅವರ ಮಾತಿಗೆ ಸೋತು, ಅವರಿಬ್ಬರೂ ಒಂದಾಗಿ ಈ ಆಸ್ತಿಪಾಸ್ತಿಯನ್ನು ಕಬಳಿಸಿ ಬಿಟ್ಟರೇ... ಅವರ ಮೊಮ್ಮಗನೂ ಇದರಲ್ಲಿ ಶಾಮೀಲಾಗಿರಬಹುದು... ಅವರು ಬಂದು ಹೋದ ವಿಷಯವನ್ನು ನಳಿನಿ ನಮಗೇಕೆ ತಿಳಿಸಲಿಲ್ಲ? ತಾವು ಇದನ್ನು ಮುಂದುವರೆಯಲು ಬಿಡಬಾರದು... ಈ ಆಸ್ತಿಪಾಸ್ತಿಯೆಲ್ಲ ಕೇವಲ ನನ್ನ ಮೊಮ್ಮಕ್ಕಳಿಗೆ ಸೇರಬೇಕಾದುದು. ಇದು ಪರರ ಪಾಲಾಗಬಾರದು... ಈಗಲೇ ತಕ್ಕ ಬಂದೋಬಸ್ತು ಮಾಡಬೇಕು... ನಳಿನಿಯೊಡನೆ ಮಾತಾಡ ಬೇಕು... ಆದರೆ ನಳಿನಿಯ ಮನಸ್ಸಿನಲ್ಲಿ ಏನಿದೆಯೋ... ಅದನ್ನು ಮೊದಲು ತಿಳಿದುಕೊಳ್ಳಬೇಕೆಂದುಕೊಂಡರು.

ಪೃಥ್ವಿಯ ಪರೀಕ್ಷೆ ಮುಗಿದಿತ್ತು. ಅದಕ್ಕೇ ಕಾದಿದ್ದವರಂತೆ, ಸುಬ್ಬರಾಯಪ್ಪ ಅವನೊಡನೆ ಮಾತಾಡಿದರು. ''ನೀನಿನ್ನೂ ಚಿಕ್ಕವನು ನಿಜ.. ಆದರೆ ನಿನ್ನ ಜವಾಬ್ದಾರಿ ದೊಡ್ಡದು... ಇನ್ನು ಮುಂದೆ ನೀನು ಚಿಕ್ಕಮ್ಮನಿಗೆ ಕೆಲಸಕಾರ್ಯಗಳಲ್ಲಿ ಸಹಾಯ ಮಾಡಬೇಕು.'' ಅವನು ತಾತನನ್ನೇ ಮುಗ್ಧನಾಗಿ ನೋಡಿದ.

''ನನಗೆ ಇನ್ನೂ ಮುಂದೆ ಓದುವ ಆಸೆ ಇತ್ತು ತಾತಾ...''

''ನಿನ್ನ ಅಪ್ಪ ಬದುಕಿದ್ದಿದ್ದರೆ ನೀನೂ ಓದಬಹುದಾಗಿತ್ತು... ಆದರೆ ಈಗ ನಾನು ಮುದುಕ... ನಳಿನಿ ಹೆಂಗಸು... ಇಂಥ ಸಮಯದಲ್ಲಿ ಹೊರಗಿನವರಿಂದ ಮೋಸ ಆಗುವ ಸಾಧ್ಯತೆ ಇರುತ್ತದೆ... ಏನೂ ಅವ್ಯವಹಾರಗಳನ್ನು ನಡೆಯುದಂತೆ, ನೋಡಿಕೊಳ್ಳಬೇಕಾದುದು ನಿನ್ನ ಕರ್ತವ್ಯ...'' ಪೃಥ್ವಿಯ ಮನ ಮುದುಡಿದರೂ ತಾತನ ಮಾತನ್ನು ತೆಗೆದು ಹಾಕುವಂತಿರಲಿಲ್ಲ. ಅವರ ಮಾತಿಗೆ ಒಪ್ಪಿದ. ಅವರಿಗೆ ಸಂತೋಷವಾಗಿತ್ತು.

''ನೀನು ಈಗಲೇ ಹೋಗಿ ಚಿಕ್ಕಮ್ಮನೊಡನೆ ಮಾತನಾಡು'' ಅವನಿಗೆ ಸಂಕೋಚವಾಯಿತು. ತಾನಾಗಿಯೇ ಎಂದೂ ಚಿಕ್ಕಮ್ಮನೆದುರಿಗೆ ಹೋಗಿ ನಿಂತು ಮಾತನಾಡಿದವನಲ್ಲ. ಆದರೆ ತಾತನ ಮಾತಿಗೆ ಒಪ್ಪಿ ಊಟದ ಮನೆಗೆ ಬಂದ. ಚಿಕ್ಕಮ್ಮ ತಮ್ಮಂದಿರಿಗೆ ಊಟವನ್ನು ಬಡಿಸುತ್ತಿದ್ದಳು.

''ನನ್ನ ಪರೀಕ್ಷೆ ಮುಗಿದು... ನಾನೀಗ ಫ್ರೀಯಾಗಿದೀನಿ ಚಿಕ್ಕಮ್ಮ... ನಾನು ಕಂಪೆನಿಗೆ ಸೇರಿಕೊಳ್ಳೋಣ ಅಂತಿದೀನಿ...''

''ನಾನೇ ಈ ಸಲಹೆಯನ್ನು ಕೊಡೋಣ ಅಂತ ಅಂದುಕೊಂಡಿದ್ದೆ ಪೃಥ್ವಿ... ಆದರೆ ನಿನ್ನ ಮನಸ್ಸಿನಲ್ಲಿ ಏನಿದೆಯೋ ಅಂತ ಮುಜುಗರವಾಗಿತ್ತು. ಇನ್ನು ಮುಂದೆ ಒಂದೊಂದಾಗಿ ಎಲ್ಲವನ್ನು ನಿನಗೆ ವಹಿಸಿ ನಾನು ಹಾಯಾಗಿದ್ದು ಬಿಡ್ತೀನಿ'' ಆದರೆ ಈ ಮಾತು ಪೃಥ್ವಿಗೆ ಹಿಡಿಸಲಿಲ್ಲ. ನಳಿನಿ ಹೇಳಿದುದನ್ನು ತಾತನಿಗೆ ಹೇಳಿದ.

''ನಳಿನಿಯೂ ನಿನಗೆ ತಾಯೀನೇ ತಾನೇ... ಇದುವರೆಗೂ ಅವಳೇ ಎಲ್ಲಾ ನೋಡಿಕೊಂಡಿದ್ದಾಳೆ. ಅವಳನ್ನು ಸುಖವಾಗಿಟ್ಟುಕೊಳ್ಳುವುದು ಸಹ ನಿನ್ನ ಕರ್ತವ್ಯವೇ ತಾನೇ... ನೀನು ಈ ಮನೆಗೆ ಹಿರಿಯ ಮಗ... ನಿನ್ನ ಅಪ್ಪನ ಆತ್ಮಕ್ಕೆ ಶಾಂತಿ ಸಿಗುವಂತೆ ಎಲ್ಲವನ್ನೂ ನಿಭಾಯಿಸಬೇಕಾದುದು ನಿನ್ನ ಕರ್ತವ್ಯ. ಅದರಿಂದ ನಿನಗೇ ಶ್ರೇಯಸ್ಸು. ಇನ್ನು ಕೆಲವಾರು ವರ್ಷಗಳ ನಂತರ ನಿನ್ನ ತಮ್ಮಂದಿರೂ ನಿನ್ನ ಜತೆಗೂಡುತ್ತಾರೆ. ಆಗ ನಿನಗೂ ಎಷ್ಟೋ ಹಗುರವಾಗುತ್ತದೆ. ನೀನು ನಿನ್ನ ತಮ್ಮಂದಿರಿಗೆ ಮಾರ್ಗದರ್ಶನಾಗಬೇಕು, ಮಾದರಿಯಾಗಬೇಕು, ಆದರ್ಶನಾಗಬೇಕು... ಆಗಲೇ ನಿನ್ನ ಜೀವನ ಸಾರ್ಥಕಗೊಳ್ಳುತ್ತದೆ. ನಿನ್ನ ತಾಯಿತಂದೆಯರಿಗೆ ಹೆಮ್ಮೆ, ಗೌರವ ತರುವಂತಾಗಬೇಕು.''

ಪೃಥ್ವಿ ತಾತನ ಕೈ ಹಿಡಿದ. ''ನನಗೆ ನನ್ನ ಅಮ್ಮನ ನೆನಪಿಲ್ಲ. ತಂದೆಗಿಂತ ಹೆಚ್ಚಾಗಿ, ನಿಮ್ಮ ಜತೆ ಇದ್ದವನು ನಾನು. ನಿಮ್ಮ ಮಾತನ್ನು ಅಲ್ಲಗೆಳೆಯುವ ಧೈರ್ಯ ನನಗಿಲ್ಲ. ನೀವು ಹೇಳಿದಂತೆಯೇ ಆಗಲಿ.''

ಸುಬ್ಬರಾಯಮ್ಮ ಅಭಿಮಾನದಿಂದ ಮೊಮ್ಮಗನನ್ನು ತಬ್ಬಿಕೊಂಡರು. ನಾಗೇಶನ ನೆನಪಾಗಿತ್ತು. ಸಮ್ಮಿಶ್ರಭಾವನೆಗಳಿಂದ ಕಣ್ಣುಗಳಲ್ಲಿ ನೀರು ತುಂಬಿತ್ತು. ತಾತಾ.. ತಾತಾ.. ಎನ್ನುತ್ತಾ ಓಡಿ ಬಂದ ಅಜಯ-ವಿಜಯರನ್ನು ತಬ್ಬಿಕೊಂಡರು.

ಮೊದಲ ದಿನ ಠಾಕು ಠೀಕಾಗಿ ತನಗೆ ಒಪ್ಪುವಂತೆ, ಸೂಟು ಧರಿಸಿ ತಾತನಿಗೆ ನಮಸ್ಕರಿಸಿ ತಂದೆ ತಾಯಿಯರ ಫೋಟೋಗಳನ್ನೇ ಮುಟ್ಟಿ ಕಣ್ಣಿಗೊತ್ತಿಕೊಂಡು ಹೊರಟ. ನಂತರ ನೆನೆಸಿಕೊಂಡವನಂತೆ ಚಿಕ್ಕಮ್ಮನಿಗೂ ಬಾಗಿ ನಮಸ್ಕರಿಸಿದ. ಪೃಥ್ವಿಯ ಬಗ್ಗೆ ಹೆಮ್ಮೆ, ಅಭಿಮಾನ ಮೂಡಿತು. ಆ ಗಳಿಗೆಯಲ್ಲಿ ಅವಳಿಗೆ ಮತ್ತೆ ವಿಶ್ವನ ನೆನಪಾಗಿತ್ತು.

ಆಫೀಸಿನಲ್ಲಿ ಪೃಥ್ವಿಗೆ, ಮೊದಲ ದಿನದ ಸ್ವಾಗತಕ್ಕೆ ಭಾರಿ ಸಿದ್ಧತೆ ನಡೆದಿತ್ತು. ತಳಿರು ತೋರಣಗಳನ್ನು ಕಟ್ಟಿ ಆಫೀಸನ್ನು ಅಲಂಕರಿಸಿದ್ದರು. ಹಾರ ತುರಾಯಿಗಳನ್ನು ಹಿಡಿದು, ಅವನ ಬರುವಿಕೆಯನ್ನು ಕಾಯುತ್ತಾ ನಿಂತಿದ್ದರು. ಅವನು ಕಾರಿನಿಂದ ಇಳಿಯುತ್ತಿದ್ದಂತೆಯೇ ಮ್ಯಾನೇಜರ್ ಖುದ್ದಾಗಿ ಅವನ ಕೊರಳಿಗೆ ಹಾಕಿ ಶುಭಕೋರಿ ಅವನನ್ನು ಸ್ವಾಗತಿಸಿದರು. ಅಲ್ಲಿ ನೆರೆದಿದ್ದವರೆಲ್ಲ ಶುಭ ಹಾರೈಸಿ, ಅವನನ್ನು ಬರಮಾಡಿಕೊಂಡರು. ಪೃಥ್ವಿ ವಂದಿಸುತ್ತಾ ತನ್ನ ಛೇಂಬರಿನೊಳಗೆ ಅಡಿ ಇಟ್ಟ. ಭಾವೋದ್ವೇಗಗಳಿಂದ ಅವನು ಕೆಂಪಾಗಿದ್ದ. ಇವರೆಲ್ಲರೂ ತನ್ನವರು. ಇವರೆಲ್ಲರಂತೆ ತಾನೂ ಪ್ರೀತಿ ಆದರಗಳಿಂದ ಇವರನ್ನು ಗೌರವಿಸಬೇಕು ಎಂದುಕೊಳ್ಳುತ್ತಾ ತನಗಾಗಿ ಖಾಲಿಯಿದ್ದ ಕುರ್ಚಿಯ ಮೇಲೆ ಕುಳಿತ. ಅಂದಿನಿಂದ ಆ ಆಫೀಸು ಅವನದಾಯಿತು. ದಿನಚರಿ ಪ್ರಾರಂಭವಾಯಿತು. ಒಂದೊಂದಾಗಿ ಎಲ್ಲಾ ವ್ಯವಹಾರಗಳನ್ನು ಅರಿತು ಕೊಳ್ಳಲು ನಳಿನಿ ಹಾಗೂ ಆ ಹೊಸ ಮ್ಯಾನೇಜರ್ ಸಹಾಯಕರಾದರು. ಚಿಕ್ಕಮ್ಮ ಎಷ್ಟು ಛಾತಿವಂತೆ ಎಂದು ಚೆನ್ನಾಗಿ ಅರ್ಥವಾಗಿತ್ತು.

ಹಣಕಾಸಿನ ಫೈಲುಗಳನ್ನು ತೆಗೆದು ಪರಿಶೀಲಿಸುವಾಗ, ಪ್ರತಿ ತಿಂಗಳೂ ಶ್ರೀಕಂಠಯ್ಯ ಅನ್ನೋರ ಹೆಸರಿಗೆ ಎರಡು ಸಾವಿರ ರೂಗಳನ್ನು ಜಮಾ ಮಾಡುತ್ತಿರುವ ವಿಷಯ ತಿಳಿಯಿತು. ಈ ಶ್ರೀಕಂಠಯ್ಯ ಯಾರು ? ಸುಮಾರು ಹತ್ತುವರ್ಷಳಿಂದ ಅವರಿಗೆ ಪ್ರತಿ ತಿಂಗಳೂ ಯಾಕೆ ಹಣವನ್ನು ಕೊಟ್ಟಿರಬಹುದು ? ಅವರು ಕಂಪೆನಿಯ ಕೆಲಸಗಾರರಲ್ಲಿ ಒಬ್ಬರಲ್ಲ ಎನ್ನುವುದು ತಿಳಿದಿತ್ತು. ಕ್ಯಾಷಿಯರ್‌ನನ್ನು ಕರೆಸಿ ವಿಚಾರಿಸಿದಾಗ ''ತಾವು ಎಂದೂ ಆ

ಮನುಷ್ಯನನ್ನು ನೋಡಿಲ್ಲವೆಂದೂ ಅವರ ವಿಳಾಸ ಸಹ ತಿಳಿಯದು'' ಎಂದು ನುಡಿದರು. ಯಾರಾದರೂ ತಂದೆಯ ಹಳೆಯ ಸ್ನೇಹಿತರಿರಬಹುದೇ... ತಾನೊಮ್ಮೆ ಅವರನ್ನು ನೋಡಲೇಬೇಕು ಎಂದುಕೊಂಡ. ಆದರೆ ಎಲ್ಲಿ ಯಾವಾಗ? ಎಂದು ತಿಳಿಯದಾಗಿತ್ತು. ತಾತನಿಗೆ ಈ ವಿಷಯ ತಿಳಿದಿರಬಹುದು ಎಂದುಕೊಂಡು ಅವರನ್ನು ಕೇಳಿದ.

''ಈ ಶ್ರೀಕಂಠಯ್ಯ ಅನ್ನೋರು ಯಾರು ? ಅವರು ಹಿಂದೆಂದಾದ್ರೂ ಅಪ್ಪನಿಗೆ ಸಹಾಯ ಮಾಡಿದ್ರಾ ? ಅಥವಾ ಕಂಪೆನಿಯ ನೌಕರರ ಮನೆಯವರೇ ? ಅವರಿಗೇಕೆ ಪ್ರತಿ ತಿಂಗಳೂ, ಹತ್ತು ವರ್ಷಗಳಿಂದ ಸಂಬಳದಂತೆ ಹಣವನ್ನೇಕೆ ಕೊಡಲಾಗುತ್ತಿದೆ... ಅವರೆಲ್ಲಿದ್ದಾರೆ ? ನಿಮಗೆ ಗೊತ್ತಾ? ನಾನು ಅವರನ್ನು ಒಂದು ಸಾರಿ ನೋಡಬೇಕಲ್ಲ...''

ಸುಬ್ಬರಾಯಪ್ಪ ಮೌನಿಯಾದರು... ಆತ ಕಂಪೆನಿಯಿಂದಲೂ ಪ್ರತಿ ತಿಂಗಳೂ ಹಣ ಸಂದಾಯ ಮಾಡಿಸಿಕೊಳ್ಳುತ್ತಿದ್ದ ವಿಷಯ ಹೊಸದು. ಅಂದರೆ ನಾಗೇಶನೂ ಆತನಿಗೆ ಹಣ ಕೊಡುತ್ತಿದ್ದ. ಇದು ನಳಿನಿಯ ಚಿತಾವಣೆ ಇರಬಹುದೇ ? ಆದರೆ ಇದುವರೆಗೂ ತನಗ್ಯಾಕೆ ಯಾರೂ ತಿಳಿಸಿರಲಿಲ್ಲ? ಶ್ರೀಕಂಠಯ್ಯ ಮನೆ ಮಾರಿಕೊಂಡು, ಬ್ಯಾಂಕಿನಲ್ಲಿದ್ದ ಹಣವನ್ನೆಲ್ಲಾ ದೋಚಿಕೊಂಡು ಪರಾರಿಯಾದ ವಿಷಯ ತಿಳಿದ ನಂತರ, ತಾವು ಅವರಿಗೆ ಕೊಡುತ್ತಿದ್ದ ಹಣವನ್ನು ನಿಲ್ಲಿಸಿಬಿಟ್ಟಿದ್ದರು. ಆದರೆ ಮಗನ ಕಡೆಯಿಂದ ಈಗಲೂ ಹಣವನ್ನು ಕಸಿಯುತ್ತಿದ್ದಾರೆ. ಅದಕ್ಕೆ ಮಗಳನ್ನು ನೋಡಲು ಆಫೀಸಿಗೆ ಬಂದಿದ್ದರೇನೋ... ತನ್ನ ಸೊಸೆಯ ತಂದೆ ಎಂಬ ಒಂದೇ ಒಂದು ಕಾರಣದಿಂದ, ಈಗಾಗಲೇ ಆತನ ಹೆಸರಿಗೆ ಸಾಕಷ್ಟು ಹಣ ಜಮಾ ಆಗಿದೆ. ಇನ್ನು ಮುಂದೆ ಹಣ ಕೊಡಬೇಕಾದ ಅಗತ್ಯವಿಲ್ಲ ಎಂದುಕೊಂಡು,

''ಅವರು ಯಾರೋ... ಎಲ್ಲಿದಾರೋ ನನಗಂತೂ ತಿಳಿಯದು. ಈಗ ನಿನ್ನ ತಂದೆಯೇ ಬದುಕಿಲ್ಲದಿರುವಾಗ ಆತನಿಗೆ ಹಣ ಕೊಡುವ ಅಗತ್ಯವಿಲ್ಲ. ಇನ್ನು ನಿಲ್ಲಿಸಿಬಿಡು. ಆ ಬಗ್ಗೆ ಯಾರಾದರೂ ಮಾತೆತ್ತಿದರೆ, ಅವರನ್ನು ನನ್ನ ಬಳಿಗೆ ಕಳಿಸು...'' ಪೃಥ್ವಿ ತಾತ ಹೇಳಿದಂತೆಯೇ ಮಾಡಿದ. ಕೆಲವೇ ದಿನಗಳಲ್ಲಿ ನಳಿನಿಗೆ ಈ ವಿಷಯ ತಿಳಿಯಿತು. ಪೃಥ್ವಿಯೊಡನೆ ಮಾತನಾಡಿದಳು.

''ಅವರು ಯಾರು ಚಿಕ್ಕಮ್ಮ... ಇಷ್ಟು ದಿನಗಳಲ್ಲಿ ನಾನು ಒಂದು ದಿನವೂ ನೋಡಿಲ್ಲ. ಈ ವಿಷಯ ನಿಮಗೆ ಹೇಗೆ ತಿಳಿಯಿತು ?''

''ನನಗೂ ಅವರು ಎಲ್ಲಿದಾರೆ ...! ಹೇಗಿದಾರೆ ಅಂತ ತಿಳಿಯದು. ನಿಮ್ಮ ತಂದೆಯ ಹಳೆಯ ಸ್ನೇಹಿತರಿರಬಹುದು. ಅವರಿಗೆ ಸಹಾಯವಾಗಲೆಂದು ಹಣ ಕಳಿಸುತ್ತಿದ್ದರು. ನೀನು ಈಗ ಅದನ್ನು ನಿಲ್ಲಿಸಿದ ಮೇಲೆ ಬ್ಯಾಂಕಿನವರಿಂದ ನನಗೆ ಈ ವಿಷಯ ತಿಳಿಯಿತು.'' ಪೃಥ್ವಿ ಗೊಂದಲಕ್ಕೊಳಗಾದ. ತಾತ ಹಣವನ್ನು ಕೊಡುವುದನ್ನು ನಿಲ್ಲಿಸು ಎಂದರು. ಈಗ ಚಿಕ್ಕಮ್ಮ ಹೇಳುತ್ತಿರುವುದನ್ನು ಕೇಳಿದರೆ ತನ್ನಿಂದ ಆತನಿಗೆ ಅನ್ಯಾಯವಾಯಿತೇ... ಆದರೆ ಹೀಗೇಕಾಯಿತು ? ಈ ಶ್ರೀಕಂಠಯ್ಯ ಯಾರು ? ಅವರು ಅಪ್ಪನ ಸ್ನೇಹಿತರಾಗಿದ್ದರೋ ಇಲ್ಲವೋ... ನಿಜ ಏನೂಂತ ತಿಳಿದುಕೊಳ್ಳಬೇಕೆಂದುಕೊಂಡು ಒಬ್ಬ ಪತ್ತೇದಾರನನ್ನು ಗೊತ್ತು ಮಾಡಿ, ''ಈ ಶ್ರೀಕಂಠಯ್ಯನನ್ನು ಪತ್ತೆ ಮಾಡಿ ಕೊಡಿ'' ಎಂದು ವಿವರಗಳನ್ನು ಹೇಳಿ, ಅಡ್ವಾನ್ಸ್ ಹಣವನ್ನು ಕೊಟ್ಟ.

ಮೂರು ವಾರಗಳ ನಂತರ ಆ ಡಿಟೆಕ್ಟಿವ್ ಏಜೆಂಟ್ ಫೋನ್ ಮಾಡಿ ಪೃಥ್ವಿಯನ್ನು ಭೇಟಿಯಾಗುವಂತೆ ಹೇಳಿದ.

''ಈ ವ್ಯಕ್ತೀನೇ ಶ್ರೀಕಂಠಯ್ಯ ಅನ್ನೋರು. ನೀವು ಇವರನ್ನು ಎಂದಾದ್ರೂ ನೋಡಿದ್ರಾ ?'' ಎನ್ನುತ್ತ ಅವರ ಫೋಟೋ ಒಂದನ್ನು ತೋರಿಸಿದ. ಪೃಥ್ವಿಗೆ ತಾನು ಹಿಂದೊಮ್ಮೆ ಅವರನ್ನು ನೋಡಿದ ನೆನಪಾಯಿತು. ಆದರೆ ಸರಿಯಾಗಿ ಎಲ್ಲಿ, ಯಾವಾಗ ಎಂದು ನೆನಪಿಗೆ ಬರಲಿಲ್ಲ. ಅವರ ಫೋಟೋವನ್ನು ತಾನು ತೆಗೆದಿರಿಸಿಕೊಂಡ.

''ಈಚೆಗೆ ಮೂರು ನಾಲ್ಕು ತಿಂಗಳ ಹಿಂದೆ ಆತ ತೀರಿ ಹೋಗಿದ್ದಾರೆ. ಅವರು ತಮ್ಮ ಬಳಿ ಇದ್ದ ಹಣವನ್ನೆಲ್ಲ, ಅವರ ಮೊಮ್ಮಗ ವಿಶ್ವ ಎನ್ನೋರ ಹೆಸರಿನಲ್ಲಿ ಬೇರೆ ಬ್ಯಾಂಕಿನಲ್ಲಿ ಜಮಾ ಮಾಡಿದ್ದಾರೆ. ಸುಮಾರು ಏಳೆಂಟು ಲಕ್ಷಕ್ಕೂ ಹೆಚ್ಚು ಹಣವಿದೆ. ಆದರೆ ವಿಶ್ವ ಅನ್ನೋರು ಇದುವರೆಗೂ ಆ ಹಣವನ್ನು ಕ್ಲೈಂ ಮಾಡಲು ಎಂದೂ ಬಂದಿಲ್ಲವಂತೆ. ಅವನು ಎಲ್ಲಿದಾನೆ ಅಂತ ಅವರಿಗೂ ಸಹ ತಿಳಿಯದು.''

''ವಿಶ್ವನನ್ನು ಪತ್ತೆ ಮಾಡಿ... ಎಷ್ಟು ದಿನಗಳಾದರೂ ಪರವಾಗಿಲ್ಲ'' ಎನ್ನುತ್ತಾ ಮತ್ತಷ್ಟು ಹಣವನ್ನು ಕೊಟ್ಟ. ಮನೆಗೆ ಬಂದವನೇ ಮೊದಲು ಶ್ರೀಕಂಠಯ್ಯನ ಫೋಟೋವನ್ನು ತಾತನಿಗೆ ತೋರಿಸಿದ.

''ಇವರೇ ಆ ಶ್ರೀಕಂಠಯ್ಯ ಅನ್ನೋರು... ನಿಮಗೆ ಇವರನ್ನು ಎಂದಾದ್ರೂ ನೋಡಿದ ನೆನಪಿದೆಯಾ ?'' ಸುಬ್ಬರಾಯಪ್ಪ ಬೆಚ್ಚಿದರು. ಅವನ ಕಡೆ ನೋಡದೇ ನುಡಿದರು.

''ಇಲ್ಲಪ್ಪ... ನಿನ್ನ ತಂದೆಯ ಸ್ನೇಹಿತರನ್ನೆಲ್ಲ ನಾನು ನೋಡಿರಲು ಹೇಗೆ ಸಾಧ್ಯ ?''

''ಇವರ ಮೊಮ್ಮಗ ಒಬ್ಬ ಇದಾನಂತೆ.''

''ಇರಲಿ ಬಿಡು, ಅದಕ್ಕೆಲ್ಲ ನೀನೇಕೆ ತಲೆ ಕೆಡಿಸಿಕೊಳ್ತೀಯ ?''

''ಅವನನ್ನು ಹುಡುಕಿಸಿ ಅವನಿಗೆ ನಮ್ಮಿಂದ ಏನಾದ್ರೂ ಸಹಾಯ ಬೇಕಿದ್ರೆ ಮಾಡೋಣ ಅಂತ..''

''ಹುಡುಕಿಸ್ತೀಯ ? ಆ ಹುಚ್ಚು ಆಸೆ ಏಕೆ ? ಲಕ್ಷಾಂತರ ಜನಗಲ ಮಧ್ಯೆ ಎಲ್ಲೋ ಇರ್ತಾನೆ. ಏನಾದ್ರು ಬೇಕಾಗಿದ್ದರೆ ಅವನೇ ಬರ್ತಾನೆ...'' ಹಾಗೆ ಹೇಳುತ್ತಾ ತಾತ ಏನೋ ಚಡಪಡಿಸುತ್ತಿರುವಂತೆ ಕಂಡಿತು. ನೋಡು ನೋಡುತ್ತಿದ್ದಂತೆಯೇ ಅವರು ಬೆವರಿನಿಂದ ತೋಯ್ದು ಹೋಗಿದ್ದರು. ಇದ್ದಕ್ಕಿದ್ದಂತೆ ಇವರಿಗೇನಾಯ್ತು ಎಂದು ಗಾಭರಿಗೊಂಡ ಪೃಥ್ವಿ ತಕ್ಷಣವೇ ಡಾಕ್ಟರಿಗೆ ಫೋನು ಮಾಡಿದ. ಡಾಕ್ಟರು ಪರಿಶೀಲಿಸಿ ನುಡಿದರು. ''ಬಿ.ಪಿ. ಹೆಚ್ಚಾಗಿರುವಂತಿದೆ. ಈಗಲೇ ನರ್ಸಿಂಗ್ ಹೋಂಗೆ ಸೇರಿಸುವುದು ಒಳ್ಳೆಯದು.'' ಪೃಥ್ವಿ ಕಂಗೆಟ್ಟ, ತಕ್ಷಣವೇ ಆಂಬ್ಯುಲೆನ್ಸ್ ತರಿಸಿ, ಸಮೀಪದಲ್ಲೇ ಇದ್ದ ನರ್ಸಿಂಗ್ ಹೋಂಗೆ ಸೇರಿಸಿದ. ಅಷ್ಟರೊಳಗೆ ಅವರ ಬಿ.ಪಿ. ಇನ್ನೂ ಹೆಚ್ಚಾಗಿ ಅವರಿಗೆ ಜ್ಞಾನವೇ ಇಲ್ಲವಾಗಿತ್ತು. ಇದ್ದಕ್ಕಿದ್ದಂತೆ ಇವರಿಗೇನಾಯ್ತು ? ನನ್ನ ಯಾವ ಮಾತು ಇವರಿಗೆ ಆಘಾತವನ್ನುಂಟು ಮಾಡಿರಬಹುದು ? ಇದೇ ಚಿಂತೆಯಲ್ಲಿದ್ದವನಿಗೆ ಡಾಕ್ಟರು ಹೇಳಿದ್ದರು.

''ವಯಸ್ಸಾದವರಿಗೆ ಹೀಗಾಗುವುದು ಸಹಜ. ಗಾಭರಿಯೇನೂ ಆಗಬೇಕಾಗಿಲ್ಲ. ಆದಷ್ಟು ಬೇಗ ಮತ್ತೆ ಜ್ಞಾನ ಬರುವಂತೆ ನಾವು ಪ್ರಯತ್ನ ಮಾಡುತ್ತೇವೆ'' ಆದರೂ ಎರಡು ದಿನಗಳವರೆಗೆ ತಾತ ಜ್ಞಾನ-ಅಜ್ಞಾನದ ನಡುವೆ ಮಲಗಿದ್ದರು. ನಿದ್ದೆಯ ಮಂಪರೋ ಅಥವಾ ಅರೆಜ್ಞಾನವೋ ತಿಳಿಯುವಂತಿರಲಿಲ್ಲ. ಪೃಥ್ವಿ ಮಂಕಾದ. ಅವರ ಈ ಸ್ಥಿತಿಗೆ ತಾನೇ ಕಾರಣ. ತನ್ನ ಮಾತುಗಳು ಅವರ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡಿದೆ. ಈ ಶ್ರೀಕಂಠಯ್ಯ ಯಾರೂಂತ ತಾತನಿಗೆ ತಿಳಿದಿದೆ. ಅವನು ನಮ್ಮ ತಂದೆಗೆ ಬ್ಲಾಕ್‌ಮೇಲ್‌ಮಾಡುತ್ತಿದ್ದಿರಬಹುದು. ಅದಕ್ಕೇ ತಾತ ಹೆದರಿಬಿಟ್ಟಿದ್ದಾರೆ. ನನ್ನಿಂದ ಈ ವಿಷಯವನ್ನು ಬಿಟ್ಟಿದ್ದರು. ಈಗ ನನಗೆ ತಿಳಿದು ಹೋಯಿತು ಎಂದು ಬೇಸರಗೊಂಡಿರಬಹುದೇ...? ಆತ ಈಗ ಬದುಕಿಲ್ಲ ಎಂದು ನಾನು

ತಾತನಿಗೆ ತಿಳಿಸಬೇಕಾಗಿತ್ತು. ಆಗ ಅವರಿಗೆ ನೆಮ್ಮದಿ ಸಿಗುತ್ತಿತ್ತು... ಈಗ ಎಷ್ಟು ಖರ್ಚಾದರೂ ಸರಿ, ತಾತ ಮೊದಲಿನಂತಾಗಬೇಕು... ಅವರಿಗೆ ಆ ವಿಷಯ ತಿಳಿಯಬೇಕು... ''ತಾತಾ ನನ್ನನ್ನು ಕ್ಷಮಿಸಿ... ನನ್ನಿಂದಲೇ ಹೀಗಾದದ್ದು...'' ಅವರ ಕೈಗಳನ್ನು ಹಿಡಿದುಕೊಂಡ.

ಒಂದು ವಾರದ ನಂತರ ಅವರ ಸ್ಥಿತಿ ಸ್ವಲ್ಪ ಸುಧಾರಿಸಿತ್ತು. ಬಾಯಿ ಸೊಟ್ಟಗಾಗುತ್ತಿತ್ತು. ಬಲಭಾಗದ ಕೆನ್ನೆಯ ಭಾಗ ಜೋತು ಬಿದ್ದಿತ್ತು. ಲಕ್ವ ಹೊಡೆದುದರ ಪರಿಣಾಮವಾಗಿ ಅವರು ಮಾತಾಡುವ ಶಕ್ತಿಯನ್ನು ಕಳೆದುಕೊಂಡಿದ್ದರು. ತಾತನಿಗಾದ ದುರವಸ್ಥೆಯನ್ನು ಕಂಡು ಪೃಥ್ವಿ ಅತ್ತ. ನಳಿನಿ ಅಧೀರಳಾಗಿದ್ದಳು.

ಮೈಲ್ಡ್ ಸ್ಟ್ರೋಕ್ ಹೊಡೆದಿರುವುದರಿಂದ ಹೀಗಾಗಿದೆ ಅಷ್ಟೆ. ಕ್ರಮೇಣ ಚೇತರಿಸಿಕೊಂಡು ಸರಿ ಹೋಗುತ್ತಾರೆ. ಮತ್ತೆ ಮಾತಾಡ್ತಾರೆ. ಎರಡು ಮೂರು ತಿಂಗಳ ನಂತರ ಖಂಡಿತಾ ಸರಿಹೋಗ್ತಾರೆ ಎಂದು ಡಾಕ್ಟರು ಭರವಸೆ ನೀಡಿದ್ದರೂ ಪೃಥ್ವಿಯ ವ್ಯಥೆ ಕಡಿಮೆ ಆಗಿರಲಿಲ್ಲ.

ಇಂಥ ಸಮಯಗಳಲ್ಲಿ ತಿಳಿಯದವರು ತಿಳಿದವರು ಅನೇಕರು ಉಚಿತ ಸಲಹೆಗಳನ್ನು ನೀಡುತ್ತಾರೆ. ತಮ್ಮ ಅನುಭವಗಳನ್ನು ಹೇಳಿಕೊಳ್ಳುತ್ತಾರೆ. ಹಾಗೇ ಒಬ್ಬರು ಪೃಥ್ವಿಗೆ ಸಲಹೆ ನೀಡಿದರು.

''ಇಲ್ಲಿಂದ ಮೈಸೂರಿಗೆ ಹೋಗುವ ಮಾರ್ಗದಲ್ಲಿ, ರಾಮನಗರದ ಬಳಿ ಒಂದು ವೈದ್ಯಾಲಯವಿದೆ. ಅಲ್ಲಿ ಒಬ್ಬ ಆಯುರ್ವೇದ ಪಂಡಿತರಿದ್ದಾರೆ. ನಾಟೀ ಔಷಧಿಗಳಿಗೆ ಹೆಸರುವಾಸಿ. ಇಂಥ ಎಷ್ಟೋ ಕೇಸುಗಳನ್ನು ಕೆಲವೇ ದಿನಗಳಲ್ಲಿ ಪೂರ್ತಿಯಾಗಿ ವಾಸಿ ಮಾಡಿದ್ದಾರೆ... ನೀವೂ ಅಲ್ಲಿಗೆ ಕರೆದುಕೊಂಡು ಹೋಗಿ... ನಿಮ್ಮ ತಾತ ಖಂಡಿತಾ ಹುಶಾರಾಗ್ತಾರೆ'' ಅಂತ.

ಪೃಥ್ವಿಗೆ ಆಯುರ್ವೇದ ವೈದ್ಯರಲ್ಲಿ ನಂಬಿಕೆ ಇರಲಿಲ್ಲ. ಇಂಥ ಸ್ಪೆಷಲಿಸ್ಟ್‌ಗಳೇ ನಿಧಾನ ಅಂತ ಹೇಳುತ್ತಿರುವಾಗ ಆ ಪಂಡಿತ ಅದ್ಹೇಗೆ ಬೇಗ ವಾಸಿ ಮಾಡ್ತಾರೆ ಅಂತ ಅಂದುಕೊಂಡ. ಆದರೆ ನಳಿನಿ ಅವರ ಸಲಹೆಯನ್ನು ಒಪ್ಪಿದಳು.

''ಹೌದು ಪೃಥ್ವಿ. ಇವರು ಹೇಳೋದು ನಿಜ. ಪಾರ್ಶ್ವವಾಯು ಹೊಡೆದವರಿಗೆ ನಾಟೀ ಔಷಧಿ ರಾಮಬಾಣ ಅಂತ ಹೇಳ್ತಾರೆ. ಒಂದು ಸಲ ಕರೆದುಕೊಂಡು ಹೋಗಿ ತೋರಿಸೋಣ. ಖಾಯಿಲೆ ಹಳೇದಾದಷ್ಟು

ವಾಸಿಯಾಗೋದು ನಿಧಾನವಾಗುತ್ತೆ. ಮೂರು ನಾಲ್ಕು ತಿಂಗಳ ತನಕ ನಾವೇಕೆ ಕಾಯಬೇಕು ?''

ಚಿಕ್ಕಮ್ಮನಿಗೂ ಪಂಡಿತರ ಔಷಧದ ಮೇಲೆ ನಂಬಿಕೆ... ಬೇಗ ವಾಸಿಯಾಗುತ್ತೋ ಬಿಡುತ್ತೋ... ತೊಂದರೆಯಂತೂ ಖಂಡಿತಾ ಇಲ್ಲ ಎಂದುಕೊಂಡು ಆ ಪಂಡಿತರನ್ನು ಕಂಡು ಬರಲು ತಾನೇ ಹೊರಟ. ಕಾರನ್ನು ಓಡಿಸಿದ ಚಂದ್ರು.

ಡ್ರೈವರ್ ನಂಜಪ್ಪನ ಮಗ ಚಂದ್ರು ಈಗ ಇಲ್ಲಿ ಡ್ರೈವರ್ ಆಗಿದ್ದ. ಅವನಿಗೂ ಪೃಥ್ವಿಗೂ ಒಂದು ತರಹ ಸ್ನೇಹ. ಮೊದಲೇ ಪೃಥ್ವಿ ಮಾತು ಕಡಿಮೆ. ಈಗ ಮೌನಿಯಾಗಿಬಿಟ್ಟಿದಾನೆ ಎಂದುಕೊಂಡು ಚಂದ್ರು ನುಡಿದ.

''ನೀವು ಹೀಗೇ ಇದ್ದರೇ... ನಿಮಗೆ ಮಾತುಗಳೇ ಮರೆತು ಹೋಗುತ್ತೆ ಅಷ್ಟೇ...''

''ಹೋಗಲಿ ಬಿಡು ಚಂದ್ರು ನಾನು ಹೆಚ್ಚಿಗೆ ಮಾತನಾಡುತ್ತಿದ್ದುದೇ ತಾತನ ಹತ್ತಿರ. ತಾತನೇ ಮಾತಾಡುವ ಶಕ್ತಿ ಕಳೆದುಕೊಂಡಿರವಾಗ ನನಗೇಕೆ ಮಾತು?''

''ಛೇ ಹಾಗೇಕೆ ಅಂತೀರಿ ? ಅವರ ಬಿ. ಪಿ. ಹೆಚ್ಚಾಗಿ ಏನೇನೋ ಆಯ್ತು. ಎಲ್ಲಾ ಸರಿ ಹೋಗುತ್ತೆ ಬಿಡಿ.''

''ಎಲ್ಲಾ ಮತ್ತೆ ಸರಿ ಹೋಗಲೇಬೇಕು ಚಂದ್ರು. ಇಲ್ಲದಿದ್ದರೆ ನಾನು ಬದುಕಿದ್ದೇನು ಪ್ರಯೋಜನ ? ತಾತನೇ ನನ್ನ ಸರ್ವಸ್ವ. ಅವರಿಗೇನಾದರೂ ಆಗಿಹೋದರೆ ನಾನು ಹೇಗಿರಲಿ ಹೇಳು...?''

''ನೀವೇ ಮಂಕಾಗಿಬಿಟ್ರೆ ನಿಮ್ಮ ತಮ್ಮಂದಿರೂ ಮಂಕಾಗಿ ಬಿಡ್ತಾರೆ. ಅವರಿಗೂ ನಿಮ್ಮಷ್ಟೇ ಪ್ರೀತಿ ಅವರ ತಾತನ ಮೇಲೆ ಅಲ್ವಾ?''

''ಹೌದು ಚಂದ್ರು.. ತಾತ ಅವರಿಬ್ಬರನ್ನೂ ಹತ್ತಿರ ಕೂರಿಸಿಕೊಂಡು ಕತೆ ಹೇಳುತ್ತಿದ್ದರೆ ನಾನು ಚಿಕ್ಕವನಾಗಿದ್ದಾಗ ನನಗೂ ಕತೆ ಹೇಳುತ್ತಿದ್ದುದು ನೆನಪಿಗೆ ಬರುತ್ತಿತ್ತು. ಮತ್ತೆ ಅಂತ ಕಾಲ ಬರುತ್ತಾ ಚಂದ್ರು ?''

''ಬರುತ್ತೆ... ಬರುತ್ತೆ... ಖಂಡಿತಾ ಬಂದೇ ಬರುತ್ತೆ'' ಎಂದು ಚಂದ್ರು ಹೇಳುತ್ತಿದ್ದಂತೆಯೇ ವೈದ್ಯಾಲಯಕ್ಕೆ ದಾರಿ ಎನ್ನುವ ಫಲಕ ಕಂಡಿತು. ಹೆದ್ದಾರಿಯಲ್ಲಿ ಎಡಕ್ಕೆ ತಿರುಗಿ ಸ್ವಲ್ಪ ದಾರಿ ಕಳೆದ ಮೇಲೆ ಒಂದು ತೋಟ ಗೋಚರಿಸಿತು. ಚಂದ್ರು ಅಲ್ಲಿ ಕಾರನ್ನು ನಿಲ್ಲಿಸಿದ. ಅಲ್ಲಿಂದ ಇಳಿದು ಕಾಲು

ನಡಿಗೆಯಲ್ಲಿ ಮುಂದುವರೆದರು. ಹತ್ತು ಹೆಜ್ಜೆ ದಾಟುತ್ತಿದ್ದಂತೆಯೇ ವೈದ್ಯಾಲಯದ ಎದುರಿಗೆ ಬಂದಿದ್ದರು.

ಹಳೆಯ ಕಾಲದ ಹೆಂಚಿನ ಮನೆ ವಿಶಾಲವಾದ ಜಗುಲಿಯ ಮೇಲೆ ಕುಳಿತಿದ್ದವರು ಇವರನ್ನೇ ನೋಡಿದರು. ''ವೈದ್ಯರು ಇದಾರಾ ?'' ಚಂದ್ರು ಪ್ರಶ್ನಿಸಿದ.

''ಹುಂ ಇದಾರೆ ಯಾರನ್ನೋ ನೋಡುತ್ತಿದಾರೆ.''

''ಚಂದ್ರು ನೀನಿಲ್ಲೇ ಇರು. ನಾನು ಕಾರಿನಲ್ಲಿ ಕೂತಿರ್ತೀನಿ. ಇನ್ನೂ ಎಷ್ಟು ಹೊತ್ತಾಗುತ್ತೋ ಏನೋ ?'' ಕಾರಿನಲ್ಲಿ ಕುಳಿತು ಹೊರಗಿನ ಗಿಡಮರಗಳನ್ನೇ ನೋಡಿದ. ಎಷ್ಟು ಪ್ರಶಾಂತವಾಗಿದೆ ಈ ವಾತಾವರಣ. ಸಿಟಿಯಂತೆ ಗದ್ದಲ ಗೌಜುಗಳಿಲ್ಲ. ಹಿತವಾದ ತಂಗಾಳಿ ಬೀಸುತ್ತಿದ್ದರೂ ಮನದ ಬೇಗುದಿ ಕಡಿಮೆಯಾಗಿರಲಿಲ್ಲ. ಯಾರೋ ಹೇಳಿದರು ಅಂತ ಇಲ್ಲಿಗೆ ಬಂದಿದೀನಿ... ಒಂದು ವೇಳೆ ಸರಿ ಹೋಗದಿದ್ದರೇ... ಆ ಅನಿಸಿಕೆಯೇ ಅವನ ಚಿಂತೆಯನ್ನು ಹೆಚ್ಚಿಸಿತು. ಚಂದ್ರು ಬಂದು ''ಬನ್ನಿ'' ಎಂದು ಕರೆದ. ಪೃಥ್ವಿ ಕೆಳಗಿಳಿದ. ಕಾಲುಗಳು ನಡುಗುತ್ತಿದೆಯೆಂದೆನಿಸುತ್ತಿತ್ತು.

''ಬನ್ನಿ ಎಲ್ಲಿ ಕೂತ್ಕೊಳ್ಳಿ'' ಧ್ವನಿ ಬಂದ ಕಡೆ ತಿರುಗಿದ. ಸ್ವಲ್ಪ ಅಚ್ಚರಿಯಾಯಿತು. ಇವನು ಅಂದುಕೊಂಡಂತೆ ವೈದ್ಯರು ವಯಸ್ಸಾದ ಮುದುಕರಲ್ಲ ; ಸುಮಾರು ಹೆಚ್ಚು ಕಡಿಮೆ ಇವನ ವಯಸ್ಸಿನವನೇ. ಇವನ ವಿಶ್ವಾಸ ಮತ್ತೂ ಕಡಿಮೆಯಾಯಿತು.

''ಏನು ವಿಷಯ ? ಯಾರಿಗೆ ತೊಂದರೆ ?'' ವೈದ್ಯರು ಪ್ರಶ್ನಿಸಿದಾಗ, ಪೃಥ್ವಿ ನಡುಗುವ ಧ್ವನಿಯಲ್ಲಿ ತನ್ನ ತಾತನ ಬಗ್ಗೆ ಹೇಳಿದ.

''ಅವರನ್ನು ನೋಡಬೇಕು. ಒಮ್ಮೆ ಕರೆದುಕೊಂಡು ಬನ್ನಿ.''

''ಅವರು ಓಡಾಡುವ ಸ್ಥಿಯಲ್ಲಿಲ್ಲ...''

''ಕಾರಿನಲ್ಲಿ ಕರೆದುಕೊಂಡು ಬರಬಹುದಲ್ಲ...'' ಎಂದು ಹೇಳಿ ಮುಂದಿನ ರೋಗಿಯತ್ತ ಗಮನ ಹರಿಸಿದಾಗ ಪೃಥ್ವಿ ಎದ್ದ. ಈಗೇನು ಮಾಡಬೇಕು ಎಂದು ತೋಚದಾಯಿತು. ಈಗ ತಾತ ನರ್ಸಿಂಗ್ ಹೋಂನಲ್ಲಿದಾರೆ. ಅಲ್ಲಿಗೆ ಈ ವೈದ್ಯ ಬರುತ್ತಾನೋ ಇಲ್ಲವೋ...? ಅವರನ್ನು ಇಲ್ಲಿಗೆ ಪದೇ ಪದೇ ಕರೆತರುವುದೂ ಕಷ್ಟ ಎಂದುಕೊಂಡು ಅದೇ ಮಾತನ್ನು ನಳಿನಿಯೊಡನೆ ಹೇಳಿದ.

''ಎಷ್ಟೇ ಖರ್ಚಾದರೂ ಪರವಾಗಿಲ್ಲ ಪೃಥ್ವಿ... ಫಾರಿನ್ನಿಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸೋಣ. ನಿನ್ನ ತಾತ ಮೊದಲಿನಂತಾದರೆ ಸಾಕು.''

''ಹೌದು ನನಗೂ ಅದೇ ಬೇಕಾಗಿರುವುದು. ಆದರೆ ಅವರ ಜೊತೆಗೆ ಹೋಗುವವರ್‍ಯಾರು ? ನಾನು ಹೋದರೆ ಇಲ್ಲಿ ನೀವು ಒಂಟಿಯಾಗಿ ಬಿಡ್ತೀರಿ...'' ಅಲ್ಲೇ ಇದ್ದ ಚಂದ್ರು ನುಡಿದ.

''ಒಂದು ಸಾರಿ ಆಯುರ್ವೇದದ ವೈದ್ಯರನ್ನು ನೋಡಿದರೇ ಒಳ್ಳೇದು. ಇಲ್ಲೇ ಸುಲಭವಾಗಿ ವಾಸಿಯಾಗೋದಾದ್ರೆ ಫಾರಿನ್ನು ಯಾಕೆ ಬೇಕು ?''

''ಚಂದ್ರು ನೀನು ಹೇಳೋದೂ ಸರಿ. ಈ ಪ್ರಯತ್ನವನ್ನು ಮಾಡಿ ಬಿಡೋಣ. ಆಮೇಲೆ ಮತ್ತೆ ಬೇಕಾದರೆ ಚಿಂತಿಸಿದರಾಯ್ತು'' ನಳಿನಿಯೂ ಒಪ್ಪಿಕೊಂಡಾಗ ಪೃಥ್ವಿಯೂ ಸಮ್ಮತಿ ನೀಡಿದ. ಮಾರನೇ ದಿನವೇ ಅವರನ್ನು ನರ್ಸಿಂಗ್ ಹೋಂನಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ಕಾರಿನಲ್ಲಿ ಮಲಗಿಸಿ ಕೊಂಡು ವೈದ್ಯಾಲಯಕ್ಕೆಕರೆತಂದರು. ಕಾರು ನಿಲ್ಲುತ್ತಿದ್ದಂತೆಯೇ ಹಿಂದಿನ ದಿನ ತಾನು ಕಂಡಿದ್ದ ವೈದ್ಯನೇ ಇವರ ಬಳಿಗೆ ಬಂದ. ಹಿಂದಿನ ಸೀಟಿನಲ್ಲಿ ಮಲಗಿಸಿದ್ದ ರೋಗಿಯನ್ನು ಕಂಡ. ತಾನೇ ಒಳಗೆ ಹೋಗಿ ಗಾಲಿಯ ಕುರ್ಚಿಯನ್ನು ತಂದು. ಅವರನ್ನು ನಿಧಾನವಾಗಿ ಎತ್ತಿ ಕೂರಿಸಿ, ಕುರ್ಚಿಯನ್ನು ತಳ್ಳಿಕೊಂಡು ಒಳಕ್ಕೆ ಕರೆದುಕೊಂಡು ಹೋದ. ಪೃಥ್ವಿ, ಚಂದ್ರು ಅವನನ್ನು ಹಿಂಬಾಲಿಸಿದರು. ಒಳಗೆ ಇನ್ನೂ ಒಬ್ಬರು ನಡುವಯಸ್ಸಿನ ವೈದ್ಯರು ಕೂತಿದ್ದರು. ಚಿಕ್ಕ ವೈದ್ಯ, ತಾತನನ್ನು ಪರೀಕ್ಷಿಸಿ ಹಿರಿಯ ವೈದ್ಯರಿಗೆ ಹೇಳುತ್ತಿದ್ದ. ಸಾಕಷ್ಟು ಹೊತ್ತು ಪರೀಕ್ಷಿಸಿಯಾದ ಮೇಲೆ ಹಿರಿಯ ವೈದ್ಯರು ನುಡಿದರು.

''ಇವರಿಗೆ ಸುಮಾರು ನಾಲ್ಕೈದು ವಾರಗಳ ಚಿಕಿತ್ಸೆಯ ಅಗತ್ಯವಿದೆ. ಇವರನ್ನು ನೀವು ದಿನಾ ಕರೆದುಕೊಂಡು ಬರಲು ಸಾಧ್ಯವೇ ?'' ಚಂದ್ರು, ಪೃಥ್ವಿ ಮುಖ ಮುಖ ನೋಡಿಕೊಂಡರು. ಚಂದ್ರು ಕೇಳಿದ,

''ಇವರನ್ನು ಇಲ್ಲಿಯೇ ಇಟ್ಟುಕೊಳ್ಳಲು ಸೌಲಭ್ಯವಿದೆಯೇ ? ಯಾಕೆಂದ್ರೆ ನಾವು ಇರುವುದು ಬೆಂಗಳೂರಿನಲ್ಲಿ... ದಿನಾ ಬಂದು ಹೋಗೋದು ಅಂದ್ರೆ... ದೂರ ಅಲ್ವಾ ?''

''ಸರಿ, ಸರಿ... ದಿನಾ ಅಷ್ಟು ದೂರ ಪ್ರಯಾಣ ಮಾಡಿಸಿದರೆ ಇವರ ಮೈಗೆ ಏನಾಗಬೇಕು ? ಇಲ್ಲೇ ನಮ್ಮ ಮನೆಯಲ್ಲೇ ಇಟ್ಟುಕೊಂಡು ಚಿಕಿತ್ಸೆ ಕೊಡ್ತೀವಿ... ನಿಮಗಿಷ್ಟವಿದ್ದರೆ...''

ತಾತ, ಪೃಥ್ವಿಯ ಕಡೆ ನೋಡಿ ಬೇಡ ಎನ್ನುವಂತೆ ತಲೆ ಅಡ್ಡಡ್ಡ ಆಡಿಸಿದರು. ಚಿಕ್ಕ ವೈದ್ಯ ನಕ್ಕ.

''ಯಾಕೆ ತಾತಾ ? ನಾನೂ ನಿಮ್ಮ ಮೊಮ್ಮಗನ ಹಾಗೇನೇ... ನಿಮಗೆ ಬೇಗ ವಾಸಿಯಾಗಲಿ ಅಂತ ಸದಾ ಚಿಂತೆ ಮಾಡಿ ಮಾಡಿ ಅವರೇ ಕಂಗೆಟ್ಟು ಹೋಗಿದಾರೆ...'' ಪೃಥ್ವಿ ತಲೆ ತಗ್ಗಿಸಿದ.

''ನಿತ್ಯ ನೀವೇ ಮನೆಗೆ ಬಂದು ಔಷಧೋಪಚಾರ ಮಾಡಲು ಸಾಧ್ಯವಾಗುತ್ತಾ?'' ಹಿಂಜರಿಯುತ್ತಾ ಪ್ರಶ್ನಿಸಿದ. ಹಿರಿಯ ವೈದ್ಯರು ನುಡಿದರು,

''ಅದು ಮಾತ್ರ ಆಗುಲ್ಲ. ಇಲ್ಲಿ ಬೇರೆಬೇರೆ ಖಾಯಿಲೆಗಳಿಗೆ, ಚಿಕಿತ್ಸೆಗೆಂದು ರೋಗಿಗಳು ಬರುತ್ತಿರುತ್ತಾರೆ. ನಾವು ಬದಲಾಗುವುದಿಲ್ಲ. ವಿಶ್ವ ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ. ನಿಮಗೆ ಯಾವ ಆತಂಕವೂ ಬೇಡ'' ಪೃಥ್ವಿ ಉಸಿರು ಸಿಕ್ಕಿಕೊಂಡವನಂತೆ ಗಕ್ಕನೆ ತಲೆ ಎತ್ತಿ ಆ ಯುವಕನನ್ನೇ ನೋಡಿದ. ಯಾವುದೋ ಪರಿಚಿತ ಎಳೆಯೊಂದು ಸಿಕ್ಕಿದಂತಹ ಅನುಭವ ವಾಯಿತು. ಈ ವಿಶ್ವ, ಆ ವಿಶ್ವನೇ ಇರಬಹುದೇ... ಪೃಥ್ವಿಯ ನಿಧಾನವನ್ನು ಗಮನಿಸಿದ ವೈದ್ಯರು ನುಡಿದರು.

''ರಕ್ತದ ಒತ್ತಡ ಹೆಚ್ಚಾಗಿ ಇವರಿಗೆ ಲಕ್ವ ಹೊಡೆದಿದೆ. ಇವರಿಗೆ ದಿನಾ ನಾವೇ ಸಿದ್ಧಪಡಿಸುವ ತೈಲವನ್ನು ತಿಕ್ಕಿ ಸ್ನಾನ ಮಾಡಿಸಬೇಕು. ಮಾತು ಸುಲಭವಾಗಿ ಆಡಲು ಸಾಧ್ಯವಾಗುವಂತೆ ವಿಶಿಷ್ಟವಾದ ರೀತಿಯ ಕಾಯಿಲೆಯಿಂದ ನಾಲಿಗೆಯ ಮೇಲೆ ದಿನಕ್ಕೆ ಎರಡು ಮೂರು ಬಾರಿ ಉಜ್ಜಬೇಕು. ಮಾಂಸಖಂಡಗಳು ಬಿಗಿಯಾಗದಂತೆ ಹಗುರವಾದ ವ್ಯಾಯಾಮ ವನ್ನು ಮಾಡಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಕಟ್ಟುನಿಟ್ಟಾದ ಪಥ್ಯದ ಆಹಾರ ವನ್ನು ಸೇವಿಸಲು ಕೊಡಬೇಕು. ಹೊತ್ತು ಹೊತ್ತಿಗೆ ಸರಿಯಾಗಿ ಔಷಧೋಪ ಚಾರಗಳು ನಡೆಯದಿದ್ದರೆ, ಬೇಗ ಗುಣಮುಖರಾಗುವುದಿಲ್ಲ. ನಿಮಗೆ ನಂಬಿಕೆ ಇದ್ದರೆ, ನಿಶ್ಚಿಂತೆಯಿಂದ ಇಲ್ಲಿ ಬಿಟ್ಟು ಹೋಗಬಹುದು. ಅನುಮಾನ ವಿರುವವರಿಗೆ ಇಲ್ಲಿರಲು ಅವಕಾಶವಿಲ್ಲ, ಕರೆದುಕೊಂಡು ಹೋಗಬಹುದು.'' ಪೃಥ್ವಿಗೆ ಅವಮಾನವಾದಂತಾಯ್ತು. ಅವನು ಎದ್ದು ನಿಂತ. ಅವನ ಕೆಂಪಡರಿದ ಮುಖವನ್ನು ಕಂಡು ಚಂದ್ರು 'ಒಪ್ಪಿಕೊಳ್ಳಿ' ಎನ್ನುವಂತೆ ಸಂಜ್ಞೆ ಮಾಡಿದ.

ಕೆಲವೇ ನಿಮಿಷಗಳಲ್ಲಿ ತಾತನನ್ನು ಮನೆಯ ಒಳಗಿನ ರೂಮಿಗೆ ಕರೆದೊಯ್ದು ಮಂಚದ ಮೇಲೆ ಮಲಗಿಸಿದರು. ತಾತನ ಕಣ್ಣಂಚಿನಲ್ಲಿ ನೀರನ್ನು

ಕಂಡ ಪೃಥ್ವಿ, ಅವನ ಹೃದಯ ಕಲಕಿ ಹೋಯಿತು. ಅತ್ತಿತ್ತ ನೋಡಿದ. ವಿಶಾಲವಾದ ಕೋಣೆಯಲ್ಲಿ ಹರಡಿದ್ದ ಬೆಳಕು ಬೀಸುತ್ತಿದ್ದ ಹಿತವಾದ ಗಾಳಿ, ನೆಮ್ಮದಿಯನ್ನು ನೀಡಿತು. ಹಾಸಿಗೆ, ಹೊದಿಕೆ ಶುಭ್ರವಾಗಿತ್ತು. ಮಲಗಿದ್ದವರ ಕಣ್ಣಿಗೆ ನೇರವಾಗಿ ಕಾಣುವಂತೆ ಇಟ್ಟಿದ್ದ ದೇವರ ಪಟ, ಅದಕ್ಕೆ ಹಾಕಿದ್ದ ಬಿಳಿಯ ಹೂವಿನ ಹಾರ, ಮುಂದಿಟ್ಟಿದ್ದ ಊದುಕಡ್ಡಿಯ ಸುವಾಸನೆ, ಅವನ ಮನಸ್ಸಿಗೆ ಸಮಾಧಾನವನ್ನು ನೀಡಿತು.

''ಬೇಜಾರು ಮಾಡ್ಕೋಬೇಡಿ ತಾತಾ. ನಾನು ನಿಮ್ಮನ್ನು ದಿನಾ ಬಂದು ನೋಡ್ಕೊಂಡು ಹೋಗ್ತೀನಿ. ಬೇಗ ವಾಸಿ ಮಾಡ್ಕೊಳ್ಳಿ. ಬೇಗ ಕರೆದುಕೊಂಡು ಹೋಗ್ತೀನಿ.'' ಅವನು ಗದ್ಗದಿತನಾಗಿದ್ದ. ತಾತ ಮೌನವಾಗಿ ಕಣ್ಣೀರು ಸುರಿಸಿದರು.

''ನೀವು ಆತಂಕಪಟ್ಟುಕೋಬೇಡಿ ನಿಮ್ಮ ತಾತ ನನಗೂ ತಾತನೇ. ನಾನು ಎಲ್ಲಾ ಚೆನ್ನಾಗಿ ನೋಡಿಕೊಳ್ತೀವಿ.'' ಪೃಥ್ವಿ ಹಿಂತಿರುಗಿ ನೋಡಿದ. ಅವನ ಬೆನ್ನ ಹಿಂದೆ ವಿಶ್ವ ನಿಂತಿದ್ದ.

''ಅಡ್ವಾನ್ಸ್ ಹಣ ಎಷ್ಟು ಬೇಕಾಗಬಹುದು ?''

''ಹಣದ ಅಗತ್ಯ ತಕ್ಷಣಕ್ಕೆ ಇಲ್ಲ. ಬೇಕಾದಾಗ ನಾವೇ ಕೇಳ್ತೀವಿ. ಇಲ್ಲಿಯ ಖರ್ಚು ಅತೀ ಕಡಿಮೆ. ಅಲ್ಲದೇ ಸಿಟಿಯ ಡಾಕ್ಟರುಗಳಂತೆ ಹಣ ವಸೂಲು ಮಾಡುವ ಪದ್ಧತಿ ಇಲ್ಲಿಲ್ಲ'' ವಿಶ್ವನನ್ನೇ ಸಂದೇಹದಿಂದ ನೋಡಿದ.

''ಮೈಗೆ ಅದೇನೋ ಎಣ್ಣೆ ತಿಕ್ತೀವಿ... ನಾಲಿಗೆಗೆ ಏನೋ ಕಾಯಿ ಉಜ್ತೀವಿ ಅಂತ ವೈದ್ಯರು ಹೇಳಿದ್ರಲ್ಲ, ಅದರಿಂದ ನೋವಾಗುಲ್ಲವೇ ?''

''ನೋವಾಗದಂತೆ ಮಾಡ್ತೀವಪ್ಪಾ...'' ನಗುತ್ತಾ ನುಡಿದ ವಿಶ್ವ.

''ನೋವಾದರೆ ಅವರಿಗೆ ಹೇಳುವ ಶಕ್ತಿಯೂ ಇಲ್ಲವಲ್ಲ ಅದಕ್ಕೇ ಹೇಳಿದೆ'' ವಿಶ್ವ ಮತ್ತೆ ನಕ್ಕ.

''ನಿಮ್ಮಂತಹ ಮೊಮ್ಮಗನನ್ನು ನಾನೆಲ್ಲೂ ಕೇಳಿಲ್ಲ. ನೀವೇ ಅವರ ತಾತನೋ ಅಂತ ನನಗೆ ಸಂದೇಹ ಬರ್ತಿದೆ.''

''ನನಗಿರುವ ಆಸ್ತಿ ಎಂದರೆ ಈ ತಾತ ಒಬ್ಬರೇ. ಅವರಿಗೆ ಒದಗಿರುವ ಸ್ಥಿತಿಯನ್ನು ಕಂಡು ವ್ಯಥೆಯಾಗಿದೆ. ಅದಕ್ಕೇ ಏನೇನೋ ಆಡಿಬಿಡ್ತೀನಿ.''

''ನಿಮ್ಮ ವ್ಯಥೆ ನನಗೆ ಅರ್ಥವಾಗುತ್ತೆ. ಆದರೆ ನೀವು ತಲೆ ಬಿಸಿ ಮಾಡ್ಕೋಬೇಡಿ''

''ನಾನು ಬರಲಾ ತಾತಾ ?'' ಎಂದು ನುಡಿದು ಅವರ ಕೈಯನ್ನೆತ್ತಿ ಬಾಯಿಗೊತ್ತಿಕೊಂಡ. ಚಂದ್ರು ''ಹೊರಡೋಣ್ವಾ ?'' ಎಂದಾಗ ಕೈ ಬಿಟ್ಟು ಹಾಗೇ ಹಿಂದೆ ಸರಿದು ಹೊರಗೆ ಬಂದು ಕಾರಿನ ಬಳಿಗೆ ಬಂದ.

ತಾನು ದಿನಾ ಬಂದು ನೋಡಿಕೊಂಡು ಹೋಗ್ತೀನಿ ಎಂದು ಪೃಥ್ವಿ ಹೇಳಿದ್ದರೂ ಕೆಲಸಗಾರರಲ್ಲಿ ನಡೆದ ಯಾವುದೋ ಜಗಳದ ನಿಮಿತ್ತವಾಗಿ ಕೋರ್ಟಿಗೆ ಹೋಗಬೇಕಾಗಿ ಬಂತು. ಎರಡು ದಿನಗಳ ನಂತರ, ತಾತನನ್ನು ನೋಡಲೆಂದು ಬಂದ. ಅವರು ನಿದ್ರಿಸುತ್ತಿದ್ದರು. ''ಈಗ ಹೇಗಿದಾರೆ ! ಸ್ವಲ್ಪ ವಾಸೀನಾ ?'' ಕೇಳಿದ.

''ಎರಡೇ ದಿನದೊಳಗೆ ಗುಣಮುಖರಾಗಲು ಸಾಧ್ಯಾನಾ ? ಈ ಔಷಧೋಪಚಾರಗಳು ಮೈ ಹತ್ತಲು ಹತ್ತು ಹದಿನೈದು ದಿವಗಳಾದರೂ ಬೇಕು... ಆಮೇಲೂ ಅವರು ಮೊದಲಿನಂತಾಗಲು ಸ್ವಲ್ಪ ಸಮಯ ಬೇಕೇ ಬೇಕು. ಹೀಗೆ ಆತುರಪಟ್ಟರೆ ಹೇಗೆ ?'' ವಿಶ್ವ ನಕ್ಕ.

''ತಾತ ಮೊದಲಿನಂತಾಗಲಿ ಅನ್ನೋ ಆತುರ ಯಾರಿಗಿರುಲ್ಲ ? ನಿಮಗೂ ಒಬ್ಬರು ತಾತ ಇದ್ದರೆ ನಿಮಗೂ ಗೊತ್ತಾಗುತ್ತಿತ್ತು.'' ವಿಶ್ವ ಸುಮ್ಮನೇ ನಕ್ಕ. ತನ್ನ ತಾತನ ಬಗ್ಗೆ ಹೇಳಿಕೊಳ್ಳುವ ಇಚ್ಛೆಯಾಗಲಿಲ್ಲ. ಆದರೂ ಹೇಳಿದ.

''ನಾನು ನನ್ನ ತಾತನ ಜೊತೆಯಲ್ಲಿ ಬೆಳೆಯಲಿಲ್ಲ. ಆದ್ದರಿಂದ ನನಗೆ ತಾತನ ಬೆಲೆ ಗೊತ್ತಿಲ್ಲ'' ಅಲ್ಲಿ ನೋವಿನ ಗೆರೆಗಳನ್ನು ಗುರುತಿಸಿದ ಪೃಥ್ವಿ.

''ನಾನೊಂದು ಮಾತು ಹೇಳ್ತೀನಿ. ನೀವು ದಿನ ದಿನ ಬಂದು, ನಿಮ್ಮ ತಾತನ ಆರೋಗ್ಯದಲ್ಲಿ ಸುಧಾರಣೆಯನ್ನು ಹುಡುಕಬೇಡಿ. ವಾರಕ್ಕೆ ಒಮ್ಮೆ ಬನ್ನಿ. ಆಗ ನಿಮಗೇ ಗೊತ್ತಾಗುತ್ತದೆ'' ಆ ಮಾತಿಗೆ ಪೃಥ್ವಿ ಏನನ್ನೂ ಹೇಳಲಿಲ್ಲ.

ಮೂರು ವಾರಗಳು ಹಾಗೂ ಹೀಗೂ ಕಳೆದವು. ಪೃಥ್ವಿಯ ಸಹನೆಗೆ ಸವಾಲಾಗುವಂತಿದ್ದವು. ಒಂದು ದಿನ ದಿಢೀರನೇ ವೈದ್ಯಾಲಯಕ್ಕೆ ಬಂದವನು ವಿಶ್ವನನ್ನು ನೇರವಾಗಿ ಪ್ರಶ್ನಿಸಿದ.

''ನಾನೊಂದು ಮಾತು ಕೇಳ್ತೀನಿ. ನೀವು ನಿಜವನ್ನೇ ಹೇಳಬೇಕು... ಯಾರೋ ಹೇಳಿದ್ರು... ಪೆರಾಲಿಸಿಸ್‌ಗೆ ಪಾರಿವಾಳಗಳ ರಕ್ತ ಕುಡಿಸ್ತಾರಂತೆ.. ಮಾಂಸ ತಿನ್ನಿಸ್ತಾರಂತೆ.. ಮೈಗೆಲ್ಲಾ ಆ ರಕ್ತ ಬಳೀತಾರಂತೆ ಹೌದಾ ?''

ವಿಶ್ವ ಗಂಭೀರನಾದ. ''ಈ ಮಾತನ್ನು ನೀವು ನಂಬಿಬಿಟ್ರಾ ?''

''ನಂಬಿಕೆ ಬರಲಿಲ್ಲ ಅದಕ್ಕೇ ಕೇಳ್ತಿದೀನಿ. ನಮ್ಮ ಡ್ರೈವರ್‌ಗೆ ಯಾರೋ ಹೇಳಿದ್ರಂತೆ...''

''ಯಾರೋ ಹೇಳಿದ ಮಾತಿಗೇಕೆ ತಲೆ ಕೆಡಿಸಿಕೊಳ್ತೀರಿ ? ನಿಮಗೆ ನಿಮ್ಮ ತಾತನ ಆರೋಗ್ಯ ಮುಖ್ಯಾನೋ ಅಥವಾ ನಾವು ಏನೇನು ಕೊಡ್ತೀವಿ ಅನ್ನೋದು ಮುಖ್ಯಾನೋ ...?''

''ಹಾಗಲ್ಲ...''

''ಇಂಗ್ಲೀಷ್ ವೈದ್ಯಕೀಯ ಪದ್ಧತಿಯಲ್ಲಿ ಕೊಡುವ ಇಂಜೆಕ್ಷನ್, ಮಾತ್ರೆ ಔಷಧಿಗಳಲ್ಲಿ ಏನೇನಿರುತ್ತೆ ಅಂತ ನೀವೆಂದಾದ್ರೂ ಪರೀಕ್ಷಿಸಿದೀರಾ ? ಆ ಡಾಕ್ಟರು ಹೇಳಿದ ಹಾಗೆ ಕೇಳ್ತೀರಿ. ಇಲ್ಲಿಯೂ ಹಾಗೇ... ನಮ್ಮ ಕೆಲಸ, ನಮಗಿರಲಿ ; ನಿಮ್ಮ ಆರೋಗ್ಯ ನಿಮಗಿರಲಿ. ಅಲ್ಲಿ ನೋಡಿ ಪಾರಿವಾಳಗಳು ಸ್ವಚ್ಛಂದವಾಗಿ ಹಾರಾಡುತ್ತಿವೆ. ಗುಟರ್-ಗುಟರ್ ಅಂತ ಇರೋ ಆ ಮುದ್ದು ಪಾರಿವಾಳಗಳನ್ನು ಕಡಿಯಲು ನಮಗೆ ಹೇಗೆ ಮನಸ್ಸು ಬರುತ್ತೆ ನೀವೇ ಹೇಳಿ.''

ಅಲ್ಲಲ್ಲೇ ಹಾರಾಡುತ್ತಿದ್ದ ಪಾರಿವಾಳಗಳನ್ನು ಪೃಥ್ವಿ ನೋಡಿದರೂ ಅವನ ಅನುಮಾನ ಪರಿಹಾರವಾಗಲಿಲ್ಲ. ಆದರೆ ಮತ್ತೆ ಮತ್ತೆ ಪ್ರಶ್ನೆಗಳನ್ನು ಕೇಳಲು ಹಿಂಜರಿದ. ತಾತ ಎಚ್ಚರಗೊಂಡಿದ್ದರು. ಪೃಥ್ವಿಯನ್ನು ಸಂಜ್ಞೆ ಮಾಡಿ ಹತ್ತಿರಕ್ಕೆ ಬಾ ಎಂದು ಕರೆದರು. ಪೃಥ್ವಿ ಅವರ ಬಳಿಯಲ್ಲಿ ಬಂದು ನಿಂತ. ತಾತನ ಕಣ್ಣು ಗಳಲ್ಲಿ ಹೊಳಪನ್ನು ಕಂಡ. ಅವರು ಮಾತನ್ನಾಡಲು ಪ್ರಯತ್ನಿಸುತ್ತಿರುವುದನ್ನು ಕಂಡು ಸಮಾಧಾನವಾಗಿತ್ತು. ಆದರೆ ಅವರ ನುಡಿಗಳಲ್ಲಿ ಇನ್ನೂ ಸ್ಪಷ್ಟತೆ ಇರಲಿಲ್ಲ.

ಎರಡು ತಿಂಗಳೊಳಗೆ ಸುಬ್ಬರಾಯಪ್ಪ ಸಂಪೂರ್ಣವಾಗಿ ಅಲ್ಲದಿದ್ದರೂ ತಕ್ಕಮಟ್ಟಿಗೆ ಚೇತರಿಸಿಕೊಂಡಿದ್ದರು. ಕೋಲನ್ನೂರಿಕೊಂಡು ಓಡಾಡುವಷ್ಟು ಬಲವನ್ನು ಪಡೆದುಕೊಂಡಿದ್ದರು. ಆದರೆ, ಮೊದಲಿನಂತೆ ಶಕ್ತಿವಂತರಾಗಿರ ಲಿಲ್ಲ. ಅವರ ಕೆಲಸಗಳನ್ನೆಲ್ಲ ವಿಶ್ವವೇ ಖುದ್ದಾಗಿ ಮಾಡುತ್ತಿದ್ದ. ವಿಶ್ವನ ಪ್ರಯತ್ನ, ಕರ್ತವ್ಯ, ಪೃಥ್ವಿಯನ್ನು ಮೆಚ್ಚಿಸಿತ್ತು. ಬಾಯಿ ತುಂಬಾ ಹೊಗಳಿದ.

''ನನ್ನ ತಾನನ್ನು ನಿಮ್ಮ ಸ್ವಂತ ತಾತನಂತೆ ನೋಡಿಕೊಂಡಿದೀರಿ. ನಿಮ್ಮ ಈ ಋಣವನ್ನು ನಾನು ಈ ಜನ್ಮದಲ್ಲಿ ತೀರಿಸಲಾರೆ...''

''ಇದು ನನ್ನ ಕರ್ತವ್ಯ. ಮಧ್ಯೆ ಋಣದ ಮಾತೆಲ್ಲಿ ?''

''ಆದರೂ, ಈ ನೆವದಿಂದ ನೀವು ನನಗೆ ಆತ್ಮೀಯ ಮಿತ್ರರಾದಿರಿ.''

''ನನ್ನ ನಿಮ್ಮ ಸ್ನೇಹ ಹೀಗೇ ಮುಂದುವರೆಯಲಿ... ಆಗಾಗ್ಗೆ ಬರ್ತಿರಿ''

''ಹಾಗಾದ್ರೆ ತಾತನ್ನ ಇವತ್ತೇ ಮನೆಗೆ ಕರೆದುಕೊಂಡು ಹೋಗಬಹುದಾ ?''

''ಬೇಡ ಬೇಡ... ಇನ್ನೂ ಒಂದು ತಿಂಗಳು ಅವರು ಇಲ್ಲಿರಲಿ. ನಂತರ ಕರೆದುಕೊಂಡು ಹೋಗಿ. ಆನಂತರ ಮನೆಯಲ್ಲಿ ಅವರನ್ನು ಹೇಗೆ ನೋಡಿಕೊಳ್ಳಬೇಕು, ಏನೇನು ಔಷಧಿ ಪಥ್ಯ ಕೊಡಬೇಕು ಅಂತ ಎಲ್ಲವನ್ನೂ ಬರೆದುಕೊಡ್ತೇನಿ. ಅದನ್ನು ಅನುಸರಿಸಬೇಕು. ಆದಷ್ಟೂ ಅವರ ಮನಸ್ಸಿಗೆ ಆಘಾತವಾಗದಂತೆ ನೋಡಿಕೊಳ್ಳಬೇಕು. ಆಗಲೇ ಅವರು ಆರೋಗ್ಯವಂತ ರಾಗಿರಲು ಸಾಧ್ಯ...'' ಪೃಥ್ವಿ ಅವನ ಮಾತಿಗೆ ತಲೆದೂಗಿದ.

* * * *

ಕಾರಿನಿಂದ ಇಳಿದು ವಾಕಿಂಗ್ ಸ್ಟಿಕ್‌ನ ಆಧಾರದ ಮೇಲೆ ನಿಧಾನವಾಗಿ ಬಂದವರನ್ನು ಅಜಯ-ವಿಜಯ ಓಡಿ ಬಂದು ತಬ್ಬಿಕೊಂಡರು. ಸುಬ್ಬರಾಯಪ್ಪ ಇಬ್ಬರನ್ನೂ ತಬ್ಬಿಕೊಂಡರು. ''ತಾತಾ ತಾತಾ ಕತೆ ಹೇಳ್ತೀರಾ ?'' ಸಂಭ್ರಮದಿಂದ ಕೇಳಿದಾಗ ಪೃಥ್ವಿ ನುಡಿದ.

''ಈಗ ಬೇಡ, ಅವರಿಗೆ ಸುಸ್ತಾಗಿದೆ. ಮೊದಲು ಸ್ವಲ್ಪ ರೆಸ್ಟ್ ತಗೊಳ್ಳಲಿ. ನೀವೇ ತಾತನ ಬಳಿ ಕುಳಿತು ಅವರಿಗೆ ಒಳ್ಳೊಳ್ಳೆಯ ಕತೆಗಳನ್ನು ಹೇಳಬೇಕು ತಿಳೀತಾ ?'' ತಾತ ನಕ್ಕರು.

ತಾತನ ರೂಮಿನಲ್ಲಿ ಎಲ್ಲಾ ಸೌಲಭ್ಯಗಳಿದ್ದವು. ಹಗಲೂ ರಾತ್ರಿ ಅವರೊಡನೆ ಇರಲೆಂದು ಇಬ್ಬರು ನರ್ಸುಗಳನ್ನು ಗೊತ್ತು ಮಾಡಿದ್ದ. ಬೆಳಿಗ್ಗೆ ಸಾಯಂಕಾಲ ವಾಕಿಂಗ್ ಮಾಡಿಸುವುದು, ಮಾತುಗಳನ್ನಾಡಿಸುವುದು, ಅವರ ಜ್ಞಾಪಕಶಕ್ತಿ ಹೆಚ್ಚುವಂತೆ ಒಳ್ಳೆಯ ಪುಸ್ತಕಗಳನ್ನು ದಿನಪತ್ರಿಕೆಗಳನ್ನು ಓದುವುದು, ಹಾಗೇ ಕಾಲಕಾಲಕ್ಕೆ ಸರಿಯಾಗಿ ಔಷಧಿ,ಪಥ್ಯಾಹಾರಗಳನ್ನು ಕೊಡುವುದು ಆ ನರ್ಸುಗಳ ಕೆಲಸ.

ಈಗ ಪೃಥ್ವಿ ನಿರಾತಂಕದಿಂದ ಮುಂಚಿನಂತೆ ಆಫೀಸಿಗೆ ಹೋಗಿ ಬರುತ್ತಿದ್ದ. ದಿನಾ ಬೆಳಿಗ್ಗೆ, ರಾತ್ರಿ ತಾತನ ಆರೋಗ್ಯವನ್ನು ವಿಚಾರಿಸುತ್ತಿದ್ದ. ಇದ್ದಕ್ಕಿದ್ದಂತೆ ವೈದ್ಯಾಲಯಕ್ಕೆ ಕೊಡುವ ಹಣ ಬಾಕಿ ಉಳಿದಿದೆ ಎನ್ನುವುದು ನೆನಪಿಗೆ ಬಂತು. ತತ್‌ಕ್ಷಣವೇ ಹೊರಟ. ವಿಶ್ವ ಇರಲಿಲ್ಲ. ಹಿರಿಯ ವೈದ್ಯರು

ಹಣವನ್ನು ತೆಗೆದುಕೊಳ್ಳಲು ನಿರಾಕರಿಸಿದರು. ''ಇದನ್ನೆಲ್ಲ ನಮ್ಮ ವಿಶ್ವ ನೋಡಿ ಕೊಳ್ಳುತ್ತಾನೆ. ಹಣಕಾಸಿನ ವಿಷಯ ಅವನಿಗೆ ಸೇರಿದ್ದು'' ಎಂದುಬಿಟ್ಟರು.

''ಅವರು ಎಲ್ಲಿ ಸಿಗ್ತಾರೆ ? ನಾನು ಅವರೊಡನೆ ಮಾತನಾಡಬೇಕು''

''ಅವನು ಪ್ರವಾಸ ಹೋಗಿದ್ದಾನೆ. ಬಂದ ಕೂಡಲೇ ಅವನೇ ನಿಮ್ಮ ಮನೆಗೆ ಬರುತ್ತಾನೆ. ಹೇಗೂ ನಿಮ್ಮ ತಾತನ ಯೋಗಕ್ಷೇಮವನ್ನು ವಿಚಾರಿಸಲು ಬರಲೇ ಬೇಕಲ್ಲ'' ಎಂದರು. ಪೃಥ್ವಿ ಹಾಗೇ ಹಿಂತಿರುಗಿದ.

ಎಂಟು ಹತ್ತು ದಿನಗಳು ಕಳೆದ ನಂತರ, ಒಂದು ದಿನ ಪೃಥ್ವಿ ತನ್ನ ತಮ್ಮಂದಿರನ್ನೂ ತಾತನನ್ನೂ ಹೊರಗೆ ಸುತ್ತಾಡಿಸಲೆಂದು ಕರೆದುಕೊಂಡು ಹೋಗಿದ್ದ. ಆ ಸಮಯದಲ್ಲಿ ಪೃಥ್ವಿಯನ್ನು ಕೇಳಿಕೊಂಡು ವಿಶ್ವ ಅವರ ಮನೆಗೆ ಬಂದ. ಬಾಗಿಲು ತೆಗೆದವಳು ನಳಿನಿಯೇ. ಆದರೆ ಅವಳಿಗೆ ತಕ್ಷಣ ವಿಶ್ವನ ಗುರುತು ಸಿಗಲಿಲ್ಲ. ಆದರೆ ವಿಶ್ವ ಅವಳನ್ನು ಗುರುತಿಸಿದ್ದ. ತಕ್ಷಣವೇ ಪಕ್ಕಕ್ಕೆ ಮುಖ ತಿರುಗಿಸಿ, ಹಾಗೇ ಹೊರಡಲಿದ್ದವನನ್ನು ನಳಿನಿಯೇ ಪ್ರಶ್ನಿಸಿದಳು.

''ನೀವು ಯಾರು ?''

''ವಿಶ್ವ ಬಂದಿದ್ದ ಅಂತ ಪೃಥ್ವಿಗೆ ಹೇಳಿ....'' ಎಂದು ನುಡಿದು, ಹಿಂತಿರುಗಿ ಸಹ ನೋಡದೇ ಹಾಗೇ ಹೊರಟುಹೋದ.

''ವಿಶ್ವ.......'' ಇವನು ತನ್ನ ವಿಶ್ವನೇ ಇರಬಹುದೇ ಎಂದು ಆಲೋಚಿಸಿ ಕೂಗುವಷ್ಟರಲ್ಲಿ ಅವನು ಗೇಟನ್ನು ದಾಟಿ ಹೊರಟುಹೋಗಿದ್ದ. ಅವಳು ಕಳವಳಗೊಂಡಳು.

''ಅವನು ನಮ್ಮ ವಿಶ್ವನೇ.... ನನಗೇಕೆ ಅವನ ಗುರುತು ತಕ್ಷಣಕ್ಕೆ ಸಿಕ್ಕಲಿಲ್ಲ. ಅವನು ಪೃಥ್ವಿಗೆ ಹೇಗೆ ಪರಿಚಯವಾದ ? ಅವನಿಗೆ ನನ್ನ ಗುರುತು ಸಿಕ್ಕಿರಬಹುದು. ಅದಕ್ಕೇ ಹಾಗೇ ಬೆನ್ನು ತೋರಿಸಿ ಹೊರಟು ಹೋದನೋ ಏನೋ ? ಅವನಿಗೆ ನನ್ನ ಮೇಲೆ ಕೋಪ ಅಂತ ಅಪ್ಪ ಹೇಳುತ್ತಿದ್ದರು...'' ಒಂದು ಗಳಿಗೆ ಶಾಂತವಾಗಿ ನಿಂತಿದ್ದರೆ, ಎಲ್ಲವನ್ನೂ ವಿಚಾರಿಸಬಹುದಾಗಿತ್ತು. ಈಗ ಏನು ಮಾಡಲಿ ? ಹಾಗೇ ಯೋಚಿಸುತ್ತಾ ನಿಂತವಳನ್ನು ಕಾರಿನ ಹಾರನ್ ಎಚ್ಚರಿಸಿತು. ಕಾರಿನಿಂದ ಇಳಿದ ಅಜಯ ವಿಜಯರು ಅಮ್ಮನ ಬಳಿಗೆ ಓಡಿ ಬಂದಿದ್ದರು. ಪೃಥ್ವಿ, ಚಂದ್ರು ಇಬ್ಬರೂ ನಿಧಾನವಾಗಿ ತಾತನನ್ನು ನಡೆಸಿಕೊಂಡು ಬಂದರು. ಆ ಗಳಿಗೆಯಲ್ಲಿ ವಿಶ್ವನನ್ನು ಮರೆತಳು ನಳಿನಿ.

ರಾತ್ರಿ ಎಲ್ಲರೂ ಮಲಗಿದ ಮೇಲೆ, ಹಾಸಿಗೆಯ ಮೇಲೆ ಉರುಳಿಕೊಂಡಾಗ ಅವಳಿಗೆ ಮತ್ತೆ ವಿಶ್ವ ನೆನಪಾಗಿದ್ದ. ಎದ್ದು, ಪೃಥ್ವಿಯ ರೂಮಿನ ಬಾಗಿಲ ಬಳಿಗೆ ಬಂದು ಅವನನ್ನು ಕೂಗಿದಳು. 'ತಾತನಿಗೆ ಏನಾಯ್ತೋ...' ಎನ್ನುವ ಆತಂಕದಿಂದ ಗಡಬಡಿಸಿ ಎದ್ದು ಹೊರಗೆ ಬಂದ ಪೃಥ್ವಿ.

''ನಿನ್ನನ್ನು ಕೇಳಿಕೊಂಡು ವಿಶ್ವ ಎಂಬ ಹುಡುಗ ಬಂದಿದ್ದ'' ಅವನನ್ನೇ ಗಮನಿಸುತ್ತಿದ್ದಳು.

''ಹೌದಾ ? ಯಾವಾಗ ಬಂದಿದ್ರು ? ಮತ್ತೆ ಯಾವಾಗ ಬರ್ತಾರಂತೆ ?'' ಅವನ ಕುತೂಹಲ ಇವಳಿಗೆ ಅಚ್ಚರಿಯನ್ನುಂಟು ಮಾಡಿತು.

''ಏನೋ ಗೊತ್ತಿಲ್ಲ. ಬಂದಂತೆಯೇ ಹಾಗೇ ಹಿಂತಿರುಗಿ ಹೊರಟು ಹೋದ. ಒಂದು ಗಳಿಗೆ ಸಹ ನಿಲ್ಲಲಿಲ್ಲ. ಅವನು ಯಾರು ? ನಿನ್ನ ಸ್ನೇಹಿತಾನಾ ?''

''ಹುಂ, ನನಗೆ ಸ್ನೇಹಿತ. ತಾತನಿಗೆ ವೈದ್ಯ.''

''ವೈದ್ಯ ? ಅವನನ್ನು ನೋಡಿದರೆ ಹಾಗೆನ್ನಿಸುವುದಿಲ್ಲ.''

''ಅವರು ವೈದ್ಯರೇ. ತಾತನನ್ನು ಇಷ್ಟು ದಿನಗಳೂ ನೋಡಿಕೊಂಡವರು ಅವರೇ. ಈಗಲೂ ತಾತನ್ನ ನೋಡೋಕೆ ಅಂತ ಬಂದಿದ್ರೇನೋ... ಮತ್ತೆ ಬರ್ತಾರೆ ಬಿಡಿ'' ತನಗೇ ಹೇಳಿಕೊಂಡ.

ತನ್ನ ಮಗ ವಿಶ್ವ ! ಆ ಪೋಕರಿ ವಿಶ್ವ ವೈದ್ಯನಾಗಲು ಸಾಧ್ಯವೇ ಇಲ್ಲ. ಇವನು ಯಾವ ವಿಶ್ವನೋ ? ಆದರೆ ಒಂದು ಗಳಿಗೆ ಸಹ ನಿಲ್ಲದೇ ಮುಖ ತಿರುಗಿಸಿ ಏಕೆ ಹೊರಟು ಹೋದ ? ಪೃಥ್ವಿ ಇದಾನೋ ಇಲ್ಲವೋ ಅಂತ ಸಹ ಕೇಳಲಿಲ್ಲ. ಅವನೆಂತಹ ವೈದ್ಯ ? ಸಂದೇಹ ಹೆಚ್ಚಾಯಿತು. ಒಂದೆರಡು ದಿನಗಳು ಕಳೆದರೂ ಅವಳ ತಳಮಳ ಕಡಿಮೆಯಾಗಲಿಲ್ಲ. ಒಂದು ಸಾರಿ ತಾನಾಗಿಯೇ ವಿಶ್ವನನ್ನು ಭೇಟಿಯಾಗಿ ಮಾತನಾಡಲೇಬೇಕು ಎಂದು ಪದೇ ಪದೇ ಅನ್ನಿಸತೊಡಗಿದ್ದರಿಂದ ಅದನ್ನು ಕಾರ್ಯಗತ ಮಾಡಿದಳು. ಪೃಥ್ವಿಗೆ ತಾನೆಲ್ಲಿಗೋ ಹೋಗಬೇಕಾಗಿದೆ ಎಂದಷ್ಟೇ ತಿಳಿಸಿ, ಚಂದ್ರುವಿನೊಡನೆ ಕಾರಿನಲ್ಲಿ ಒಬ್ಬಳೇ ಹೊರಟಳು.

ಕಾರು ವೈದ್ಯಾಲಯದ ಮುಂದೆ ನಿಂತಿ. ಉ ಅಲ್ಲೇ ಕೈ ತೋಟದಲ್ಲಿದ್ದ ವಿಶ್ವ ಚಂದ್ರುವನ್ನು ಕಂಡು ಕಾರಿನ ಸಮೀಪಕ್ಕೆ ಬಂದ. ಕಾರಿನಲ್ಲಿ ತಾತನಿರಬಹುದೇ

ಎಂದುಕೊಂಡು ಒಳಗೆ ಇಣುಕಿದ. ಆದರೆ ನಳಿನಿಯನ್ನು ಕಂಡೊಡನೆ ಹಾವನ್ನು ಮೆಟ್ಟಿದವನಂತೆ ಬೆಚ್ಚಿ ಹಿಂದಕ್ಕೆ ಸರಿದ. ಅವನು ಹಾಗೇ ಹಿಂದಕ್ಕೆ ಸರಿದು ಹೊರಟು ಹೋಗ್ತಾನೆ ಅಂತ ನಳಿನಿಗೆ ಅನ್ನಿಸಿತು. ಕಾರಿನಿಂದ ಇಳಿದು ''ವಿಶ್ವಾ ನಿಂತ್ಕೋ'' ಎಂದಳು. ಚಂದ್ರು ಚಕಿತನಾಗಿ ಯಜಮಾನಿಯನ್ನೇ ನೋಡಿದ. ಆದರೆ ವಿಶ್ವನಿಲ್ಲಲಿಲ್ಲ. ತನಗಲ್ಲವೆಂಬಂತೆ ದುಡುದುಡು ಆ ಮನೆಯೊಳಗೆ ಹೊರಟುಹೋದ. ನಳಿನಿಗೆ ಮುಖಭಂಗವಾದಂತಾಯ್ತು. ಆದರೂ ಚಂದ್ರುಗೆ ಅನುಮಾನ ಬರಬಾರದೆಂದು ತಾನೇ ಅವನ ಹಿಂದೆ ಒಳಗೆ ಹೋದಳು. ಹಿರಿಯ ವೈದ್ಯರು ಅಲ್ಲೇ ಇದ್ದರು. ಇವಳು ಕೈ ಮುಗಿದಳು. ''ಏನಾಗ ಬೇಕಾಗಿತ್ತು'' ಆತ ವಿಚಾರಿಸಿದರು.

''ನಾನು ನಿಮ್ಮ ಹತ್ತಿರ ಸ್ವಲ್ಪ ಪ್ರತ್ಯೇಕವಾಗಿ ಮಾತನಾಡಬೇಕಾಗಿತ್ತು. ನಿಮ್ಮ ಜೊತೆ ಇದಾನಲ್ಲ... ಆ ವಿಶ್ವ ಯಾರು ? ಎಲ್ಲಿಂದ ಬಂದವನು ಅಂತ ಸ್ವಲ್ಪ ತಿಳಿಸ್ತೀರಾ ?''

''ಯಾಕೆ ತಾಯೀ... ?''

''ನನಗೂ ಒಬ್ಬ ವಿಶ್ವ ಅಂತ ಮಗನಿದ್ದ. ಚಿಕ್ಕವಯಸ್ಸಿನಲ್ಲೇ ಮನೆಬಿಟ್ಟು ಹೋದವನು, ಇದುವರೆಗೂ ಎಲ್ಲಿದಾನೆ ಅಂತ ತಿಳಿದಿಲ್ಲ. ಈಗ ಈ ವಿಶ್ವ ಅವನೇ ಇರಬಹುದಾ ಅನ್ನೋ ಅನುಮಾನ ನನಗೆ.''

''ಅವನು ತಾನು ಅನಾಥ... ತನಗೆ ತಂದೆ ತಾಯಿ ಯಾರೂ ಇಲ್ಲ ಅಂತ ಹೇಳಿದ್ದ ನೆನಪು. ಆದರೆ ನಾನೆಂದೂ ಕೆದಕಿ ಕೇಳಿರಲಿಲ್ಲ... ಅವನನ್ನ ಕರೆಸ್ತೀನಿ. ನೀವು ಮಾತಾಡಬಹುದು.''

ಆದರೆ ವಿಶ್ವ ಅಲ್ಲಿರಲಿಲ್ಲ. ಅಲ್ಲಿಂದ ಎಲ್ಲಿಗೋ ಹೊರಟುಹೋಗಿದ್ದ. ನಳಿನಿ ಪೆಚ್ಚಾದಳು. ಆದರೆ ಈ ವಿಷಯವನ್ನು ಚಂದ್ರುಗೆ ಹೇಳಲಿಲ್ಲ. ಆದರೆ ತಾನು ಚಿಕ್ಕಮ್ಮನನ್ನು ವೈದ್ಯಾಲಯಕ್ಕೆ ಕರೆದುಕೊಂಡು ಹೋಗಿ ಬಂದೆನೆಂದು ಚಂದ್ರು ಪೃಥ್ವಿಗೆ ತಿಳಿಸಿದ. ಪೃಥ್ವಿ ಹುಬ್ಬು ಗಂಟಿಕ್ಕಿದ. ಯಾರಿಗೂ ತಿಳಿಸದಂತೆ ಚಿಕ್ಕಮ್ಮ ಅಲ್ಲಿಗೆ ಹೋದುದೇಕೆ ? ವಿಶ್ವನೂ ಮತ್ತೆ ಬಂದಿಲ್ಲ... ವಿಶ್ವನೊಡನೆ ಚಿಕ್ಕಮ್ಮ ಏನು ಮಾತುಗಳನ್ನಾಡಿರಬಹುದು. ಕುತೂಹಲ ತಡೆಯಲಾರದೇ ಎರಡು ದಿನಗಳ ನಂತರ ತಾನೇ ವಿಶ್ವನನ್ನು ಕಾಣಲೆಂದು ಹೊರಟ. ವಿಶ್ವ ಎಂದಿನಂತೆ ನಗುನಗುತ್ತಾ ಮಾತನಾಡಿಸಿದಾಗ, ಏನೋ ನೆಮ್ಮದಿ. ತಾತನ ಆರೋಗ್ಯದ ಬಗ್ಗೆ ತಿಳಿಸಿ, ಹೇಳಿದ.

"ತಾತ ನಿಮ್ಮನ್ನು ನೋಡಬೇಕೂಂತ ಹೇಳುತ್ತಿರುತ್ತಾರೆ. ಯಾವಾಗ ಬರ್ತೀರಿ ?"

"ಅವರನ್ನೇ ಒಮ್ಮೆ ಕರೆದುಕೊಂಡು ಬನ್ನಿ... ಅವರಿಗೂ ಒಂದು ತಿರುಗಾಟವಾದಂತಾಗುತ್ತದೆ."

"ನಾವುಗಳೆಲ್ಲರೂ ಇಲ್ಲದಾಗ ಒಂದು ದಿನ ಬಂದ್ರಂತೆ... ಏನೂ ಹೇಳದೇ ಹಾಗೇ ಹೊರಟುಹೋದ್ರಂತೆ. ಮತ್ತೆ ಬರಲೇ ಇಲ್ಲ ಏಕೆ ?"

"ಹೌದು ಬರಲಿಲ್ಲ. ಅದು ನನ್ನ ಇಷ್ಟ" ವಿಶ್ವ ಒರಟಾಗಿ ನುಡಿದಾಗ, ಪೃಥ್ವಿ ಬೆರಗಾದ. ಇದ್ದಕ್ಕಿದ್ದಂತೆ ಇವನಿಗೇನಾಯ್ತು ? ಚಿಕ್ಕಮ್ಮ ಮತ್ತು ವಿಶ್ವನ ಮಧ್ಯೆ ಏನು ಮಾತುಕತೆ ನಡೆದಿರಬಹುದು ? ಅಲ್ಲಿ ಏನಾದರೂ ರಹಸ್ಯ ಅಡಗಿರಬಹುದೇ ಎಂಬ ಚಿಂತೆ ಕಾಡಿತು. ಈ ವಿಷಯ ತಾತನಿಗೆ ತಿಳಿದಿರಬಹುದೇ ? ಆದರೆ ಈಗ ತಾತನೊಡನೆ ಈ ಮಾತುಗಳನ್ನಾಡುವುದು ಖಂಡಿತಾ ಸರಿಯಲ್ಲ. ಅಲ್ಲದೇ ಶ್ರೀಕಂಠಯ್ಯನ ಮೊಮ್ಮಗ ವಿಶ್ವ ಅನ್ನೋನು ಇದಾನೆ ಅನ್ನುವ ವಿಚಾರ ಮಾತನಾಡುವಾಗಲೇ ತಾತನಿಗೆ ಹೀಗಾಗಿದ್ದು. ಹ್ಞಾಂ... ಹೌದು... ಶ್ರೀಕಂಠಯ್ಯನ ಮೊಮ್ಮಗನೇ ಈ ವಿಶ್ವನಿರಬಹುದೇ ? ಹಾಗಿದ್ದರೆ ಈ ವಿಶ್ವ ಚಿಕ್ಕಮ್ಮನಿಗೆ ಹೇಗೆ ಪರಿಚಯ ? ಇದೇ ಶ್ರೀಕಂಠಯ್ಯನಿಗೂ ನನ್ನ ತಂದೆಗೂ ಸ್ನೇಹವಿತ್ತೆ? ಈ ವಿಷಯ ಚಿಕ್ಕಮ್ಮನಿಗೆ ಖಂಡಿತಾ ತಿಳಿದಿರುತ್ತೆ. ಆದರೆ ಚಿಕ್ಕಮ್ಮನನ್ನು ಕೇಳಲು ಆಗುವುದಿಲ್ಲ. ವಿಶ್ವನನ್ನೇ ಕೇಳಬೇಕು... ಅದಕ್ಕೆ ತಕ್ಕ ಸಮಯ ಸಿಗಬೇಕು, ಎಂದು ಆ ಸಮಯಕ್ಕಾಗಿ ಕಾಯತೊಡಗಿದ. ಈ ಮಧ್ಯೆ ನಳಿನಿ ಮತ್ತೆ ಎರಡು ಬಾರಿ, ವೈದ್ಯಾಲಯಕ್ಕೆ ಹೋಗಿ ವಿಶ್ವನೊಡನೆ ಮಾತನಾಡಲು ಪ್ರಯತ್ನಿಸಿದ್ದಳು. ಆದರೆ ವಿಶ್ವ ಅವಳನ್ನು ಕಂಡೊಡನೆ ಅಲ್ಲಿಂದ ಮರೆಯಾಗಿದ್ದ.

ತಾತ ಆಗಾಗ್ಗೆ ವಿಶ್ವ ಏಕೆ ಬಂದಿಲ್ಲವೆಂದು ಪ್ರಶ್ನಿಸುತ್ತಿದ್ದರು. ಏಕೋ ಏನೋ ತಾತನ ಸಿಡಿಮಿಡಿ ಹೆಚ್ಚಾಗಿದೆಯೆಂದೆನಿಸಿತ್ತು. ಪೃಥ್ವಿ ತಾನೇ ಅವನನ್ನು ಕರೆತರಲು ಹೊರಟ. ವಿಶ್ವ ಎಂದಿನಂತೆ ಮಾತನಾಡಿಸಿದ.

"ತಾತ ನಿಮ್ಮನ್ನು ನೋಡಬೇಕೂಂತ ಹಂಬಲಿಸುತ್ತಾ ಇದಾರೆ. ನೀವು ಏಕೆ ಅವಾಯ್ಡ್ ಮಾಡ್ತಿದೀರಿ ಅಲ್ಲ... ನಿಮಗೂ ಅವರು ತಾತನ ಹಾಗೆ ಅಂತ ಅನ್ನುತ್ತಿದ್ದ ಮಾತುಗಳು ಮರೆತು ಹೋಯ್ತಾ ಇಷ್ಟು ಬೇಗ ?"

"ಅದು.... ಹಾಗಲ್ಲ ಪೃಥ್ವಿ...."

''ಏನೇ ಬೇಡದ ವಿಷಯಗಳು ಇರಬಹುದು ವಿಶ್ವ... ಆದರೆ ತಾತನ ಚಡಪಡಿಕೆ ನೋಡಿದಾಗ, ಅವರ ಆಸೆಯನ್ನು ಈಡೇರಿಸಲೇ ಬೇಕು ಅಂತ ಅನ್ನಿಸುತ್ತೆ ನಮ್ಮ ತಾತನಿಗೋಸ್ಕರ ನೀವು ಬರಲೇಬೇಕು... ಇಲ್ಲದಿದ್ದರೆ ನಾನು ಇಲ್ಲಿಂದ ಕದಲುವುದಿಲ್ಲ'' ಪೃಥ್ವಿ ಪಟ್ಟು ಹಿಡಿದವನಂತೆ ಕೂತ.

ವಿಶ್ವ ಗಂಭೀರವಾಗಿ ನುಡಿದ. ''ಸರಿ ಬರುತ್ತೇನೆ. ಆದರೆ ನಾನು ಬಂದ ಸಮಯದಲ್ಲಿ ತಾತನ ಹೊರತು, ಇನ್ಯಾರೂ ಅಲ್ಲಿರಬಾರದು. ಹಾಗಿದ್ದರೆ ಮಾತ್ರ ಬರ್ತೀನಿ.''

''ಯಾಕೆ ?'' ಎಂದು ಕೇಳುವ ತವಕವಾದರೂ, ಈಗ ಆ ಮಾತು ಬೇಡ ಅಂತಂದುಕೊಂಡು ಅವನನ್ನು ಎಬ್ಬಿಸಿಕೊಂಡು ಹೊರಟ. ಮನೆಯನ್ನು ತಲುಪುವವರೆಗೂ ಇಬ್ಬರೂ ಮೌನವಾಗಿದ್ದರು.

ವಿಶ್ವನನ್ನು ಕಂಡೊಡನೆ, ತಾತ ಕೈಕುಲಕಿದ ಅವನನ್ನು ತಮ್ಮ ಬಳಿ ಕೂರಿಸಿಕೊಂಡರು. ಏನೋ ಅಸ್ಪಷ್ಟವಾಗಿ ಹೇಳಿದರು.

''ಏನು ತಾತಾ ?... ಯಾಕೆ ನಿದ್ದೆ ಬರುಲ್ವಾ ?''

''ಯಾಕೋ ಮನಸ್ಸಿಗೆ ತುಂಬಾ ಬೇಜಾರಾಗುತ್ತಪ್ಪಾ'' ನಿಧಾನವಾಗಿ, ತಡವರಿಸುತ್ತಾ ನುಡಿದುದು ಇಬ್ಬರಿಗೂ ಅರ್ಥವಾಗಿತ್ತು. ಮುಖ ಮುಖ ನೋಡಿಕೊಂಡರು.

''ಏನೋ ಕೊರಗು ಅವರನ್ನು ಕಾಡುತ್ತಿದೆ. ಅದೇನೂಂತ ತಿಳಿದು ಕೊಳ್ಳುವುದು ಒಳ್ಳೆಯದು... ಆಮೇಲೆ ಅದಕ್ಕೆ ಪರಿಹಾರವನ್ನು ಕಂಡು ಹಿಡಿದರೆ ಎಲ್ಲಾ ತಾನಾಗಿಯೇ ಸರಿ ಹೋಗುತ್ತದೆ.''

ವಿಶ್ವ ಮುಂಚಿನಂತೆ ಇಲ್ಲ. ಬದಲಾಗಿದ್ದಾನೆ ಎಂದೆನಿಸಿತ್ತು ಪೃಥ್ವಿಗೆ. ಏನೋ ಆತುರದಲ್ಲಿರುವವನಂತೆ ವಿಶ್ವ ಹೊರಟಾಗ, ಪೃಥ್ವಿ ಕೇಳಿದ.

''ಯಾಕೆ ವಿಶ್ವಾ ಒಂಥರಾ ಇದೀರಿ ? ತಾತನ ಆರೋಗ್ಯದಲ್ಲಿ ಏನಾದರೂ ಏರುಪೇರಾಗಿದೆಯಾ ?''

''ಅವರ ಬಿ.ಪಿ. ಹೆಚ್ಚಾಗಿದೆ ಅಂತ ಅನ್ನಿಸುತ್ತೆ. ನರ್ಸಿಂಗ್ ಹೋಂಗೆ ಸೇರಿಸುವುದು ಒಳ್ಳೆಯದು'' ಪೃಥ್ವಿ ಆತಂಕದಿಂದ ವಿಶ್ವನ ಕೈ ಹಿಡಿದ. ವಿಶ್ವ ಕೈಗಳನ್ನು ಒತ್ತಿದ.

''ವಯಸ್ಸಾಗಿದೆ ಬಿ.ಪಿ. ಏರಿದರೆ, ಅದಕ್ಕೆ ನೀವೇಕೆ ಉದ್ವೇಗಗೊಳ್ತೀರಿ.

ಒಂದು ರಾತ್ರಿ ನರ್ಸಿಂಗ್ ಹೋಂನಲ್ಲಿರಲಿ, ಸರಿ ಹೋಗ್ತಾರೆ'' ಎಂದು ಹೇಳಿ ವಿಶ್ವ ಹೊರಟು ಹೋದ.

ವಿಶ್ವ ಖಂಡಿತಾ ಬದಲಾಗಿದಾನೆ. ತಾತನ ಆರೋಗ್ಯದಲ್ಲಿ ಏರುಪೇರಾಗಿದ್ದರೂ ನರ್ಸಿಂಗ್ ಹೋಂಗೆ ಸೇರಿಸಿ ಅಂತ ಹೇಳಿ ಹೊರಟು ಹೋದನಲ್ಲ, ಚಿಕ್ಕಮ್ಮ ಏನಾದರೂ ಹೇಳಿಕೊಟ್ಟಿರಬಹುದೇ ಎಂಬ ಅನುಮಾನ ಸಹ ತಲೆದೋರಿತು. ಆದರೆ ಈಗ ಇದಕ್ಕೆಲ್ಲ ಸಮಯವಿಲ್ಲ ಎಂದುಕೊಂಡು, ಹತ್ತಿರದಲ್ಲೇ ಇದ್ದ ನರ್ಸಿಂಗ್ ಹೋಂಗೆ ಸೇರಿಸಿದ.

ಎರಡು ದಿನಗಳು ಕಳೆದರೂ, ತಾತನ ಸ್ಥಿತಿ ಸುಧಾರಿಸಲಿಲ್ಲ. ಡಾಕ್ಟರು ಹೇಳಿದ್ದರು, ವಯಸ್ಸಾಗಿದೆ... ಔಷಧಿ, ಇಂಜೆಕ್ಷನ್ ಪರಿಣಾಮ ಬೀರುತ್ತಿಲ್ಲ... ಆದ್ದರಿಂದ ಮನೆಯವರು ಯಾರಾದರೂ ಅವರ ಬಳಿ ಇರುವುದು ಉತ್ತಮ ಅಂತ. ಪೃಥ್ವಿಗೆ ಎಲ್ಲಾ ಅರ್ಥವಾಯಿತು. ಈಗ ತಾತಾ ತಮ್ಮೆಲ್ಲರಿಂದ ದೂರವಾಗುತ್ತಿದ್ದಾರೆ. ಹಾಗಾದರೆ, ವಿಶ್ವನಿಗೆ ಮೊದಲೇ ಗೊತ್ತಾಗಿದೆ. ತನಗೆ ಹೇಳಲಾಗದೇ ನರ್ಸಿಂಗ್ ಹೋಂಗೆ ಸೇರಿಸುವಂತೆ ಹೇಳಿದಾನೆ. ಅದಕ್ಕೇ ಅವನೂ ಈ ಎರಡು ದಿನಗಳಲ್ಲಿ ತಾತನನ್ನು ನೋಡಲು ಬಂದೇ ಇಲ್ಲವೇನೋ ಅಂತಂದುಕೊಂಡ.

* * * *

ಆ ರಾತ್ರಿ ಯಾರು ಎಷ್ಟೇ ಹೇಳಿದರೂ ಪೃಥ್ವಿ ತಾತನ ಬಳಿಯಿಂದ ಕದಲಲಿಲ್ಲ. ಬೆಳಗಿನ ಝಾವದ ಹೊತ್ತಿನಲ್ಲಿ ಯಾವಾಗಲೋ ತಾತನ ಪ್ರಾಣ ಹೊರಟು ಹೋಗಿತ್ತು. ಅಲ್ಲೇ ಇದ್ದರೂ ಪೃಥ್ವಿಗೆ ತಿಳಿಯಲೇ ಇಲ್ಲ. ಚೆನ್ನಾಗಿ ಬೆಳಕಾದ ಮೇಲೆ ನರ್ಸು ಬಂದು ನೋಡಿ ಓಡಿ ಹೋಗಿ ಡಾಕ್ಟರನ್ನು ಕರೆ ತಂದಾಗಲೇ ತಿಳಿದದ್ದು. ತಾನು ಇಲ್ಲಿಯೇ ಕೂತಿದ್ದೆ, ತನಗೆ ಒಂದು ಮಾತು ತಿಳಿಸದೇ ಅದ್ಹೇಗೆ ಹೋದರು ? ಪೃಥ್ವಿ ನಂಬದವನಂತೆ ಗೋಳಾಡಿದ.

ಪೇಪರ್ರಿನಲ್ಲಿ ಕಂಡ ಸುಬ್ಬರಾಯಪ್ಪನವರ ಭಾವಚಿತ್ರ ಹಾಗೂ ನಿಧನರಾದ ಸುದ್ದಿಯನ್ನು ಓದಿ ವಿಶ್ವ ಸ್ತಂಭಿತನಾದ. ಹೀಗೇಕಾಯ್ತು? ಎರಡು ದಿನಗಳ ಹಿಂದೆ ತಾತನನ್ನು ಕಂಡಿದ್ದೆ. ಅವರ ಚಡಪಡಿಕೆ ಸ್ವಲ್ಪ ಹೆಚ್ಚಾಗಿದ್ದುದು ನಿಜ. ಆದರೆ... ಎರಡೇ ದಿನಗಳೊಳಗೆ ಎಲ್ಲಾ ಮುಗಿಸಿಬಿಟ್ಟು ಹೋಗುವಷ್ಟು ಗಂಭೀರ ಅಂತ ಎನ್ನಿಸಲಿಲ್ಲ. ಅವರಿಗಿಂತ ಹೆಚ್ಚಿನ ಚಡಪಡಿಕೆ ತನಗೇ

ಉಂಟಾಗಿತ್ತು. ಯಾವಾಗ ನಳಿನಿ ಪ್ರತ್ಯಕ್ಷವಾಗಿಬಿಡುವಳೋ... ಏನು ಹೇಳಿಬಿಡುವಳೋ... ಎಂಬ ದಿಗಿಲು... ಆದಷ್ಟು ಬೇಗ ಅಲ್ಲಿಂದ ಹೊರಬೀಳುವ ತವಕದಲ್ಲಿ ಏನೋ ಒಂದು ಹೇಳಿದ್ದ... ಆದರೆ ಇಷ್ಟು ಬೇಗ ಹೀಗೆ ಆಗುತ್ತೆ ಅಂತ ತಾನು ಕನಸಿನಲ್ಲಿಸಹ ಯೋಚಿಸಿರಲಿಲ್ಲ... ತಾತನ ಚಡಪಡಿಕೆಗೆ ಕಾರಣ ಏನೂಂತ ತಿಳಿಯುವ ಪ್ರಯತ್ನ ಮಾಡಲಿಲ್ಲ ತಾನು ! ಅಷ್ಟೇ ಅಯೋಗ್ಯನಾಗಿ ಬಿಟ್ಟೆನಲ್ಲಾ... ನಿಮ್ಮ ತಾತ, ನಮ್ಮ ತಾತನ ಹಾಗೆ ಅಂತ ಪೃಥ್ವಿಗೆ ತಾನು ಹೇಳಿದ್ದ ಮಾತನ್ನು ಮರೆತೇ ಬಿಟ್ಟೆ... ತಾನೀಗ ಹೋಗಿ ಪೃಥ್ವಿಗೆ ಸಮಾಧಾನ ಹೇಳದಿದ್ದರೆ, ತಾನು ಖಂಡಿತಾ ಕರ್ತವ್ಯಭ್ರಷ್ಟನಾಗಿ ಬಿಡುತ್ತೇನೆ... ಆದರೆ ತಾನು ಆ ಮನೆಗೆ ಹೋಗುವುದೆಂದರೆ ಮೈ ಮೇಲೆ ಮುಳ್ಳು ಚುಚ್ಚಿದಂತಾಗುತ್ತದೆ... ಬೇಡ ಮನೆಗೆ ಹೋಗುವುದು ಬೇಡ, ಅಂತಿಮಕ್ರಿಯೆ ನಡೆಯುವ ಸ್ಥಳಕ್ಕೆ ಹೋಗಿ ಅಂತಿಮ ದರ್ಶನ ಪಡೆದು, ಪೃಥ್ವಿಯನ್ನು ಮಾತನಾಡಿಸಿ ನಿರ್ಧರಿಸಿ ಎದ್ದ.

ಬಿಳಿ ಉಡುಪನ್ನು ಧರಿಸಿ, ಸಮಯಕ್ಕೆ ಮುಂಚೆಯೇ ಅಂತಿಮ ಸಂಸ್ಕಾರ ನಡೆಯುವ ಸ್ಥಳಕ್ಕೆ ಹೋಗಿ, ಇವರುಗಳಿಗಾಗಿ ಕಾದು ನಿಂತಿದ್ದ. ದುಃಖದಲ್ಲಿ ಮುಳುಗಿ ಹೋಗಿದ್ದ ಪೃಥ್ವಿ ವಿಶ್ವನನ್ನು ಗಮನಿಸಲಿಲ್ಲ. ಆದರೆ ಚಂದ್ರು ನೋಡಿದ್ದ. ಬಿಳಿ ಬಟ್ಟೆಯನ್ನು ಹೊದಿಸಿ ಮಲಗಿಸಿದ್ದ ತಾತನ ಪಾರ್ಥೀವ ಶರೀರದ ಬಳಿ ಸಾರಿದ. ವಿಶ್ವ ಅವರ ಕಾಲುಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಂಡ. ಪೃಥ್ವಿಯ ಬೆನ್ನ ಮೈಮೇಲೆ ಕೈಯನ್ನಿಟ್ಟು ಸಂತಾಪವನ್ನು ಸೂಚಿಸಿದ. ಆ ಕ್ಷಣಕ್ಕೆ ಕಾಯುತ್ತಿದ್ದವನಂತೆ ಪೃಥ್ವಿ ಅವನನ್ನು ತಬ್ಬಿಕೊಂಡು ಗಳಗಳನೆ ಅತ್ತ. ಕುಳಿತ ಗಂಡಸರಿಗೆ ಆಶ್ಚರ್ಯ. ಈ ಯುವಕ ಯಾರು ? ಪೃಥ್ವಿಗೆ ಎಷ್ಟು ಆತ್ಮೀಯನಾದ ಇವನನ್ನು ತಾವು ಕಂಡಿರಲಿಲ್ಲ. ಅವನ ಸ್ನೇಹಿತನೋ ಏನೋ... ವಿಶ್ವ ಅಲ್ಲಿ ಹೆಚ್ಚು ಹೊತ್ತು ನಿಲ್ಲದೇ ಹೊರಟು ಹೋಗಿದ್ದ. ಪೃಥ್ವಿಯನ್ನು ಬಲವಂತವಾಗಿ ಎಳೆದುಕೊಂಡು ಹೋದರು, ನಂಜಪ್ಪ. ಉರಿಯುತ್ತಿದ್ದ ಚಿತೆಯೊಳಗೆ ತಾತನ ದೇಹ ಧಗಧಗನೆ ಉರಿಯುತ್ತಿದ್ದರೆ ಪೃಥಿಯ ಒಡಲೊಳಗೆ ದುಃಖದ ತಪ್ತಾಗ್ನಿ ಉರಿಯುತ್ತಿತ್ತು. ಚಂದ್ರುಗೆ ಪೃಥ್ವಿಯ ದುಃಖ ಅರ್ಥವಾಗಿತ್ತು.

ಉಳಿದ ಕರ್ಮಾಂತರಗಳನ್ನೆಲ್ಲ ಶ್ರದ್ಧೆಯಿಂದ, ಯಾವ ಲೋಪದೋಷವಿಲ್ಲದೇ ಮಾಡಿ, ದಾನಧರ್ಮಗಳನ್ನಿತ್ತು, ತಾತನನ್ನು ವೈಕುಂಠಕ್ಕೆ ಕಳಿಸಿ, ತಾನು ಒಂಟಿಯಾದ ಪೃಥ್ವಿ. ಲಾಯರ್ರು ಬಂದು ತಾತನ ವಿಲ್ ವಿಷಯದ ಬಗ್ಗೆ ಮಾತನಾಡಬೇಕೆಂದು ಹೇಳಿದಾಗ, ಪೃಥ್ವಿ ತಾನು ಏನೂ ಮಾತನಾಡುವುದು

ಇಲ್ಲ ಅಂತಂದ. ನನಗಿಂತ ದೊಡ್ಡವರಾದ ನಮ್ಮ ಚಿಕ್ಕಮ್ಮನೇ ಎಲ್ಲಾ ನೋಡಿಕೊಳ್ತಾರೆ ಅಂದ. ಆದರೆ ಅವರು ಆ ವಿಲ್ ಅಲ್ಲದೇ ಲಾಕರ್‌ನಲ್ಲಿ ಒಂದು ಡೈರಿ ಸಹ ಇರುವ ವಿಷಯ ತಿಳಿಸಿದಾಗ ಪೃಥ್ವಿಗೆ ಕುತೂಹಲ ಮೂಡಿತು. ಅದರಲ್ಲೇನು ರಹಸ್ಯವಿರಬಹುದು ಎಂದುಕೊಂಡು ಲಾಯರನ್ನು ಅವರ ಆಫೀಸಿನಲ್ಲೇ ಭೇಟಿಮಾಡಿದ.

ತಾತ ಬರೆಸಿದ್ದ ವಿಲ್‌ನ್ನು ಓದಿ ಅವನಿಗೆ ದುಃಖವೂ ಆಗಲಿಲ್ಲ, ಸಂತಸವೂ ಆಗಲಿಲ್ಲ. ಎಲ್ಲಾ ಗೊಂದಲಮಯ ಎಂದೆನಿಸಿತ್ತು. ಕಂಪೆನಿಯ ಸಮಸ್ತ ವ್ಯವಹಾರವೆಲ್ಲಾ ಚಿಕ್ಕಮ್ಮನ ಅಧೀನದಲ್ಲಿರುವುದೇ ಆದರೆ, ತಾನೇಕೆ ಆ ಕಂಪೆನಿಯ ಕಾರುಬಾರನ್ನು ನೋಡಿಕೊಳ್ಳಬೇಕು ?... ಹಾಗೇ ಈ ಮನೆ ನನ್ನದಾದರೆ, ಈ ಮನೆಯಲ್ಲಿ ತಾನು ಒಂಟಿಯಾಗಿ ಒಬ್ಬನೇ ಇರಬೇಕೇ ? ಯಾಕೋ ಈ ವಿಭಜನೆ ಅವನಿಗೆ ಸರಿ ಎನಿಸಲಿಲ್ಲ. ಈ ಆಸ್ತಿಯೆಲ್ಲಾ ತಾತನದು. ತಾತನ ನಂತರ, ಅಪ್ಪನಿಗೆ, ಆನಂತರ, ಅವರ ಮಕ್ಕಳಾದ ನಾವು ಮೂವರಿಗೆ, ಆದರೆ ತಾತ ಹೀಗೇಕೆ ವಿಲ್ ಬರೆಸಿದ್ದಾರೋ... ಅವರಿಗೆ ನನ್ನ ಮೇಲೆ ನಂಬಿಕೆ ಇರಲಿಲ್ಲವೇ...? ಅಥವಾ ನಳಿನಿಯ ಮೇಲೆ ವಿಶ್ವಾಸವಿರಲಿಲ್ಲವೇ... ಆದರೆ ತಾನೀಗ ಇದನ್ನು ಒಪ್ಪಬೇಕೇ ? ಒಪ್ಪದಿದ್ದರೆ ಏನಾಗುತ್ತೆ ? ಮನಸ್ಸು ಗೊಂದಲಕ್ಕೊಳಗಾಯಿತು. ತಾತನ ಅಕೌಂಟಿನಲ್ಲಿ ಎಷ್ಟು ಹಣ ಇದೆ ಅಂತ ತಿಳಿದಿರಲಿಲ್ಲ. ಈಗ ಅದೆಲ್ಲಾ ತನ್ನದಾಗಲಿದೆ ಅಂತ ತಿಳಿದರೂ, ಏನೂ ಅನ್ನಿಸಲಿಲ್ಲ. ಈ ಹಣ, ಈ ಆಸ್ತಿಗಿಂತ ತಾತ ತನಗೆ ಮುಖ್ಯವಾಗಿದ್ದರು. ಅವರೇ ಇಲ್ಲದ ಮೇಲೆ ತನಗ್ಯಾಕೆ ಇದೆಲ್ಲಾ ಅನ್ನುವ ಉದಾಸೀನ ಮೂಡಿತು. ಆದರೆ ಲಾಕರಿನಲ್ಲಿರುವ ಡೈರಿಯ ಬಗ್ಗೆ ತಿಳಿಸಿದಾಗ ಕುತೂಹಲ ಕೆರಳಿತ್ತು. ಆದರೆ ಓದಿದರೆ, ಯಾವ ಹೊಸ ಸಮಸ್ಯೆ ಉದ್ಭವಿಸುತ್ತದೋ ಎನ್ನುವ ದಿಗಿಲು ಉಂಟಾಗಿತ್ತು. ಲಾಯರ್ರು ನುಡಿದರು,

''ನನ್ನ ಕರ್ತವ್ಯ ನಾನು ಮಾಡಿದ್ದೇನೆ. ಉಳಿದದ್ದು ನಿಮಗೆ ಸೇರಿದ್ದು. ಆದರೆ ತಾತನ ಇಚ್ಛೆಯನ್ನು ಪೂರೈಸುವುದು ನಿಮ್ಮ ಧರ್ಮ...'' ಎಂದು ಹೇಳಿದಾಗ ಹೌದು ಎನ್ನುವಂತೆ ತಲೆಯಾಡಿಸಿ ಎದ್ದ.

''ಮೊದಲು ಈ ಡೈರಿಯಲ್ಲಿ ಏನಿದೆ ಅಂತ ಓದುತ್ತೀನಿ... ಆನಂತರ ಮುಂದೇನು ಮಾಡಬೇಕು ಅಂತ ನಿರ್ಧರಿಸುತ್ತೀನಿ. ಅಲ್ಲಿಯವರೆಗೂ ದಯವಿಟ್ಟು ಈ ವಿಷಯಗಳನ್ನು ಯಾರಿಗೂ ತಿಳಿಸಬೇಡಿ'' ಎಂದು ಕೇಳಿಕೊಂಡು ಅವರ ಕೈ ಕುಲುಕಿ ಅಲ್ಲಿಂದ ಹೊರಬಿದ್ದ.

ಡೈರಿಯನ್ನು ಆತುರಾತುರವಾಗಿ ಓದಿ ಮುಗಿಸುವ ಕುತೂಹಲವೂ ಇರಲಿಲ್ಲ ಅಥವಾ ಓದಿದರಾಯ್ತು ಎನ್ನುವ ಉದಾಸೀನವೂ ಇರಲಿಲ್ಲ. ತನ್ನ ಕರ್ತವ್ಯವೆಂಬಂತೆ ನಿಧಾನವಾಗಿ ಓದಲಾರಂಭಿಸಿದ. ಅದು ತಾತನ ಕೈ ಬರಹವೆಂಬುದರಲ್ಲಿ ಸಂಶಯವಿಲ್ಲ.

ಪ್ರಿಯ ಪೃಥ್ವಿ, ಈ ಡೈರಿಯಲ್ಲಿ ಬರೆದಿರುವ ವಿಷಯಗಳು ಕೇವಲ ನಿನ್ನ ತಿಳುವಳಿಕೆಗಾಗಿ ಮಾತ್ರ. ಅಪಘಾತದಲ್ಲಿ ನಿನ್ನ ಅಜ್ಜಿಯನ್ನೂ ನಿನ್ನ ತಾಯಿಯನ್ನೂ ಕಳೆದುಕೊಂಡ ದುರ್ದೈವಿಗಳು ನಾವು. ನಿನಗೆ ಬಲತಾಯಿಯನ್ನು ತರುವ ಆಸೆ ಇಲ್ಲದೇ ನಿನ್ನ ತಂದೆ ಮರುಮದುವೆಯಾಗಲಿಲ್ಲ. ಅವನ ಒಂಟಿತನವನ್ನು ನೋಡಲಾರದೆ, ನಾನೇ ಅವನಿಗೆ ಮತ್ತೆ ಮದುವೆಯಾಗುವಂತೆ ಎಷ್ಟೋ ಬಾರಿ ಹೇಳಿ ನೋಡಿದೆ. ಆದರೆ ಆಗ ಅವನು ನನ್ನ ಮಾತುಗಳನ್ನು ತಳ್ಳಿ ಹಾಕಿದ.

ಆದರೆ ಹತ್ತು ವರ್ಷಗಳ ನಂತರ, ಅವನು ಇದ್ದಕ್ಕಿದ್ದಂತೆ ನಳಿನಿಯನ್ನು ಮದುವೆಯಾಗುವ ಬಯಕೆಯನ್ನು ವ್ಯಕ್ತಪಡಿಸಿದಾಗ ನನಗೆ ಆತಂಕವಾದುದು ನಿಜ. ಅವನ ಆಸೆಗೆ ಒಪ್ಪಿ, ನಾನು ನಳಿನಿಯ ತಂದೆಯನ್ನು ಭೇಟಿಯಾಗಲು ಹೋದೆ. ಆತ ಅತೀ ದುರಾಸೆಯವರು. ನಮಗೇ ಕೆಲವು ಕಂಡೀಷನ್‌ಗಳನ್ನು ಹಾಕಿದರು. ಆ ಸಮಯದಲ್ಲಿ ನಾನು ನಿನ್ನ ತಂದೆಯ ಸುಖಕ್ಕಾಗಿ ಆತನ ಕಂಡೀಷನ್‌ಗಳಿಗೆ ಒಪ್ಪಿಕೊಂಡು ಬಿಟ್ಟೆ. ಆತ ಬಹಳ ಚತುರ ಮನುಷ್ಯ. ನನ್ನ ಬಳಿಯಿಂದ ಹೇಗೋ ನಿಮ್ಮಪ್ಪನಿಗೆ ತಿಳಿಯದಂತೆ, ನಿಮ್ಮಪ್ಪನಿಂದ ನನಗೆ ತಿಳಿಯದಂತೆ ತಮ್ಮ ಖರ್ಚಿಗಾಗಿ ಹಣವನ್ನು ವಸೂಲು ಮಾಡುವ ಯೋಜನೆಯನ್ನು ಹಾಕಿಕೊಂಡು ತಮ್ಮ ಕೆಲಸವನ್ನು ಸಾಧಿಸಿಕೊಂಡರು. ಈ ವಿಷಯದಲ್ಲಿ ನನಗೇ ತಿಳಿಯದಂತೆ ನಾನು ಮೂರ್ಖನಾದನೇನೋ. ಆದರೆ ನಾಗೇಶ ಮತ್ತೆ ಸಂಸಾರಿಯಾಗುತ್ತಾನೆಂಬ ಸಂತೋಷ ನನ್ನ ಬುದ್ಧಿಗೆ ಪರದೆ ಹಾಕಿ ಬಿಟ್ಟಿತ್ತೇನೋ ಅಂತ ಈಗ ಅನ್ನಿಸುತ್ತಿದೆ.

ಶ್ರೀಕಂಠಯ್ಯನ ಮಾತಿಗೆ ಒಪ್ಪಿ, ಅವರ ಮೊಮ್ಮಗನಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದ ಅವರಿಗೆ ಒಂದು ಮನೆಯನ್ನು ತೆಗೆಸಿಕೊಟ್ಟೆ. ತಿಂಗಳ ಖರ್ಚಿಗೆ ಅಂತ ಹಣ ಕೊಡುತ್ತಿದ್ದೆ... ಬ್ಯಾಂಕಿನಲ್ಲಿ ಅವರ ಹೆಸರಿಗೆ ಹಣ ಜಮಾ ಆಗುತ್ತಿತ್ತು. ನಳಿನಿಯ ಮಗ, ತಂದೆಯಿಲ್ಲದ ಹುಡುಗ, ಈಗ ತಾಯಿಯೂ ಅವನನ್ನು ಬಿಟ್ಟು ಬರುತ್ತಿದ್ದಾಳೆ, ವಿದ್ಯೆ ಬುದ್ಧಿ ಕಲಿತು ಉದ್ಧಾರವಾಗಲಿ ಎನ್ನುವ ಉದ್ದೇಶದಿಂದ, ಅವರು ಕೇಳಿದ್ದಂತೆ ಮನೆಯನ್ನು ಕೊಡಿಸಿಕೊಟ್ಟೆ. ಅವರಿಬ್ಬರೂ

ನಮ್ಮ ಮನೆಯಲ್ಲಿ ಬಂದು ಇರುವ ವಿಷಯ ನಮಗೆ ಸಮ್ಮತವಾಗಿರಲಿಲ್ಲವಾದ್ದರಿಂದ ಈ ಒಡಂಬಡಿಕೆ ಸರಿ ಎನಿಸಿತ್ತು. ಆದರೆ ಈ ವಿಷಯವನ್ನು ನಾನು ನಾಗೇಶನಿಗೆ ತಿಳಿಸಿರಲಿಲ್ಲ. ಇದೇ ನಾನು ಮಾಡಿದ ದೊಡ್ಡ ತಪ್ಪು. ಆದರೆ ಆ ವ್ಯಕ್ತಿ ನನಗೆ ತಿಳಿಯದಂತೆ, ನಾಗೇಶನಿಂದಲೂ ಹಣ ವಸೂಲಿ ಮಾಡಬಹುದೆಂಬ ಅನುಮಾನ ನನಗೆ ಬರಲೇ ಇಲ್ಲ. ನನ್ನ ಮಗನಿಗೆ ಈ ವಿಷಯವನ್ನು ತಿಳಿಸಿ, ತನ್ನ ದೊಡ್ಡತನವನ್ನು ಮೆರೆಯುವುದಾಗಲೀ, ನಳಿನಿಯ ದೃಷ್ಟಿಯಲ್ಲಿ ಅವಳ ತಂದೆಯನ್ನು ಸಣ್ಣವನನ್ನಾಗಿ ಮಾಡುವ ಉದ್ದೇಶ ನನಗಿರಲಿಲ್ಲವಾದ್ದರಿಂದ, ವಿಷಯಗಳನ್ನು ನನ್ನಲ್ಲೇ ಮುಚ್ಚಿಟ್ಟುಕೊಂಡೆ. ಆದರೆ ಈಗ ನಾಗೇಶನೇ ಎಲ್ಲವಾಗಿರುವಾಗ, ನನಗೆ ಆತಂಕವಾಗುತ್ತಿದೆ. ನಳಿನಿಯ ತಂದೆ ಈ ಮನೆಯ ವ್ಯವಹಾರಗಳಿಗೆ ಕೈ ಹಾಕಬಾರದು. ಮಗಳ ಮನಸ್ಸನ್ನು ಕೆಡಿಸಿ, ತಾವು ಲಾಭ ಗಳಿಸುವ ಅತೀ ದುರಾಸೆಯ ಮನುಷ್ಯ ಆತ. ಈ ಮನೆಗೆ ಹಿರಿಯವನಾದ ನಿನಗೆ ಈ ವಿಷಯ ತಿಳಿದಿರಲೇಬೇಕು ಎನ್ನುವುದು ಮುಖ್ಯ ಎನಿಸಿದ್ದರಿಂದ ಈ ಡೈರಿಯಲ್ಲಿ ಬರೆದಿಡುವ ಸಾಹಸ ಮಾಡಿದ್ದೇನೆ.

ನನಗೆ ತಿಳಿಯದಂತೆ, ಶ್ರೀಕಂಠಯ್ಯ ಆ ಮನೆಯನ್ನು ಮಾರಿದ್ದಾರೆ. ಅವರ ಅಕೌಂಟ್‌ನಲ್ಲಿದ್ದ ಹಣವನ್ನೆಲ್ಲಾ ತೆಗೆದುಬಿಟ್ಟಿದ್ದಾರೆ. ಈಗ ಎಲ್ಲಿದ್ದಾರೆ ? ಆ ಹಣವನ್ನು ಏನು ಮಾಡಿದರು ಎನ್ನುವ ವಿಷಯ ನನಗೆ ತಿಳಿಯದು. ಅವರ ಮೊಮ್ಮಗ ವಿಶ್ವ ಎಲ್ಲಿದಾನೋ, ಏನು ಮಾಡುತ್ತಿದಾನೋ ಆ ವಿಷಯ ಸಹ ತಿಳಿಯದು. ನಾನು ಸತ್ತ ನಂತರ ಮತ್ತೆ ಆ ವ್ಯಕ್ತಿ ಬಂದು ಈ ಮನೆಯ ವ್ಯವಹಾರಗಳಲ್ಲಿ ಕೈ ಹಾಕಿ ಎಲ್ಲವನ್ನೂ ಕೆಡಿಸಲು ಪ್ರಯತ್ನಿಸಬಹುದು. ಅಂಥ ಪ್ರಸಂಗ ಬಂದರೆ ನೀನು ಧೈರ್ಯಗೆಡಬೇಡ. ಯಾವುದೇ ದಾಕ್ಷಿಣ್ಯಕ್ಕೆ ಒಳಗಾಗಿ ಅವರುಗಳನ್ನು ಮನೆಗೆ ಸೇರಿಸಬೇಡ. ನಿನ್ನ ಎಚ್ಚರಿಕೆಯಲ್ಲಿ ನೀನಿರು. ಸಮಯ ಬಂದರೆ ಪೋಲೀಸರ ಸಹಾಯ ಪಡೆಯಲು ಹಿಂಜರಿಯಬೇಡ. ನಾನು ದೌರ್ಬಲ್ಯಕ್ಕೆ ಒಳಗಾಗಿ ಈಗ ಕೊರಗುತ್ತಿದ್ದೇನೆ. ನೀನು ಮಾತ್ರ ಧೈರ್ಯ ಸ್ಥೈರ್ಯಗಳಿಂದ ಎಲ್ಲವನ್ನೂ ಎದುರಿಸಬೇಕು. ಈ ಶಕ್ತಿ ನಿನಗೆ ಬರಲೆಂದು ಹಾರೈಸುತ್ತೇವೆ.

ನಿನ್ನ ಚಿಕ್ಕಮ್ಮ ತುಂಬಾ ಒಳ್ಳೆಯವಳು. ಬಡತನವಿದ್ದರೂ ಅವಳಿಗೆ ದುರಾಸೆ ಇರಲಿಲ್ಲ. ತನ್ನ ತಂದೆಗೆ, ತನ್ನ ಮಗನಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದಲೇ ಮರುಮದುವೆಯಾಗಿರಬಹುದು. ಆದರೆ ಎಂದೂ ಆ ಮಗನನ್ನು ಕರೆಸಿಕೊಳ್ಳುವ ಉಪಾಯ ಮಾಡಲಿಲ್ಲ. ಅದಕ್ಕೆ ಅವನು ಅರ್ಹನೂ

ಆಗಿರಲಿಲ್ಲ. ಈ ಮನೆಯಲ್ಲಿ ನಿಷ್ಠೆಯಿಂದ ಇದ್ದಾಳೆ. ಅವಳು ಯಾವ ತಪ್ಪನ್ನೂ ಮಾಡಿಲ್ಲ. ನಿನಗೆ ಇಬ್ಬರು ಮುದ್ದಾದ ತಮ್ಮಂದಿರನ್ನು ಉಡುಗೊರೆಯನ್ನಾಗಿ ಕೊಟ್ಟಿದ್ದಾಳೆ. ಅವರೇ ನಿನ್ನ ಸರ್ವಸ್ವ. ಎಂತಹ ಸಮಯ ಬಂದರೂ ನೀನು ಅವರ ಕೈ ಬಿಡಬಾರದು. ನಿನ್ನಂತೆಯೇ ಈ ಮನೆಯಲ್ಲಿ ಬಾಳಿ ಬದುಕ ಬೇಕಾದವರು. ಸಮಾನ ಹಕ್ಕನ್ನುಳ್ಳವರು. ನೀನು ಜಾಣ. ನನ್ನ ಅಂತರಾಳ ದಲ್ಲೇನಿದೆ ಅಂತ ಅರ್ಥವಾಗಿರಬಹುದಲ್ಲವೇ? ಯಾವುದೇ ಕಾರಣಕ್ಕೂ ನಿಮ್ಮ ನಿಮ್ಮಲ್ಲಿ ಒಡಕು ಮೂಡಬಾರದು. ಬೇರೆ ಬೇರೆಯಾಗಬಾರದು. ಒಗ್ಗಟ್ಟಾಗಿರಬೇಕು. ಇದನ್ನು ನೀನು ನಡೆಸಿಕೊಡ್ತೀಯ ಎಂಬ ನಂಬಿಕೆ ನನಗಿದೆ. ನನ್ನ ಆಶೀರ್ವಾದ ಸದಾ ನಿನಗಿದೆ ಎಂದು ಬರೆದು ಬರಹವನ್ನು ಮುಗಿಸಿದ್ದರು.

ಸಾವಧಾನವಾಗಿ ಡೈರಿಯಲ್ಲಿ ಬರೆದಿದುದನ್ನು ಓದಿ ಮುಗಿಸಿದವನಿಗೆ ತಾತನ ಕೊರಗು ಅರ್ಥವಾಗಿತ್ತು. ಆದರೂ ತಳಮಳ ಗೊಂದಲಗಳಿಂದ ಅವನ ಮನಸ್ಸು ಕದಡಿ ಹೋಗಿತ್ತು. ಹೀಗೂ ಉಂಟೆ ? ಎಂದು ಅಚ್ಚರಿಗೊಂಡಿದ್ದ.

ತನ್ನ ಅಮ್ಮ ಹೇಗಿದ್ದಳೋ, ತನಗೆ ನೆನಪೇ ಇಲ್ಲ. ಚಿಕ್ಕಮ್ಮನನ್ನು ಎಂದೂ ಕಣ್ಣಲ್ಲಿ ಕಣ್ಣಿಟ್ಟು ಸರಿಯಾಗಿ ನೋಡಿದುದೇ ಇಲ್ಲ. ತನ್ನ ತಂದೆ ಅವರನ್ನು ಮೆಚ್ಚಬೇಕಾದರೆ ರೂಪವಂತಳೇ ಇರಬಹುದು. ರೂಪವನ್ನು ಕಾಣಬಹುದು, ಬುದ್ಧಿವಂತಿಕೆಯನ್ನು ಮಾತಿನಲ್ಲಿ ಅಳೆಯಬಹುದು. ಆದರೆ ಗುಣ ? ಇದುವರೆಗೂ ಚಿಕ್ಕಮ್ಮನ ಗುಣ ಏನೆಂದು ತಿಳಿದಿಲ್ಲ. ತಾನು ಈ ಚಿಕ್ಕಮ್ಮನನ್ನು ಎಂದೂ ಹಾಗೆ ಅಳೆದು ನೋಡಿದವನೂ ಅಲ್ಲ ; ಇದುವೆರಗೂ ಎಂದೂ ಅವರನ್ನೇ ಅನುಸರಿಸಿಕೊಂಡು ಹೋಗಬೇಕಾದ ಪ್ರಮೇಯ ಬಂದಿಯೂ ಇಲ್ಲ. ಈಗ ತಂದೆಯೂ ಇಲ್ಲ, ತಾತನೂ ಇಲ್ಲ. ಇನ್ನು ಮುಂದೆ ಎಂಥಾ ಪ್ರಸಂಗ ಗಳು ಒದಗಿ ಬರಬಹುದೋ ? ಈ ವಿಷಯಗಳು ತನಗೆ ತಿಳಿದದ್ದು ಒಳ್ಳೆಯದಾಯಿತು... ಅಂತಂದುಕೊಂಡ.

ತನ್ನ ವಯಸ್ಸಿನವರೆಲ್ಲಾ ಎಷ್ಟು ಹಾಯಾಗಿರುತ್ತಾರೆ! ಸ್ನೇಹಿತರು, ಸಿನಿಮಾ, ಹೋಟೆಲ್ಲು, ಪಿಕ್‌ನಿಕ್ ಅದೂ ಇದು ಅಂತ ಇವನು ಹೆಚ್ಚಿಗೆ ಹೊರಗೆ ತಿರುಗಿದವನೇ ಇಲ್ಲ. ಆಪ್ತ ಸ್ನೇಹಿತರೂ ಯಾರೂ ಇರಲಿಲ್ಲ. ತಾತನೇ ಎಲ್ಲಾ ಆಗಿದ್ದರು. ಇನ್ನು ಮುಂದೆ ತನಗೆ ಒಬ್ಬ ಆಪ್ತ ಸ್ನೇಹಿತನ ಅಗತ್ಯವಿದೆ ಅಂತೆನ್ನಿಸಿದಾಗ ನೆನಪಾದವನು ವಿಶ್ವ.

ಆದರೆ ಈಗ ಈ ವಿಶ್ವನನ್ನು ನಂಬುವುದಾದರೂ ಹೇಗೆ ? ಈಗ ತನಗೆ ಅವನು ಯಾರೆಂದು ತಿಳಿದಿದೆ. ಆದರೆ ವಿಶ್ವನಿಗೆ ತಾನು ಯಾರೆಂದು ತಿಳಿದಿದೆಯೋ ಇಲ್ಲವೋ...? ತಿಳಿದರೆ ಏನನ್ನಿಸಬಹುದು ? ನಮ್ಮ ಮನೆಗೆ ಬಂದು ಸೇರಿಕೊಳ್ಳುವ ಆಸೆ ತೋರಿದರೇ ...? ಇಲ್ಲ, ಇಲ್ಲ, ಹಾಗೆ ಮಾಡಲಾರ... ಇಷ್ಟು ವರ್ಷಗಳಲಲಿ ಹಾಗೆ ಮಾಡುವ ದುರಾಸೆ ಇದ್ದಿದ್ದರೆ, ತನ್ನ ತಾಯಿಯ ಮನೆಗೆ ಬರದೇ ಇರುತ್ತಿದ್ದನೇ...? ಬಹುಶಃ ಅವನಿಗೆ ಏನೋ ಆಕ್ರೋಶವಿರಬಹುದು. ಎಲ್ಲಾ ತಿಳಿದೂ ತನ್ನ ತಾಯಿಯಿಂದ ದೂರವಿರ ಬಹುದು. ತಾನಾಗಿಯೇ ಆ ರಹಸ್ಯವನ್ನು ಬಿಟ್ಟುಕೊಡಲಿಲ್ಲ. ತಾತನನ್ನು ಎಷ್ಟು ಚೆನ್ನಾಗಿ ನೋಡಿಕೊಂಡನಲ್ಲ... ಅವನ ಮನಸ್ಸಿನಲ್ಲಿ ಏನಿದೆ ಅಂತ ತಿಳಿಯದಲ್ಲ... ಅವನಾಗಿಯೇ ಹೇಳಲಾರ. ಕೇಳಿದರೆ ತನ್ನಿಂದ ದೂರನಾಗಿ ಬಿಟ್ಟರೇ... ಹೀಗೇ ನಾನಾ ಆಲೋಚನೆಗಳು ಬಂದು ಹೋಗಿ ಮಾಡುತ್ತಿದ್ದವು. ಕೆಲವು ದಿನಗಳು ಕಳದೇ ಹೋದವು.

* * * *

ಆಫೀಸಿನಲ್ಲಿ ಹೊಸದಾಗಿ ರಿಸೆಪ್ಶನಿಸ್ಟ್ ಆಗಿ ಸೇರಿಕೊಂಡಿದ್ದ ರೂಪಿಣಿ ಹೆಸರಿಗೆ ತಕ್ಕಂತೆ ರೂಪವತಿ. ತನ್ನ ಒನಪು ವೈಯ್ಯಾರ, ಮಾತುಕತೆಗಳಿಂದ ಪೃಥ್ವಿಯನ್ನು ಆಕರ್ಷಿಸಲು ನೋಡಿದಳು. ಅವನಿಗೆ ಅಸಹ್ಯವೆನಿಸಿತು. ಅವನಿಗೆ ಹೆಂಗಸರು, ಹುಡುಗಿಯರು ಅಂದರೆ ಎಂದೂ ಸಲುಗೆಯಿಲ್ಲ. ಮೊದಲಿಂದ ಬೆಳೆದುದೇ ಹಾಗೆ. ಈಗ ರೂಪಿಣಿಯ ಬಗ್ಗೆ ಯಾವ ಆಸಕ್ತಿಯೂ ಮೂಡಲಿಲ್ಲ. ಬದಲಿಗೆ ಮುಜುಗರವನ್ನುಂಟು ಮಾಡುತ್ತಿತ್ತು. ಇವಳನ್ನು ನೇಮಕ ಮಾಡಿಕೊಂಡಿದ್ದು ತಪ್ಪಾಯಿತು ಅಂದೆನಿಸುತ್ತಿತ್ತು. ಕಾರಣವಿಲ್ಲದೇ ಛೇಂಬರಿಗೆ ಬರುವುದು, ಮೈ ಕುಣಿಸಿ, ನಗುನಗುತ್ತಾ ಮಾತಾಡುವುದು, ಅದೆಲ್ಲಾ ವಿಚಿತ್ರವಾಗಿ ಕಾಣುತ್ತಿತ್ತು. ಅವಳು ಸರಿಯಿಲ್ಲ ಎಂದೆನಿಸಿ ಎಚ್ಚರದಿಂದ ಇರುತ್ತಿದ್ದ.

ಒಮ್ಮೆ ಇವನು ಉದಾಸೀನತೆಯಿಂದ ಕೂತಿದ್ದನ್ನು ಕಂಡು ಪ್ರಶ್ನಿಸಿದ್ದಳು.

''ಯಾಕೆ ಹೀಗಿದೀರಿ ? ತಲೆ ನೋವಾ ? ನನ್ನ ಹತ್ತಿರ ಪೈನ್ ಕಿಲ್ಲರ್ ಇದೆ ಕೊಡಲಾ ?'' ಅಂತ.

''ನನಗೇನೂ ಆಗಿಲ್ಲ.... ನೀವು ಹೋಗಿ ನಿಮ್ಮ ಕೆಲಸ ನೋಡಿಕೊಳ್ಳಿ'' ಎಂದು ಒರಟಾಗಿ ನುಡಿದಿದ್ದ.

''ನೀವು ಬಾಸ್ ನಿಮ್ಮ ಆರೋಗ್ಯ ನಮಗೆ ಮುಖ್ಯ. ನೀವು ಮನೆಗೆ

ಹೋಗಿ ರೆಸ್ಟ್ ತಗೋಳ್ಳಿ. ನಾವು ಎಲ್ಲಾ ನೋಡಿಕೊಳ್ತೀವಿ'' ಅವಳು ಇನ್ನು ರೇಗಿಸಿದ್ದಳು.

''ಇದನ್ನೆಲ್ಲ ಹೇಳೋಕೆ ನೀವು ಯಾರು ? ನಿಮಗೆ ಯಾವ ಅಧಿಕಾರವೂ ಇಲ್ಲ ಸುಮ್ಮನೇ ಹೋಗಿ'' ಎಂದು ಎತ್ತರದ ಸ್ವರದಲ್ಲಿ ನುಡಿದರೂ, ಅವಳು ನಗುನಗುತ್ತಾ ಹೊರಟುಹೋಗಿದ್ದಳು. ಎಲ್ಲೋ ಈ ಹುಡುಗಿಯ ತಲೆ ಸರಿ ಇಲ್ಲ, ಆದಷ್ಟು ಬೇಗ ಈ ಹುಡುಗಿಯನ್ನು ತೆಗೆದು ಬೇರೆಯವರನ್ನು ನೇಮಕ ಮಾಡಿಕೊಳ್ಳಬೇಕು ಎಂದುಕೊಂಡ.

''ನೀವು ಸಮರ್ಪಕವಾಗಿ ನಿಮ್ಮ ಕೆಲಸವನ್ನು ನಿರ್ವಹಿಸುತ್ತಿಲ್ಲ. ಆದ್ದರಿಂದ ನಿಮ್ಮನ್ನು ಕೆಲಸದಿಂದ ತೆಗೆದುಹಾಕುತ್ತಿದ್ದೇವೆ'' ಎಂದು ನೋಟೀಸು ಕೊಟ್ಟ. ಅವಳು ಹೆದರಲಿಲ್ಲ. ಬದಲಿಗೆ ಎಲ್ಲರೊಡನೆ ನಗುನಗುತ್ತಾ ಮಾತಾಡುತ್ತಿರುವ ವಿಷಯ ತಿಳಿದು, ಪೃಥ್ವಿಗೆ ಆತಂಕ ಹೆಚ್ಚಾಯಿತು. 'ಖಂಡಿತಾ ಇವಳ ತಲೆ ಸರಿ ಇಲ್ಲ, ಇವಳಿಂದ ತನಗೆ ತೊಂದರೆಯೇ ಹೆಚ್ಚು' ಎಂದೆನಿಸಿತು. ಆದರೆ ಒಮ್ಮೆ ಕೆಲಸಕ್ಕೆ ನೇಮಕ ಮಾಡಿಕೊಂಡ ಮೇಲೆ, ಕೆಲವಾರು ನಿಯಮಗಳಿಗೆ ಬದ್ಧರಾಗಿರುತ್ತೇವೆ ಎಂದುಕೊಂಡು, ಯೂನಿಯನ್ ಮುಖಂಡನಿಗೆ ಹೇಳಿ ಕಳಿಸಿದ. ಆದರೆ ಅವನು ಯಾವುದೋ ಮೀಟಿಂಗ್‌ಗೆ ಹೋಗಿದ್ದಾನೆಂದು ತಿಳಿಯಿತು.

ಎಂದಿನಂತೆ ಪೃಥ್ವಿ ಮನೆಗೆ ಬಂದಾಗ, ಚಿಕ್ಕಮ್ಮ ಯಾರೊಡನೆಯೋ ಮಾತನಾಡುತ್ತಾ ಕೂತಿರುವುದನ್ನು ಗಮನಿಸಿಯೂ ತನ್ನ ಪಾಡಿಗೆ ತಾನು ತನ್ನ ರೂಮಿಗೆ ಹೊರಟುಹೋದ. ನಳಿನಿ ಅವನಿಗೆ ಹೇಳಿಕಳಿಸಿದಳು. ಅಲ್ಲಿದ್ದವರನ್ನು ಪರಿಚಯಿಸಿ ಕೊಟ್ಟಳು. ಪೃಥ್ವಿ ಆಶ್ಚರ್ಯಗೊಂಡ. ರೂಪಿಣಿ ! ಹಾಗೂ ಅವಳ ತಂದೆ.... ತನಗಿಂತ ಮುಂಚೆಯೇ ಬಂದು, ಇಲ್ಲಿ ಚಿಕ್ಕಮ್ಮನೊಡನೆ ಏನು ಮಾತುಗಳನ್ನಾಡಿರಬಹುದು ! ಗಂಭೀರವದನನಾಗಿ, ಕೈ ಮುಗಿದು 'ನಮಸ್ಕಾರ' ಎಂದ. ಮಾತಾಡಲು ಏನೂ ಇಲ್ಲವೇನೋ ಎಂಬಂತೆ ಎಲ್ಲರೂ ಸುಮ್ಮನೇ ಕುಳಿತಿದ್ದರು. ಕೆಲಗಳಿಗೆಯ ನಂತರ ಅವರಿಬ್ಬರೂ ಹೊರಟುಹೋದರು. ಪೃಥ್ವಿ ನಿರಾಳನಾದ. ಆದರೆ ತಾನಾಗಿಯೇ ಕೇಳಲಿಲ್ಲ. ಸ್ವಲ ಹೊತ್ತಿನ ನಂತರ ನಳಿನಿಯೇ ಪ್ರಶ್ನಿಸಿದಳು.

''ರೂಪಿಣಿಯನ್ನು ನೀನು ನೋಡಿದೆಯಲ್ಲ, ಅವಳ ಬಗ್ಗೆ ನಿನ್ನ ಅಭಿಪ್ರಾಯವೇನು ?''

''ಅವಳ ಆರೋಗ್ಯ ಸರಿ ಇಲ್ಲ ಅಂತ ಅನ್ನಿಸುತ್ತೆ ನನಗೆ''

''ಯಾಕೆ ? ಏನಾಗಿದೆ ! ನೋಡೋಕೆ ಸರಿಯಾಗಿಯೇ ಇದಾಳಲ್ಲ''

''ಇಲ್ಲ ಅವಳು ಸರಿ ಇಲ್ಲ. ಅವಳಿಗೆ ಡಾಕ್ಟರರ ಸಲಹೆಯ ಅಗತ್ಯವಿದೆ.''

''ನಿನಗೆ ಹೇಗೆ ಗೊತ್ತು ? ಹಾಗೆಲ್ಲಾ ಹುಡುಗಿಯರ ಬಗ್ಗೆ ಮಾತನಾಡಬಾರದು.''

''ನೀನು ಏನು ಹೇಳ್ತಿದೀಯ ಅಂತ ನನಗೆ ಅರ್ಥವಾಗ್ತಿಲ್ಲ ಪೃಥ್ವಿ... ಅವಳನ್ನು ನಿನಗೆ ಪ್ರಪೋಸ್ ಮಾಡಿದರು... ನಿನಗೆ ಒಪ್ಪಿಗೆಯಾದರೆ... ನಿನ್ನ ಮದುವೆ ವಿಷಯ ಮಾತನಾಡೋಣ ಅಂತಂದೆ...''

ಪೃಥ್ವಿ ಗಕ್ಕನೆ ಎದ್ದು ನಿಂತ. ''ನನ್ನ ಮದುವೆ ? ನನ್ನ ಮದುವೆಯ ಮಾತನಾಡಲು ನಿಮಗ್ಯಾರು ಅಧಿಕಾರ ಕೊಟ್ಟರು ?'' ಎಂದು ನುಡಿದವನೇ ಅಲ್ಲಿ ನಿಲ್ಲದೇ ತನ್ನ ರೂಮಿಗೆ ಹೊರಟುಹೋದ. ನಳಿನಿಗೆ ಅವಮಾನ ವಾದಂತಾಯಿತು. ಪೃಥ್ವಿ ಹೀಗೆ ಮಾತನಾಡಬಹುದು ಎಂದು ನಿರೀಕ್ಷಿಸಿರಲಿಲ್ಲ. ಅವನ ತಾಯಿಯ ಸ್ಥಾನದಲ್ಲಿರುವವಳು ತಾನು, ತನಗೆ ಈ ಅಧಿಕಾರವಿಲ್ಲವೇ ? ಎಂಥಾ ಮಾತನ್ನಾಡಿಬಿಟ್ಟನಲ್ಲಾ... ಎಂದೂ ಹೀಗೆಲ್ಲಾ ಒರಟಾಗಿ ವರ್ತಿಸಿದವನೇ ಅಲ್ಲ.... ಬಹುಶಃ ತಪ್ಪು ತನ್ನದೇ ಇರಬಹುದು ಅಂತಂದು ಕೊಂಡರೂ ಏನೋ ದುಗುಡ. ಆ ದುಗುಡದ ನಡುವೆ ಅವಳಿಗೆ ನೆನಪಾದವನು ವಿಶ್ವ !

ಊಟದ ಸಮಯವಾದರೂ ಪೃಥ್ವಿ ಹೊರಗೆ ಬರದಿದ್ದಾಗ, ಅವನಿಗೆ ಭಾರೀ ಕೋಪವೇ ಬಂದಿದೆ ಎಂದು ಭಾವಿಸಿದಳು. ತಾಯಿಯ ಅಧಿಕಾರವನ್ನು ಚಲಾಯಿಸಲು ಹೋಗಿ ಅವನ ಕೋಪಕ್ಕೆ ಕಾರಣಳಾದೆ. ಈಗ ತಾನೇ ಹೋಗಿ ಅವನ ಕೋಪವನ್ನು ಶಮನಗೊಳಿಸಬೇಕೆಂದುಕೊಂಡಳು. ಮೆಲ್ಲನೆ ರೂಮಿನ ಬಾಗಿಲ ಮೇಲೆ ಬೆರಳನ್ನು ಬಡಿದಳು. ಪೃಥ್ವಿ ಹೊರಗೆ ಬಂದ. ಅಸಮಾಧಾನ ದಿಂದ ಮುಖ ಕೆಂಪಾಗಿತ್ತು.

''ನನ್ನ ಮೇಲೆ ಕೋಪಾನಾ ?'' ಪ್ರಶ್ನಿಸಿದಳು. ಯಾಕೋ ಚಿಕ್ಕಮ್ಮನನ್ನು ನೋಡುವ ಧೈರ್ಯವಾಗಲಿಲ್ಲ. ತಾನು ದುಡುಕಿ, ಹಾಗೆ ಅನುಚಿತವಾಗಿ ಮಾತಾಡಿದ್ದು ಸರಿಯಲ್ಲ ಅಂತ ಅನ್ನಿಸತೊಡಗಿತ್ತು.

''ಈಗ ಏನೂ ಇಲ್ಲ. ಆದರೆ ಒಂದು ಮಾತು, ನೀವು ಇನ್ನೆಂದೂ ನನ್ನ ಮದುವೆಯ ಮಾತನ್ನೆತ್ತಬಾರದು...'' ಎಂದ.

''ಸರಿಯಪ್ಪಾ... ಆದರೆ ಅವರಿಗೆ ಏನುತ್ತರ ಹೇಳಲಿ ?''

‘‘ಅವನು ಮದುವೆಯಾಗುವುದಿಲ್ಲ ಅಂತ ಹೇಳಿಬಿಡಿ’’ ನಳಿನಿ ಬೆಚ್ಚಿ ಅವನನ್ನೇ ನೋಡಿದಳು. ಈ ನಿರ್ಧಾರ ಏಕೆ ? ಎಂದು ಕೇಳುವ ಧೈರ್ಯ ಬರಲಿಲ್ಲ. ಈಗ ಸಧ್ಯಕ್ಕೆ ಆ ಮಾತೇಬೇಡವೆಂದುಕೊಂಡು ‘‘ಊಟಕ್ಕೆ ಬಾ’’ ಎಂದಳು. ಅವಳು ತಿರುಗಿದ ನಂತರ ನೋಡಿದ.

‘‘ನಾನೂ ದುಡುಕಿ ಏನೇನೋ ಅಂದುಬಿಟ್ಟೆ ನನ್ನನ್ನು ಕ್ಷಮಿಸಿ’’

‘‘ಮಕ್ಕಳಿಗೆ ತಾಯಿಯ ಮೇಲೆ ಅಷ್ಟೂ ಸಲುಗೆ ಇಲ್ಲದಿದ್ದರೆ ಏನು ಚೆನ್ನ ?’’ ಎಂದು ನುಡಿದು ಅವಳು ಅವನ ಕಡೆ ತಿರುಗಿದಳು. ಅವನು ತಲೆ ತಗ್ಗಿಸಿದ್ದ.

ಆ ರಾತ್ರಿ ಅವನು ಮೊಟ್ಟ ಮೊದಲಬಾರಿಗೆ ಒಬ್ಬ ಹುಡುಗಿಯ ಬಗ್ಗೆ ಚಿಂತಿಸಿದ್ದ. ಆಫೀಸಿನಲ್ಲಿ ಚೆಲ್ಲುಚೆಲ್ಲಾಗಿ ವರ್ತಿಸುವ ರೂಪಿಣಿ, ತಂದೆಯ ಜೊತೆ ಅತಿ ಗಂಭೀರವನ್ನು ನಟಿಸುತ್ತಾ ಕುಳಿತಿದ್ದಳಲ್ಲ, ಅವಳು ನಂಬಿಕೆಗೆ ಅರ್ಹಳಲ್ಲ ಎನ್ನುವ ತೀರ್ಮಾನಕ್ಕೆ ಬಂದ.

ಆದರೆ ಆ ರಾತ್ರಿ ನಳಿನಿಗೆ ನಿದ್ದೆ ಬರಲಿಲ್ಲ. ಪಕ್ಕದ ಮಂಚದ ಮೇಲೆ ಮಲಗಿದ್ದ ಅಜಯ ವಿಜಯರನ್ನೇ ನೋಡಿದಳು. ಮಕ್ಕಳೇ ವಾಸಿ. ಯಾವ ಚಿಂತೆಯೂ ಅವರನ್ನು ಕಾಡುವುದಿಲ್ಲ. ಎಷ್ಟು ಪ್ರಶಾಂತವಾಗಿ ಮಲಗಿ ನಿದ್ರಿಸುತ್ತಿದ್ದಾರೆ. ತನಗೋ ನಿದ್ದೆಯೇ ಇಲ್ಲ. ಪೃಥ್ವಿಗಾಗಿ ನಾಗೇಶ ತನ್ನನ್ನು ಮದುವೆಯಾದನೋ ಇಲ್ಲವೋ ತಿಳಿಯದು. ಆದರೆ ಪೃಥ್ವಿ ತನಗೆಂದೂ ಹತ್ತಿರವಾಗಲಿಲ್ಲ. ಈ ಮದುವೆಯಿಂದ ವಿಶ್ವನಂತೂ ತನ್ನಿಂದ ದೂರವಾದುದು ನಿಜ. ಶ್ರೀಮಂತಿಕೆ ಒಂದಿದ್ದರೆ, ಏನನ್ನಾದರೂ ಗಳಿಸಬಹುದು ಎನ್ನುವುದು ನಿಜವಲ್ಲ ಅಂತ ಈಗ ಅನ್ನಿಸುತ್ತಿದೆ... ತನ್ನ ತಂದೆಯಂತೂ ತನ್ನಿಂದ ದೊರೆಯುವ ಹಣಕ್ಕೆ ಮಾತ್ರ ಬೆಲೆ ಕೊಟ್ಟರು ಅಂತನ್ನಿಸುತ್ತಿದೆ. ಎಲ್ಲರೂ ಎಷ್ಟು ಸ್ವಾರ್ಥಿಗಳು...! ಈ ವೃತ್ತದಲ್ಲಿ ತಾನು ಕಳೆದುಕೊಂಡುದುದೇ ಹೆಚ್ಚು.

ತನಗೆ ಸುಖ ಸೌಲಭ್ಯಗಳನ್ನಿತ್ತ ತನ್ನ ಗಂಡ ಈಗ ಇಲ್ಲ. ವಿಶ್ವ ಮನೆ ಬಿಟ್ಟು ಓಡಿ ಹೋದವನು ನಾಪತ್ತೆ. ಅಪ್ಪ ಸಹ ಎಲ್ಲಿ ಮಾಯವಾದರೋ... ತನ್ನ ಮಾವನೂ ಈಗ ಇಲ್ಲ. ತನ್ನ ಮಕ್ಕಳೋ ತುಂಬಾ ಚಿಕ್ಕವರು. ಪೃಥ್ವಿ ಒಬ್ಬನೊಡನೆ ತನ್ನ ಸುಖದುಃಖಗಳನ್ನು ಹೇಳಿಕೊಳ್ಳಬೇಕು. ಅವನೆಂದೂ ತನ್ನನ್ನು ಅನಾದರಣೆಯಿಂದ ಕಂಡವನಲ್ಲ. ಆದರೆ ಈದಿನ ಯಾಕೆ ಹಾಗೆ ಮಾತನಾಡಿದ ? ಅವನಿಗೆ ಯಾವ ಗೆಳತಿಯರೂ ಇಲ್ಲ ಅಂತ ನನಗೆ ಗೊತ್ತು.

ಆದರೆ ರೂಪಿಣಿ ಸರಿ ಇಲ್ಲ ಅಂತ ಹೇಗೆ ಹೇಳಿದ ? ಅಲ್ಲದೇ ಮದುವೆಯೇ ಆಗುವುದಿಲ್ಲ ಅಂತ ಹಾಗೇಕೆ ಹೇಳಿದ ? ಇವನ ಮದುವೆಯ ಮಾತನ್ನು ನಾನಲ್ಲದೆ ಇನ್ಯಾರು ಆಡಬೇಕು ? ಅವನಿಗಿನ್ಯಾರಿದಾರೆ ?

ಬೆಳಗಾಗುವುದನ್ನೇ ಕಾದಿದ್ದ ನಳಿನಿ ಸಿದ್ಧಳಾಗಿ ಚಂದ್ರುವನ್ನು ಎಬ್ಬಿಸಿಕೊಂಡು ಕಾರಿನಲ್ಲಿ ವೈದ್ಯಾಲಯದ ಕಡೆ ಹೊರಟಳು.

ಮನೆಯೊಳಗೆ ಕಾಲಿಟ್ಟ ನಳಿನಿಗೆ ವಿಶ್ವ ಎದುರಾದ. ಅವಳನ್ನು ನೋಡಿಯೂ ನೋಡದವನಂತೆ ದಾಟಿ ಹೊರಗೆ ಹೊರಟ. ನಳಿನಿ ಅವನನ್ನು ತಡೆದಳು. ''ವಿಶ್ವಾ ನಿಂತ್ಕೋ... ನಾನು ನಿನ್ನ ಹತ್ತಿರ ಸ್ವಲ ಮಾತನಾಡಬೇಕು'' ಅಂದಳು. ವಿಶ್ವ ನಿಂತ. ಅವಳ ಕಡೆ ತಿರುಗಿಯೂ ನೋಡಲಿಲ್ಲ.

''ಅಪ್ಪಾ ಎಲ್ಲಿ? ಹೇಗಿದಾರೆ ? ನೀನು ಹೇಗಿದೀಯ ?''

''ತಾತಾ ಬದುಕಿಲ್ಲ......'' ಎಂದಷ್ಟೇ ಹೇಳಿ ಮುಂದೆ ಹೆಜ್ಜೆ ಹಾಕಿದ.

''ಹೌದಾ ? ನನಗ್ಯಾಕೆ ಯಾರೂ ಈ ವಿಷಯವನ್ನು ತಿಳಿಸಲಿಲ್ಲ ?''

''ನಾನು ತಿಳಿಸಬೇಕಿತ್ತಾ? ತಿಳಿಸು ಅಂತ ನನಗೆ ಯಾರೂ ಹೇಳಲಿಲ್ಲ'' ಧೋರಣೆಯಿಂದ ನುಡಿದ.

''ನಾನು ನಿನ್ನ ತಾಯಿ ಕಣೋ.... ನಿನ್ನ ತಾತ ಸತ್ತು ಹೋದ ಸುದ್ದೀನ ನನಗೆ ತಿಳಿಸೋಕೆ ಯಾರು ಯಾಕೆ ಹೇಳಬೇಕು ?''

''ಯಾರು ನನ್ನ ತಾಯಿ... ? ನನಗೆ ತಾಯಿಯೇ ಇಲ್ಲ''

''ಯಾಕೆ ಹೀಗೆಲ್ಲಾ ಮಾತಾಡ್ತೀಯೋ ವಿಶ್ವಾ ?''

''ನಾನು ಹೇಗೆ ಆಡಿದರೆ ನಿಮಗೇನು ಕಷ್ಟ ?''

''ನಿನಗೆ ನನ್ನ ಮೇಲೆ ತುಂಬಾ ಕೋಪ. ನಾನು ಏನು ಮಾಡಲಿ ? ನನ್ನ ತಪ್ಪು ಏನಿರಲಿಲ್ಲ. ಪರಿಸ್ಥಿತಿ ಹಾಗಿತ್ತು... ನಾನು ಅಲ್ಲೇ ಇದ್ದಿದ್ದರೆ, ನೀನು ಈ ದಿನ ವೈದ್ಯನಾಗಲು ಸಾಧ್ಯವಿತ್ತಾ ?''

''ನಾನು ವೈದ್ಯನಾಗುವುದಕ್ಕೂ, ನಿಮಗೂ ಏನು ಸಂಬಂಧವೋ ನನಗೆ ತಿಳಿಯದು. ಸುಮ್ಮನೇ ಹೋಗಿ....''

''ಒರಟನಂತೆ ಮಾತಾಡಬೇಡ. ಇಷ್ಟು ವರ್ಷಗಳ ಮೇಲೆ ನಿನ್ನನ್ನು ನೋಡಿ ನನಗೆ ಎಷ್ಟು ಖುಷಿಯಾಗಿದೆ ಅಂತ ಹೇಗೆ ಹೇಳಲಿ ? ಆದರೆ...

ನನಗೂ ನಿನಗೂ ಸಂಬಂಧ ಇಲ್ಲ ಅಂತ ಮಾತ್ರ ಹೇಳಬೇಡ.''

''ನಾನು ಹೇಳ್ತಿರುವುದೆಲ್ಲಾ ಸರಿಯೇ...'' ಎಂದು ಹೇಳಿ ಅಲ್ಲಿ ನಿಲ್ಲದೇ ಸರಸರನೆ ನಡೆದು ಗಿಡಮರಗಳ ಮಧ್ಯೆ ಮರೆಯಾದ. ದುಃಖಿತಳಾದ ನಳಿನಿ ಕಾರನ್ನೇರಿದಳು. ಚಂದ್ರು ನಳಿನಿಯನ್ನೇ ವಿಚಿತ್ರವಾಗಿ ನೋಡಿ ಕಡೆಗೆ ಕೇಳಿದ.

''ಅವರು ಏನಂದ್ರು ಮೇಡಂ ? ಯಾಕೆ ಹಾಗೆ ಹೊರಟು ಹೋದ್ರು ?'' ನಳಿನಿ ಒಂದು ಗಳಿಗೆ ತಡೆದು ನುಡಿದಳು.

''ಅವನು ನನ್ನ ಮಗ ವಿಶ್ವಾ... ಚಿಕ್ಕವಯಸ್ಸಿನಲ್ಲಿ ನನ್ನ ಬಿಟ್ಟು ದೂರ ಹೊರಟುಹೋಗಿದ್ದ... ನನ್ನನ್ನು ಮರೆತೇ ಬಿಟ್ಟಿದಾನೆ... ನನ್ನನ್ನು ತಾಯಿ ಅಂತ ಒಪ್ಪಿಕೊಳ್ತಾನೇ ಇಲ್ಲ'' ಅವಳ ಗಂಟಲು ಕಟ್ಟಿತು.

''ಮೇಡಂ ನಿಮ್ಮ ಮಗ ಪೃಥ್ವೀನೂ ಇವರೂ ಸ್ನೇಹಿತರು.... ಪೃಥ್ವಿ ಒಂದು ಮಾತು ಹೇಳಿದರೆ ಇವರಿಗೆ ನಂಬಿಕೆ ಬರಬಹುದೇನೋ....?''

ಈ ಮಾತು ನಳಿನಿಗೆ ಒಪ್ಪಿಗೆಯಾಯಿತು. ಒಂದೆರಡು ದಿನಗಳ ನಂತರ, ಸಮಯ ನೋಡಿ ಪೃಥ್ವಿಯೊಡನೆ ಮಾತನಾಡಿದಳು.

''ವಿಶ್ವ... ನನ್ನ ಹಿರಿಯಮಗ. ಅವನು ನಿನ್ನ ಸ್ನೇಹಿತನಂತೆ... ಅವನಿಗೆ ನನ್ನ ಮೇಲೆ ಕೋಪ. ಅದಕ್ಕೇ ನನ್ನನ್ನು ಮರೆತಿರುವವನಂತೆ ನಟಿಸುತ್ತಾನೆ'' ಪೃಥ್ವಿ ಬೆರಗಾಗಿ ಚಿಕ್ಕಮ್ಮನನ್ನೇ ನೋಡಿದ. ಅವಳು ಮುಂದುವರಿಸಿದಳು.

''ನಾನು ಅವನ ಒಳಿತಿಗಾಗಿ ಅವನಿಂದ ದೂರ, ಈ ಮನೆಗೆ ಬಂದೆ. ಅದು ಅವನಿಗೆ ಅರ್ಥವಾಗಬೇಕು. ನನ್ನ ಈ ನಿರ್ಧಾರ ತಪ್ಪಲ್ಲ ಅಂತ ಅವನಿಗೆ ಮನವರಿಕೆಯಾಗಬೇಕು. ಈ ದಿನ ಅವನು ಒಬ್ಬ ವೈದ್ಯನಾಗಿ, ನಾಲ್ಕು ಜನರಿಗೆ ಉಪಕಾರಿಯಾಗಲು, ನಾವುಗಳು ಮಾಡಿದ ಸಹಾಯವೇ ಕಾರಣ ಅಂತ ಅವನಿಗೆ ಗೊತ್ತಾಗಬೇಕು... ಇದನ್ನೆಲ್ಲ ನೀನು ಅವನಿಗೆ ತಿಳಿಸಿ, ಅವನಲ್ಲಿರುವ ತಪ್ಪು ಕಲ್ಪನೆಯನ್ನು ಹೊರದೂಡಬೇಕು.''

''ನಾನು ? ನಾನು ಇದನ್ನೆಲ್ಲ ಹೇಗೆ ಹೇಳಲಿ ? ನನ್ನ ಮಾತನ್ನೂ ಅವರು ತಪ್ಪಾಗಿ ತಿಳಿದರೆ ?''

''ಅವನು ಎಲ್ಲರನ್ನೂ ತಪ್ಪಾಗಿ ತಿಳಿದಿದ್ದಾನೆ... ನೀನು ಅವನಿಗೆ ತಿಳುವಳಿಕೆಯನ್ನು ಹೇಳಬೇಕು'' ಈ ಮಾತು ಅವನಿಗೆ ಸರಿ ಎನಿಸಲಿಲ್ಲ.

''ಈ ಕೆಲಸ ನನ್ನಿಂದಾಗುವುದಿಲ್ಲ ಚಿಕ್ಕಮ್ಮ....'' ಖಂಡಿತವಾಗಿ ನುಡಿದ.

''ನಾನು ನಿನ್ನ ಸ್ವಂತ ತಾಯಿಯೇ ಆಗಿದ್ದರೇ ನೀನು ಈ ಕೆಲಸವನ್ನು ಮಾಡುತ್ತಿರಲಿಲ್ಲವೇ ?''

''ಯಾವ ಸ್ವಂತ ತಾಯಿಯೂ ತನ್ನ ಸ್ವಂತ ಮಗನನ್ನು ಇಷ್ಟು ಸುಲಭವಾಗಿ ಬಿಟ್ಟು ಬರುತ್ತಿರಲಿಲ್ಲ'' ಎಂದು ಬಿಟ್ಟ. ತತ್‌ಕ್ಷಣವೇ ತಾನು ಹಾಗೆ ಮಾತಾಡ ಬಾರದಾಗಿತ್ತು ಎನಿಸಿತ್ತು. ನಳಿನಿಯ ಮುಖದ ಬಣ್ಣ ಕೆಟ್ಟು ಹೋಗಿತ್ತು.

''ಅಂತೂ ನಾನು ಮಾಡಿದ್ದು ತಪ್ಪು ಅಂತ ನೀನೂ ಹೇಳಿಬಿಟ್ಟೆಯಾ ?'' ಅವಳ ಧ್ವನಿ ನಡುಗಿತ್ತು.

''ವಿಶ್ವನ ಮನಸ್ಸಿಗೆ ಎಷ್ಟು ನೋವಾಗಿರಬಹುದು ಅಂತ ನೀವೆಂದಾದರೂ ಯೋಚಿಸಿದ್ದೀರಾ ? ತಾಯಿಯಿಲ್ಲದೇ ಬೆಳದವನು ನಾನು. ನನಗೆ ಆ ನೋವು ಗೊತ್ತು.'' ನಳಿನಿಯ ಮುಖಭಂಗವಾಗಿತ್ತು. ತಾನು ಈ ವಿಷಯಗಳನ್ನು ಇವನ ಹತ್ತಿರ ಮಾತನಾಡಲೇ ಬಾರದಾಗಿತ್ತು ಎನಿಸಿತ್ತು.

''ನಿಮಗೆ ಸಮಾಧಾನವಾಗುವುದಾದರೆ ನಾನು ವಿಶ್ವನ ಹತ್ತಿರ ಮಾತಾನಾಡ್ತೀನಿ. ನೀವು ಬೇಜಾರು ಮಾಡ್ಕೋಬೇಡಿ'' ಅಂತಂದ ಪೃಥ್ವಿ.

''ಏನೂ ಬೇಡ ಬಿಡು. ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನೇ ನನ್ನ ಹೊಟ್ಟೆಯನ್ನು ಉರಿಸ್ತಿದಾನೆ. ನಿನ್ನನ್ನು ನಾನು ಸಾಕಿ ಬೆಳೆಸಲಿಲ್ಲ... ನಿನ್ನನ್ನು ಕೇಳಿದ್ದೇ ನನ್ನ ತಪ್ಪು. ಹೀಗಾಗುತ್ತೆ ಅಂತ ಗೊತ್ತಿದ್ದಿದ್ದರೆ ಒಂದು ಹೊತ್ತಿಗೆ ಊಟಕ್ಕೆ ಗತಿಯಿಲ್ಲದಿದ್ದರೂ ಚಿಂತೆ ಇರಲಿಲ್ಲ. ನಿಮ್ಮ ತಂದೇನ ಮದುವೆಯಾಗುತ್ತಿರ ಲಿಲ್ಲ'' ಆ ಮಾತಿಗೆ ಏನು ಹೇಳಬೇಕೆಂದು ಅವನಿಗೆ ತಿಳಿಯಲಿಲ್ಲ. ಸುಮ್ಮನಾದ.

* * * *

ಇದ್ದಕ್ಕಿದ್ದಂತೆ, ಆಫೀಸಿನಲ್ಲಿ ಹರಡಿದ ಗುಸುಗುಸು ಮಾತು ಚಂದ್ರು ತನಕ ಬಂತು. ಅವನಿಗೆ ಅನುಮಾನ ಉಂಟಾಯಿತು. ತಡೆಯಲಾರದೇ ಪೃಥ್ವಿಯ ಬಳಿಗೆ ಬಂದ.

''ನಿಮಗೂ ರೂಪಿಣಿಗೂ ಮದುವೆ ಗೊತ್ತಾಗಿದೆ ಅಂತ ಎಲ್ಲರೂ ಮಾತ್ನಾಡಿ ಕೊಳ್ತಿದಾರೆ. ಈ ಮಾತು ನಿಜಾನಾ ?'' ಪೃಥ್ವಿಗೆ ರೇಗಿ ಹೋಯಿತು.

''ನೀನು ನಂಬಿ ಬಿಟ್ಟೆಯಾ ಚಂದ್ರು ?'' ಕೋಪದಿಂದ ಕೇಳಿದ.

''ಇಲ್ಲ, ಅದೇನು ವಿಷಯ ಅಂತ ಕೇಳಿದೆ ಅಷ್ಟೆ...''

''ರೂಪಿಣೀನ ಕೆಲಸದಿಂದ ತೆಗೆದುಹಾಕ್ತೀನಿ ಅಂತ ಹಿದರಿಸಿ ನೋಟೀಸು ಕಳಿಸಿದೀನಿ. ಅದಕ್ಕೇ ಅವಳು ಈ ಅಪಪ್ರಚಾರ ಮಾಡ್ತಿದಾಳೆ. ಇನ್ನು ನಾನು ಸುಮ್ಮನಿರುಲ್ಲ. ಪೋಲೀಸ್ ಕಂಪ್ಲೇಂಟ್ ಕೊಡ್ತೀನಿ ಅಷ್ಟೇ.''

''ಹಾಗೆ ಮಾಡಬೇಡಿ ಸಾರ್... ನಮಗೇ ಅವಮಾನವಾಗುತ್ತೆ. ಅವರನ್ನೇ ಕರೆಸಿ, ಏನಿದೆಲ್ಲ ಅಂತ ಎದುರಿಗೇ ಕೇಳಿಬಿಡಿ''

''ನನ್ನ ಕೈಲಿ ಇದೆಲ್ಲಾ ಆಗುಲ್ಲ ಚಂದ್ರು. ನಾನೀಗ ಮನೆಗೆ ಹೋಗ್ತಿದೀನಿ. ವಾಪಸ್ಸು ಬಂದ ಮೇಲೆ ನೋಡ್ತೀನಿ'' ಎನ್ನುತ್ತಾ ಸೀದಾ ಮನೆಗೆ ಬಂದ. ಹೃದಯದಲ್ಲಿ ಜ್ವಾಲಾಮುಖಿ ಉರಿಯುತ್ತಿದ್ದರೂ ಆರಿದ ಸ್ವರದಲ್ಲಿ ಚಿಕ್ಕಮ್ಮನಿಗೆ ಹೇಳಿದ.

''ನಾನು ಅವತ್ತೇ ಹೇಳಿದೆ ಆ ಹುಡುಗಿಯ ವರ್ತನೆ ಸರಿ ಇಲ್ಲಾಂತ. ನೀವು ನನ್ನ ಮಾತನ್ನು ನಂಬಲಿಲ್ಲ. ನನಗೂ ಅವಳಿಗೂ ಮದುವೆ ಗೊತ್ತಾಗಿದೆ ಅಂತ ಆಫೀಸಿನಲ್ಲೆಲ್ಲಾ ಸುದ್ದಿ ಹಬ್ಬಿಸಿದಾಳೆ. ನೀವು ಅವರುಗಳನ್ನು ಕರೆಸಿ ಅವರಿಬ್ಬರಿಗೂ ಬುದ್ಧಿ ಹೇಳಿ...''

''ಸರಿ ಹೇಳ್ತೀನಿ... ನೀನು ಯೋಚಿಸಬೇಡ'' ಎಂದು ಸಮಾಧಾನ ಹೇಳಿ, ರೂಪಿಣಿಗೆ ಫೋನು ಮಾಡಿ, ಅವಳ ತಂದೆಯೊಡನೆ ಸಾಯಂಕಾಲ ಮನೆಗೆ ಬರುವಂತೆ ತಿಳಿಸಿದಳು. ಆದರೆ ರೂಪಿಣಿ ಒಬ್ಬಳೇ ಬಂದಳು. ಅವಳ ಮುಖದ ಮೇಲೆ, ಯಾವ ಅಳುಕಿನ ಭಾವನೆ ಇಲ್ಲದಿರುವುದನ್ನೂ ನಳಿನಿ ಗಮನಿಸಿದಳು.

''ನಿಮ್ಮ ತಂದೆ ಯಾಕೆ ಬರಲಿಲ್ಲ ?''

''ನಮ್ಮ ತಂದೆ ಊರಿನಲ್ಲಿಲ್ಲ. ಏನು ವಿಷಯ ಅಂತ ನನಗೇ ಹೇಳಿ...'' ರೂಪಿಣಿ ಭಂಡತನದಿಂದ ನುಡಿದಾಗ ನಳಿನಿ ಆಶ್ಚರ್ಯಗೊಂಡಳು. ಪೃಥ್ವಿ ಹೇಳುವುದು ನಿಜ... ಈ ಹುಡುಗಿಗೆ ಸಂಕೋಚವೇ ಇಲ್ಲವೇನೋ ಅಂತಂದುಕೊಂಡಳು.

''ಏನಮ್ಮಾ ರೂಪಿಣಿ... ನೀನು ತಿಳುವಳಿಕಸ್ಥೆ, ವಿದ್ಯಾವಂತೆ... ನೀನು ಹೀಗೆ ಮಾಡಬಹುದಾ ? ನಿನ್ನ ಬಾಸ್‌ಗೆ ಅವಮಾನ ಆಗುಲ್ವಾ ?''

''ಇದರಲ್ಲಿ ಅವಮಾನ ಏನು ? ನಾನು ಪೃಥ್ವೀನೇ ಮದುವೆ

ಯಾಗೋದು ಅಂತ ತೀರ್ಮಾನ ಮಾಡಿದೀನಿ.... ನಾನು ಅವರನ್ನು ಪ್ರೀತಿಸ್ತೀನಿ.''

''ಹುಡುಗಾಟ ಆಡಬೇಡ ರೂಪಿಣಿ... ಪೃಥ್ವಿಗೆ ಇದೆಲ್ಲ ಸರಿ ಹೋಗುಲ್ಲ. ಅವನು ನಿನ್ನನ್ನು ಪ್ರೀತಿಸುವ ಮಾತೇ ಇಲ್ಲ.''

''ಯಾಕೆ ಪ್ರೀತಿಸುಲ್ಲ? ನಿಮ್ಮ ಹತ್ತಿರ ಸುಳ್ಳು ಹೇಳಿದಾರೆ ಅಷ್ಟೇ...''

''ಪೃಥ್ವಿ ಅಂಥೋನಲ್ಲ. ಅವನೇಕೆ ಸುಳ್ಳು ಹೇಳ್ತಾನೆ. ಇದೆಲ್ಲಾ ನಿನ್ನದೇ ಕಟ್ಟು ಕತೆ...''

''ನೀವು ಪೃಥ್ವಿಯ ಮಾತನ್ನು ನಂಬಿದ್ರಾ ? ನಿನ್ನನ್ನ ಪ್ರೀತಿಸ್ತೀನಿ ನಿನ್ನನ್ನೇ ಮದುವೆಯಾಗ್ತೀನಿ ಅಂತ ಪ್ರಾಮಿಸ್ ಮಾಡಿ...'' ಅಷ್ಟರಲ್ಲಿ ಪೃಥ್ವಿ ಒಳಗಿನಿಂದ ಬಂದ. ರೂಪಿಣಿ ಅವನನ್ನು ಕಂಡು ಮಾತನ್ನು ನಿಲ್ಲಿಸಿದಳು.

''ಏಯ್ ಹುಡುಗೀ... ಹೀಗೆಲ್ಲಾ ಸುಳ್ಳು ಕತೆ ಹೇಳಿದ್ರೆ ನಿನ್ನನ್ನು ಜೈಲಿಗೆ ಹಾಕಿಸ್ತೀನಿ ನೋಡು..''

''ಸುಳ್ಳು ಹೇಳ್ತಾ ಇರೋರು ನೀವು... ನನ್ನನ್ನು ನಂಬಿಸಿ ಮೋಸ ಮಾಡಿದವರು ನೀವು...'' ಪೃಥ್ವಿ ಅವಳ ಕೆನ್ನೆಗೆ ಹೊಡೆಯಲೆಂದು ಕೈ ಎತ್ತಿದ. ಅವಳು ಅಲ್ಲಿಂದ ತಪ್ಪಿಸಿಕೊಂಡು ಹೊರಬಾಗಿಲಿಗೆ ಬಂದು ನಿಂತು, ನಾಲ್ಕು ಮನೆಗೆ ಕೇಳುವಂತೆ ಎತ್ತರದ ಧ್ವನಿಯಲ್ಲಿ ಅರಚಿದಳು.

''ಅದೇನು ಮಾಡ್ತೀರೋ ಮಾಡಿ.. ನಾನೂ ಹೆದರುಲ್ಲ..'' ಎಂದು ಹೆದರಿಸುವಂತೆ ನುಡಿದು ಅಲ್ಲಿಂದ ಓಡಿ ಹೊರಟುಹೋದಳು.

''ನೋಡಿದ್ರಾ ಚಿಕ್ಕಮ್ಮ ಅವಳ ಸೊಕ್ಕನ್ನ? ನಮ್ಮ ಪಾಡಿಗೆ ನಾವು ಇದ್ದೆವು. ಯಾರೋ ನಮಗಾಗದವರು ಅವಳನ್ನು ಇಲ್ಲಗೆ ಕಳಿಸಿ, ನಮಗೆ ಅವಮಾನ ಮಾಡ್ತಿದಾರೆ ಅಂತನ್ನಿಸುತ್ತೆ.''

ನಳಿನಿಗೂ ಅವನ ಮಾತು ಹೌದೆನಿಸಿತ್ತು. ಯಾರಿರಬಹುದು ? ತನಗಾಗದವರು ಅಂದರೆ, ತನ್ನ ತಂದೆ ಹಾಗೂ ವಿಶ್ವ. ತಂದೆ ಈಗ ಬದುಕಿಲ್ಲ ಅಂತ ವಿಶ್ವನೇ ಹೇಳಿದಾನೆ... ಹಾಗಾದರೆ ವಿಶ್ವನದೇ ಈ ಕೆಲಸವೆಲ್ಲ... ನನ್ನ ಮೇಲೆ ಕೋಪವಿದ್ದರೆ ಈ ಪೃಥ್ವಿ ಅವನಿಗೇನು ಮಾಡಿದ ? ಪೃಥ್ವಿ ಅವನೂ ಇಬ್ಬರೂ ಸ್ನೇಹಿತರು ಅಂತ ಚಂದ್ರು ಹೇಳಿದ್ದ.

ಪೃಥ್ವಿಗೆ ವಿಶ್ವನ ಮೇಲೆ ಸಂದೇಹ ಮೂಡಲಿಲ್ಲ. ಆದರೂ ತನಗೆ ಅವಮಾನ ಪಡಿಸಲು ಇವಳ ಹಿಂದೆ ಯಾರ ಕೈವಾಡವಿರಬಹುದು ? ಕಂಡುಹಿಡಿಯಲೇ ಬೇಕೆಂದುಕೊಂಡು, ಡಿಟೆಕ್ಟಿವ್ ಏಜೆಂಟನ್ನ ಭೇಟಿಯಾದ.

* * * *

ಆ ದಿನ ಓಡಿ ಹೋದ ರೂಪಿಣಿ, ಮತ್ತೆ ಆಫೀಸಿಗೂ ಬಂದಿರಲಿಲ್ಲ. ಏನಾದಳೋ, ಎಲ್ಲಿ ಹೋದಳೋ ಯಾರಿಗೂ ತಿಳಿಯಲಿಲ್ಲ. ಆದರೆ ದಿಢೀರನೇ ರೂಪಿಣಿ ಬಂದರೂ ಬರಬಹುದು ಎನ್ನುವ ಹೆದರಿಕೆ ನಳಿನಿಗಿತ್ತು. ಆದರೆ ಅವಳ ಸುದ್ದಿಯೇ ಇಲ್ಲದಿದ್ದಾಗ, ಪೃಥ್ವಿ ಅವಳನ್ನು ಜೈಲಿಗೆ ಕಳಿಸಿರಬಹುದೇ ಎಂಬ ಅನುಮಾನ ಮೂಡಿತು. ಆದರೆ ಕೇಳಲು ಹೆದರಿದಳು. ಚಂದ್ರುವನ್ನು ಗುಟ್ಟಾಗಿ ಕೇಳಿದಳು. ಅವನು ತಗೇನೂ ತಿಳಿಯದು ಅಂತಂದ. ನಾನು ಒಮ್ಮೆ ವಿಶ್ವನೊಡನೆ ಮಾತನಾಡಬೇಕು ಎಂದುಕೊಂಡು, ಅವನನ್ನು ತನ್ನನ್ನು ಕಾರಿನಲ್ಲಿ ಕರೆದುಕೊಂಡು ಹೋಗುವಂತೆ ಹೇಳಿದಳು. ಈ ವಿಷಯ ಪೃಥ್ವಿಗೆ ತಿಳಿಸಿದ ಚಂದ್ರು. ಆಗ ಇದ್ದಕ್ಕಿದ್ದಂತೆ, ವಿಶ್ವನಿಗೆ ಈ ರೂಪಿಣಿ ಯಾರು ಅಂತ ತಿಳಿದಿದ್ದರೂ ತಿಳಿದಿರಬಹುದು. ಈ ವಿಷಯದಲ್ಲಿ ವಿಶ್ವ ತನಗೆ ಸಹಾಯ ಮಾಡಿದರೂ ಮಾಡಬಹುದು ಎಂದುಕೊಂಡು, ತಾನೊಬ್ಬನೇ ವೈದ್ಯಾಲಯದ ಕಡೆ ಹೊರಟ.

ವಿಶ್ವ ಕೈತೋಟದಲ್ಲಿದ್ದಾನೆಂದು ತಿಳಿಯಿತು. ಅಲ್ಲಿಗೇ ನಡೆದ. ವಿಶ್ವ ಮುಗುಳ್ನಕ್ಕ. ಅಲ್ಲಿದ ಕಲ್ಲು ಬೆಂಚಿನ ಮೇಲೆ ಇಬ್ಬರೂ ಕುಳಿತರು. ಪೃಥ್ವಿ ಏನೋ ಅನುಮಾನಿಸುತ್ತಿರುವುದನ್ನು ವಿಶ್ವ ಗಮನಿಸಿದ. ಗಿಡಗಳ ಕಡೆ ಕೈ ಮಾಡಿದ.

''ಈ ತೋಟ ನಮ್ಮ ವೈದ್ಯಾಲಯಕ್ಕೆ ಸೇರಿದ್ದು. ಇಲ್ಲಿ ಅನೇಕ ಗಿಡಮೂಲಿಕೆಗಳಿವೆ. ಎಲ್ಲಾ ಔಷಧೀಯ ಸಸ್ಯಗಳೇ... ಇಲ್ಲಿ ಓಡಾಡಿದರೇ ನನ್ನ ಮನಸ್ಸು ಉಲ್ಲಾಸಗೊಳ್ಳುತ್ತೆ... ನನ್ನ ಒಂಟಿತನ ನೀಗುತ್ತೆ... ಈ ಸಸ್ಯಗಳೇ ನನ್ನ ಒಡನಾಡಿಗಳು...'' ಪೃಥ್ವಿ ನಕ್ಕ.

''ಈ ವಿಷಯಗಳೆಲ್ಲ ನನಗೆ ಅರ್ಥವಾಗುವುದಿಲ್ಲ ವಿಶ್ವಾ... ಈಗ ನಾನು ಬಂದಿರುವ ಕಾರಣವೇ ಬೇರೆ...''

''ನೀವೇ ಹೇಳಬೇಕಪ್ಪಾ... ಇಲ್ಲದಿದ್ದರೆ ನೀವು ಬಂದಿರುವ ಕಾರಣ ನನಗೆ ತಿಳಿಯುವುದಾದರೂ ಹೇಗೆ ? ಇಲ್ಲೇ ನನ್ನದೊಂದು ಚಿಕ್ಕಮನೆಯಿದೆ.

ಅಲ್ಲಿ ಕುಳಿತು ಮಾತನಾಡೋಣ ಬನ್ನಿ'' ಎನ್ನುತ್ತಾ ಎದ್ದ. ಪೃಥ್ವಿ ಅವನನ್ನು ಹಿಂಬಾಲಿಸಿದ. ವಿಶ್ವ ಪೃಥ್ವಿಗೆ ಕುಡಿಯಲು ನೀರನ್ನು ತಂದಿತ್ತ. ಗಟಗಟನೆ ನೀರನ್ನು ಕುಡಿದು ಪೃಥ್ವಿ ಮಾತಿಗೆ ಪ್ರಾರಂಭಿಸಿದ.

''ನನಗೆ ಕೆಲವು ಸಂದೇಹಗಳಿವೆ. ನಿಜವನ್ನು ಹೇಳಿ ನೀವು ಸಹಾಯ ಮಾಡಬೇಕು''

''ನಾನು ಸುಳ್ಳು ಹೇಳಬಹುದು ಅನ್ನೋ ಅನುಮಾನ ನಿಮಗೆ... ಪರವಾಗಿಲ್ಲ ಹೇಳಿ ಅದೇನು ಅಂತ..''

''ಅನುಮಾನವೇನಿಲ್ಲ... ನನ್ನ ಕೋರಿಕೆ ಅಷ್ಟೆ....'' ಎನ್ನುತ್ತಾ ನಡೆದ ವಿಷಯಗಳನ್ನು ಹೇಳಿದ. ವಿಶ್ವ ಸಹನೆಯಿಂದ ಎಲ್ಲವನ್ನೂ ಕೇಳಿಸಿಕೊಂಡ. ಮಧ್ಯೆ ಯಾವ ಪ್ರಶ್ನೆಯನ್ನೂ ಎತ್ತಲಿಲ್ಲ.

''ಈ ಹುಡುಗಿ ನಿಮ್ಮ ತಾತನ ಕಡೆಯವಳಿರಬಹುದು ಎನ್ನೋ ಅನುಮಾನ ನಮಗೆ... ಅವಳು ಯಾರು ? ಯಾಕೆ ಹೀಗೆ ಮಾಡುತ್ತಿದ್ದಾಳೆ ಅಂತ ನಿಮಗೇನಾದ್ರೂ ತಿಳಿದಿರಬಹುದಾ...?''

ವಿಶ್ವ ನಕ್ಕ. ''ನಾನು ನಮ್ಮ ತಾತನ ಮುಖವನ್ನು ನೋಡಿ ಎಷ್ಟೋ ವರ್ಷಗಳಾಯ್ತು. ಅವರು ಈಗ ಬದುಕಿಲ್ಲ. ಅಂತಿಮದರ್ಶನವನ್ನು ಕೂಡಾ ನಾನು ಮಾಡಲಿಲ್ಲ....''

''ನಿಜ ಹೇಳಿ ವಿಶ್ವ... ನನಗೆ ಸಹಾಯ ಮಾಡಿ''

''ನಿಜ ಹೇಳಿದ್ರೆ ನಂಬಿಕೆ ಬರ್ತಿಲ್ಲ. ಯಾವ ಸುಳ್ಳು ಹೇಳಲಿ ?'' ಅವನ ಧ್ವನಿಯಲ್ಲಿ ಕೋಪ ಇಣುಕಿತ್ತು. ಪೃಥ್ವಿ ಮುಂದುವರೆಸಿದ.

''ನಮ್ಮ ತಾತ ನಿಮ್ಮ ತಾತನಿಗೆ ಒಂದು ಮನೆಯನ್ನು ಕೊಡಿಸಿದ್ದರು. ಸಾಕಷ್ಟು ಹಣವನ್ನೂ ಕೊಟ್ಟಿದ್ದರು ಈ ವಿಷಯ ನಿಮಗೆ ಗೊತ್ತಾ ?'' ವಿಶ್ವ ನಂಬದವನಂತೆ ಅವನನ್ನೇ ನೋಡಿದ. ಹೌದು ಎನ್ನುವಂತೆ ಪೃಥ್ವಿ ತಲೆಯಾಡಿಸಿದ. ''ಹೌದು ವಿಶ್ವ... ನಮ್ಮ ತಂದೆ ಸಹ ಪ್ರತಿತಿಂಗಳೂ ಹಣವನ್ನು ಕೊಡುತ್ತಿದ್ದರು. ಈಗ ಅದೆಲ್ಲ ನಿಮಗೆ ಸೇರಿರಬೇಕಲ್ಲವೆ ?....'' ವಿಶ್ವ ಗಹಗಹಿಸಿ ನಕ್ಕ. ಅವನಿಗೀಗ ಎಲ್ಲಾ ಅರ್ಥವಾಗಿತ್ತು.

''ಯಾವ ಹಣವೂ ನನಗೆ ಸಿಕ್ಕಿಲ್ಲ... ಚಿಕ್ಕವಯಸ್ಸಿನಲ್ಲಿ ನನಗೂ ಶ್ರೀಮಂತನಾಗಬೇಕು ಎನ್ನುವ ಆಸೆ ಇತ್ತು. ಸೊಗಸಾದ ಬಟ್ಟೆಗಳನ್ನು

ಧರಿಸಬೇಕು... ಕಾರಿನಲ್ಲಿ ಓಡಾಡಬೇಕು, ಧಾರಾಳವಾಗಿ ಹಣವನ್ನು ಖರ್ಚು ಮಾಡಿ ಖುಷಿಯಾಗಿ ಕಾಲವನ್ನು ಕಳೆಯಬೇಕು ಎನ್ನೋ ಆಸೆ ಇದ್ದದ್ದು ನಿಜ.. ಆದರೆ ತಾತ ನನಗೆಂದೂ ಹಣವನ್ನು ಕೊಡಲಿಲ್ಲ. ಹಣದ ವಿಷಯ ಸಹ ತಿಳಿಸಲಿಲ್ಲ. ಹಾಗೇನಾದರೂ ಸುಲಭವಾಗಿ ಹಣ ಸಿಗುವಂತಿದ್ದರೆ ಬಹುಶಃ ನಾನು ಇಂದು ಈ ಕೊಂಪೆಯಲ್ಲ ಇರುತ್ತಿರಲಿಲ್ಲವೇನೋ...?''

ಅವನ ಮಾತಿನಲ್ಲಿ ನಿಜವಿರಬಹುದು ಅಂತ ಅನ್ನಿಸಿದರೂ, ಪೂರ್ಣ ನಂಬಿಕೆ ಬರಲಿಲ್ಲ. ವಿಶ್ವ ಮತ್ತೆ ನುಡಿದ.

''ನನ್ನ ತಾಯಿ ಮತ್ತೆ ಮದುವೆಯಾಗಿ, ನನ್ನನ್ನು ಬಿಟ್ಟು ಹೊರಟು ಹೋದಳು ಎನ್ನುವ ಕೋಪಕ್ಕೆ, ಆ ಮನೆಯನ್ನು ಬಿಟ್ಟು ಎಲ್ಲೆಲ್ಲೋ ತಿರುಗಿ ಕಡೆಗೆ ಇಲ್ಲಿಗೆ ಬಂದು ಸೇರಿದೆ. ನಿಮಗೆ ನನ್ನ ಮಾತಿನ ಮೇಲೆ ನಂಬಿಕೆ ಇಲ್ಲ. ನನ್ನನ್ನು ನಂಬಿದ ದಿನ ಮತ್ತೆ ಬನ್ನಿ ಪರವಾಗಿಲ್ಲ'' ವಿಶ್ವ ಸಮಾದಾನದಿಂದ ನುಡಿದಾಗ ಪೃಥ್ವಿಗೆ ಹೇಗೆ ಹೇಗೋ ಆಯಿತು.

''ಹಾಗಲ್ಲ......'' ಎಂದು ಹೇಳ ಹೊರಟವನನ್ನು ತಡೆದ ವಿಶ್ವ,

''ನನ್ನ ತಾಯಿ ನಿಮ್ಮ ತಂದೆಯನ್ನು ಮರುಮದುವೆಯಾದದ್ದು ಅಂತ ತಿಳಿದದ್ದು, ನಿಮ್ಮ ಸ್ನೇಹವಾದ ನಂತರವೇ... ಆದರೂ ತಿಳಿಯದವನಂತೆ ನಟಿಸಿದೆ ಏಕೆ ಗೊತ್ತೇ ! ನನಗೆ ತಾಯಿ ಅನ್ನೋ ಪದದ ಅರ್ಥವೇ ಮರೆತು ಹೋಗಿದೆ. ಆಸೆ, ಅಂತಸ್ತು ಶ್ರೀಮಂತಿಕೆಯನ್ನು ಬಯಸಿ, ಹೆತ್ತ ಮಗನನ್ನೇ ಬಿಟ್ಟು ಹೋಗುವ ತಾಯಿಯ ಬಗ್ಗೆ ನಿಮಗೇನನ್ನಿಸುತ್ತೆ. ನೀವೇ ಹೇಳಿ.''

ಪೃಥ್ವಿ ಸುಮ್ಮನಾದ. ''ಯಾವ ಆಶ್ರಯವೂ ಇಲ್ಲದೇ, ಬೀದಿಯಲ್ಲಿ ಅಲೆದಾಡುತ್ತಿದ್ದವನನ್ನು ಈ ಪಂಡಿತರು ತನ್ನ ಮನೆಗೆ ಕರೆತಂದು, ನನ್ನನ್ನು ಈ ಸ್ಥಿತಿಗೆ ತಂದರು. ಇವರ ಹೊರತು ನನಗೆ ಬೇರೆ ಯಾರೂ ಇಲ್ಲ, ಬೇರೆ ಯಾರೂ ಬೇಕಿಲ್ಲ...''

''ನಿಮಗೆ ನಿಮ್ಮ ತಾಯಿಯ ಮೇಲೆ ಕೋಪ... ಆದರೆ...''

''ಬಿಡಿ ಪೃಥ್ವಿ. ನಿಮ್ಮ ಸ್ವಂತ ತಾಯಿಯೇ ಹೀಗೆ ಮಾಡಿದ್ದರೆ ನಿಮಗೆ ಸುಲಭವಾಗಿ ಎಲ್ಲಾ ಅರ್ಥವಾಗುತ್ತಿತ್ತು.''

''ನನ್ನ ತಾಯಿ ಬದುಕಿದ್ದಿದ್ದರೆ ನಿಮ್ಮ ತಾಯಿ ನಮ್ಮ ಮನೆಗೆ ಬಂದು ಸೇರುವ ಪ್ರಮೇಯವೇ ಬರುತ್ತಿರಲಿಲ್ಲ ಅಲ್ಲವೇ...'' ವಿಶ್ವ ಪೆದ್ದನಂತೆ ಅವನನ್ನೇ ನೋಡಿದ.

''ನಿಮಗೆ ನಿಮ್ಮ ತಾಯಿಯ ಮೇಲೆ ಮಾತ್ರ ಕೋಪ ಏಕೆ ? ನಿಮ್ಮ ತಾಯಿಗೆ ದ್ರೋಹ ಮಾಡಿ ಬಿಟ್ಟು ಹೋದ, ನಿಮ್ಮ ತಂದೆಯ ಮೇಲೆ ಯಾಕೆ ಕೋಪವಿಲ್ಲ ನಿಮಗೆ ?''

''ನಾನೆಂದೂ ಅವರನ್ನು ನೋಡಲೇ ಇಲ್ಲ. ಹದಿನಾಲ್ಕು ವರ್ಷಗಳು ನನ್ನನ್ನು ಬೆಳೆಸಿದ ನನ್ನ ತಾಯಿ ನನಗೆದ್ರೋಹ ಮಾಡಿದ್ದನ್ನು ನಾನು ಈ ಜನ್ಮದಲ್ಲಿ ಮರೆಯುವಂತಿಲ್ಲ,ಮರೆಯುವುದೂ ಇಲ್ಲ... ನಾನು'' ಒತ್ತಿ ಒತ್ತಿ ನುಡಿದ.

''ಬಾಲ್ಯದಲ್ಲಿಜರುಗಿದ ಘಟನೆಗಳನ್ನು ಯಾರೂ ಮರೆಯುವುದಿಲ್ಲ ನನಗೂ ಗೊತ್ತು. ಆದರೆ ಮರೆಯದಿದ್ದರೆ, ಮನೆಯವರೊಂದಿಗೆ ಬದುಕುವುದಾದರೂ ಹೇಗೆ ?''

''ನೀವು ನಿಮ್ಮ ಮನೆಯಲ್ಲೇ ಇರುವುದರಿಂದ, ಸುಲಬವಾಗಿ ಇಂಥ ಮಾತುಗಳನ್ನಾಡುತ್ತಿದೀರಿ. ನಿಮ್ಮ ತಂದೆ ಆ ವಯಸ್ಸಿನಲ್ಲಿ ಮರುಮದುವೆ ಯಾದರೂ ನೀವು ಎಲ್ಲದಕ್ಕೂ ಹೊಂದಿಕೊಂಡಿರಿ ಏಕೆ ? ನಿಮಗೆ ಮನೆಯಲ್ಲಿ ಯಾವ ಕಷ್ಟವೂ ಇರಲಿಲ್ಲ. ಹಣಕಾಸಿಗೆ ತೊಂದರೆ ಇರಲಿಲ್ಲ. ನಿಮ್ಮನ್ನು ಅತಿಯಾಗಿ ಪ್ರೀತಿಸುವ ನಿಸ್ವಾರ್ಥಿ ತಾತ ಇದ್ದರು ಬರಿಗಾಲಿನಲ್ಲಿ ಬೀದಿ ಬೀದಿ ಅಲೆಯುವ ಸ್ಥಿತಿ ಇರಲಿಲ್ಲ.''

ಆ ಮಾತು ಪೃಥ್ವಿಯನ್ನು ಚುಚ್ಚಿತು.

''ನಿಜ. ನೀವು ಹೇಳುವ ಮಾತು ನಿಜ... ಆದರೆ ನಾನೆಂದೂ ನನ್ನ ಮಲತಾಯಿಯನ್ನು ದ್ವೇಷಿಸಲಿಲ್ಲ. ನನ್ನ ಚಿಕ್ಕಮ್ಮ ಸಹ ಒಳ್ಳೆಯವರೇ...''

''ನಿಮ್ಮ ಚಿಕ್ಕಮ್ಮ ಹೇಗಿದ್ದರೆ ನನಗೇನು ?''

''ನನ್ನ ಚಿಕ್ಕಮ್ಮ ಮೊದಲು ನಿಮ್ಮ ತಾಯಿಯಾಗಿದ್ದವರು, ಅವರು ಮಾಡಿದ್ದು ನಿಮ್ಮ ಒಳ್ಳೆಯದಕ್ಕೇ ತಾನೇ...?''

''ಏನು ಒಳ್ಳೇದು ? ಏನು ಒಳ್ಳೇದಾಗಿದೆ ನನಗೆ ?'' ಎದೆ ತಟ್ಟಿಕೊಂಡು ಕೇಳಿದ.

''ಇದಕ್ಕೆಲ್ಲ ಕಾರಣ ನಿಮ್ಮ ತಾತನ ಸ್ವಾರ್ಥತನ. ತಾತ ನಿಮಗೆ ಸುಳ್ಳು ಹೇಳಿರಬಹುದು ಅಂತ ಅನ್ನಿಸಲಿಲ್ವಾ ?''

''ಹೋಗಲಿ ಬಿಡಿ ಪೃಥ್ವಿ... ಆ ಹಳೆಯ ಮಾತುಗಳನ್ನೆಲ್ಲ ಕಟ್ಟಿಕೊಂಡು ಏನಾಗಬೇಕಾಗಿದೆ ?''

''ಹಾಗಲ್ಲ'' ಪೃಥ್ವಿ ಏನೋ ಹೇಳಲು ಹೊರಟ. ವಿಶ್ವ ತಡೆದ.

''ನನಗೀಗ ಯಾವ ಆಸೆಯೂ ಇಲ್ಲ... ನಿಮ್ಮ ಚಿಕ್ಕಮ್ಮನೇ ನನ್ನ ತಾಯಿಯಾಗಿದ್ದವಳು ಎಂದು ತಿಳಿದ ದಿನ ಕೂಡಾ ನನಗೇನೂ ಅನ್ನಿಸಲಿಲ್ಲ.''

''ನನ್ನ ಮಾತುಗಳಿಂದ ನಿಮ್ಮ ದುಗುಡ ಹೆಚ್ಚತು ಅಷ್ಟೇ. ಸಮಾಧಾನ ಮಾಡಿಕೊಳ್ಳಿ. ಬಡಬಗ್ಗರ ಕಷ್ಟಕಾರ್ಪಣ್ಯಗಳಿಗೆ ನೆರವಾಗಬೇಕು, ಉಚಿತ ವೈದ್ಯಕೀಯ ಸಲಹೆ, ಚಿಕಿತ್ಸೆ ನೀಡಿ, ರೋಗಿಗಳ ಶುಶ್ರೂಷೆ ಮಾಡಬೇಕು ಅನ್ನೋ ಆಸೆ ಇದೆ ಅಲ್ಲವೇ ..? ನನ್ನಿಂದ ಏನು ಸಹಾಯ ಬೇಕಾದ್ರೂ ಕೇಳಿ ನಾನು ಸಹಾಯ ಮಾಡ್ತೀನಿ.''

''ಸಹಾಯ ಮಾಡ್ತೀವಿ ಅಂತ ತಾವಾಗಿಯೇ ಮುಂದೆ ಬರುವವರನ್ನು ನಾವು ಬೇಡ ಎನ್ನುವುದಿಲ್ಲ; ನಾವಾಗಿಯೇ ಯಾರ ಮುಂದೆ ಕೈ ಚಾಚಿ ಬೇಡುವುದಿಲ್ಲ.'' ವಿಶ್ವನ ಕೈಯನ್ನು ಪೃಥ್ವಿ ವಿಶ್ವಾಸದಿಂದ ಒತ್ತಿ ನುಡಿದ.

''ನಿಮ್ಮಂತಹ ಒಬ್ಬಸ್ನೇಹಿತ ಸಿಕ್ಕಿದ್ದು ನನ್ನ ಪುಣ್ಯ'' ವಿಶ್ವ ವ್ಯಂಗ್ಯವಾಗಿ ನಕ್ಕ.

''ನಿಮ್ಮ ತಾತನ ಹಣವನ್ನು ನಾನು ಪೋಲು ಮಾಡಿದ್ದರೆ ನೀವು ಈ ಮಾತನ್ನು ಹೇಳುತ್ತಿದ್ರಾ ?'' ಪೃಥ್ವಿಯೂ ಸಪ್ಪಗೆ ನಕ್ಕ.

''ಆದರೂ ಆ ಹಣ ಏನಾಯಿತು ? ಆಹಣವನ್ನೆಲ್ಲಾ ಯಾರು ಹೊಡೆದರು ? ಅಂತ ತಿಳಿದುಕೊಳ್ಳಲೇ ಬೇಕು... ನೀವು ನನಗೆ ಸಹಾಯ ಮಾಡಲೇಬೇಕು...''

''ಹೌದು ನಿಜ ಏನೂಂತ ಪತ್ತೆ ಹಚ್ಚದಿದ್ದರೆ ನಿಮಗೆ ನನ್ನ ಮೇಲಿನ ಅಪನಂಬಿಕೆ ಹೋಗುವುದಿಲ್ಲ. ನಾನು ಹುಡುಕಲೇ ಬೇಕು'' ಎನ್ನುತ್ತಾ ಆಶ್ವಾಸನೆ ನೀಡಿದ. ಪೃಥ್ವಿ ಹೊರಡ್ತೀನಿ ಅಂದಾಗ ತಡೆದ.

''ಊಟದ ಹೊತ್ತು ಮೀರಿ ಹೋಗಿದೆ. ಮಾತಿನ ನಡುವೆ ಹೊತ್ತು ಹೋದುದೇ ಗೊತ್ತಾಗಲಿಲ್ಲ, ನೀವು ಇವತ್ತು ಇಲ್ಲಿಯೇ ಊಟ ಮಾಡಿಕೊಂಡು ಹೋಗಬೇಕು.'' ಪಟುತ್ವಿಗೆ ಇಲ್ಲ ಎನ್ನಲಾಗಲಿಲ್ಲ, ವಿಶ್ವ ತನಗಾಗಿ ಮಾಡಿಟ್ಟು ಕೊಂಡಿದ್ದ ಅಡಿಗೆಯನ್ನು ಎರಡು ಎಲೆಗಳಿಗೆ ಬಡಿಸಿ, ತಾನೂ ಊಟಕ್ಕೆ ಕುಳಿತ. ವಿಶ್ವ ಸಂತೃಪ್ತಿಯಿಂದ ಊಟ ಮಾಡುತ್ತಿದ್ದುದನ್ನೇ ಪೃಥ್ವಿ ಗಮನಿಸಿದ.

'ಇವನೇಕೆ ಈ ಮನೆಯಲ್ಲಿ ಒಬ್ಬನೇ ಇದಾನೆ ? ಪಂಡಿತರ ಮನೆಯಲ್ಲಿ

ಏಕೆ ವಾಸವಾಗಿಲ್ಲ' ಅಂತಂದುಕೊಂಡ. ಅವನ ಮನಸ್ಸನ್ನು ಓದಿಕೊಂಡವನಂತೆ ವಿಶ್ವ ನುಡಿದ.

ಚಿಕ್ಕವಯಸ್ಸಿನಲ್ಲಿ ನಾನು ಅತಿ ಕೋಪಿಷ್ಟನಾಗಿದ್ದೆ. ಪಂಡಿತರ ಸಂಸಾರದ ಅನ್ಯೋನ್ಯತೆಯನ್ನು ಗಮನಿಸುವಾಗ, ನನಗೆ ನನ್ನ ತಾಯಿ ನನ್ನಿಂದ ದೂರ ಆಗಿದ್ದು, ನನಗೆ ದ್ರೋಹವಾದದ್ದು ಎಲ್ಲಾ ನೆನಪಿಗೆ ಬಂದು ಬಹಳ ಉದ್ವಿಗ್ನ ಗೊಳಿಸುತ್ತಿದ್ದೆ. ಹದಿನೈದು ಹದಿನಾರು ವರ್ಷದವನಾಗಿದ್ದ ನನಗೆ ಏಕೋ ಏನೋ ಯಾವುದೂ ಸರಿಹೋಗುತ್ತಿರಲಿಲ್ಲ. ಆಗ ಪಂಡಿತರು ನನಗಾಗಿ ಈ ಮನೆಯನ್ನು ಕೊಟ್ಟು, ಈ ತೋಟದ ಉಸ್ತುವಾರಿಯ ಕೆಲಸವನ್ನು ವಹಿಸಿ ಕೊಟ್ಟರು ಹಾಗೇ ವೈದ್ಯಕೀಯಕ್ಕೆ ಸಂಬಂಧಿಸಿದಂತೆ ಚಿಕಿತ್ಸೆ, ಶುಶ್ರೂಷೆ, ಸಲಹೆ ಬಗ್ಗೆ ಕಲಿಸಿಕೊಟ್ರು. ಅವರಿಂದಲೇ ನಾನು ಈ ದಿನ ಇಷ್ಟರ ಮಟ್ಟಿಗೆ ಇದೀನಿ. ಆದರೆ ಕಳೆದ ವಿಷಯಗಳು ಮರುಕಳಿಸುವ ಸಮಯ ಬಂದಾಗ ನನ್ನ ಮನಸ್ಸು ಅಲ್ಲೋಲಕಲ್ಲೋಲವಾಗುತತೆ. ನನಗೆ ನಾನೇ ಸಮಾಧಾನ ಹೇಳಿಕೊಳ್ತೀನಿ. ಎರಡು ಲೋಟ ತಣ್ಣೀರನ್ನು ಕುಡಿಯುತ್ತೇನೆ. ಈ ತೋಟದಲ್ಲಿ ಸುತ್ತಾಡುತ್ತೀನಿ. ಹೀಗಿದೆ ನನ್ನ ಜೀವನ.ನನಗಾಗಿ ನಾನೇ ಬೇಯಿಸಿಕೊಂಡು ತಿನ್ನುತ್ತೇನೆ. ದಿನಾ ಸೊಗಸಾದ ಊಟ ಮಾಡುವವರು ನೀವು, ಈ ಬಡವನ ಮನೆಯ ರುಚಿಸಿತೋ ಇಲ್ಲವೋ?

''ಛೇ ಹಾಗೆನ್ನಬೇಡಿ.. ಇಂಥ ಊಟದ ರುಚಿಗೇ ನಮ್ಮ ತಂದೆ ಮನಸೋತಿದ್ದು ಅಂತ ನಮ್ಮ ತಾತ ಹೇಳುತ್ತಿದ್ದರು'' ವಿಶ್ವನ ಸುಮ್ಮನಾಗಿಬಿಟ್ಟ. ಪೃಥ್ವಿಗೂ ತಾನು ಆ ಮಾತನ್ನು ಹೇಳಬಾರದಾಗಿತ್ತು ಎನಿಸಿತ್ತು. ಇಬ್ಬರೂ ಮೌನ ತಳೆದು, ಅವರವರ ಆಲೋಚನೆಗಳಲ್ಲಿ ಮುಳುಗಿ ಹೋದರು. ಬರೀ ಅಡಿಗೆ ಊಟದ ಮಾತು ಇರಲಾರದು. ಬೇರೆ ಇನ್ನೇನೋ ಆಕರ್ಷಣೆ ಇರಬೇಕು ಎಂದು ತಮ್ಮತಮ್ಮಲ್ಲೇ ಚಿಂತಿಸುತ್ತಿದ್ದರು. ಊಟ ಮುಗಿಸಿ ಎದ್ದರು. ಪೃಥ್ವಿ ಹೊರಟಾಗ ತಕ್ಷಣ ನೆನಪಿಸಿಕೊಂಡವನಂತೆ ವಿಶ್ವ ನುಡಿದ.

''ಆ ಹುಡುಗಿ ಹಾಗೂ ಅವಳ ತಂದೆ ನಿಮ್ಮ ಮನೆಗೆ ಬಂದಿದ್ದ ವ್ಯಕ್ತಿ ಯಾರು ಅಂತ ನಾವು ಮೊದಲು ಕಂಡು ಹಿಡಿಯಬೇಕು...''

''ನಾನು ಒಬ್ಬ ಡಿಟೆಕ್ಟಿವ್ ಏಜೆಂಟ್ ಹತ್ತಿರ ಮಾತನಾಡಿದೀನಿ. ಆ ಹುಡುಗಿ ಈಚೆಗೆ ಕೆಲಸಕ್ಕೆ ಬಂದಿಲ್ಲ. ಅವಳು ಕೊಟ್ಟ ವಿಳಾಸದಲ್ಲಿ ಹುಡುಕಿಸಿದ್ದಾಯ್ತು. ಅವಳು ಅಲ್ಲಿಲ್ಲ. ಅದಕ್ಕೇ ಡಿಟೆಕ್ಟಿವ್‌ನ ಗೊತ್ತು ಮಾಡಿದೆ.''

''ತುಂಬಾ ಹಣ ಖರ್ಚಾಗುತ್ತಲ್ಲ ಪೃಥ್ವಿ...'

''ಅವರ ಕೆಲಸಕ್ಕೆ ನಾವು ಹಣ ಕೊಡ್ತೀವಿ. ಅದೇ ಅವರ ಸಂಪಾದನೆ. ನಮ್ಮ ಕೆಲಸ ಸುಲಭ ಆಗುತ್ತೆ... ಇನ್ನೂ ಸುಲಭವಾಗಬಹುದೇನೋ ಅಂತ ನಾನು ನಿಮ್ಮ ಬಳಿಗೆ ಬಂದೆ....''

''ನನ್ನಿಂದ ಆಗೋ ಸಹಾಯ ನಾನು ಖಂಡಿತಾ ಮಾಡ್ತೀನಿ. ಯಾವಾಗ ಬೇಕಾದರೂ ಹೇಳಿ ಕಳಿಸಿ, ಬಂದು ಬಿಡ್ತೀನಿ.''

''ಆಗಲಿ, ನಿಮ್ಮಂತಹ ಸ್ನೇಹಿತನ ಅಗತ್ಯ ನನಗೆ ಅವಶ್ಯವಾಗಿ ಬೇಕೇ ಬೇಕು....'' ಎಂದು ಕೈ ಕುಲುಕಿ ಕಾರನ್ನು ಹತ್ತಿದ.

* * * *

ಎರಡೇ ದಿನಗಳ ನಂತರ ಪೋಲೀಸ್‌ಸ್ಟೇಷನ್‌ನಿಂದ ಪೃಥ್ವಿಗೆ ಕರೆ ಬಂತು. ಇದೇನಪ್ಪಾ ಹೊಸ ಸಮಸ್ಯೆ ಎಂದುಕೊಂಡು ಪೋಲೀಸ್ ಸ್ಟೇಷನ್‌ಗೆ ಬಂದ. ಇನ್‌ಸ್ಪೆಕ್ಟರ್ ಕೇಳಿದ.

''ರೂಪಿಣಿ ಅನ್ನೋ ಹುಡುಗಿ ನಿಮಗೆ ಗೊತ್ತಾ?''

''ಹುಂ, ನಮ್ಮ ಕಂಪೆನಿಯಲ್ಲಿ ರಿಸೆಪ್ಶನಿಸ್ಟ್ ಆಗಿದ್ದಳು. ಆದರೆ ಕೆಲವು ದಿನದಿಂದ ಕೆಲಸಕ್ಕೆ ಬರುತ್ತಿಲ್ಲ.''

''ಕಾರಣ ಏನೂಂತ ಗೊತ್ತಾ?''

''ಗೊತ್ತಿಲ್ಲ.....'' ಎಂದು ಹೇಳುತ್ತಾ ಪೃಥ್ವಿ ಕರವಸ್ತ್ರದಿಂದ ಮುಖದ ಬೆವರನ್ನು ಒರೆಸಿಕೊಂಡ.

''ಅವಳಿಗೆ ಆಕ್ಸಿಡೆಂಟ್ ಆಗಿ ಆಸ್ಪತ್ರೇಲಿದಾಳೆ... ಜ್ಞಾನವಿಲ್ಲದೇ ಬಿದ್ದುಕೊಂಡಿದ್ದಾಗ, ಅವಳ ಹ್ಯಾಂಡ್‌ಬ್ಯಾಗ್‌ನಲ್ಲಿ ನಿಮ್ಮ ಕಂಪೆನಿಯ ವಿಸಿಟಿಂಗ್ ಕಾರ್ಡ್ ಇತ್ತು. ಅದಕ್ಕೇ ಫೋನ್ ಮಾಡಿ ಕರೆಸಿದೆವು... ಅವಳೇ ಅಂತ ಗುರುತಿಸ್ತೀರಾ?''

''ನಾನ್ಯಾಕೆ ಗುರುತಿಸಬೇಕು?''

''ಆಕ್ಸಿಡೆಂಟ್ ಕೇಸು, ಇದುವರೆಗೂ ಅವಳನ್ನು ವಿಚಾರಿಸಿಕೊಂಡು ಯಾರೂ ಬಂದಿಲ್ಲ... ವಿಚಾರಿಸಿದಾಗ ನಿಮ್ಮ ಕಂಪೆನಿಯಲ್ಲಿ ಕೆಲಸಕ್ಕಿದ್ದಳು ಅಂತ ತಿಳಿಯಿತು...''

''ಈಗ ಕೆಲಸವನ್ನು ಬಿಟ್ಟು ಬಿಟ್ಟಿದ್ದಳಲ್ಲ....''

''ಆದರೇನಾಯ್ತು ? ಅವಳೊಡನೆ ಮಾತನಾಡಿ, ಅವಳಿಗೆ ನಾಲ್ಕು ಧೈರ್ಯದ ಮಾತುಗಳನ್ನು ಆಡಿ. ಅವಳು ತುಂಬಾ ಹೆದರಿಬಿಟ್ಟಿದ್ದಾಳೆ ಅಂತ ಡಾಕ್ಟರು ಹೇಳಿದರು.''

''ನನ್ನಿಂದ ಇದೆಲ್ಲ ಆಗುಲ್ಲ... ನಮ್ಮ ಕಂಪೆನಿಯಲ್ಲಿ ಎಷ್ಟೋ ಜನ ಕೆಲಸದಲ್ಲಿದಾರೆ. ಎಲ್ಲರನ್ನು ಹೀಗೇ ವಿಚಾರಿಸ್ತಾ ಇರೋಕ್ಕೆ ಆಗುತ್ತಾ ?''

''ಚೆನ್ನಾಗಿ ಮಾತನಾಡ್ತೀರಿ. ಒಂದು ಪ್ರತಿಷ್ಠಿತ ಕಂಪೆನಿಯ ಮಾಲೀಕರು ನೀವು. ಒಬ್ಬ ಜವಾಬ್ದಾರಿ ಇರೋ ವ್ಯಕ್ತಿ ಮಾತನಾಡುವ ರೀತಿಯೇನ್ರೀ ಇದು ?'' ಇನ್‌ಸ್ಪೆಕ್ಟರ್ ಸ್ವಲ್ಪ ಗಡುಸಾಗಿ ನುಡಿದಾಗ ಪೃಥ್ವಿ ಎದ್ದ.

''ಎಲ್ಲೋ ರಸ್ತೇಲಿ ಆಕ್ಸಿಡೆಂಟ್ ಆದ್ರೆ ಅದಕ್ಕೆ ನಾನು ಜವಾಬ್ದಾರನಲ್ಲ''

''ಬರೀ ಅಷ್ಟೇ ಅಲ್ಲ... ಆ ಹುಡುಗಿ ನಿಮ್ಮ ಮೇಲೆ ಕಂಪ್ಲೇಂಟ್ ಕೊಟ್ಟಿದಾಳೆ... ಅದಕ್ಕೇ ನಿಮ್ಮನ್ನು ಕರೆಸಿದೆವು.''

''ಬರೀ ಸುಳ್ಳು, ಈಗ ತಾನೇ ಹೇಳಿದ್ರಿ ಅವಳು ಆಕ್ಸಿಡೆಂಟ್ ಆಗಿ ಆಸ್ಪತ್ರೇಲಿ ಬಿದ್ದಿದಾಳೆ ಅಂತ...''

''ಪೋಲೀಸ್ ಸ್ಟೇಷನ್‌ಗೆ ಅಂತ ಬರುತ್ತಿದ್ದವಳಿಗೆ. ಆಕ್ಸಿಡೆಂಟ್ ಆಗಿ ಆಸ್ಪತ್ರೆಗೆ ಸೇರಿದಳು. ಜ್ಞಾನ ಬಂದ ಮೇಲೆ, ಅವಳು ನಿಮ್ಮ ಮೇಲೆ ಕಂಪ್ಲೆಂಟ್ ಬರೆಸಿದ್ದಾಳೆ...''

''ಸರಿ ನಾನು ನನ್ನ ಲಾಯರನ್ನು ಕರೆಸ್ತೀನಿ. ಅವರು ಮಾತಾಡ್ತಾರೆ.''

''ಏನು ಕಂಪ್ಲೇಂಟ್ ಅಂತ ತಿಳಿದುಕೊಳ್ಳುವ ಆಸಕ್ತಿ ಇಲ್ವಾ ?''

''ಅದರಲ್ಲೇನು ಆಸಕ್ತಿ ? ಅವಳು ಏನೇ ಕಂಪ್ಲೇಂಟ್ ಕೊಟ್ಟಿರಲಿ ಅದರಲ್ಲಿ ನಿಜಾಂಶ ಏನೂ ಇಲ್ಲ ಅಂತ ನನಗೆ ಗೊತ್ತು.''

''ಸರಿ... ನಿಮ್ಮಿಷ್ಟ....'' ಎಂದರು. ಕೆಲವೇ ಸಮಯದಲ್ಲಿ ಕಂಪೆನಿಯ ಲಾಯರ್ರು ಬಂದು ಪೋಲೀಸ್ ಇನ್‌ಸ್ಪೆಕ್ಟರನ ಹತ್ತಿರ ಮಾತನಾಡಿದರು. ಪೃಥ್ವಿ ಅಲ್ಲಿದ್ದ ಕೇಸಿನ ಫೈಲ್‌ಗೆ ಸಹಿ ಹಾಕಿ, ಲಾಯರೊಡನೆ ಏನೋ ಹೇಳಿ ತನ್ನ ಪಾಡಿಗೆ ತಾನು ಅಲ್ಲಿಂದ ನಡೆದ.

ಚಂದ್ರುವಿನಿಂದ ಪೃಥ್ವಿ ಪೋಲೀಸ್ ಸ್ಟೇಷನ್‌ಗೆ ಹೋಗಿ ಬಂದ ವಿಷಯ ತಿಳಿದ ನಳಿನಿ ಗಾಭರಿಗೊಂಡಳು. ತಡೆಯಲಾರದೇ ಕೇಳಿದಳು.

''ಪೋಲೀಸ್ ಸ್ಟೇಷನ್‌ಗೆ ಹೋಗಿದ್ದೆಯಂತೆ ? ಏನು ವಿಷಯ ?''

''ಆ ರೂಪಿಣಿ ಅನ್ನೋಳು ನನ್ನ ಮೇಲೆ ಕಂಪ್ಲೇಂಟ್ ಕೊಟ್ಟಿದಾಳೆ. ಆಕ್ಸಿಡೆಂಟ್ ಆಗಿ ಆಸ್ಪತ್ರೇಲಿದಾಳಂತೆ. ಅದಕ್ಕೆಲ್ಲ ನಾನೇ ಕಾರಣ ಅನ್ನೋ ತರಹ ಮಾತಾಡ್ತಾರೆ ಆ ಪೋಲೀಸ್ನೋರು.''

''ಏನಂತ ಕಂಪ್ಲೇಂಟ್ ಕೊಟ್ಟಿದಾಳಂತೆ ?''

''ಏನೋ ನನಗೆ ಗೊತ್ತಿಲ್ಲಾ, ಲಾಯರ್ರಿಗೆ ಗೊತ್ತಿರುತ್ತೆ.''

''ಲಾಯರ್ರು, ಕೇಸು, ಕಂಪ್ಲೆಂಟ್ ಎಲ್ಲಾ ಯಾಕೆ ? ಏನು ವಿಷಯ ಅಂತ ತಿಳಿದುಕೊಂಡು ನಾವು ನಾವೇ ಸೆಟ್ಲ್ ಮಾಡಬಹುದಾಗಿತ್ತು.''

''ನೋಡಿ ಚಿಕ್ಕಮ್ಮ, ನಿಮಗೆ ಇದೆಲ್ಲ ಅರ್ಥವಾಗುಲ್ಲ. ಅವಳು ನಮ್ಮ ಮರ್ಯಾದೇನ ಬೀದಿಪಾಲು ಮಾಡಬೇಕೂಂತ ಪ್ಲಾನ್ ಮಾಡಿದಾಳೆ. ಅವಳ ಹತ್ತಿರ ಏನು ಮಾತು ? ನಾನು ಅವಳಿಗೆ ಸರಿಯಾಗಿ ಬುದ್ಧಿ ಕಲಿಸ್ತೀನಿ.''

''ಬೇಡ ಪೃಥ್ವಿ... ಆ ಹುಡುಗಿಗೆ ಒಂದಿಷ್ಟು ಹಣ ಕೊಟ್ಟು ಅವಳ ಬಾಯಿ ಮುಚ್ಚಿಸಿದರೆ ಆಯ್ತು....''

ಚಿಕ್ಕಮ್ಮ ಹೀಗೇಕೆ ಮಾತಾಡ್ತಾರೆ ? ಹಾಗಾದರೆ ಈ ರೂಪಿಣಿಗೂ ಚಿಕ್ಕಮ್ಮನಿಗೂ ಮೊದಲಿನಿಂದ ಪರಿಚಯವಿರಬಹುದೇ ಎಂಬ ಅನುಮಾನ ತಲೆದೋರಿತು. ವಿಚಿತ್ರವಾಗಿ ನೋಡಿ ಅಲ್ಲಿಂದ ಸರಿದ.

ಪೃಥ್ವಿ ಹೇಳುವಂತೆ ರೂಪಿಣಿಯ ಮಾನಸಿಕ ಸ್ಥಿತಿ ಸರಿ ಇಲ್ಲದಿರಬಹುದು. ಹಣದ ಅಗತ್ಯವಿರಬಹುದು. ಡಾಕ್ಟರರ ಹತ್ತಿರ ಮಾತನಾಡಿ, ಅವಳ ಕಂಡೀಷನ್ ಹೇಗಿದೆ ಅಂತ ವಿಚಾರಿಸಿ, ಚಿಕಿತ್ಸೆ ಕೊಡಿಸಿದರಾಯ್ತು ಎಷ್ಟು ಹಣ ಖರ್ಚಾದರೂ ಪರವಾಗಿಲ್ಲ... ಆದರೆ ಈ ಪೃಥ್ವಿ ಯಾಕೋ ಮೊಂಡುತನ ಮಾಡ್ತಾನಲ್ಲ, ಇವನು ಕೆಟ್ಟವನಲ್ಲ. ಆದರೆ ಅವಳ ಮೇಲಿನ ಕೋಪದಿಂದ ಏನು ಅನಾಹುತ ಮಾಡಿ ಬಿಡುವನೋ... ಹಾಗಾಗದಂತೆ ತಪ್ಪಿಸಬೇಕು. ಇದಕ್ಕೆ ಪೃಥಿಯವನ್ನು ಒಪ್ಪಿಸಬೇಕು... ಆದರೆ ನನ್ನ ಮಾತನ್ನು ಕೇಳುತ್ತಾನೋ ಇಲ್ಲವೋ... ಇಂಥ ಸಮಯದಲ್ಲಿ ಸ್ನೇಹಿತರು ಕೆಲಸಕ್ಕೆ ಬರುತ್ತಾರೆ. ಪೃಥ್ವಿಗೆ ಯಾರೂ ಆಪ್ತ ಸ್ನೇಹಿತರಿಲ್ಲ ಅಂತ ನನಗೆ ಗೊತ್ತು... ಆದರೆ ಈಚೆಗೆ ವಿಶ್ವ ಪೃಥ್ವಿಯ ಸ್ನೇಹಿತನಾಗಿದಾನೆ. ವಿಶ್ವ ಇವನಿಗಿಂತ ದೊಡ್ಡವನು. ಇವನಿಗೆ

ತಿಳುವಳಿಕೆ ಹೇಳಿದರೂ ಹೇಳಬಹುದು... ಆದರೆ ವಿಶ್ವ ತನ್ನ ಮನೆಗೆ ಬರುವುದಿಲ್ಲ. ತಾನೇ ಅವನನ್ನು ಕಂಡು ಮಾತಾಡಬೇಕು ಎಂದುಕೊಂಡು ಸ್ವಲ್ಪ ಹೊತ್ತಿನಲ್ಲೇ ಹೊರಟಳು.

* * * *

ವಿಶ್ವ ಅವಳನ್ನು ಗುರುತಿಸಿದರೂ ಹೊರಗೆ ಬಂದು ನಿಲ್ಲಲಿಲ್ಲ. ಇವಳಿಗೆ ನನ್ನಿಂದ ಏನೋ ಕೆಲಸವಾಗಬೇಕಾಗಿದೆ, ಅದಕ್ಕೇ ಬಂದಿದಾಳೆ. ಕೇವಲ ಎರಡು ದಿನಗಳ ಹಿಂದೆ ಪೃಥ್ವಿ ಬಂದು ಹೋದ. ಈಗ ಇವಳೇಕೆ ಬಂದಿರಬಹುದು ? ಎಂದುಕೊಂಡು ಹಾಗೇ ನಿಂತ. ನಳಿನಿಯೇ ಒಳಗೆ ಬಂದು ಅವನೆದುರಿಗೆ ನಿಂತಳು. ವಿಶ್ವ ಕತ್ತೆತ್ತಿ ಅವಳ ಕಡೆ ನೋಡಲಿಲ್ಲ.

''ನಾನ್ಯಾಕೆ ಬಂದಿದೀನಿ ಅಂತ ಕೇಳುಲ್ವಾ ?''

''ನನ್ನಿಂದ ಏನೋ ಆಗಬೇಕಾಗಿದೆ. ಅದಕ್ಕೇ ಬಂದಿದೀರಿ.''

''ಈ ಅತೀ ಮರ್ಯಾದೆಯ ಮಾತು ಬೇಡ. ತಾಯಿಯೆಂಬ ಪ್ರೀತಿಯಿಂದ ಮಾತನಾಡಿಸು''

''ಆ ಮಾತೆಲ್ಲ ಈಗೇಕೆ ? ಬಂದಿರುವ ಕಾರಣ ಹೇಳಿ''

''ಈಗ ಯಾವುದೋ ರೂಪಿಣಿ ಎಂಬ ಹುಡುಗಿಯ ದೆಸೆಯಿಂದ ಪೃಥ್ವಿಗೆ ತೊಂದರೆ ಆಗಿದೆ. ಕೋಟು, ಕೇಸು ಅಂತ ಹೋರಾಡಿದರೆ, ಸುಮ್ಮನೇ ಎಲ್ಲರಿಗೂ ತಿಳಿಯುತ್ತದೆ. ಅದರ ಬದಲು, ಆ ಹುಡುಗಿಗೆ ಏನು ತೊಂದರೆ, ಯಾಕೆ ಹೀಗೆ ಮಾಡುತ್ತಿದಾಳೆ ಅಂತ ತಿಳಿದುಕೊಂಡು, ಏನೇ ಸಮಸ್ಯೆಯಿದ್ದರೂ ನಾವು ನಾವೇ ಪರಿಹಾರ ಕಂಡುಕೊಂಡರೆ ಒಳ್ಳೆಯದು ಅಂತ ನನ್ನ ಅಭಿಪ್ರಾಯ. ಹೀಗಂತ, ನೀನು ಪೃಥ್ವಿಗೆ ತಿಳುವಳಿಕೆ ಹೇಳಬೇಕು.''

''ಇದು ನಿಮ್ಮ ಮನೆಗೆ ಸಂಬಂಧಿಸಿದ ವಿಷಯ. ಇದರಲ್ಲಿ ನಾನು ತಲೆ ಹಾಕುವುದಿಲ್ಲ''

''ಹಾಗಾದರೆ ನೀನು ನನಗೆ ಏನೂ ಅಲ್ಲವೇ ?''

''ಅದು ನನಗಿಂತ ನಿಮಗೇ ಚೆನ್ನಾಗಿ ಗೊತ್ತು. ಪೃಥ್ವಿಗೆ ತಿಳುವಳಿಕೆ ಹೇಳಲು ನಾನು ಯಾರು ?''

''ಅವನ ಸ್ನೇಹಿತನಾಗಿ ಇಷ್ಟು ಮಾಡಲು ಸಾಧ್ಯವಿಲ್ಲವೇ ?''

‘‘ಸ್ನೇಹಿತ ಅಂತ ಅವನ ಸ್ವಂತ ವಿಷಯಕ್ಕೆ ಹಾಕಿದರೆ ಅಲ್ಲಿ ಸ್ನೇಹ ಉಳಿಯುವುದಿಲ್ಲ...’’

‘‘ಅವನಿಗೆ ಹೇಳಲಾಗದಿದ್ದರೆ ಬಿಡು.. ಆ ಹುಡುಗಿಯ ಹತ್ತಿರ ಮಾತನಾಡು.’’

‘‘ಯಾರೋ ನನಗೆ ಗೊತ್ತಿರದ ಹುಡುಗಿಗೆ ನಾನು ತಿಳುವಳಿಕೆ ಹೇಳುವುದಿಲ್ಲ... ನನಗೆ ಅದೆಲ್ಲ ಸಹಿಸುಲ್ಲ.’’

‘‘ನನಗೋಸ್ಕರ ಇಷ್ಟು ಮಾಡಲು ನಿನಗೆ ಹಿಂಸೆಯಾಗುತ್ತಾ ?’’

‘‘ನಿಮಗೆ ಹಿಂಸೆಯಾಗದಿರಲಿ ಅಂತ ನೀವು ಹೇಳಿದ್ದನ್ನೆಲ್ಲಾ ನಾನು ಮಾಡಲಾಗುವುದಿಲ್ಲ. ನಾನೂ ಎಷ್ಟೆಷ್ಟೋ ಹಿಂಸೆಗಳನ್ನು ಅನುಭವಿಸಿದೀನಿ.’’ ನಳಿನಿಗೆ ಅವನ ಮಾತಿನ ಹಿನ್ನೆಲೆ ಅರ್ಥವಾಗಿತ್ತು. ನೇರವಾಗಿ ಅವನನ್ನೇ ನೋಡುತ್ತಾ ನುಡಿದಳು.

‘‘ನಿನ್ನ ದೃಷ್ಟಿಯಲ್ಲಿ ನಾನು ಮಾಡಿದ್ದು ತಪ್ಪು, ಆದರೆ ಬಾಲ್ಯದಲ್ಲಿ ಹಣಕ್ಕಾಗಿ ನೀನು ನನಗೆ ಕೊಡುತ್ತಿದ್ದಿ ಹಿಂಸೆಗಳನ್ನು ನೆನೆಸಿಕೋ. ಹಣದ ಕೊರತೆಯೇ ಅದಕ್ಕೆ ಕಾರಣ ತಾನೇ ? ಹಣವಿಲ್ಲದಿದ್ದರೆ ತಿಳುವಳಿಕೆ ಕೆಲಸ ಮಾಡುವುದಿಲ್ಲ. ಅವಿವೇಕ ಅವನನ್ನು ಮುತ್ತಿಕೊಳ್ಳುತ್ತದೆ.’’

‘‘ನಿಮ್ಮ ಮದುವೆಯಿಂದ ನೀವು ಶ್ರೀಮಂತರಾದಿರಿ. ನನ್ನ ಬಡತನ ಮಾತ್ರ ನೀಗಲಿಲ್ಲ. ಆದರೆ ನಾನು ಅವಿವೇಕಿ ಆಗಲಿಲ್ಲ. ಅರೆ ತಿಳುವಳಿಕೆಯವ ನಾಗಲಿಲ್ಲ, ನಾನು ಸರಿಯಾಗಿಯೇ ಇದೀನಿ.’’

‘‘ನಾನು ನಿನ್ನ ವಿಷಯ ಹೇಳುತ್ತಿಲ್ಲ. ಆ ಹುಡುಗಿ ರೂಪಿಣಿಗೆ ಹಣದ ಅಗತ್ಯವಿರಬಹುದು... ಆದರೆ ಪೃಥ್ವಿಗೆ ಇದೆಲ್ಲ ತಿಳಿಯುವುದಿಲ್ಲ.’’

‘‘ಚೆನ್ನಾಗಿದೆ ನಿಮ್ಮ ಮಾತು ! ಹಣವಿಲ್ಲದಿದ್ದರೂ ತಿಳುವಳಿಕೆ ಕಡಿಮೆ ಆಗುತ್ತದೆ. ಹಣವಿದ್ದವರಿಗೆ ತಿಳುವಳಿಕೆ ಸಾಲದು... ಇದೆಲ್ಲ ನನಗೆ ಅರ್ಥ ವಾಗುವುದಿಲ್ಲ, ನನಗೆ ನಿಮ್ಮಂತಹ ಶ್ರೀಮಂತರ ಸಹವಾಸವೇ ಬೇಡ.’’

‘‘ತಪ್ಪೆಲ್ಲಾ ನನ್ನ ಮೇಲೆ ಹಾಕಬೇಡ. ನನ್ನ ತಪ್ಪು ಏನಿರಲಿಲ್ಲ, ತಪ್ಪೆಲ್ಲಾ ನಿನ್ನ ತಾತನದು’’

‘‘ತಪ್ಪು ಯಾರದೇ ಇರಲಿ, ಅನ್ಯಾಯವಾದದ್ದು ನನಗೆ. ಹಾಳಾದವನು ನಾನು. ಈಗ ನನ್ನ ಪಾಡಿಗೆ ನಾನು ಹಾಯಾಗಿದೀನಿ. ಆ ಹಳೆಯ ವಿಷಯಗಳನ್ನು ಕೆದಕಿ ನೋಡುವ ಇಚ್ಛೆ ನನಗಿಲ್ಲ. ನನಗೆ ಬೇಡವೇ ಬೇಡ.’’

''ಹಾಗೆನ್ನ ಬೇಡ ವಿಶ್ವಾ... ನಿನ್ನ ಸ್ನೇಹಿತನಿಗೆ ಸಹಾಯ ಮಾಡು. ನಾನು ನೀನು ಕೇಳಿದಷ್ಟು ಹಣವನ್ನು ಕೊಡ್ತೀನಿ''

''ಹಣ ! ಹಣ ! ಯಾರಿಗೆ ಬೇಕಾಗಿದೆ ನಿಮ್ಮ ಹಣ ?''

''ಯಾಕೆ ಬೇಡ ? ನಿನಗೂ ಶ್ರೀಮಂತನಾಗುವ ಆಸೆ ಇತ್ತಲ್ಲವೇ ? ನಿನ್ನ ತಿರುಗಾಡಕ್ಕೆ ನಾನು ಒಂದು ಕಾರನ್ನು ತೆಗೆಸಿಕೊಡ್ತೀನಿ.''

''ಹಣದ ಆಸೆ, ಅಗತ್ಯವಿದ್ದಾಗ ನನಗೆ ಹಣ ಸಿಗಲಿಲ್ಲ. ನೀವು ನಿಮ್ಮ ತಂದೆ ಇಬ್ಬರೂ ಮೋಸಗಾರರು. ವಂಚಕರು, ಹಣಕ್ಕಾಗಿ ನಿಮ್ಮನ್ನು ನೀವು ಮಾರಿಕೊಂಡವರು. ನಾನು ಮಾತ್ರ ಹಾಗೆ ಮಾಡಲಾರೆ...'' ನಳಿನಿ ಬೆಪ್ಪಾದಳು. ಚಾಟಿಯೇಟಿನಂತೆ ವಿಶ್ವನ ಮಾತು ಹೊಡೆದಿತ್ತು.

''ವಿಶ್ವಾ... ಬಾಯಿಗೆ ಬಂದಂತೆ ಮಾತನಾಡಬೇಡ. ನೀನು ನಮ್ಮಂತೆ ಅಲ್ಲದೇ ಇರಬಹುದು. ಒಳ್ಳೆಯವನೇ ಇರಬಹುದು. ನೀನು ನನ್ನನ್ನು ತಾಯಿ ಅಂತ ಪರಿಗಣಿಸದೇ ಇರಬಹುದು. ಆದರೆ ಇದರಲ್ಲಿ ಪೃಥ್ವಿಯದು ಯಾವ ತಪ್ಪೂ ಇಲ್ಲ. ಅವನು ನನ್ನನ್ನು ತುಂಬಾ ಗೌರವಿಸುತ್ತಾನೆ. ಅವನು ನಮ್ಮ ಮನೆಯ ಆಸ್ತಿ. ಅವನನ್ನು ರಕ್ಷಿಸುವುದು ನನ್ನ ಕರ್ತವ್ಯ. ನಿನಗೆ ಅವನ ಮೇಲೆ ಹೊಟ್ಟೆಕಿಚ್ಚು, ಅವನು ಹಾಳಾದರೆ ನಿನಗೇನು ! ನನಗೀಗ ಅರ್ಥವಾಗುತ್ತಿದೆ. ನಿನ್ನನ್ನು ಕೇಳಲು ಬಂದದ್ದೇ ತಪ್ಪು ನಿನಗೆ ನನ್ನ ತ್ಯಾಗ ಅರ್ಥವಾಗುವುದಿಲ್ಲ. ನನ್ನನ್ನು ಸ್ವಾರ್ಥಿ ಅಂತ ತಿಳಿದುಕೊಂಡಿದೀಯ... ನನ್ನ ಹೃದಯವನ್ನು ಬಗೆದು ತೋರಿಸುವಂತಿದ್ದರೇ... ನಿನಗೆ ಅರ್ಥವಾಗುತ್ತಿತ್ತೇನೋ... ಹೋಗಲಿ ಬಿಡು. ನನ್ನ ಕರ್ಮಕ್ಕೆ ನಿನ್ನನ್ನೇಕೆ ಅನ್ನಲಿ ? ನಿನ್ನ ತಂದೆ ಅಂತ ಅನ್ನಿಸಿಕೊಂಡ ಆ ಪಾಪಿ, ನನಗೆ ದ್ರೋಹ ಮಾಡಿ ಹೋಗದೇ ಇದ್ದಿದ್ದರೆ ಈ ದಿನ ಈ ಮಾತುಗಳನ್ನಾಡ ಬೇಕಾಗಿರಲಿಲ್ಲ.'' ನಳಿನಿ ಆ ಜಾಗದಿಂದ ಎದ್ದು ಹೋದರೂ, ವಿಶ್ವ ಹಾಗೇ ಅಲ್ಲಾಡದೇ ಕೂತಿದ್ದ.

ಪೃಥ್ವಿ ಕೂಡಾ ಇದೇ ರೀತಿಯ ಮಾತುಗಳನ್ನಾಡಿದ್ದ. ಜವಾಬ್ದಾರಿಯಿಲ್ಲದ ತಂದೆ, ತಾಯಿಯನ್ನು ಬಿಟ್ಟು ಹೋದುದರಿಂದ ತಾಯಿ ಕಷ್ಟಪಟ್ಟಳು ಎನ್ನುವುದನ್ನು ಅರ್ಥಮಾಡಿಕೊಳ್ಳಬಲ್ಲ. ಆದರೆ ತಾಯಿಯೂ ತನ್ನ ಸ್ವಂತ ಮಗನನ್ನು ಬಿಟ್ಟು ಹೋಗುವಷ್ಟು ಸ್ವಾರ್ಥಿಯಾಗಬಲ್ಲಳು ಎನ್ನುವುದು. ಉತ್ತರಕ್ಕೆ ಸಿಲುಕದ್ದು ಹಾಗಾದರೆ ತಪ್ಪು ಯಾರದು ? ಇಷ್ಟು ವರ್ಷಗಳ ನಂತರ

ಮತ್ತೆ ತಾಯಿಯ ಭೇಟಿಯಾಗದೇ ಇದ್ದಿದ್ದರೆ ಚೆನ್ನಾಗಿತ್ತೆನಿಸಿತ್ತು. ಎಷ್ಟೋ ಹೊತ್ತಾದ ನಂತರ ಜ್ಞಾನೋದಯವಾದವನಂತೆ ಎಚ್ಚರಗೊಂಡ. ಬಾಲ್ಯದಲ್ಲಿ ಹದಿನಾಲ್ಕು ವರ್ಷಗಳವರೆಗೂ ತಾಯಿ ತನಗಾಗಿ ಕಷ್ಟಪಟ್ಟಿದ್ದಾಳೆ. ಹಣಕ್ಕಾಗಿ ಪೀಡಿಸುವಾಗ, ಹೊಡೆದು ಬಡಿದರೂ ಬೈದರೂ ತನಗಾಗಿ ಅತ್ತಿದ್ದೂ ಉಂಟು ಎನ್ನುವುದು ನೆನಪಿಗೆ ಬಂತು. ಬಹುಶಃ ಅವಳು ತನ್ನಿಂದ ದೂರ ಹೋಗುತ್ತಿರಲಿಲ್ಲವೇನೋ ಅಂತನ್ನಿಸಿತ್ತು. ಪೃಥ್ವಿ ಸ್ವಂತ ಮಗನಲ್ಲವಾದರೂ ಅವನ ಮೇಲೆ ವಾತ್ಸಲ್ಯವಿದೆ. ಅದೇ ಪ್ರೀತಿ ವಾತ್ಸಲ್ಯ ನನ್ನ ಮೇಲೆ ಇರದೇ ಇರುತ್ಯೆ ? ಅದನ್ನು ನಾನು ಆಗ ಕಾಣಲಿಲ್ಲ. ಈಗ ಮರೆತುಬಿಟ್ಟಿದೇನೆ. ಬಹುಶಃ ತಪ್ಪೆಲ್ಲಾ ತನ್ನದೇ ಅಂತಂದುಕೊಂಡಾಗ ಏನೋ ಒಂದು ರೀತಿಯ ಹಿಂಸೆ ಯಾಗತೊಡಗಿತು. ದೀರ್ಘ ಆಲೋಚನೆಯ ನಂತರ ಪೃಥ್ವಿಯನ್ನು ಕಾಣಲೆಂದು ಆಫೀಸಿಗೆ ಬಂದ. ಪೃಥ್ವಿ ಅಚ್ಚರಿಗೊಂಡ.

''ನನ್ನನ್ನು ನೋಡಿ ಬೆಚ್ಚಿದಿರಿ ? ಏಕೆ ಏನಾಯ್ತು ?'' ಪ್ರಶ್ನಿಸಿದ.

''ಏನಿಲ್ಲ....'' ತಲೆಯಾಡಿಸಿದ.

''ರೂಪಿಗೆ ಎಲ್ಲಿದಾಳೆ ಅಂತ ಪತ್ತೆ ಆಯ್ತು ?''

''ಹೂಂ ಗೊತ್ತಾಯ್ತು. ಆಸ್ಪತ್ರೇಲಿದಾಳೆ... ಆದರೆ....''

''ಆಸ್ಪತ್ರೇಲಿ ಅಂದ ಮೇಲೆ ಏನೋ ಗಂಭೀರವಾದುದ್ದೇ ಇರಬೇಕು. ಏನಾಯ್ತು ಅವಳಿಗೆ ? ನೀವೇನಾದರೂ ಹೊಡಿಸಿದರೋ ಹೇಗೆ ?'' ನಕ್ಕ.

''ನಾನು ಹೊಡಿಸಿದ್ದಿದ್ದರೆ ಚೆನ್ನಾಗಿರ್ತಿತ್ತು ವಿಶ್ವಾ... ಹೆಣ್ಣುಹುಡುಗಿ ಅಂತ ಸ್ವಲ್ಪ ಸಡಿಲ ಬಿಟ್ಟೆ... ಅದೇ ಬಂದದ್ದು...''

''ಏನಾಯ್ತು ಈಗ ? ಏನೋ ಭಾರೀ ಸಮಸ್ಯೆಯಲ್ಲಿ ಸಿಕ್ಕಿಬಿದ್ದಿರುವ ಹಾಗನ್ನಿಸುತ್ತೆ.''

''ಸಮಸ್ಯೆಯೇನೂ ಭಾರಿ ಅಲ್ಲ. ಆದರೆ ಹೋರಾಟ ಭಾರಿಯದು''

''ಅಂದರೇ......?''

''ನಿಮಗೆ ತಿಳಿಸಲೇ ಬೇಕೂಂತ ಏನಿಲ್ಲ, ಆದರೂ, ನೀವೇ ಕೇಳ್ತಿದೀರಲ್ಲ ಅಂತ ಹೇಳ್ತಿದೀನಿ...'' ಎಂದು ಪೃಥ್ವಿ ನುಡಿದಾಗ ವಿಶ್ವನ ಮುಖ ಚಿಕ್ಕದಾಯಿತು.

''ನಿಮ್ಮ ನಿಮ್ಮ ಸಮಸ್ಯೆಗಳಿಂದ ನನಗೇನೂ ಆಗಬೇಕಾಗಿಲ್ಲ''

ಎಂದುಹೇಳಿ ಬಿಡುವ ಮನಸ್ಸಾಯಿತು. ಆದರೂ ತಡೆದುಕೊಂಡ. ಪೃಥ್ವಿ ನಡೆದ ವಿಷಯವನ್ನೆಲ್ಲ ತಿಳಿಸಿದ. ವಿಶ್ವ ಸುಮ್ಮನೇ ಕೇಳಿಸಿಕೊಂಡ.

''ಈಗ ನೀವೇ ಹೇಳಿ ವಿಶ್ವಾ... ಹುಡುಗೀರು ಹೀಗೆಲ್ಲಾ ಮಾಡಿದ್ರೆ ಅವರಿಗೆ ಬುದ್ಧಿ ಕಲಿಸದೇ ಬಿಡಕ್ಕೆ ಆಗುತ್ತಾ ? ನನಗೆ ಈಗಲೂ ಅನುಮಾನ ಅವಳ ಹಿಂದೆ ಇನ್ಯಾರೋ ಇದಾರೆ ಅಂತ. ಆವಳನ್ನು ಲಾಕಪ್‌ನಲ್ಲಿ ಕೆಡವಿ, ನಾಲ್ಕು ದಿನ ಹೊಡೆಸಿದ್ದರೆ, ಎಲ್ಲಾ ಬಾಯಿ ಬಿಟ್ಟಿರೋಳು. ಈಗ ತಾನು ಆಸ್ಪತ್ರೇಲಿ ಬಿದ್ದಿರೋದು ಅಲ್ಲದೇ ನನ್ನ ಮೇಲೇ ಕಂಪ್ಲೆಂಟ್ ಕೊಡುವಷ್ಟು ಧೈರ್ಯ ? ಅವಳಿಗೆ ನಾನು ಬುದ್ಧಿ ಕಲಿಸದೇ ಬಿಡುವುದಿಲ್ಲ...''

''ಹೇಗೆ ಕಲಿಸ್ತೀರಿ ? ಅದೂ 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' ಅನ್ನೋ ತರಹ ? ಪೋಲೀಸು, ಕೇಸು, ಕೋರ್ಟು ಅಂತಂದರೆ, ಅವಳ ರೋಷ ಇನ್ನೂ ಹೆಚ್ಚುತ್ತದೆ.''

''ಹಾಗಂತ ಸುಮ್ಮನಿರುಕ್ಕೆ ಆಗುತ್ತಾ ವಿಶ್ವಾ... ಮಾನನಷ್ಟ ಮೊಕದ್ದಮೆ ಹಾಕಿ ದಂಡ ಕಕ್ಕಿಸ್ತೀನಿ....''

''ದುಡುಕಬೇಡಿ ಪೃಥ್ವಿ... ನಿಜ ಏನೂಂತ ಅವಳ ಬಾಯಲ್ಲೇ ಹೇಳಿಸೋಣ. ಅವಳು ಕ್ಷಮಾಪಣೆ ಕೇಳುವಂತೆ ಮಾಡೋಣ. ಇನ್ನು ಮುಂದೆ ನಿಮ್ಮ ತಂಟೆಗೇ ಬರದಂತೆ ಪ್ರಮಾಣ ಮಾಡಿಸೋಣ....''

''ನಿಮಗೇಕೆ ಅವಳ ಮೇಲೆ ಅನುಕಂಪ ?''

''ಅನುಕಂಪ ಏನೂ ಇಲ್ಲ. ನೋಡೋಕೆ ಹೇಗಿದಾಳೆ ?''

''ಚೆನ್ನಾಯ್ತು. ನಾನು ಅವಳನ್ನೆಂದೂ ಸರಿಯಾಗಿ ನೋಡಿಯೇ ಇಲ್ಲ.''

''ಸರಿ ಹಾಗಾದ್ರೆ... ಮುಖ ಮೂತಿ ನೋಡದೇ ಚೆನ್ನಾಗಿ ನಾಲ್ಕು ಬಾರಿಸಿಬಿಡಿ. ದಾರಿಗೆ ಬರ್ತಾಳೆ.''

''ಏನು ಹುಡುಗಿಗೆ ಹೊಡೆಯುವುದೇ ? ಇದೇನು ನೀವು ಹೀಗೆ ಮಾತನಾಡ್ತೀರಿ''

''ಅಲ್ಲ ಪೃಥ್ವಿ... ನನಗಂತೂ ಅರ್ಥವಾಗುತ್ತಿಲ್ಲ ನಿಮ್ಮ ವರ್ತನೆ... ಅವಳ ಮೇಲೆ ಕೋಪ, ಪೋಲೀಸರಿಂದ ಹೊಡೆಸಬೇಕು ಅಂತ ಹೇಳ್ತೀರಿ... ಅದೇ ನೀವೇ ಹೊಡೆಯಿರಿ ಅಂದರೆ ಹೆಣ್ಣು ಹುಡುಗಿ ಅಂತ ಕನಿಕರ ತೋರಿಸ್ತೀರಿ. ನನಗೆ ತಮಾಷೆ ಅಂತನ್ನಿಸ್ತಿದೆ.''

''ನಿಮಗೆ ನನ್ನ ಪರಿಸ್ಥಿತಿ ಅರ್ಥವಾಗುತ್ತಿಲ್ಲ ವಿಶ್ವಾ, ಹೆಣ್ಣು ಹುಡುಗೀರು ಸೂಕ್ಷ್ಮವಾಗಿರಬೇಕು. ಅದು ಬಿಟ್ಟು ಶೂರ್ಪನಖಿ ತರಹ ಆಡಿದರೆ ಕಿವಿ, ಮೂಗು ಕತ್ತರಿಸಬೇಕೋ ಬೇಡವೋ ನೀವೇ ಹೇಳಿ'' ವಿಶ್ವನಕ್ಕ.

''ಸರಿ ಬಿಡಿ, ಆ ಕೆಲಸ ನನಗಿರಲಿ. ನಾನು ನಿಮ್ಮ ಲಕ್ಷ್ಮಣ ಅಂತ ತಿಳಿದುಕೊಳ್ಳಿ. ನಾನೊಮ್ಮೆ ಅವಳನ್ನು ನೋಡಬೇಕಲ್ಲ.''

''ಯಾಕೆ ? ನೀವು ಅವಳ ಕಿವಿ, ಮೂಗು ಕತ್ತರಿಸುತ್ತೀರಾ ?''

''ಇಲ್ಲ ಪೃಥ್ವಿ, ನಾನು ಶಸ್ತ್ರಚಿಕಿತ್ಸೆ ಮಾಡುವುದಿಲ್ಲ. ನನ್ನ ಚಿಕಿತ್ಸಾಕ್ರಮವೇ ಬೇರೆ. ಅವಳ ಮಾನಸಿಕ ಆರೋಗ್ಯ ಸರಿಯಾಗಿದೆಯೇ ಇಲ್ಲವೋ ಮೊದಲು ತಿಳಿದುಕೊಳ್ಳಬೇಕು. ನಂತರ ಅವಳ ಜೊತೆ ಇನ್ಯಾರು ಇದಾರೆ ಅನ್ನೋದನ್ನ ಪತ್ತೆ ಹಚ್ಚಬೇಕು. ಮೊದಲು ಅವಳ ಆರೋಗ್ಯ ಸುಧಾರಿಸುವುದು ಮುಖ್ಯ. ದುಡುಕಿದರೆ ಕೆಲಸ ಕೆಡಬಹುದು.''

''ಮೊದಲು ಅವಳ ಕೊಬ್ಬನ್ನು ಇಳಿಸಬೇಕು...'' ಪೃಥ್ವಿ ಹಲ್ಲು ಕಡಿದು ನುಡಿದಾ ವಿಶ್ವ ನಕ್ಕ.

''ನಾನೊಂದು ಉಪಾಯ ಹೇಳ್ತೀನಿ.. ಮೊದಲು ಅವಳನ್ನು ನಿಮ್ಮ ಕಡೆಗೆ ಒಲಿಸಿಕೊಳ್ಳಿ. ಆಮೇಲೆ ಕೆಲಸ ಸುಲಭ ಆಗುತ್ತೆ.''

''ಇಂಥ ಕೆಲಸ ಎಲ್ಲಾ ನನ್ನಿಂದಾಗುವುದಿಲ್ಲ. ನಾನು ಮಾಡುವುದಿಲ್ಲ...''

''ನಿಮಗೆ ಅನುಭವ ಕಡಿಮೆ. ಒಳಗುಟ್ಟು ಏನೂಂತ ತಿಳಿದುಕೊಳ್ಳುವಾಗ ದುಡುಕಬಾರದು. ಉಪಾಯವಾಗಿ ಬಾಯಿ ಬಿಡಿಸಬೇಕು. ನಿಮ್ಮಿಂದ ಆಗುಲ್ಲ ಅಂತ ಂತೀರಿ... ನಿಮ್ಮ ಪರವಾಗಿ ನಾನು ಮಾತನಾಡ್ಲಾ ?''

''ನಿಮ್ಮಿಂದ ಆಗೋದಾದ್ರೆ ಮಾತನಾಡಿ. ಆದರೆ ನಾನೆಂದೂ ಅವಳನ್ನು ಕ್ಷಮಿಸುವುದಿಲ್ಲ. ಆದರೆ ಎಚ್ಚರವಿರಲಿ ಅವಳು ಶೂರ್ಪನಖಿ ತರಹ ಅಂತ ಆಗಲೇ ಹೇಳಿದ್ದೆ. ನಿಮ್ಮ ಮೇಲೆ ಬಲೆ ಬೀಸಿಯಾಳು ಜೋಕೆ...'' ಪೃಥ್ವಿ ಅಪಹಾಸ್ಯ ಮಾಡುವವನಂತೆ ನಕ್ಕಾಗ ವಿಶ್ವ ಪೆಚ್ಚಾದ.

''ಚೆನ್ನಾಗಿದೆ ನಿಮ್ಮ ಮಾತು! ನನ್ನಂತಹ ಬಡವನ ಮೇಲೆ ಬಲೆ ಬೀಸಿದರೆ ಅವಳಿಗೆ ಸಿಗುವುದಾದರೂ ಏನು ?'' ಎಂದ ತಾನೂ ನಗುತ್ತಾ.

* * * *

ವಿಶ್ವ-ಪೃಥ್ವಿ ಒಟ್ಟಾಗಿ ಆಸ್ಪತ್ರೆಯ ಆವರಣವನ್ನು ಹೊಕ್ಕರು. ಒಂದೇ ವಯಸ್ಸಿನವರು, ಯಾರಿವರು? ಎಂದು ಕೆಲವರು ಅವರನ್ನೇ ಗಮನಿಸುತ್ತಿದ್ದರು. ಪೃಥ್ವಿ ಡಾಕ್ಟರರಿಗೆ ತನ್ನ ಪರಿಚಯವನ್ನು ಹೇಳಿಕೊಂಡು, ವಿಶ್ವನನ್ನು ತನ್ನ ಸ್ನೇಹಿತನೆಂದು ಪರಿಚಯ ಮಾಡಿಕೊಟ್ಟು ರೂಪಿಣಿ ಹೇಗಿದ್ದಾಳೆಂದು ವಿಚಾರಿಸಿದ.

''ಸೊಂಟದ ಮೂಳೆಯೊಂದು ಬಿರುಕು ಬಿಟ್ಟಿದೆ. ಅದು ಕೂಡಿಕೊಳ್ಳುವವರೆಗೂ ಅಲುಗಾಡುವಂತಿಲ್ಲ'' ಇವರಿಬ್ಬರೂ ಮುಖ ಮುಖ ನೋಡಿಕೊಂಡರು. ''ನಾವು ಹೋಗಿ ನೋಡಬಹುದೇ ...?'' ವಿಶ್ವ ಕೇಳಿದ.

ವಾರ್ಡ್ ಬಳಿಗೆ ಬರುತ್ತಿದ್ದಂತೆ ಪೃಥ್ವಿ ಹಿಂದೆ ಸರಿದು ನಿಂತ.

''ನನಗೆ ಅವಳನ್ನು ನೋಡುವ ಇಷ್ಟವಿಲ್ಲ...'' ಎಂದ. ವಿಶ್ವ ಯಾಕೆ ಎಂದು ಕೇಳದೇ ತಾನೊಬ್ಬನೇ ವಾರ್ಡ್ ಒಳಗೆ ಹೋದ. ಕಣ್ಣುಚ್ಚಿ ಮಲಗಿದ್ದವಳನ್ನೇ ದಿಟ್ಟಿಸಿದ. ಈ ಹಿಂದೆ ನೋಡಿದ ನೆನಪಿಲ್ಲ ಎಂದುಕೊಂಡು ಅವಳ ಮುಖದ ಸಮೀಪಕ್ಕೆ ಬಾಗಿದ. ಅವನ ಬಿಸಿ ಉಸಿರು ಅವಳ ಮುಖವನ್ನು ಸವರಿತು. ಮೆಲ್ಲಗೆ ಕಣ್ಣು ಬಿಟ್ಟವಳು ಮುಖದ ಸಮೀಪದಲ್ಲಿ ಬಾಗಿ ನಿಂತಿದ್ದ ವ್ಯಕ್ತಿಯನ್ನು ಕಂಡು ಸಣ್ಣಗೆ ಚೀರಿದಳು. ವಿಶ್ವ ಹಿಂದೆ ಸರಿದ. ''ಹೆದರಿದ್ರಾ ?'' ನಗುತ್ತಾ ಪ್ರಶ್ನಿಸಿದ.

''ಯಾರು ನೀವು ? ಇಲ್ಲೇನು ಮಾಡ್ತಿದೀರಿ ?''

''ನಾನು ವಿಶ್ವ ಅಂತ... ಪೃಥ್ವಿಯ ಸ್ನೇಹಿತ. ನಿಮ್ಮನ್ನು ವಿಚಾರಿಸಿಕೊಂಡು ಬನ್ನಿ ಅಂತ ನನ್ನನ್ನು ಕಳಿಸಿದ್ದಾರೆ.''

''ಯಾಕೆ ? ನಾನು ಬದುಕಿದ್ದೀನಿ ಅಂತ ಹೆದರಿದಾರಾ ?'' ವಿಚಿತ್ರ ನಗೆ ನಕ್ಕಳು.

''ಈಗ ಹೇಗಿದೀರಿ ? ನಾನು ಅವರಿಗೆ ಏನು ಹೇಳಲಿ ?''

''ಅವರೇಕೆ ಬರಲಿಲ್ಲ...?''

''ಅವರಿಗೆ ಬಿಡುವಿಲ್ಲ, ಊರಲಿಲ್ಲ.....''

''ಸುಳ್ಳು ಅವರು ನನಗೆ ಹೆದರಿ ಬಂದಿಲ್ಲ, ನನಗೆ ಗೊತ್ತು.''

''ಛೇ... ಪೃಥ್ವಿ ಅಂತೋನಲ್ಲ ನನಗೆ ಚೆನ್ನಾಗಿ ಗೊತ್ತು.''

''ಹಾಗಾದ್ರೆ ಅವನು ನನ್ನನ್ನು ಮದುವೆಯಾಗೋಕೆ ಒಪ್ಪಿಸ್ತೀರಾ ?'' ಮತ್ತೆ ವಿಚಿತ್ರವಾಗಿ ನಗುತ್ತಾ ಕೇಳಿದಾಗ, ವಿಶ್ವನಿಗೆ ಪೃಥ್ವಿ ಹೇಳಿದ್ದ ಮಾತುಗಳು ನೆನಪಿಗೆ ಬಂದವು.

''ಆ ವಿಷಯವನ್ನು ಆಮೇಲೆ ಯೋಚಿಸೋಣ. ಮೊದಲು ನಿಮ್ಮನ್ನು ಇಲ್ಲಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ಹೋಗಬೇಕು...'' ರೂಪಿಣಿ ತಲೆಯಾಡಿಸಿದಳು.

''ನಾನು ಎಲ್ಲಿಗೂ ಬರುಲ್ಲ... ಪೂರ್ಣ ವಾಸಿಯಾಗುವವರೆಗೂ ಇಲ್ಲೇ ಇರ್ತೀನಿ''

''ಇಲ್ಲಿ ಎಷ್ಟು ದಿನಾಂತ ಇರೋಕೆ ಆಗುತ್ತೆ ? ನಿಮ್ಮ ಮನೆ ಎಲ್ಲಿದೆ ? ನಿಮ್ಮವರು ಯಾರಿದಾರೆ ಅಂತ ತಿಳಿಸಿದರೆ, ನಾನು ನಿಮ್ಮನ್ನು ಕ್ಷೇಮವಾಗಿ ತಲುಪಿಸ್ತೀನಿ...''

''ಈ ಕೆಲಸವನ್ನು ಪೃಥ್ವಿ ನಿಮಗೆ ಒಪ್ಪಿಸಿದಾನಾ ? ಹಾಗಾದರೆ ನನ್ನನ್ನು ಇಲ್ಲಿಂದ ಪೃಥ್ವಿಯ ಮನೆಗೆ ಕರೆದುಕೊಂಡು ಹೋಗಿ...''

''ಪೃಥ್ವಿ ಹಾಗೆ ಹೇಳಿಲ್ಲ. ನಿಮ್ಮ ಮನೆಗೆ ಕಳಿಸಲು ಹೇಳಿದ್ದಾರೆ.''

''ನನಗೆ ಬೇರೆ ಯಾವ ಮನೆಯೂ ಇಲ್ಲ, ನಾನು ಇಲ್ಲೇ ಇರ್ತೀನಿ ಹೇಗೂ ಬಿಲ್‌ನ ಕೊಡೋನು ಪೃಥ್ವಿ ತಾನೇ...''

''ಅವನು ಕೊಡದಿದ್ದರೆ, ನಿಮ್ಮನ್ನು ಆಸ್ಪತ್ರೆಯಿಂದ ಹೊರಗೆ ಕಳಿಸ್ತಾರೆ. ಆಗೇನು ಮಾಡ್ತೀರಿ ?''

''ಯಾಕೆ ಕೊಡಲ್ಲ ? ಕೇಸು ಹಾಕಿ ವಸೂಲು ಮಾಡ್ತೀನಿ. ಹುಂ...''

''ಹಾಗೇ ಮಾಡೋರಂತೆ. ಆದರೆ ಮೊದಲು ನಿಮಗೆ ಓಡಾಡುವಂತೆ ಆಗಬೇಡವೇ ? ನಿಮ್ಮ ಹತ್ತಿರದವರು ಯಾರಿದಾರೆ ?''

''ನನಗೆ ಯಾರೂ ಇಲ್ಲ, ಆಗಲೇ ಹೇಳಿದೆನಲ್ಲ.''

''ನೀವು ನಿಜ ಹೇಳ್ತಾ ಇಲ್ಲ, ನಿಮ್ಮ ತಂದೆ ನಿಮ್ಮ ಜೊತೆಲಿದಾರೆ.. ಅಲ್ಲವೆ ? ಅವರಿಗೆ ಈ ಆಕ್ಸಿಡೆಂಟ್ ವಿಷಯ ತಿಳಿದಿದೆಯಾ ?''

''ಇಲ್ಲ ಈಗ ಅವರು ಇಲ್ಲಿಲ್ಲ. ಅವರಿಗೆ ತಿಳಿಸುವುದು ಬೇಡ.''

''ಹಾಗಾದರೆ ಈಗ ನಾನು ನಿಮ್ಮ ಹಿತೈಷಿ ಅಂತ ಅಂದ್ಕೊಳ್ಳಿ. ನಾನು

ನಿಮಗೆ ಒಂದು ಉತ್ತಮ ಸಲಹೆ ಕೊಡ್ತೀನಿ. ನನ್ನದೇ ಒಂದು ಆಸ್ಪತ್ರೆ ಇದೆ ಅಲ್ಲಿಗೆ ನಿಮ್ಮನ್ನು ಕರೆದುಕೊಂಡು ಹೋಗ್ತೀನಿ...''

''ನಿಮ್ಮ ಆಸ್ಪತ್ರೆ.... ನಿಜವಾಗಿಯೂ''

''ಯಾಕೆ ನಂಬಿಕೆ ಬರುತ್ತಿಲ್ವಾ ?''

''ಇಲ್ಲ, ನೀವು ಏನೋ ಸುಳ್ಳು ಹೇಳ್ತಿದೀರಿ ಅಂತನ್ನಿಸುತ್ತೆ...'' ವಿಶ್ವನ ಕಪಾಲಕ್ಕೆ ಹೊಡೆದಂತಾಯಿತು.

ನಾನು ಪೃಥ್ವಿಯ ಮಾತನ್ನು ಕೇಳಿಕೊಂಡು, ಇಲ್ಲಿಗೆ ಬರಬಾರದಾಗಿತ್ತು...

''ನಿಮ್ಮನ್ನು ಒಪ್ಪಿಸುಕ್ಕೆ ಆಗಲ್ಲ. ಇನ್ನು ನಿಮ್ಮ ಹಣೇಬರಹ ನಾನು ಹೋಗ್ತೀನಿ'' ತಿರುಗಲಿದ್ದವನನ್ನು ತಡೆದಳು.

''ಇದೇ ಮಾತನ್ನು ಪೃಥ್ವಿ ಹೇಳಿದರೆ ನಾನು ನಂಬ್ತೀನಿ... ಆಗ ನೀವು ಎಲ್ಲಿಗೆ ಕರೆದರೂ ನಾನು ಬರಕ್ಕೆ ರೆಡಿ'' ಎಂದಳು ಉತ್ಸಾಹದಿಂದ. ವಿಶ್ವ ಅವಳನ್ನೇ ದಿಟ್ಟಿಸಿ ನೋಡಿ ನುಡಿದ.

''ಸರಿ ಹಾಗಾದ್ರೆ ಪೃಥ್ವಿ ಊರಿಗೆ ಬಂದ ಮೇಲೆ ಮತ್ತೆ ಬರುತ್ತೀನಿ'' ಎಂದು ಹೇಳಿ ಹೊರಗೆ ಬಂದ. ಹೌದು, ಪೃಥ್ವಿ ಹೇಳುವುದು ನಿಜ. ಇವಳ ವರ್ತನೆಯಲ್ಲಿ ಏನೋ ರಹಸ್ಯ ಅಡಗಿದೆ ಅಂತೆನ್ನಿಸಿತ್ತು.

ಅವನಿಗಾಗಿಯೇ ಕಾದು ನಿಂತಿದ್ದ ಪೃಥ್ವಿ. ''ಏನು ಹೇಳಿದ್ಲು ?'' ಕುತೂಹಲದಿಂದ ಪ್ರಶ್ನಿಸಿದ. ವಿಶ್ವ ರೂಪಿಣಿ ಆಡಿದ ಮಾತನ್ನು ತಿಳಿಸಿದ.

''ನಾನೇಕೆ ಬಂದು ಹೇಳಬೇಕು ? ಇದೆಲ್ಲ ನನ್ನಿಂದಾಗದ ಕೆಲಸ. ಅವಳನ್ನು ಯಾವುದಾದರೂ ಮಹಿಳಾಶ್ರಮಕ್ಕೆ ವರ್ಗಾಯಿಸೋಣ.''

''ಮಹಿಳಾಶ್ರಮಕ್ಕೆ ನಮ್ಮನ್ನು ಬಿಡುವುದಿಲ್ಲ. ಅಲ್ಲದೇ ಪೋಲೀಸು ಕೇಸು ಅಂತ ಹೇಳಿದ್ರೆ ಸೇರಿಸಿಕೊಳ್ತಾರೋ ಇಲ್ಲವೋ ...?''

''ಯಾವುದಾದರೂ ಹೋಟೆಲಿನಲ್ಲಿಡೋಣ...''

''ಹೋಟೆಲ್ಲಿಗೆ ಬಂದು, ನಾನಾಗಲೀ, ನೀವಾಗಲೀ ವಿಚಾರಿಸುಕ್ಕೆ ಆಗುತ್ತಾ ಪೃಥ್ವಿ...? ಮೊದಲೇ ಒಂಥರಾ ಹುಡುಗಿ ಅಂತ ಅಂತೀಯ... ಹೊಟೆಲ್ಲಿನಲ್ಲಿಟ್ಟರೆ ತಿಳಿದ ಜನ ಆಡಿಕೊಳ್ತಾರೆ.''

''ಹಾಗಾದ್ರೆ ಅದೇನು ಮಾಡ್ತೀರೋ ಅದನ್ನು ಬೇಗ ಮಾಡಿ...''

''ನಾಳೇನೇ ನೀವು ಬಂದು ಅವಳಿಗೆ ನನ್ನ ಆಸ್ಪತ್ರೆಗೆ ಹೋಗಿರುವಂತೆ ಹೇಳಿ... ಅದನ್ನೇ ಅವಳು ಬಯಸುವುದು''

''ಇದೊಳ್ಳೆ ಕಾಟವಾಯ್ತಲ್ಲ'' ಹಲ್ಲು ಕಡಿದ.

''ಕಾಟಗಳಿಂದ ತಪ್ಪಿಸಿಕೊಳ್ಳಬೇಕಾದ್ರೆ ಉಪಾಯಗಳನ್ನು ಹುಡುಕಬೇಕು. ಈಗ ಮೊದಲು ಬೀಸುವ ದೊಣ್ಣೆಯ ಏಟು ತಪ್ಪಲಿ...'' ಪೃಥ್ವಿ ಏನನ್ನೂ ನುಡಿಯಲಿಲ್ಲ. ಅದು ಸಮ್ಮತವೆಂದು ತಿಳಿದ ವಿಶ್ವ. ಪೃಥ್ವಿ ಯೋಚಿಸುತ್ತಿದ್ದುದೇ ಬೇರೆ.

ಪೃಥ್ವಿ, ವಿಶ್ವ, ಮತ್ತೆ ಡಾಕ್ಟರ ಬಳಿಗೆ ಬಂದು ನಾಳೆಯೇ ಎಲ್ಲಾ ಬಿಲ್ ಚುಕ್ತಾ ಮಾಡುತ್ತೇವೆ. ಅವಳನ್ನು ಡಿಸ್ಚಾರ್ಜ್ ಮಾಡಬೇಕೆಂದಾಗ, ಡಾಕ್ಟರು ಒಪ್ಪಲಿಲ್ಲ.

''ಇದು ಆಕ್ಸಿಡೆಂಟ್ ಕೇಸು. ಪೋಲಿಸ್ನೋರು ಒಪ್ಪಿದರೆ ಮಾತ್ರ ಡಿಸ್ಚಾರ್ಜ್ ಮಾಡ್ತೀವಿ'' ಅಂತಂದರು.

''ನಮ್ಮ ಲಾಯರ್ರು ಎಲ್ಲಾ ಸೆಟ್ಲ್ ಮಾಡಿದಾರೆ. ನಾನು ಪೋಲೀಸರ ಹತ್ತಿರ ಮಾತನಾಡಿ ಪರ್ಮಿಷನ್ ಕೊಡಿಸ್ತೀನಿ'' ಎಂದು ನುಡಿದ. ಇಬ್ಬರೂ ಹೊರಗೆ ಬಂದರು. ಸೀದಾ ಪೋಲೀಸ್ ಸ್ಟೇಷನ್‌ಗೆ ಬಂದರು.

ಪೋಲೀಸ್ ಇನ್ಸ್‌ಪೆಕ್ಟರ್‌ಗೆ ವಿಶ್ವನನ್ನೂ ಪರಿಚಯಿಸಿದ. ಅವರು ವಿಶ್ವನನ್ನೇ ವಿಚಿತ್ರವಾಗಿ ನೋಡಿದರು. ನಡೆನುಡಿಗಳಲ್ಲಿ, ವೇಷಭೂಷಣಗಳಲ್ಲಿ ವ್ಯತ್ಯಾಸವಿರುವ ಇವರಿಬ್ಬರು ಹೇಗೆ ಸ್ನೇಹಿತರು ? ಎಂದು ಚಿಂತಿಸುತ್ತಿದ್ದರು.

''ರೂಪಿಣಿಯ ಸ್ಥಿತಿ ಇನ್ನು ಚೆನ್ನಾಗಿ ಸುಧಾರಿಸಬೇಕು. ಅವಳು ನನ್ನ ಮೇಲೆ ಕಂಪ್ಲೆಂಟ್ ಕೊಟ್ಟಿದ್ದರೂ ಅವಳನ್ನು ರಕ್ಷಿಸುವುದು ನಮ್ಮ ಕರ್ತವ್ಯ ಅಂತ ನಮ್ಮ ತಾಯಿ ಹೇಳಿದರು. ನಮ್ಮ ಕಂಪೆನಿಯಲ್ಲಿ ಕೆಲಸದಲ್ಲಿದ್ದವಳು. ಆದರೆ ಅವಳಿಗೆ ಈ ಊರಿನಲ್ಲಿ ಬೇರೆ ಯಾರೂ ಇಲ್ಲ.ಇ ಆದುದರಿಂದ ಅವಳನ್ನು ನಮ್ಮ ಮನೆಗೆ ಕರೆದುಕೊಂಡು ಹೋಗ್ತೀವಿ. ಇದಕ್ಕೆ ನೀವು ಪರ್ಮೀಷನ್ ಕೊಡಬೇಕು'' ಅಂತ ನುಡಿದ. ಇನ್ಸ್‌ಪೆಕ್ಟರ್ ವಿಚಿತ್ರವಾಗಿ ನೋಡಿದರು. ಕೇವಲ ಎರಡು ದಿನಗಳ ಹಿಂದೆ ಅವಳಿಗೆ ಕೇರ್ ಮಾಡದಿದ್ದವನು ಇದ್ದಕ್ಕಿದ್ದಂತೆ ಹೇಗೆ ಬದಲಾದ..? ಈ ಸ್ನೇಹಿತ ಏನು ಸಲಹೆ ಕೊಟ್ಟಿರಬಹುದು ?

''ನೋಡೋಣ, ನೀವು ಒಂದು ಲೆಟರ್ ಬರೆದು ಕೊಡಬೇಕು. ಹಾಗೇ

ನಿಮ್ಮ ಮನೆಗೆ ಬರಲು ಅವರು ಒಪ್ಪಿದರೆ ಮಾತ್ರ ಪರ್ಮಿಷನ್ ಸಿಗುತ್ತದೆ.''

''ಇಲ್ಲದಿದ್ದರೆ ಅವಳು ಆಸ್ಪತ್ರೆಯಲ್ಲಿ ಇನ್ನೆಷ್ಟು ದಿನಗಳು ಇರಲು ಸಾಧ್ಯ ? ಅದಕ್ಕೆ ನಮ್ಮ ತಾಯಿ ಹೀಗೆ ಅಭಿಪ್ರಾಯ ಪಡುತ್ತಾರೆ.

''ಸರಿ ನಿಮ್ಮ ತಾಯಿಯೇ ಈ ಜವಾಬ್ದಾರಿಯನ್ನು ಹೊರುವುದಾದರೆ ನಮ್ಮ ಅಭ್ಯಂತರವಿಲ್ಲ. ಆದರೆ ಮುಂದೇನಾದರೂ ಕಾಂಪ್ಲಿಕೇಷನ್ಸ್‌ಗಳಾದರೆ ಅದಕ್ಕೆ ನಾವು ಜವಾಬ್ದಾರರಲ್ಲ.''

''ಹಾಗೇನೂ ಆಗದಂತೆ ನಾವು ನೋಡಿಕೊಳ್ತೀನಿ'' ಎಂದು ವಿಶ್ವ ಭರವಸೆಯಿತ್ತ.

''ಸರಿ ಹಾಗಾದ್ರೆ ನೀವು ನಾಳೆ ಬನ್ನಿ. ಹಾಗೇ ನಿಮ್ಮ ಲಾಯರ್‌ನ್ನೂ ಕರೆದುಕೊಂಡು ಬನ್ನಿ. ಬಾಂಡ್ ಬರೆದುಕೊಡಬೇಕು. ಹಾಗೇ ನಾನು ಡಾಕ್ಟರಿಗೆ ಒಂದು ಲೆಟರ್ ಬರೆದುಕೊಡ್ತೀನಿ...'' ಎಂದರು. ಪೃಥ್ವಿ ಥ್ಯಾಂಕ್ಸ್ ಎಂದು ಕೈ ಕುಲುಕಿದ. ವಿಶ್ವ ನಮಸ್ಕಾರ ಎಂದು ಕೈ ಮುಗಿದ.

* * * *

ವಿಶ್ವ ಡಾಕ್ಟರಿಗೆ ಇನ್‌ಸ್ಪೆಕ್ಟರ್ ಕೊಟ್ಟ ಕಾಗದವನ್ನು ತೋರಿಸಿದ. ಕೆಲವೇ ಗಂಟೆಗಳಲ್ಲಿ ರೂಪಿಣಿಯ ಡಿಸ್ಚಾರ್ಜ್‌ಗೆ ಎಲ್ಲಾ ಸಿದ್ಧವಾಯಿತು. ನರ್ಸುಗಳು ಬಂದು, ಅವಳನ್ನು ಗಾಲಿಕುರ್ಚಿಯಲ್ಲಿ ಕೂಡಿಸಿಕೊಂಡು, ಕಾರಿನ ಬಳಿಗೆ ತಳ್ಳಿಕೊಂಡು ಬಂದಾಗ ರೂಪಿಣಿಗೆ ಅರ್ಥವಾಗಿತ್ತು. ಕಾರಿನ ಬಳಿ ವಿಶ್ವನನ್ನು ನೋಡಿದಳು. ಅವನು ಪೃಥ್ವಿಯ ಕಡೆ ಕೈ ಮಾಡಿದ. ಪೃಥ್ವಿ ಎತ್ತಲೋ ನೋಡುತ್ತಿದ್ದ. ಅವಳು ಹಲ್ಲುಕಡಿದಳು. ನರ್ಸುಗಳಿಬ್ಬರೂ ಅವಳನ್ನು ಕಾರಿನಲ್ಲಿ ಹಿಂದಿನ ಸೀಟಿನಲ್ಲಿ ಕೂರಿಸಿದರು. ವಿಶ್ವ ಅವಳ ಪಕ್ಕದಲ್ಲಿ ಕುಳಿತ. ಪೃಥ್ವಿ ಕಾರನ್ನು ಓಡಿಸಿದ. ಅಸಹಾಯಕತೆಯಿಂದ ಬಂದ ಅಳುವನ್ನು ತಡೆದುಕೊಂಡು ಉಗುಳು ನುಂಗಿದಳು ರೂಪಿಣಿ.

ಕಾರು ವೈದ್ಯಾಲಯದ ಮುಂದೆ ನಿಂತಿತು. ವಿಶ್ವ ಇಳಿದು ಆಸ್ಪತ್ರೆಯ ಒಳಗೆ ಹೋಗಿ, ಕೆಲವೇ ನಿಮಿಷಗಳಲ್ಲಿ ಗಾಲಿಯ ಕುರ್ಚಿಯನ್ನು ಕಳಿಸಿದ. ರೂಪಿಣಿ ಸಹಕರಿಸಲಿಲ್ಲ. ಕೊಸರಾಡಿದಳು.

''ಪೃಥ್ವಿ ಇದು ನ್ಯಾಯನಾ ! ನನ್ನನ್ನು ಈ ಕೊಂಪೆಗೆ ಯಾಕೆ ಕರೆದು

ಕೊಂಡು ಬಂದೆ ?'' ಕಿರುಚಿದಳು. ಪೃಥ್ವಿ ಉತ್ತರ ಕೊಡುವ ಗೋಜಿಗೆ ಹೋಗಲಿಲ್ಲ. ಅಷ್ಟರಲ್ಲಿ ವಿಶ್ವ ಬಂದ.

''ಮೊದಲು ಇಳಿಯಿರಿ. ಆಮೇಲೆ ನಿಧಾನವಾಗಿ ಮಾತನಾಡೋಣ''

''ಇಲ್ಲ, ಈ ಕೊಂಪೇಲಿ ನಾನಿರುಲ್ಲ''

''ಈಗ ನಿಮಗೆ ಹಾಗೆನ್ನಿಸುತ್ತೆ ಅಷ್ಟೆ. ನಾಲ್ಕು ದಿನ ಕಳೆಯಲಿ. ಆಮೇಲೆ ಈ ಜಾಗವನ್ನು ಬಿಟ್ಟು ಹೋಗುವ ಮನಸ್ಸೇ ಬರುಲ್ಲ...'' ವಿಶ್ವ ಆತ್ಮೀಯವಾಗಿ ಅವಳ ಕೈ ಒತ್ತಿದಾಗ, ಅವಳಲ್ಲಿ ಏನೋ ಹೊಸ ಅನುಭವ ಉಂಟಾಯಿತು. ಪೃಥ್ವಿಯನ್ನು ಕೆಕ್ಕರಿಸಿ ನೋಡಿ ಕೆಳಗಿಳಿದು ಕುರ್ಚಿಯಲ್ಲಿ ಕೂತಳು. ಪೃಥ್ವಿ ಕೆಳಗಿಳಿದೂ ಬರಲಿಲ್ಲ. ಇವನ ಸೊಕ್ಕನ್ನು ತಾನು ಇಳಿಸಲೇ ಬೇಕು ಎಂದು ಕೊಂಡು ಹಲ್ಲು ಕಡಿದಳು. ಬಲವಂತವಾಗಿ ಅವಳನ್ನು ಆ ಆಸ್ಪತ್ರೆಗೆ ಸೇರಿಸಿಕೊಳ್ಳ ಲಾಯಿತು. ಆ ಕೋಣೆಯಲ್ಲಿದ್ದ ಮಂಚದ ಮೇಲೆ ಕೂರಿಸಿದರು. ಸಿಟ್ಟಿನಿಂದ ಹಾಗೇ ಉರುಳಿಕೊಂಡಳು. ಪ್ಲಾಸ್ಟರ್ ಹಾಕಿದ್ದ ಜಾಗದಲ್ಲಿ ಎಳೆದುಕೊಂಡಂತಾಗಿ ಅತಿಯಾಗಿ ನೋವುಂಟಾಯಿತು. ಹ್ಞಾಂ... ಎಂದು ಚೀರಿದಳು. ನರ್ಸುಗಳು ದೂರ ಸರಿದರು.

ಪೃಥ್ವಿಯನ್ನು ಅತ್ತ ಕಳಿಸಿ, ವಿಶ್ವ ಒಳಗೆ ಬಂದ. ಮುಸುಕು ಬೀರಿ ಮಲಗಿದ್ದವಳನ್ನು ಮೆಲ್ಲಗೆ ಕರೆದ. ಅವಳು ಉತ್ತರಿಸಲಿಲ್ಲ.

''ನಿಮಗೆ ಹೊಟ್ಟೆ ಹಸಿಯುತ್ತಿದ್ದರೆ, ಏನಾದ್ರೂ ತಿಂತೀರಾ ?''

''ನಾನು ಇನ್ನು ಎಷ್ಟು ದಿನ ಇಲ್ಲಿರಬೇಕು ?'' ಮುಸುಕು ತೆಗೆದು ಪ್ರಶ್ನಿಸಿದಳು.

''ನೀವು ಚೆನ್ನಾಗಿ ಎದ್ದು ಓಡಾಡುವ ಹಾಗೆ ಆಗೋವರೆಗೂ.''

''ಇಂಪಾಸಿಬಲ್... ಇದು ಆಸ್ಪತ್ರೆ ಇದ್ದ ಹಾಗಿಲ್ಲ. ನನ್ನನ್ನು ಕಿಡ್ನಾಪ್ ಮಾಡಿಕೊಂಡು ಇಲ್ಲಿಗೆ ತಂದಿದೀರಿ ಅಂತನ್ನಿಸುತ್ತೆ''

''ನಿಮಗೆ ಏನೇನೋ ಅನ್ನಿಸಿದರೆ ಅದು ನಿನ್ನ ಭ್ರಮೆ ಅಷ್ಟೆ. ನಮ್ಮ ಆಸ್ಪತ್ರೆಯ ಚಿಕಿತ್ಸಾ ವಿಧಾನಗಳೇ ಬೇರೆ. ಈಗ ಆ ಮಾತೆಲ್ಲ ಬೇಡ. ಹೊಟ್ಟೆ ಹಸಿದಿದ್ದರೆ, ಮೊದಲು ಊಟ ಮಾಡಿ. ಚೆನ್ನಾಗಿ ನಿದ್ದೆ ಮಾಡಿ.''

ಅಷ್ಟರಲ್ಲಿ ನರ್ಸು ಊಟ ತಂದಿತ್ತಳು. ಅಡಿಗೆಯ ಘಮಘಮ ವಾಸನೆ, ಅವಳ ಹಸಿವನ್ನ ಕೆರಳಿಸಿತು. ವಿಶ್ವ ತಾನೇ ಅವಳನ್ನು ಎಬ್ಬಿಸಿ ಕೂರಿಸಿದ. ಅವಳ

ಕೈಗೆ ತಟ್ಟೆಯನ್ನಿತ್ತ. ಅವಳು ನಿಧಾನವಾಗಿ ಚಮಚದಿಂದ ತಿನ್ನತೊಡಗಿದಳು. ವಿಶ್ವ ಅಲ್ಲಿಂದ ಎದ್ದು ಹೋಗಿದ್ದ.

ನಿದ್ದೆಯಿಂದ ಅವಳಿಗೆ ಎಚ್ಚರವಾದಾಗ ಚೆನ್ನಾಗಿ ಕತ್ತಲಾಗಿತ್ತು. ರೂಮಿನಲ್ಲಿ ಉರಿಯುತ್ತಿದ್ದ ಮಂದಬೆಳಕು ಕಣ್ಣಿಗೆ ಹಿತವೆನಿಸಿತ್ತು. ಕಿಟಕಿಯಿಂದ ಬೀಸಿ ಬರುತ್ತಿದ್ದ ತಂಗಾಳಿ ಹಾಯಾಗಿತ್ತು. ಇದ್ದಕ್ಕಿದ್ದಂತೆ ತಾನೆಲ್ಲಿರುವೆನೆಂಬ ನೆನಪು ಬಂದೊಡದಡನೆ, ಸಿಸ್ಟರ್... ಸಿಸ್ಟರ್ ಎಂದು ಕಿರುಚಿಕೊಂಡಳು. ಸಿಸ್ಟರ್ ದೂರದಲ್ಲೇ ನಿಂತಳು.

''ವಿಶ್ವನ್ನ ಕರೀರಿ... ನಾನು ಅವರ ಹತ್ತಿರ ಮಾತನಾಡಬೇಕು'' ಕೆಲವೇ ನಿಮಿಷಗಳಲ್ಲಿ ವಿಶ್ವ ಬಂದ.

''ಚೆನ್ನಾಗಿ ನಿದ್ದೆ ಬಂದಿತ್ತು ಅಲ್ವಾ ? ನಾನು ನೋಡಿಕೊಂಡು ಹೋದೆ. ಏನು ಬೇಕಾಗಿತ್ತು...'' ಸಮಾಧಾನದಿಂದ ಕೇಳಿದ.

''ನನಗೆ ಒಂದು ಸಂದೇಹ ವಿಶ್ವಾ... ನಾನು ಸೊಂಟ ಮುರಿದುಕೊಂಡು ಬಿದ್ದಿದೀನಿ ಅಂತ, ನೀವೂ ನಿಮ್ಮ ಸ್ನೇಹಿತರೂ ಸೇರಿ ಏನೋ ಪ್ಲಾನ್ ಮಾಡಿದೀರಿ... ಆದರೆ ಒಂದು ಮಾತು ನೆನಪಿರಲಿ... ಪೋಲಿಸ್ನೋರಿಂದ ತಪ್ಪಿಸಿಕೊಳ್ಳೋಕೆ ಮಾತ್ರ ಆಗುಲ್ಲ....'' ವಿಶ್ವ ಜೋರಾಗಿ ನಕ್ಕುಬಿಟ್ಟ.

''ಯಾವುದೋ ಕೆಟ್ಟ ಕನಸು ಬಿದ್ದಿರಬೇಕು ನಿಮಗೆ... ಅದಕ್ಕೆ ಹೀಗೆಲ್ಲಾ ಮಾತಾಡ್ತಿದೀರಿ. ನಾವಿಬ್ಬರೂ ಸ್ನೇಹಿತರು ನಿಜ. ಆದರೆ ನಮ್ಮಿಬ್ಬರ ಸಂಬಂಧ ಎಂಥದು ಅಂತ ತಿಳಿದರೆ ನಿಮಗೆ ಖಂಡಿತಾ ನಂಬಿಕೆ ಬರುಲ್ಲ. ಅದಿರಲಿ, ನಿಮಗೇಕೆ ಅವನ ಮೇಲೆ ಅಷ್ಟು ದ್ವೇಷ ? ಆ ದ್ವೇಷಕ್ಕೆ ಕಾರಣ ಏನೂಂತ ತಿಳಿದರೆ ಬಹುಶಃ ನಾನು ನಿಮಗೆ ಸಹಾಯ ಮಾಡಿದರೂ ಮಾಡಬಹುದು.''

''ನಿಮ್ಮ ಮೇಲೆ ನನಗೆ ನಂಬಿಕೆ ಇಲ್ಲ. ಆದರೂ ಕೆಲವು ವಿಷಯಗಳನ್ನು ನಿಮಗೆ ತಿಳಿಸಲೇಬೇಕು. ಅಕಸ್ಮಾತ್ತಾಗಿ ನನ್ನ ಕೊಲೆಯಾಗಿ ಸತ್ತು ಹೋದರೆ, ನಿಜ ಏನೂಂತ ನಿಮಗೆ ತಿಳಿದಿರಬೇಕು.''

''ಕೊಲೆ ! ಕೊಲೆ !! ಇಲ್ಲಿ ನಿಮ್ಮ ಕೊಲೇನ ಯಾರು ಮಾಡ್ತಾರೆ ?''

''ಇನ್ಯಾರು ? ಪೃಥ್ವಿ... ಅದಕ್ಕೇ ತಾನೇ ಇಂತಹ ಜಾಗಕ್ಕೆ ನನ್ನನ್ನ ಕರೆತಂದು ಬಿಟ್ಟಿದಾನೆ...'' ಅವಳ ರೋಷವನ್ನು ಕಂಡು ಮತ್ತೆ ನಕ್ಕ.

''ಛೆ, ಪೃಥ್ವಿ ಅಂತಹವನಲ್ಲ, ನಿಮ್ಮನ್ನು ಇಲ್ಲಿಗೆ ಕರೆತಂದು ಬಿಡುವ

ಉಪಾಯ ಅವನದಲ್ಲ, ಅವನ ತಾಯಿಯದು. ಅದನ್ನು ಅನುಮೋದಿಸಿದವನು ನಾನು...''

''ಯಾರು ? ಆ ನಳಿನೀನಾ ? ಅವಳು ಅವನ ತಾಯಿಯಲ್ಲ. ಮಲತಾಯಿ. ಅವಳೊಬ್ಬಳು ಮೋಸಗಾತಿ...'' ವಿಶ್ವ ಕಣ್ಣರಳಿಸಿದ.

''ನಿಮಗೆ ಹೇಗೆ ಗೊತ್ತು ?'' ಅವಳು ಉತ್ತರಿಸಲಿಲ್ಲ.

''ನಳಿನಿಯ ವಿಷಯಗಳನ್ನೆಲ್ಲ ತಿಳಿದುಕೊಂಡಿರುವ ನೀವ್ಯಾರು ಅಂತ ನಾನೀಗ ತಿಳಿದುಕೊಳ್ಳಬೇಕಾಗಿದೆ... ನಳಿನಿಯಿಂದ ಪೃಥ್ವಿಗೆ ಮೋಸವಾಗುವುದಾದರೆ, ಅದನ್ನು ನಾನು ತಡೆಯಲೇ ಬೇಕು... ಅವರು ಅವನ ಮನಲತಾಯಿ ಅಂತ ನಿಮಗ್ಯಾರು ಹೇಳಿದರು ?'' ಮುಖದ ಹತ್ತಿರಕ್ಕೆ ಮುಖವನ್ನು ತಂದು ಹೆದರಿಸುವವನಂತೆ ಪ್ರಶ್ನಿಸಿದ.

''ನೋಡಿ... ನೀವು ದೂರ ನಿಂತು ಮಾತನಾಡಿ... ಹತ್ತಿರ ಬರಬೇಡಿ'' ಅವಳು ಅತ್ತಿತ್ತ ನೋಡಿದಳು.

''ಇದು ನನ್ನ ಮನೆ ಇಲ್ಲಿ ನನ್ನ ಅಪ್ಪಣೆಯಿಲ್ಲದೇ ಒಳಗೆ ಯಾರೂ ಬರುವುದಿಲ್ಲ... ನೀವು ಧೈರ್ಯವಾಗಿ ಮಾತನ್ನಾಡಬಹುದು''

''ಮಧ್ಯಾಹ್ನದ ಊಟ ತುಂಬಾ ಚೆನ್ನಾಗಿತ್ತು. ಇದು ನಿಮ್ಮ ಮನೆ ಅಂತ ಅಂತೀರಿ. ನೀವೇ ಅಡಿಗೆ ಮಾಡಿದ್ರಾ ?'' ಅವಳು ಮಾತನ್ನು ಬದಲಾಯಿಸುತ್ತಿದ್ದಾಳೆಂದು ತಿಳಿಯಿತು. ಈಗ ಬಲವಂತ ಮಾಡಿದರೆ ಸುಳ್ಳು ಹೇಳಬಹುದು. ನಿಧಾನವಾಗಿ ಅವಳೇ ಹೇಳಲಿ ಎಂದುಕೊಂಡು ಸುಮ್ಮನಾದ.

''ನನಗೀಗ ಆಸ್ಪತ್ರೆಯ ಮುಖ್ಯವಾದ ಕೆಲಸಗಳಿವೆ. ರಾತ್ರಿ ನಿಮ್ಮ ಊಟವಾದ ಮೇಲೆ ಮತ್ತೆ ಮಾತನಾಡೋಣ... ನಿಮಗೆ ತಲೆ ನೋಯುತ್ತಿದ್ದರೆ ಕಾಫಿ ಕುಡೀತೀರಾ ?'' ಕೇಳಿದ. ಅವಳು ಹೂಂ ಎನ್ನುವಂತೆ ತಲೆಯಾಡಿಸಿದಳು.

''ಈಗಲೇ ಕಳಿಸ್ತೀನಿ'' ಎಂದು ಹೊರಗೆ ಬಂದ. ನರ್ಸು ತಂದಿತ್ತ ಕಾಫಿ ಕುಡಿದು ಹೊದ್ದು ಮಲಗಿದಳು. ತುಟಿಯಂಚಿನಲ್ಲಿ ವಕ್ರನಗೆ ಮೂಡಿತ್ತು.

ನಳಿನಿಯ ಬಗ್ಗೆ ರೂಪಿಣಿಗೆ ಎಲ್ಲಾ ತಿಳಿದಿದೆ. ಅವಳು ಮಾತನಾಡುವುದನ್ನೆಲ್ಲಾ ರೆಕಾರ್ಡ್ ಮಾಡಿಕೊಂಡರೆ ರಹಸ್ಯ ತಿಳಿಯಬಹುದು ಎಂದುಕೊಂಡ. ಊಟಕ್ಕೆ ಕುಳಿತಾಗ, ಯಾಕೋ ಊಟ ರುಚಿಸಲಿಲ್ಲ. ನಳಿನಿ ನನ್ನ ತಾಯಿ ಎನ್ನುವ ವಿಷಯ ಇವಳಿಗೆ ಗೊತ್ತಿರಬಹುದೇ ಎನ್ನುವ ಅನಿಸಿಕೆ ಇಷ್ಟವಾಗಲಿಲ್ಲ. ನಳಿನಿ

ನನ್ನ ತಾಯಿ ಅಂತ ಯಾರಿಗೂ ತಿಳಿಯಬಾರದೆಂದೆನಿಸಿತ್ತು. ಇವಳಿಗೆ ನಳಿನಿಯ ವಿಚಾರ ತಿಳಿದಿರುವುದಾದರೆ ತಾತ ಶ್ರೀಕಂಠಯ್ಯನ ವಿಚಾರವೂ ತಿಳಿದಿರ ಬಹುದು. ತಾತ ಹಣವನ್ನು ಎಲ್ಲಿಟ್ಟಿರಬಹುದು ಅಂತ ತಿಳಿದಿರಬಹುದೇ..? ಕೇಳುವುದೋ ಬೇಡವೋ... ತಾತನ ಆ ಹಣಕ್ಕೆ ನಾನೇ ವಾರಸುದಾರ ಅಂತ ತಿಳಿದರೆ ಏನನ್ನಿಸಬಹುದು ? ಹೀಗೇ ಅಸಂಬದ್ಧ ಆಲೋಚನೆಗಳು ಅವನನ್ನು ಮುತ್ತಿಕೊಂಡವು. ಅರ್ಧ ಊಟಕ್ಕೇ ಎದ್ದು ಬಿಟ್ಟ.

ಮಾರನೇ ದಿನ ಅವನನ್ನು ಕಂಡೊಡನೆ ಅಸಮಾದಾನದಿಂದ ಉಸುರಿದಳು. ''ನನಗೆ ಇಲ್ಲಿ ಹೊತ್ತೇ ಹೋಗುತ್ತಿಲ್ಲ. ಸಿಟೀಲೇ ಎಲ್ಲಾದ್ರೂ ಇದ್ದಿದ್ರೆ ಇಷ್ಟು ಬೇಜಾರಾಗುತ್ತಿರಲಿಲ್ಲ.''

''ಸಿಟೀಲಿ ಎಲ್ಲಿರ್ತೀರಿ ? ನಿಮ್ಮ ಜೊತೆಗೆ ಯಾರಿರುತ್ತಾರೆ ?''

''ಯಾರಾದ್ರೂ ಕೆಲಸದವರನ್ನು, ಅಡಿಗೆಯವರನ್ನು ಇಟ್ಟುಕ್ಕೊಳ್ತೀನಿ. ಆದರೆ ಇದಕ್ಕೆಲ್ಲ ಪೃಥ್ವಿ ನನಗೆ ಹಣ ಕೊಟ್ಟರೆ ಸುಲಭವಾಗುತ್ತೆ...''

''ಅವನು ಹಣ ಕೊಡದಿದ್ದರೆ...?''

''ಹಾಗೇಕೆ ಹೇಳ್ತೀರಿ ? ನಾನು ಕಂಪ್ಲೇಂಟ್ ವಾಪಸ್ಸು ತಗೊಂಡರೆ, ಸಾಕಷ್ಟು ಹಣಾನ ನನಗೆ ಕೊಡ್ತೀನಿ ಅಂತ ನಿಮಗೆ ಹೇಳಿರಬೇಕಲ್ವಾ ?'' ಈ ವಿಷಯ ವಿಶ್ವನಿಗೆ ಅಚ್ಚ ಹೊಸದು. ನಿಜ್ಜಕೂ ಈ ಹುಡುಗಿ ಅತಿ ಚತುರೆ ಎಂದಕೊಂಡ.

''ನಿಮ್ಮ ಮನಸ್ಸಿನಲ್ಲಿ ಏನೇನೋ ಆಲೋಚನೆಗಳಿವೆ. ಅದನ್ನೆಲ್ಲ ಹೇಳಿಕೊಳ್ಳಲಾಗದೇ ಏನೇನೋ ಮಾತನಾಡ್ತೀರಿ. ಅದನ್ನೆಲ್ಲ ನಿಮ್ಮ ಆಪ್ತರ ಬಳಿ ಹೇಳಿಕೊಳ್ಳಿ. ಇಲ್ಲದಿದ್ದರೆ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಆಗ ನಿಮಗೇ ಕಷ್ಟ...''

''ಅಂಥ ಆಪ್ತರು ನನಗೆ ಯಾರೂ ಇಲ್ಲವಲ್ಲ....''

''ಪೃಥ್ವಿ, ನಳಿನಿ ಅಥವಾ ನಾನು....''

''ಪೃಥ್ವಿ ನನ್ನನ್ನು ದ್ವೇಷಿಸುತ್ತಾನೆ... ನಳಿನೀನ ನಾನು ಇಷ್ಟಪಡುವುದಿಲ್ಲ. ಇನ್ನು ನೀವು... ನೀವೂ ವಿಶ್ವನ ಸ್ನೇಹಿತ.... ನಾನು ನಿಮ್ಮನ್ನು ಹೇಗೆ ನಂಬಲಿ ? ನೀವ್ಯಾರೂ ನನ್ನ ಆಪ್ತರಾಗಲು ಸಾಧ್ಯವಿಲ್ಲ.''

''ಪರವಾಗಿಲ್ಲ ನನ್ನೊಡನೆ ಹೇಳಿ. ನನ್ನಿಂದಾಗುವುದಾದರೆ ನಿಮಗೆ

ಸಹಾಯ ಮಾಡ್ತೀನಿ. ಎಲ್ಲರಿಗೂ ಸಹಾಯ ಮಾಡುವುದು ನನ್ನ ಧರ್ಮ.''

''ಖಂಡಿತಾ ಸಹಾಯ ಮಾಡ್ತೀರಾ ? ಆಮೇಲೆ ಎಲ್ಲ ಅನ್ನಬಾರದು.''

''ಮೊದಲು ಏನು ವಿಚಾರ ಅಂತ ಹೇಳಿ.... ನೋಡೋಣ...'' ವಿಶ್ವ ಆಶ್ವಾಸನೆ ನೀಡುವವನಂತೆ, ಅವಳ ಕೈ ಹಿಡಿದ. ಅವಳು ಬಿಸಿಯಾದಳು.

''ಪೃಥ್ವಿ ನನ್ನನ್ನು ಮದುವೆಯಾಗಬೇಕು. ನಳಿನಿಯ ಸುಖ ಸಂತೋಷ ಗಳೆಲ್ಲ ಹಾಳಾಗಬೇಕು. ಇದು ನನ್ನ ಆಸೆ. ಇದು ನೆರವೇರುತ್ತಾ ? ನನಗೆ ಸಹಾಯ ಮಾಡ್ತೀರಾ ?'' ಒಂದು ಗಳಿಗೆ ತಡೆದ ವಿಶ್ವ ನುಡಿದ.

''ಇದೆಲ್ಲ ನಿಮ್ಮ ಮಾತಲ್ಲ ರೂಪಿಣಿ. ನಿಮಗೆ ಯಾರೋ ಹೀಗೆ ಮಾಡು ಅಂತ ಹೇಳಿಕೊಟ್ಟಿದಾರೆ. ಇಲ್ಲದಿದ್ದರೆ... ನೀವು ಹಾಗಲ್ಲ... ಅಂತ. ನನಗನ್ನಿಸುತ್ತಿದೆ... ನಿಜ ಏನೂಂತ ನೀವು ಹೇಳಲೇಬೇಕು.''

''ಅದ್ಯಾಕೆ ಹಾಗೆ ಅನ್ನಿಸ್ತು ?''

''ನನಗೆ ಇನ್ನೊಬ್ಬರ ಮನಸ್ಸನ್ನೂ ಓದುವ ಹವ್ಯಾಸವಿದೆ. ನಿಮ್ಮನ್ನೇ ನೋಡುತ್ತಿದ್ದರೆ, ನೀವು ಆಡುವ ಮಾತನ್ನೆಲ್ಲಾ ನಿಮಗೆ ಯಾರೋ ಹೇಳಿ ಕೊಟ್ಟಿದಾರೆ ಅಂತಲೇ ಅನ್ನಿಸುತ್ತೆ. ನಿಮ್ಮ ಮನದ ಮಾತಂತೂ ಖಂಡಿತಾ ಅಲ್ಲ'' ಎಂದ ವಿಶ್ವ. ಅವಳು ಬೆವರಿದಲು. ಉಗುಳು ನುಂಗುತ್ತಾ ನುಡಿದಳು.

''ನಾನು ಅನಾಥೆಯಾಗಿದ್ದವಳು. ನನ್ನನ್ನು ಸಾಕಿಸಲಹಿದವರು ಒಬ್ಬರು ಮೇಷ್ಟ್ರು. ಅವರು ಈಗ ಬದುಕಿಲ್ಲ. ಅವರು ಯಾವುದೋ ಕೊಲೆಯ ಕೇಸಿನಲ್ಲಿ ಸಿಕ್ಕಿಹಾಕಿಕೊಂಡು, ಜೈಲು ವಾಸ ಅನುಭವಿಸಿ ಬಿಡುಗಡೆಯಾಗಿ ಬಂದಾಗ ಅವರಿಗೆ ಒಂದು ಆಘಾತ ಕಾದಿತ್ತಂತೆ. ಅವರ ಹೆಂಡತಿ, ಒಬ್ಬ ಶ್ರೀಮಂತನನ್ನು ಮದುವೆಯಾಗಿ ಹೊರಟುಹೋಗಿದ್ದಳಂತೆ. ಆ ಹೆಂಗಸು ಯಾರಿರಬಹುದು ಅಂತ ಹೇಳಬಲ್ಲಿರಾ ?''

ಈಗ ಬೆವರುವ ಸರದಿ ವಿಶ್ವನದಾಗಿತ್ತು. ''ಅವಳೇ ನಳಿನಿ. ಆ ಮೇಷ್ಟ್ರಿಗೆ ದ್ರೋಹ ಮಾಡಿ... ಪೃಥ್ವಿಯ ತಂದೆಯನ್ನು ಮದುವೆಯಾಗಿ ಬಂದವಳು. ಆ ಮೇಷ್ಟ್ರ ಋಣ ತೀರಿಸಬೇಕಾದರೆ ನಾನು ನಳಿನಿಗೆ ಚುರುಕು ಮುಟ್ಟಿಸಲೇಬೇಕು. ಪೃಥ್ವಿಯನ್ನು ಮದುವೆಯಾಗಿ ಆ ಶ್ರೀಮಂತಿಕೆಗೆ ನಾನು ಯಜಮಾನಿ ಯಾಗಬೇಕು. ನಳಿನಿ ಹಾಗೂ ಅವಳ ಮಕ್ಕಳು ಆ ಮನೆಯಿಂದ ಹೊರಗೆ ಹೋಗಬೇಕು. ಇದೇ ನನ್ನ ಆಸೆ. ಆಗಲೇ ನನ್ನ ಸಾಕುತಂದೆಯ ಆತ್ಮಕ್ಕೆ ಶಾಂತಿ ಸಿಗುವುದು. ಇದು ನೆರವೇರಬೇಕು.''

"ಈ ಮಾರ್ಗ ತಪ್ಪಲ್ವಾ ನಳಿನಿ ? ತಪ್ಪೆಲ್ಲಾ ನಳಿನಿಯದೇ ಅನ್ನೋ ತರಹ ಮಾತಾಡ್ತಿದೀರಲ್ಲ. ಆ ಮೇಷ್ಟ್ರದ್ದೇ ತಪ್ಪಿರಬಹುದಲ್ವಾ ? ಅವರಿಗೇಕೆ ? ಜೈಲು ಶಿಕ್ಷೆಯಾಗಿತ್ತು ಅಂತ ಗೊತ್ತಾ? ಎಷ್ಟು ವರ್ಷ ಜೈಲಿನಲ್ಲಿದ್ರಂತೆ ?"

"ಆ ಮೇಷ್ಟ್ರದ್ದು ತಪ್ಪಿಲ್ಲ ಅಂತ ನನಗೆ ಗೊತ್ತು. ಅವರು ತುಂಬಾ ಒಳ್ಳೆಯವರಾಗಿದ್ದರು. ಅವರು ಹತ್ತಾರು ಹುಡುಗರಿಗೆ ಪಾಠ ಹೇಳಿಕೊಟ್ಟು ಸಂಪಾದಿಸುತ್ತಿದ್ದರು. ನನ್ನ ಎಷ್ಟೋ ಆಸೆಗಳಿಗೆ ಹಣವಿಲ್ಲದೇ ಅಳುವಾಗ ಸಮಾಧಾನ ಹೇಳಿ ಹೇಗಾದರೂ ಸರಿ, ನೀನು ಶ್ರೀಮಂತನನ್ನು ಮದುವೆಯಾಗ ಬೇಕು. ನಿನಗೆ ಆ ಮಾರ್ಗ ನನಗೆ ಸುಲಭ ಅಂತನ್ನಿಸ್ತು. ಅವರಿವರ ಕಾಲು ಹಿಡಿದು ಪೃಥ್ವಿಯ ಆಫೀಸಿನಲ್ಲಿ ಕೆಲಸ ಗಿಟ್ಟಿಸಿದೆ. ನನಗೆ ರೂಪ ಇಲ್ವಾ ? ಯೌವನ ಇಲ್ವಾ ? ಪೃಥ್ವಿಯನ್ನು ಆಕರ್ಷಿಸಲು ನೋಡಿದೆ. ಆದರೆ ಅವನೋ.... ದೂರ್ವಾಸನ ತರಹ ಏನೇನೋ ಹೆದರಿಸ್ತಾನೆ. ಈ ಆಕ್ಸಿಡೆಂಟ್ ಆಗದೇ ಇದ್ದಿದ್ದರೇ... ಛೆ, ಹೀಗೆ ಸೊಂಟ ಮುರಿದುಕೊಂಡು ಬಿದ್ದಿರುವ ಸ್ಥಿತಿ ಬರುತ್ತಿರಲಿಲ್ಲ... ಆಗ ಏನು ಮಾಡ್ತಿದ್ದೆ ಗೊತ್ತಾ ?"

"ನಿಮ್ಮನ್ನು ನೋಡಿದರೆ ಒಳ್ಳೆಯವರ ತರಹ ಕಾಣ್ತೀರಿ.. ಈಗ ನೀವು ಮಾಡುತ್ತಿರುವುದೆಲ್ಲಾ ತಪ್ಪಲ್ವಾ ?"

"ಒಳ್ಳೇತನ, ತಪ್ಪು ಇದೆಲ್ಲ ನನಗೆ ಅರ್ಥವಾಗುಲ್ಲ. ಪೃಥ್ವಿ ನನ್ನ ಮದುವೆಯಾದರೆ ಖಂಡಿತಾ ಎಲ್ಲಾ ಸರಿ ಹೋಗುತ್ತದೆ..."

"ಇಲ್ಲ, ರೂಪಿಣಿ, ಆಗ ಯಾವುದೂ ಸರಿ ಹೋಗುವುದಿಲ್ಲ. ಈ ಬಲವಂತದ ಮದುವೆಗೆ ಪೃಥ್ವಿ ಒಪ್ಪುವುದಿಲ್ಲ. ಒಂದು ವೇಳೆ ಒಪ್ಪಿದರೂ ನೀವು ನಳಿನಿಗೆ ಹಿಂಸೆ ಕೊಟ್ಟರೆ ಅದನ್ನು ಪೃಥ್ವಿ ಸಹಿಸುವುದಿಲ್ಲ. ಆಗ ಇನ್ನೂ ರಾದ್ಧಾಂತವಾಗುತ್ತದೆ."

"ಅದೆಲ್ಲ ನನಗೆ ಗೊತ್ತಿಲ್ಲ. ನಾನು ಮೇಷ್ಟ್ರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು. ನನಗೆ ಸಹಾಯ ಮಾಡ್ತೀನಿ ಅಂತ ಹೇಳಿ, ಈಗ ಉಪದೇಶ ಮಾಡ್ತಿದೀರಿ..." ಹಂಗಿಸಿದಳು.

"ಒಳ್ಳೆಯ ಕೆಲಸವಾಗಿದ್ದರೆ ನಾನು ಹಿಂದೆ ಮುಂದೆ ನೋಡದೇ ಸಹಾಯ ಮಾಡ್ತಿದ್ದೆ. ಆದರೆ ಈಗ ಈ ಜಾಡು ಎತ್ತೆತ್ತಲೋ ಹೋಗ್ತಿದೆ. ಅಲ್ಲ ರೂಪಿಣಿ... ನಳಿನಿಯ ತಂದೆ ಶ್ರೀಕಂಠಯ್ಯ ಅಂತ ಒಬ್ಬರು ಇದ್ದರು... ಅವರು ಎಲ್ಲಿದ್ದರು ಅನ್ನೋ ವಿಷಯ ನಿಮಗೆ ತಿಳಿದಿರಬಹುದು ಅಲ್ವಾ ?"

''ಇಲ್ಲವಲ್ಲ. ನಾನೆಂದೂ ಅವರನ್ನು ನೋಡ್ಲೇ ಇಲ್ಲ.'' ಕಣ್ಣರಳಿಸಿದಳು.

''ಹಾಗಾದ್ರೆ... ಆ ಮೇಷ್ಟ್ರು ನಿನಗೆ ಅವರ ವಿಷಯವನ್ನು ತಿಳಿಸಿಲ್ಲ. ಬಹುಶಃ ಈ ಎಲ್ಲಾ ಗೊಂದಲಕ್ಕೂ ಅವರೇ ಕಾರಣ ಅಂತನ್ನಿಸುತ್ತೆ... ಅವರ ಬಗ್ಗೆ ಆ ಮೇಷ್ಟ್ರು ನಿನಗೇಕೆ ತಿಳಿಸಲಿಲ್ಲವೋ ನನಗೆ ಆಶ್ಚರ್ಯವಾಗುತ್ತೆ. ಆ ಶ್ರೀಕಂಠಯ್ಯನ ಹತ್ತಿರ ಲಕ್ಷಾಂತರ ರೂಪಾಯಿಗಳಿದ್ದವು. ಅದನ್ನೆಲ್ಲ ಅವರ ಮೊಮ್ಮಗನ ಹೆಸರಿಗೆ ಬರೆದುಹೋಗಿದ್ದಾರೆ. ಆದರೆ ಆ ಹಣ ಎಲ್ಲಿದೆ ಅಂತ ಅವನಿಗೆ ತಿಳಿಯದು. ಆ ಹಣವೆಲ್ಲ ಸಿಕ್ಕರೆ ಅವನೂ ಪೃಥ್ವಿಯಂತೆ ಭಾರೀ ಶ್ರೀಮಂತನಾಗುತ್ತಾನೆ...'' ರೂಪಿಣಿಯನ್ನೇ ಆಸೆ ಕಣ್ಣುಗಳಿಂದ ನೋಡಿದ.

ರೂಪಿಣಿ ನಕ್ಕಳು.

''ನಳಿನಿಯ ಮಗ ! ಈ ಹೊಸ ಸೃಷ್ಟಿ ನಿಮ್ಮದಾ ?''

''ಹೊಸ ಸೃಷ್ಟಿ ಏನಲ್ಲ... ಹಳೆಯದೇ... ಬಹುಶಃ ನೀವು ಹುಟ್ಟುವ ಮೊದಲೇ ಸೃಷ್ಟಿಯಾದವನು...''

''ಅವನು ಯಾರಾದರೆ ನನಗೇನು ? ಅವನ ತಾತನ ಆಸ್ತಿ ಅವನಿಗೆ ಸಿಗುತ್ತೆ ಅದರಿಂದ ನನಗೇನು ಲಾಭ ?''

''ನಿನಗೆ ಒಪ್ಪಿಗೆಯಾದರೆ ನಿನಗೇ ಲಾಭ...''

''ನನ್ನ ಒಪ್ಪಿಗೆಗೂ, ಯಾವುದೋ ತಾತನ ಆಸ್ತಿಗೂ, ನಿಮ್ಮ ಈ ಮಾತಿಗೂ ಏನು ಸಂಬಂಧ ಅಂತ ನನಗೆ ಅರ್ಥವಾಗ್ತಿಲ್ಲ. ಏನು ವಿಷಯ ಅಂತ ನಾನು ಹೇಳುವ ಹಾಗೆ ನೇರವಾಗಿ ಹೇಳಿಬಿಡಿ...''

''ಸರಿ ಕೇಳು...''ವಿಶ್ವ ಗಂಟಲನ್ನು ಸರಿಪಡಿಸಿಕೊಂಡ... ''ಆ ನಿಮ್ಮ ಮೇಷ್ಟ್ರು... ಅವರನ್ನು ನಾನೆಂದೂ ನೋಡಲೇ ಇಲ್ಲ.... ಆದರೆ ದುರದೃಷ್ಟವಶಾತ್ ನಾನು ಅವರ ಮಗ... ನಳಿನಿ ನನ್ನ ತಾಯಿ.... ಶ್ರೀಕಂಠಯ್ಯ ನನ್ನ ತಾತ. ಆದರೆ ಇವರೆಲ್ಲ ನನ್ನ ಹಿರಿಯರು ಅಂತ ಹೇಳಿಕೊಳ್ಳೋಕೇ ನನಗೆ ಹೀನಾಯವಾಗುತ್ತೆ. ಏಕೆ ಗೊತ್ತಾ ? ಆ ಶ್ರೀಕಂಠಯ್ಯ ತಮ್ಮ ಸ್ವಂತ ಮಗಳಿಗೇ ಮೋಸ ಮಾಡಿ ಪೃಥ್ವಿಯ ತಾತನಿಂದ ಲಕ್ಷಾಂತರ ರೂಪಾಯಿಗಳನ್ನು ಪಡೆದು ಅದನ್ನು ಎಲ್ಲೋ ಇಟ್ಟಿದಾರೆ. ಆದರೆ ಅದು ಎಲ್ಲಿದೆ ಅಂತ ನನಗೆ ತಿಳಿಯದು. ಅಲ್ಲದೇ ಆ ಹಣದ ಮೇಲೆ ನನಗೆ ಯಾವ ಆಸಕ್ತಿಯೂ ಇರಲಿಲ್ಲ. ಈ ವಿಷಯ ತಿಳಿದದ್ದೂ ನನಗೆ ಪೃಥ್ವಿಯಿಂದಲೇ... ಅಕಸ್ಮಾತ್ತಾಗಿ ನನಗೆ ಪೃಥ್ವಿಯ ಸ್ನೇಹವಾಯಿತು. ಅವನ ಒಳ್ಳೇತನ ನನಗೆ ಹಿಡಿಸಿತು. ಅವನು ತನ್ನ ಚಿಕ್ಕಮ್ಮನನ್ನು

ತುಂಬಾ ಗೌರವಿಸುತ್ತಾನೆ. ಆ ಚಿಕ್ಕಮ್ಮನ ಮೊದಲ ಮಗ ಅಂತ ತಿಳಿದರೂ ನನ್ನ ಮೇಲೆ ಸ್ನೇಹವಿದೆ. ಶ್ರೀಮಂತನಾದರೂ ಗರ್ವವಿಲ್ಲ. ನನಗೂ ಅವನಂತೆ ಇರಬೇಕು ಅನ್ನುವ ಆಸೆ ಇತ್ತು. ಆದರೆ ಹಣವಿರಲಿಲ್ಲ. ತಾತ ನನಗಾಗಿ ಹಣ ಬಿಟ್ಟು ಹೋಗಿದಾರೆ ಅಂತ ತಿಳಿದದ್ದೂ ನನಗೆ ಖುಷಿ ನೀಡಿರಲಿಲ್ಲ. ಆದರೆ... ಈಗ ನನಗೆ ಹಣದ ಅಗತ್ಯವಿದೆ. ಆ ಮೇಷ್ಟ್ರು ಶ್ರೀಕಂಠಯ್ಯನವರ ವಿಷಯ ಏನಾದ್ರೂ ಹೇಳಿದ್ರಾ ? ಗೊತ್ತಿದ್ದರೆ ಹೇಳಿ... ನಾನು ನಿಮಗೂ ಸ್ವಲ್ಪ ಹಣ ಕೊಡ್ತೀನಿ.'' ರೂಪಿಣಿ ವಕ್ರವಾಗಿ ನಕ್ಕಳು.

''ನೋಡಿದ್ರಾ... ಹಣ... ಶ್ರೀಮಂತಿಕೆ ಅಂತ ಅಂದರೆ ಎಂಥೋರ ಆಸೇನೂ ಅರಳುತ್ತೆ... ಇಲ್ಲ ಅವರೆಂದೂ ನಿಮ್ಮ ತಾತನ ವಿಷಯವನ್ನುಹೇಳಿದ ನೆನೆಪಿಲ್ಲ ನನಗೆ. ಅವರು ನಿಮಗೇ ಅಂತ ಹಣವನ್ನು ಬಿಟ್ಟು ಹೋಗಿದಾರೆ ಅಂತ ತಿಳಿದದ್ದು ಹೇಗೆ ? ಅವರಿಗೇ ಆ ವಿಳಾಸ ಗೊತ್ತಿರುತ್ತೆ.''

''ಇಲ್ಲ ಆ ವಿಷಯ ಪೃಥ್ವಿಯ ತಾತನಿಗೆ ತಿಳಿದಿತ್ತು. ಪೃಥ್ವಿಗೆ ತಿಳಿದಿದ್ದರೆ ನನಗೆ ತಿಳಿಸದೇ ಇರುತ್ತಿರಲಿಲ್ಲ.''

''ಈಗಲೂ ಹೇಳಿ ನೋಡಿ... ವಿಳಾಸ ಗೊತ್ತಾಗಬಹುದು''

''ಎಲ್ಲಾ ಸರಿ ಹೋಗಿ ನನಗೆ ಹಣ ಸಿಕ್ಕರೆ, ನಾನು ಅರ್ಧಭಾಗ ನಿಮಗೆ ಕೊಡ್ತೀನಿ''

''ನನಗಾ ? ನನಗೇಕೆ ? ಅದು ನಿಮಗೆ ಸೇರಿದ್ದು....''

''ನ್ಯಾಯವಾಗಿ ಅದು ಪೃಥ್ವಿಗೆ, ಅವನ ತಮ್ಮಂದಿರಿಗೆ ಸೇರಬೇಕಾದ ಹಣ. ದುರಾಸೆಯಿಂದ ನನ್ನ ತಾತ ಗಳಿಸಿದ ಹಣ. ನನಗೆ ಹಕ್ಕೇ ಇಲ್ಲ.''

''ಹಕ್ಕು ಇಲ್ಲ ; ಹಣವೂ ಇಲ್ಲ... ಅದನ್ನು ಕಟ್ಟಿಕೊಂಡು ಏನಾಗಬೇಕಾಗಿದೆ ? ಏನಿದರ ಅರ್ಥ ?''

''ಹಾಗೇ ಈ ಮಾತಿನ ಅರ್ಥವೆಲ್ಲಾ... ತಮಗೇ ಹಕ್ಕು ಇಲ್ಲದ ಹಣವನ್ನು ಗಳಿಸಿ, ನಮ್ಮ ತಾತ ಎಲ್ಲೋ ಮುಚ್ಚಿಟ್ಟರೆ ಅದಕ್ಕೆ ನನ್ನ ಹಕ್ಕು ಎಲ್ಲಿ ? ಆ ಹಣದಿಂದ ಎಲ್ಲರಿಗೂ ಅನ್ಯಾಯವಾಯಿತು. ನಳಿನಿ, ಶ್ರೀಕಂಠಯ್ಯ, ನಿಮ್ಮ ಮೇಷ್ಟ್ರು ಎಲ್ಲರೂ ಅವರವರಿಗೆ ಆದ ಅನ್ಯಾಯದ ಬಗ್ಗೆ ಮಾತ್ರ ಯೋಚಿಸಿದ್ದಾರೆ. ಆದರೆ ಪೃಥ್ವಿ...? ಒಂದು ದಿನವೂ ತನ್ನ ತಂದೆ ಮರುಮದುವೆಯಾಗಿ ತನಗೆ ದ್ರೋಹವಾಯಿತು ಅಂತ ಮಾತನಾಡಿಲ್ಲ. ತನ್ನ ತಾತ ನನ್ನ ತಾತನಿಗೆ ಹಣ ಕೊಟ್ಟರು ಅಂತ ಪರಿತಾಪ ಪಟ್ಟಿಲ್ಲ. ಈ ವಿಷಯವನ್ನು ನಳಿನಿಗೆ ತಿಳಿಸಿಲ್ಲ.

ಯಾಕೆ ಗೊತ್ತಾ? ಚಿಕ್ಕಮ್ಮನ ಮನಸ್ಸಿಗೆ ನೋವಾಗುತ್ತೆ ಅಂತ. ಇಂಥ ಒಳ್ಳೆಯ ಹುಡುಗನಿಗೆ ತೊಂದರೆ ಕೊಡಲು ಯಾರಿಗೂ ಮನಸ್ಸು ಬರುಲ್ಲ... ಆದರೆ ನೀವು ...? ನೀವು ಮಾಡಲಿರುವುದು ನ್ಯಾಯವಲ್ಲ.''

ನ್ಯಾಯ ಅನ್ಯಾಯದ ಉಪದೇಶ ತನಗೇಕೆ ? ವಿಶ್ವನ ಮಾತುಗಳನ್ನು ಕೇಳಿದರೆ ತಾನು ನಿರ್ಗತಿಕಳಂತೆ ಬಾಳಬೇಕಾಗುತ್ತದೆ... ಎಂದುಕೊಂಡು ಕೆಟ್ಟ ಮುಖ ಮಾಡಿದಳು. ಮೆಲ್ಲಗೆ ಆಕಳಿಸಿದಳು. ಅವಳ ಮೌನವನ್ನು ಕಂಡು, ಅವಳಿಗೆ ಯೋಚಿಸಲು ಅವಕಾಶ ಕೊಟ್ಟು ವಿಶ್ವ ಹೊರಗೆ ಂದ.

ಒಂದೆರಡು ದಿನಗಳು ಕಳೆಯುವಷ್ಟರಲ್ಲಿ ರೂಪಿಣಿ ಅಲ್ಲಿಯ ದಿನಚರಿಗಳಿಗೆ ಹೊಂದಿಕೊಂಡಳು. ಯಾವ ಕೆಲಸವಿಲ್ಲ, ಓಡಾಟವಿಲ್ಲ. ಮಲಗುವುದೊಂದು ಮಾತ್ರ ಬೇಸರದ ಕೆಲಸ. ನರ್ಸುಗಳು ಸಮಯಕ್ಕೆ ಸರಿಯಾಗಿ ಎಲ್ಲ ಕೆಲಸವನ್ನೂ ನಿರ್ವಹಿಸುತ್ತಿದ್ದರು. ವಿಶ್ವ ಆಗಾಗ್ಗೆ ಬಂದು ವಿಚಾರಿಸಿಕೊಂಡು ಹೋಗುತ್ತಿದ್ದ. ಪೃಥ್ವಿ ಬಂದಿಲ್ಲ ಎನ್ನುವುದು ತಿಳಿದದ್ದೇ. ತನಗಾಗಿ ಅವನು ಬರುವುದಿಲ್ಲ ಎನ್ನುವುದು ತಿಳಿದದ್ದೇ. ಆಗೆಲ್ಲ ಅವನಿಗಾಗಿ ಹಂಬಲಿಸುವುದು ಮೂರ್ಖತನವೆಂದೆನಿಸುತ್ತಿತ್ತು. ತಾನೇ ಮೂರ್ಖಳು. ಪೃಥ್ವಿಯ ತಪ್ಪು ಏನೂ ಇಲ್ಲ. ನಳಿನಿಯ ತಪ್ಪನ್ನು ಅರಿತೂ ವಿಶ್ವ ಸುಮ್ಮನಿರುವಾಗ, ಕೇವಲ ಆ ಮೇಷ್ಟ್ರ ಮಾತನ್ನು ಕೇಳಿಕೊಂಡು, ತಾನು ಇಷ್ಟು ಮುಂದುವರಿಯಬಾರದಾಗಿತ್ತು ಅಂತೆನ್ನಿಸುತ್ತಿತ್ತು. ಆದರೆ ತಾನೀಗ ಹಿಂಜರಿದರೆ,ತನ್ನ ಬದುಕು ನಡೆಯುವುದಾದರೂ ಹೇಗೆ ? ಎಂದೆನಿಸುತ್ತಿತ್ತು. ಈ ಚಿಂತನೆಗಳಿಂದ ಮನದ ನೆಮ್ಮದಿ ಕೆಡುತ್ತಿತ್ತು.

ಎರಡು ಮೂರು ದಿನಗಳ ದೀರ್ಘವಾದ ಆಲೋಚನೆಯ ನಂತರ ಒಂದು ತೀರ್ಮಾನಕ್ಕೆ ಬಂದಳು. ವಿಶ್ವನಿಗೆ ಹೇಳಿದಳು. ''ನಾನು ಕೊಟ್ಟಿರುವ ಕಂಪ್ಲೇಂಟನ್ನು ವಾಪಸ್ಸು ತಗೋತೀನಿ. ಆದರೆ ಕೆಲವು ವಿಷಯಗಳಿಂದ ನನಗೆ ನಿರಾಸೆಯಾಗಿದೆ. ಆದ್ದರಿಂದ ನಾನು ಈ ಊರಿನಿಂದ ಹೊರಟುಹೋಗುತ್ತೇನೆ. ಆದರೆ ನನಗೀಗ ಹಣದ ಅಗತ್ಯವಿದೆ. ನೀವು ಕೊಟ್ಟಿರ್ತೀರಾ ?''

ವಿಶ್ವ ಅನುಮಾನದಿಂದ ಅವಳನ್ನೇ ನೋಡಿದ. ಮನದಲ್ಲಿ ನಾನಾ ಆಸೆಗಳು ಮೂಡಿದವು. ಆದರೆ ಬಾಯಿಬಿಟ್ಟು ಹೇಳಲು ಹಿಂಜರಿದ.

''ನನ್ನ ಹತ್ತಿರ ತುಂಬಾ ಹಣವಿಲ್ಲ ರೂಪಿಣಿ. ಆದರೆ... ಈಗ ಸದ್ಯಕ್ಕೆ ನೀವು ಇಲ್ಲಿಂದ ಅಲುಗಾಡುವಂತಿಲ್ಲ. ಇನ್ನೆರಡು ವಾರ ಕಳೆದ ಮೇಲೆ, ನೀವು

ಓಡಾಡುವಂತಾಗಬೇಕು. ಅಲ್ಲಿಯವರೆಗೂ ನಿಮ್ಮನ್ನು ನೋಡಿಕೊಳ್ಳುವ ಧರ್ಮ ನನ್ನದು... ಆದರೆ ಇದು ಒಬ್ಬ ಬಡವೈದ್ಯನ ಮನೆ. ಇಲ್ಲಿ ನಿಮಗೆ ಯಾವ ಆಧುನಿಕ ಸೌಲಭ್ಯವೂ ಇಲ್ಲ...''

''ಪರವಾಗಿಲ್ಲ, ನಾನು ಒಂದೊಂದಾಗಿ ಎಲ್ಲದಕ್ಕೂ ಹೊಂದಿಕೊಳ್ಳುತ್ತೇನೆ. ಇದು ನನ್ನ ಸೋಲು ಅಂತ ತಿಳಿಯಬೇಡಿ ; ಇದು ನನ್ನ ಗೆಲವು....''

ವಿಶ್ವ ನಕ್ಕು ಅವಳ ಕೆನ್ನೆ ತಟ್ಟಿದ. ಅವಳು ಮುಗುಳ್ನಕ್ಕಳು. ಅವನು ಉತ್ತೇಜನಗೊಂಡ. ಈ ರೂಪಿಣಿ ಎಂತಹ ಹೆಣ್ಣು ಇರಬಹುದು ಎಂಬುದನ್ನು ಅರಿತ. ಈ ಹುಡುಗಿಗೆ ಗಂಡಸಿನ ಅವಶ್ಯಕತೆ ಇದೆ. ಆ ಗಂಡಸು ಪೃಥ್ವಿ ಆದರೇನು ? ವಿಶ್ವ ಆದರೇನು ? ಆದರೆ ಈಗ ಅಸಹಾಯಕಳಾಗಿ ಮಲಗಿರುವವಳನ್ನು ತಾನು, ಪ್ರೀತಿ ಒಲವು ತೋರಿ, ಅವಳನ್ನು ತನ್ನ ಬಳಿಗೆ ಸೆಳೆದುಕೊಳ್ಳಬೇಕು. ತಾನಾಗಿಯೇ ಅವಳು ನನ್ನವಳಾಗಬೇಕು ಎಂದುಕೊಂಡ.

ನಾಲ್ಕು ವಾರ ಕಳೆಯುವಷ್ಟರಲ್ಲಿ ರೂಪಿಣಿಯ ಸೊಂಟದ ಮೂಳೆ ಕೂಡಿಕೊಂಡಿತ್ತು. ನರ್ಸುಗಳ ಸಹಾಯದಿಂದ ತಿರುಗಾಡುತ್ತಿದ್ದಳು. ವಿಶ್ವನ ಮನೆಗೆ ಬಂದು ಕೂರುತ್ತಿದ್ದಳು. ಅವನೊಡನೆ ಹರಟೆ ಹೊಡೆಯುತ್ತಿದ್ದಳು. ಕೋಲೂರಿಕೊಂಡು ಕೈತೋಟದಲ್ಲಿ ತಿರುಗಾಡುತ್ತಿದ್ದಳು. ಆದರೆ ಅವಳ ಮನದ ಮಂಥನ ಅವಳಿಗೇ ಅರ್ಥವಾಗುತ್ತಿರಲಿಲ್ಲ.

* * * *

ವಿಶ್ವ ಪೃಥ್ವಿಯನ್ನು ಭೇಟಿಯಾಗಿ ಅವಳು ಕಂಪ್ಲೇಂಟನ್ನು ವಾಪಸ್ಸು ತೆಗೆದುಕೊಳ್ಳುತ್ತಿರುವ ವಿಷಯವನ್ನು ತಿಳಿಸಿದ. ಪೃಥ್ವಿ ನಂಬದವನಂತೆ ಅವನನ್ನೇ ನೋಡಿದ.

''ಏನು ಜಾದು ಮಾಡಿದಿರಿ ? ಆ ಶೂರ್ಪನಖಿ ಸೀತೆಯಾಗಿ ಬಿಟ್ಟಳಲ್ಲಾ....'' ನಗುತ್ತಾ ನುಡಿದ.

''ಅದೇ ನೋಡಿ ಈ ಪೃಥ್ವಿಗೂ, ಈ ವಿಶ್ವನಿಗೂ ಇರುವ ಅಂತರ... ನೀವು ಅವಳನ್ನು ದ್ವೇಷಿಸಿದಿರಿ. ನಾನು ಅವಳನ್ನು ಒಲಿಸಿಕೊಂಡೆ''

''ಅಂದರೇ....'' ಅನುಮಾನದಿಂದ ಪ್ರಶ್ನಿಸಿದ.

''ನೀವು ಬೆದರಿಕೆ ಹಾಕಿ, ಕೆರಳುವಂತೆ ಮಾಡಿದಿರಿ. ನಾನು ವೈದ್ಯಕೀಯ ಚಿಕಿತ್ಸಾ ವಿಧಾನದಿಂದ ಅವಳ ಕೋಪ ತಾಪ ಕಡಿಮೆಯಾಗುವಂತೆ ಮಾಡಿದೆ...''

''ಎನಿವೇ, ತುಂಬಾ ಥ್ಯಾಂಕ್ಸ್ ವಿಶ್ವಾ... ಒಂದು ಸಮಸ್ಯೆ ಪರಿಹಾರವಾಯಿತು. ನಾನು ಕಾರನ್ನು ಕಳಿಸ್ತೀನಿ. ನೀವು ಅವಳನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಬನ್ನಿ. ನಾನೂ ಬೇಕಾಗಿದ್ರೆ ಬರ್ತೀನಿ'' ಎಂದು ವಿಶ್ವಾಸದಿಂದ ಕೈ ಕುಲಕಿದ.

* * * *

ವೈದ್ಯಾಲಯದ ಹೊರಗೆ ತನಗಾಗಿ ಕಾದು ನಿಂತಿದ್ದ ಕಾರನ್ನು ಕಂಡು ರೂಪಿಣಿ ಮುದಗೊಂಡಳು. ''ಓ.... ಪೃಥ್ವಿ ಬಂದಿದಾನೆ'' ಎಂದಳು.

''ಇಲ್ಲ, ಅವನು ಬಂದಿಲ್ಲ, ಕಾರನ್ನು ಕಳಿಸಿದ್ದಾನೆ, ನಿನಗಾಗಿ...'' ಎಂದ.

''ಅಂದರೇ... ನನ್ನನ್ನು ಅವನ ಮನೆಗೆ ಕರೆದುಕೊಂಡು ಹೋಗ್ತಿದೀರಾ ?...'' ಮತ್ತೆ ಉತ್ಸಾಹದಿಂದ ಕೇಳಿದಳು.

''ಮೊದಲು ಪೋಲೀಸ್ ಸ್ಟೇಷನ್‌ಗೆ ಹೋಗೋಣ. ಅಲ್ಲಿ ಪೃಥ್ವಿ ಹೇಗೆ ಹೇಳ್ತಾನೋ ಹಾಗಾಗುತ್ತೆ. ಈಗ ನಡೀರಿ...'' ಎಂದು ಅವಳೊಂದಿಗೆ ನಿಧಾನವಾಗಿ ಹೆಜ್ಜೆ ಹಾಕಿದ.

''ನನ್ನ ಸ್ವಂತ ಇಚ್ಛೆಯಿಂದ ನಾನು ಈ ಕಂಪ್ಲೇಂಟನ್ನು ವಾಪಸ್ಸು ತೆಗೆದುಕೊಳ್ಳುತ್ತಿದೀನಿ'' ಎಂದು ರೂಪಿಣಿ ಬರೆದುಕೊಟ್ಟಳು. ಇನ್‌ಸ್ಪೆಕ್ಟರ್ ಅವಳನ್ನೇ ನೋಡುತ್ತಿದ್ದ. ವಿಶ್ವನಿಗೆ ಮುಜುಗರವೆನಿಸಿತ್ತು. ಆದರೆ ಎಷ್ಟು ಹೊತ್ತಾದರೂ ಪೃಥ್ವಿ ಬರಲಿಲ್ಲ. ಎಷ್ಟು ಸೊಕ್ಕು ಇವನಿಗೆ ! ಎಂದು ತನ್ನಲ್ಲೇ ಬೈದುಕೊಂಡಳು. ಅಲ್ಲಿಂದ ಸೀದಾ ರೂಪಿಣಿಯನ್ನು ಅವಳು ಮೊದಲು ವಾಸವಾಗಿದ್ದ ಮನೆಯ ಬಳಿಗೆ ಕರೆದುಕೊಂಡು ಬಂದ.

ಯಾವುದೋ ಒಂದು ಸಣ್ಣ ರಸ್ತೆಯಲ್ಲಿದ್ದ ಒಂದು ಹಳೆಯ ಮನೆ ಮುಂದೆ ಕಾರು ನಿಂತ ಕೂಡಲೇ, ಅಲ್ಲಿ ವಾಸವಾಗಿದ್ದ ಅನೇಕರ ಕಣ್ಣು ಅತ್ತ ಹೊರಳಿತು. ಹೋ.... ಎನ್ನುತ್ತಾ ಬೀದಿಯ ಹುಡುಗರು ಕಾರಿನ ಬಳಿಗೆ ಬಂದಾಗ ರೂಪಿಣಿ ಅಸಹ್ಯಿಸಿಕೊಂಡಳು. ವಿಶ್ವ ಅವಳನ್ನೇ ನೋಡಿದ.

''ಇಂಥ ಜಾಗದಲ್ಲಿ ಇರುಕ್ಕೆ ನನಗೆ ಸುತರಾಂ ಇಷ್ಟವಿಲ್ಲ...'' ಎಂದು ಗೊಣಗಿದಳು. ವಿಶ್ವ ಏನನ್ನಾದರೂ ಹೇಳುವ ತವಕವನ್ನು ತಡೆದುಕೊಂಡ. ಒಳಗೆ ಬನ್ನಿ ಎಂದು ಅವಳು ಕರೆಯದಿದ್ದರೂ ಅವಳಿಗೆ ಇಳಿದು ಮನೆಯೊಳಗೆ

ಹೋಗಲು ಸಹಾಯ ಮಾಡಿದ. ಮನೆಯಲ್ಲಿ ಯಾರೂ ವಾಸವಾಗಿದ್ದಂತೆ ಅನ್ನಿಸಲಿಲ್ಲ. ಆದರೂ ಮನೆ ಚೊಕ್ಕಟವಾಗಿತ್ತು.

''ಇದು ಯಾರ ಮನೆ ? ಯಾರಾದರೂ ಇದಾರಾ ?'' ಕೇಳಿದ.

''ಇದು ಮೇಷ್ಟ್ರು, ನಾನು ವಾಸವಾಗಿದ್ದ ಮನೆ... ಆದರೆ ಈಗ ಅವರಿಲ್ಲ. ಈಗ ನಾವು ನಾಲ್ಕಾರು ಜನ ಹುಡುಗಿಯರು ಒಟ್ಟಾಗಿ ವಾಸವಾಗಿದ್ದೀವಿ... ಅವರುಗಳು ಎಲ್ಲೋಹೊರಗೆ ಹೋಗಿರಬಹುದು'' ಅವಳು ಸುಳ್ಳು ಹೇಳುತ್ತಿದಾಳೋ ನಿಜ ಹೇಳುತ್ತಿದಾಳೋ ಅವನಿಗೆ ತಿಳಿಯಲಿಲ್ಲ. ಆದರೆ ಕೆದಕಿ ಕೇಳಲು ಇಷ್ಟ ಪಡಲಿಲ್ಲ. ಅವಳು ತನ್ನ ಪೆಟ್ಟಿಗೆಯಿಂದ ಒಂದು ಕೈ ಗಡಿಯಾರ ವನ್ನು ತೆಗೆದು ವಿಶ್ವನ ಕೈಗಿತ್ತಳು. ''ಇದು ಮೇಷ್ಟ್ರ ಕೈ ಗಡಿಯಾರ. ಇದರ ವಾರಸುದಾರ ನೀವು. ಅವರ ನೆನಪಿಗಾಗಿ ನಿಮ್ಮ ಬಳಿ ಇರಲಿ''

ಬೆಚ್ಚಿ ಹಿಂದೆ ಸರಿದ ''ಬೇಡ ರೂಪಿಣಿ ನನಗೆ. ಅವರನ್ನು ಯಾವುದೇ ಕಾರಣಕ್ಕೂ ನೆನೆಸಿಕೊಳ್ಳುವುದಿಲ್ಲ. ಅದರಲ್ಲಿ ಯಾವ ಅರ್ಥವೂ ಇಲ್ಲ. ನೀನು ಅವರ ಬಳಿ ಇದ್ದವಳು... ಇದು ನಿನಗೇ ಸೇರಿದ್ದು...'' ಎಂದ.

ಅವಳು ಬಲವಂತ ಪಡಿಸಲಿಲ್ಲ. ''ನೀವೂ ಇಲ್ಲದಿದ್ದರೆ ನನ್ನ ಗತಿ ಏನಾಗಿ ಹೋಗುತ್ತಿತ್ತೋ... ಪೃಥ್ವಿ ಎಂಥಾ ಕಟುಕ...! ನಿಮ್ಮ ಒಳ್ಳೆಯತನಕ್ಕೆ ನಾನು ನೀವು ಹೇಳಿದಂತೆ ಕೇಳಿದೆ. ನಾನು ಊರಿಗೆ ಹೋಗುವ ಮೊದಲು ನಿಮ್ಮನ್ನು ಮತ್ತೆ ಭೇಟಿಯಾಗ್ತೀನಿ'' ಎಂದು ಹೇಳಿ ವಿಶ್ವನ ಕೈಗಳನ್ನು ಕಣ್ಣಿಗೊತ್ತಿಕೊಂಡಳು. ಅವಳ ಕಣ್ಣೀರಿನ ಹನಿ ಅವನ ಮುಂಗೈಯನ್ನು ಸೋಂಕಿತು. ಅವಳ ಭಾವುಕತೆ, ಅವಳ ಸನಿಹ ಅವನಿಗೆ ಹಿತವೆನ್ನಿಸಿತ್ತು. ತನ್ನೊಂದಿಗೆ ಇವಳ ಸ್ನೇಹ ಮುಂದುವರಿಯುವುದಿಲ್ಲ. ನನ್ನಲ್ಲಿ ಏನಿದೆ ಅಂತ ಇವಳು ನನ್ನನ್ನು ಬಯಸುತ್ತಾಳೆ ? ... ಆದರೆ ಇವಳ ಯೌವನ ಬಯಸುವ ಸುಖವನ್ನು ತಾನು ಕೊಡಬಲ್ಲೆ... ಅಂತಂದುಕೊಂಡಾಗ ಮೈಯೊಳಗೆ ನವಚೇತನ ಹರಿದಾಡಿದ ಅನುಭವ !

''ನಾನು ನಿಮ್ಮ ಒಳಿತಿಗೇ ಎಲ್ಲಾ ಮಾಡಿದ್ದು. ನನ್ನನ್ನು ನಿಮ್ಮ ಆಪ್ತ ಅಂತ ಭಾವಿಸಿ. ನನ್ನಿಂದ ನಿಮಗೆ ಏನೇ ಸಹಾಯ ಬೇಕಾಗಿದ್ದರೂ, ನನ್ನನ್ನು ಕೇಳಿ. ನನ್ನಿಂದ ಆಗದೇ ಇದ್ದರೆ ಒಳ್ಳೆಯ ಸಲಹೆಗಳನ್ನು ಕೊಡುತ್ತೇನೆ. ನೀವು ಯಾವಾಗ ಬೇಕಾದರೂ ನಮ್ಮ ಮನೆಗೆ ಬರಬಹುದು'' ಎಂದು ಹೇಳಿ ಅವಳ ಕೈಗೆ ನೂರರ ಹದಿನೈದು ನೋಟುಗಳನ್ನು ಕೊಟ್ಟ. ಅವಳು ಅನುಮಾನಿಸಿದಳು.

‘‘ನನ್ನ ಬಳಿ ಹೆಚ್ಚಿಗೆ ಹಣವಿಲ್ಲ... ಇದರಿಂದ ನಿಮ್ಮ ಊರಿಗೆ ನೀವು ಹೋಗಲು ಸಹಾಯವಾಗಬಹುದು ಅಷ್ಟೇ...’’ ಎಂದ. ಮೊದಲು ಅವಳು ನಿರಾಕರಿಸಿದರೂ ನಂತರ ತೆಗೆದುಕೊಂಡಳು.

‘‘ಹಣ ಬೇಡ ಎನ್ನುವ ಸ್ಥಿತಿಯಲ್ಲಿ ನಾನಿಲ್ಲ. ಇದನ್ನು ಸಾಲ ಅಂತ ತೆಗೆದುಕೊಳ್ತೀನಿ. ನನಗೆ ಹಣ ಸಿಕ್ಕ ಕೂಡಲೇ ವಾಪಸ್ಸು ಕೊಡ್ತೀನಿ...’’

‘‘ಪರವಾಗಿಲ್ಲ ವಾಪಸ್ಸು ಕೊಡುವ ಅಗತ್ಯವಿಲ್ಲ....’’

‘‘ಪೃಥ್ವಿ ಕೊಟ್ಟನಾ ?...’’ ತಟಕ್ಕನೆ ಕೇಳಿದಳು.

‘‘ಇಲ್ಲ, ರೂಪಿಣಿ.... ಇದು ನನ್ನ ಹಣ... ಪೃಥ್ವಿಗೆ ತಿಳಿಯದು’’

‘ಅವನ ಬಳಿ ನನಗಾಗಿ ಸುರಿಯುವಷ್ಟು ಹಣ ಇರಬಹುದು. ಆದರೆ ನನಗೆ ಅದು ಬೇಡ. ನನಗೆ ಬೇಕಾದವನು ಅವನು... ಅವನು ಮಾತ್ರ’ ಎಂದು ತನ್ನಲ್ಲೇ ಹೇಳಿಕೊಂಡು ನಗುತ್ತಾ ನುಡಿದಳು.

‘‘ನಿಮಗೆ ನಿಮ್ಮ ತಾತನ ಆಸ್ತಿಯ ಹಣ ಸಿಕ್ಕಿದಾಗ ನನಗೆ ಅರ್ಧ ಭಾಗ ಕೊಡುವುದನ್ನು ಮಾತ್ರ ಮರೆಯಬೇಡಿ...’’ ವಿಶ್ವ ತಲೆಯಾಡಿಸಿದ.

‘‘ನಾನಿನ್ನು ಬರಲಾ ?...’’ ಎಂದು ಹೊರಟ. ಅವಳು ಮುಗುಳ್ನಕ್ಕು ಹೂಂ ಅಂದಳು. ಅವನಿಗೆ ನಿರಾಸೆಯಾಗಿತ್ತು. ಮತ್ತೊಮ್ಮೆ ಬನ್ನಿ ಎಂದು ಸಹ ಕರೆಯಲಿಲ್ಲವಲ್ಲ ಅಂತಂದುಕೊಂಡ.

ಅವಳ ಮನೆಯಿಂದ ಸೀದಾ ಪೃಥ್ವಿಯ ಆಫೀಸಿಗೆ ಬಂದ. ಪೃಥ್ವಿ ಮನೆಗೆ ಹೋಗಲು ಕಾರಿಗಾಗಿ ಕಾಯುತ್ತಿದ್ದ.

‘‘ಊಟಕ್ಕೆ ಮನೆಗೆ ಹೋಗ್ತಾ ಇದೀನಿ. ಅಲ್ಲಿಗೇ ಬನ್ನಿ... ಒಟ್ಟಿಗೇ ಕೂತು ಊಟ ಮಾಡುತ್ತಾ ಮಾತನಾಡೋಣ’’ ಎಂದ ಪೃಥ್ವಿ. ವಿಶ್ವ ಇಲ್ಲ ಎನ್ನಲಿಲ್ಲ.

ಪೃಥ್ವಿಯೊಡನೆ ಇದ್ದ ವಿಶ್ವನನ್ನು ಕಂಡು ನಳಿನಿಗೆ ಆಶ್ಚರ್ಯವೂ ಆಯಿತು. ದಿಗಿಲೂ ಆಯಿತು. ಇದ್ದಕ್ಕಿದ್ದಂತೆ ಇಬ್ಬರೂ ಬರುತ್ತಿದ್ದಾರೆ. ಯಾರಿಗೆ ಏನಾಗಿರಬಹುದು ? ಇಬ್ಬರಲ್ಲಿ ಯಾರಿಗೆ ಏನೇ ಆಗಿದ್ದರೂ, ತನಗೆ ದುಃಖವೇ. ಇಬ್ಬರೂ ತನ್ನ ಮಕ್ಕಳೇ... ಒಬ್ಬ ಸ್ವಂತ ಮಗ, ಇನ್ನೊಬ್ಬ ಸ್ವಂತ ಮಗನಿಗಿಂತ ಹೆಚ್ಚು. ಆದರೆ ಇಬ್ಬರಲ್ಲೂ ತನಗೆ ಹೆಚ್ಚು ಸಲುಗೆಯಿಲ್ಲ. ಈಗ ಹೇಗೆ ಕೇಳುವುದು ? ಏನಾದರೂ ಕೇಳಿದರೆ, ತನ್ನನ್ನೇ ತಪ್ಪಾಗಿ ಭಾವಿಸಿದರೇ ? ಒಳಮನೆಯಲ್ಲಿ ಕೂತಿದ್ದ ನಳಿನಿಯನ್ನು ಕಂಡು ಇಬ್ಬರೂ ಹಾಗೇ ನಿಂತರು.

"ವಿಶ್ವ ಇವತ್ತು ನಮ್ಮ ಮನೆಯಲ್ಲೇ ಊಟ ಮಾಡುತ್ತಾರೆ... ಅಡಿಗೆಯವರಿಗೆ ತಟ್ಟೆ ಹಾಕಿ ಬಡಿಸಲು ಹೇಳ್ತೀರಾ ?" ಪೃಥ್ವಿ ಚಿಕ್ಕಮ್ಮನನ್ನೇ ಕುರಿತು ಹೇಳಿದಾಗ ನಳಿನಿಗೆ ಏನೋ ಅಚ್ಚರಿ. ಹಾಗೇ ಸಂತೋಷ. ವಿಶ್ವ ಹೀಗೇ ಆಗಾಗ್ಗೆ ಬರುತ್ತಿದ್ದರೆ ಪೃಥ್ವಿಯೂ ಗೆಲುವಾಗುತ್ತಾನೆ. ವಿಶ್ವನೂ ಸರಿ ಹೋಗಬಹುದು ಅಂತ ಒಟ್ಟಿಗೇ ಯೋಚಿಸಿದಳು. ಅಡಿಗೆಮನೆಯ ಕಡೆಗೆ ತಿರುಗುವ ಮುನ್ನ ವಿಶ್ವ ಮಾತನಾಡಬಹುದು ಎಂದು ಕಾದಳು. ಆದರೆ ನಿರಾಸೆ ಕಾದಿತ್ತು. ಆ ದಿನ ತನ್ನನ್ನು ಕಂಡವನೇ ದುರ್ದಾನ ತೆಗೆದುಕೊಂಡವನಂತೆ, ತಿರುಗಿ ನೋಡದೇ ಹೊರಟುಹೋಗಿದ್ದ. ತನ್ನೊಡನೆ ಮಾತನಾಡಲೂ ಇಷ್ಟಪಟ್ಟಿರಲಿಲ್ಲ; ಇದೆಲ್ಲ ಮರೆತ ಸಂಬಂಧವೆನ್ನುವಂತೆ ವರ್ತಿಸಿದ್ದ. ಆದರೆ ಈ ದಿನ... ತಾನಾಗಿಯೇ ಬಂದಿದ್ದಾನೆ. ತಾನು ದುಡುಕಿ ಮಾತನಾಡಿ, ಅವನು ಮತ್ತೆ ದೂರವಾಗುವಂತೆ ಆಗಬಾರದು ಎಂದುಕೊಂಡು ತನಗೆ ತಾನೇ ಸಮಾಧಾನ ಮಾಡಿಕೊಂಡಳು. ಆದರೂ ಅವರಿಬ್ಬರೂ ಏನು ಮಾತಾಡುತ್ತಿರಬಹುದು ಎಂದು ತಿಳಿದುಕೊಳ್ಳುವ ಕುತೂಹಲ ಮೂಡಿತು.

"ಅಷ್ಟು ದುರಹಂಕಾರದವಳು, ಅದ್ಹೇಗೆ ಬದಲಾದಳು ?"

"ಆ ಕ್ಷಣದ ಆಕ್ರೋಶ ಕಡಿಮೆಯಾದ ಮೇಲೆ, ತನ್ನದು ತಪ್ಪು ಅಂತ ಅನ್ನಿಸಿದೆ... ಅದಕ್ಕೇ ಕಂಪ್ಲೆಂಟನ್ನು ವಾಪಸ್ಸು ತಗೊಂಡಳು."

"ಅವಳು ಯಾರು ? ಯಾಕೆ ಹಾಗೆ ಮಾಡಿದಳು ? ಅವಳ ಜೊತೆಗೆ ಇನ್ಯಾರ್ಯಾರಿದಾರೆ ಅಂತ ತಿಳೀತಾ ?"

"ಕಾರಣವೇನೋ ತಿಳಿಯಿತು. ಆದರೆ ಅದನ್ನು ಹೇಳದೇ ಇದ್ದರೆ ಚೆನ್ನ ಅಂತನ್ನಿಸುತ್ತೆ..." ಕೆಳದನಿಯಲ್ಲಿ ನುಡಿದ.

"ಯಾಕೆ ವಿಶ್ವಾ ? ಅಂಥ ವಿಷಯ ಏನು ಹೇಳಿದಳು ಅವಳು ? ಅಥವಾ ಅಂತ ಹೀನಾಯವಾದ ವಿಷಯಾನಾ ? ಮತ್ತೆ ಮತ್ತೆ ಅವಳಿಂದ ತೊಂದರೆ ಬರುಲ್ಲ ಅಂತ ಹೇಗೆ ನಂಬೋದು ?"

"ಮತ್ತೇನೂ ಹಾಗೇನೂ ಆಗುಲ್ಲ ಬಿಡಿ. ನಾನು ಅವಳಿಗೆ ಚೆನ್ನಾಗಿ ತಿಳುವಳಿಕೆ ಹೇಳಿದೀನಿ..." ವಿಶ್ವ ಏನನ್ನೋ ಮರೆಮಾಚುತ್ತಿದ್ದಾನೆಂಬ ಅನುಮಾನ ಪೃಥ್ವಿಯನ್ನು ಕಾಡಿತು. ಅಷ್ಟರಲ್ಲಿ ಅಡಿಗೆಯವರು ಕರೆದದ್ದರಿಂದ ಇಬ್ಬರೂ ಅಡಿಗೆಮನೆಗೆ ಬಂದರು. ಅಲ್ಲಿ ಡೈನಿಂಗ್ ಟೇಬಲ್ ಮುಂದೆ ಕುಳಿತಿದ್ದ

ನಳಿನಿಯನ್ನು ಕಂಡು ಮುಜುಗರವಾಯಿತು. ಊಟದ ತುತ್ತು ಗಂಟಲೊಳಗೆ ಇಳಿಯುವುದೂ ಕಷ್ಟವೆನಿಸಿತು ವಿಶ್ವನಿಗೆ.

ತನ್ನ ಮಗ ತನ್ನೆದುರಿಗೇ ಕೂತಿದ್ದಾನೆ. ಆದರೆ ಆಡಲು ಮಾತುಗಳೇ ಇಲ್ಲವಲ್ಲ ಎಂದು ನಳಿನಿ ಪರಿತಪಿಸುತ್ತಿದ್ದಳು ಪೃಥ್ವಿಗೂ ಅವರಿಬ್ಬರ ನಡುವೆ ಮಾತನಾಡಲು ಏನೂ ಇಲ್ಲ... ಎಲ್ಲರೂ ಮೌನವಾಗಿ ಊಟ ಮಾಡಿದರು. ಶುಚಿರುಚಿಯಿಂದ ಕೂಡಿದ ಅನೇಕ ಪರಿಕರಗಳಿದ್ದರೂ ವಿಶ್ವನಿಗೆ ಊಟ ಹಿತವೆನಿಸಲಿಲ್ಲ. ತಾನೇನೋ ಅಪಚಾರ ಮಾಡುತ್ತಿದೇನೆಂಬ ಅನುಭವ. ಅಲ್ಲಿಂದ ಹೊರಟರೆ ಸಾಕು ಎಂದು ಕಾದಿದ್ದವನಂತೆ, ಕೈ ತೊಳೆದವನೇ ಹೊರಟ.

''ಆಗಾಗ್ಗೆ ಬರ್ತಾ ಇರು ವಿಶ್ವಾ...'' ನಳಿನಿ ಕಷ್ಟಪಟ್ಟು ಹೇಳಿದಳು.

''ನಾನು ಬರ್ಲಾ ಪೃಥ್ವಿ...'' ಎಂದು ಅವನ ಅಪ್ಪಣೆ ಪಡೆದು, ನಳಿನಿಯ ಕಡೆ ನೋಡದೇ ತನ್ನ ಪಾಡಿಗೆ ತಾನು ನಡೆದ. ನಳಿನಿ ಖೇದಗೊಂಡಳು.

* * * *

ಅನೇಕ ವಾರಗಳು ಕಳೆದು ಹೋದವು. ವಿಶ್ವ ಮತ್ತೆ ಬಂದಿರಲೇ ಇಲ್ಲ. ಪೃಥ್ವಿಯನ್ನು ಕೇಳಲು ಅನುಮಾನಿಸಿದಳು. ಎಷ್ಟೋ ವರ್ಷಗಳು ಅವನನ್ನು ನೋಡದೇ ಹಾಗೇ ಇರಲಿಲ್ಲವೆ ? ಈಗೇಕೆ ಅವನನ್ನು ಮತ್ತೆ ಮತ್ತೆ ನೋಡುವ ಬಯಕೆ ಏಕೆ ? ಈ ಹಂಬಲವನ್ನು ಬಿಡಬೇಕು ಎಂದು ತನಗೆ ತಾನೇ ಹೇಳಿಕೊಂಡು ಸಮಾಧಾನಗೊಳ್ಳುತ್ತಿದ್ದಳು. ಎಲ್ಲರೂ ರೂಪಿಣಿಯನ್ನು ಮರೆತವರಂತೆ ಅವಳ ಮಾತನ್ನೇ ಎತ್ತುತ್ತಿರಲಿಲ್ಲ. ಆದರೆ ವಿಶ್ವ ಮಾತ್ರ ಒಂದೆರಡು ಬಾರಿ ರೂಪಿಣಿಯನ್ನು ಭೇಟಿಯಾಗಿದ್ದ. ತಮಾಷೆ ಎಂಬಂತೆ ''ನಿಮ್ಮ ತಾತನ ಹಣ ಸಿಕ್ತಾ ವಿಶ್ವಾ ?'' ಎಂದು ಕೇಳಿದ್ದಳು.

ವಿಶ್ವ ಮಂಕಾದ. ತನಗೆ ಸಿಗುವ ಹಣದ ಮೇಲೆ ನನಗಿಂತ ಇವಳಿಗೇ ಆಸಕ್ತಿ ಜಾಸ್ತಿ.. ಆ ಹಣ ದೊರೆತ ಮೇಲೇ ಇವಳ ಬಳಿಗೆ ಬರುವುದು ಒಳ್ಳೆಯದು ಎಂದುಕೊಂಡಿದ್ದ. ಆನಂತರ ರೂಪಿಣಿ ಅಲ್ಲಿಂದ ಹೊರಟು ಹೋಗಿದ್ದಳು. ಎಲ್ಲಿಗೆ ಹೋದಳು ಅಂತ ಯಾರಿಗೂ ತಿಳಿಯಲಿಲ್ಲ. ಅಕ್ಕಪಕ್ಕ ದವರಲ್ಲಿ ವಿಚಾರಿಸಿದಾಗ, ಅವಳ ಬಗ್ಗೆ ತಿಳಿಯದವರೇ ಅನೇಕ. ಮತ್ತೆ ಮತ್ತೆ ವಿಚಾರಿಸುವುದರಲ್ಲಿ ಅರ್ಥವಿಲ್ಲ ಅಂತಂದುಕೊಂಡ. ಯಾರೋ ಶ್ರೀಮಂತನ

ಗೆಳೆತನ ಸಿಕ್ಕಿರಬಹುದು... ಅವನಿಗೆ ಬಲೆ ಬೀಸಿ, ಅವನೊಂದಿಗೆ ಹೊರಟು ಹೋಗಿರಬಹುದು ಎಂದುಕೊಂಡಾಗ, ಮನದ ತುಂಬಾ ಕಹಿ ತುಂಬಿ ಕೊಂಡಿತು. ಅವಳು ಬಯಸುವಂತೆ ತಾನು ಶ್ರೀಮಂತನಾಗಿದ್ದಿದ್ರೆ, ಪೃಥ್ವಿಯಂತೆ ತಾನು ಮೂರ್ಖನಾಗಿ, ಇಂತಹವಳನ್ನು ಖಂಡಿತಾ ದೂರ ಮಾಡುತ್ತಿರಲಿಲ್ಲ ಎಂದುಕೊಂಡ.

* * * *

ಹೀಗೇ ದಿನಗಳು ಸರಿದವು. ನಳಿನಿ ಆಗೊಮ್ಮೆ ಈಗೊಮ್ಮೆ ಪೃಥ್ವಿಯನ್ನು ಮದುವೆಯಾಗುವಂತೆ ಹೇಳುತ್ತಿದ್ದಳು. ಆದರೆ ಅದನ್ನು ಪೃಥ್ವಿ ತಳ್ಳಿ ಹಾಕುತ್ತಿದ್ದ. ಬಲವಂತ ಮಾಡಲು ನಳಿನಿ ಹೆದರುತ್ತಿದ್ದಳು. ಒಮ್ಮೆ ಎಷ್ಟು ದಿನಗಳ ನಂತರ ವಿಶ್ವ ಪೃಥ್ವಿಯ ಮನೆಗೆ ಬಂದಿದ್ದಾಗ, ನಳಿನಿ ಅವನ ಎದುರಿನಲ್ಲಿ ಪೃಥ್ವಿಯ ಮದುವೆಯ ಮಾತನ್ನು ಎತ್ತಿದಳು. ವಿಶ್ವ ತನಗೆ ಅದು ಸಂಬಂಧಿಸುದುದೇ ಅಲ್ಲವೆನ್ನುವಂತೆ ಸುಮ್ಮನಿದ್ದ.

''ನಿಮ್ಮ ತಾತನ ವಂಶ ಬೆಳೆಯಬೇಡವೇ ? ನೀನೇಕೆ ಮದುವೆಯೇ ಬೇಡ ಅಂತ ಅಂತೀಯೋ ನನಗಂತೂ ಅರ್ಥವಾಗುಲ್ಲ. ಈಗ ನಿನಗೆ ಮದುವೆಗೆ ಸರಿಯಾದ ವಯಸ್ಸು.''

''ನನಗೆ ಮದುವೆಯಾಗುವ ಇಷ್ಟವಿಲ್ಲ ಅಂತ ಅವತ್ತೇ ಹೇಳಿದ್ನಲ್ಲ. ಮತ್ತೆ ಮತ್ತೆ ಅದೇ ಮಾತನ್ನೇಕೆ ಎತ್ತುತ್ತೀರಿ ?'' ಒರಟಾಗಿ ಪ್ರಶ್ನಿಸಿದ.

''ನೋಡು ವಿಶ್ವಾ... ನಿನ್ನ ಸ್ನೇಹಿತ ಹೇಗಾಡ್ತಾನೆ ಅಂತ... ಮದುವೆ ಸಂಸಾರ ಬೇಡಾಂತ ಅನ್ನೋದಾದ್ರೆ ಈ ಆಸ್ತಿಪಾಸ್ತಿಯೆಲ್ಲಾ ಯಾರಿಗಾಗಿ ? ಈಗ ನೀನೇ ಅವನಿಗೆ ತಿಳುವಳಿಕೆ ಹೇಳಬೇಕು...''

''ಈ ವಿಷಯದಲ್ಲಿ ನಾನು ಯಾರಿಗೂ ಏನನ್ನೂ ಹೇಳುವುದಿಲ್ಲ.. ಅದು ಅವರವರ ಸ್ವಂತ ವಿಷಯ'' ಎಂದುಬಿಟ್ಟ. ನಳಿನಿ ಪೆಚ್ಚಾದಳು. ವಿಶ್ವ ಅಲ್ಲಿಂದ ಎದ್ದು ಹೋಗಿಬಿಟ್ಟ.

''ಯಾರು ಎಷ್ಟೇ ಹೇಳಿದರೂ ನಾನು ಮದುವೆಯಾಗುವುದಿಲ್ಲ. ಅದು ನನ್ನ ಸ್ವಂತ ಇಷ್ಟ. ಇನ್ನೂ ಕೆಲವು ವರ್ಷಗಳು ಕಳೆಯಲಿ. ಅಜಯ ವಿಜಯರಿಗೆ ಮದುವೆ ಮಾಡೋಣ'' ಚಿಕ್ಕಮ್ಮನಿಗೆ ಸಮಾಧಾನವಾಗುವಂತೆ ಅವನು ನುಡಿದಾಗ ಅವಳಿಗೆ ವ್ಯಥೆಯಾಯಿತು.

‘‘ಯಾಕೆ ಪೃಥ್ವೀ... ನೀನು ನನ್ನ ಮಗನಲ್ಲವೇ... ಈ ಮನೆಗೆ ಹಿರಿಯ ಮಗ ನೀನು, ಮೊದಲು ನಿನ್ನ ಮದುವೆ ನಂತರ ನಿನ್ನ ತಮ್ಮಂದಿರದು’’

‘‘ಈ ವಿಷಯದಲ್ಲಿ ಮಾತ್ರ ನನ್ನನ್ನು ಬಲವಂತ ಮಾಡಬೇಡಿ’’ ಎಂದು ಸ್ವಲ್ಪ ಬಿರುಸಾಗಿ ನುಡಿದು ಆ ಜಾಗದಿಂದ ಎದ್ದು ಹೋಗಿದ್ದ. ಪೃಥ್ವಿ ಮದುವೆಗೆ ಒಪ್ಪಿಕೊಂಡರೆ, ಆ ನಂತರ ವಿಶ್ವನಿಗೂ ಮದುವೆಯಾಗು ಅಂತ ಹೇಳಬಹುದಾಗಿತ್ತು. ಇವನೇ ನನ್ನ ಮಾತನ್ನು ಕೇಳದಿದ್ದ ಮೇಲೆ, ಇನ್ನು ಅವನ್ಯಾಕೆ ನನ್ನ ಮಾತನ್ನು ಕೇಳ್ತಾನೆ ಅಂತ ತನಗೆ ತಾನೇ ಹೇಳಿಕೊಂಡರೂ ಆ ಆಸೆ ಕಡಿಮೆಯಾಗಿರಲಿಲ್ಲ.

* * * *

ತನಗೆ ಇನ್ನೂ ಹೆಚ್ಚು ಓದಬೇಕೂಂತ ಆಸೆಯಿದ್ದರೂ, ಈ ಜವಾಬ್ದಾರಿಯ ಕಾರಣದಿಂದ ಆ ಆಸೆ ಅಲ್ಲೇ ಹುದುಗಿಹೋಯಿತು. ತನ್ನ ತಮ್ಮಂದಿರಿಗೆ ಆ ಆಸೆ ಇದ್ದರೆ, ಎಷ್ಟೇ ಖರ್ಚಾದರೂ ಪರವಾಗಿಲ್ಲ... ಅವರ ಓದು ಮುಂದುವರೆಯುವಂತೆ ಮಾಡಬೇಕು ಎಂದುಕೊಂಡು, ಒಮ್ಮೆ ತನ್ನ ತಮ್ಮಂದಿರನ್ನು ತನ್ನ ಬಳಿ ಕೂರಿಸಿಕೊಡು ಅದೇ ವಿಷಯವನ್ನು ಕೇಳಿದ.

‘‘ಹೌದು, ಅಮೇರಿಕಾಕ್ಕೆ ಹೋಗಿ ಎಂ.ಎಸ್. ಮಾಡಬೇಕೂಂತ ನಮಗೆ ಆಸೆ....’’ ಇಬ್ಬರೂ ತಮ್ಮ ಆಸೆಯನ್ನು ವ್ಯಕ್ತಪಡಿಸಿದರು.

‘‘ಸರಿ ಅದಕ್ಕೋಸ್ಕರ ಯಾವ್ಯಾವ ಪರೀಕ್ಷೆ ಮಾಡಿಕೋಬೇಕೋ ಅದನ್ನೆಲ್ಲ ಒಂದೊಂದಾಗಿ ಈಗಲಿಂದ ತೆಗೆದುಕೊಳ್ಳಿ. ಫೈನಲ್ ಇಯರ್ ಪರೀಕ್ಷೆ ಆದ ಕೂಡಲೇ ಅಲ್ಲಿಯ ಯೂನಿವರ್ಸಿಟಿಗೆ ಅರ್ಜಿಗಳನ್ನು ಕಳಿಸಿಕೊಡಿ. ನಾನು ನಿಮಗೆ ಎಲ್ಲಾ ರೀತಿಯ ಸಹಾಯ ಮಾಡ್ತೀನಿ.’’

ಅವರಿಬ್ಬರೂ ಖುಷಿಯಿಂದ ಅಣ್ಣನಿಗೆ ‘ಥ್ಯಾಂಕ್ಸ್’ ಹೇಳಿದರು. ಇದೇ ವಿಷಯ ನಳಿನಿಗೆ ತಿಳಿದಾಗ ಅವಳಿಗೆ ತನ್ನ ಮಕ್ಕಳ ಆಸೆ ಇಷ್ಟವಾಗಲಿಲ್ಲ. ‘‘ಇನ್ನೆರಡು ವರ್ಷ ಕಳೆದರೆ ನೀವಿಬ್ಬರೂ ಇಂಜನಿಯರ್ಸ್ ಆಗ್ತೀರಿ. ನಮ್ಮದೇ ಬೇಕಾದಷ್ಟು ಕಂಪೆನಿಯ ಬಿಸಿನೆಸ್‌ಗಳಿವೆ. ಒಂದೊಂದನ್ನಾಗಿ ನೀವೂ ವಹಿಸಿ ಕೊಂಡರೆ ಪೃಥ್ವಿಗೂ ಸುಲಭ ಆಗುತ್ತೆ. ಅಲ್ಲದೇ ಪೃಥ್ವಿ ಎಷ್ಟು ಓದಿದನೋ, ಅಷ್ಟೇ ನೀವೂ ಓದಿದರೆ ಸಾಕು...’’ ತಮ್ಮಂದಿರ ಮುಖ ಮಂಕಾದುದನ್ನು ಪೃಥ್ವಿ ಗಮನಿಸಿದ.

"ಅವರಿಬ್ಬರೂ ಇನ್ನೂ ಚಿಕ್ಕವರು. ಅವರಿಬ್ಬರಿಗೆ ಅಮೆರಿಕಾಕ್ಕೆ ಹೋಗಿ ಹೆಚ್ಚಿಗೆ ವ್ಯಾಸಂಗ ಮಾಡುವ ಆಸೆಯಿದ್ದರೆ ಅದಕ್ಕೆ ಅಡ್ಡಿ ಬರಬಾರದು. ಎರಡು ವರ್ಷ ಅಲ್ಲಿ ಓದಿ ಬಂದರೆ, ಅವರ ವಿದ್ಯೆಯ ಜೊತೆಗೆ ಅನುಭವವೂ ಹೆಚ್ಚುತ್ತೆ. ಕಂಪೆನಿಯ ವ್ಯವಹಾರ ಸುಲಭವಾಗುತ್ತೆ. ಚತುರತೆ ಹೆಚ್ಚುತ್ತದೆ. ಅದರಿಂದ ಸಮಾಜದಲ್ಲಿ ನಮ್ಮ ಸ್ಥಾನ ಮಾನ ಹೆಚ್ಚುತ್ತದೆ. ಇದನ್ನು ನೀವು ಬಯಸುವುದಿಲ್ಲವೇ ?" ಚಿಕ್ಕಮ್ಮನಿಗೇ ಸವಾಲು ಹಾಕಿದ.

ಅಜಯ ವಿಜಯರಿಗೆ ಅಣ್ಣನ ಬೆಂಬಲ ಸಿಕ್ಕಿತ್ತು. ವಿದೇಶಕ್ಕೆ ಹೋಗುವ ತಯಾರಿಗೆ ಮುಂದಾದರು. ಬೇಕಾದ ಪರೀಕ್ಷೆಗೆ ಸಿದ್ಧತೆಗಳನ್ನು ನಡೆಸಿದರು. ಪಾಸ್‌ಪೋರ್ಟಿಗೆ ಅರ್ಜಿ ಸಲ್ಲಿಸಿದರು.

ಆದರೆ ನಳಿನಿಗೆ ಪೃಥ್ವಿಯ ಮೇಲೆ ಅಸಮಾಧಾನ. ನನ್ನ ಮಕ್ಕಳು ಬೆಳೆದು ದೊಡ್ಡವರಾಗಿದಾರೆ. ಅವರಿಗೂ ಕಂಪೆನಿಯ ಕೆಲಸ ಕಾರ್ಯಗಳನ್ನು ವಹಿಸಿಕೊಟ್ಟು ಜವಾಬ್ದಾರಿ ತೋರಿಸಿಕೊಡುವ ಬದಲು, ಹೊರದೇಶಕ್ಕೇಕೆ ಕಳಿಸಬೇಕು ? ಎರಡು ವರ್ಷ ಅಲ್ಲಿದ್ದು ಓದಬೇಕಂತೆ. ಎಷ್ಟು ಖರ್ಚಾಗುತ್ತೋ ಏನೋ... ಅಲ್ಲದೆ ಎರಡು ವರ್ಷ ಮಕ್ಕಳಿಂದ ದೂರ ಇರಬೇಕೆ ? ಅಜಯ ವಿಜಯರನ್ನು ತನ್ನಿಂದ ದೂರ ಕಳಿಸಿ ಇವನಿಗೆ ಸಿಗುವ ಖುಷಿಯಾದರೂ ಏನು ?

ಇದೇ ಅನಿಸಿಕೆಯನ್ನು ವಿಶ್ವನಿಗೆ ಬೇಕಿಲ್ಲದಿದ್ದರೂ ಅವನು ಮತ್ತೆ ಬಂದಾಗ ಅವನ ಎದುರಿಗೆ ಆಡಿದಳು.

"ಅಜಯ ವಿಜಯರೂ ಅಮೇರಿಕಾಕ್ಕೆ ಹೊರಟುಹೋದರೆ, ನಾನು ಒಂಟಿಯಾಗಿಬಿಡ್ತೀನಿ.... ಅಂತೂ ಮಕ್ಕಳಿದ್ದೂ ಒಂಟಿಯಾಗಿ ಇರುವ ಯೋಗವೇ ಏನೋ ನನಗೆ..."

"ಹಾಗ್ಯಾಕೆ ಅಂದ್ಕೋ ಬೇಕು ? ಪೃಥ್ವಿ ಇರ್ತಾನಲ್ಲ... ಒಂದು ವೇಳೆ ಅವನೇ ವಿದೇಶಕ್ಕೆ ಹೊರಟುಹೋಗಿದ್ದರೆ, ಆಗ ಏನೂ ಅನ್ನಿಸುತ್ತಿರಲಿಲ್ಲವಾ ?" ಅವನು ವ್ಯಂಗ್ಯವಾಡುತ್ತಿದ್ದಾನೆಂದೆನಿಸಿದರೂ, ನುಡಿದಳು.

"ಅಜಯ ವಿಜಯರಿಲ್ಲದ ಮನೆ ಬಿಕೋ ಅಂತನ್ನಿಸುತ್ತೆ. ಪೃಥ್ವಿ ಮೊದಲಿನಿಂದಲೂ ತನ್ನ ಪಾಡಿಗೆ ತಾನು ಇದ್ದವನು. ತನ್ನ ಕೆಲಸವಾಯಿತು. ತಾನಾಯಿತು... ಈಗ ನೀನು ಮನಸ್ಸು ಮಾಡಿದರೆ, ಇಲ್ಲಿಯೇ ಬಂದು ಇಲ್ಲಿಯೇ ನಮ್ಮ ಜೊತೆ ಇರಬಹುದು... ಈಗ ಯಾರದ್ದೂ ಆಕ್ಷೇಪಣೆ ಇಲ್ಲ"

ವಿಶ್ವ ನಕ್ಕ. ''ನನಗೆ ಬೇಕಾಗಿದ್ದಾಗ, ಆಗ ನನ್ನನ್ನು ಕರೆಯಲಿಲ್ಲ. ಈಗ ನಿಮಗೆ ಬೇಕಾಗಿದೆ... ಆದರೆ ನನಗೆ ಇಲ್ಲಿಗೆ ಬರುವ ಇಚ್ಛೆಯಂತೂ ಇಲ್ಲ. ಆಗ ಈಗ ನಾನು ಬರುವುದು ಪೃಥ್ವಿಗೋಸ್ಕರ. ಇನ್ಯಾರಿಗೋಸ್ಕರ ಅಲ್ಲ..'' ಧ್ವನಿಯಲ್ಲಿ ಕಹಿ ತುಂಬಿತ್ತು.

''ಕಟುಕನಂತೆ ಮಾತನಾಡಬೇಡ. ಹಳೆಯದನ್ನೆಲ್ಲ ಮರೆತುಬಿಡು. ಈಗ ಯಾರ ಭಯವೂ ಇಲ್ಲ. ಎಲ್ಲರೂ ಒಟ್ಟಾಗಿ ಹಾಯಾಗಿರಬಹುದು.''

''ಇಲ್ಲಿ ಹಾಯಾಗಿರಲು ನನ್ನಿಂದಂತೂ ಸಾಧ್ಯವಿಲ್ಲ. ನಿಮ್ಮ ಈ ಆಸೆ ಮಾತ್ರ ಎಂದಿಗೂ ಪೂರೈಸುವುದಿಲ್ಲ'' ಅವನು ಕಟುವಾಗಿ ನುಡಿದಾಗ ನೊಂದಳು.

''ತಾಯಿಯ ಮನಸ್ಸನ್ನು ನೋಯಿಸಬಾರದು ಕಣೋ...'' ಎಂದು ಹೇಳುವ ಮನಸ್ಸಾದರೂ ತಡೆದುಕೊಂಡಳು. ಇವನು ತನ್ನನ್ನು ಎಂದಿಗೂ ಕ್ಷಮಿಸಲಾರ ಎಂದೆನಿಸಿತ್ತು.

* * * *

ಅಜಯ ವಿಜಯರಿಗೆ ಅಮೇರಿಕಾದ ಯೂನಿವರ್ಸಿಟಿಯಲ್ಲಿ ಪ್ರವೇಶ ದೊರಕಿತ್ತು. ಆದರೆ ಬೇರೆ ಬೇರೆ ಸಿಟಿಗಳ ಕಾಲೇಜಿನಲ್ಲಿ. ಪೃಥ್ವಿ ಇಬ್ಬರಿಗೂ ಸಾಕಷ್ಟು ವಿವೇಕ ಹೇಳಿದ್ದ. ''ಈಗ ಇಬ್ಬರೂ ಬೇರೆ ಬೇರೆ ಊರಿನಲ್ಲಿರ ಬೇಕಾಗುತ್ತದೆ. ಅಲ್ಲಿಯ ಜನಜೀವನಕ್ಕೆ ಹೊಂದಿಕೊಂಡರೆ ಏನೂ ಕಷ್ಟವಾಗುವುದಿಲ್ಲ. ಅಲ್ಲದೇ ನಿಮ್ಮದೇ ವ್ಯಾಸಂಗಕ್ಕೆ ಸಂಬಂಧಿಸಿದ ಕೆಲಸಗಳೇ ಬೇಕಾದಷ್ಟಿರುತ್ತದೆ. ಮಧ್ಯೆ ರಜ ಸಿಕ್ಕಾಗ ಬಂದು ಹೋಗಬಹುದು.''

ನಳಿನಿ ಹೆದರಿದಳು. ''ಅಜಯ ವಿಜಯರು ಒಬ್ಬೊಬ್ಬರೇ ಎಂದೂ ಇದ್ದವರಲ್ಲ. ಈಗ ಯಾವುದೋ ಕಂಡು ಕೇಳರಿಯದ ದೇಶ, ಅಲ್ಲಿ ಹೇಗಿರುತ್ತಾರೆ ?''

''ನೀವು ಚಿಂತಿಸಬೇಡಿ. ಪರದೇಶವಾದರೂ ಅಲ್ಲಿರುವವರೂ ನಮ್ಮಂತೆ ಮನುಷ್ಯರೇ. ಅಲ್ಲದೇ ಅಲ್ಲಿ ಬೇಕಾದಷ್ಟು ಭಾರತೀಯರು ಇದಾರೆ. ನಮ್ಮ ಕರ್ನಾಟಕದವರೇ ಸಾಕಷ್ಟು ಕುಟುಂಬಗಳಿವೆಯಂತೆ. ಮೊದಲು ಕೆಲವು ದಿನಗಳು ಸ್ವಲ್ಪ ಕಷ್ಟವೆನಿಸಬಹುದು. ಆದರೆ ಕ್ರಮೇಣ ಹೊಂದಿಕೊಳ್ತಾರೆ. ಅದಕ್ಯಾಕೆ ಭಯ ?''

''ಹಾಗಲ್ಲ ಇನ್ನೂ ಚಿಕ್ಕವರು. ತಿಳುವಳಿಕೆ ಸಾಲದು...''

"ನೀವೂ ಅವರ ಜೊತೆ ಹೋಗಿ ಇರುವುದಾದರೆ ತಿಳಿಸಿ. ನಾನು ಎಲ್ಲಾ ಏರ್ಪಾಡು ಮಾಡ್ತೀನಿ."

"ಬೇಡಪ್ಪಾ ಬೇಡ ನಾನೂ ಹೊರಟುಹೊದರೆ ನೀನು ಒಂಟಿಯಾಗಿ ಬಿಡ್ತೀಯ... ಮದುವೆ ಮಾಡಿಕೋ ಎಂದರೆ ಆ ಮಾತಿಗೂ ಒಪ್ಪಲ್ಲ."

ಮಾತು ಎಲ್ಲಿಂದೆಲ್ಲಿಗೋ ಹೋಗಿ ಮತ್ತೆ ತನ್ನ ಮದುವೆಯ ಮಾತಿಗೇ ಬಂದು ನಿಲ್ಲುತ್ತಲ್ಲ ಅಂತೆನಿಸಿ ಬೇಸರವೆಂತೆನಿಸಿತು. ಮಾತು ಬದಲಿಸಿದ.

"ಅಜಯ ವಿಜಯರು ನನಗಿಂತ ಬುದ್ಧಿವಂತರು. ಬೇಗ ಹೊಂದಿಕೊಳ್ತಾರೆ. ಅಲ್ವೇನ್ರೋ..." ಅವರಿಬ್ಬರೂ ಮುಗುಳ್ನಕ್ಕರು.

ಹೊರದೇಶಕ್ಕೆ ಮಕ್ಕಳು ಹಾರಿ ಹೋಗಲು ಕಾತುರರಾಗಿರುವುದನ್ನು ನಳಿನಿ ಗಮನಿಸಿದಳು. ಮನ ಕುಂದಿತು. ಬೆಳೆದು ರೆಕ್ಕೆ ಪುಕ್ಕ ಬಲಿತ ಮೇಲೆ, ಮರಿ ಹಕ್ಕಿ ತಾಯಿ ಹಕ್ಕಿಯನ್ನು ಬಿಟ್ಟು ಹಾರಿಹೋಗುತ್ತದೆ. ಹಾಗೇ ಆಯಿತು ನನ್ನ ಸ್ಥಿತಿ. ವಿಶ್ವ ಮೊದಲೇ ಹಾರಿ ಹೋಗಲು ಹವಣಿಸಿದ್ದ. ಇಷ್ಟೇ ಈ ಬದುಕು...! ವ್ಯಥೆ ಕಣ್ಣೀರಾಗಿ ಹರಿಯಿತು. ಅದನ್ನು ವಿಶ್ವ ಗಮನಿಸಿದ. ಈ ಕಣ್ಣೀರು ತನಗಾಗಿ ಹರಿಸಿದ್ದಳೇ ಈ ತಾಯಿ ಅಂತಂದುಕೊಂಡಾಗ ಏನೋ ತಳಮಳ. ಆ ಜಾಗದಿಂದ ಎದ್ದು ಹೋದ.

ಅಜಯ ವಿಜಯರು ಹತ್ತಿದ ಪ್ಲೇನು ಗಗನಕ್ಕೆ ಹಾರಿತು. ಏರ್‌ಪೋರ್ಟ್‌ಗೆ ಹೋಗಿದ್ದವರೆಲ್ಲ ಮನಗೆ ಎವಾಪಸ್ಸಾದರು. ವಿಶ್ವ ಅವರೊಡನೆ ಮನೆಗೆ ಬಂದಿದ್ದ. ಅವನು ಹೊರಡ್ತೀನಿ ಅಂತಂದಾಗ ಪೃಥ್ವಿ ಕೇಳಿಕೊಂಡ.

"ಇವತ್ತೊಂದು ರಾತ್ರಿ ಇಲ್ಲೇ ಇರ್ತೀರಾ ? ಚಿಕ್ಕಮ ಹೇಳ್ತಾ ಇದ್ದುದು ನಿಜ. ಅಜಯ ವಿಜಯರಿಲ್ಲದೇ ಮನೆ ಬಿಕೋ ಅಂತಿದೆ" ಇಲ್ಲವೆನ್ನಲಾಗದೇ ವಿಶ್ವ ಅಲ್ಲಿಯೇ ಉಳಿದುಕೊಂಡ. ತನ್ನ ಮಗ ಈಗ ತನ್ನೆದುರಿಗೇ ಇದಾನೆ. ತನ್ನ ಮನದ ಮಾತನ್ನೆಲ್ಲಾ ಆಡಿ, ಕ್ಲೇಶವನ್ನೆಲ್ಲಾ ಕಮ್ಮಿ ಮಾಡಿಕೊಳ್ಳುವ ಆಸೆ ನಳಿನಿಗೆ. ಆದರೆ ಪೃಥ್ವಿಯ ಎದುರಿಗೆ ಆಡಲಾರಳು. ರಾತ್ರಿಯೆಲ್ಲಾ ನಿದ್ದೆಯಿಲ್ಲದೇ ಹೊರಳಾಡಿದಳು.

ಎರಡು ವರ್ಷಗಳು ಕಳೆದ ನಂತರ ಅಜಯ ವಿಜಯರ ವಿದ್ಯಾಭ್ಯಾಸ ಮುಗಿಯುತ್ತೆ... ಆನಂತರ ಮದುವೆ ಮಾತು. ಅಷ್ಟರೊಳಗೆ ಈ ಪೃಥ್ವಿ ಮದುವೆ

ಯಾದರೆ ಮನೆಗೆ ಒಂದು ಹೊಸ ವ್ಯಕ್ತಿಯ ಪ್ರವೇಶವಾದರೆ, ಈ ಮನೆಯಲ್ಲಿ ಒಂದು ಬದಲಾವಣೆ ಇರುತ್ತದೆ. ಇಲ್ಲದಿದ್ದರೆ ಹೀಗೇ ದಿನಗಳು ಕಳೆದರೆ ನನ್ನ ಗತಿ ಏನಾಗಿ ಬಿಡುತ್ತದೋ ಎಂಬ ಆತಂಕ ಅವಳನ್ನು ಬಾಧಿಸತೊಡಗಿತು.

ಬೆಳಿಗ್ಗೆ ನಿತ್ಯಂದಂತೆ ತಿಂಡಿ ಕಾಫಿಯ ನಂತರ ವಿಶ್ವ ಹೊರಡ್ತೀನಿ ಎಂದಾಗ ಪೃಥ್ವಿ ನುಡಿದ.

''ನೀವೂ ಇಲ್ಲೇ ನಮ್ಮ ಜತೆಯಲ್ಲೇ ಇರಬಹುದು. ಇದರಿಂದ ನಿಮ್ಮ ತಾಯಿಗೂ ಸಂತೋಷವಾಗುತ್ತೆ.''

''ನನ್ನ ತಾಯಿಯ ಸಂತೋಷಕ್ಕಾಗಿ... ನಾನು ಇಲ್ಲಿರುಕ್ಕೆ ಆಗುಲ್ಲ. ನನ್ನ ಸ್ವಂತ ಇಚ್ಛೆಗಳನ್ನು ತ್ಯಾಗ ಮಾಡುವಷ್ಟು ಧಾರಾಳವಂತ ನಾನಲ್ಲ. ನಾನು ಈಗ ಹೇಗಿದೀನೋ ಅದೇ ಸರಿಯಾಗಿದೆ.''

ಮಾತನ್ನು ಬದಲಾಯಿಸುವವನಂತೆ ಪೃಥ್ವಿ ಒಂದುಗಳಿಗೆ ಸುಮ್ಮನಿದ್ದು ಪ್ರಶ್ನಿಸಿದ. ''ನೀವೇಕೆ ಇನ್ನೂ ಮದುವೆಯಾಗಿಲ್ಲ ?''

''ಅದೇ ಪ್ರಶ್ನೆಯನ್ನು ನಾನು ನಿಮ್ಮನ್ನು ಕೇಳ್ತೀವಿ.'' ವಿಶ್ವ ಚತುರನಂತೆ ಪ್ರಶ್ನಿಸಿದ. ಪೃಥ್ವಿ ಅವಿವೇಕಿಯಂತೆ ಪೆದ್ದು ಮುಖ ಮಾಡಿದ. ವಿಶ್ವ ಮುಗುಳ್ನಕ್ಕು ಮತ್ತೆ ತಾನೇ ನುಡಿದ.

''ಬಹುಶಃ ನಿಮ್ಮ ಮನಸ್ಸಿನಲ್ಲಿ ಮಧುರವಾದ ಭಾವನೆ ಇರಲಾರದು ಅದೇ ಕಾರಣವಿರಬಹುದು ಅಲ್ಲವೇ ?''

''ನನಗೆ ತಿಳುವಳಿಕೆ ಬರುವ ಹೊತ್ತಿಗೆ ನನ್ನ ಅಜ್ಜಿ ಇರಲಿಲ್ಲ; ನನ್ನ ತಾಯಿ ಇರಲಿಲ್ಲ. ತಾತನಂತೆ, ನಾನೂ ಏಕೆ ಏಕಾಂಗಿಯಾಗಿ ಇರಬಾರದು ಅಂತ. ನನಗೆ ನಾನೇ ತೆಗೆದುಕೊಂಡ ನಿರ್ಧಾರ ಇದು.''

''ಸರಿ ಸರಿ ಇದು ಒಂದು ನೆವ ಅಷ್ಟೆ. ನಿಮ್ಮ ತಂದೆಯೇನೂ ಏಕಾಂಗಿಯಾಗಿರಲಿಲ್ಲವಲ್ಲ. ಹತ್ತು ವರ್ಷಗಳನ್ನೂ ಸಹ ಅವರು ಏಕಾಂಗಿಯಾಗಿ ಕಳೆದಿರಲಾರರು.''

''ಆ ವಿಷಯ ನನಗೆತಿಳಿಯದು. ಅದನ್ನೆಂದೂ ಕೆದಕಿ ನೋಡಿ ತಿಳಿಯುವ ಆಸಕ್ತಿ ತೋರಲಿಲ್ಲ ನಾನು.''

''ಬಿಡಿ ಬಿಡಿ ಹೆಂಗಸರೇ ಮರುಮದುವೆಯಾಗ್ತಾರಂತೆ. ಅಂಥಾದ್ದರಲ್ಲಿ ಗಂಡಸರು ಒಂಟಿಯಾಗಿರಬೇಕೆಂಬ ನಿಯಮವೇನೂ ಇಲ್ಲ. ಮದುವೆ ಒಂದು

ಬಂಧನ. ಅದರಿಂದ ಸ್ವತಂತ್ರ ಹೊರಟುಹೋಗುತ್ತದೆ. ಅಸಗತ್ಯ ಜವಾಬ್ದಾರಿ ಹೆಚ್ಚುತ್ತೆ.... ಆದ್ದರಿಂದ ನಾನು ಹೀಗೇ ಆರಾಮವಾಗಿದೀನಿ ; ಆದರೆ ಬ್ರಹ್ಮಚಾರಿಯಾಗಿಯೇ ಇರಬೇಕೆಂಬ ಕಟ್ಟಪ್ಪಾಡು ನನಗಿಲ್ಲ. ಆದರೆ ನನ್ನ ಸಂಗ ಬಯಸಿ ಯಾವ ಹೆಣ್ಣೂ ಇದುವರೆಗೂ ನನ್ನ ಬಳಿಗೆ ಬಂದಿಲ್ಲ. ನಾನಾಗಿಯೇ ಯಾರನ್ನೂ ಹುಡುಕಿಕೊಂಡು ಹೋಗಿಲ್ಲ. ಯಾಕೆ ಗೊತ್ತಾ ? ನನ್ನ ವೇಷಭೂಷಣ, ಮಾತುಕತೆ ಯಾರಿಗೂ ಹಿಡಿಸದೇ ಇರಬಹುದು. ನನ್ನಲ್ಲೂ ಎದ್ದುತೋರುವ ಶ್ರೀಮಂತಿಕೆಯ ಅಂತಸ್ತು ಎದ್ದಿದ್ದರೆ ಯಾರಾದರೂ ಬರುತ್ತಿದ್ದರೇನೋ... ಆದರೆ ಯಾವುದಾದರೂ ಹೆಣ್ಣಿನ ಸಂಗ, ಸ್ನೇಹದ ಅವಕಾಶ ಸಿಕ್ಕರೆ, ಖಂಡಿತಾ ನಾನು ಹಿಂಜರಿಯುವುದಿಲ್ಲ... '' ತಮಾಷೆ ಮಾಡುವವನಂತೆ ವಿಶ್ವ ನುಡಿದಾಗ, ಪೃಥ್ವಿಗೆ ತಟ್ಟನೆ ನೆನಪಾದವಳು ರೂಪಿಣಿ.

ರೂಪಿಣಿಯನ್ನು ಇವನು ಒಲಿಸಿಕೊಂಡಿರಬಹುದೇ ? ಇವನ ಮನೆಯಲ್ಲೇ ಕೆಲವು ವಾರಗಳು ಜತೆಯಲ್ಲಿದ್ದಳು ಔಷಧೋಪಚಾರಗಳ ನೆವದಲ್ಲಿ ಇಬ್ಬರೂ ಸಮೀಪವಾಗಿರಬಹುದು. ಇವನನ್ನು ತಾನಂತೂ ಏನೂ ಕೇಳಲಾರ... ಅವನನ್ನೇ ಗಮನಿಸುತ್ತಿದ್ದ ವಿಶ್ವ ನುಡಿದ.

''ನೀವೀಗ ರೂಪಿಣಿಯ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿದೀರಿ ಅಲ್ಲವೇ ? ಅಂಥದ್ದೇನೂ ನಮ್ಮಿಬ್ಬರ ನಡುವೆ ನಡೆದಿಲ್ಲ. ಅವಳು ಬಯಸಿದ್ದು ನಿಮ್ಮನ್ನು. ನೀವು ಅವಳನ್ನು ನಿರಾಕರಿಸಿದಿರಿ. ಅಂಥ ಹೆಣ್ಣುಗಳ ಬಗ್ಗೆ ನಾನು ಹುಶಾರಾಗಿರ್ತೀನಿ... ಆದಷ್ಟೂ ದೂರ ದೂರವೇ ಇರ್ತೀವಿ. ನಿಮಗೆ ಯಾವ ಅನುಮಾನವೂ ಬೇಡ'' ತಮಾಷೆಯಿಂದ ಹೇಳಿದ.

''ನಾನೇಕೆ ಅನುಮಾನ ಪಡಲಿ ?''

''ಬಿಡಿ. ನಿಮಗೆ ಆ ಅನುಮಾನ ಬರುವುದು ಸಹಜ. ನಾಲ್ಕಾರು ವಾರ ನಮ್ಮ ಆಸ್ಪತ್ರೆಯಲ್ಲಿದ್ದಳು. ಆದರೆ ಒಂದು ಮಾತು ಮಾತ್ರ ನಿಜ... ಅವಳು ಚೆಲ್ಲುಚೆಲ್ಲಾದ ಹುಡುಗಿ ಅಂತ ನನಗನ್ನಿಸಲೇ ಇಲ್ಲ.''

''ಬಿಡಿ... ಈಗ ಅವಳ ಮಾತೇಕೆ ?''

''ನನ್ನ ತಾಯಿಯೂ ಹೀಗೇ ನಿಮ್ಮ ತಂದೆಯನ್ನು ಆಕರ್ಷಿಸಿ, ಮದುವೆ ಯಾಗಿರಬಹುದು ಅಂತ ನಿಮಗನ್ನಿಸ್ತಿದೆ... ಅದೇ ಕಾರಣದಿಂದ ನೀವು ಹೆಣ್ಣನ್ನು ದ್ವೇಷಿಸ್ತೀರಿ... ಹೌದು ತಾನೇ ?...''

''ಅದು ಮುಖ್ಯವಾದ ಕಾರಣವಲ್ಲ. ಹೋಗಲಿ ಬಿಡಿ. ಈ ಮಾತುಗಳನ್ನು ಸಾಕು ಮಾಡೋಣ'' ಎನ್ನುತ್ತಾ ಪೃಥ್ವಿ ಎದ್ದಾಗ, ವಿಶ್ವ ಪೃಥ್ವಿಯ ಕೈಗಳನ್ನು ಹಿಡಿದು ಹೇಳಿದ.

''ಕ್ಷಮಿಸಿ ಪೃಥ್ವಿ... ನಿಮ್ಮ ಮನಸ್ಸಿಗೆ ನೋವನ್ನುಂಟು ಮಾಡುವ ಉದ್ದೇಶ ನನಗಿಲ್ಲ. ನನ್ನ ನಿಮ್ಮ ಬದುಕಿನ ರೀತಿ ನೀತಿ, ಯೋಚನೆ, ಆಲೋಚನೆಗಳು ಬೇರೆ ಬೇರೆ ಇರಬಹುದು. ಆದರೆ ನಾನು ಎಂದೂ ನಿಮಗೆ ಮದುವೆ ಯಾಗುವಂತೆ ಸಲಹೆ ನೀಡುವುದಿಲ್ಲ. ಅದು ನಿಮ್ಮ ಸ್ವಂತ ವಿಷಯ... ಹಾಗೇ ನನ್ನದೇ ಕೆಲವು ಸ್ವಂತ ವಿಷಯಗಳಿವೆ. ಅದನ್ನು ಪ್ರಶ್ನಿಸುವ, ಕೆದಕುವ ಹಕ್ಕು ಯಾರಿಗೂ ಇಲ್ಲ, ನನ್ನನ್ನು ಹೆತ್ತ ತಾಯಿಗೂ ಇಲ್ಲ....'' ಇದ್ದಕ್ಕಿದ್ದಂತೆ ವಿಶ್ವ ಹೀಗೇಕೆ ಮಾತನಾಡಿದ ಎಂದು ಅವನಿಗೆ ಅರ್ಥವಾಗಲಿಲ್ಲ. ಪೃಥ್ವಿಯ ಕೈ ಬಿಡಿಸಿಕೊಂಡು ''ನಾನು ಬರ್ತೀನಿ'' ಎಂದು ನುಡಿದು ಹೊರಟೇಹೋದ. ಊಟದ ಸಮಯದಲ್ಲಿ ಇದ್ದಕ್ಕಿದ್ದಂತೆ ವಿಶ್ವ ಏಕೆ ಹೊರಟುಹೋದ ? ಇವರಿಬ್ಬರ ನಡುವೆ ಏನು ಮಾತುಕತೆ ನಡೆಯಿತು ? ಹಾಗೇಕೆ ಹೊರಟು ಹೋದ ಒಂದು ಮಾತನ್ನೂ ಹೇಳದೇ.. ನಳಿನಿ ಪರಿತಪಿಸಿದಳು.

ಆ ದಿನ ಹಾಗೆ ದಿಢೀರನೆ ಹೊರಟುಹೋದ ವಿಶ್ವ ಎಷ್ಟೋ ದಿನಗಳ ವರೆಗೆ ಸಿಕ್ಕಿರಲೇ ಇಲ್ಲ. ಆ ಬಗ್ಗೆ ಪೃಥ್ವಿ ತಲೆಕೆಡಿಸಿಕೊಳ್ಳದಿದ್ದರೂ ಒಮ್ಮೊಮ್ಮೆ ಅನ್ನಿಸುತ್ತಿತ್ತು. 'ನಾನೂ ವಿಶ್ವಂತೆ ಯಾವ ಬಂಧನವೂ ಇಲ್ಲದೇ ಹಾಯಾಗಿರು ವಂತಿದ್ದರೆ...! ಎಷ್ಟು ಚೆನ್ನಾಗಿರುತ್ತಿತ್ತು.... ಆದರೆ ವಿಶ್ವನಂತೆ ತಾನೆಂದೂ ಮನೆ ಯನ್ನು ಬಿಟ್ಟು ಹೋದವನೇ ಅಲ್ಲ.... ಈಗಂತೂ ಒಂದಲ್ಲ ಒಂದು ಕಾರಣ ದಿಂದ ಈ ಬಂಧನದಲ್ಲಿ ಸಿಕ್ಕಿ ಬಿದ್ದಿದೀನಿ... ಇದನ್ನು ಕಳಚಿಕೊಳ್ಳುವುದು ಹೇಗೆ? ಅಜಯ ವಿಜಯರ ವ್ಯಾಸಂಗ ಮುಗಿದ ಕೂಡಲೇ ಅವರನ್ನು ಕರೆಸಿ, ಅವರಿಗೆ ಎಲ್ಲ ಜವಾಬ್ದಾರಿಯನ್ನು ವಹಿಸಿಕೊಟ್ಟು ತಾನು ಇಲ್ಲಿಂದ ಎಲ್ಲಿಯಾದರೂ ದೂರ ಹೊರಟು ಹೋಗಬೇಕು. ಬದರೀ, ಕೇದಾರ, ಹಿಮಾಲಯ, ಟಿಬೆಟ್, ಮಾನಸ ಸರೋವರ ಯಾವುದಾದರೂ ಸರಿ. ಈ ಪರಿಸರದಿಂದ ದೂರ ಹೋಗಬೇಕು... ತನ್ನ ತಮ್ಮಂದಿರ ವ್ಯಾಸಂಗ ಎಂದಿಗೆ ಮುಗಿದೀತೋ' ಎಂದು ಆ ದಿನಕ್ಕಾಗಿ ಎದುರುನೋಡತೊಡಗಿದ.

* * * *

ತನ್ನ ತಮ್ಮಂದಿರ ಬರುವಿಗಾಗಿ ಪೃಥ್ವಿ ಕಾಯುತ್ತಿದ್ದ ದಿನ ಸಮೀಪಿಸಿತು. ಅವರಿಬ್ಬರನ್ನು ಮನೆಗೆ ಕರೆತರಲು ಏರ್‌ಪೋರ್ಟ್‌ಗೆ ಹೊರಡಲು ಸಿದ್ಧನಾಗುತ್ತಿದ್ದ. ಅಷ್ಟರಲ್ಲಿ ವಿಶ್ವನೂ ಆಗಮಿಸಿದ. ದಾರಿಯಲ್ಲಿ ಪೃಥ್ವಿ ವಿಶ್ವನಿಗೆ ಹೇಳಿದ.

''ನನ್ನ ತಮ್ಮಂದಿರ ಆಸೆ ಫಲಿಸಿತು. ಎಂ.ಎಸ್. ಮುಗಿಸಿ ಇಬ್ಬರೂ ವಾಪಸಾಗುತ್ತಿದ್ದಾರೆ. ಇನ್ನು ಅವರಿಗೆ ಈ ಎಲ್ಲಾ ಜವಾಬ್ದಾರಿಗಳನ್ನು ವಹಿಸಿಕೊಟ್ಟು ನಾನು ಹಾಯಾಗಿರೋಣ ಅಂತಿದೀನಿ'' ವಿಶ್ವನಕ್ಕ.

''ಅಂದರೇ... ಸಂನ್ಯಾಸಾಶ್ರಮಕ್ಕೆ ಹೋಗೋ ಆಸೆ, ಅದೇಕೆ ?''

''ಸದಾ ಈ ಬಂಧನದೊಳಗೇ ಇರಲು ನನಗಿಷ್ಟವಿಲ್ಲ, ವಿಶ್ವಾ. ಅವರೀಗ ದೊಡ್ಡವರಾಗಿದಾದ್ರೆ. ತಿಳುವಳಿಕಸ್ಥರಾಗಿದಾರೆ. ಕಂಪೆನಿಯ ಕಾರುಬಾರನ್ನು ನಿರ್ವಹಿಸುವಷ್ಟು ಚತುರತೆ, ಅನುಭವ ಅವರಿಗೆ ಬಂದಿರುತ್ತೆ. ಇನ್ನು ಮುಂದೆ ಅವರೇ ಎಲ್ಲವನ್ನೂ ನೋಡಿಕೊಳ್ಳಲಿ ಅಂತ ನನ್ನ ಆಸೆ. ಹಾಗೇ ಬಹುಶಃ ನಮ್ಮ ಚಿಕ್ಕಮ್ಮನ ಆಸೆ ಕೂಡಾ...''

''ನಿಮ್ಮ ಚಿಕ್ಕಮ್ಮನಿಗೆ ಇನ್ನೂ ಕೆಲವು ಆಸೆಗಳಿರುತ್ತವೆ... ಅವುಗಳಲ್ಲಿ ಅವರಿಬ್ಬರ ಮದುವೆಯೂ ಮುಖ್ಯವಾದುದು.''

''ಇರಬಹುದು ಆದರೆ ಈ ಮದುವೆಯ ವಿಷಯಕ್ಕೆ ನಾನು ನಾನಾಗಿಯೇ ಬಾಯಿ ಹಾಕಲಾರೆ... ಅವರುಗಳು ಮದುವೆಯಾಗಿ, ಸಂಸಾರಸ್ಥರಾಗಲಿ, ನನಗೂ ಅದೇ ಇಷ್ಟ... ಆದರೆ... ನನ್ನ ಮದುವೆಯ ಮಾತು ಮಾತ್ರ... ಖಂಡಿತಾ ಇಲ್ಲ''

''ಆಡಿದರೆ... ಏನು ? ನಿಮ್ಮ ಮದುವೆಗೆ ನಿಮ್ಮನ್ನು ಒಪ್ಪಿಸಲುಅವರಿಂದ ಆಗುಲ್ಲ.... ಆದ್ದರಿಂದ ಅಜಯ ವಿಜಯರ ಮದುವೆಯ ಮಾತನ್ನು ನಿಮ್ಮ ಮುಂದೆ ಎತ್ತಲು ಕಷ್ಟವೆನಿಸಬಹುದು.''

''ಇದಕ್ಕೆ ಕಷ್ಟವೇನು ? ನಾನೇ ಅವರ ಹತ್ತಿರ ಮಾತನಾಡ್ತೀನಿ... ನೀವು ನನಗೆ ಈ ವಿಷಯದಲ್ಲಿ ಸಹಾಯ ಮಾಡಬೇಕು... ನನ್ನ ತಮ್ಮಂದಿರಿಗೆ ಸರಿಹೊಂದುವಂತಹ ಹುಡುಗಿಯರನ್ನು ನೀವೇ ಹುಡುಕಿಕೊಡಬೇಕು.''

ವಿಶ್ವ ಗೊಳ್ಳನೆ ನಕ್ಕ. ''ನಾನು ? ನನಗ್ಯಾರಿದ್ದಾರೆ ? ನನಗೇನು ಬಂಧುವೇ ? ಬಳಗವೇ...?''

''ಹಾಗೆನ್ನಬೇಡಿ... ನಿಮಗೆ ಪರಿಚಯಸ್ಥರು ಜಾಸ್ತಿ. ಅಲ್ಲದೆ ನನಗಿಂತ ಮುಕ್ತವಾಗಿ ನೀವು ಹೊರಗಿನವರೊಡನೆ ಮಾತನಾಡಬಲ್ಲಿರಿ...''

''ಮಾತನಾಡಿದರೆ ಆಯ್ತೆ? ಯಾವ ನಾಗರೀಕತೆ ತಿಳಿಯದು ನನಗೆ. ನಿಮ್ಮ ಅಂತಸ್ತಿಗೆ ತಕ್ಕಂತಹ ಹುಡುಗಿಯನ್ನು ನಾನು ಹೇಗೆ ಹುಡುಕಬಲ್ಲೆ?''

''ನೀವು ಅನಾಗರೀಕರೂ ಅಲ್ಲ; ಅಸಂಸ್ಕೃತರೂ ಅಲ್ಲ. ತಿಳುವಳಿಕೆಯುಳ್ಳವರು. ಪ್ರಾಪಂಚಿಕ ವ್ಯವಹಾರಗಳನ್ನು ಬಲ್ಲವರು. ಎಲ್ಲಕ್ಕಿಂತ ಹೆಚ್ಚಾಗಿ ನನಗಿಂತ ಹಿರಿಯರು. ನೀವೇ ಮುಂದೆ ನಿಂತು ಈ ಕಾರ್ಯಗಳನ್ನು ನೆರವೇರಿಸಬೇಕು. ಇದು ನನ್ನ ಕೋರಿಕೆ. ನಮ್ಮ ಮನೆಯ ಹಿನ್ನೆಲೆಯನ್ನು ಮೊದಲೇ ತಿಳಿಸುವುದು ಒಳ್ಳೆಯದು. ಯಾವ ಸಂದೇಹಕ್ಕೂ ಆಸ್ಪದ ಕೊಡದೇ ಅದನ್ನು ಒಪ್ಪಿಕೊಂಡು ಹೊಂದಿಕೊಂಡು ಇರುವಂತಹ ಹುಡುಗಿಯರಾದರೆ ಒಳ್ಳೆಯದು. ಜಾತಿ ಮತ ಯಾವುದಾದರೂ ಪರವಾಗಿಲ್ಲ. ಅನುಕೂಲಸ್ಥರಲ್ಲದವರಾದರೆ ಸರಿಯೇ. ವಿದ್ಯಾವಂತರಾದರೆ, ವ್ಯವಹಾರ ಜ್ಞಾನವಿರುವವರಾದರೆ, ನಮ್ಮ ಮನೆಗೆ ಬೇಗ ಹೊಂದಿಕೊಳ್ಳುತ್ತಾರೆ.''

''ಈ ಕೆಲಸ ನನಗೆ ಸ್ವಲ್ಪ ಕಷ್ಟವೇ... ಆದರೆ ಆಗುಲ್ಲ ಅಂತ ಹೇಳಿ ನಿಮ್ಮನ್ನು ನಿರಾಸೆಗೊಳಿಸಲಾರೆ. ಪ್ರಯತ್ನವನ್ನಂತೂ ಪಡ್ತೀನಿ...'' ವಿಶ್ವ ಭರವಸೆ ಕೊಟ್ಟ.

ಪ್ಲೇನು ಬಂದಿಳಿದ ಎಷ್ಟೋ ಹೊತ್ತಿನ ನಂತರ ಲಗ್ಗೇಜುಗಳೊಡನೆ ಹೊರಬಂದ ಅಜಯ ವಿಜಯರು ಪ್ರೀತಿಯಿಂದ ಪೃಥ್ವಿಯನ್ನು ತಬ್ಬಿಕೊಂಡರು. ವಿಶ್ವ ಅವರಿಬ್ಬರನ್ನೇ ನೋಡಿದ. ಸಂಬಂಧದಲ್ಲಿ ಅವರಿಬ್ಬರು ತನಗೂ ತಮ್ಮಂದಿರೇ... ಆದರೆ ಆ ಪ್ರೀತಿ ವಾತ್ಸಲ್ಯವೆಲ್ಲಾ ಪೃಥ್ವಿಗೇ ಮಾತ್ರ ಮೀಸಲು. ತಾನು ನಿಮ್ಮ ಹಿರಿಯಣ್ಣ ಅಂತ ಹೇಳಿಕೊಳ್ಳುವಂತೆಯೂ ಇಲ್ಲ... ಇದಕ್ಕೆ ಈಗ ಯಾರನ್ನು ದೂಷಿಸುವುದು ? ಇವರಿಬ್ಬರೂ ಏನೂ ಅರಿಯದ ಮುಗ್ಧರು.

ತಮ್ಮ ವ್ಯಾಸಂಗ, ಪರದೇಶದ ವರ್ಣನೆಯ ಮಾತುಕತೆಗಳಲ್ಲಿ ಅಜಯ ವಿಜಯರು ಮುಳುಗಿಹೋಗಿದ್ದರು. ಉತ್ಸಾಹದಿಂದ ಅವರಿಬ್ಬರೂ ಹೇಳುತ್ತಿದ್ದುದನ್ನು ಪೃಥ್ವಿ ಸಹನೆಯಿಂದ ಕೇಳಿಸಿಕೊಳ್ಳುತ್ತಿದ್ದ. ಮಾತು ಮುಂದುವರೆಯುತ್ತಿದ್ದಂತೆ ಅಜಯ ಹೇಳಿದ್ದ,

''ಅಲ್ಲಿಯ ಪ್ರತಿಷ್ಠಿತ ಕಂಪೆನಿಯೊಂದರಲ್ಲಿ ನನಗೆ ಇಂಜಿನಿಯರ್ ಕೆಲಸ ಸಿಕ್ಕಿದೆ... ಒಂದು ತಿಂಗಳ ರಜ ಮುಗಿದ ಕೂಡಲೇ ನಾನು ಮತ್ತೆ ಅಮೆರಿಕಾಕ್ಕೆ ಹೋಗಬೇಕು...''

"ಏನು ? ಅಲ್ಲೇ ಕೆಲಸಕ್ಕೆ ಸೇರಿಕೊಳ್ತೀಯಾ ? ಬೇಡ, ಏನೂ ಬೇಡ. ನೀವು ಇಬ್ಬರೂ ಬಂದರೆ ಸಾಕು ಅಂತ ಕಾಯ್ತಾ ಇದ್ದೆವು..."

"ಹಾಗಲ್ಲ ಬ್ರದರ್.... ಅಲ್ಲಿ ಕೆಲಸ ಸಿಕ್ಕಿದರೆ ಸಾಕು ಅಂತ ಇಂಡಿಯನ್ ಸ್ಟೂಡೆಂಟ್ಸ್ ಹಾತೊರೆಯುತ್ತಾರೆ.... ಅಂಥಾದ್ರಲ್ಲಿ ಹೀಗೆ ಹೇಳ್ತೀಯಲ್ಲ. ನಾನೂ ಕೆಲಸಕ್ಕೆ ಪ್ರಯತ್ನ ಪಡ್ತಿದೀನಿ. ಸಿಗುವ ಛಾನ್ಸ್ ಇದೆ... ಕೆಲಸ ಸಿಕ್ಕ ಕೂಡಲೇ ನಾನೂ ಹೊರಡ್ತೀನಿ" ವಿಜಯ ನುಡಿದಿದ್ದ. ಪೃಥ್ವಿ ಕಾರನ್ನು ನಿಲ್ಲಿಸಿದ "ಏನಿದರ ಅರ್ಥ ? ನಿಮ್ಮಿಬ್ಬರನ್ನು ಅಲ್ಲಿಗೆ ಕಳಿಸಿದ್ದು ಓದಲಿ ಅಂತ. ಕೆಲಸಕ್ಕೆ ಸೇರಿಕೊಳ್ಳಿ ಅಂತಲ್ಲ. ಚಿಕ್ಕಮ್ಮ ಖಂಡಿತಾ ಒಪ್ಪಲ್ಲ."

"ಪ್ಲೀಸ್ ಬ್ರದರ್ ನೀವು ಇದಕ್ಕೆ ಮಮ್ಮೀನ ಒಪ್ಪಿಸಲೇಬೇಕು. ಅಮೆರಿಕಾ ಎಂಥಾ ಮುಂದುವರಿದ ದೇಶ ? ಅಂಥ ದೇಶದಲ್ಲಿ ಕೆಲಸ ಮಾಡುವುದೇ ಒಂದು ದೊಡ್ಡ ಹೆಮ್ಮೆ... ನೀವ್ಯಾಕೆ ಹೀಗಾಡ್ತೀರೋ... ನೀವೂ ಪ್ರಯತ್ನಪಟ್ಟರೆ ನಿಮಗೂ ಅಲ್ಲಿ ಕೆಲಸ ಸಿಗುತ್ತೆ... ಆಮೇಲೆ ಎಲ್ಲರೂ ಅಲ್ಲಿಗೇ ಹೋಗಿ ಸೆಟ್ಲ್ ಆಗಿ ಬಿಡೋಣ..." ವಿಜಯ ನುಡಿದ. ಪೃಥ್ವಿ ವಿಶ್ವನ ಕಡೆ ನೋಡಿದ. ವಿಶ್ವ ಮೌನ ಪ್ರೇಕ್ಷಕನಾಗಿದ್ದ.

"ಆಗಲಿ ಈ ಮಾತ್ನೆಲ್ಲ ನಿಧಾನವಾಗಿ ಮನೆಯಲ್ಲಿ ಆಡಿದರಾಯ್ತು... ಚಿಕ್ಕಮ್ಮ ಒಪ್ಪಿದರೆ, ನಾನೂ ಒಪ್ಪಿಕೊಳ್ತೀನಿ."

"ಚಿಕ್ಕಮ್ಮನ್ನ ನೀನೇ ಒಪ್ಪಿಸಬೇಕು" ಇಬ್ಬರೂ ಒಟ್ಟಿಗೆ ನುಡಿದರು.

ಮಕ್ಕಳ ಬರವನ್ನು ನಿರೀಕ್ಷಿಸುತ್ತಾ ಮುಂಬಾಗಿಲಿನಲ್ಲೇ ನಿಂತಿದ್ದ ನಳಿನಿಯನ್ನು ಕಂಡು ವಿಶ್ವನ ಮನದಲ್ಲಿ ಅಸೂಯೆಯ ಛಾಯೆ ತೋರಿತು. ಆದರೆ ಕ್ಷಣದಲ್ಲೇ ಸರಿ ಮಾಡಿಕೊಂಡ. ಈ ವಿಷಯಗಳಲ್ಲಿ ಪೃಥ್ವಿಯೂ ನನ್ನ ಹಾಗೆ ವಂಚಿತನೇ. ಆದರೆ ಅವನ ಕಣ್ಣಲ್ಲಿ ಅಸೂಯೆಯ ನೋಟ ಕೂಡಾ ಇಲ್ಲ. ಅವನಂತೆ ಇರಲು ತಾನೂ ಪ್ರಯತ್ನಿಸಬೇಕು ಎಂದುಕೊಂಡ.

ಮಕ್ಕಳಿಬ್ಬರನ್ನೂ ಪ್ರೀತಿಯಿಂದ ತಬ್ಬಿಕೊಂಡು, ಮೈದಡವಿದಳು, ಆನಂದಬಾಷ್ಪವನ್ನು ಸುರಿಸಿದಳು. "ರಜದಲ್ಲಿ ಒಮ್ಮೆಯಾದರೂ ಇಲ್ಲಿಗೆ ಬರಬೇಕು ಅಂತ ಅನ್ನಿಸಲಿಲ್ವಾ ! ನಿಮ್ಮ ಅಮ್ಮನ್ನ ನೋಡಬೇಕೂಂತ ಅನಿಸಲಿಲ್ವಾ ?"

"ತುಂಬಾ ರಜವಿರಲಿಲ್ಲ. ಅಲ್ಲದೇ ರಜದಲ್ಲೂ ನಮಗೆ ಬೇಕಾದಷ್ಟು ಕಾಲೇಜಿನದೇ ಕೆಲಸ ಕಾರ್ಯಗಳಿರುತ್ತಿದ್ದವು..."

"ಎಲ್ಲಾ ಹೇಳೋದೂ ನಿಜ. ಫಾರಿನ್ನಿಗೆ ಹೊರಟುಹೋದರೆ ಈ ದೇಶಾನೇ ಮರೆತು ಅಂತ. ನಿಮ್ಮ ಮುಖಾನೇ ಹೇಳುತ್ತೆ. ನೀವು ಅಲ್ಲಿಯ ಜನಜೀವನಕ್ಕೆ ಚೆನ್ನಾಗಿ ಹೊಂದಿಕೊಂಡು ಬಿಟ್ಟಿದೀರಿ... ಇನ್ನು ಮುಂದೆ ಮತ್ತೆ ನಿಮ್ಮ ದೇಶದ ಜನಜೀವನಕ್ಕೇ ಹೊಂದಿಕೊಳ್ಳಿ. ಇಲ್ಲದಿದ್ದರೆ ಸೋಮಾರಿಗಳಾಗಿ ಬಿಡ್ತೀರಿ. ಪೃಥ್ವಿ ಒಬ್ಬನೇ ಎಲ್ಲವನ್ನೂ ನೋಡಿಕೊಂಡು ಅವನಿಗೂ ಸಾಕಾಗಿರುತ್ತೆ. ಇನ್ನು ಮುಂದೆ ನೀವಿಬ್ಬರೂ ಅವನಿಗೆ ಜೊತೆಯಾಗಬೇಕು."

ಅಜಯ ವಿಜಯರು ಪೃಥ್ವಿಯ ಮುಖವನ್ನೇ ನೋಡಿದರು. ಈಗಲೇ ಏನನ್ನೂ ಹೇಳುವುದು ಬೇಡ ಎನ್ನುವಂತೆ ಸಂಜ್ಞೆ ಮಾಡಿದ. ಅದನ್ನು ಅವರು ಅರಿತರು. ಪೃಥ್ವಿಯ ಮಾತಿಗೆ ಇಲ್ಲವೆನ್ನಲಾಗದೇ ವಿಶ್ವ ಅಲ್ಲೇ ಉಳಿದುಕೊಂಡ. ಅಜಯ ವಿಜಯರು ಮನೆಯವರಿಗೆ ತಂದಿದ್ದ ಉಡುಗೊರೆಗಳನ್ನು ತೆಗೆತೆಗೆದು ಕೊಟ್ಟರು. ಅಜಯ ವಿಶ್ವನಿಗೊಂದು, ಪೃಥ್ವಿಗೊಂದು ಕೈಗಡಿಯಾರಗಳನ್ನು ತಂದಿದ್ದರು. ವಿಜಯ ತನ್ನ ತಾಯಿಗೆಂದು ಐದಾರು ಅಲ್ಲಿಯ ಸೀರೆಗಳನ್ನು ತಂದಿದ್ದ.

"ನನಗ್ಯಾಕೆ ಈ ವಯಸ್ನಲ್ಲಿ ಇಂಥಾ ಸೀರೆಗಳು ? ನಾನು ಇದನ್ನೆಲ್ಲ ನಿಮ್ಮ ಹೆಂಡತಿಯರಿಗೇ ಕೊಟ್ಟು ಬಿಡ್ತೀವಿ."

"ಯಾಕೆ ನಿನಗೆ ಇಷ್ಟವಾಗಲಿಲ್ಲವಾ ?"

"ಈ ಸೀರೆಗಳೆಲ್ಲಾ ಚಿಕ್ಕೋರು ಉಟ್ಟರೇ ಚೆನ್ನ. ನಾನೀಗ ಮುದುಕಿ. ನಾನಿಂತಹ ಸೀರೆಗಳನ್ನು ಉಡೋದಿಲ್ಲ."

"ಸರಿ ಬಿಡು, ನಿನಗೆಂಥಾ ಸೀರೆ ಬೇಕೋ ಈಗಲೇ ಹೇಳಿಬಿಡು. ಮುಂದಿನ ಸಾರಿ ಬರುವಾಗ ಅಂಥಾದ್ದನ್ನೇ ತರ್ತೀವಿ" ಅಜಯ ನುಡಿದ. ಪೃಥ್ವಿ ಚಿಕ್ಕಮ್ಮನ ಕಡೆ ನೋಡುವ ಸಾಹಸ ಮಾಡಲಿಲ್ಲ. ವಿಜಯ ಅಜಯನ ಮೊಣಕೈ ತಿವಿದು ಸುಮ್ಮನಿರುವಂತೆ ಸಂಜ್ಞೆ ಮಾಡಿದ. ವಿಶ್ವ ಒಳಗೊಳಗೇ ನಕ್ಕ.

ವಿಶ್ವ ತನಗೆಂದು ತಂದಿದ್ದ ಕೈಗಡಿಯಾರವನ್ನೇ ನೋಡಿದ. ಆಗ ಅವನಿಗೆ ಇದ್ದಕ್ಕಿದ್ದಂತೆ ರೂಪಿಣಿಯ ನೆನಪಾಯಿತು. ಈಗ ಅವಳು ಎಲ್ಲಿದ್ದಾಳೋ... ಅವಳನ್ನೊಮ್ಮೆ ಭೇಟಿಯಾದರೆ ತನ್ನ ತಮ್ಮಂದಿರಿಗೆ ಸರಿ ಹೊಂದುವಂತಹ ಹುಡುಗಿಯರು ಸಿಕ್ಕರೂ ಸಿಗಬಹುದು ಎಂದುಕೊಂಡ.

ಅಡಿಗೆಯವರು, ಅಜಯ ವಿಜಯರಿಗೆ ಇಷ್ಟವಾದ ಪದಾರ್ಥಗಳನ್ನೇ ಮಾಡಿದ್ದರು. ಹರಟೆಯ ಜೊತೆ ಜೊತೆಗೆ ಊಟದ ಶಾಸ್ತ್ರವೂ ಆಯಿತು.

''ಈಗ ತುಂಬಾ ಹೊತ್ತಾಗಿ ಹೋಗಿದೆ. ಎಲ್ಲರೂ ಮಲಕ್ಕೊಳಿ ಬೆಳಿಗ್ಗೆ ಮಾತನಾಡೋರಂತೆ..'' ಎಂದು ತಮ್ಮಂದಿರನ್ನು ಕುರಿತು ಹೇಳಿದ ಪೃಥ್ವಿ. ವಿಶ್ವನಿಗೆ ಮಲಗಲು ಅಣಿ ಮಾಡಿಕೊಟ್ಟು ಪೃಥ್ವಿ ತನ್ನ ರೂಮಿಗೆ ಹೊರಟು ಹೋದ. ಅಜಯ ವಿಜಯರು ತಮ್ಮ ತಮ್ಮ ರೂಮಿಲನಲ್ಲಿ ಮಲಗಿದರು. ನಳಿನಿ ನಿದ್ದೆ ಬಾರದೇ ಹೊರಳಾಡುತ್ತಿದ್ದಳು. ಈ ದಿನ ತನ್ನ ಮನೆಯಲ್ಲಿ ತನ್ನ ಮಕ್ಕಳೆಲ್ಲರೂ ತನ್ನ ಜೊತೆಯಲ್ಲಿದ್ದಾರೆ. ಈ ದಿನ ನಿರಂತರವಾಗಲಿ ಎಂದು ಹಾರೈಸಿದಳು.

* * * *

ಕೇವಲ ನಾಲ್ಕು ವಾರಗಳಿಗಾಗಿ ಮಾತ್ರ ಬಂದಿದಾರೆ. ರಜ ಮುಗಿದ ಕೂಡಲೇ ಮತ್ತೆ ಪ್ಲೇನು ಹತ್ತುತ್ತಾರೆ ಎಂದು ತಿಳಿದಾಗ ನಳಿನಿ ಪೃಥ್ವಿಯ ಕಡೆ ನೋಡಿದಳು.

''ಇದೇನು ? ಹೀಗೆ ಹೇಳ್ತಾರೆ ? ಬಿಲ್‌ಕುಲ್ ಬೇಡಾಂತ ಹೇಳಿಬಿಡು. ನೀನೂ ಅವರ ಮಾತಿಗೆ ಕುಣಿಯಬೇಡ''

ತಮ್ಮಂದಿರನ್ನು ಬಲವಂತವಾಗಿ ಇಲ್ಲಿ ಉಳಿಸಿಕೊಳ್ಳುವುದರಲ್ಲಿ ಅರ್ಥವಿಲ್ಲವೆಂದು ತಿಳಿದ್ದ ಪೃಥ್ವಿ ನುಡಿದ. ''ಅವರಿಗೆ ಹೇಗೆ ಆಸೆಯೋ ಹಾಗೇ ಮಾಡಲಿ ಚಿಕ್ಕಮ್ಮ. ಅವರೀಗ ಚಿಕ್ಕವರಲ್ಲ. ಅವರ ಜವಾಬ್ದಾರಿ ಅವರಿಗೆ ಗೊತ್ತು.''

''ಇಲ್ಲ ಅವರಿಗೆ ಏನೂ ತಿಳುವಳಿಕೆ ಸಾಲದು. ಅಲ್ಲಿಯಜೀವನ ಸೊಗಸು ಅಂತ ಅನ್ನಿಸುತ್ತಿರಬಹುದು. ಆದರೆ, ಈ ಕರ್ತವ್ಯಗಳನ್ನೆಲ್ಲ ಬಿಟ್ಟು ಅಲ್ಲಿಗೆ ಹೋಗುವುದು ಸರಿಯಲ್ಲ ಅಂತ ಅನ್ನಿಸುತ್ತೆ.''

''ನಾವೇನೂ ಪರ್ಮನೆಂಟ್ ಆಗಿ ಅಲ್ಲೇ ಸೆಟ್ಲ್ ಆಗಿಬಿಡುಲ್ಲ. ಒಂದು ಹತ್ತು ವರ್ಷ ಅಲ್ಲಿದ್ದು ಇಲ್ಲಿಗೇ ಬಂದುಬಿಡುತ್ತೇವೆ. ಬೇಕಾದರೆ ನೀವು ಇಬ್ಬರೂ ಅಲ್ಲಿಗೇ ಬಂದಿರಬಹುದು.''

''ನಿಮ್ಮ ಹಾಗೆ ಪರದೇಶಿಗಳಾಗುವ ಹುಚ್ಚು ಪೃಥ್ವಿಗಿಲ್ಲ. ಎಂಟು ಹತ್ತು ವರ್ಷ ಏನೂ ಬೇಡ. ಪೃಥ್ವಿ ನೀವು ಹೇಳಿದ್ದಕ್ಕೆಲ್ಲ ತಲೆಯಾಡಿಸುತ್ತಾನೆ ಅಂತಂದರೆ, ನಾನು ಸುತಾರಾಂ ಒಪ್ಪುವುದಿಲ್ಲ....''

ಅಜಯ ವಿಜಯರ ಮುಖ ಅಸಮಾಧಾನದಿಂದ ದಪ್ಪಗಾಗಿತ್ತು. ಬಿಸಿ

ಬಿಸಿ ಇಡ್ಲಿ, ಚಟ್ನಿಯನ್ನು ತಿಂದು ಸವಿಯುವ ಸೊಗಸೂ ಹೊರಟುಹೋಗಿತ್ತು. ವಿಶ್ವಸುಮ್ಮನೇ ಎಲ್ಲರ ಮಾತನ್ನು ಗಮನಿಸುತ್ತಿದ್ದ.

''ಹೋಗಲಿ, ಅವರ ಆಸೆಯನ್ನು ತಳ್ಳಿ ಹಾಕುವುದು ಬೇಡ. ಇನ್ನೊಂದೆರಡು ವರ್ಷ ಅಲ್ಲಿದ್ದು ಬರಲಿ... ಆದರೆ ಈ ಸಾರಿ ಅವರುಗಳನ್ನು ಒಂಟಿಯಾಗಿ ಕಳಿಸುವುದು ಬೇಡ. ಮದುವೆ ಮಾಡಿಕೊಂಡು ಅವರವರ ಪತ್ನಿಯರನ್ನೂ ಜೊತೆಗೆ ಕರೆದುಕೊಂಡು ಹೋಗಲಿ...'' ಪೃಥ್ವಿ ಹೇಳಿದಾಗ, ಅವರಿಬ್ಬರೂ ತಲೆ ಎತ್ತಿ ''ವ್ಹಾಟ್ ? '' ಎಂದು ಒಟ್ಟಿಗೇ ನುಡಿದರು. ನಳಿನಿ ಸಹ ಕೌತುಕದಿಂದ ನೋಡಿದಳು.

''ಹುಂ... ನಿಮಗೇ ಮದುವೆ....''

''ನೋ ವೇ... ನಮಗೆ ಈಗಲೇ ಮದುವೆ ಬೇಡ.... ಮೊದಲು ನಿಮ್ಮ ಮದುವೆ ಆಗಲಿ...''

''ನಾನು ಇಲ್ಲೇ ಇರೋನು... ನೀವಾದರೆ ಮತ್ತೆ ಫಾರಿನ್ನಿಗೆ ಹೊರಟು ನಿಂತಿರೋರು. ಮೊದಲು ನಿಮ್ಮ ಮದುವೆ... ಏನು ಹೇಳ್ತೀರಿ ಚಿಕ್ಕಮ್ಮ ?''

''ನೀವೆಲ್ಲಾ ಹೀಗೆ ಯಾಕೆ ಏನೇನೋ ಮಾತನಾಡ್ತೀರೋ... ನನಗೊಂದೂ ಅರ್ಥವಾಗುತ್ತಿಲ್ಲ... ನಿನಗೇನಾದರೂ ಅರ್ಥವಾಯ್ತಾ ವಿಶ್ವಾ ?'' ವಿಶ್ವ ನಕ್ಕಂತೆ ಮಾತನಾಡಿದ. ನಾನೇನು ಹೇಳಲಿ ? ಎನ್ನುವಂತೆ ತಲೆ ಆಡಿಸಿದ.

''ನನ್ನ ಮಾತಿಗೆ ಬೆಲೆ ಏನೂ ಇಲ್ಲ''

''ನಮ್ಮ ಆಸೆಗೆ ಬೆಲೆ ಕೊಡೋದಾದ್ರೆ ನಾವೂ ನಿಮ್ಮ ಮಾತಿಗೆ ಬೆಲೆ ಕೊಡ್ತೀವಿ'' ವಿಜಯ ನುಡಿದ.

''ನೋಡಿದ್ರಾ... ನೋಡಿದ್ರಾ... ಒಂದೆರಡು ವರ್ಷ ಹೊರಗೆ ಇದ್ದುದಕ್ಕೇ ಎಷ್ಟು ಬದಲಾಯಿಸಿಬಿಟ್ಟದೀರಿ ...? ಮತ್ತೆ ನೀವು ಹೋದರೆ ನಮ್ಮನ್ನೆಲ್ಲ ಮರತೇ ಬಿಡ್ತೀರಿ ಅಷ್ಟೇ.''

''ಹಾಗೇನೂ ಆಗುಲ್ಲ ಮಮ್ಮೀ... ಮಮ್ಮೀನೇ. ತಾಯೀನ ಯಾರಾದ್ರೂ ಮರೆಯೋಕೆ ಆಗುತ್ತಾ?...'' ತನಗೆ ಈ ಮಾತುಕತೆ ಸಾಕು ಎನ್ನುವಂತೆ ವಿಶ್ವ ಎದ್ದ.

''ವಿಶ್ವ... ಅಜಯ ವಿಜಯರಿಗೆ ತಕ್ಕಂತಹ ಹುಡುಗಿಯರನ್ನು ಹುಡುಕಿ

ಕೊಡುವ ಜವಾಬ್ದಾರಿ ನಿಮ್ಮದು. ಆದಷ್ಟು ಬೇಗ ಮದುವೆ ಮಾಡಿಬಿಟ್ಟರೆ ನನ್ನ ಜವಾಬ್ದಾರಿಯೂ ಕಡಿಮೆ ಆಗುತ್ತೆ'' ಎನ್ನುತ್ತಾ ಪೃಥ್ವಿ ಎದ್ದ.

''ನಮ್ಮ ಫ್ರೆಂಡ್‌ನ ನೋಡಿಕೊಂಡು ಬರ್ತೀವಿ... ಹಾಗೇ ಸ್ವಲ್ಪ ಷಾಪಿಂಗ್ ಇದೆ... ನಿಮ್ಮ ಕಾರನ್ನು ತಗೊಂಡು ಹೋಗೋಣ್ವಾ ?'' ಅಜಯ ಕೇಳಿದ.

''ಓ... ಧಾರಾಳವಾಗಿ... ನಾನು ಆಫೀಸಿಗೆ ಹೋಗಿ ಕಾರನ್ನು ಕಳಿಸ್ತೀನಿ'' ಎನ್ನುತ್ತಾ ಪೃಥ್ವಿ ಹೇಳಿ ''ವಿಶ್ವ ನೀವೂ ನನ್ನ ಜೊತೆಗೆ ಆಫೀಸಿಗೆ ಬನ್ನಿ'' ಕರೆದ.

''ಇಲ್ಲ, ಇವತ್ತು ನನಗೆ ಸ್ವಲ್ಪ ಬೇರೆ ಕೆಲಸವಿದೆ. ಮನೆಗೆ ಹೋಗಿ ಸ್ನಾನ ಮಾಡಬೇಕು. ಬಸ್ಸಿನಲ್ಲಿ ಹೋಗ್ತೀನಿ ಪರವಾಗಿಲ್ಲ...'' ಎಂದಾಗ ಪೃಥ್ವಿ ತಡೆದ.

''ನನ್ನ ತಮ್ಮಂದಿರ ಮದುವೆಯಾಗುವವರೆಗೂ ನೀವು ನಮ್ಮ ಜೊತೆ ಇರಬೇಕು...'' ಕೇಳಿಕೊಂಡ.

''ಈಗ ನಾನು ಅದೇ ಕೆಲಸದ ಮೇಲೆ ಹೋಗೋಣ ಅಂತ ಅಂದ್ಕೊಂಡಿದೀನಿ. ಬಿಡುವಾದಾಗ ನಾನೇ ಬರ್ತೀನಿ. ಅಲ್ಲದೇ ನನಗೆ ಆಸ್ಪತ್ರೆಯ ಕೆಲಸಗಳೂ ಇರುತ್ತವೆ. ಅದನ್ನು ನಾನು ಮರೆಯುವಂತಿಲ್ಲ'' ಎಂದಾಗ, ಆ ಮಾತಿನಲ್ಲಿ ನಿಜ ಇದೆ ಎಂದೆನಿಸಿತ್ತು. ಸುಮ್ಮನೇ ''ಬರ್ತೀನಿ'' ಎಂದಷ್ಟೇ ಹೇಳಿ ವಿಶ್ವ ಅಲ್ಲಿಂದ ಹೊರಬಿದ್ದ. ಮನೆಗೆ ಬಂದು ಕೆಲವು ಮುಖ್ಯವಾದ ಕೆಲಸಗಳನ್ನು ಪೂರೈಸಿ, ಪಂಡಿತರಿಗೆ ಹೇಳಿ, ರೂಪಿಣಿ ಕೊಟ್ಟಿದ್ದ ವಿಳಾಸವನ್ನು ಹಿಡಿದು ಹೊರಟ.

ಅವಳು ಕೊಟ್ಟಿದ್ದ ವಿಳಾಸದಿಂದ ಅವಳು ಇರುವ ಸ್ಥಳವನ್ನು ಪತ್ತೆ ಹಚ್ಚುವುದು ಕಷ್ಟವೇ ಆಯಿತು. ಬಸ್ಸು ಬದಲಾಯಿಸಿ, ಆ ಊರನ್ನುತಲುಪಿದ. ಆ ಬೀದಿಯಲ್ಲಿ ರೂಪಿಣಿ ಎಂಬ ಹುಡುಗಿ ಇದಾಳೆ ಎನ್ನುವುದೇ ತಿಳಿದಿರಲಿಲ್ಲ ಕೆಲವರಿಗೆ. ಅಲ್ಲಿಂದ ಇಲ್ಲಿ ಏಕೆ ಬಂದು ನೆಲೆಸಿದಳು ಎಂದು ಅರ್ಥವಾಗಲಿಲ್ಲ. ಕಡೆಗೆ ಯಾರೋ ಹೇಳಿದರು, ''ಇಲ್ಲೇ ಹತ್ತಿರದಲ್ಲಿ ಒಂದು ನೃತ್ಯಶಾಲೆ ಇದೆ. ಅಲ್ಲಿ ಸಂಗೀತಾಭ್ಯಾಸ, ನೃತ್ಯಾಭ್ಯಾಸಗಳನ್ನು ಮಾಡಿಸುತ್ತಾರೆ. ಅಲ್ಲಿಗೆ ಅನೇಕ ಜನ ಹುಡುಗಿಯರು ಬರುತ್ತಾರೆ. ಅಲ್ಲಿ ವಿಚಾರಿಸಿ ನೋಡಿ. ತಿಳಿದರೂ ತಿಳಿಯಬಹುದು'' ಅಂತ. ವಿಶ್ವ ನೃತ್ಯಶಾಲೆಗೆ ಬಂದ. ಮುಂಬಾಗಿಲ ಬಳಿ ನಿಂತಿದ್ದ ರೂಪಿಣಿ ವಿಶ್ವನನ್ನು ಕಂಡು ಗುರುತಿಸಿ, ತಾನೇ ಬಂದಳು. ವಿಶ್ವನಿಗೆ ಅವಳ ಗುರುತು ಸಿಗಲಿಲ್ಲ.

''ಹಲೋ ವಿಶ್ವಾ ! ನೀವು ಇಲ್ಲಿ !'' ಎಂದು ಆಶ್ಚರ್ಯ ಒನಪು ವೈಯಾರಗಳಿಂದ ಪ್ರಶ್ನಿಸಿದಾಗ ಅವನು ಪರಿಶ್ರಮವನ್ನೆಲ್ಲ ಮರೆತ. ಅವಳನ್ನೇ ನೋಡುತ್ತಾ ನಿಂತ. ''ನಾನು ರೂಪಿಣಿ... ನನ್ನನ್ನೇ ಹುಡುಕಿಕೊಂಡು ಬಂದಿದೀರಿ ತಾನೇ...'' ಎಂದು ಅವನ ಮೈ ಮುಟ್ಟಿ ಎಚ್ಚರಿಸಿದಳು. ವಿಶ್ವ ಹಗುರವಾಗಿ ನಕ್ಕ.

''ನನಗೆ ನಂಬಿಕೇನೇ ಬರ್ತಿಲ್ಲ...ಅಂದ ಹಾಗೆ ನೀವು ರೂಪಿಣಿನೇನಾ ? ಮೊದಲಿಗಿಂತ ತುಂಬಾ ಚೆನ್ನಾಗಿ ಆಗಿ ಬಿಟ್ಟಿದೀರಿ...'' ಹೊಗಳಿದ.

''ಆಮೇಲೆ ಹೊಗಳೋರಂತೆ, ಮೊದಲು ಒಳಗೆ ಬನ್ನಿ...'' ವಿಶ್ವ ಅವಳನ್ನು ಹಿಂಬಾಲಿಸಿ ಒಳಗೆ ಬಂದ.

''ರೂಪಿಣಿ ಮತ್ತೆ ಬರಲೇ ಇಲ್ಲ ನೀವು... ಎರಡು ಮೂರು ವರ್ಷಕ್ಕೂ ಮೇಲಾಯಿತು ನಿಮ್ಮನ್ನು ನೋಡಿ.... ಈ ನೃತ್ಯಶಾಲೆ ಯಾರದ್ದು ?''

''ನಮ್ಮದೇ... ನಾವು ಐದಾರು ಜನ ಹೆಂಗಸರು ಸೇರಿ, ಈ ಶಾಲೆಯನ್ನು ನಡೆಸ್ತಾ ಇದೀವಿ. ಹುಡುಗಿಯರಿಗೆ ಉಪಯೋಗವಾಗುವಂತಹ ವಿದ್ಯೆಗಳನ್ನು ಇಲ್ಲಿ ಕಲಿಸಿಕೊಡ್ತೀವಿ. ನಾನು ಟೈಪಿಂಗ್ ಹೇಳಿಕೊಡ್ತೀನಿ... ನನ್ನನ್ನು ಹುಡುಕಿಕೊಂಡು ಬಂದಿರುವ ಕಾರಣ... ಏನು ?'' ಪ್ರಶ್ನಿಸಿದಳು.

''ಕಾರಣವನ್ನು ಆಮೇಲೆ ಹೇಳ್ತೀನಿ. ಮೊದಲು ನೀವು ಹೇಳಿ... ನಿಮ್ಮನ್ನು ನೋಡಿದರೆ ಬಹಳ ಖುಷಿಯಾಗಿರುವಂತೆ ಕಾಣಿಸುತ್ತೆ. ಮದುವೆ ಮಾಡಿಕೊಂಡಿದೀರಾ ?''

''ಮದುವೆಯಾದರೋರೆಲ್ಲಾ ಖುಷಿಯಾಗಿರ್ತಾರೆ ಅಂತ ನಾನು ನಂಬುಲ್ಲ. ಇಲ್ಲ, ನಾನು ಮದುವೆ ಮಾಡಿಕೊಂಡಿಲ್ಲ. ನಿಮ್ಮ ವಿಚಾರ ಏನು ? ಆ ನಿಮ್ಮ ಬ್ರಹ್ಮಚಾರಿ ಸ್ನೇಹಿತ ಇನ್ನೂ ಹಾಗೇ ಇದಾನಾ ?'' ನಗುತ್ತಾ ಪ್ರಶ್ನಿಸಿದಳು.

''ಹೂಂ ಹಾಗೇ ಇದಾನೆ. ಈಗ ನಿಮ್ಮನ್ನು ನೋಡಿದರೆ, ಅವನು ತನ್ನ ಮನಸ್ಸನ್ನು ಬದಲಾಯಿಸುವುದು ಖಂಡಿತಾ...'' ನಗುತ್ತಾ ನುಡಿದ.

''ಈಗ ಅವನ ಮನಸ್ಸನ್ನು ಕಟ್ಟಿಕೊಂಡು ಏನಾಗಬೇಕಾಗಿದೆ ನನಗೆ ? ಬನ್ನಿ ಮನೆಗೆ ಹೋಗೋಣ'' ಎನ್ನುತ್ತಾ ಪಕ್ಕದಲ್ಲೇ ಇದ್ದ ತನ್ನ ಮನೆಗೆ ಕರೆದೊಯ್ದಳು. ಇದು ನಮ್ಮ ಮೆಸ್. ಇಲ್ಲಿ ನಾವು ಆರು ಜನರು ಇದೀವಿ. ನನ್ನ ಜೊತೆಗೆ ನನ್ನ ಕಸಿನ್ಸ್ ಇಬ್ಬರಿದಾರೆ... ಅವರಿಬ್ಬರೂ ಕಾಲೇಜಿಗೆ

ಹೋಗಿದ್ದಾರೆ. ಒಬ್ಬ ಅಡಿಗೆಯವರೂ, ಕೆಲಸದವಳೂ ಇದಾರೆ.'' ಅಲ್ಲೇ ಇದ್ದ ಒಬ್ಬ ಹುಡುಗಿಗೆ ಅವನನ್ನು ಪರಿಚಯಿಸಿದಳು.

''ಇವರು ನಮ್ಮ ತಂದೆಯ ಬಳಗದವರು...'' ವಿಶ್ವ ಕೈ ಮುಗಿದು ಅವಳನ್ನೇ ನೋಡಿದ. ಎಂಥಾ ಚೆಲುವೆ...! ಎಂದುಕೊಂಡ.

''ಇವಳು ಮೋಹಿನಿ, ಡ್ಯಾನ್ಸ್ ಹೇಳಿಕೊಡ್ತಾಳೆ'' ಹೆಸರಿಗೆ ತಕ್ಕ ಹಾಗೇ ಇದಾಳೆ... ನಿಧಾನವಾಗಿ ಅವಳು ಯಾರು, ಏನು ಅಂತ ವಿಚಾರಿಸಬೇಕು ಎಂದುಕೊಂಡ. ಅವಳು ಮತ್ತೆ ಪ್ರಶ್ನಿಸಿದಳು ತಮಾಷೆಯ ಧ್ವನಿಯಲ್ಲಿ.

''ನಿಮ್ಮ ತಾತಾ ಹುಗಿದಿಟ್ಟಿದ್ದ ಹಣ ಪತ್ತೆಯಾಯ್ತಾ?'' ವಿಶ್ವ ತಲೆಯನ್ನು ಅಡ್ಡಡ್ಡ ಆಡಿಸಿದ.

''ನಿಜ ಹೇಳ್ತೀನಿ ರೂಪಿಣಿ... ಆ ಹಣವನ್ನು ಇಟ್ಟುಕೊಂಡು, ನಮ್ಮ ತಾತ ಏನು ಸುಖಪಟ್ಟರೋ ನನಗೆ ತಿಳಿಯದು ಆದರೆ ಎಲ್ಲಿಟ್ಟಿದೀನಿ ಅಂತ ಸರಿಯಾಗಿ ತಿಳಿಸಿ ಸಾಯಬಾರದಾಗಿತ್ತೇ ? ಸಿಕ್ಕಿದ್ದರೆ ಎಲ್ಲವನ್ನು ಪೃಥ್ವಿಗೆ ಕೊಟ್ಟು ಋಣ ಮುಕ್ತನಾಗುತ್ತಿದ್ದೆ...''

''ಪೃಥ್ವಿ ತಗೋತ್ತಿದ್ದನೋ ಇಲ್ಲವೋ...? ಅವನೊಬ್ಬ ಹಠವಾದಿ.''

''ಅವನ ಹತ್ತಿರ ಕೊಳೆತು ಹೋಗೋವಷ್ಟು ಹಣವಿರಬಹುದು. ಅವನು ಒಪ್ಪಿದರೆ, ಅದನ್ನು ಬಡಬಗ್ಗರ ಔಷಧ ಪಥ್ಯದ ಖರ್ಚಿಗೆ ಉಪಯೋಗಿಸುತ್ತಿದ್ದೆ...'' ಪ್ರಾಮಾಣಿಕವಾಗಿ ನುಡಿದರೂ ಅವಳು ನಂಬಲಿಲ್ಲ.

''ನಿಜವಾಗಿಯೂ....''

''ಹೂಂ, ದಿಢೀರನೇ ಅಷ್ಟು ಹಣ ನನಗೆ ಸಿಕ್ಕರೆ ನಾನೊಬ್ಬನೇ ಹೇಗೆ ಖರ್ಚು ಮಾಡಲಿ ? ಬೇರೆಯವರಿಗೋಸ್ಕರ ಖರ್ಚು ಮಾಡಿದರೆ, ಅದರ ಆನಂದವೇ ಬೇರೆ... ಅದನ್ನು ಬಿಟ್ಟು ಬೇರೆ ವಿಧಾನ ನನಗೆ ತಿಳಿಯದು''

''ಮೊದಲು ನಿಮಗೆ ಹಣ ಸಿಗಲಿ. ಖರ್ಚು ಮಾಡುವ ವಿಧಾನವನ್ನು ನಾನು ನಿಮಗೆ ತಿಳಿಸ್ತೀನಿ. ನನಗೆ ಬೇಕಾದಷ್ಟು ವಿಧಾನಗಳು ತಿಳಿದಿವೆ'' ಅವಳು ನಗುತ್ತಾ ವೈಯಾರವಾಗಿ ನುಡಿದಾಗ, ಅವನ ಮೈಮೇಲೆ ಏನೇನೋ ಹರಿದಾಡಿದ ಅನುಭವ.

''ಹೋಗಲಿ ಆ ವಿಚಾರ ಬೇಡ. ನಾನು ಈಗ ಬಂದಿರುವ ಕಾರಣವೇ ಬೇರೆ... ನನಗೆ ನಿಮ್ಮ ಮೋಹಿನಿಯ ತರಹ, ಇಬ್ಬರು ಸುಂದರಿಯರಾದ

ಹುಡುಗಿಯರು ಬೇಕಾಗಿದ್ದಾರೆ'' ರೂಪಿಣಿ ಆಂ! ಎಂದು ಬಾಯಿಬಿಟ್ಟಳು.

''ವಿಶ್ವಾ... ನಿಮಗೆ ಇಬ್ಬರು ಹುಡುಗಿಯರು ? ... ಯಾಕೆ ? ಮದುವೆಯಾಗ್ತಿದೀರಾ ?....''

''ನಾನು ? ನಾನು ಒಂದು ಮದುವೇನೇ ಮಾಡಿಕೊಂಡಿಲ್ಲ... ನನಗೆ ಆ ಆಸೆಯೇ ಇಲ್ಲ....''

''ಮದುವೆಯಾಗುವ ಆಸೆ ಇಲ್ಲದಿದ್ದರೇನು ? ಆದರೆ ಸ್ನೇಹವನ್ನಿಟ್ಟುಕೊಳ್ಳಬಹುದಲ್ಲ....''

''ನನ್ನ ಸ್ನೇಹಕ್ಕೆ ಹಾತ್ಮೊರೆದು, ಯಾವ ಹೆಣ್ಣು ತಾನಾಗಿಯೇ ಬಂದಿಲ್ಲ. ನಾನು ಯಾವ ದೊಡ್ಡ ಕಂಪೆನಿಯ ಮಾಲೀಕನೂ ಅಲ್ಲ ; ನನ್ನ ಹತ್ತಿರ ಹುಗಿದಿಟ್ಟಿರುವ ಯಾವ ಆಸ್ತಿಪಾಸ್ತಿಯೂ ಇಲ್ಲ...'' ಅವನ ಧ್ವನಿಯಲ್ಲಿ ವ್ಯಂಗ್ಯವಿತ್ತು.

''ಸರಿ ಹಾಗಾದರೆ, ಯಾರಿಗೆ ಅಂತ ಕೇಳಬಹುದಾ ?''

''ಪೃಥ್ವಿಯ ತಮ್ಮಂದಿರಿಗೆ... ಅಮೆರಿಕಾದಿಂದ ಬಂದಿದಾರೆ. ಅರ್ಜೆಂಟಾಗಿ ಮದುವೆಯಾಗಬೇಕಾಗಿದೆ... ಅದಕ್ಕೆ ಹೆಣ್ಣುಗಳನ್ನು ಹುಡುಕ್ತಾ ಇದೀನಿ...''

''ನೀವು ? ಅವನ ತಮ್ಮಂದಿರಿಗೆ ಹೆಣ್ಣು ಹುಡುಕ್ತಾ ಇದೀರಾ ? ಚೆನ್ನಾಗಿದೆ. ತಮಾಷೆ ಅಂತನ್ನಿಸುತ್ತೆ... ಅಲ್ಲದೇ ಈ ಕೊಂಪೇಲಿ ನಿಮಗೆ ಯಾವ ಹೆಣ್ಣು ಸಿಗುತ್ತೆ ?''

''ಕೊಂಪೆ ? ಈ ಊರಿನಲ್ಲಿ ನಿಮ್ಮಂತಹ, ನಿಮ್ಮ ಮೋಹಿನಿಯಂತಹ ರೂಪಸಿಯರು ಇರುವಾಗ, ಇದು ಖಂಡಿತಾ ಕೊಂಪೆಯಲ್ಲ....''

''ನನ್ನಂತಹ, ಮೋಹಿನಿಯಂತಹ ಹೆಣ್ಣುಗಳು ಅವರಿಗೆ ಇಷ್ಟವಾಗಬೇಕಲ್ಲ. ಎಷ್ಟಾಗಲೀ ಅವರುಗಳು ಪೃಥ್ವಿಯ ತಮ್ಮಂದಿರು'' ಹಂಗಿಸಿದಳು.

''ಅವರಿಬ್ಬರೂ ನನ್ನ ತಮ್ಮಂದಿರು ಕೂಡಾ. ನನಗೆ ಮೋಹಿನಿ, ನೀನೂ ಇಬ್ಬರೂ ಮೆಚ್ಚುಗೆಯಾದ ಮೇಲೆ, ಅವರಿಬ್ಬರಿಗೂ ಮೆಚ್ಚುಗೆಯಾಗ್ತಾರೆ...'' ರೂಪಿಣಿಗೆ ಹೆಮ್ಮೆ ಎನಿಸಿತ್ತು. ಆದರೆ ಪೃಥ್ವಿ ತನ್ನನ್ನು ತಿರಸ್ಕರಿಸಿ ಅವಮಾನ ಮಾಡಿದ್ದ. ಅದನ್ನು ಮರೆಯುವಂತಿಲ್ಲ. ಈ ವಿಶ್ವನ ಮಾತನ್ನು ನಂಬುವುದು ಹೇಗೆ ? ಅಂತಂದುಕೊಂಡಳು.

"ಅವರು ನನಗೆ ಈ ಕೆಲಸವನ್ನು ವಹಿಸಿದ ಮೇಲೆ, ನಾನು ನೋಡಿರುವ ಹುಡುಗಿಯರನ್ನು ಅವರು ಕಡೆಗಣಿಸುವಂತಿಲ್ಲ. ಮೊದಲು ಹುಡುಗಿಯರನ್ನೊಮ್ಮೆ ನೋಡಲಿ... ಮೋಹಿನಿಯ ಹಾಗೇ ರೂಪವತಿ ಇನ್ನೊಬ್ಬಳು ಸಿಕ್ಕಿದರೆ ಸಾಕು..."

"ಹ್ಹಾ... ಹ್ಹಾ... ತಡೀರಿ ವಿಶ್ವಾ... ನೀವೇ ಎಲ್ಲಾ ನಿರ್ಧರಿಸುವ ತರಹ ಮಾತನಾಡ್ತೀರಲ್ಲ. ಮೋಹಿನೀನ ಕೇಳದೇ ನಾನು ಏನೂ ಹೇಳುವುದಿಲ್ಲ. ಅಲ್ಲದೇ ಅವಳು ವಯಸ್ಸಿನಲ್ಲಿ ತುಂಬಾ ಚಿಕ್ಕವಳು."

"ಅವಳು ಚಿಕ್ಕವಳು, ಬಹುಶಃ ನೀನು ಅವರ ವಯಸ್ಸಿನವಳಿರಬಹುದು... ಹಾಗಾದರೆ ಬೇರೆ ಯಾವುದಾದರೂ ಹುಡುಗಿಯರನ್ನು ನೋಡಿ, ನನಗೆ ಆದಷ್ಟು ಬೇಗ ತಿಳಿಸು. ನಾನೇ ಬಂದು ಕರೆದುಕೊಂಡು ಹೋಗ್ತೀನಿ..."

"ಹುಂ ಹುಂ ಅವರುಗಳೇ ಇಲ್ಲಿಗೆ ಬರಲಿ. ಅವರಿಗೆ ತಾನೇ ಹೆಣ್ಣು ಬೇಕಾಗಿರುವುದು ?" ಸವಾಲೆಸೆದಳು. "ಅಲ್ಲದೇ ಅಪರಿಚಿತರ ಜೊತೆ ನಾನು ಯಾವ ಹುಡುಗಿಯರನ್ನೂ ಕಳಿಸುವುದಿಲ್ಲ."

"ನಿನ್ನ ಮಾತಿನಲ್ಲಿ ನ್ಯಾಯ ಇಲ್ಲ ರೂಪಿಣಿ. ನಾನು, ಪೃಥ್ವಿ, ಯಾರೂ ನಿನಗೆ ಅಪರಿಚಿತರಲ್ಲ."

"ಇರಬಹುದು, ಆದರೆ ಯಾವಾಗಲೂ ನಿಮ್ಮಗಳ ಮಾತೇ ನಡೆಯಬೇಕೂಂತ ಏನಿಲ್ಲ... ನಮಗೂ ಅವಕಾಶ ಬೇಕು ಅಲ್ವಾ ?"

"ನಿನ್ನ ತರ್ಕ ನನಗೆ ಅರ್ಥವಾಗುಲ್ಲ ರೂಪಿಣಿ...."

"ನನ್ನ ಮಾತು ಕೆಲವು ಸಲ ನನಗೇ ಅರ್ಥವಾಗುಲ್ಲ. ಅದಿರಲಿ, ಅವರ ಆಸ್ತಿ, ಅಂತಸ್ತು, ಶ್ರೀಮಂತಿಕೆಗೆ ಹಾಗೂ ಅಮೇರಿಕಾಕ್ಕೆ ಹೋಗಿ ಬಂದಿರುವ ಗಂಡುಗಳಿಗೆ ಹೆಣ್ಣು ಸಿಗುವುದು ಕಷ್ಟವೇನಲ್ಲ. ಆದರೆ ನನ್ನನ್ನು ಹುಡುಕಿಕೊಂಡು ಬರಲು ಕಾರಣ ?"

"ಪೃಥ್ವಿ ಹೇಳಿದಾಗ, ನನಗೆ ನೆನಪಿಗೆ ಬಂದವಳು ನೀನು..."

"ಓ ! ಆಗ ಈಗ ನಾನು ನೆನಪಿಗೆ ಬರುತ್ತೀನಿ ಅಂತಾಯ್ತು... ಹೀಗೇ ನನ್ನನ್ನು ಪೃಥ್ವೀನೂ ನೆನೆಸಿಕೊಂಡಿದ್ದರೆ, ನನಗೆ ಖುಷಿಯಾಗುತ್ತಿತ್ತು. ಹೋಗಲಿ ಬಿಡಿ, ನಾನಂತೂ ಪೃಥ್ವಿಯನ್ನು ಮದುವೆಯಾಗಲಿಲ್ಲ. ಆ ಮನೆಯನ್ನು ಸೇರುವ

ಅದೃಷ್ಟ ನನ್ನ ಇಬ್ಬರು ಕಸಿನ್ಸ್‌ಗೆ ಒದಗುವುದಾದರೆ ಅದನ್ನೇಕೆ ತಪ್ಪಿಸಲಿ ?''

ಇದರೊಂದಿಗೆ ತಾನು ಮತ್ತೆ ಪೃಥ್ವಿಯ ಸಮೀಪ ಹೋಗಿಬರುವ ಅವಕಾಶ ಸಿಗುತ್ತದೆ ಎಂದು ಭಾವಿಸಿದಳು.

''ನನ್ನ ಕಸಿನ್ಸ್ ಇಲ್ಲೇ ನನ್ನ ಜೊತೆಯಲ್ಲಿದ್ದಾರೆ. ಇಬ್ಬರೂ ಅಕ್ಕತಂಗಿಯರು. ತಂದೆ ಇಲ್ಲ. ತಾಯಿ ಹಳ್ಳಿಯಲ್ಲಿದ್ದಾರೆ... ನಾನು ಅವರ ಹತ್ತಿರ ಮಾತನ್ನಾಡಿರ್ತೀನಿ. ಭಾನುವಾರ ನೀವುಗಳು ಬನ್ನಿ...'' ರೂಪಿಣಿ ನುಡಿದಳು. ಅಲ್ಲಿಯೇ ಊಟ ಮಾಡಿಕೊಂಡು, ವಿಶ್ವ ತನ್ನ ಊರಿಗೆ ವಾಪಸ್ಸು ಬಂದ. ಮಾರನೇ ಬೆಳಿಗ್ಗೆ ಪೃಥ್ವಿಯನ್ನು ಭೇಟಿಯಾಗಿ, ತಾನು ಅಜಯ ವಿಜಯರಿಗೆ ಹುಡುಗಿಯರನ್ನು ನೋಡಿರುವುದಾಗಿ ಹೇಳಿದ. ''ಅವರುಗಳನ್ನು ಇಲ್ಲಿಗೆ ಕರೆಸುಕ್ಕೆ ಆಗುಲ್ಲ. ನೀವುಗಳೇ ಅಲ್ಲಿಗೆ ಹೋಗಿ ಬರಬೇಕು.''

''ಯಾಕೆ ಏನು ತೊಂದರೆ ? ಖರ್ಚಿಗೆ ಹಣ ಬೇಕಾಗಿದ್ದರೆ ಕೊಟ್ಟರಾಯ್ತು. ಯಾರು ಅವರು ?''

''ಬರದೇ ಇರುವುದಕ್ಕೆ ಬೇರೆ ಕಾರಣಗಳೂ ಇರಬಹುದು. ನೀವುಗಳೇ ಒಂದು ದಿನದ ಮಟ್ಟಿಗೆ ಹೋಗಿ ಬನ್ನಿ.''

''ನನಗೆ ಬಿಡುವಿಲ್ಲ. ನೀವು ಮೊದಲು ಚಿಕ್ಕಮ್ಮನ್ನ ಕರೆದುಕೊಂಡು ಹೋಗಿ ಹುಡುಗಿಯರನ್ನು ತೋರಿಸಿ. ಅವರಿಗೆ ಒಪ್ಪಿಗೆಯಾದರೆ ಎಲ್ಲರಿಗೂ ಒಪ್ಪಿಗೆ ಆದಂತೆ.''

ನಳಿನಿಯೊಡನೆ ಹೋಗುವ ಮನಸ್ಸಿಲ್ಲದಿದ್ದರೂ, ಇಲ್ಲವೆನ್ನಲಾಗದೇ ಒಪ್ಪಿಕೊಂಡ. ಮತ್ತೊಮ್ಮೆ ರೂಪಿಣಿಯನ್ನು ಭೇಟಿಯಾಗುವ ಅವಕಾಶ ಸಿಗುತ್ತದೆ ಎನ್ನುವ ಆಸೆ. ಅದೇ ದಿನವೇ ಪೃಥ್ವಿ ಚಿಕ್ಕಮ್ಮನೊಡನೆ ಮಾತನಾಡಿ ಹೊರಡಿಸಿದ. ಈ ನೆವದಲ್ಲಿ ವಿಶ್ವ ತನ್ನೊಡನೆ ಕೆಲವು ಗಂಟೆಗಳ ಕಾಲ ಜೊತೆಯಲ್ಲಿರುತ್ತಾರೆ ಎನ್ನುವ ತೃಪ್ತಿ ನಳಿನಿಗೆ. ಹೆದ್ದಾರಿಯಿಂದ ಕಾರು ಬಲಕ್ಕೆ ತಿರುಗಿ ಎಷ್ಟೋ ಕಿಲೋಮೀಟರುಗಳಷ್ಟು ದೂರ ಓಡಿದ ಮೇಲೆ, ಒಂದು ಊರನ್ನು ಸೇರಿತು. ಸಣ್ಣ ಹಳ್ಳಿಯಿಲ್ಲ, ಆದರೆ ಷಹರಲ್ಲ, ಇಲ್ಲಿ ಯಾವ ಹುಡುಗಿಯರನ್ನು ವಿಶ್ವ ಪತ್ತೆ ಹಚ್ಚಿದಾನೆ ಎಂದುಕೊಂಡು ಅತ್ತಿತ್ತ ತಿರುಗಿದಳು. ರೂಪಿಣಿಯ ನೃತ್ಯಶಾಲೆಯ ಬಳಿ ಕಾರು ನಿಂತಿತು. ಕಾರಿನಿಂದ ಇಳಿದ ನಳಿನ, ಪಕ್ಕದ ಮನೆಯ ಒಳಗೆ ಬಂದಳು. ಅಲ್ಲಿ ರೂಪಿಣಿಯ ಚಿಕ್ಕಮ್ಮ ಆದರದಿಂದ ಸ್ವಾಗತಿಸಿದರು. ಮೊದಲಿಗೆ ರೂಪಿಣಿಯ ಗುರುತು ನಳಿನಿಗೂ ಹತ್ತಲಿಲ್ಲ.

ಆವಳೇ ತನ್ನ ಪರಿಚಯವನ್ನು ಹೇಳಿಕೊಂಡಾಗ ನಳಿನಿಯ ಮುಖದ ಬಣ್ಣ ಬದಲಾಯಿತು. ವಿಶ್ವನ ಕಡೆ ತಿರುಗಿದಳು. ರೂಪಿಣಿ ಮಾತ್ರ, ಆದರ ವಿನಯಗಳಿಂದ ನಳಿನಿಯನ್ನು ಉಪಚರಿಸಿದಳು. ತಿಳಿದೂ ತಿಳಿದೂ ವಿಶ್ವ ರೂಪಿಣಿಯ ಕಡೆಯ ಹುಡುಗಿಯರನ್ನೇಕೆ ನೋಡಿದ್ದಾನೆ ? ಏನು ಕುತಂತ್ರವಿರಬಹುದು ? ಎಂದು ಚಿಂತಿಸಿದಳು. ರೂಪಿಣಿ ರೂಪದಲ್ಲಿ ಸ್ವಲ್ಪ ಬದಲಾಗಿರುವಂತೆ, ಗುಣದಲ್ಲೂ ಬದಲಾಗಿರಬಹುದೇ... ಈ ಕೆಲವಾರು ವರ್ಷಗಳಿಂದ ಇವಳ ಪತ್ತೆಯೇ ಇರಲಿಲ್ಲ. ಇಲ್ಲಿ ಈ ಹಳ್ಳಿಯಲ್ಲಿ ಏನು ಮಾಡುತ್ತಿದ್ದಾಳೋ ಅಂತಂದುಕೊಂಡರೂ ಕೇಳಲಿಲ್ಲ.

ರೂಪಿಣಿ ತನ್ನ ತಂಗಿಯರನ್ನು ಕರೆಸಿ, ಅವರಿಬ್ಬರಿಗೂ ಪರಿಚಯ ಮಾಡಿಕೊಟ್ಟಳು. ''ಇವಳು ರೇವತಿ... ಇವಳು ಮೇನಕಾ... ಇಬ್ಬರೂ ಬಿ.ಎಸ್ಸಿ. ಓದುತ್ತಿದ್ದಾರೆ. ಹಾಗೇ ನೃತ್ಯವನ್ನು ಕಲಿತಿದ್ದಾರೆ...''

ವಿನಯದಿಂದ ಕೈ ಮುಗಿದು ನಮಸ್ಕರಿಸಿದವರನ್ನೇ ನಳಿನಿ ಆಗಾಗ್ಗೆ ನೋಡಿದಳು. ನೋಡಲು ಇಬ್ಬರೂ ರೂಪವತಿಯರೇ. ತನಗಂತೂ ಒಪ್ಪಿಗೆ. ಅಜಯ ವಿಜಯರು ಏನಂತಾರೋ... ಎಂದುಕೊಂಡು ವಿಶ್ವನ ಕಡೆ ತಿರುಗಿದಳು.

''ರೂಪಿಣಿ, ಇವರಿಬ್ಬರ ಭಾವಚಿತ್ರವಿದ್ದರೆ ಕೊಡು... ಅಜಯ ವಿಜಯರಿಗೆ ಒಪ್ಪಿಗೆ ಆದರೆ ತಕ್ಷಣ ತಿಳಿಸ್ತೀನಿ. ಆದಷ್ಟು ಬೇಗ ಮದುವೆಯ ಕಾರ್ಯ ಮುಗಿಯಬೇಕು'' ನಳಿನಿ ನುಡಿದಾಗ ಮನದಲ್ಲೇ ನಕ್ಕಳು. ವಿಶ್ವ ಅವಳನ್ನೇ ನೋಡುತ್ತಿದ್ದ. ಅವಳೊಡನೆ ಹೆಚ್ಚಿಗೆ ಮಾತನ್ನಾಡಲಾಗಿರಲಿಲ್ಲ. ಮೇನಕಾ ರೇವತಿಯರನ್ನು ಮಿರೀಸಿದ ರೂಪ ಈ ರೂಪಿಣಿಯದು. ಇವಳು ತನ್ನವಳಾಗುವಂತಿದ್ದರೇ... ಎಂಬ ಬಯಕೆ ತಲೆದೋರಿತು. ಕಾಫಿ ತಿಂಡಿಯ ಉಪಚಾರದ ನಂತರ, ಅಲ್ಲಿಂದ ಹೊರಟರು. ಕಾರು ಸ್ವಲ್ಪ ದೂರ ಚಲಿಸಿದ ನಂತರ ನಳಿನಿ ವಿಶ್ವನನ್ನು ಆಕ್ಷೇಪಿಸಿದಳು.

''ಹುಡುಗಿಯರು ರೂಪಿಣಿಯ ಕಡೆಯವರು ಅಂತ ನೀನೇಕೆ ಹೇಳಲಿಲ್ಲ? ಪೃಥ್ವಿ ಏನಂತಾನೋ...?''

''ಪೃಥ್ವಿ ಏನೂ ಅನ್ನುವುದಿಲ್ಲ. ರೂಪಿಣಿ... ಕೇಸನ್ನು ವಾಪಸ್ಸು ತಗೊಂಡಳಲ್ಲ. ಈಗ ಯಾವ ತೊಂದರೆಯೂ ಇಲ್ಲ.''

''ನನಗೇನೋ ಹುಡುಗಿಯರು ಹಿಡಿಸಿದಾರೆ. ಆದರೆ ಪೃಥ್ವಿ ಹಾಗೂ

ಅಜಯ ವಿಜಯರು ಒಮ್ಮೆ ನೋಡಿದ ಮೇಲೇ ಮುಂದಿನ ಮಾತು...''

''ನಿಮ್ಮಿಷ್ಟ....'' ಎಂದ ಹೆಚ್ಚಿಗೆ ಮಾತನ್ನು ಬೆಳೆಸದೇ.

''ಹುಡುಗಿಯರು ತಂದೆ ಇಲ್ಲದವರು, ಅನುಕೂಲಸ್ಥರಲ್ಲ, ಈ ವಿಷಯವನ್ನೇಕೆ ಮೊದಲೇ ತಿಳಿಸಲಿಲ್ಲ ?''

''ನೀನೂ ಅನುಕೂಲಸ್ಥಳಾಗಿರಲಿಲ್ಲ. ನಿನ್ನ ಗಂಡ ನಿನ್ನ ಬಳಿ ಇರಲಿಲ್ಲ. ನಿನ್ನನ್ನು ನಾಗೇಶ ಉದ್ಧಾರ ಮಾಡಿದರು... ಈ ಹುಡುಗಿಯರು ನಿನಗಿಂತ ವಾಸಿ... ಅವರನ್ನು ಉದ್ಧಾರ ಮಾಡಿದರೆ ನಿನ್ನ ಸ್ಥಾನಮಾನ ಇನ್ನೂ ಹೆಚ್ಚುತ್ತೆ'' ಎಂದು ಅವನು ಕೆಳದನಿಯಲ್ಲಿ ನುಡಿದಾಗ ನಳಿನಿಯ ಮುಖ ಕೆಂಪಾಗಿತ್ತು. ಕಾರನ್ನು ಓಡಿಸುತ್ತಿರುವ ಚಂದ್ರುಗೆ ಈ ಮಾತು ಕೇಳಿರಬಹುದೇ ಅಂತಂದುಕೊಂಡಾಗ, ಇವನೊಂದಿಗೆ ಮಾತನ್ನು ಬೆಳೆಸುವುದೇ ಬೇಡ ಎಂದುಕೊಂಡಳು.

ಪೃಥ್ವಿ ತಾನಾಗಿಯೇ ಏನನ್ನೂ ಕೇಳದಿದ್ದಾಗ ಅವಳಿಗೆ ನಿರಾಸೆಯಾಗಿತ್ತು. ಆಸ್ತಿ, ಅಂತಸ್ತು, ಅನುಕೂಲ, ಮಕ್ಕಳು ಎಲ್ಲಾ ಇದ್ದು ನಾನು ಏಕಾಂಗಿಯೇ. ವಿಶ್ವನಾಗಲೀ, ಪೃಥ್ವಿಯಾಗಲೀ, ತಾವಾಗಿಯೇ ಏನನ್ನೂ ಆಡುವುದಿಲ್ಲ. ಮನೆಗೆ ಸೊಸೆಯರು ಬಂದರೆ, ತನ್ನ ಒಂಟಿತನ ನೀಗಬಹುದೇನೋ ಅಂತ ಅಂದುಕೊಂಡಿದ್ದೆ. ಆದರೆ ಅವರುಗಳೂ ಅಮೆರಿಕಾಕ್ಕೆ ಹಾರಿ ಹೋಗಿ ಬಿಡ್ತಾರೆ....

ತಿಳಿದೂ ತಿಳಿದೂ ತಾನು ರೂಪಿಣಿಯ ಚಿಕ್ಕಮ್ಮನ ಮಕ್ಕಳನ್ನು ತಂದುಕೊಂಡು ಮುಂದೆ ಏನಾದರೂ ಎಡವಟ್ಟಾದರೇ... ಈ ವಿಷಯದಲ್ಲಿ ತನಗೆ ಸಲಹೆ ಹೇಳುವವರ್‍ಯಾರೂ ಇಲ್ಲವಲ್ಲ. ಬಹುಶಃ ವಿಶ್ವ ತನಗೆ ಯಾವ ಸಲಹೆಯನ್ನೂ ನೀಡುವುದಿಲ್ಲ. ಆದರೆ ಪೃಥ್ವಿಗೆ ತಿಳಿಸದೇ ತಾನು ಮುಂದುವರೆಯಬಾರದು ಎಂದುಕೊಂಡು, ಅವನು ಒಬ್ಬನೇ ಇದ್ದಾಗ ಮಾತನಾಡಿದಳು.

''ಈ ಫೋಟೋಗಳನ್ನು ನೋಡು. ಎಲ್ಲಾ ವಿಷಯದಲ್ಲೂ ಅಜಯ ವಿಜಯರಿಗೆ ತಕ್ಕವರು ಅಂತನ್ನಿಸುತ್ತೆ. ನಮ್ಮ ಮನೆಗೆ ಯಾವಾಗ ಕರೆಸೋಣ ? ನೀನೂ ನೋಡಿ ಒಪ್ಪಿದರೆ... ಆಮೇಲೆ ಮದುವೆ ಮಾತನಾಡೋಣ.''

''ಅದೆಲ್ಲಾ ಏನೂ ಬೇಡ. ನನ್ನ ಒಪ್ಪಿಗೆ ಮುಖ್ಯವಲ್ಲ, ನಿಮಗೆಲ್ಲ ಒಪ್ಪಿಗೆಯಾದರೆ ಸಾಕು...''

''ಇನ್ನೊಂದು ಮಾತು... ನಾನು ನಿನಗೆ ತಿಳಿಸಲೇ ಬೇಕು... ವಿಶ್ವ ಆ ಹುಡುಗಿಯರ ಬಗ್ಗೆ ನಿನ್ನ ಹತ್ತಿರ ಏನಾದ್ರೂ ಹೇಳಿದ್ನಾ ?''

''ಇಲ್ಲವಲ್ಲ... ಏಕೆ ? ಏನು ವಿಷಯ ?''

''ಆ ಹುಡುಗೀರು ರೂಪಿಣಿಯ ಚಿಕ್ಕಪ್ಪನ ಮಕ್ಕಳು....'' ವಿಶ್ವನನ್ನೇ ಗಮನಿಸಿದಳು. ಅವನು ಅತೀ ಗಂಭೀರನಾಗಿದ್ದ. ರೂಪಿಣಿಯ ವಿಷಯದಲ್ಲಿ ಎತ್ತಿರಲಿಲ್ಲ ವಿಶ್ವ... ಆದರೇನಾಯ್ತು? ವಿಶ್ವ ರೂಪಿಣಿಯ ವಿಷಯದಲ್ಲಿ ತನಗೆ ಸಹಾಯವನ್ನು ಮಾಡಿದ್ದ... ಅವಳ ತೊಂದರೆಯನ್ನು ನಿವಾರಿಸಿದ್ದ. ಈಗ ತಾನು ಏನನ್ನಾದರೂ ಪ್ರಶ್ನಿಸಿದರೆ, ಏನೆಂದುಕೊಳ್ಳಬಹುದು ! ನನಗೆ ಸಹಾಯ ಮಾಡಿದವನು, ನನ್ನ ಚಿಕ್ಕಪ್ಪನ ಮಗ, ಅದಕ್ಕಿಂತ ಹೆಚ್ಚು ನನ್ನ ಸ್ನೇಹಿತನಾಗಿರುವ್ರು... ಅವನಿಗೆ ತಿಳಿಯದ್ದು ಏನಿಲ್ಲ. ಬಹುಶಃ ನಮ್ಮ ಮನೆಯ ಹಿನ್ನೆಲೆಯನ್ನು ಅರಿತವರು ಈ ವಿಶ್ವಾ.. ಆ ರೂಪಿಣಿ... ಇಬ್ಬರೇ ಅದನ್ನೆಲ್ಲ ತಿಳಿದೇ ವಿಶ್ವ ಮುಂದುವರೆದಿರಬಹುದು ಎನಿಸಿತ್ತು.

''ಆ ಹುಡುಗಿಯರು ನಮ್ಮ ಮನೆಗೆ ಬಂದು ಸೇರಿದ ಮೇಲೆ ನಮ್ಮವರೇ... ಅನುಕೂಲಸ್ಥರಲ್ಲ, ತಂದೆಯಿಲ್ಲದ ಹುಡುಗಿಯರು ನಮ್ಮ ಮನೆಗೆ ಬೇಗ ಹೊಂದಿಕೊಳ್ಳಬಹುದು ಅಲ್ವಾ ?''

ಪೃಥ್ವಿ ತನ್ನನ್ನು ಉದ್ದೇಶಿಸಿ ಈ ಮಾತುಗಳನ್ನಾಡಿರಬಹುದೇ ? ಎಂಬ ಅನುಮಾನ ಕಾಡಿತು. ಆದರೆ ಪೃಥ್ವಿ, ಚಿಕ್ಕಮನ ಕಡೆ ನೋಡುತ್ತಿರಲಿಲ್ಲ... ಈ ಹುಡುಗಿಯರಿಗೆ ತನ್ನಂತೆ ಮೊದಲು ಮದುವೆ ಆಗಿರಲಿಲ್ಲ, ಮಗುವೂ ಇಲ್ಲ, ಯಾವ ಅಸಹಾಯಕತೆಯೂ ಇಲ್ಲ. ಅವಳಿಗೆ ತನ್ನ ತಂದೆಯ ನೆನಪಾಗಿತ್ತು. ತನ್ನ ತಂದೆ ಅತೀ ಸ್ವಾರ್ಥಿ... ಆದರೆ ಅವರ ಈ ಸ್ವಾರ್ಥತನವೇ ತನ್ನ ಈ ಸುಭದ್ರವಾದ ನೆಲೆಗೆ ಕಾರಣ. ಈಗ ವಿಶ್ವನೂ ಒಂದು ನೆಲೆಗೆ ಬಂದಿದ್ದಾನೆ. ಅಷ್ಟು ಸಾಕು, ಮೊದಲು ಅಜಯ ವಿಜಯರ ಮದುವೆ ನೆರವೇರಲಿ. ನಂತರ ಪೃಥ್ವಿಗೂ ಮದುವೆಯಾಗುವ ಆಸೆ ಬರಬಹುದು. ವಿಶ್ವನೂ ಮದುವೆಯಾಗಬಹುದು... ತನ್ನ ಮಕ್ಕಳೆಲ್ಲಾ ಸಂಸಾರಸ್ಥರಾಗಿದ್ದರೆ ತನಗೆ ಅದಕ್ಕಿಂತ ಇನ್ನೇನು ಬೇಕು ?.... ತನ್ನಲ್ಲೇ ಆಶಿಸುತ್ತಿದ್ದಳು.

ಮತ್ತೆ ವಿಶ್ವ ಸಿಕ್ಕಾಗ ಅದೇ ಮಾತನ್ನಾಡಿದಳು. ''ಏನೇ ಇರಲಿ, ಈಗಲೂ ನೀನು ನನ್ನ ಮಗನೇ. ನೀನೂ ಮದುವೆಯಾಗಿ ಸಂಸಾರಸ್ಥನಾಗಲಿ ಅಂತ ನನ್ನ ಆಸೆ. ರೂಪಿಣಿ ನಿನಗೆ ಇಷ್ಟವಾಗಿದ್ದರೆ ಹೇಳು. ನಾನು ಮದುವೆಯ ಏರ್ಪಾಟು ಮಾಡ್ತೀನಿ.''

''ಏನೂ ಬೇಕಿಲ್ಲ. ಅದು ನನ್ನ ಸ್ವಂತ ವಿಚಾರ. ಈ ವಿಚಾರವಾಗಿ ಯಾರೂ ಮಾತನಾಡಬೇಕಾಗಿಲ್ಲ'' ಅವನು ಒರಟಾಗಿ ನುಡಿದಾಗ ಪೆಚ್ಚಾದಳು.

* * * *

ಪೃಥ್ವಿಯ ಮಾತಿಗೆ ಇಲ್ಲವೆನ್ನಲಾಗದೇ, ವಿಶ್ವನೇ ಹುಡುಗಿಯರನ್ನು ಕರೆತರಲು ಹೋಗಿದ್ದ. ರೂಪಿಣಿ ಯಾವ ಸಂಕೋಚವಿಲ್ಲದೇ ಹೊರಟಿದ್ದಳು. ಮೇನಕಾ ರೇವತಿಯರು ಎಂದಿನಂತೆ, ಸರಳವಾಗಿ ಸಿಂಗರಿಸಿಕೊಂಡಿದ್ದರು. ಅವರಿಬ್ಬರ ತಾಯಿಯೂ ಅವರೊಂದಿಗೆ ಹೊರಟಿದ್ದಳು.

ಅಜಯ ವಿಜಯ ಹುಡುಗಿಯರ ಫೋಟೋಗಳನ್ನು ನೋಡಿಯೇ ಒಪ್ಪಿಗೆ ಕೊಟ್ಟಿದ್ದರು. ಅಮೆರಿಕಾದ ಹುಡುಗಿಯರ ವೇಷಭೂಷಣ, ಮೇಕಪ್ ಅವುಗಳ ಮುಂದೆ ಈ ಹುಡುಗಿಯರು ಅತಿ ಸಪ್ಪೆ ಎನಿಸಿದ್ದರೂ, ಮುಖದ ಮೇಲಿನ ಮುಗ್ಧತೆ ಅವರಿಬ್ಬರನ್ನೂ ಆಕರ್ಷಿಸಿತ್ತು. ಈ ಮುಗ್ಧೆಯರನ್ನು ತಮಗೆ ಹೇಗೆ ಬೇಕೋ ಹಾಗೆ ತಿದ್ದಿಕೊಳ್ಳಬಹುದೆಂದು ಭಾವಿಸಿದರು.

ಮನೆಯ ಮುಂದೆ ಕಾರು ನಿಂತಿತು. ಅತಿಥಿಗಳನ್ನು ಸ್ವಾಗತಿಸಲು ಪೃಥ್ವಿ ಹೊರಬಂದ. ಮೊದಲಿಗೆ ಕಂಡವಳೇ ರೂಪಿಣಿ.

''ಹಲೋ ! ಪೃಥ್ವಿ... ಹೇಗಿದೀರಿ ?'' ವೈಯಾರದಿಂದ ಪ್ರಶ್ನಿಸಿದಳು. ಪೃಥ್ವಿ ಅವಳ ಪ್ರಶ್ನೆಗೆ ಉತ್ತರ ಕೊಡುವ ಗೋಜಿಗೆ ಹೋಗದೇ, ಎಲ್ಲರನ್ನೂ ಉದ್ದೇಶಿಸಿ ಬನ್ನಿ.... ಬನ್ನಿ... ಎಂದು ಸ್ವಾಗತಿಸಿದ. ವಿಶ್ವ ಎಲ್ಲರ ಪರಿಚಯವನ್ನು ಮಾಡಿಕೊಟ್ಟ. ನಳಿನಿಯನ್ನು ಪೃಥ್ವಿಯ ತಾಯಿ ಎಂದು ಪರಿಚಯಿಸಿದ. ರೂಪಿಣಿ, ಪೃಥ್ವಿಯ ಕಡೆ ಕಿರುನೋಟ ಬೀರಿದಳು.

ಔಪಚಾರಿಕ ಮಾತುಕತೆಗಳ ನಂತರ, ಕಾಫಿ ತಿಂಡಿಯ ಉಪಚಾರವೂ ಮುಗಿಯಿತು. ಅಜಯನಿಗೆ ಮೇನಕೆಯೆಂದೂ, ವಿಜಯನಿಗೆ ರೇವತಿಯೆಂದು ನಳಿನಿಯೇ ತೀರ್ಮಾನಿಸಿದ್ದಳು. ಅಜಯ ವಿಜಯರು ತಾವು ತಮ್ಮ ಭಾವೀ ಪತ್ನಿಯರೊಂದಿಗೆ ಮೊದಲು ಮಾತನಾಡಬೇಕೆಂದರು. ನಳಿನಿಗೆ ಅದು ಇಷ್ಟವಾಗಲಿಲ್ಲ. ಆದರೆ ಪೃಥ್ವಿ ಕೆಲಸದವರಿಗೆ ಹೇಳಿ ಮುಂದಿನ ಹೂ ತೋಟದಲ್ಲಿ ಕುರ್ಚಿಗಳನ್ನು ಹಾಕಿಸಿದ. ಅವರು ನಾಲ್ಕು ಜನರೂ ಕೈ ತೋಟಕ್ಕೆ ಬಂದರು.

"ಅಮೆರಿಕಾ ಅಂದರೆ ಹತ್ತಿರದಲ್ಲಿಲ್ಲ, ನಿಮ್ಮ ಊರು, ಮನೆಯನ್ನು ಬಿಟ್ಟು ನಮ್ಮ ಜೊತೆ ಬರೋಕ್ಕೆ ಸಿದ್ಧವಾಗಿದೀರಾ ?" ಅಜಯ ಪ್ರಶ್ನಿಸಿದ.

ಇಬ್ಬರೂ "ಹೂಂ" ಎಂದು ತಲೆಯಾಡಿಸಿದರು.

"ಅಲ್ಲಿಯ ವೇಷಭೂಷಣ, ಮಾತುಕತೆ, ಜೀವನಕ್ಕೆ ನೀವುಗಳು ಹೊಂದಿಕೊಳ್ಳಬೇಕಾಗುತ್ತದೆ. ಅಲ್ಲಿಯ ಜನರಂತೆ ಸ್ಮಾರ್ಟ್ ಆಗಬೇಕು. ಇದೆಲ್ಲ ನಿಮ್ಮಿಂದ ಸಾಧ್ಯಾನಾ ?"

ಇಬ್ಬರೂ ಸುಮ್ಮ ಸುಮ್ಮನೇ ಮುಖ ಮುಖ ನೋಡಿಕೊಂಡರು.

"ಆಮೇಲೆ, ನಮಗಲ್ಲಿ ಸರಿಹೋಗುಲ್ಲ. ನಾವು ವಾಪಸ್ಸು ಹೋಗ್ತೀವಿ ಅಂತ ಹೇಳಬಾರದು..." ಅವರಿಬ್ಬರೂ ಪೆಚ್ಚಾಗಿದ್ದರು.

"ನಿಮ್ಮನ್ನು ನಾವು ಬದಲಾಯಿಸ್ತೀವಿ. ಅಲ್ಲಿಗೆ ತಕ್ಕ ಹಾಗೆ ಮಾಡರ್ನ್ ಮಾಡ್ತೀವಿ. ನಿಮಗೆ ಒಪ್ಪಿಗೇನಾ ?"

ಅವರಿಬ್ಬರೂ ಹೂಂ ಎನ್ನುವಂತೆ ತಲೆಯಾಡಿಸಿದರು. "ಆದಷ್ಟು ಬೇಗ ನಿಮ್ಮ ಪಾಸ್‌ಪೋರ್ಟ್, ವೀಸಾಗಳಿಗೆ ರೆಡಿ ಮಾಡ್ತೀವಿ. ನಿಮಗೇನೇ ತೊಂದರೆ ಇದ್ದರೆ, ಮದುವೆಗೆ ಮುಂಚೆಯೇ ತಿಳಿಸಬೇಕು... ನಾವು ಮದುವೆಯಾದ ಕೆಲವೇ ದಿನಗಳೊಳಗೆ ಇಲ್ಲಿಂದ ಹೊರಡಬೇಕು."

ಹೂಂ ಎನ್ನುವಂತೆ ಮತ್ತೆ ತಲೆಯಾಡಿಸಿದರು.

"ನಾನು ಅಜಯ, ಇವನು ವಿಜಯ... ನಮ್ಮಿಬ್ಬರಲ್ಲೂ ಎಷ್ಟೋ ವ್ಯತ್ಯಾಸಗಳಿವೆ... ನೋಡಲು ಒಂದೇ ತರಹ ಇದೀವಿ ಅಂತ ಎಲ್ಲರೂ ಹೇಳ್ತಾರೆ. ನೀವುಗಳು ಕನ್‌ಫ್ಯೂಸ್ ಮಾಡಿಕೊಳ್ಳದಂತೆ ಎಚ್ಚರವಾಗಿರಬೇಕು" ಅಜಯ ನುಡಿದಾಗ ಹುಡುಗಿಯರಿಬ್ಬರೂ ಸಶಬ್ದವಿಲ್ಲದೇ ನಕ್ಕರು.

"ಹೂಂ, ಒಳಗೆ ಹೋಗೋಣ ಬನ್ನಿ. ಇನ್ನು ಮುಂದಿನ ಮಾತುಕತೆಯನ್ನು ಮಮ್ಮಿ ಆಡ್ತಾರೆ" ಎಂದ ವಿಜಯ. ಎಲ್ಲರೂ ಒಳಗೆ ಬಂದರು.

ಅಲ್ಲಿಗೆ ಎಲ್ಲಾ ಮಾತುಕತೆಗಳು ಮುಗಿದಿದ್ದವು. ಮದುವೆಯ ದಿನವನ್ನು ನಿಶ್ಚಯಿಸಿ ಆಗಿತ್ತು.

"ಇನ್ನು ಮುಂದಿನ ಹದಿನೈದು ದಿನಕ್ಕೇ ಮದುವೆ. ಎಲ್ಲಾ ಸಿದ್ಧತೆಗಳನ್ನೂ

ನಾವು ಮಾಡ್ತೀವಿ. ನಿಮಗೆ ಯಾವ ತೊಂದರೆಯೂ ಬೇಡ'' ನಳಿನಿ ನುಡಿದಾಗ ಆಕೆಯ ಮುಖ ಊರಗಲವಾಯಿತು.

''ನಮ್ಮ ಮಕ್ಕಳು ಪುಣ್ಯ ಮಾಡಿದ್ದರು ನಿಮ್ಮಂತಹವರ ಮನೆ ಸೇರೋಕೆ.... ನಮಗೆ ಇನ್ನು ಯಾವ ಚಿಂತೆಯೂ ಇಲ್ಲ. ಇನ್ನು ಮುಂದೆ ಇವರಿಬ್ಬರೂ ನಿಮ್ಮ ಮಕ್ಕಳು...'' ಆಕೆ ಮುಂಚಿತವಾಗಿಯೇ ನಳಿನಿಗೆ ತನ್ನ ಹೆಣ್ಣು ಮಕ್ಕಳನ್ನು ಒಪ್ಪಿಸಿಕೊಟ್ಟುಬಿಟ್ಟಳು.

''ಮದುವೆಯ ಸಿದ್ಧತೆ ಎಂದರೆ ಸುಲಭಾನಾ ? ಎಷ್ಟು ಜನ ಸಹಾಯ ವಿದ್ದರೂ ಸಾಲದು. ವಿಶ್ವ ನೀನು ಇಲ್ಲೇ ಇರಬೇಕು....'' ನಳಿನಿ ನುಡಿದಾಗ ಪೃಥ್ವಿಯೂ ಅದಕ್ಕೆ ಪುಷ್ಟಿ ಕೊಟ್ಟ.

''ನಮಗೆ ಈಗ ನೀವೇ ಹಿರಿಯರು. ನಿಮ್ಮ ಅನುಭವ ನನಗಿಲ್ಲ. ನೀವು ಮುಂದೆ ನಿಂತು, ನಮಗೆ ಎಲ್ಲಾ ತಿಳಿಸಿಕೊಡಬೇಕು...''

''ನನ್ನ ತಿಳುವಳಿಕೆ ಅಷ್ಟರಲ್ಲೇ ಇದೆ. ನಿಮಗೆ ಬೇಕಾದಷ್ಟು ಜನ ಸಹಾಯಕರಿದ್ದಾರೆ. ಆದರೆ ನನ್ನ ಸ್ನೇಹಿತನ ಮಾತಿಗೆ ಇಲ್ಲ ಎನ್ನಲಾರೆ. ಆದರೆ, ನಾನು ಈಗಿನಿಂದ ಇಲ್ಲಿರಲಾರೆ. ಮದುವೆಗೆ ಒಂದೆರಡು ದಿನ ಮುಂಚಿತವಾಗಿ ಬಂದಿರ್ತೀನಿ. ಅದಕ್ಕೆ ಮುಂಚೆ ಬೇಕಾದಾಗ ತಿಳಿಸಿದ್ರೆ ಖಂಡಿತಾ ಬರ್ತೀನಿ. ನಾನು ಆಸ್ಪತ್ರೆಯ ಕೆಲಸ ಕಾರ್ಯಗಳನ್ನು ಮರೆಯುವಂತಿಲ್ಲ'' ಸರಿ ಎನಿಸಿತ್ತು ಇಬ್ಬರಿಗೂ.

ಮದುವೆ ಗೊತ್ತಾದ ನಂತರ ರೂಪಿಣಿ ಆಗ ಈಗ ಬರತೊಡಗಿದಳು. ಕೆಲವು ಸಲ ಮೇನಕಾ ರೇವತಿಯರೂ ಅವಳೊಂದಿಗೆ ಬರುತ್ತಿದ್ದರು. ಪೃಥ್ವಿ ಮಾತ್ರ ತನ್ನ ಪಾಡಿಗೆ ತಾನು ಇದ್ದ. ಖರ್ಚು ವೆಚ್ಚ ಪ್ರತಿಯೊಂದನ್ನೂ ನಳಿನಿಯೇ ನೋಡಿಕೊಂಡಳು. ಒಮ್ಮೊಮ್ಮೆ ಅನ್ನಿಸುತ್ತಿತ್ತು. 'ಬಡವರ ಮನೆಯ ಹುಡುಗಿಯರು ಯಾವ ಆಡಂಬರದ ಅಲಂಕಾರ, ಬೆಡಗೂ ಏನೂ ಇಲ್ಲ. ಅಮೆರಿಕಾದ ಹುಡುಗಿಯರನ್ನು ಹೊಗಳುವ ನನ್ನ ಮಕ್ಕಳು ಇವರನ್ನು ಮೆಚ್ಚಿದ್ದು ಹೆಚ್ಚೇ... ರೂಪಿಣಿ ಇವರಿಬ್ಬರಿಗಿಂತ ಚೆನ್ನ. ವಿಶ್ವನೋ, ಪೃಥ್ವಿಯೋ ಅವಳನ್ನು ಮದುವೆಯಾಗುವಂತಿದ್ದರೇ...' ಎಂದುಕೊಳ್ಳುತ್ತಿದ್ದಳು.

ಒಮ್ಮೆ ವಿಶ್ವನೊಡನೆ ಮಾತನಾಡುವಾಗ ರೂಪಿಣಿ ಹೇಳಿದಳು.

''ಮೇನಕಾ, ರೇವತಿಯರನ್ನು ನೋಡಿದರೆ, ನನಗೆ ಅಸೂಯೆ ಯುಂಟಾಗುತ್ತದೆ. ಪುಣ್ಯ ಮಾಡಿದ್ದರು. ನನ್ನಿಂದ ಇಬ್ಬರಿಗೂ ಅಮೆರಿಕಾಕ್ಕೆ

ಹೋಗುವ ಛಾನ್ಸ್ ಸಿಗುತ್ತಿದೆ. ನನಗೂ ಅಮೆರಿಕಾಕ್ಕೆ ಹೋಗಬೇಕೂಂತ ಆಸೆಯಾಗುತ್ತಿದೆ. ಆದರೆ ನನ್ನನ್ನು ಕರೆದುಕೊಂಡು ಹೋಗುವವರೇ ಇಲ್ಲ'' ವಿಶ್ವ ಅವಳೊಬ್ಬಳಿಗೇ ಕೇಳಿಸುವಂತೆ ಪಿಸುದನಿಯಲ್ಲಿ ನುಡಿದ.

''ನನ್ನ ತಾತ ಹುಗಿದಿಟ್ಟಿರುವ ಹಣ ಸಿಗಲಿ; ನಾನು ನಿಮ್ಮನ್ನು ಅಮೆರಿಕಾಕ್ಕೆ ಕಳಿಸಿಕೊಡ್ತೀನಿ''

''ನಿಜವಾಗಿಯೂ...? ನೀವೂ ಬರ್ತೀರಾ ?''

''ಇಲ್ಲ, ನನಗೆ ಆ ಆಸೆ ಇಲ್ಲ. ನಮ್ಮ ದೇಶವೇ ನನಗೆ ಚೆನ್ನ. ನಮ್ಮ ದೇಶದ ಅಂದ ಚೆಂದವನ್ನೇ ಸರಿಯಾಗಿ ನೋಡಿಲ್ಲ ನಾನು. ಸಮಯ, ಹಣ ಸಿಕ್ಕರೆ ಮೊದಲು ನಮ್ಮ ದೇಶದಲ್ಲೇ ಕೆಲವಾರು ಪ್ರದೇಶಗಳನ್ನು ನೋಡುತ್ತೀನಿ.''

ರೂಪಿಣಿ, ವಿಶ್ವ ಸಲುಗೆಯಿಂದಿರುವುದನ್ನು ಗಮನಿಸಿದ್ದ ಪೃಥ್ವಿಯ ಮನಸ್ಸಿನಲ್ಲಿ ನಾನಾ ಶಂಕೆಗಳು ಮೂಡುತ್ತಿದ್ದವು. ವಿಶ್ವ ಈ ಮೊದಲೇ ಇವನ್ನೆಲ್ಲ ಯೋಜಿಸಿದ್ದಿರಬಹುದೇ ? ಎಷ್ಟು ಬೇಗ ಹುಡುಗಿಯರನ್ನು ಗೊತ್ತು ಮಾಡಿ ಕೊಟ್ಟನಲ್ಲ. ಈ ನೆವದಿಂದ ರೂಪಿಣಿ ಬಂದುಹೋಗುತ್ತಿರುವುದು ಜಾಸ್ತಿಯಾಗುತ್ತಿದೆ. ಮದುವೆಯ ಕಲಾಪಗಳು ಮುಗಿದು, ಆದಷ್ಟು ಬೇಗ ಈ ಹುಡುಗಿಯರು ಅಮೆರಿಕಾಕ್ಕೆ ಹೊರಟು ಹೋದರೆ ಚೆನ್ನ ಎಂದುಕೊಂಡ.

ನಳಿನಿಯ ನೇತೃತ್ವದಲ್ಲಿ, ಪೃಥ್ವಿ-ವಿಶ್ವರ ಸಹಕಾರದೊಂದಿಗೆ, ಅಜಯ-ಮೇನಕಾ, ವಿಜಯ-ರೇವತಿಯರ ಮದುವೆ ನೆರವೇರಿತು. ಮದುವೆಯ ಶಾಸ್ತ್ರದ ಕಲಾಪಗಳು ಸರಳವಾಗಿದ್ದರೂ, ರಿಸೆಪ್ಶನ್ ಮಾತ್ರ ಅದ್ದೂರಿಯಾಗಿ ನೆರವೇರಿತು. ಪರಿಚಯದ ಅನೇಕ ವ್ಯಕ್ತಿಗಳು, ಸ್ನೇಹಿತರು, ಬಂಧುಗಳು ಬಂದು ವಧೂವರರಿಗೆ ಉಡುಗೊರೆಗಳನ್ನಿತ್ತು ಆಶೀರ್ವದಿಸಿದ್ದರು. ಈ ಸಂದರ್ಭಗಳಲ್ಲೂ ರೂಪಿಣಿ ಆಗಾಗ್ಗೆ ಪೃಥ್ವಿಯ ಕಡೆ ನೋಡಿ, ಅಸೂಯೆಗೊಳ್ಳುತ್ತಿದ್ದರು.

ವಿಶ್ವ ಆಗಾಗ್ಗೆ ರೂಪಿಣಿಯ ಕಡೆಗೆ ನೋಡಿ, ತನ್ನನ್ನೇ ತಾನು ಹಳಿದುಕೊಳ್ಳುತ್ತಿದ್ದ. ಈ ತಾತನ ಆಸ್ತಿ ಸಿಕ್ಕಿಬಿಟ್ಟಿದ್ದರೇ... ತಾನೂ ಶ್ರೀಮಂತನಾಗಿರುತ್ತಿದ್ದೆ. ರೂಪಿಣಿಯಂತಹ ನಾಲ್ಕಾರು ಹೆಣ್ಣುಗಳು ನನ್ನ ಬೆನ್ನ ಹಿಂದೆ ಬಿದ್ದಿರುತ್ತಿದ್ದರು ಎಂದುಕೊಳ್ಳುತ್ತಿದ್ದ. ಅವನ ಮನಸ್ಸನ್ನು ಓದಿದವಳಂತೆ, ರೂಪಿಣಿ ಅವನ ಬಳಿಗೆ ಬಂದು ವೈಯಾರವಾಗಿ ನುಡಿದಳು.

"ನೀವೂ ಈ ಶ್ರೀಮಂತಿನಿಯ ಮಗನೇ ತಾನೇ... ನೀವೂ ನಿಮ್ಮ ಪಾಲನ್ನು ಕೇಳಿ ಪಡೆಯಿರಿ... ನಾನು ನಿಮ್ಮನ್ನು ಮದುವೆಯಾಗ್ತೀನಿ... ನಾವಿಬ್ಬರೂ ಒಂದಾದರೆ ಏನು ಬೇಕಾದ್ರೂ ಮಾಡಬಹುದು."

ವಿಶ್ವ ನಕ್ಕು ಅತ್ತಿತ್ತ ನೋಡಿದ. "ಯಾರಿಗಾದರೂ ಕೇಳಿಸಿದರೆ, ನಮ್ಮನ್ನೀಗಲೇ ಈ ಜಾಗದಿಂದ ಓಡಿಸ್ತಾರೆ.... ಈ ವಿಚಾರಗಳನ್ನು ಮರೆತು ಬಿಡು. ಈ ಜನ್ಮದಲ್ಲಿ ನಾನು ನಳಿನಿಯ ಮಗನಂತೆ ಬಾಳುವುದು ಖಂಡಿತಾ ಸಾಧ್ಯವಿಲ್ಲ....."

ಇವನಿಗೆ ನಳಿನಿಯ ಮೇಲೆ ಆಕ್ರೋಶ. ನನಗೆ ಈ ಪೃಥ್ವಿಯ ಮೇಲೆ ಕೋಪ. ನಾವಿಬ್ಬರೂ ಒಂದಾದರೆ, ಇವರಿಬ್ಬರಿಗೂ ಬುದ್ಧಿ ಕಲಿಸಬಹುದು ಎಂದುಕೊಂಡಳು. ಅಜಯ-ವಿಜಯರು ಮೇನಕಾ-ರೇವತಿಯರು ಆಹ್ವಾನಿತರ ಉಡುಗೊರೆ, ಹಾರೈಕೆಗಳ ಪೂರದಲ್ಲಿ ಸುಸ್ತಾಗಿದ್ದರು.

ರಿಸೆಪ್ಶನ್, ಡಿನ್ನರ್ ನಂತರ ಪಾರ್ಟಿ ಹಾಲ್‌ನಿಂದಲೇ ನವದಂಪತಿಗಳ ಜೋಡಿಗಳು, ತಮಗಾಗಿ ಕಾದಿರಿಸಿದ್ದ ಹೋಟೆಲ್ಲಿನ ರೂಮುಗಳಿಗೆ ಹೊರಟು ಹೋಗಿದ್ದರು. ವಿಶ್ವ ಊಟವಾಗುತ್ತಿದ್ದಂತೆಯೇ ತನಗೆ ಸ್ವಲ್ಪ ಮುಖ್ಯವಾದ ಕೆಲಸವಿದೆಯೆಂದು ಹೇಳಿ ಹೊರಟುಹೋಗಿದ್ದ. ಆ ರಾತ್ರಿ ರೂಪಿಣಿ ತನ್ನ ಚಿಕ್ಕಮ್ಮನೊಂದಿಗೆ ನಳಿನಿಯ ಮನೆಯಲ್ಲೇ ಉಳಿದುಕೊಂಡಳು.

ಆಯಾಸಗೊಂಡು ಮಲಗಿದ್ದ ಪೃಥ್ವಿಗೆ ದಿಢೀರನೇ ಎಚ್ಚರವಾಯಿತು. ಯಾರೋ ತನ್ನ ಮಗ್ಗುಲಲ್ಲಿ ಕುಳಿತು ತನ್ನ ಮೈಮೇಲೆ ಕೈಯಾಡಿಸುತ್ತಿದ್ದಾರೆ... ಬೆದರಿ ಆ ವ್ಯಕ್ತಿಯನ್ನು ಜೋರಾಗಿ ತಳ್ಳಿ, ಎದ್ದು ನಿಂತು ರೂಮಿನ ದೀಪವನ್ನು ಹಚ್ಚಿದ. ಕೆಳಗೆ ಬಿದ್ದಿದ್ದ ರೂಪಿಣಿ ಮೆಲ್ಲನೆ ಸಾವರಿಸಿಕೊಂಡು ಎದ್ದು ನಿಂತಳು. ಕಟಕಟನೆ ಹಲ್ಲು ಕಡಿದು..

"ಇಲ್ಲೇನು ಮಾಡ್ತಿದೀಯ.... ಹೋಗು..." ಅರಚಿದ. ಅವಳು ನಕ್ಕಳು.

"ನಾನಾಗಿಯೇ ನಿನ್ನ ಬಳಿಗೆ ಬಂದರೂ, ನನ್ನನ್ನು ತಳ್ಳುತ್ತೀಯಲ್ಲ ಪೃಥ್ವಿ... ಯಾಕೆ ನಿನಗೆ ಹೆಂಗಸರ ಸಹವಾಸ ಬೇಕೆನಿಸುಲ್ವಾ? ಯಾಕೆ ನಿನ್ನಲ್ಲಿ ಏನಾದರೂ ದೋಷವಿದೆಯಾ ?" ಅವನ ಕೋಪ ಮತ್ತೂ ಹೆಚ್ಚಿತು.

"ಸುಮ್ಮನೆ ಹೋಗ್ತೀಯೋ...? ಪೋಲೀಸರನ್ನು ಕರೆಸಲೋ...?"

"ಒಟ್ಟಿನಲ್ಲಿ ನನ್ನನ್ನು ಪೋಲೀಸರಿಗೆ ವಹಿಸಿಕೊಡುವ ಆಸೆ ನಿನಗೆ. ಈ

ರಾತ್ರಿ ಒಂದೇ ಒಂದು ಸಲ ನನ್ನ ಆಸೆಯನ್ನು ತೀರಿಸಿಬಿಡು... ಮತ್ತೆ ನಾನೆಂದೂ ನಿನ್ನ ಬಳಿ ಬರುವುದಿಲ್ಲ. ಪ್ರಾಮಿಸ್ ಮಾಡ್ತೀನಿ...''

''ಹೆಣ್ಣಾಗಿ ಹೀಗೆಲ್ಲಾ ಮಾತನಾಡುಕ್ಕೆ ನಾಚಿಕೆ ಆಗುಲ್ವಾ ?''

''ನಾಚಿಕೆ ಏಕೆ ? ಹಸಿವಾದರೆ ಊಟ ಮಾಡುಲ್ವಾ ? ನಾಚಿಕೆ ಅಂತ ಉಪವಾಸವೇ ಗತಿ...'' ಅಷ್ಟರಲ್ಲಿ ಪೃಥ್ವಿ ಅವಳ ತೋಳನ್ನು ಹಿಡಿದು, ದರದರನೆ ರೂಮಿನಿಂದ ಹೊರಕ್ಕೆ ಎಳೆದು ತಂದ... ಅವಳು ಸಣ್ಣಗೆ ಕಿರುಚಿದಳು. ನಳಿನಿ ನಿದ್ದೆ ಬಾರದೇ ಹೊರಳಾಡುತ್ತಿದ್ದವಳು ತನ್ನ ರೂಮಿನಿಂದ ಆಚೆಗೆ ಬಂದಳು. ಪೃಥ್ವಿ ರೂಪಿಣಿಯ ಕೈ ಬಿಟ್ಟ.

''ಪೃಥ್ವಿ... ಇದೇನಿದು ?'' ಪಿಸುದನಿಯಲ್ಲಿ ಪ್ರಶ್ನಿಸಿದಳು.

''ಇವಳನ್ನೇ ಕೇಳಿ...'' ಎಂದು ನುಡಿದು, ಮತ್ತೆ ತನ್ನ ರೂಮಿಗೆ ಹೋಗಿ ಬಾಗಿಲನ್ನು ಭದ್ರಪಡಿಸಿಕೊಂಡ. ಅಳುತ್ತಿದ್ದ ರೂಪಿಣಿ ಏನನ್ನು ಹೇಳದಿದ್ದರೂ ನಳಿನಿಗೆ ಅರ್ಥವಾಯಿತು.

''ನೀನು ಇಷ್ಟು ಚತುರೆ ಅಂತ ಗೊತ್ತಿರಲಿಲ್ಲ. ಪೃಥ್ವಿಯನ್ನೇಕೆ ಹೀಗೆ ಸತಾಯಿಸುತ್ತೀಯ ? ನಡುರಾತ್ರಿಯಲ್ಲಿ ಏನು ಹಗರಣ ? ನಿನ್ನ ಚಿಕ್ಕಮ್ಮನಿಗೆ ತಿಳಿದರೆ ಏನೆಂದುಕೊಳ್ತಾರೆ ? ಹೂಂ, ಈಗ ಹೋಗಿ ಸುಮ್ಮನೇ ಮಲಕ್ಕೋ...'' ಎಂದು ಹೇಳಿ ನಳಿನಿ ತನ್ನ ಪಾಡಿಗೆ ತಾನು ತನ್ನ ರೂಮಿಗೆ ಹೊರಟುಹೋದಳು. ನಾನಾ ಆತಂಕಗಳಿಂದ ತನಗೆ ನಿದ್ದೆಯಿಲ್ಲ; ರೂಪಿಣಿಯ ಚಿಕ್ಕಮ್ಮ ? ಮಕ್ಕಳ ಜವಾಬ್ದಾರಿ ಕಳೆಯುತ್ತಿದ್ದಂತೆ ಹಾಯಾಗಿ ಗಾಢನಿದ್ರೆಯಲ್ಲಿ ಮುಳುಗಿ ಬಿಟ್ಟಿದ್ದಾರಲ್ಲ... ಈ ರೂಪಿಣಿ, ಪೃಥ್ವಿಯನ್ನು ಹಾಯಾಗಿರಲು ಬಿಡುವುದಿಲ್ಲ. ತಾನು ಅದಕ್ಕೇನಾದರೂ ಉಪಾಯವನ್ನು ಕಂಡುಹಿಡಿಯಬೇಕು ಎಂದುಕೊಂಡಳು.

ಬೆಳಿಗ್ಗೆ ಬೆಳಕಾಗುತ್ತಿದ್ದಂತೆಯೇ ಎಚ್ಚರಗೊಂಡ ರೂಪಿಣಿಯ ಚಿಕ್ಕಮ್ಮ ತಾವು ಹೊರಡಬೇಕೆಂದುಕೊಂಡು ರೂಪಿಣಿಯನ್ನು ಎಬ್ಬಿಸಿದಳು.

''ನಾನಿಲ್ಲೇ ಇನ್ನೊಂದೆರಡು ದಿನ ಇರ್ತೀನಿ. ನೀವು ಬೇಕಾದರೆ ಹೋಗಿ. ಪೃಥ್ವಿಗೆ ಹೇಳಿದರೆ ಕಾರಿನಲ್ಲಿ ಬಿಟ್ಟುಬರ್ತಾನೆ...'' ಎಂದಳು.

''ಬೇಡ, ಅವರಿಗೇಕೆ ಸುಮ್ಮನೇ ತೊಂದರೆ, ನನ್ನನ್ನು ಬಸ್ಸು ಹತ್ತಿಸು ಸಾಕು...''

''ಏನು ಚಿಕ್ಕಮ್ಮ ಹೀಗಾಡ್ತೀರಿ ? ನೀವೀಗ ಶ್ರೀಮಂತರ ಜೀಗಿತ್ತಿ. ಅವರ ಅಂತಸ್ತಿಗೆ ತಕ್ಕ ಹಾಗೆ ನೀವು ಇರಬೇಕು.... ನಿಮಗೆ ತಾನೆ ಯಾರಿದಾರೆ! ನೀವು ಮನಸ್ಸು ಮಾಡಿದರೆ, ನೀವು ಇಲ್ಲೇ ಇರಬಹುದು... ನಾನು ನಳಿನಿಗೆ ಹೇಳ್ತೀನಿ.''

''ಬೇಡ ರೂಪ... ಹೆಣ್ಣುಮಕ್ಕಳು ಸುಖವಾಗಿರಲಿ ಅಂತ ಈ ಸಂಬಂಧಕ್ಕೆ ಒಪ್ಪಿಗೆ ಕೊಟ್ಟೆ. ಹಾಗಂತ ನಾನು ಇಲ್ಲಿರುವುದು ಚೆನ್ನಲ್ಲ.''

''ನಿಮ್ಮಿಷ್ಟ ಚಿಕ್ಕಮ್ಮ... ನೀವು ಏನು ಬೇಕಾದ್ರೂ ಮಾಡ್ಕೊಳ್ಳಿ. ನನಗೆ ಉಪದೇಶ ಮಾಡಬೇಡಿ... ನನಗೆ ಹೇಗೆ ಬೇಕೋ ಹಾಗೆ ಇರೋಳು ನಾನು.''

''ನಿನಗೆ ಉಪದೇಶ ಮಾಡಿ ನಾನ್ಯಾಕೆ ನನ್ನ ತಲೆ ಕೆಡಿಸಿಕೊಳ್ಳಲಿ ? ಚಿಕ್ಕ ಹುಡುಗಿಯಾಗಿದ್ದಾಗಲೇ ನನ್ನ ಮಾತನ್ನು ಕೇಳುತ್ತಿರಲಿಲ್ಲ ನೀನು... ಅದಕ್ಕೆ ತಕ್ಕ ಹಾಗೆ ಆ ನಿನ್ನ ಮೇಷ್ಟ್ರು... ನಿನ್ನ ತಲೇನ ಚೆನ್ನಾಗಿ ಕೆಡಿಸಿಟ್ಟು ಬಿಟ್ರು....''

''ನೀವು ನನ್ನನ್ನು ಚೆನ್ನಾಗಿ ನೋಡಿಕೊಂಡಿದಿದ್ರೆ... ನಾನೇಕೆ ಆ ಮೇಷ್ಟ್ರ ಹತ್ತಿರ ನಿಮ್ಮ ಮೇಲೆ ಚಾಡಿ ಹೇಳುತ್ತಿದ್ದೆ... ನಾನಾಗುವ ಹೊತ್ತಿಗೆ ಮತ್ತೆ ನಿಮ್ಮ ಜೊತೆ ಸಂಬಂಧ ಇಟ್ಟುಕೊಂಡಿದೀನಿ. ನಿಮ್ಮ ಮಕ್ಕಳು, ಈ ಶ್ರೀಮಂತರ ಮನೆಯ ಸೊಸೆಯರಾಗಲು ನಾನೇ ಕಾರಣ ತಿಳೀತೇ?...''

''ಹೂಂನಮ್ಮ ತಿಳೀತು.... ಈಗ ಇಲ್ಲಿಂದ ಹೊರಡ್ತೀನಿ''

ಅವರು ಹೊರಡ್ತೀನಿ ಎಂದಾಗ ನಳಿನಿ ಉಳಿಸಿಕೊಳ್ಳಲಿಲ್ಲ. ಇಬ್ಬರಿಗೂ ಭಾರಿ ಉಡುಗೊರೆಗಳನ್ನು ಕೊಟ್ಟಳು. ''ಚಂದ್ರು ನಿಮ್ಮನ್ನು ಮನೆಗೆ ತಲುಪಿಸಿ ಬರ್ತಾನೆ'' ಎಂದಾಗ ರೂಪಿಣಿ ಚಿಕ್ಕಮ್ಮನ ಕಡೆ ನೋಡಿದಳು.

''ಆಗ ಈಗ ಬರ್ತಾ ಇರಿ'' ಔಪಚಾರಿಕವಾಗಿ ಹೇಳಿದಳು.

''ಚಿಕ್ಕಮ್ಮನಿಗೆ ಒಬ್ಬರಿಗೇ ಓಡಾಡಲು ಗೊತ್ತಾಗುಲ್ಲ. ನಾನೇ ಕರೆದುಕೊಂಡು ಬರ್ತೀನಿ'' ಎಂದು ರೂಪಿಣಿ ನಗುತ್ತಾ ನುಡಿದಳು. ಇನ್ನು ಇವಳಿಂದ ತನಗೆ ಬಿಡುಗಡೆ ಇಲ್ಲ ಎಂದುಕೊಂಡಳು ನಳಿನಿ. ಚಿಕ್ಕಮ್ಮ ಕಾರನನ್ನು ಹತ್ತಿಕುಳಿತ ನಂತರ, ರೂಪಿಣಿ ನಳಿನಿಯ ಕಡೆ ತಿರುಗಿದಳು.

''ನೆನ್ನೆ ರಾತ್ರಿ ನನಗೇನಾಗಿತ್ತೋ ನನಗೆ ತಿಳಿಯದು... ಆದರೆ ಒಂದು ಮಾತು ನಿಜ. ನಾನು ಪೃಥ್ವಿಯ ಬಳಿಗೆ ಹೋಗುವಂತೆ ನನಗೆ ಹೇಳಿಕೊಟ್ಟವರು ನಿಮ್ಮ ಮಗ ವಿಶ್ವಾ... ಈ ಎಲ್ಲಾ ಪ್ಲಾನ್‌ಗಳೂ ವಿಶ್ವನದೇ... ಅವರಿಗೆ

ಪೃಥ್ವಿಯನ್ನು, ಹಾಗೇ ನಿಮ್ಮ ನೆಮ್ಮದಿಯನ್ನು ಹಾಳುಮಾಡಬೇಕೆಂಬುದೇ ಅವರ ಉದ್ದೇಶ.'' ನಳಿನಿ ಬೆರಗಾಗಿ ಅವಳನ್ನೇ ದಿಟ್ಟಿಸಿದಳು.

''ರೂಪಿಣೀ... ಏನಿದೆಲ್ಲಾ?'' ಅವಡು ಕಚ್ಚಿದಳು.

''ಹೌದು, ನಾನು ವಿಶ್ವಾ ಇಬ್ಬರೂ ಸೇರಿ, ನಿಮ್ಮಿಬ್ಬರ ನೆಮ್ಮದಿಯನ್ನು ಹಾಳು ಮಾಡಬೇಕೆಂದು ಮಾತನಾಡಿಕೊಂಡಿದ್ದೆವು... ಈಗ ನನ್ನ ತಂಗಿಯುರು ಈ ಮನೆಯ ಸೊಸೆಯಂದಿರು. ನಾನೂ ಬರುತ್ತಿರುತ್ತೇನೆ. ಒಂದೊಂದಾಗಿ ಏನೇನಾಗುತ್ತೆ ಅಂತ ನೋಡೋರಂತೆ...''

''ನಾನು ಇದನ್ನೆಲ್ಲ ನಂಬುವುದಿಲ್ಲ... ತಮಾಷೆ ಮಾಡ್ತಿದೀಯ ನೀನು....''

''ನಂಬುವುದು ಬಿಡುವುದು ನಿಮಗೆ ಸೇರಿದ್ದು... ತಗೊಳ್ಳಿ, ಈ ಚೀಟಿಯನ್ನು ನಿಮ್ಮ ಪೃಥ್ವಿಗೆ ಕೊಟ್ಟುಬಿಡಿ'' ಎಂದು ತನ್ನ ಬಳಿ ಇದ್ದ ಕಾಗದದ ಮಡಿಕೆಯನ್ನು ನಳಿನಿಯ ಕೈಗೆ ತುರುಕಿದಳು. ಆ ಕಾಗದ ಎಂಥದು ? ಅದರಲ್ಲಿ ಏನಿರಬಹುದು ಎಂದು ನೋಡುವ ಕುತೂಹಲ ಸಹ ಅವಳಿಗಿರಲಿಲ್ಲ. ವಿಶ್ವನಿಗೆ ಯಾಕೆ ಇಂಥ ಕೆಟ್ಟ ಬುದ್ಧಿ ಹುಟ್ಟಿತು ? ಬದಲಾಗಿದಾನೆ ಅಂದುಕೊಂಡಿದ್ದೆ. ಆದರೆ ಹಳೆಯದನ್ನು ಇನ್ನೂ ಮರೆತಿಲ್ಲ. ಈ ರೂಪಿಣಿ ನಮಗೆ ಶತೃವಾಗಿ ಬಂದು ಕಾಡುತ್ತಿದಾಳಲ್ಲ. ಪೃಥ್ವಿಗೆ ಹೇಳಿ ತಕ್ಕಬುದ್ಧಿ ಕಲಿಸಬೇಕು ಎಂದುಕೊಂಡಳು. ಕಾರು ಹೊರಟ ಸದ್ದಿಗೆ ಎಚ್ಚೆತ್ತಳು. ಕಣ್ಣಂಚಿನಲ್ಲಿ ನೀರು ಜಿನುಗಿತ್ತು... ಒಳಗೆ ಬಂದು ಸೋಫಾದ ಮೇಲೆ ಕುಳಿತು ಅತ್ತಳು. ತನ್ನ ರೂಮಿನಿಂದ ಹೊರಬಂದ ಪೃಥ್ವಿ ಚಿಕ್ಕಮ್ಮ ಮಂಕಾಗಿ ಕುಳಿತಿರುವುದನ್ನು ಗಮನಿಸಿದ.

''ಪೃಥ್ವಿ ನೀನೀಗಲೇ ಹೋಗಿ, ವಿಶ್ವ ಎಲ್ಲಿದ್ದರೂ ಸರಿ ಕರೆದುಕೊಂಡು ಬಾ. ನಾನು ಅವನ ಹತ್ತಿರ ಮುಖ್ಯವಾದ ವಿಷಯವನ್ನು ಕೇಳಬೇಕು.'' ಪೃಥ್ವಿಗೆ ಆಶ್ಚರ್ಯವೆನಿಸಿದರೂ ಏನೆಂದು ಕೇಳಲಿಲ್ಲ. ಹಿಂದಿನ ರಾತ್ರಿ ರೂಪಿಣಿ ನಡೆದುಕೊಂಡಿದ್ದ ರೀತಿ ನೆನಪಿಗೆ ಬಂತು. ಅದೇ ವಿಷಯವನ್ನು ಅವನೊಡನೆ ಹೇಳಬಹುದೇ ಅಂತನ್ನಿಸಿದಾಗ, ಅದು ಅನಗತ್ಯವೆಂದೆನಿಸಿತ್ತು. ಈಗ ರೂಪಿಣಿ, ಆಗ ಈಗ ಇಲ್ಲಿಗೆ ಬಂದೇ ಬರುತ್ತಾಳೆ. ಬೇಡ ಅಂತ ನಾನು ತಡೆಯಲಾಗುವುದಿಲ್ಲ. ನಾನೇ ಇಲ್ಲಿರಕೂಡದು ಎಂದುಕೊಂಡು ಅದೇ ಮಾತನ್ನು ಹೇಳಿದ.

"ನಾನು ಮೂರು ನಾಲ್ಕು ತಿಂಗಳು ಎಲ್ಲಿಯಾದರೂ ಬೇರೆ ಬೇರೆ ಕಡೆ ತಿರುಗಾಡಿಕೊಂಡು ಬರ್ತೀನಿ... ಯಾಕೋ ಈ ಊರು ಬೇಸರವಾಗುತ್ತಿದೆ."

"ಯಾಕೆ ಪೃಥ್ವಿ ? ನಿನ್ನ ಜವಾಬ್ದಾರಿ ತೀರಿ ಹೋಯಿತು ಅಂತ ಭಾವಿಸಿದೆಯಾ ? ನಿನಗೇನು ಬೇಸರ ಇಲ್ಲಿ? ಅದೇನು ಅಂತ ನನಗೆ ಹೇಳು... ನಾನು ಪರಿಹಾರ ಹುಡುಕ್ತೀನಿ. ನಾನು ಬದುಕಿರುವವರೆಗೂ ನನ್ನನ್ನು ಬಿಟ್ಟು ನೀನು ಎಲ್ಲಿಯೂ ಹೋಗಕೂಡದು" ಅಧಿಕಾರವಾಣಿಯಿಂದ ಅವಳು ಹೇಳಿದಾಗ ತೆಪ್ಪಗಾದ. 'ಇದೆಂತಹ ಬಂಧನ ? ಹಾಗಾದರೆ ನನಗೆ ಸ್ವತಂತ್ರವೇ ಇಲ್ಲವೇ... ಇದುವರೆಗೂ ಈ ಮನೆಯ ಒಳಿತಿಗಾಗಿ ನಾನು ಶ್ರಮಪಟ್ಟಾಯ್ತು... ಈ ಕುರಿತು ಅಜಯ ವಿಜಯರ ಹತ್ತಿರ ಮಾತ್ನಾಡಲೇಬೇಕು' ಎಂದುಕೊಳ್ಳುತ್ತಿರುವಾಗ ಮುಂಬಾಗಿಲಿಗೆ ಬಂದ ವಿಶ್ವನನ್ನು ಕಂಡ.

"ನೆನೆದವರ ಮನದಲ್ಲಿ ಅಂತ, ನಾನು ಈಗ ನಿಮ್ಮನ್ನೇ ಕಾಣಲು ಹೊರಟಿದ್ದೆ" ಎಂದ.

"ಹೌದಾ ? ಏನು ವಿಷಯ ?" ಆತಂಕಾಶ್ಚರ್ಯಗಳಿಂದ ಪ್ರಶ್ನಿಸಿದ.

"ಬನ್ನಿ ಕೂತು ಮಾತನಾಡೋಣ..." ಎಂದ. ಒಳ ಬಂದ ವಿಶ್ವ, ಅಲ್ಲಿ ಕುಳಿತಿದ್ದ ನಳಿನಿಯನ್ನು ಕಂಡು, ಆತುರದಲ್ಲಿ ಮಾತನ್ನು ಮುಗಿಸುವವನಂತೆ,

"ನಮ್ಮೂರಿನ ಅಂಗಡಿ ಚಿನ್ನಪ್ಪ ಸಿಕ್ಕಿದ್ದ... ನಮ್ಮ ಮನೇನ ಕೊಂಡುಕೊಳ್ತಾನಂತೆ.... ಏನು ಮಾಡೋಣ ?" ಕೇಳಿದ.

"ಅಲ್ಲೇನಿದೆ ? ಮಾರಿಬಿಟ್ಟರಾಯ್ತು" ತತ್‌ಕ್ಷಣ ನುಡಿದಳು.

"ಅದನ್ನೇ ಹೇಳಿ ಹೋಗೋಣ ಅಂತ ಬಂದೆ... ಚಿನ್ನಪ್ಪ ಮತ್ತೆ ನಾಳೆ ಬರ್ತೀನಿ ಅಂತ ಅಂದಿದಾನೆ. ಕರೆದುಕೊಂಡು ಬರಲಾ ?"

"ಏನೂ ಬೇಡ, ನಿನಗೆ ಹೇಗೆ ತೋರುತ್ತೋ ಹಾಗೇ ಮಾಡು... ನನಗೂ ಆ ಮನೆಗೂ ಯಾವ ಸಂಬಂಧವಿಲ್ಲ, ಎಲ್ಲಾ ನಿಂದೇ...."

"ಅದ್ಹೇಗೆ ? ಅದು ನಿಮ್ಮ ತಂದೆಯ ಮನೆ. ಕಾನೂನಿನ ಪ್ರಕಾರ ಮೊದಲ ಹಕ್ಕು ನಿಮ್ಮದೇ..."

"ಕಾನೂನು ಏನು ಹೇಳುತ್ತೋ ಅದು ನನಗೆ ಗೊತ್ತಿಲ್ಲ. ನನಗೆ ಏನೂ ಬೇಡ, ಬೇಕಾದರೆ ನಾನು ಬರೆದು ಕೊಡ್ತೀನಿ. ಎಲ್ಲಾ ನೀನೇ ಸೆಟ್ಲ್ ಮಾಡು.. ಯಾವುದೇ ವಿಷಯಕ್ಕೂ ನನ್ನನ್ನೇನೂ ಕೇಳಬೇಡ."

''ಸರಿ, ಆದರೆ ಆಮೇಲೆ ಏನೂ ಆಕ್ಷೇಪಣೆ ಮಾಡಬಾರದು.''

''ಈ ವಿಷಯದಲ್ಲಿ ನನ್ನ ಆಕ್ಷೇಪಣೆ ಏನೂ ಇಲ್ಲ. ಆದರೆ ಒಂದು ಬೇರೆ ವಿಷಯ... ನಿನಗೂ ರೂಪಿಣಿಗೂ ಏನು ಸಂಬಂಧ ?''

''ಏನೂ ಇಲ್ಲ. ಈಗೇಕೆ ಈ ಪ್ರಶ್ನೆ ಬಂತು ?''

''ಏನೋ ಅನುಮಾನ ಬಂತು ಕೇಳಿದೆ. ಸರಿ ಬಿಡು...''

''ನಾನೀಗ ನಮ್ಮೂರಿಗೆ ಹೋಗ್ತಾ ಇದೀನಿ. ನೀವು ಬರ್ತೀರಾ ?''

''ಇಲ್ಲ, ನಾನು ಬರುಲ್ಲ, ಅಲ್ಲೇನಿದೆ ಅಂತ ಹೋಗಬೇಕು ? ಅಲ್ಲದೇ ಅಜಯ ವಿಜಯರು ಮನೆಗೆ ಬಂದರೂ ಬರಬಹುದು...''

''ಸರಿ ನಿಮ್ಮಿಷ್ಟ. ಚಿನ್ನಪ್ಪ ಕೇಳಿದ್ನಲ್ಲ ಅಂತ ನಾನೂ ಓಡಾಡ್ತೀನಿ ಅಷ್ಟೇ. ಇಲ್ಲದಿದ್ದರೇ ನನಗೂ ಯಾವ ಆಸಕ್ತಿ ಇಲ್ಲ. ಈಗಲೂ ಬೇಡಾಂತ ಇದ್ರೆ ಹಾಗೇ ಬಿದ್ದಿರುತ್ತೆ''

''ನಾನೆಲ್ಲಿ ಬೇಡಾಂತಂದೆ ? ಈಗಾಗಲೇ ಪಾಳು ಬಿದ್ದಿರುತ್ತೆ. ಅಲ್ಲಿ ಯಾರೋ ಅಕ್ರಮವಾಗಿ ವಹಿಸಿಕೊಳ್ಳುವ ಬದಲು ಕೊಂಡುಕೊಳ್ತಿದಾರಲ್ಲ, ಅದೇ ಸಂತೋಷ. ಎಷ್ಟು ಬೆಲೆ ಬರುತ್ತೋ ಅದೆಲ್ಲಾ ನಿನಗೆ ಸೇರಿದ್ದು. ಅದನ್ನು ಹೇಗೆ ಬೇಕೋ ಹಾಗೆ ಖರ್ಚು ಮಾಡುವ ಅಧಿಕಾರ ನಿನಗಿದೆ.''

''ಹಣದ ಆಸೆಯಿಂದ ನಾನು ಮಾರುತ್ತಿಲ್ಲ. ಚಿನ್ನಪ್ಪ ಹೇಳಿದ. ಮನೆಯ ಸುತ್ತಮುತ್ತ ಹಾವುಗಳು ಹೆಡೆ ಎತ್ತಿ ತಿರುಗಾಡುತ್ತಿವೆ. ಒಳಗೆಷ್ಟು ಸೇರಿಕೊಂಡಿವೆಯೋ... ಆ ರಸ್ತೇಲಿ ಜನ ಓಡಾಡುಕ್ಕೇ ಹೆದರ್ತಾರೆ... ನಾನು ಕ್ಲೀನ್ ಮಾಡಿಸಿ, ಅಂಗಡಿ ಹಾಕಿಕೊಳ್ತೀನಿ ಅಂತಂದ.''

''ಹಾವುಗಳು ವಾಸಮಾಡಿಕೊಂಡಿವೆ ಅಂದರೆ, ಹುಶಾರಾಗಿರು ವಿಶ್ವಾ... ಮೊದಲು ಹಾವು ಹಿಡಿಯೋರನ್ನು ಕರೆಸು.. ನೀನು ಮಾತ್ರ ಒಬ್ಬನೇ ಹೋಗಬೇಡ'' ನಳಿನಿ ಆತಂಕದಿಂದ ನುಡಿದಾಗ ವಿಶ್ವ ನಕ್ಕ.

''ನಾನೀಗ ದೊಡ್ಡವನಾಗಿದೀನಿ. ನನಗೆ ಗರುಡಮಚ್ಚೆ ಇಲ್ಲದಿರಬಹುದು. ಆದರೆ ವಿಷಜಂತುಗಳಿಂದ ಹೇಗೆ ದೂರವಿರಬೇಕೂಂತ ನನಗೆ ತಿಳಿದಿದೆ'' ಈಗಲೂ ಇವನಿಗೆ ವ್ಯಂಗ್ಯವೇ ಎಂದು ವ್ಯಥೆಗೊಂಡಳು.

''ಪೃಥ್ವಿಯ ಬೆನ್ನ ಮೇಲೆ ಅಂಗೈ ಅಗಲದಷ್ಟು ದೊಡ್ಡ ಗರುಡ ಮಚ್ಚೆ ಇದೆ ಅಂತ ಅವನ ತಂದೆ ಹೇಳುತ್ತಿದ್ದರು. ಅವನನ್ನೂ ನಿನ್ನ ಜೊತೆಗೆ ಕರೆದುಕೊಂಡು ಹೋಗು.''

''ಏನ್ರೀ ಪೃಥ್ವಿ, ನಿಮ್ಮ ಬೆನ್ನ ಮೇಲೆ ದೊಡ್ಡ ಗರುಡ ಮಚ್ಚೆಯಿದೆಯಂತೆ, ನೀವು ನನಗೆ ಹೇಳೇ ಇಲ್ಲ'' ತಮಾಷೆ ಮಾಡಿದ.

''ನನ್ನ ಬೆನ್ನು ನನಗೆ ಕಾಣಲ್ಲ, ಅದಕ್ಕೇ ನಾನು ನೋಡೇ ಇಲ್ಲ''

''ಈ ತಮಾಷೆ ಮಾತೆಲ್ಲ ಬೇಡ... ನಿನಗೆ ಬಿಡುವಿದ್ದರೆ ವಿಶ್ವನ ಜತೆಗೆ ಹೋಗುಕ್ಕಾಗುತ್ತಾ ?'' ನಳಿನಿ ನೇರವಾಗಿ ಕೇಳಿದಾಗ ಪೃಥ್ವಿಗೆ ಇಲ್ಲವೆನ್ನಲಾಗಲಿಲ್ಲ. ವಿಶ್ವ ಹೇಳಿದ,

''ನಾಳೆ ಮತ್ತೆ ಚಿನ್ನಪ್ಪ ಹೇಗೂ ಬರ್ತಾನಲ್ಲ, ಅವನ ಜೊತೆಯಲ್ಲೇ ಹೋಗೋಣ. ನನಗೆ ನಮ್ಮೂರಿನ ದಾರಿಯೇ ಮರೆತುಹೋಗಿದೆ'' ವಿಶ್ವ ಹೀಗೇಕೆ ನುಡಿದನೆಂದು ನಳಿನಿಗೆ ಅರ್ಥವಾಗಲಿಲ್ಲ.

* * * *

ಕಾರು ಹೆದ್ದಾರಿಯಲ್ಲಿ ವೇಗವಾಗಿ ಚಲಿಸುತ್ತಿದ್ದಾಗ, ಚಿನ್ನಪ್ಪ ಮಾತನ್ನಾಡಲು ಪ್ರಾರಂಭಿಸಿದ್ದ.

''ನಿಮ್ಮನ್ನಂತೂ ಎಷ್ಟು ಹುಡುಕಿಸಿದೆವು ವಿಶ್ವಪ್ಪ. ನಿಮ್ಮ ಪತ್ತೇನೇ ಇಲ್ಲ. ಆಗ ಈಗ ಶ್ರೀಕಂಠಪ್ಪ ಮನೆಗೆ ಬಂದು ಹೋಗುತ್ತಿದ್ದರು. ಅವರಿಗೂ ನೀವೆಲ್ಲಿದೀರಿ ಅಂತ ಗೊತ್ತಿರಲಿಲ್ಲವಂತೆ. ನಾನೀಗ ಬೆಂಗಳೂರಿನಲ್ಲೇ ಒಂದು ಮನೆ ಮಾಡಿಕೊಂಡಿದೀನಿ. ಈ ಮನೇನ ಮಾರಿಬಿಡ್ತೀನಿ ಅಂತ ಹೇಳ್ತಾನೇ ಇದ್ರು, ಒಂದು ಸಲ ಅವರನ್ನು ಕೇಳಿಕೊಂಡು, ಒಬ್ಬ ಮೇಷ್ಟ್ರು ಈ ಮನೆ ಕಡೆಗೆ ಬಂದಿದ್ರು... ಆಮೇಲೆ ಎಷ್ಟು ವರ್ಷ ಆಯ್ತು ಆಕಡೆ ಯಾರೂ ಸುಳಿಯಲಿಲ್ಲ. ನೀವೀಗ ಔಷಧಿ ಕೊಡೋ ಡಾಕ್ಟ್ರಾಗಿದೀಯಂತೆ... ನಿಮ್ಮೂರಿಗೆ ನಮ್ಮೂರಿನ ಪೈಕಿ ಒಬ್ಬರು ನಾಟೀ ಔಷಧಿಗೆ ಅಂತ ಬಂದಿದ್ರಂತೆ.. ಅವರಿಂದ ನೀನು ಅಲ್ಲಿರುವ ವಿಷಯ ತಿಳೀತು. ನನ್ನ ಹೆಂಡತಿಗೆ ಔಷಧ ಕೊಡಿಸೋಣ ಅಂತ ಬಂದಿದ್ದೆ. ಆಗ ನೀನು ಸಿಗಲೇ ಇಲ್ಲ. ಆಮೇಲೆ ಮತ್ತೆ ನಾಲ್ಕಾರು ಸಾರಿ ಅಲೆದೆ ಕಣಪ್ಪ... ಈಗ ನಿಮ್ಮ ತಾಯಿ ಹೇಗಿದಾರೆ ? ಎಲ್ಲಿದಾರೆ ! ಪಾಪ,... ಆಯಮ್ಮ ಸುಖವಾಗಿರಬೇಕಾದ ಕಾಲದಲ್ಲಿ ಬಹಳ ಕಷ್ಟಪಡ್ತು... ಪಾಪ.... ಯಾರೋ ಪುಣ್ಯಾತ್ಮ ನಿಮ್ಮ ತಾತನ ಕಾಲಿಗೆ ಬಿದ್ದು ಆಯಮ್ಮನ್ನ ಉದ್ಧಾರ ಮಾಡ್ತೀವಿ ಅಂತ ಹೇಳಿ ಮದುವೆ ಮಾಡಿಕೊಂಡರಂತೆ... ಆಗ ಈಗ ನಿಮ್ಮ ತಾತಪ್ಪ ಎಲ್ಲಾ ಹೇಳುತ್ತಿತ್ತು.''

ಪೃಥ್ವಿ, ವಿಶ್ವ ಇಬ್ಬರಿಗೂ ಆ ಮಾತು ಬೇಡವಾಗಿತ್ತು. ಈ ತಾತನ ಪುರಾಣ ನಿಂತರೆ ಸಾಕೆನಿಸಿತ್ತು. ''ಚಂದ್ರು, ಸ್ವಲ್ಪ ಗಾಡಿ ನಿಲ್ಲಿಸು'' ಎಂದು ಹೇಳಿ, ಪೃಥ್ವಿ ರಸ್ತೆ ಬದಿಯಲ್ಲಿದ್ದ ಎಳೆನೀರನ್ನು ತರಿಸಿ, ಎಲ್ಲರಿಗೂ ಕುಡಿಯಲು ಕೊಡಿಸಿದ. ಮತ್ತೆ ಕಾರು ಚಲಿಸಿತು. ಈಗ ಚಿನ್ನಪ್ಪ ತೂಕಡಿಸಲಾರಂಭಿಸಿದ್ದ. ಇಬ್ಬರೂ ನಿರಾಳವಾದರು.

''ಕಾರನ್ನ ಇಲ್ಲೇ ನಿಲ್ಲಿಸಿ... ಅಲ್ಲಿ ಓಡಿಸುಕ್ಕೆ ಆಗುಲ್ಲ'' ಎಂದಿದ್ದರಿಂದ ಕಾರನ್ನು ರಸ್ತೆಯ ಬದಿಯ ಒಂದು ಮರದ ಕೆಳಗೆ ನಿಲ್ಲಿಸಿದ ಚಂದ್ರು. ಎಲ್ಲರೂ ಕಾರಿನಿಂದ ಇಳಿದರು. ಸಿಟಿಗಿಂತ ಭಿನ್ನವಾದ ಪರಿಸರ. ಹಸಿರು ಹಸಿರಾದ ಗಿಡಮರಗಳಿಂದ ತಂಗಾಳಿ ಬೀಸುತ್ತಿತ್ತು. ಚಂದ್ರು ಅಲ್ಲೇ ಉಳಿದ. ಇವರಿಬ್ಬರೂ ಚಿನ್ನಪ್ಪನನ್ನು ಹಿಂಬಾಲಿಸಿದರು. ಕಾಲುದಾರಿಯಲ್ಲಿ ಕಂಡ ಕಾಲುವೆಯನ್ನು ವಿಶ್ವ ತೋರಿದ.

''ಇದೇ ನಮ್ಮ ಹಳ್ಳಿಯ ಜೀವನಾಧಾರ. ಎಲ್ಲರೂ ಇಲ್ಲಿಂದಲೇ ತುಬಂಇಕೊಂಡು ಹೋಗ್ತಾರೆ.''

''ಇಲ್ಲ ವಿಶ್ವಪ್ಪ, ಕೆಲವರು ಪಂಪ್‌ಸೆಟ್ ಹಾಕಿಸಿಕೊಂಡಿದಾರೆ. ಮನೆಗೇ ನೀರನ್ನು ಎಳ್ಕೋತಾರೆ'' ಚಿನ್ನಪ್ಪ ಬಾಯಿ ಹಾಕಿದ. ಒಂದು ಪಾಳು ಬಿದ್ದ ಮನೆಯ ಮುಂದೆ ಬಂದು ನಿಂತರು.

''ಇದೋ ನೋಡಿ, ಇದೇ ಶ್ರೀಕಂಠಪ್ಪನ ಮನೆ. ಅವರು ವಾಸವಾಗಿದ್ದಾಗ ಹೀಗಿರಲಿಲ್ಲ. ಪೆಟ್ಟಿಗೆ ಅಂಗಡಿ ಇತ್ತು. ಅವರು ಮಗಳು ಮನೆ ಮುಂದೆ ಗುಡಿಸಿ, ಸಾರಿಸಿ, ರಂಗವಲ್ಲಿ ಹಾಕಿ, ಹೆಂಗೆ ಮಡಗಿತ್ತು ಅಂತೀರಾ ! ಈಗ ನೋಡಿ, ಸುತ್ತ ಮುತ್ತ ಹೆಂಗೆ ಶತ್ತೆ ಬೆಳೆದೈತೆ... ಹಿಂಭಾಗದ ಗೋಡೆ ಕುಸಿದು ಬಿದ್ದೈತೆ ಅಂತ ನೀರ ಕಡೆ ಹೋಗೋ ಮಂದಿ ಹೇಳಿದ್ರು....''

ಇದೆಲ್ಲ ಪೃಥ್ವಿಗೆ ಅರ್ಥವಾಗದ ಭಾಷೆ. ವಿಶ್ವನಿಗೆ ಮರೆತುಹೋದ ಭಾಷೆ. ವಿಶ್ವ ಕೈಕಟ್ಟಿ ನಿಂತಿದ್ದ. ಪೃಥ್ವಿ ಪ್ಯಾಂಟಿನ ಜೇಬಿನೊಳಕ್ಕೆ ಕೈ ತೂರಿಸಿ ನಿಂತಿದ್ದ. ''ಒಳಗೆ ಹೋಗೋಣ ಬನ್ನಿ'' ಎನ್ನುತ್ತಾ ಸೊಂಟದೆತ್ತರಕ್ಕೆ ಬೆಳೆದಿದ್ದ ಗಿಡಗಳನ್ನು, ಪೈದೆಗಳನ್ನು ಕೈಗಳಿಂದ ಅತ್ತಿತ್ತ ತಳ್ಳುತ್ತಾ ಮುಂದು ಮುಂದೆ ನಡೆದಾಗ, ವಿಧಿ ಇಲ್ಲದೇ ಇವರಿಬ್ಬರೂ ಅವನ ಹಿಂದೆ ನಡೆದರು. ಮುಂಬಾಗಿಲಿಗೆ ಹಾಕಿದ್ದ ಕಬ್ಬಿಣ ಬೀಗ, ಬೀಗಕ್ಕೆ ತಗುಲಿಕೊಂಡಿದ್ದ ಚಿಲುಕ, ಎರಡಕ್ಕೂ ತುಕ್ಕು ಹಿಡಿದಿತ್ತು.

''ಬೀಗದ ಕೈಯೇ ಇಲ್ಲವಲ್ಲ... ಬೀಗ ತೆಗೆಯೋದು ಹೇಗೆ ?''

''ಹೀಗೇ...'' ಎನ್ನುತ್ತಾ ಚಿನ್ನಪ್ಪ ಅಲ್ಲಿದ್ದ ಒಂದು ಸುಮಾರಾದ ಸೈಜಿನ ಕಲ್ಲನ್ನೆತ್ತಿ, ಬೀಗಕ್ಕೆ ಎರಡೇಟು ಹಾಕಿದ. ಚಿಲುಕದ ಸಮೇತ, ಬೀಗದ ಕೊಂಡಿ ಕಳಚಿಕೊಂಡು ಬಿತ್ತು. ಬಾಗಿಲನ್ನು ಬಲವಾಗಿ ದೂಡಿದಾಗ, ಮೇಲಿನ ಜಂತಿಯಿಂದ ಪಟಪಟನೆ ಮಣ್ಣು ಉದುರಿ ಬಿತ್ತು. ಧೂಳನ್ನು ಕೊಡವಿಕೊಳ್ಳುತ್ತಾ ಚಿನ್ನಪ್ಪ ಮುಂದೆ ನುಗ್ಗಿದ. ಮನೆಯೊಳಗೆ ಒಂದು ತರಹ ಹಳೆಯ ವಾಸನೆ ತುಂಬಿಕೊಂಡಿತ್ತು. ವರ್ಷಾನುಗಟ್ಟಲೆ ಗಾಳಿ ಬೆಳಕನ್ನು ಕಾಣದೇ ಅಡರಿಕೊಂಡಿದ್ದ ವಿಚಿತ್ರವಾಸನೆಗೆ ತಲೆ ಸುತ್ತಿ ಬರುವಂತಿತ್ತು. ಚಿನ್ನಪ್ಪ ಹಿಂದಕ್ಕೆ ಬಂದ. ''ಒಳಗಿನ ಕೆಟ್ಟ ವಾಸನೆಗೆ ನೀವುಗಳು ಖಾಯಿಲೆ ಬಿದ್ದು ಬಿಡ್ತೀರಿ ಅಷ್ಟೇ.... ಸ್ವಲ್ಪ ಗಾಳಿ ಆಡಲಿ... ನಮ್ಮ ಮನೆಗೆ ಹೋಗೋಣ ಬನ್ನಿ...

''ಬೇಡ ನಾವಿಬ್ಬರೂ ಇಲ್ಲೇ ಹೊರಗೆ ಕೂತಿರ್ತೀವಿ, ನೀವು ಹೋಗಿ ಬನ್ನಿ''

''ನೀರು ಕಾಫಿ ಏನಾದ್ರೂ ತಗೊಳ್ಳೋರಂತೆ ಬನ್ನಿ....''

''ನಮಗೇನೂ ಬೇಡ, ಪರವಾಗಿಲ್ಲ''

''ಹಂಗಂದ್ರೆ ಹೆಂಗೆ ? ಈಗ ಬಂದೆ'' ಎನ್ನುತ್ತಾ ಚಿನ್ನಪ್ಪ ತನ್ನ ಮನೆಯ ಕಡೆಗೆ ತಿರುಗಿದ. ಅವನು ಮರೆಯಾದ ಕೂಡಲೇ ಇವರಿಬ್ಬರೂ ಎದ್ದು, ಮೂಗನ್ನು ಒಂದು ಕೈಯಲ್ಲಿ ಮುಚ್ಚಿಕೊಳ್ಳುತ್ತಾ, ಮನೆಯೊಳಕ್ಕೆ ಕಾಲಿಟ್ಟರು. ವಿಶ್ವ ಮುಂದಾಗಿ ಹೋಗಿ, ಕೆಲವು ಕಿಟಕಿಯ ಬಾಗಿಲನ್ನು ತೆರೆದ. ಪೃಥ್ವಿ ಮನೆಯನ್ನು ವೀಕ್ಷಿಸುತ್ತಾ ನಿಂತ. ಹಳೆಯಕಾಲದ ಮನೆ, ಎಷ್ಟು ಗಟ್ಟಿಮುಟ್ಟಾಗಿದೆ ಎಂದುಕೊಂಡ. ಒಳಗಿನ ಕೋಣೆಗೆ ವಿಶ್ವ ಕ್ಷಣದಲ್ಲಿ ಏದುಸಿರು ಬಿಡುತ್ತಾ ಹೊರಬಂದ.

''ಪೃಥ್ವಿ ಆ ಕೋಣೇಲಿ ಹಾವುಗಳಿವೆ. ಇಲ್ಲಿಂದ ಹೊರಗೆ ಹೋಗೋಣ ಬನ್ನಿ. ಮೊದಲು ಹಾಲವು ಹಿಡಿಯೋರನ್ನ ಕರೆದುಕೊಂಡು ಬರುವಂತೆ ಹೇಳ್ತೀನಿ''

''ನಾನೂ ನೋಡ್ತೀನಿ...'' ಎನ್ನುತ್ತಾ ಪೃಥ್ವಿ ಆ ಕೋಣೆಯೊಳಗೆ ಕಾಲಿಟ್ಟ. ಮೇಲಿನ ಗವಾಕ್ಷಿಯಿಂದ ಬೆಳಕು ಚೆನ್ನಾಗಿ ಬೀಳುತ್ತಿತ್ತು. ಮೂಲೆಯಲ್ಲಿ ಇಟ್ಟಿದ್ದ ಒಂದು ಪೆಟ್ಟಿಗೆಯ ಮೇಲೆ ಸುರುಳಿಯಾಗಿ ಸುತ್ತಿಕೊಂಡು, ಹೆಡೆ ಎತ್ತಿ ಇವನ ಕಡೆ ನೋಡಿ ಭುಸ್ ಎಂದಿತು. ಪೃಥ್ವಿ ಹಿಂದಕ್ಕೆ ಸರಿದ. ಒಂದು ಗಳಿಗೆ ಹಾಗೇ

ನಿಂತ. ಅವನು ನೋಡುತ್ತಿದ್ದಂತೆಯೇ ಆ ಹಾವು ಅಲ್ಲಿಂದ ಹರಿದು ಸರಿದು ಮಾಯವಾಯಿತು.

"ವಿಶ್ವಾ... ಬನ್ನಿ... ಹಾವು ಹೊರಟುಹೋಯಿತು." ಪೃಥ್ವಿ ಕರೆದ.

"ಎಲ್ಲಿ ಹೋದವಾ ?"

"ಹೋಗಿರಬಹುದು... ನನಗೆ ಇನ್ಯಾವುದೂ ಕಾಣುತ್ತಿಲ್ಲ"

"ಇದು ನಾನು ನನ್ನ ತಾಯಿ ಮಲಗುತ್ತಿದ್ದ ಕೋಣೆ. ಈಗ ಇಲ್ಲಿ ಹಾವುಗಳು ವಾಸವಾಗಿವೆ ಅಂತಂದ್ರೆ... ಮೈ ನಡುಕ ಬರುತ್ತೆ."

"ಇನ್ನೇನು ಭಯ ? ಹೊರಟು ಹೋದವಲ್ಲ"

"ಹೌದು ಪೃಥ್ವಿ, ನಿಮಗೆ ಹೆದರಿ ಹೊರಟು ಹೋಗಿರಬೇಕು. ನಿಮಗೆ ಬೆನ್ನಮೇಲೆ ಗರುಡಮಚ್ಚೆ ಇದೆಯಂತಲ್ಲ..."

"ಅವೂ ಪ್ರಾಣಿಗಳೇ... ನಮಗೆ ಹೇಗೆ ಹೆದರಿಕೆಯೋ, ಹಾಗೆ ಅವುಗಳಿಗೂ ಮನುಷ್ಯಭಯ. ನಮ್ಮ ಹಾಗೆ ಅವೂ ಓಡಿ ಹೋಗುತ್ತವೆ ಅಷ್ಟೇ... ಮನೆ ಎಷ್ಟೋ ವರ್ಷ ಹಳೆಯದೇ, ಆದರೂ ಎಷ್ಟು ಗಟ್ಟಿ ಮುಟ್ಟಾಗಿದೆ....ಬಾಗಿಲು ಕಿಟಕಿ ಗೋಡೆಗಳು ಯಾವುದೂ ಹಾಳಾಗಿಲ್ಲ."

"ಹಾಗಾದ್ರೆ ಏನೇನಿವೆ ಅಂತ ನೋಡುಲ್ವ ?"

"ನೋಡೋಕೆ ಏನಿದೆ ? ಅಲ್ಲದೇ ಏನೇನಿತ್ತು ಅನ್ನೋದೇ ನನಗೆ ಮರೆತು ಹೋಗಿದೆ... ಹಾಗೆ ಎಲ್ಲವನ್ನು ಚಿನ್ನಪ್ಪನಿಗೆ ವಹಿಸಿಕೊಡ್ತೀನಿ. ಏನಾದ್ರೂ ಮಾಡಿಕೊಳ್ಳಲಿ."

"ನಿಮಗೆ ಪ್ರಿಯವಾದ ವಸ್ತು ಯಾವುದೂ ಇರಲಿಲ್ವಾ ?"

"ಇಲ್ಲ ಪೃಥ್ವಿ, ಈ ಊರು, ಈ ಮನೆಯ ಯಾವುದೂ ಪ್ರಿಯವಾಗಿರಲಿಲ್ಲ. ಹೋಗಲಿ ಅಂದರೆ ನಮ್ಮ ತಾತ ಕೂಡಾ ಪ್ರಿಯರಾಗಿರಲಿಲ್ಲ. ಇನ್ನು ನನ್ನ ತಾಯಿ... ತನ್ನ ಪ್ರೀತಿಯನ್ನು ಉಳಿಸಿಕೊಳ್ಳಲಿಲ್ಲ... ಯಾವುದೂ ನನಗೆ ಪ್ರಿಯವಲ್ಲ" ಹಲ್ಲು ಕಡಿದ.

"ಹೋಗಲಿ ಬಿಡಿ ನಿಮ್ಮ ಮನಸ್ಸಿಗೆ ಹೇಗೆ ತೋಚುತ್ತೋ ಹಾಗೇ ಮಾಡಿ. ಬಹುಶಃ ನಿಮ್ಮ ತಾಯಿ ಸಹ ಆಕ್ಷೇಪಣೆ ಮಾಡುವುದಿಲ್ಲ"

ಅಷ್ಟರಲ್ಲಿ ಚಿನ್ನಪ್ಪ ಹಣ್ಣು, ಬಿಸ್ಕತ್ತು, ಕಾಫಿ, ನೀರುಗಳೊಂದಿಗೆ ತನ್ನ

ಚಿಕ್ಕಮಗಳನ್ನು ಕರೆದುಕೊಂಡು ಬಂದ. ''ಇದೆಲ್ಲಾ ಏನು ಚಿನ್ನಪ್ಪ ಯ ನಮಗೆ ಏನೂ ಬೇಕಿರಲಿಲ್ಲ''

''ಹಂಗನ್ನ ಬೇಡಿ ದಣಿವಾರಿಸಿಕೊಳ್ಳಿ. ಇಕೋ ನೋಡಿ ಈ ಪರ್ತಗಳು ನಿಮ್ಮ ತಾತನ ಹೆಸರಿಗೆ ಬಂದೋವು...'' ವಿಶ್ವ ಪತ್ರಗಳನ್ನು ಹಿಂದೆ ಮುಂದೆ ತಿರುಗಿಸಿ ನೋಡಿದ. ಬ್ಯಾಂಕಿನಿಂದ ಬಂದೋವು. ಅದನ್ನ ಯಾರೋ ರೀಡೈರೆಕ್ಟ್ ಮಾಡಿದ್ದರು. ವಿಳಾಸ ಯಾವುದೋ ಗೊತ್ತಾಗುವಂತಿರಲಿಲ್ಲ.

''ಮನೇಲಿದ್ದ ಸಾಮಾನು ಸರಂಜಾಮು ಎಲ್ಲಾ ಸರ್ಯಾಗಿದ್ವು ತಾನೇ. ಕಳ್ಳಕಾಕರು ಸಹ ಮನೆಯೊಳಗೆ ಕಾಲಿಡಲು ಹೆದರುತ್ತಿದ್ದರು. ಒಳಗೆಹಾವುಗಳು ಇರಲಿಲ್ವಾ ವಿಶ್ವಪ್ಪಾ?''

''ಇದ್ದವು. ನಮ್ಮನ್ನು ಕಂಡು ಹೆದರಿ ಹೋದ್ವು ?''

''ಹೌದಾ ? ನಾಗರಹಾವಾ ? ಹೆಡೆ ಬಿಚ್ಚಿ ಕುತಿದ್ವಾ ? ಹಂಗೆ ಕೂತ ತಾವಲ್ಲಿ ನಿಧಿ ಇರುತ್ತೆ ಅಂತ ತಿಳ್ದೋರು ಹೇಳ್ತಾರೆ. ಎಲ್ಲಿ ಕುಂತಿದ್ವು ಅವು ? ಈಗ ನಿಜ್ವಾಗೂ ಹೊಂಟೋದ್ವಾ ?''

''ಹೂಂ, ಹೊರಟು ಹೋದ್ವು. ನಮ್ಮೋಂಥರ ಮನೇಲಿ ಏನು ನಿಧಿ ಇರುತ್ತೆ ಕಾಯೋಕೆ ? ಪಾಳು ಬಿದ್ದಿತ್ತು, ವಾಸವಾಗಿದ್ವು.''

''ಹಂಗೆನ್ನಬೇಡಿ ವಿಶ್ವಪ್ಪಾ.... ಈಚೆಗೆ ನಿಮ್ಮ ತಾತ ತುಂಬಾ ಹಣವಂತರಾಗಿದ್ರು. ಎಲ್ಲಾ ನನ್ನ ಮೊಮ್ಮಗಂಗೇ ಅಂತ ಹೇಳ್ತಿದ್ರು... ಅದಕ್ಕೇ ನಾನು ಹುಡುಕಿಸಿದ್ದು ನಿಮ್ಮನ್ನು. ಹಾವುಗಳು ಇದ್ದ ಜಾಗದಲ್ಲಿ ತಿಡಕಿ ನೋಡಿ. ಖಂಡಿತಾ ನಿಧಿಯ ಗಂಟು ಸಿಗುತ್ತೆ'' ವಿಶ್ವ ಸುಮ್ಮನೇ ನಕ್ಕ.

''ನಿಮಗೆ ಭ್ರಮೆ ! ನಮ್ಮ ತಾತನ ಹತ್ತಿರ... ಹುಗಿದಿಡುವಷ್ಟು...'' ಇದ್ದಕ್ಕಿದ್ದಂತೆ ಮಾತು ನಿಲ್ಲಿಸಿ ಪೃಥ್ವಿಯ ಕಡೆ ನೋಡಿದ.

''ಆಗಲಿ ಚಿನ್ನಪ್ಪ.... ನಾನು ನಿಧಾನವಾಗಿ ನೋಡ್ತೀನಿ. ನೀವು ಹೋಗಿ''

''ಹುಷಾರು ಕಣಪ್ಪಾ... ಕೈ ಹಾಕುವಾಗ ಜ್ವಾಪಾನ...'' ಎಂದು ಹೇಳಿ ಚಿನ್ನಪ್ಪ ಹೊರಗೆ ಹೋದ.

''ಪೃಥ್ವಿ ನನಗೆ ಒಂದು ಅನುಮಾನ... ನೋಡಿಯೇ ಬಿಡೋಣ... ಏನಂತೀರಾ ? ಏನೇನಿದೆಯೋ ನಮ್ಮ ತಾತನ ಆಸ್ತಿ... ನೋಡಿಯೇ ಬಿಡ್ತೀನಿ''

''ಈಗಲಾ ? ಇನ್ನೊಂದೆರಡು ದಿನಗಳ ನಂತರ ಮತ್ತೆ ಬರೋಣ''

''ಮನೆಯ ಬೀಗ ಒಡೆದಾಗಿದೆ ಈಗ ಚಿನ್ನಪ್ಪನನ್ನು ನಂಬುವಂತಿಲ್ಲ'' ಎನ್ನುತ್ತಾ ಪೃಥ್ವಿಯನ್ನು ಎಳೆದುಕೊಂಡು ಹಾವು ಹೆಡೆ ಚಿಚ್ಚಿ ಕೂತಿದ್ದ ಸ್ಥಳಕ್ಕೆ ಬಂದ. ಮೂಲೆಯಲ್ಲಿದ್ದ ಪೆಟ್ಟಿಗೆಯ ಧೂಳನ್ನು ಝಾಡಿಸಿ, ಪೆಟ್ಟಿಗೆಗೆ ಹಾಕಿದ ಬೀಗವನ್ನು ಬಲವಾಗಿ ಎಳೆದ. ಆ ಬಲಕ್ಕೆ ಬೀಗ ಮುರಿದು ಬಿತ್ತು. ಚಿಲಕವನ್ನು ಹಿಡಿದು ಬಾಗಿಲನ್ನು ಎತ್ತಿದ. ಕಾಗದಪತ್ರಗಳು ಅನೇಕವಿದ್ದವು. ಹಳೆಯ ಕಾಲದ ಒಂದೆರಡು ಒಡವೆಗಳು, ಒಂದಿಷ್ಟು ನೋಟಿನ ಕಂತೆಗಳು... ಇದರೊಂದಿಗೆ ಒಂದು ದಪ್ಪನೆಯ ಲಕೋಟೆ... ಅದನ್ನು ತೆರೆದು ನೋಡಿದ. ಒಂದು ಬ್ಯಾಂಕಿನ ಪಾಸ್‌ಬುಕ್... ಹಾಗೂ ಒಂದು ಪತ್ರ, ವಿಶ್ವನನ್ನು ಕುರಿತು ಬರೆದದ್ದು. ವಿಶ್ವ ಓದಿದ.

''ವಿಶ್ವಾ... ಈ ಪತ್ರ ನಿನ್ನ ಕೈ ಸೇರುವುದು ಎಂದಿಗೋ ನನಗೆ ತಿಳಿಯದು. ಈ ಪೆಟ್ಟಿಗೆಯಲ್ಲಿರುವ ಹಣ ಒಡವೆ ಎಲ್ಲಾ ನಿನಗೆ ಸೇರಬೇಕಾದದ್ದು. ಕೋ-ಆಪರೇಟಿವ್ ಬ್ಯಾಂಕಿನಲ್ಲಿರುವ ಹಣವೆಲ್ಲಾ ನಿನಗೇ... ಬ್ಯಾಂಕಿನ ಅಕೌಂಟ್‌ಗೆ ಸಂಬಂಧಿಸಿದ ಪತ್ರಗಳು, ಪಾಸ್‌ಬುಕ್ ಎಲ್ಲವನ್ನೂ ಇಲ್ಲೇ ಇಟ್ಟಿದ್ದೀನಿ. ಇಷ್ಟೊಂದು ಹಣ ಎಲ್ಲಿಂದ, ಹೇಗೆ ಬಂತು ? ಅಂತ ಮಾತ್ರ ತಲೆ ಕೆಡಿಸ್ಕೋಬೇಡ. ಕದ್ದ ಹಣವಂತೂ ಅಲ್ಲ. ನಾನು ದುರಾಸೆಯಿಂದ ಪಡೆದದ್ದು, ಅಷ್ಟು ನಿಜ. ಅದೂ ನನಗಾಗಿ, ನಿನಗಾಗಿ ಶೇಖರಿಸಿಟ್ಟಿದ್ದು. ನನ್ನ ನಂತರ ಈ ಹಣವೆಲ್ಲಾ ನಿನ್ನದು, ನಿನಗಿಷ್ಟ ಬಂದಂತೆ ಉಪಯೋಗಿಸುವ ಹಕ್ಕು ನಿನಗಿದೆ. ಈ ಹಣದ ಆಸೆಯಿಂದ ನಾನು ಎಲ್ಲರಿಂದ ದೂರನಾದೆ. ಆದರೆ ನಿನಗೆ ಅಂಥ ಸ್ಥಿತಿ ಬರದಿರಲಿ. ದೇವರು ನಿನ್ನನ್ನು ಸುಖವಾಗಿಟ್ಟಿರಲಿ... ನಿನ್ನ ತಾತ ಶ್ರೀಕಂಠಯ್ಯ''

ಪತ್ರವನ್ನು ಓದಿ ವಿಶ್ವನಿಗೆ ದುಃಖವಾಗಲಿಲ್ಲ, ಬೇಸರವಾಯಿತು. ತಾನು ಮಾಡಿದ್ದು ಅಪರಾಧವೆನಿಸಿತ್ತು. ಈ ಹಣದ ನಿಜವಾದ ವಾರಸುದಾರ ಹೇಗೂ ಇಲ್ಲೇ ನಿಂತಿದಾನೆ, ಎಂದುಕೊಂಡು, ಅವನಿಗೆ ಸಂಕ್ಷಿಪ್ತವಾಗಿ ಪತ್ರದಲ್ಲಿ ಬರೆದಿರುವುದನ್ನು ತಿಳಿಸಿ, ನುಡಿದ.

''ಈ ಹಣವೆಲ್ಲಾ ನಿಮ್ಮ ತಾತನದು. ಈಗ ಇವೆಲ್ಲಾ ನಿಮಗೇ ಸೇರಬೇಕು. ಅದೇ ನ್ಯಾಯ'' ಎಂದು ನುಡಿದು ಅವನ ಕೈ ಹಿಡಿದ. ಪೃಥ್ವಿ ಗಂಭೀರನಾದ.

''ನಮ್ಮ ತಾತ ಈ ಹಣವನ್ನು ನಿಮ್ಮ ತಾತನಿಗೆ ಕೊಟ್ಟಾದ ಮೇಲೆ ಆ ಹಕ್ಕು ನಮ್ಮ ತಾತನಿಗಿರಲಿಲ್ಲ. ಆದ್ದರಿಂದ ನನಗೆ ಯಾವ ಹಕ್ಕೂ ಇಲ್ಲ. ಈ ಹಣವೆಲ್ಲಾ

ನಿಮ್ಮದೇ. ಈ ವಿಷಯದಲ್ಲಿ ಯಾವ ಚರ್ಚೆಯೂ ನನಗಿಷ್ಟವಿಲ್ಲ.''

''ಹಾಗಾದರೆ ನಿಮ್ಮ ಚಿಕ್ಕಮ್ಮನ್ನ ಕೇಳ್ತೀನಿ... ಅವರು ಹೇಳಿದ್ದೇ ಮಾತು''

''ನಿಮ್ಮಿಷ್ಟ. ಆದರೆ ಈ ಹಣಕ್ಕೂ ನನಗೂ ಯಾವ ಸಂಬಂಧವಿಲ್ಲ. ನನ್ನನ್ನು ಮಾತ್ರ ಏನೂ ಕೇಳಬೇಡಿ'' ಖಡಾಖಂಡಿತವಾಗಿ ನುಡಿದ.

ವಿಶ್ವ, ಪೃಥ್ವಿ ಹೊರಟು ನಿಂತರು. ಚಿನ್ನಪ್ಪ ಬಂದ ನಂತರ ವಿಶ್ವ ಹೇಳಿದ. ''ಈ ಪೆಟ್ಟಿಗೆಯಲ್ಲಿ ಏನಿತ್ತೋ, ಅದನ್ನು ಮಾತ್ರ ನನ್ನೊಂದಿಗೆ ತೆಗೆದುಕೊಂಡು ಹೋಗುತ್ತಿದ್ದೇನೆ. ಉಳಿದ ಯಾವ ವಸ್ತುವಿನ ಮೇಲೂ ನನಗೆ ಆಸಕ್ತಿ ಇಲ್ಲ. ಅದನ್ನೆಲ್ಲಾ ನೀವೇ ಉಪಯೋಗಿಸಿಕೊಳ್ಳಿ. ಈ ಮನೆಗೆ, ಈ ಜಾಗಕ್ಕೆ ನೀವು ಏನು ಬೆಲೆ ಕಟ್ಟುತ್ತೀರೋ ಅದು ನನಗೆ ಸಮ್ಮತ. ಖರೀದಿ ಪತ್ರವನ್ನು ಸಿದ್ಧಮಾಡಿ ತನ್ನಿ. ನಾನು ಸಹಿ ಹಾಕಿ ಕೊಡ್ತೀನಿ''

''ಆಯ್ತು ವಿಶ್ವಪ್ಪಾ... ನಂಗೂ ಯಾವ ದುರಾಸೆ ಇಲ್ಲ. ನಾನು ಮಕ್ಕಳೊಂದಿಗೆ. ನನ್ನ ಮಗಳಿಗೆ ಅನುಕೂಲವಾಗಲಿ ಅಂತ, ಈ ಮನೇಲಿ ಅಳಿಯನಿಗೆ ಅಂಗಡಿ ಹಾಕಿಕೊಡ್ತೀನಿ. ಉಳಿದದ್ದು ದೇವರಿಚ್ಛೆ...''

''ಹಾಗಾದ್ರೆ ನಾವು ಇನ್ನು ಹೊರಡ್ತೀವಿ, ಚಿನ್ನಪ್ಪಾ....''

''ಊಟಕ್ಕೆ ಏನು ಮಾಡ್ತೀರಿ ? ... ನಮ್ಮ ಮನೇಲಿ ಉಣ್ಣೋದಾದ್ರೆ ಬಿಸಿ ಅಡಿಗೆ ಮಾಡಿಸ್ತೀನಿ.''

''ಏನೂ ಬೇಡ ಚಿನ್ನಪ್ಪಾ. ಯಾವುದಾದ್ರೂ ಹೋಟೆಲಿನಲ್ಲಿ ಮಾಡಿದ್ರಾಯ್ತು. ಈ ಪೆಟ್ಟಿಗೇನ ಕಾರಿನ ತನಕ ತಂದು ಕೊಡೋಕೆ. ಯಾರಾದ್ರೂ ಸಿಗ್ತಾರಾ ?''

''ಏಯ್ ಬಿಡಿ... ನಂಗ್ಹೇಳಿ ನಾನು ತಂದು ಕೊಡ್ತೀನಿ... ಅದ್ಯಾವ ಕೆಲ್ಸ?'' ಎನ್ನುತ್ತ ಪೆಟ್ಟಗೆಯನ್ನು ತಲೆ ಮೇಲೆ ಹೊತ್ತು, ಬಾಗಿಲನ್ನು ಮುಂದಕ್ಕೆ ಎಳೆದು ಹಾಕಿದ. ಕಾರಿನ ಬಳಿಗೆ ಬಂದರು. ಚಂದ್ರು ಪೆಟ್ಟಿಗೆಯನ್ನು ಎತ್ತಿಕೊಂಡು ಕಾರಿನೊಳಗೆ ಇಟ್ಟ. ವಿಶ್ವ ಚಿನ್ನಪ್ಪನ ಕೈ ಹಿಡಿದು ತನ್ನ ವಿಶ್ವಾಸವನ್ನು ಪ್ರಕಟಿಸಿದ. ಪೃಥ್ವಿ ಭಾವುಕನಾಗಿದ್ದ. ಕಾರು ಹೊರಟಿತು. ಚಿನ್ನಪ್ಪನಿಗೆ ಕೈ ಮುಗಿದ. ಹೆದ್ದಾರಿಗೆ ಕಾರು ಸೇರಿತು. ವಿಶ್ವ ನುಡಿದ.

''ಸದ್ಯ... ಇವತ್ತಿಗೆ ಈ ಊರಿನ ಋಣ ತೀರಿತು'' ನಿಟ್ಟುಸಿರು ಬಿಟ್ಟ!

''ಯಾಕೆ ಹೀಗಂತೀರಾ ?''

''ಮತ್ತಿನ್ನೇನು ? ನನಗೆ ಎಂದೂ ಈ ಹಳ್ಳಿಯ ಮೇಲಾಗಲೀ, ಈ ಮನೆಯ ಮೇಲಾಗಲೀ ಯಾವತ್ತೂ ವ್ಯಾಮೋಹವಿರಲಿಲ್ಲ. ಸದಾ ಬಡತನ, ಆಸೆಪಟ್ಟಿದ್ದನ್ನು ಕೊಳ್ಳಲಾಗದ ಕೊರತೆ, ... ನಾನು ತಾತನನ್ನು ಗೌರವಿಸಲಿಲ್ಲ. ತಾಯಿ ಹೇಳದಂತೆ ಕೇಳಲಿಲ್ಲ. ಮನೆ ಬಿಟ್ಟು ಬಿಟ್ಟು ಓಡಿ ಹೋಗುತ್ತಿದ್ದೆ. ವಿದ್ಯೆ ಬುದ್ಧಿ ಇಲ್ಲದ ನನ್ನಂತಹ ಮಗನಿಗೆ ತಾಯಿ ಸರಿಯಾಗಿ ಬುದ್ಧಿ ಕಲಿಸಿದಳು... ಆದರೆ ಹಣದ ಆಸೆಗೆ ಮಗಳನ್ನೇ ಮಾರಿದನಲ್ಲ... ನನ್ನ ತಾತಾ... ಅವನನ್ನೆಂದೂ ನಾನು ಕ್ಷಮಿಸುವುದಿಲ್ಲಯ''

ವಿಶ್ವ ಆಡಿದುದರಲ್ಲಿ ಸುಳ್ಳಿರಲಿಲ್ಲವಾದ್ದರಿಂದ, ಪೃಥ್ವಿ ಮೌನಿಯಾದ. ಶ್ರೀಕಂಠಯ್ಯನಂತಹ ಮನುಷ್ಯನನ್ನು ಬಹುಶಃ ಯಾರೂ ಕ್ಷಮಿಸಲಾರರು... ಎಂದುಕೊಂಡು ವಿಶ್ವನ ಕೈ ಹಿಡಿದು ಒತ್ತಿದ. ಮನೆ ತಲುಪಿದಾಗ ಕತ್ತಲಾಗಿತ್ತು.

ನಳಿನಿ ತಾನಾಗಿಯೇ ಏನನ್ನು ಕೇಳದಿದ್ದರೂ, ವಿಶ್ವ ನಡೆದುದನ್ನು ಸಂಕ್ಷಿಪ್ತವಾಗಿ ತಿಳಿಸಿ, ಪೆಟ್ಟಿಗೆಯನ್ನು ಅವಳ ಮುಂದೆ ಇಟ್ಟ. ''ಈ ಹಣ, ಒಡವೆ ಎಲ್ಲಾ ನಿಮ್ಮದು. ನನಗೆ ಬೇಡ''

''ಈಗ ಇದನ್ನೆಲ್ಲಾ ತೆಗೆದುಕೊಂಡು ನಾನು ಏನು ಮಾಡಲಿ ? ಈ ಒಡವೆ ನನ್ನ ಅಮ್ಮನದು. ಇದನ್ನು ನಿನ್ನ ಹೆಂಡತಿಯಾಗೋಳಿಗೆ ಕೊಟ್ಟುಬಿಡು... ನಿನಗೆ ಹಣ ಬೇಡವಾದರೆ ದಾನ ಮಾಡಿಬಿಡು...''

''ಬ್ಯಾಂಕಿನಲ್ಲಿ ಇರುವ ಲಕ್ಷಾಂತರ ರೂಪಾಯಿಗಳ ನಿಜವಾದ ಹಕ್ಕುದಾರರು ಯಾರು ಗೊತ್ತೇ?''

''ಹೂಂ, ಗೊತ್ತು. ಪೃಥ್ವಿಯ ತಾತನಿಂದ, ತಂದೆಯಿಂದ ಅನ್ಯಾಯದಿಂದ ವಸೂಲು ಮಾಡಿದ ಹಣ ಅದು. ಪೃಥ್ವಿ ಸ್ವೀಕರಿಸುವುದಾದರೆ ಅವನಿ ಕೊಡು. ಇಲ್ಲದಿದ್ದರೆ ಬಲವಂತ ಮಾಡಬೇಡ. ಅದರಿಂದ ಅವನ ಅಭಿಮಾನಕ್ಕೆ ಧಕ್ಕೆ ಬರುತ್ತದೆ. ನಿನಗೂ ಬೇಡದಿದ್ದರೆ, ಯಾವುದಾದರೂ ಆಶ್ರಮಕ್ಕೆ ಕೊಡು, ಬಡಬಗ್ಗರಿಗೆ ಹಂಚು.... ಅದು ನಿನಗೆ ಸೇರಿದ್ದು.''

''ಇದೆಲ್ಲ ಸಧ್ಯಕ್ಕೆ ಇಲ್ಲಿರಲಿ.... ಬ್ಯಾಂಕಿನಲ್ಲಿ ಎಷ್ಟು ಹಣ ಇದೆ ಅಂತ ತಿಳಿದುಕೊಂಡು, ನಂತರ ಏನು ಮಾಡಬೇಕೂಂತ ನಿರ್ಧರಿಸುತ್ತೀನಿ... ನಾನು ಈಗ ಹೋಗಬೇಕು'' ಎಂದು ಹೊರಟವನನ್ನು ನಳಿನಿ ತಡೆದಳು.

''ಈ ಕತ್ತಲೆಯಲ್ಲಿ ಯಾಕೆ ಹೋಗಬೇಕು ? ಬೆಳಿಗ್ಗೆ ಹೋದರಾಯ್ತು'' ಪೃಥ್ವಿಯೂ ಹಾಗೇ ನುಡಿದ. ಊಟ ಮಾಡಿ ಮೆತ್ತನೆಯ ಹಾಸಿಗೆಯ ಮೇಲೆ

ಮಲಗಿದವನಿಗೆ ನಿದ್ದೆ ಇಲ್ಲ. ಮನಸ್ಸು ಭಾರವಾಗಿತ್ತು. ಹಣವಿಲ್ಲದಾಗ, ಹಣಕ್ಕಾಗಿ ಬಾಯಿ ಬಾಯಿ ಬಿಟ್ಟಿದ್ದ. ಈಗ ಲಕ್ಷಾಂತರ ರೂಪಾಯಿಗಳ ಒಡೆಯನಾಗುವ ಸುಯೋಗ ಬಂದಿದೆ. ಆದರೆ ನೆಮ್ಮದಿಯೇ ಇಲ್ಲವಾಗಿದೆ. ಎಲ್ಲವನ್ನೂ ಕಳಚಿಕೊಂಡು ಎಲ್ಲಿಯಾದರೂ ಓಡಿಹೋಗುವ ಬಯಕೆಯಾಗುತ್ತಿದೆ. ನಿದ್ದೆಯಿಲ್ಲದೇ ರಾತ್ರಿಯನ್ನು ಕಳೆದ. ಬೆಳಗಾಯ್ತು.

''ಅಜಯ ವಿಜಯರು ಹಾಗೂ ಅವನ ಹೆಂಡತಿಯರು ಮನೆಗೆ ಬರುತ್ತಿದ್ದಾರೆ. ಮಧ್ಯಾಹ್ನದ ಊಟ ಮಾಡಿಕೊಂಡು ಹೋಗೂವಂತೆ.''

''ಬಂದಾಗೆಲ್ಲ ಊಟ ಗೀಟ ಅಂತ ಉಳಿದುಕೊಂಡರೆ... ಅಲ್ಲಿ ಬೇಕಾದಷ್ಟು ಕೆಲಸಗಳು ಉಳಿದುಕೊಳ್ಳುತ್ತವೆ'' ಎಂದು ಹೊರಟೇಬಿಟ್ಟ.

ಇವನಿಗಾಗಿಯೇ ಕಾದಿದ್ದ ಪಂಡಿತರು ''ನಿನ್ನನ್ನು ಕೇಳಿಕೊಂಡು, ರೂಪಿಣಿ ಬಂದಿದ್ದಳು.... ನೀನು ರಾತ್ರಿಯಾದರೂ ಬರಲೇ ಇಲ್ಲ''

''ಹೊರಟು ಹೋದಳಾ ?''

''ಇಲ್ಲ, ನಿನ್ನ ಮನೇಲೇ ಇದಾಳೆ. ನಿನ್ನನ್ನು ನೋಡಿಕೊಂಡು, ಮಾತನಾಡಿಸಿ ಹೋಗ್ತೀನಿ ಅಂತ ಉಳಿದುಕೊಂಡಳು. ನನಗ್ಯಾಕೋ ಇದು ಚೆನ್ನಾಗಿ ಕಾಣುಲ್ಲ... ನೀನೋ.... ಈ ನಡುವೆ ಅಲ್ಲಿ ಇಲ್ಲಿ ಅಂತ ಹೊರಗೆ ಹೋಗುವುದು ಜಾಸ್ತಿ ಆಗ್ತಿದೆ...''

''ನಾನೇನು ಮಾಡಲಿ ಪಂಡಿತರೇ... ಎಲ್ಲಾ ಬಿಟ್ಟು ನಾನು ನಿಮ್ಮ ಬಳಿ ಇದ್ದಾಗ ನಾನು ಹಾಯಾಗಿದ್ದೆ. ಈಗ ಮತ್ತೆ ಬಂಧನಕ್ಕೆ ಸಿಕ್ಕಿ ಬಿದ್ದು ಬಿಟ್ಟಿದೀನಿ. ಎಲ್ಲಿಯಾದರೂ ಹೊರಟು ಹೋಗೋಣ ಅಂತನ್ನಿಸುತ್ತೆ. ನನ್ನಿಂದ ನಿಮಗೆಷ್ಟು ತೊಂದರೆ ಅಲ್ವಾ ಪಂಡಿತರೇ...''

''ನನ್ನ ಮಾತಿಗೆ ನೀನು ಬೇಸರಿಸಬೇಡ ವಿಶ್ವಾ... ನನಗೂ ವಯಸ್ಸಾಯ್ತು. ನನ್ನ ಕೈಲಿ ಕೆಲಸ ಹರಿಯುಲ್ಲ. ಎಲ್ಲಾ ರೋಗಿಗಳ ಕಡೆ ಗಮನ ಕೊಡುವುದು ನನ್ನಿಂದಾಗುತ್ತಿಲ್ಲ''

''ಪಂಡಿತರೇ ನಿಮಗೆ ಸಹಾಯಕರನ್ನಾಗಿ ಒಂದಿಬ್ಬರನ್ನು ನೇಮಿಸೋಣ ಅಂತಿದೀನಿ... ರೋಗಿಗಳ ಸಂಖ್ಯೆಯೂ ಒಂದೊಂದು ಸಲ ಹೆಚ್ಚಿರುತ್ತೆ.''

''ಅದೆಲ್ಲಾ ಏನೂ ಬೇಡ. ಅವರನ್ನು ಸಾಕೋರು ಯಾರು ?''

''ನಾನು ಅದನ್ನೆಲ್ಲ ನೋಡಿಕೊಳ್ತೀನಿ. ನೀವು ಹೂಂ ಅನ್ನಿ ಸಾಕು.''

''ಏನಪ್ಪಾ... ನಿನ್ನ ಮನೆ ಮಾರಾಟವಾಗುವ ಮೊದಲೇ ದೊಡ್ಡ ಮನುಷ್ಯನ ತರಹ ಮಾತನಾಡ್ತೀಯಲ್ಲ....''

''ಮನೆ ಮಾರಾಟವಾದರೆ ಎಷ್ಟು ಹಣ ಸಿಗುತ್ತೋ... ನನಗೆ ತಿಳಿಯದು. ಆದರೆ ನನ್ನ ತಾತ ನನಗಾಗಿ ಬಿಟ್ಟು ಹೋಗಿರುವ ಹಣದಲ್ಲಿ ಏನು ಬೇಕಾದರೂ ಸಾಧಿಸಬಹುದು'' ಎನ್ನುತ್ತಾ ಎಲ್ಲಾ ವಿಷಯವನ್ನೂ ತಿಳಿಸಿದ. ಪಂಡಿತರು ಬಾಯಿ ಬಿಟ್ಟುಕೊಂಡು ಅವನ ಮಾತನ್ನು ಕೇಳಿಸಿಕೊಂಡರು. ಅವರ ಮುಖ ಮೊರದಗಲವಾಗಿತ್ತು.

''ಹಾಗಾದ್ರೆ... ಇಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸೋಣ. ಆಸುಪಾಸಿನ ಜನರಿಗೆ, ಬಡಬಗ್ಗರಿಗೆ ಅನುಕೂಲವಾಗುವಂತೆ, ಸೌಲಭ್ಯಗಳನ್ನು ಒದಗಿಸೋಣ. ಇದರಿಂದ ಎಷ್ಟೋ ಜನರಿಗೆ ನೆರವಾಗುತ್ತದೆ...''

''ಹೌದು ಪಂಡಿತರೇ... ನನಗೆ ಈ ವಿಷಯ ಹೊಳೆದಿರಲೇ ಇಲ್ಲ, ಮೊದಲು ಈ ಸುದ್ಧಿಯನ್ನು ನಾನು ಪೃಥ್ವಿಗೆ ತಿಳಿಸಬೇಕು....''

''ನನ್ನ ತಾಯಿ ಈಗ ಪೃಥ್ವಿಯ ಚಿಕ್ಕಮ್ಮ...'' ಎನ್ನುತ್ತಾ ಎಲ್ಲವನ್ನೂ ತಿಳಿಸಿದ. ''ಈಗ ನಾವಿಬ್ಬರೂ ಸ್ನೇಹಿತರಂತೆ ಇದೀವಿ... ಈ ಹಣದ ನಿಜವಾದ ವಾರಸುದಾರ ಅವನಾಗಿರುವುದರಿಂದ, ಅವನ ಸಲಹೆ ನನಗೆ ಮುಖ್ಯ.''

''ಅಗತ್ಯವಾಗಿ ಅವನ ಸಲಹೆ ತಗೋ... ಇಂಜಿನಿಯರ್ ಅಂತ ಹೇಳ್ತೀಯ. ಆಸ್ಪತ್ರೆಯ ಪ್ಲಾನ್, ನಿರ್ಮಾಣಕ್ಕೆ ಎಲ್ಲಾ ಮಾಹಿತಿ ಎಲ್ಲಾ ಸಲಹೆ ಕೊಡುತ್ತಾನೆ ಅಲ್ವಾ ?''

''ಹೌದು ಪಂಡಿತರೇ... ಎಲ್ಲಾ ಕೆಲಸಗಳೂ ಬೇಗ ಪ್ರಾರಂಭವಾಗಿ, ಬೇಗ ಮುಗಿಯುವಂತೆ ನಾನೂ ಪೃಥ್ವಿ ಇಬ್ಬರೂ ನೋಡಿಕೊಳ್ತೀವಿ''

''ಸರಿ ಈಗ ಈ ಹುಡುಗಿಯನ್ನು ಏನು ಮಾಡ್ತೀಯಾ ?''

''ಯಾರನ್ನಾ ?....''

''ಅದೇ ರೂಪಿಣಿಯನ್ನು, ನಿನಗಾಗಿ ಕಾಯ್ತಾ ಇದಾಳಲ್ಲ... ನೀನೇಕೆ ಅವಳನ್ನು ಮದುವೆಯಾಗಿ ಸಂಸಾರಿಯಾಗಬಾರದು ?''

''ಸಂಸಾರಿಯಾಗುವ ಆಸೆ ನನಗಿಲ್ಲ ಪಂಡಿತರೇ... ಸಂಸಾರದಲ್ಲಿ ಬರೀ ಜಂಝಾಟಾನೇ... ನಾನೀಗ ಹಾಯಾಗಿದೀನಿ'' ಎನ್ನುತ್ತಾ ಎದ್ದ. ಪಂಡಿತರು ಸಂದೇಹಗೊಳ್ಳಲಿಲ್ಲ. ಇವನಿಗಾಗಿ ಕಾಯುತ್ತಾ ಇದ್ದ ರೂಪಿಣಿ ಅವನನ್ನು ಕಂಡು

ಓಡಿ ಬಂದಳು. ''ಎಲ್ಲಿಗೆ ಹೊರಟು ಹೋಗಿದ್ರಿ ವಿಶ್ವಾ... ನಾನು ನೆನ್ನೆಯಿಂದ ನಿಮಗಾಗಿ ಕಾಯ್ತಾ ಇದೀನಿ'' ಎಂದಳು ಒನಪು ವೈಯಾರಗಳಿಂದ. ವಿಶ್ವ ಬೆವತು ಹೋದ.

''ನನ್ನಿಂದೇನಾಗ ಬೇಕಾಗಿತ್ತು ?''

''ನಿಜ ಹೇಳಿ ವಿಶ್ವಾ ? ನನ್ನನ್ನು ನೋಡಿ ಖುಷಿಯಾಗಲಿಲ್ಲವಾ ?''

''ನಿಂದು ಊಟ ಆಯ್ತಾ ರೂಪಿಣಿ...''

''ಹೂಂ, ಪಂಡಿತರ ಮನೇಲಿ ಮಾಡಿದ್ದೆ... ಆದರೆ ಈಗ ಮತ್ತೆ ಹೊಟ್ಟೆ ಹಸಿಯುತ್ತಿದೆ''

''ಸರಿ, ಹಾಗಾದ್ರೆ ಬೇಗ ಅಡಿಗೆ ಮಾಡ್ತೀನಿ. ನನ್ನ ಊಟ ಆಗಿಲ್ಲ''

''ಹೌದಾ ? ನಾನು ನೀವು ನಿಮ್ಮ ಅಮ್ಮನ ಮನೇಲಿ ಊಟ ಮುಗಿಸಿಕೊಂಡು ಬರ್ತೀರೇನೋ ಅಂತಂದುಕೊಂಡೆ.''

''ಇವತ್ತು ಅಜಯ ವಿಜಯರು ಅವರವರ ಪತ್ನಿಯರೊಂದಿಗೆ ಮನೆಗೆ ವಾಪಸ್ಸು ಬರ್ತಿದಾರೆ. ಅಲ್ಲಿ ನನಗೇನು ಕೆಲಸ ?''

''ಹೊಸದಾಗಿ ಮದುವೆಯಾದ ದಂಪತಿಗಳು ಎಷ್ಟು ಮಜವಾಗಿ, ಜೊತೆ ಜೊತೆಯಾಗಿ ಕಾಲ ಕಳೀತಾರೆ ಅಲ್ವಾ ? ನಿಮಗೇನೂ ಅನ್ನಿಸುಲ್ವಾ ?''

''ನನಗೇನೂ ಗೊತ್ತಿಲ್ಲ... ಆಮಾತೆಲ್ಲಾ ಈಗೇಕೆ ?''

''ಪೃಥ್ವಿ ನನ್ನನ್ನು ತಿರಸ್ಕರಿಸಿ ನನಗೆ ಅವಮಾನ ಮಾಡಿದ. ಆ ಸೇಡನ್ನು ತೀರಿಸಿಕೊಳ್ಳಬೇಡ. ಅದಕ್ಕೆ ನಿಮ್ಮ ಸಹಾಯ ಬೇಕು''

''ನಾನು ಅವತ್ತೇ ಹೇಳಿದೆ. ಪೃಥ್ವಿಯ ತಂಟೆಗೆ ಹೋಗಬೇಡಾಂತ.''

''ಒಂದೇ ಒಂದು ಸಲ ಅವನು ನನ್ನ ಆಸೆಯನ್ನು ಪೂರೈಸಿದ್ದರೆ ಸಾಕಾಗುತ್ತಿತ್ತು. ಅದನ್ನು ಅವನು ತಿರಸ್ಕರಿಸಿದ''

''ಅದಕ್ಕೆ ನಾನೇನು ಮಾಡಬೇಕು ?''

''ನೀವು ಮಾಡಬೇಕಾದ್ದು ಸಾಕಷ್ಟಿದೆ. ನಾನು ನಿಧಾನವಾಗಿ ಎಲ್ಲಾ ಹೇಳ್ತೀನಿ. ಸಧ್ಯಕ್ಕೆ ನಾನು ನಿಮ್ಮ ಮನೆಯಲ್ಲಿರುವುದರಿಂದ ನಿಮಗೆ ತೊಂದರೆ ಏನಿಲ್ಲ ತಾನೇ...?'' ಅವಳು ನಗುತ್ತಾ ಅವನ ಮೈಮೇಲೆ ಬೀಳುವಂತೆ ವರ್ತಿಸಿದಾಗ, ಅವಳ ಇಂಗಿತವೇನು ಅಂತ ಅರ್ಥವಾಗಿತ್ತು. ತಾನಾಗಿಯೇ

ಸಮೀಪಕ್ಕೆ ಬಂದವಳನ್ನು ದೂರ ತಳ್ಳುವ ಮೂರ್ಖತನ ಅವನಲ್ಲಿರಲಿಲ್ಲ. ರೋಗಿ ಬಯಸಿದ್ದೂ ಹಾಲು ಅನ್ನ; ವೈದ್ಯ ಹೇಳಿದ್ದೂ ಹಾಲು ಅನ್ನ ಅನ್ನುವಂತೆ ಸಂತುಷ್ಟಗೊಂಡ.

ಎರಡು ರಾತ್ರಿ ಅಲ್ಲಿ ಉಳಿದ ರೂಪಿಣಿ ತನ್ನ ಬಯಕೆಯನ್ನು ಪೂರೈಸಿಕೊಂಡಿದ್ದಳು. ''ನಾನು ಊರಿಗೆ ಹೋಗುವ ಮೊದಲು ಮೇನಕಾ, ರೇವತಿಯರನ್ನು ನೋಡಿ ಮಾತನಾಡಿಸಿಕೊಂಡು ಹೋಗಬೇಕು... ನೀವೂ ಬರ್ತೀರಾ ನಿಮ್ಮಮ್ಮನ ಮನೆಗೆ ?''

''ಹೂಂ, ಬರ್ತೀನಿ, ನಾನು ಪೃಥ್ವಿಯ ಹತ್ತಿರ ಮುಖ್ಯವಾದ ಮಾತನ್ನಾಡಬೇಕು...'' ಎಂದ.

''ನೀವು ಯಾವಾಗ ಕಾರನ್ನು ಇಟ್ಟುಕೊಳ್ತೀರಿ ?''

''ಸಧ್ಯದಲ್ಲೇ...'' ನಗುತ್ತಾ ತಮಾಷೆಯಿಂದ ನುಡಿದ.

''ಅಂದರೇ... ನಿಮ್ಮ ತಾತ ನಿಮಗೋಸ್ಕರ ಇಟ್ಟ ನಿಧಿ ಸಿಕ್ತಾ?''

''ನಿಧಿಯೇನೋ ಸಿಗುತ್ತೆ. ಆದರೆ ಬಹಳ ಖರ್ಚಿದೆ''

''ಅರ್ಧ ಹಣ ನನಗೆ ಕೊಡ್ತೀನಿ ಅಂತ ವಾಗ್ದಾನ ಮಾಡಿದ್ರಿ ? ಮರೆತುಬಿಟ್ರಾ ?''

''ನಿನಗೂ ಸ್ವಲ್ಪ ಹಣ ಕೊಡ್ತೀನಿ ರೂಪಿಣಿ... ಆದರೆ ನನ್ನ ಕೈಗೆ ಹಣ ಸಿಕ್ಕ ಮೇಲೆ... ತತ್‌ಕ್ಷಣಕ್ಕೆ ನಾನು ಏನೂ ಮಾಡುವಂತಿಲ್ಲ...''

''ನಿಮಗೆ ನನ್ನ ಮೇಲೆ ನಂಬಿಕೆ ಇದೆ. ಅದಕ್ಕೇ ನಾನು ನಿಮ್ಮ ಸ್ನೇಹ ಮಾಡಿದ್ದು...'' ಎನ್ನುತ್ತಾ ಹೇಳಿದವಳು ಮತ್ತೆ ನುಡಿದಳು.

''ನಾನು ಬಯಸಿದ್ದೇ ಬೇರೆ... ಆದದ್ದೇ ಬೇರೆ...''

''ಯಾರ ಬಗ್ಗೆಹೇಳ್ತಿದೀಯ ?''

''ನನ್ನ ಬಗ್ಗೇನೇ... ನನಗೆ ಪೃಥ್ವಿ ಒಲಿಯಲಿಲ್ಲ.. ಆದರೆ ಅದು ನನ್ನ ಜೀವನದ ಸೋಲಾಗಬಾರದು...''

''ನೀನು ಇನ್ನೂ ಆ ದ್ವೇಷವನ್ನು ಮರೆತಿಲ್ವಾ ?''

''ಹೇಗೆ ಮರೆಯುವುದು ? ಯಾವುದೇ ಒಂದು ಬೀಜ ಮೊಳೆತು, ಗಿಡವಾಗಿ ಚಿಗುರಿದ್ದು, ಮತ್ತೆ ಮತ್ತೆ ಚಿಗುರುತ್ತಲೇ ಇರುತ್ತದೆ ಅಲ್ವಾ ?''

''ಅದು ತಪ್ಪು ರೂಪಿಣಿ... ಅಂಥ ಮೊಳಕೆಯನ್ನು ಚಿವುಟಿ ಹಾಕಬೇಕು.''

''ಆಸೆ, ದ್ವೇಷ ಎಲ್ಲಾ ಒಂದೇ ತರಹ. ಅದು ಮತ್ತೆ ಮತ್ತೆ ಹುಟ್ಟುತ್ತಲೇ ಇರುತ್ತದೆ. ಈಗ ನೀವೇ ಒಂದು ಉದಾಹರಣೆ, ನನ್ನ ಸಹವಾಸ ಮಾಡಿ, ನಿಮ್ಮ ಆಸೆಯನ್ನು ಪೂರೈಸಿಕೊಂಡಿರಿ. ನಾನು ಮತ್ತೆ ಮತ್ತೆ ಬಂದರೆ, ನಿಮಗೆ ನನ್ನಿಂದ ದೂರ ಹೇಗಲು ಸಾಧ್ಯವಾಗುತ್ತಾ?'' ವಿಶ್ವ ತಲೆ ತಗ್ಗಿಸಿದ.

''ನಾನು ನಿನ್ನ ಆಸೆಯನ್ನು ಪೂರೈಸಿದೆ ಅಷ್ಟೇ...''

''ಇದರಿಂದ ನಮ್ಮಿಬ್ಬರಿಗೂ ನಷ್ಟವಿಲ್ಲ. ಹೋಗಲಿಬಿಡಿ. ಆದರೆ ನಾನು ಈ ತೀರ್ಮಾನಕ್ಕೆ ಬರಬೇಕಾದರೆ, ಅದಕ್ಕೇ ಪೃಥ್ವಿಯೇ ಕಾರಣ. ಒಂದಲ್ಲ ಒಂದು ದಿನ ಅವನಿಗೆ ಬುದ್ಧಿ ಬರುತ್ತದೆ. ನಡೀರಿ... ಹೊರಡೋಣ. ನಾನು ನನ್ನ ತಂಗಿಯರನ್ನು ನೋಡಬೇಕು...''

''ನನ್ನನ್ನು ಕ್ಷಮಿಸು ರೂಪಿಣಿ....''

''ಅಯ್ಯೋ ನೀವೇಕೆ ಕ್ಷಮೆ ಕೇಳಬೇಕು... ತಪ್ಪು ನನ್ನದೇ... ಆದರೆ ನನಗೇನೂ ಭಯವಿಲ್ಲ. ನಾನು ಆಗ ಈಗ ಮತ್ತೆ ಮತ್ತೆ ಬರ್ತಾನೇ ಇರ್ತೀನಿ. ನಿಮಗೆ ಬೇಸರವೇನೂ ಇಲ್ಲ ತಾನೇ...''

''ಬೇಸರ ಏನಿಲ್ಲ... ಬೇಕಾದಾಗ ಬರಬಹುದು ಅಥವಾ ನೀನು ಇಲ್ಲೇ ಇದ್ದರೂ ನನ್ನ ಅಭ್ಯಂತರವಿಲ್ಲ... ಆದರೆ ನಾವು ಬರೀ ಸ್ನೇಹಿತರು. ಮದುವೆ ಗಿದುವೆ ಅನ್ನೋ ಬಂಧನ ನನಗೆ ಬೇಡ.''

''ನನಗೂ ಆ ಬಂಧನ ಬೇಕಿಲ್ಲ. ಈಗ ಸಧ್ಯಕ್ಕೆ ನನ್ನ ಆಲೋಚನೆಗಳೇ ಬೇರೆ. ಇದುವರೆಗೆ ನನಗೆ ಆಪ್ತರು ಯಾರೂ ಇರಲಿಲ್ಲ. ಇನ್ನು ಮುಂದೆ ನನಗೆ ಆ ಯೋಚನೆಯೂ ಇಲ್ಲ.''

* * * *

ರೂಪಿಣಿಯನ್ನು ಕಂಡು ನಳಿನಿಯ ಹುಬ್ಬುಗಳು ಒಂದಾದವು. ಅವಳು ಯಾವ ಅಳುಕೂ ಇಲ್ಲದೇ ''ಹೇಗಿದೀರಿ ಆಂಟಿ...?'' ಎಂದಳು. ಅಷ್ಟರಲ್ಲಿ ಮೇನಕಾ, ರೇವತಿಯರು ಬಂದು ರೂಪಿಣಿಯನ್ನು ತಬ್ಬಿಕೊಂಡರು.

''ಏನ್ರೇ ಹೇಗಿದೀರಿ ?'' ಎನ್ನುತ್ತಾ ಅವರ ಅರಳಿದ ಮುಖಗಳನ್ನೇ ನೋಡಿದಳು. ಅಸೂಯೆಯ ಆಳ ಮತ್ತೂ ಹೆಚ್ಚಿತು.

''ಪಾಸ್‌ಪೋರ್ಟ್, ವೀಸಾ ಎಲ್ಲಾ ರೆಡಿಯಾಗೋಕ್ಕೆ ಇನ್ನೂ ಎರಡು ಮೂರು ತಿಂಗಳಾಗುತ್ತಂತೆ... ಅಷ್ಟರೊಳಗೆ ನಮ್ಮ ಪರೀಕ್ಷೆಯನ್ನು ಮುಗಿಸಿಕೊಳ್ತೀವಿ.''

''ಕಾಲೇಜು... ಪರೀಕ್ಷೆ ಏನೂ ಬೇಡ ಆರಾಮವಾಗಿರಿ.''

''ತಪ್ಪೇನೇ ರೂಪಿಣಿ... ನಮಗೂ ಡಿಗ್ರಿ ಬೇಡವಾ ?''

''ಡಿಗ್ರಿ ಬೇಕಾಗಿದ್ದರೆ ಮದುವೆ ಯಾಕೆ ಆದ್ರೀ...?'' ರೂಪಿಣಿಯ ಮಾತುಗಳು ನಳಿನಿಗೆ ಅಸಹ್ಯವಾಗತೊಡಗಿತು.

''ಷಾಪಿಂಗ್ ಹೋಗಬೇಕು ಅಂತ ಅಜಯ ಹೇಳ್ತಿದ್ದ... ನೀವು ಇನ್ನು ರೆಡಿಯಾಗಲಿಲ್ಲವಲ್ಲ...''ಅವರಿಬ್ಬರೂ ಒಳಗೆ ಹೊರಟು ಹೋದರು. ರೂಪಿಣಿ ಪೆಚ್ಚಾದಳು.

''ಅಜಯ ವಿಜಯ ಯಾವಾಗ ಹೊರಡ್ತಿದಾರೆ ?''

''ಮುಂದಿನ ವಾರ...'' ನಳಿನಿ ಉತ್ತರಿಸಿದಳು. ರೂಪಿಣಿ ಅಲ್ಲಿ ಕುಳಿತಿದ್ದಂತೆಯೇ, ಮೇನಕಾ, ರೇವತಿಯರು ತಮ್ಮ ತಮ್ಮ ಪತಿಯರೊಂದಿಗೆ ಹೊರಗೆ ಹೊರಟರು.

''ಮಮ್ಮೀ... ನಾವು ಹೊರಗೇ ಎಲ್ಲಾದ್ರೂ ಊಟ ಮಾಡ್ತೀವಿ. ನಮಗಾಗಿ ಕಾಯಬೇಡಿ...'' ಅಜಯ ನುಡಿದ. ಯಾರೂ ರೂಪಿಣಿಯನ್ನು ಮಾತನಾಡಿಸಲಿಲ್ಲ. ಎಷ್ಟೇ ಕೊಬ್ಬು ಇವರುಗಳಿಗೆ ? ಎಂದು ತನ್ನಲ್ಲೇ ಉರಿದು ಹೋದಳು. ಅವಮಾನವಾದಂತಾಗಿತ್ತು. ಎದ್ದು ವಿಶ್ವನ ಮನೆಯ ದಾರಿಯನ್ನು ಹಿಡಿದಳು.

* * * *

ವಿಶ್ವ ಪಂಡಿತರಿತ್ತ ಸಲಹೆಯನ್ನು ಪೃಥ್ವಿಯೊಡನೆ ಹೇಳಿದ. ಪೃಥ್ವಿ ಸಂತೋಷದಿಂದ ಕಣ್ಣರಳಿಸಿದ. ''ಗುಡ್, ವೆರಿಗುಡ್. ನಮ್ಮ ತಾತನ ಹಣದ ಸದುಪಯೋಗವಾಗುತ್ತೆ ಅಂದರೆ ಎಷ್ಟು ಸಂತೋಷ ಆಗ್ತಿದೆ ಗೊತ್ತಾ ?'' ಎಂದು ವಿಶ್ವನ ಕೈಕುಲುಕಿದ.

''ಆಸ್ಪತ್ರೆಯ ಪ್ಲಾನ್, ಕಟ್ಟಡದ ನಿರ್ಮಾಣ, ಹಣಕಾಸಿನ ವೆಚ್ಚ, ಪ್ರತಿಯೊಂದು ಲೆಖ್ಖಾಚಾರವೂ ಇಂಜಿನಿಯರ್ ಆಗಿರುವ ನಿಮಗೆ ತಿಳಿದಿರುತ್ತೆ.

ಲಕ್ಷಾಂತರ ರೂಪಾಯಿಗಳ ವ್ಯವಹಾರ, ಎಲ್ಲಾ ಮೇಲ್ವಿಚಾರಣೆಯನ್ನು ನೀವೇ ವಹಿಸಿಕೊಳ್ಳಬೇಕು... ನನ್ನ ಕೈಲಿ ಆಗುಲ್ಲ ಅಂತ ಹೇಳಿ ತಪ್ಪಿಸಿಕೊಳ್ಳಬಾರದು.''

''ತಾತನ ಹಣ ಅನ್ನೋ ಅಧಿಕಾರದಿಂದ ನಾನು ಒಪ್ಪಿಕೊಳ್ಳುವುದಿಲ್ಲ. ನಿಮ್ಮ ಸ್ನೇಹಕ್ಕೆ ಬೆಲೆ ಕೊಟ್ಟು ಒಪ್ಪಿಕೊಳ್ತೀನಿ. ಎಲ್ಲಕ್ಕಿಂತ ಮುಖ್ಯವಾದದ್ದು, ನೀವೀಗ ಮಾಡಲು ಯೋಜಿಸಿರುವುದು ಒಂದು ಅತ್ಯುತ್ತಮ ಕೆಲಸ. ಇದರಿಂದ ಸಮಾಜಕ್ಕೆ, ಜನರಿಗೆ ಉಪಯೋಗುವಾಗುತ್ತದೆ. ಆದ್ದರಿಂದ, ನಿಮ್ಮ ಈ ಕೆಲಸಕ್ಕೆ ನನ್ನ ಪೂರ್ಣ ಸಹಕಾರವಿದೆ.''

''ನನ್ನ ತಮ್ಮಂದಿರು ಮುಂದಿನ ವಾರ ಅಮೆರಿಕಾಕ್ಕೆ ಹೊರಡುತ್ತಿದ್ದಾರೆ. ಅಲ್ಲಿಯವರೆಗೂ ನಾನು ಸ್ವಲ್ಪ ಬಿಸಿ. ಆಮೇಲೆ ಮತ್ತೆ ವಿವರವಾಗಿ ಮಾತನಾಡೋಣ''

''ಓ... ಖಂಡಿತಾ... ಮೇನಕಾ, ರೇವತಿಯರಿಗೆ ವೀಸಾ ಸಿಗಲು ಇನ್ನೂ ತಡವಾಗುತ್ತಾ ?''

''ಏನೋ ನಂಗೊತ್ತಿಲ್ಲ... ಅದನ್ನೆಲ್ಲ ಅವರುಗಳೇ ನೋಡ್ಕೋತಾರೆ... ಬನ್ನಿ ಮನೆಗೆ ಹೋಗೋಣ. ಊಟದ ಹೊತ್ತಾಯ್ತು.''

''ಪಂಡಿತರು ಒಬ್ಬರೇ ಆಗಿ ಬಿಟ್ಟಿದಾರೆ. ಅವರಿಗೆ ಬೇರೆ ಸಹಾಯಕರು ಯಾರೂ ಇಲ್ಲ. ಈ ಮೊದಲು ಹಗಲೂ ರಾತ್ರಿ ನಾನು ಅವರೆದುರಿಗೇ ಇರುತ್ತಿದ್ದೆ. ಈಗ ನನ್ನ ತಿರುಗಾಟ ಜಾಸ್ತಿಯಾಗಿಹೋಗಿದೆ. ನಾನು ಅಲ್ಲಿಗೇ ಹೋಗ್ತೀನಿ''

''ಸರಿ ನಿಮ್ಮಿಷ್ಟ. ನಿಮ್ಮ ಕರ್ತವ್ಯಕ್ಕೆ ಅಡ್ಡಿ ಬರಲ್ಲ'' ಎಂದ. ವಿಶ್ವ ತನ್ನ ಮನೆಯ ದಾರಿ ಹಿಡಿದ.

ತನಗಿಂತ ಮುಂಚೆಯೇ ತನ್ನ ಮನೆಯಲ್ಲಿದ್ದ ರೂಪಿಣಿಯನ್ನು ಕಂಡು ಕಣ್ಣರಳಿಸಿದ.

''ರೂಪಿಣಿ... ಅದೇನು ? ನೀನು ನಿಮ್ಮೂರಿಗೆ ಹೋಗಲಿಲ್ವಾ ?''

''ಇಲ್ಲಾ, ಇವತ್ತು ಏನಾಯ್ತು ಗೊತ್ತಾ ?'' ಎನ್ನುತ್ತಾ ತನಗಾದ ಅವಮಾನದ ವಿಷಯ ತಿಳಿಸಿ ಅತ್ತಳು. ''ಅವರಿಗೆಲ್ಲ ಎಷ್ಟು ಕೊಬ್ಬು ಗೊತ್ತಾ ? ನಳಿನಿಯೇನೂ ನನ್ನ ಸಂಬಂಧಿ ಅಲ್ಲ. ಆದರೆ ಅವರಿಬ್ಬರು ! ನನ್ನ ತಂಗಿಯರು. ಮದುವೆಯಾಗಿ ವಾರ ಸಹ ಆಗಿಲ್ಲ. ಆಗಲೇ ಸೊಕ್ಕಿನಿಂದ

ಮೆರೆಯುತ್ತಿದ್ದಾರೆ. ಅವರಿಗೆ ಈ ದೊಡ್ಡಸ್ತಿಕೆ ತಂದುಕೊಟ್ಟವಳು ನಾನಲ್ವಾ ? ಆ ಕೃತಜ್ಞತೆಯಾದರೂ ಬೇಡ್ವಾ ?''

''ನಿನ್ನ ತಂಗೀರನ್ನೇ ನೀನು ದೂಷಿಸಿದರೆ ನಾನು ಏನು ಹೇಳಲಿ ? ಹೊಸದಾಗಿ ಮದುವೆಯಾದವರು... ಅವರಿಗೆ ಈ ಕಡೆ ಧ್ಯಾನ ಎಲ್ಲಿರುತ್ತೆ ?''

''ಹಾಗಂತ ನನ್ನನ್ನೇ ಮರೆಯೋದಾ ! ನಳಿನಿ, ಪೃಥ್ವಿ, ಮೇನಕಾ, ರೇವತಿ... ಹೀಗೇ ಆಡ್ತಾ ಇದ್ರೆ. ಪಟ್ಟ ಬೆಳೆಯುತ್ತೆ ಅಷ್ಟೇ...''

''ಹಾಗಾದ್ರೆ ನಾನೇನು ಮಾಡಲಿ ಹೇಳು....''

''ನಾವು ಹೊಸ ಆಸ್ಪತ್ರೆಯನ್ನು ಕಟ್ಟಿಸ್ತಾ ಇದೀವಿ... ಅಲ್ಲಿ ನಿನಗೆ ರಿಸೆಪ್ಶನಿಸ್ಟ್ ಕೆಲಸ ಕೊಡಿಸ್ತೀನಿ... ನೀನು ಬೇಕಾದರೆ ಈಗಲಿಂದಲೇ ಆ ಕೆಲಸವನ್ನು ಮಾಡಬಹುದು.''

''ಬೇಡ... ವಿಶ್ವ... ನನಗೆ ಈ ಕೊಂಪೆ ಇಷ್ಟವಿಲ್ಲ''

''ವಿಶ್ವ... ಈ ಕೊಂಪೇಲೇ ಇದಾನಲ್ಲ.''

''ನಿಮ್ಮನ್ನ ಇಲ್ಲಿಂದ ಹೊರಕ್ಕೆ ಕರೆದುಕೊಂಡು ಹೋಗ್ತೀನಿ. ಪೃಥ್ವಿಯಂತೆ ಉಡುಗೆ-ತೊಡುಗೆ ತೊಟ್ಟು ಭಾರೀ ಕಾರಿನಲ್ಲಿ ಓಡಾಡುವಂತೆ ಮಾಡ್ತೀನಿ.''

ವಿಶ್ವ ಸುಮ್ಮನೆ ನಕ್ಕ. 'ಕೆಂಬೂತ ನವಿಲಿನಂತಾಗಲು ಸಾಧ್ಯವೇ' ಎಂದುಕೊಂಡ.

''ಇಲ್ಲಿ ದೊಡ್ಡ ಆಸ್ಪತ್ರೆಯನ್ನು ಕಟ್ಟಿಸಿ, ನಾನೇ ಇಲ್ಲಿ ಇಲ್ಲದಿದ್ದರೆ ಏನು ಚೆನ್ನ ?''

''ಇದಾರಲ್ಲ ನಿಮ್ಮ ಪಂಡಿತರು. ಅವರು ನೋಡಿಕೊಳ್ತಾರೆ ಬಿಡಿ... ಅಲ್ಲದೇ, ಇಲ್ಲಿಯ ಆಸ್ಪತ್ರೆಗೆ ಯಾರು ಬರ್ತಾರೆ ? ಸಿಟಿಯಲ್ಲಿ ಭಾರಿ ಭಾರಿ ನರ್ಸಿಂಗ್ ಹೋಂಗಳಿವೆ... ಇದೇ ಹಣಾನ ನೀವು ಹಾಗೇ ಬ್ಯಾಂಕಿನಲ್ಲಿಟ್ಟರೆ ಬಡ್ಡಿ ಬರುತ್ತೆ. ಅದರಲ್ಲೇ ಹಾಯಾಗಿ ಜೀವನ ನಡೆಸಬಹುದು. ನಿಮ್ಮ ಪಂಡಿತರಿಗೆ ನಿಮ್ಮ ಹಣವನ್ನು ಖರ್ಚುಮಾಡಿಸುವ ಆಸೆ....''

''ರೂಪಿಣೀ...'' ಗದರಿದ. ''ನಮ್ಮ ಪಂಡಿತರನ್ನು ಟೀಕಿಸುವ ಹಕ್ಕು ನಿನಗಿಲ್ಲ. ಅನಾಥನಂತೆ ಅಲ್ಲಿ ಇಲ್ಲಿ ತಿರುಗಾಡಿಕೊಂಡಿದ್ದವನನ್ನು ಇಷ್ಟರ ಮಟ್ಟಿಗೆ ತಂದವರು ಅವರೇ. ಅವರಿಗಾಗಿ ನಾನು ಏನು ಬೇಕಾದರೂ ಮಾಡಬಲ್ಲೆ.''

''ಸರಿ, ನೀವುಂಟು, ನಿಮ್ಮ ಪಂಡಿತರುಂಟು. ನನಗೇನಾಗಬೇಕಾಗಿದೆ... ನನಗೆ ಕೊಡ್ತೀನಿ ಅಂತ ಹೇಳಿದ ಹಣಕ್ಕೆ ಖೋತಾ ಹಾಕಬೇಡಿ''

''ನಾನು ಕೊಟ್ಟ ಮಾತಿಗೆ ತಪ್ಪುವವನಲ್ಲ'' ಎನ್ನುತ್ತಾ ಒಳಮನೆಗೆ ಬಂದ. ರೂಪಿಣಿ ಅವನ ಹಿಂದೆಯೇ ಬಂದಳು.

* * * *

ಅಜಯ ವಿಜಯರು ಮತ್ತೆ ಅಮೆರಿಕಾಕ್ಕೆ ವಾಪಸ್ಸು ಹಿಂತಿರುಗಿದ್ದರು. ಮೇನಕಾ, ರೇವತಿಯರು ಕೆಲವು ದಿನಗಳ ಮಟ್ಟಿಗೆ ತಮ್ಮ ತಾಯಿಯ ಮನೆಗೆ ಹೋಗಿ ಬರುತ್ತೇವೆಂದು ಹೊರಟುಹೋಗಿದ್ದರು.

ಈಗಿನ ''ವೈದ್ಯಾಲಯ''ದ ಪಕ್ಕದಲ್ಲಿದ್ದ ಖಾಲಿ ಜಾಗದಲ್ಲಿ ಆಸ್ಪತ್ರೆಯ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿಸಬೇಕೆಂದುಕೊಂಡು ನಳಿನಿಯನ್ನು ಕೇಳಿಕೊಂಡ ವಿಶ್ವ. ನಳಿನಿ ಒಪ್ಪಲಿಲ್ಲ. ನನಗಿಂತ ಹಿರಿಯರು ಅನೇಕರಿದ್ದಾರೆ, ಗಣ್ಯರು ಬೇಕಾದಷ್ಟು ಮಂದಿ ಇದ್ದಾರೆ, ನನ್ನಿಂದಾಗುವುದಿಲ್ಲ ಎಂದಿದ್ದಳು. ವಿಶ್ವನಿಗೆ ಅವಮಾನವಾದಂತಾಗಿತ್ತು. ತಾಯಿ ಅಂತ ಎಲ್ಲವನ್ನೂ ಮರೆತು, ಹಿರಿಯ ಸ್ಥಾನವನ್ನು ಕೊಟ್ಟರೆ, ದುರಹಂಕಾರ ಇವಳಿಗೆ ಎಂದೇ ಭಾವಿಸಿದ. ಪಂಡಿತರು ತನಗೆ ಎಲ್ಲರಿಗಿಂತ ಹೆಚ್ಚು. ಅವರ ಅಭಯ ಹಸ್ತದಿಂದಲೇ ಶಂಕು ಸ್ಥಾಪನೆ ಮಾಡಿಸ್ತೀನಿ ಎಂದ. ಪೃಥ್ವಿ ಸಹ ಅದೇ ಸರಿ ಎಂದು ಒಪ್ಪಿಕೊಂಡ. ಅಂತೆಯೇ ಒಂದು ಶುಭ ಮುಹೂರ್ತದಲ್ಲಿ ಆಸುಪಾಸಿನ ವಾಸಿಗಳ ಸಮ್ಮುಖದಲ್ಲಿ ಸಂಜೀವನಿ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನೆಯನ್ನು ಪಂಡಿತರು ನೆರವೇರಿಸಿದರು.

ಮೇನಕಾ, ರೇವತಿಯರ ವೀಸಾಗಳು ಸಿದ್ಧವಾದವು. ಅವರಿಬ್ಬರೂ ಅಮೆರಿಕಾಕ್ಕೆ ಹೊರಡಲು ತುದಿಗಾಲಿನಲ್ಲಿ ನಿಂತಿದ್ದರು. ಕಡೆಯ ವರ್ಷದ ಪರೀಕ್ಷೆಗೆ ಬರೆದಿದ್ದರು. ಆದರೆ ಪಾಸಾಗಬಹುದೆಂಬ ನಂಬಿಕೆ ಇರಲಿಲ್ಲ.

ಎರಡು ಮೂರು ತಿಂಗಳುಗಳಿಂದ ಮನೆಯಲ್ಲಿ ಸಂಭ್ರಮದ ವಾತಾವರಣದ ಉಲ್ಲಾಸವಿತ್ತು. ಇವರೂ ಹೊರಟುಹೋದರೆ ನಾನು ಏಕಾಂಗಿಯಾಗಿ ಬಿಡ್ತೀನಿ ಎನ್ನುವ ವ್ಯಥೆ ನಳಿನಿಯನ್ನು ತುಂಬಿಕೊಂಡಿತು. ಈ ಪೃಥ್ವಿ ನನ್ನ ಮಾತಿಗೆ ಒಪ್ಪಿ ಮದುವೆಯಾಗಿದ್ದರೆ, ಇಷ್ಟು ಹೊತ್ತಿಗೆ ಮನೆಯಲ್ಲಿ ಗಲಗಲಿ ಎಂದು ಓಡಾಡುವ ಎರಡು ಮಕ್ಕಳು ಇರುತ್ತಿದ್ದವು... ನನ್ನ ಆಸೆಗಳಿಗೆ

ಮಿತಿಯೇ ಇಲ್ಲ. ಎಲ್ಲರಿಗೂ ಅವರವರ ಹಠವನ್ನೇ ಸಾಧಿಸುವ ಇಚ್ಛೆ... ನನ್ನನ್ನು ದೂಷಣೆಗೆ ಗುರಿ ಮಾಡುವ ಆಸೆ !

ಈ ವಿಶ್ವ ! ನನ್ನೆದುರಿಗೆ ಓಡಾಡಿ ನನ್ನ ತಾಯ್ತನವನ್ನು ಎಚ್ಚರಿಸುತ್ತಾನೆ. ಆದರೆ ನನ್ನ ಮಗನಂತೆ ಇರಲು ಬಯಸುವುದಿಲ್ಲ. ರೂಪಿಣಿ ಹೇಳುವಂತೆ ವಿಶ್ವ ಏನೇನು ಕುತಂತ್ರ ನಡೆಸಿದ್ದಾನೋ, ಇನ್ನು ನನ್ನನ್ನೂ ದ್ವೇಷಿಸುತ್ತಿದ್ದಾನೆ. ಇವನೇ ಹೀಗಾದ ಮೇಲೆ ಇನ್ನು ಪೃಥ್ವಿಗೆ ನನ್ನ ಮೇಲೆ ಪ್ರೀತಿ ಬರುವುದಾದರೂ ಹೇಗೆ ? ನನ್ನ ಅಜಯ ವಿಜಯರನ್ನು ಅಮೆರಿಕಾಕ್ಕೆ ಕಳಿಸಿ, ನನ್ನಿಂದ ದೂರ ಮಾಡಿ ಎಲ್ಲಾ ಸ್ವತ್ತನ್ನೂ ತಾನೇ ಅನುಭವಿಸುವ ಆಸೆಯೋ ಏನೋ...? ಈಗ ಇವರೂ ಇಬ್ಬರೂ ಪ್ರಬಲ ಸ್ನೇಹಿತರಾಗಿ ನನ್ನ ಮೇಲೆ ಹಗೆ ತೀರಿಸಿಕೊಂಡರೆ.... ಯಾಕೋ ಏನೋ ಈಗ ಅವಳಿಗೆ ಈ ಆಲೋಚನೆ ತಲ್ಲಣವನ್ನುಂಟು ಮಾಡಿತು.

ಆದಷ್ಟು ಬೇಗ ತನಗೆ ಮೊಮ್ಮಕ್ಕಳು ಹುಟ್ಟಿದರೆ ಆಗ ನನ್ನ ಕರ್ತವ್ಯವನ್ನು ಪೂರೈಸಿದಂತಾಗುತ್ತದೆ. ವಾರಸುದಾರರು ಹುಟ್ಟುತ್ತಾರೆ, ಅವುಗಳನ್ನು ಕಂಡು ಪೃಥ್ವಿಯ ಮನ ಬದಲಾಯಿಸಿದರೂ ಬದಲಾಯಿಸಬಹುದು... ವಿಶ್ವ ಏನಾದರೂ ಮಾಡಿಕೊಳ್ಳಲಿ, ಮೊದಲಿನಿಂದಲೂ ಅವನು ನನ್ನ ಮಾತನ್ನು ಕೇಳಿದ್ದು ಅಷ್ಟರಲ್ಲೇ ಇದೆ. ತಲೆಹರಟೆ ! ಎಂದು ಬೈಯುತ್ತಿದ್ದಳು.

ವಿಶ್ವ ಈಗ ಆಸ್ಪತ್ರೆಯ ಕಟ್ಟಡ ಕೆಲಸಗಳ ನಡುವೆ ಹೆಚ್ಚಿಗೆ ಬರುತ್ತಲೇ ಇರಲಿಲ್ಲ. ಬಂದರೂ, ಪೃಥ್ವಿಯೊಡನೆ ಅದೇ ವಿಷಯಕ್ಕೆ ಸಂಬಂಧಿಸಿದ ಮಾತುಗಳನ್ನಾಡಿ ಹೋಗುತ್ತಿದ್ದ. ಆ ಪೆಟ್ಟಿಗೆ, ಒಡವೆ, ಹಣ ಈಗಲೂ ಇಲ್ಲೇ ಬಿದ್ದಿತ್ತು. ಯಾರಿಗೂ ಅದರ ಅಗತ್ಯವಿರಲಿಲ್ಲ. ಒಮ್ಮೊಮ್ಮೆ ಪೃಥ್ವಿಗೆ ಹೇಳುತ್ತಿದ್ದಳು.

''ನಿನ್ನ ತಮ್ಮಂದಿರನ್ನು ಕರೆಸು... ಅವರು ಇಲ್ಲಿ ನನ್ನ ಬಳಿಯೇ ಇರಲಿ''

''ಹೂಂ, ನಾನು ಹೇಳ್ತೀನಿ... ಆದರೆ ಬಲವಂತ ಮಾಡುವುದಿಲ್ಲ'' ಎನ್ನುತ್ತಿದ್ದ. ಇದೇ ವಿಷಯವನ್ನು ವಿಶ್ವನೊಡನೆ ಒಮ್ಮೆ ಆಡಿದ.

''ಹಿರಿಮಗನ ಜವಾಬ್ದಾರಿ ಬಹಳ ಕಷ್ಟ... ಹಾಯಾಗಿರುವಂತೆಯೇ ಇಲ್ಲ. ಮನೆಯಲ್ಲಿ ಅಡಿಗೆಯವರು, ಆಳುಕಾಳು ಎಲ್ಲಾ ಇದಾರೆ. ಆದರೂ ಚಿಕ್ಕಮ್ಮ ಒಂಟಿ. ಅವರ ಒಂಟಿತನ ಕಳೆಯುವ ಬಗೆ ನನಗೆ ತಿಳಿಯದು. ನೀವಾದರೂ ಆಗ ಈಗ ಬಂದು ವಿಚಾರಿಸಿದರೆ ಅವರ ಬೇಸರ ನೀಗುತ್ತೆ.''

ವಿಶ್ವ ನಕ್ಕ. ''ಹೌದು, ವಯಸ್ಸಾಗುತ್ತಾ ಬಂದಂತೆ ಒಂಟಿಯಾಗಿ ಬದುಕುವುದು ದುಸ್ತರವೆನಿಸುತ್ತೆ. ಕೆಟ್ಟ ಆಲೋಚನೆಗಳೇ ಮುತ್ತಿಕೊಂಡು ಮನಸ್ಸನ್ನು ಕೊರೆಯುತ್ತವೆ. ಇಂಥ ವಯಸ್ಸಿನಲ್ಲಿ ಅವರಿಗೆ ಮುದ ನೀಡುವುದು ಮೊಮ್ಮಕ್ಕಳ ಆಟ, ಪಾಠ, ಚೇಷ್ಟೆಗಳು. ಬೇಗ ಮೊಮ್ಮಕ್ಕಳು ಹುಟ್ಟಿದರೆ ಬೇಗ ಅವರ ಬೇಸರ ನೀಗುತ್ತದೆ.''

ಈ ಮಾತಿಗೆ ಪೃಥ್ವಿ ಏನು ಹೇಳಬಲ್ಲ! ತಾಯಿಯ ಬೇಸರ ನೀಗಲು ಈಗ ಮೊಮ್ಮಕ್ಕಳನ್ನು ಎಲ್ಲಿಂದ ತರುವುದು ? ''ತಾಯಿಯನ್ನೇ ನಾಲ್ಕಾರು ತಿಂಗಳು ವಿದೇಶಕ್ಕೆ ಕಳಿಸಿಕೊಡಿ. ಅವರಿಗೂ ಒಂದು ಬದಲಾವಣೆ ಸಿಗುತ್ತದೆ'' ಎಂದು ವಿಶ್ವನೇ ಮತ್ತೆ ಸಲಹೆ ನೀಡಿದ.

ಆದರೆ ನಳಿನಿ ಒಪ್ಪಲಿಲ್ಲ.... ಇದೇ ಸಮಯವೆಂದುಕೊಂಡು ಮತ್ತೆ ನುಡಿದಳು ''ನೀನು ಮದುವೆಯಾಗು ನಿನ್ನ ಹೆಂಡತಿಯ ವಶಕ್ಕೆ ನಿನ್ನನ್ನು ಒಪ್ಪಿಸಿದ ನಂತರ ಅಮೆರಿಕಾಕ್ಕೆ ಹೋಗಿ ಬರ್ತೀನಿ'' ಪೃಥ್ವಿ ಸುಮ್ಮನೇ ಇದ್ದು ಬಿಟ್ಟ. ನೀನ್ಯಾಕೆ ಮದುವೆಯಾಗುಲ್ಲ? ನಿನ್ನ ಮನಸ್ನಲ್ಲಿ ಏನಿದೆ ಎಂದು ಪುಟಿಸಿ ಕೇಳುವ ಸಲುಗೆ ತನಗಿಲ್ಲ ಎಂದುಕೊಂಡು ಅವಳೂ ಸುಮ್ಮನಾದಳು.

ದಿನಗಳು ಜಾರಿದವು. ಆಸ್ಪತ್ರೆಯ ಕಟ್ಟಡದ ನಿರ್ಮಾಣದ ಕೆಲಸ ಕಾರ್ಯಗಳು ತ್ವರಿತಗತಿಯಿಂದ ಸಾಗುತ್ತಿದ್ದವು. ಆಸ್ಪತ್ರೆಯಲ್ಲಿ, ಬರುವ ರೋಗಿಗಳಿಗೆ, ಅವರೊಂದಿಗೆ ಉಳಿಯುವವರಿಗೆ, ಆದಷ್ಟೂ ಎಲ್ಲಾ ಸೌಲಭ್ಯಗಳೂ ದೊರೆಯುವಂತಿರಬೇಕು ಎಂಬ ಆಸೆ ವಿಶ್ವನಿಗೆ. ಆದರೆ ಬ್ಯಾಂಕಿನಲ್ಲಿರುವ ಹತ್ತು ಲಕ್ಷ ರೂಪಾಯಿಗಳು ಸಾಕಾಗುತ್ತದೋ ಇಲ್ಲವೋ ಎಂಬ ಆತಂಕ. ಚಿನ್ನಪ್ಪ ಹಳ್ಳಿಯ ಆ ಮನೆಗೆ ಕೇವಲ ಒಂದೂಕಾಲು ಲಕ್ಷ ರೂಪಾಯಿಗಳನ್ನು ಕೊಡುತ್ತೀನಿ ಅಂದಿದ್ದ. ರಿಜಿಸ್ಟ್ರೇಷನ್ ಖರ್ಚೆಲ್ಲಾ ಅವನದೇ. ತಾಯಿಯ ಒಡವೆಗಳನ್ನು ನಳಿನಿ ಬೇಡವೆಂದಿದ್ದಳು. ಅದನ್ನೂ, ಅದರೊಂದಿಗೆ ಇದ್ದ ಸುಮಾರು ಐದು ಸಾವಿರ ನಗದನ್ನು ರೂಪಿಣಿಗೆ ಕೊಟ್ಟುಬಿಡಬೇಕೆಂದುಕೊಂಡ. ರೂಪಿಣಿಯ ನೆನಪಾದೊಡನೆ ಅವಳೊಡನೆ ಕಳೆದ ಮಧುರಕ್ಷಣಗಳು ಮರುಕಳಿಸಿದವು.... ಮನಸ್ಸು ಮುದಗೊಂಡಿತು. ಅವಳು ಈಚೆಗೆ ಬಂದಿರಲಿಲ್ಲ. ಪಂಡಿತರು ಅವಳು ಹೋದ ನಂತರ ಪ್ರಶ್ನಿಸಿದ್ದರು !

''ಅವಳಿಗೂ ನಿನಗೂ ಏನು ಸಂಬಂಧ ? ಅವಳೇಕೆ ಇಲ್ಲಿಗೆ ಆಗಾಗ್ಗೆ ಬರುತ್ತಿರುತ್ತಾಳೆ'' ಅಂತ.

''ಅವಳು ನನ್ನ ತಂದೆಯ ಸಾಕುಮಗಳು. ಏನೋ ಕೆಲಸದ ಮೇಲೆ ಬಂದಿದ್ದಳು. ಅವಳಿಗೆ ನನ್ನ ಹೊರತು ಬೇರೆ ಯಾರೂ ಇಲ್ಲ'' ಎಂದಿದ್ದ. ಈಗ ಈ ಕೆಲಸ ಕಾರ್ಯಗಳ ನಡುವೆಯೂ ಅವಳು ಮತ್ತೊಮ್ಮೆ ಬರಲಿ ಎಂದು ಮನಸನಸು ಬಯಸಿತ್ತು. ಆದರೆ ಅವಳನ್ನು ತಾನಾಗಿಯೇ ಹುಡುಕಿಕೊಂಡು ಹೋಗಲಾರ.

* * * *

ದಿಢೀರನೇ ಯಾವ ಮುನ್ಸೂಚನೆಯೂ ಇಲ್ಲದೆ ಅಜಯ ವಿಜಯರು ತಮ್ಮ ತಮ್ಮ ಪತ್ನಿಯರೊಂದಿಗೆ ಬಂದು ಇಳಿದಾಗ ನಳಿನಿಗೆ ಸಂತಸ, ಆಶ್ಚರ್ಯದೊಂದಿಗೆ ಆಘಾತವೂ ಉಂಟಾಗಿತ್ತು.

''ಅದೇನು ಹೀಗೆ ಇದ್ದಕ್ಕಿದ್ದ ಹಾಗೆ ಬಂದು ಬಿಟ್ಟಿದೀರಲ್ಲ... ಬನ್ನಿ ಅಂತ ಪೃಥ್ವಿ ಕೇಬಲ್ ಕಳಿಸಿದ್ನಾ?'' ನಳಿನಿಯ ಪ್ರಶ್ನೆಗೆ ಉತ್ತರಿಸದೇ ಅಣ್ಣತಮ್ಮಂದಿರು ಮುಖ ಮುಖ ನೋಡಿಕೊಂಡರು. ಕಳಾಹೀನವಾಗಿದ್ದ ಅವರ ಮುಖಗಳನ್ನು ಕಂಡು ಸೊಸೆಯರ ಕಡೆ ನೋಡಿದಳು. ಅವರಿಬ್ಬರ ಮುಖ ಅಸಮಾಧಾನ ದಿಂದ ಧುಮುಗುಟ್ಟುತ್ತಿತ್ತು. ಏನೋ ನಡೆದಿದೆ ಎಂದು ಊಹಿಸಿ ನಿಧಾನವಾಗಿ ಮಾತನಾಡಿ ಕರಾಣವೇನೊಂತ ತಿಳಿದುಕೊಳ್ಳಬೇಕೆಂದುಕೊಂಡಳು.

ಮದುವೆಯಾಗಿ ಒಂದು ವರ್ಷ ಸಹ ಕಳೆದಿಲ್ಲ... ಏನಾಗಿರಬಹುದು ? ಕಂಪೆನಿಯ ಕೆಲಸದಿಂದ ಇಬ್ಬರನ್ನೂ ತೆಗೆದುಹಾಕಿರಬಹುದೇ ...? ಅಥವಾ ಮೇನಕಾ ರೇವತಿಯರಿಗೆ ಈ ಹೊಸದೇಶ ಹೊಂದದೇ, ಬೇರವನ್ನುಂಟು ಮಾಡಿರಬಹುದೇ ?

ಮನೆಗೆ ಬಂದ ಪೃಥ್ವಿಯನ್ನು ಕಂಡೊಡನೆ ತಮ್ಮಂದಿರು ಓಡಿ ಬಂದು ತಬ್ಬಿಕೊಳ್ಳಲಿಲ್ಲ. ಇಬ್ಬರೂ ಮೊದಲಿನಂತಿಲ್ಲ, ಬದಲಾಗಿದ್ದಾರೆ ಎಂದು ಭಾವಿಸಿದ. ''ಓಹೋ... ಇದೇನು ಇದ್ದಕ್ಕಿದ್ದಂತೆ... ಅಮ್ಮನ್ನ ನೋಡಬೇಕೊಂತ ಅನ್ನಿಸ್ತಾ ?'' ಆತನ ಪ್ರಶ್ನೆಗೆ ಉತ್ತರಿಸಲಿಲ್ಲ. ಏನೋ ಗಂಭೀರವಾದ ಸಮಸ್ಯೆಯಲ್ಲಿ ಮುಳುಗಿದ್ದಾರೆ ಎಂದರಿತ. ಸಮಾಧಾನ ಮಾಡುವವನಂತೆ,

''ಅಲ್ಲಿಯಜೀವನ ಸಾಕೆನ್ನಿಸಿದ್ದರೆ, ಸಾಕು. ಇನ್ನು ಬೇಡ ಇಲ್ಲೇ ಬೇಕಾದಷ್ಟು ಕಾರುಬಾರುಗಳಿವೆ'' ಎಂದ. ಅದಕ್ಕೂ ಅವರು ಉತ್ತರಿಸಲಿಲ್ಲ.

''ಏನು ಪ್ರಾಬ್ಲಂ ಅಂತ ನೀವೇ ಹೇಳದಿದ್ದರೆ ನನಗೆ ಹೇಗೆ ತಿಳಿಯುತ್ತೆ?...

ಏನೇ ಸಮಸ್ಯೆ ಇದ್ದರೂ ಅದಕ್ಕೆ ಒಂದು ಪರಿಹಾರವಿದ್ದೇ ಇರುತ್ತೆ. ಬನ್ನಿ, ಈಗ ಮೊದಲು ಎಲ್ಲರೂ ಊಟ ಮಾಡೋಣ...'' ತಾನೇ ತಮ್ಮಂದಿರ ಕೈ ಹಿಡಿದು ಅವರನ್ನು ಊಟದ ಮನೆಗೆ ಕರೆತಂದ.

ಹೆಚ್ಚಿಗೆ ಮಾತುಕತೆ, ಹರಟೆ, ನಗು, ತಮಾಷೆ ಏನೂ ಇಲ್ಲದೇ ಯಾಂತ್ರಿಕವಾಗಿ ಊಟದ ಕೆಲಸ ಮುಗಿಯಿತು. ಕೇಳಿದ್ದಷ್ಟಕ್ಕೆ ಮಾತ್ರ ಉತ್ತರಿಸುತ್ತಿದ್ದ ತಮ್ಮಂದಿರು, ಕತ್ತು ಬಗ್ಗಿಸಿ ಮುಖ ಊದಿಸಿಕೊಂಡು ತುತ್ತು ತಿನ್ನುತ್ತಿದ್ದ ನಾದಿನಿಯರು, ಏನೋ ಇವರಿವರಲ್ಲೇ ಮನಸ್ತಾಪ ಉಂಟಾಗಿದೆ. ತಾನು ಹೇಗೆ ಕೇಳುವುದು ? ಅಜಯ ವಿಜಯರ ಮಾತುಕತೆ ಸ್ವಭಾವಗಳಲ್ಲೇ ಸಾಕಷ್ಟು ವ್ಯತ್ಯಾಸವಿದೆ. ಮೇನಕಾ ರೇವತಿಯರು ಅವಳಿಗಳಲ್ಲ. ಅಂದ ಮೇಲೆ ಅವರ ಸ್ವಭಾವದಲ್ಲಿ ಸಾಕಷ್ಟು ವ್ಯತ್ಯಾಸಗಳಿರುತ್ತವೆ. ಹಾಗಿದ್ದ ಪಕ್ಷದಲ್ಲಿ ಒಂದು ಜೋಡಿಯಲ್ಲಿ ಅನ್ಯೋನ್ಯತೆ ಇಲ್ಲದಿರಬಹುದು. ಎರಡೂ ಜೋಡಿಗಳೂ ಒಂದೇ ತರಹ ಇರಲು ಸಾಧ್ಯವೇ...? ಅಥವಾ ಅಮೆರಿಕಾದವರೊಡನೆ ಏನಾದರೂ ಜಗಳವಾಗಿ, ವೀಸಾ, ಪಾಸ್‌ಪೋರ್ಟ್‌ನ್ನು ಕಿತ್ತುಕೊಂಡು ಇಂಡಿಯಾಕ್ಕೆ ಅಟ್ಟಿರಬಹುದೇ ? ಯಾಕೋ ಈ ಆಲೋಚನೆ ಸರಿ ಅನ್ನಿಸಲಿಲ್ಲ. ನನ್ನ ತಮ್ಮಂದಿರು ಅಷ್ಟು ಕೆಟ್ಟವರಲ್ಲ. ಅಲ್ಲಿಯ ಜನಜೀವನಕ್ಕೆ ಹೊಂದಿಕೊಂಡಿದ್ದರು, ಇಷ್ಟಪಟ್ಟಿದ್ದರು. ಬಹುಶಃ ಇವರಿಬ್ಬರೇ ಏನೋ ಕಿತಾಪತಿ ಮಾಡಿರಬೇಕು. ಈಗಲೇ ಏನನ್ನು ಕೇಳುವುದೂ ಬೇಡ. ನಿಧಾನವಾಗಿ ಅವರೇ ಹೇಳುವುದಾದರೆ ಒಳ್ಳೆಯದೇ ಎಂದುಕೊಂಡ.

ಆದರೆ ಒಂದು ವಾರ ಕಳೆದರೂ ಅವರಾಗಿಯೇ ಏನನ್ನೂ ಹೇಳಲಿಲ್ಲ. ಅವರ ಇರುವಿಕೆಯಲ್ಲಿ ಏನೂ ಬದಲಾವಣೆಯೂ ಕಾಣಲಿಲ್ಲ. ಸದಾ ರೂಮಿನಲ್ಲೇ ಮಲಗಿರುವುದು, ಅಥವಾ ತಮ್ಮ ತಮ್ಮ ಪತ್ನಿಯರೊಡನೆ ಏನೋ ವಾದ ವಿವಾದ. ಇಷ್ಟು ಬಿಟ್ಟರೆ ಬೇರೆ ಚಟುವಟಿಕೆಯೇ ಇಲ್ಲ. ಹೊರಗೆ ತಿರುಗಾಡಿಕೊಂಡು ಬರವುದಾಗಲೀ, ನಗುನಗುತ್ತಾ ಮಾತನಾಡುವುದಾಗಲೀ ಏನೂ ಇಲ್ಲ. ಇದನ್ನು ನಳಿನಿ ಹಾಗೂ ಪೃಥ್ವಿ ಇಬ್ಬರೂ ಗಮನಿಸಿದರು.

''ಪೃಥ್ವಿ ನನಗೆ ಯಾಕೋ ಭಯವಾಗ್ತಿದೆ... ಏನಾಗಿದೆ ಇವರುಗಳಿಗೆ ? ನೀನಾದರೂ ಕೇಳಬಾರದಾ ?''

''ಮೊದಲೇ ಬೇಸರಗೊಂಡಿರುವಂತಿದೆ. ನಾನು ಹೇಗೆ ಕೇಳಲಿ ? ನೀವು ಆ ಹುಡುಗಿಯರ ಹತ್ತಿರ ಮಾತನ್ನಾಡಿದ್ರಾ ?''

"''ಅವರುಗಳು ಮಾತನಾಡುವುದಕ್ಕೆ ಮುಂಚೆ ಅಳುತ್ತಾರೆ.'' ಅಳುವಂಥಾದ್ದು ಏನಾಯ್ತು ಎಂದು ಇವನಿಗೆ ಅರ್ಥವಾಗಲಿಲ್ಲ. ಆ ಹುಡುಗಿಯರ ಹತ್ತಿರ ಸಲುಗೆ ಇಲ್ಲ. ತಾನು ಹೇಗೆ ಕೇಳುವುದು ? ವಿಶ್ವ ಗೊತ್ತು ಮಾಡಿಕೊಟ್ಟ ಹುಡುಗಿಯರು, ಏನಾದರೂ ಸಮಸ್ಯೆ ಇದ್ದರೆ, ವಿಶ್ವನಿಗೆ ತಿಳಿಯುವುದು ಉತ್ತಮ. ಅವನಿಗೆ ಈ ವಿಷಯ ತಿಳಿಸಬೇಕೆಂದು ಬಿಡುವು ಮಾಡಿಕೊಂಡು ವಿಶ್ವನನ್ನು ಕಾಣಲು ಹೊರಟ. ಮೊದಲು ಆಸ್ಪತ್ರೆಯ ಕಟ್ಟಡಕ್ಕೆ ಸಂಬಂಧಿಸಿದ ಮಾತುಗಳನ್ನಾಡಿ ಮುಗಿಸಿದ ನಂತರ ಈ ವಿಷಯಕ್ಕೆಬಂದ.

''ಯಾವ ಮುನ್ಸೂಚನೆಯೂ ಇಲ್ಲದೇ ನನ್ನ ತಮ್ಮಂದಿರು ಅಮೆರಿಕಾ ದಿಂದ ವಾಪಸ್ಸು ಬಂದು ಬಿಟ್ಟಿದಾರೆ. ಯಾಕೋ ಏನನ್ನೂ ಹೇಳುವುದಿಲ್ಲ. ಅಲ್ಲದೇ ಮುಖದ ಕಳೆಯೇ ಬದಲಾಯಿಸಿ ಹೋಗಿದೆ. ಅವರ ಪತ್ನಿಯರೋ ಏನಾದರೂ ಕೇಳಿದರೆ ಅಳುತ್ತಾರಂತೆ. ಚಿಕ್ಕಮ್ಮನಿಗೆ ತುಂಬಾ ಚಿಂತೆಯಾಗಿದೆ.''

''ಈಗ ನಾನು ಏನು ಮಾಡಬೇಕು ?'' ರೂಮಿನ ಕಡೆ ನೋಡುತ್ತಾ ಕೇಳಿದಾಗ, ಒಳಗೆ ಯಾರೋ ಇರಬಹುದು ಎಂದು ಅನುಮಾನ ವೃದ್ಧಿಗುಂಟಾಯಿತು.

''ನಾನು ಬಂದಿದ್ದು ತೊಂದರೆಯಾಯ್ತಾ ?'' ಪ್ರಶ್ನಿಸಿದ.

''ಏನಿಲ್ಲ... ಏನಿಲ್ಲ... ಏನೋ ಯೋಚಿಸುತ್ತಿದ್ದೆ... ನಿಮ್ಮ ತಮ್ಮಂದಿರ ಸಮಸ್ಯೆ ಏನೇ ಇದ್ದರೂ ಅದನ್ನು ತಿಳಿದುಕೊಳ್ಳುವ ಉಪಾಯ ಇದೆ.''

''ಏನದು ? ಏನಿರಬಹುದು ಅವರ ಸಮಸ್ಯೆ ?''

''ಸಮಸ್ಯೆ ಏನು ಅಂತ ಅವರ ಪತ್ನಿಯರಿಗೆ ಖಂಡಿತಾ ಗೊತ್ತಿರುತ್ತೆ. ರೂಪಿಣಿಗೆ ಹೇಳಿದರೆ ಕಂಡು ಹಿಡಿಯುತ್ತಾಳೆ.''

''ಬೇಡ ವಿಶ್ವಾ... ಈ ನೆವದಿಂದ ರೂಪಿಣಿಯನ್ನು ಮತ್ತೆ ಮತ್ತೆ ನಮ್ಮ ಮನೆಗೆ ಸೇರಿಸುವ ಇಷ್ಟವಿಲ್ಲ.''

''ತಂಗೀರು ಅಮೆರಿಕಾದಿಂದ ಬಂದಿದಾರೆ ಅಂತ ತಿಳಿದರೆ, ಅವಳು ಬರದೇ ಇರ್ತಾಳಾ ? ಅವಳ ಹತ್ತಿರ ಅವರು ಸಮಸ್ಯೆ ಏನೂಂತ ತಿಳಿಸಬಹುದು... ಅವಳ ಹತ್ತಿರ ಅದಕ್ಕೆ ಪರಿಹಾರವೂ ಇರಬಹುದು.''

''ಬೇಡ ನಮ್ಮ ಮನೆಯ ವಿಷಯಕ್ಕೆ ಅವಳು ಬಾಯಿ ಹಾಕುವುದು ಬೇಡ. ನನ್ನ ತಮ್ಮಂದಿರು ಅವರಾಗಿಯೇ ಏನೂಂತ ಹೇಳುವವರೆಗೂ ನಾನು

ಕಾಯ್ತೀನಿ'' ಎನ್ನುತ್ತಾ ಪೃಥ್ವಿ ಹೊರಟೇಬಿಟ್ಟ. ವಿಶ್ವ ಏನನ್ನೂ ಹೇಳಲಿಲ್ಲ. ಕಾರು ಹೊರಟ ಸದ್ದು ಕೇಳಿದ ಕೂಡಲೇ ರೂಪಿಣಿ ರೂಮಿನಿಂದ ಹೊರಗೆ ಬಂದಳು.

''ಸಧ್ಯ.... ನೀನು ಅವನ ಎದುರಿಗೆ ಬರಲಿಲ್ಲವಲ್ಲ'' ವಿಶ್ವ ಅಂದ.

''ಯಾಕೆ ನನಗೇನು ಹೆದರಿಕೆ ? ನೀವು ಹೆದರ್ತೀರಾ ?''

''ಹಾಗಲ್ಲ ಮಹರಾಯಿತಿ. ಇಲ್ಲಿ ನೀನು ನನ್ನ ಜತೆಯಲ್ಲಿದೀಯ ಅಂತ ಅವನಿಗೆ ತಿಳಿಯಬಾರದು ?''

''ತಿಳಿದರೆ ಏನೀಗ ? ಅವನು ತನ್ನ ಮನೆಯ ಸಮಸ್ಯೆಗಳನ್ನು ನಿಮ್ಮ ಹತ್ತಿರ ಚರ್ಚೆ ಮಾಡಿ, ನಿಮ್ಮ ಸಲಹೆಯನ್ನು ಕೇಳ್ತಾನೆ... ನಾನೀಗಲೇ ಹೋಗಿ ಮೇನಕಾ, ರೇವತಿಯರನ್ನು ಭೇಟಿಯಾಗ್ತೀನಿ''

''ಅವನ ಕಾರಿನಲ್ಲೇ ಹೋಗಬಹುದಾಗಿತ್ತಲ್ಲ'' ತಮಾಷೆ ಮಾಡಿದ.

''ಹುಂ.... ಅವನು ನನ್ನನ್ನು ಕರೆದುಕೊಂಡು ಹೋಗ್ತಿದ್ನಾ ? ನಾನು ಹೊರಟೆ. ನೀವೂ ಬರ್ತೀರಾ ? ಅಥವಾ ನನ್ನ ಜೊತೆ ಬರುಕ್ಕೆ ಇಷ್ಟವಿಲ್ಲವೋ ...?''

''ನನಗೆ ಸ್ವಲ್ಪ ಕೆಲಸವಿದೆ... ನೀನು ಹೋಗು...''

''ಇದುವರೆಗೂ ಯಾವ ಕೆಲಸವೂ ಇರಲಿಲ್ಲ. ನನಗೆಲ್ಲಾ ಗೊತ್ತು'' ಎಂದು ಹಂಗಿಸುತ್ತಾ ಹೊರ ನಡೆದಳು.

ರೂಪಿಣಿಯನ್ನು ಕಂಡು ನಳಿನಿಯ ಹುಬ್ಬುಗಳು ಸಂಕುಚಿತಗೊಂಡವು. ''ಮೇನಕಾ ರೇವತಿಯರು ಬಂದಿದಾರಂತೆ... ನೋಡಿಕೊಂಡು ಹೋಗೋಣ ಅಂತ ಬಂದೆ.''

''ಹುಂ, ಕೂತ್ಕೋ ಕರಿಸ್ತೀನಿ...'' ಎಂದು ಅಲ್ಲಿದ್ದ ಕೆಲಸದವಳಿಗೆ ''ಅವರಿಬ್ಬರೂ ಬರುವಂತೆ ಹೇಳು'' ಎಂದು ತಿಳಿಸಿದಳು. ಕೆಲವು ನಿಮಿಷಗಳ ನಂತರ ಹೊರಬಂದ ಮೇನಕಾ, ರೇವತಿಯರಿಗೆ ರೂಪಿಣಿಯನ್ನು ಕಂಡು ಸಂತಸದಿಂದ ಮುಖ ಅರಳಲಿಲ್ಲ, ಅದನ್ನು ರೂಪಿಣಿ ಗಮನಿಸಿದಳು.

ಇಷ್ಟು ಬೇಗಾಗಲೇ ಗಂಡಂದಿರ ಜೊತೆ ಜಗಳ ಆಡಿದಾರೇನೋ ಅಂತ ಕಸಿವಿಸಿ ಆಯಿತು. ಇವರ ಯೋಗ್ಯತೆಗೆ ಮೀರಿದ ಶ್ರೀಮಂತರೊಂದಿಗೆ ಮದುವೆ ಮಾಡಿಸಿದರೆ, ಇವರಿಗೇನಾಯ್ತು ಇಷ್ಟು ಬೇಗ ಹಳಸುಕ್ಕೆ ? ಅಂತ

ಬೈದುಕೊಂಡಳು. ಆದರೂ ವಿಷಯವನ್ನು ಕೇಳಿ ತಿಳಿದುಕೊಳ್ಳುವ ಕುತೂಹಲದಿಂದ

"ಏನ್ರೇ... ಒಳ್ಳೇ ಹರಳೆಣ್ಣೆ ಕುಡಿದ ಮುಖ ಹಾಕಿಕೊಂಡಿದೀರಿ...? ಯಾಕೆ ನಾನು ಬಂದಿದ್ದು ನಿಮಗೆ ಸರಿ ಹೋಗ್ತಿಲ್ವಾ ?"

"ಹಾಗಲ್ಲ..."

"ಹಾಗಾದ್ರೆ ಏನೂಂತ ಹೇಳಿ. ನನ್ನಿಂದ ಏನು ಸಹಾಯ ಬೇಕೋ ನಾನು ಮಾಡ್ತೀನಿ....... ಬನ್ರೇ... ಎಲ್ಲಾದರೂ ಹೊರಗೆ ಹೋಗಿ ಮಾತನಾಡಿ ಕೊಂಡು ಬರೋಣ" ಎಂದು ಎಬ್ಬಿಸಿದಳು.

"ಇವತ್ತೇ ಬೇಡ... ಇನ್ನೊಂದೆರಡು ದಿನ ಕಳೆಯಲಿ" ಅವರಿಗಿನ್ನೂ ಪ್ರಯಾಣದ ಆಯಾಸ ಕಡಿಮೆ ಆಗಿಲ್ಲ ಎಂದು ನಳಿನಿ ತಡೆದಳು. ಅಷ್ಟರಲ್ಲಿ ವಿಶ್ವ, ಪೃಥ್ವಿ ಇಬ್ಬರೂ ಮನೆಯೊಳಗೆ ಬಂದರು. ಪೃಥ್ವಿ ರೂಪಿಣಿಯನ್ನು ಗಮನಿಸಿ ಗಂಭೀರನಾದ. ಇವಳಿಗೆ ಇವರುಗಳು ಬಂದಿರುವ ವಿಚಾರ ತಿಳಿದಿದ್ದಾದರೂ ಹೇಗೆ... ಇನ್ನೇನೇನು ಕಿತಾಪತಿ ಮಾಡುತ್ತಾಳೋ ಅಂತೆನ್ನಿಸಿತು.

ಅಜಯ ವಿಜಯರು ವಿಶ್ವನೊಡನೆ ಎಷ್ಟೋ ಅಷ್ಟು ಮಾತನಾಡಿದರು. ಅವರಿಬ್ಬರೂ ಎಂದೂ ಅವನೊಡನೆ ಮನಬಿಚ್ಚಿ ಮಾತನಾಡಿದುದೇ ಇಲ್ಲ. ಆದರೆ, ಮದುವೆಯ ಸಮಯದಲ್ಲಿ ಅವರಿಬ್ಬರು ಇದ್ದದಕ್ಕೂ ಈಗ ಇವರು ಇರುವುದಕ್ಕೂ ತುಂಬಾ ವ್ಯತ್ಯಾಸವಿದೆ ಎಂದು ನೋಡಿದಾಕ್ಷಣ ಅರಿವಾಗಿತ್ತು. ಅವರಿಬ್ಬರನ್ನು ಯಾವುದೋ ಭಯ, ಆತಂಕ ಕಾಡುತ್ತಿದೆಯೆಂದೆನಿಸಿತ್ತು. ಅವರುಗಳು ಅವನ ದೃಷ್ಟಿಯನ್ನು ತಪ್ಪಿಸಿ ತಪ್ಪಿಸಿ ಮಾತನಾಡುತ್ತಿದ್ದ ರೀತಿಯಿಂದ, ಅವರಲ್ಲಿ ಏನೋ ಅಪಾರಧಿಭಾವ ಕೊರೆಯುತ್ತಿದೆಯೆಂದು, ಇವನ ವೈದ್ಯಕೀಯ ಬುದ್ಧಿ ತರ್ಕ ಮಾಡಿತ್ತು.

ಹತ್ತು ಹದಿನೈದು ದಿನಗಳು ಕಳೆದರೂ, ಅವರುಗಳು ಬೇರೆ ಯಾವ ಚಟುವಟಿಕೆಯಲ್ಲೂ ಆಸಕ್ತಿಯನ್ನು ವಹಿಸಲಿಲ್ಲ. ಮಂಕರಂತೆ ತಮ್ಮ ಪಾಡಿಗೆ ತಾವು ಇರುತ್ತಿದ್ದರು. ಗಂಡ ಹೆಂಡತಿಯರಲ್ಲಿ ಸರಸ ಸಲ್ಲಾಪವಿಲ್ಲ. ನಗು ಹರಟೆ ಇಲ್ಲ... ಯಾಂತ್ರಿಕವಾಗಿ ಊಟ, ನಿದ್ದೆ ಅಷ್ಟೇ... ಅಜಯ ವಿಜಯರಿಗೆ ಅನುರೂಪರಾದ ಹೆಂಡತಿಯರಲ್ಲ... ಏನೋ ನಡೆದಿದೆ ಎಂಬ ಅನುಮಾನ ನಳಿನಿಯನ್ನು ಕೊರೆಯತೊಡಗಿತು. ಇದೇ ಮಾತನ್ನು ಪೃಥ್ವಿಯೊಡನೆ ಹೇಳಿದಳು.

''ಅವರವರಲ್ಲಿ ಏನೋ ಮನಸ್ತಾಪ ಬಂದಿದೆ ಅಂತ ಅನ್ನಿಸುತ್ತೆ. ಆದರೆ ಬಾಯಿಬಿಟ್ಟು ಯಾರೂ ಏನೂ ಹೇಳುವುದಿಲ್ಲ. ತಿಳಿಯೋದಾದರೂ ಹೇಗೆ ? ನೀನಾದರೂ ನಿನ್ನ ತಮ್ಮಂದಿರನ್ನು ಕೇಳಬಾರದಾ ?''

''ನಾನು ಹೇಗೆ ಕೇಳಲಿ ? ಅಲ್ಲದೇ ಏನಾದರೂ ಸಮಸ್ಯೆ ಇದ್ದರೆ ಅದಕ್ಕೆ ಪರಿಹಾರ ಏನು ಹೇಳಲಿ ? ನನಗೇನೂ ತಿಳಿಯುವುದಿಲ್ಲ...''

''ಹಾಗಾದರೆ ವಿಶ್ವನಿಗೆ ಹೇಳು... ಅವನಾದರೆ ಎಷ್ಟೋ ಜನರೊಡನೆ ಮಾತನಾಡಿ ಅಭ್ಯಾಸವಿರುತ್ತದೆ...''

''ಏನು ಸ್ವಂತ ವಿಷಯವೋ... ? ಅದೇಕೆ ಎಲ್ಲರಿಗೂ ತಿಳಿಯಬೇಕು?''

''ಏನೇ ಸ್ವಂತ ವಿಷಯವಿದ್ದರೂ, ತಿಳಿಯದಿದ್ದರೆ ಅದನ್ನು ಪರಿಹರಿಸುವುದು ಹೇಗೆ ? ಅಲ್ಲದೇ ವಿಶ್ವಾ ಯಾರೂ ಬೇರೆಯಲ್ಲ... ಅವನೂ ಅಣ್ಣನೇ...'' ಪೃಥ್ವಿ ತಟ್ಟನೇ ನಳಿನಿಯ ಕಡೆ ನೋಡಿದ. ನಳಿನಿ ತುಟಿ ಕಚ್ಚಿಕೊಂಡಳು.

''ಸರಿ ನಾನು ಅವರಿಗೆ ಹೇಳಿ ಕಳಿಸ್ತೀನಿ. ನೀವೇ ಅವನ ಹತ್ತಿರ ಮಾತನಾಡಿ....''

''ಬೇಡ ಪೃಥ್ವಿ... ಅವನು ನನ್ನ ಹತ್ತಿರ ಸರಿಯಾಗಿ ಮಾತನಾಡುವುದಿಲ್ಲ'' ಎಂದು ಹೇಳುವಾಗ ತಡವರಿಸಿದಳು. ಪೃಥ್ವಿ ಅಲ್ಲಿಂದ ಸರಿದು ಹೋದ. ನಳಿನಿ ಕೆಟ್ಟ ಮುಖ ಮಾಡಿದಳು. 'ಥೂ ಇವರಿಬ್ಬರಾದ್ರೂ ಸರಿಯಾಗಿರಲಿ ಎಂದು ಮಾಡಿದರೆ ಇದ್ಯಾಕಪ್ಪಾ ಹೀಗಾಯ್ತು ?' ಎಂದೆನಿಸಿತ್ತು.

* * * *

ವಿಶ್ವ ಪೃಥ್ವಿಯ ಆಫೀಸಿಗೆ, ಬೇರೆ ಯಾವುದೋ ವಿಷಯವನ್ನು ಚರ್ಚಿಸಲು ಬಂದ. ಮಾತಿನ ಮಧ್ಯೆ, ''ಏನಂತಾರೆ ನಿಮ್ಮ ತಮ್ಮಂದಿರು ಈಗ ?'' ಕೇಳಿದ.

''ಅವರು ಬರೀ ನನ್ನ ತಮ್ಮಂದಿರಲ್ಲ, ನಿಮಗೂ ತಮ್ಮಂದಿರೇ'' ಪೃಥ್ವಿ ನುಡಿದ. ವಿಶ್ವ ನಕ್ಕಂತೆ ಮಾಡಿದ.

''ನನಗೆ ಈ ಸಂಬಂಧ ಎಲ್ಲಾ ಬೇಡ ಪೃಥ್ವಿ... ನಾವು ಸ್ನೇಹಿತರ ಹಾಗೇ ಇರೋಣ... ಈ ಅನುಬಂಧವೇ ಸಾಕು ನನಗೆ.''

''ನೀನೇನೋ ಹಾಗೆ ಹೇಳ್ತೀರಿ. ಆದರೆ ಇರುವ ಸಂಂಬಧ ತನ್ನ

ಅರ್ಥವನ್ನು ಕಳೆದುಕೊಳ್ಳುವುದಿಲ್ಲ... ಹೋಗಲಿ ಬಿಡಿ... ಅಜಯ ವಿಜಯರ ಹತ್ತಿರ ಮಾತನಾಡಿ, ಅವರ ಸಮಸ್ಯೆ ಏನೂಂತ ತಿಳಿದುಕೊಳ್ಳಬೇಕಂತೆ. ಚಿಕ್ಕಮ್ಮ ಹೇಳಿದಾರೆ.''

''ಅದನ್ನು ಅವರಾಗಿಯೇ ಹೇಳಬೇಕು ಪೃಥ್ವಿ...''

''ಹದಿನೈದು ನಿಮಿಷಗಳಾದವು ಬಾಯಿ ಬಿಟ್ಟಿಲ್ಲ. ಯಾವುದೇ ಕೆಲಸ ಕಾರ್ಯವಿಲ್ಲದೇ ಮಂಕರಂತೆ ಕಾಲ ಕಳಿತಿದಾರೆ...''

''ಹೌದು... ಏನೋ ಮಂಕುತನ ಆವರಿಸಿಕೊಂಡವರಂತೆ ಇದಾರೆ. ಏಕಿರಬಹುದು ? ಲ್ಲಿಯ ಕೆಲಸ ಕಾರ್ಯ ದಿಢೀರನೇ ಹೋಗಿರಬಹುದೇ...''

''ಅಲ್ಲಿ ಕೆಲಸ ಇಲ್ಲದಿದ್ದರೇನಂತೆ... ಇಲ್ಲೇ ನಮ್ಮ ಕಂಪೆನಿಯ ಕಾರುಬಾರು ಕಡಿಮೆ ಏನಿಲ್ಲ... ಎಲ್ಲಾ ವಹಿಸಿಕೊಳ್ಳಬಹುದಲ್ಲಾ...''

''ಅವರ ಮನಸ್ಸಿನಲ್ಲಿ ಏನಿದೆಯೋ.. ಅವರನ್ನು ಇಲ್ಲಿಗೇ ಕರೆಸಿ... ಇಬ್ಬರೂ ಮಾತನಾಡೋಣ...'' ಪೃಥ್ವಿ ಮನೆಗೆ ಫೋನು ಮಾಡಿದ. ಆದರೆ ಅವರಿಬ್ಬರೂ ಆಫೀಸಿಗೆ ಬರಲು ಒಪ್ಪಲಿಲ್ಲ... ಪೃಥ್ವಿಗೆ ಕೋಪ ಬಂತು. ರಿಸೀವರನ್ನು ಕುಕ್ಕಿದ.

''ನೀವ್ಯಾಕೆ ಕೋಪ ಮಾಡಿಕೊಳ್ಳುತ್ತೀರೋ... ಏನೋ ಅಸಹಾಯಕತೆ ಅವರನ್ನು ಕಾಡುತ್ತಿರಬಹುದು... ಅವರಿಗೆ ಸಮಯಾಕಾಶವನ್ನು ಕೊಡೋಣ...''

''ನಿಮ್ಮ ಹಾಗೆ ನನಗೆ ಸಹನೆ ಇಲ್ಲ ವಿಶ್ವಾ... ಏನಂತಹ ಸಮಸ್ಯೆ ? ಯಾವುದಾದರೂ ಕೇಸಿನಲ್ಲಿ ಸಿಕ್ಕಿಹಾಕಿಕೊಂಡಿರಬಹುದೇ... ಅಲ್ಲ, ಒಬ್ಬನಿಗೆ ಸಮಸ್ಯೆ ಅಂದರೆ ನಂಬೋಣ.. ಇಬ್ಬರಿಗೂ ಒಟ್ಟೊಟ್ಟಿಗೇ ಸಮಸ್ಯೆ ಬರುವುದೆಂದರೇ... ಇದೇನೋ ಅತಿರೇಕ... !''

''ಏನೂಂತ ವಿಚಾರಿಸೋಣ. ಒಂದು ವೇಳೆ ಇವರಿಬ್ಬರೂ ಹೇಳಲು ಸಿದ್ಧರಾಗಿಲ್ಲದಿದ್ದರೆ, ಅವರ ಪತ್ನಿಯರನ್ನು ಕೇಳೋಣ. ಅವರುಗಳಿಗೆ ತಿಳಿದಿರಲೇ ಬೇಕು... ಆದರೆ ಅವರಿಬ್ಬರ ಬಳಿ ನನಗೆ ಸಲುಗೆಯಿಲ್ಲ... ಒಂದು ಮಾತು... ರೂಪಿಣಿಗೆ ಹೇಳಿದರೆ, ಅವಳು ಈ ವಿಷಯದಲ್ಲಿ ನಮಗೆ ಸಹಾಯ ಮಾಡಬಹುದು.''

''ಅವಳಾ ? ... ಅವಳಿಗೇಕೆ ನಮ್ಮ ಮನೆಯ ವಿಷಯ ತಿಳಿಯಬೇಕು?''

"ಹಾಗಲ್ಲ ವಿಶ್ವಾ... ಎಷ್ಟಾಗಲೀ ಅವರು ಅವಳ ತಂಗಿಯರು...."

"ನನಗೇ ಆಗಲೇ ಏನೋ ಅನುಮಾನ ಬಂದಿತ್ತು... ರೂಪಿಣಿಯ ಹುಡುಗಿಯರು ಅಂತ ಅಂದ ಮೇಲೆ, ನನಗೆ ಗೊತ್ತು..... ಏನೋ ಕಿತಾಪತಿ ಮಾಡಿರುತ್ತಾರೆ... ನನ್ನ ತಮ್ಮಂದಿರನ್ನು ಸಿಕ್ಕಿಸಿ ಹಾಕಿಸಿರುತ್ತಾರೆ. ಏನೋ ಹಗರಣವಾಗಿರುತ್ತೆ"

"ರೂಪಿಣಿಯ ಮೇಲಿನ ದ್ವೇಷದಿಂದ ಹೀಗೆ ಮಾತನಾಡ್ತಿದೀರಿ... ಕೆಲವು ಸಲ ಅಂತಹವರಿಂದಲೇ ನಮಗೆ ಸಹಾಯ ಸಿಗುತ್ತದೆ. ಈಗ ಈ ಸಮಸ್ಯೆ ಏನೂಂತ ತಿಳಿದುಕೊಳ್ಳುವುದು ಮುಖ್ಯ. ಹೊಡೆದು, ಬಡೆದು, ಬೈದು ಅಂದು ಯಾರಿಂದಲೂ ಬಾಯಿಬಿಡಿಸಲು ಸಾಧ್ಯವಿಲ್ಲ. ಹೆಂಗಸರಲ್ಲಿ ಗುಟ್ಟು ನಿಲ್ಲುವುದಿಲ್ಲ. ಒಂದಲ್ಲ ಒಂದು ದಿನ ಮೇನಕಾ ರೇವತಿಯರು ತಮಗೆ ತಿಳಿದಿರುವುದನ್ನು ಹೇಳದೇ ಇರುವುದಿಲ್ಲ. ಒಂದೆರಡು ದಿನ ರೂಪಿಣಿ ನಿಮ್ಮ ಮನೆಯಲ್ಲಿರಲಿ... ಸ್ನೇಹದಿಂದ, ಪ್ರೀತಿಯಿಂದ ಮಾತನಾಡಿದರೆ, ವಿಷಯ ಏನೂಂತ ತಾನಾಗಿಯೇ ಹೊರಬೀಳುತ್ತೆ."

ಪೃಥ್ವಿ ಮುಖ ಸಿಂಡರಿಸಿದ. ರೂಪಿಣಿ ತಮ್ಮ ಮನೆಯಲ್ಲಿರುವುದು, ಅವನಿಗೆ ಒಪ್ಪದ ವಿಷಯ. "ಬೇಡ.... ಬೇಡ... ರೂಪಿಣಿ ನಮ್ಮ ಮನೆಯಲ್ಲಿರುವುದು ಬೇಡವೇ ಬೇಡ... ಬೇಕಾದರೆ ನಿಮ್ಮ ಮನೆಗೇ ಅವರುಗಳನ್ನು ಕರೆದುಕೊಂಡು ಹೋಗಿ ಮಾತನಾಡಲಿ..."

"ಯಾಕೆ ಯ ಇನ್ನೂ ಹೆದರುತ್ತೀರಾ ಅವಳಿಗೆ ?"

"ಹೆದರಿಕೆ ಅಲ್ಲ... ಆದರೆ ವಿಷಸರ್ಪದಿಂದ ದೂರವಿರುವುದೇ ಸರಿ ಅಂತ ನನ್ನ ಅಭಿಪ್ರಾಯ..." ವಿಶ್ವ ಸಂದೇಹದಿಂದ ಅವನನ್ನೇ ನೋಡಿದ. ಈ ವಿಷಕನ್ಯೆಯ ಸಹವಾಸ ತಾನು ಮಾಡಿದ್ದೇನೆಂದು ಇವನಿಗೆ ತಿಳಿದರೆ, ನನ್ನ ಬಗ್ಗೆ ಇವನಿಗೇನನ್ನಿಸಬಹುದು...? ಏನಾದರೂ ಅನ್ನಿಸಲಿ. ಅವಳ ಸಹವಾಸದ ಸುಖ ಈ ಬ್ರಹ್ಮಚಾರಿಗೇನು ಅರ್ಥವಾಗುತ್ತೆ ಅಂತಂದುಕೊಂಡು ತನ್ನಲ್ಲೇ ನಕ್ಕ.

"ಸರಿ ಹಾಗಾದರೆ, ಅವರುಗಳನ್ನು ನಮ್ಮ ಮನೆಗೇ ಕರೆದುಕೊಂಡು ಬನ್ನಿ. ರೂಪಿಣಿ ಈಗ ನನ್ನ ಮನೆಯಲ್ಲೇ ಇದಾಳೆ..." ರೂಪಿಣಿ ವಿಶ್ವನ ಮನೇಲಿದಾಳೆ... ಈ ವಿಷಯ ಪೃಥ್ವಿಗೆ ಹೊಸದು... ಅವನ ಆಶ್ಚರ್ಯವನ್ನು ಗಮನಿಸಿ, ವಿಶ್ವ ನುಡಿದ.

"ಆಗ ಈಗ ಅವಳು ನಮ್ಮ ಮನೆಗೆ ಬರುತ್ತಾಳೆ. ಇದಕ್ಕೆ ನಿಮ್ಮ

ಅಭ್ಯಂತರವೇನಿಲ್ಲ ಅಂತಂದುಕೊಳ್ತೀನಿ. ಯಾಕೆ ಅಂದರೆ ನನಗೂ ಅವಳಿಗೂ ಸ್ನೇಹ ಬೆಳೆಯಲು ನೀವೇ ಕಾರಣ.... ನೀವು ಅವಳ ಒಲವನ್ನು ತಿರಸ್ಕರಿಸಿ, ಅವಳನ್ನು ದೂರ ಅಟ್ಟಿದಿರಿ... ಆದರೆ ನಾನು ಹಾಗೆ ಮಾಡಲಿಲ್ಲ ಅಷ್ಟೇ......''

ಪೃಥ್ವಿ ಬೆರಗಾದ. ಆದರೆ ಈಗ ಏನೂ ಹೇಳಲಾರ. ಇದು ವಿಶ್ವಸ ಸ್ವಂತ ವಿಷಯ. ತಾನು ಏನೂ ಪ್ರಶ್ನಿಸುವಂತೆಯೇ ಇಲ್ಲ. ತನಗಂತೂ ಯಾವ ವಿಷಯದಲ್ಲಿಯೂ ಸಂಬಂಧಿಸಿದುದಲ್ಲ ಎಂದುಕೊಂಡು ಸುಮ್ಮನಾದ.

* * * *

ವಿಶ್ವನ ಮಾತಿನಂತೆ ರೂಪಿಣಿ ಮೇನಕಾ ರೇವತಿಯರನ್ನು ವಿಶ್ವನ ಮನೆಗೆ ಆಹ್ವಾನಿಸಿದಳು.

''ವಿಶ್ವ ಪೃಥ್ವಿ ಇಬ್ಬರೂ ಸೇರಿ, ಒಂದು ಆಸ್ಪತ್ರೆಯನ್ನು ಕಟ್ಟಿಸುತ್ತಿದ್ದಾರೆ. ಅದರಲ್ಲಿ ನಿಮ್ಮ ಹಕ್ಕೂ ಇದೆ. ನೋಡುಲ್ಲವೇನ್ರೇ... ಬನ್ನಿ, ನಾನು ಕರೆದುಕೊಂಡು ಹೋಗಿ ತೋರಿಸ್ತೀನಿ.''

''ಬೇಡ ಬಿಡೇ... ಆಸ್ಪತ್ರೆ ಎಂದರೆ ಏನಿರುತ್ತೆ ನೋಡೋಕೇ...?''

''ಆಸ್ಪತ್ರೇನಾ ಕಟ್ಟಿಸೋದೇ ಜನರ ಸೌಲಭ್ಯಕ್ಕಾಗಿ... ಅದೂ ನಿಮ್ಮ ಮನೆಯವರೇ ಕಟ್ಟಿಸೋ ಆಸ್ಪತ್ರೆ ಬಗ್ಗೆ ಯಾಕೆ ಉದಾಸೀನ...? ಮುಂದೆ ನೀವು ಮನಸ್ಸು ಮಾಡಿದರೆ ಅದೇ ಆಸ್ಪತ್ರೆಯಲ್ಲಿ ನಿಮಗೆ ಹೆರಿಗೆಯಾಗಬಹುದು....''

''ಥೂ... ಹೋಗೇ... ಅಂಥಾದ್ದೇನೂ ಇಲ್ಲ...''

''ಅಂಥಾದ್ದೇನೂ ಇಲ್ಲದಿದ್ದರೆ ಮತ್ತೇಕೆ ಬಂದಿದೀರಿ ಎಷ್ಟು ಬೇಗ ? ನೀವು ಬಾಣಂತನಕ್ಕೆ ಬಂದಿದೀರಿ ಅಂತ ಅಂದುಕೊಂಡಿದ್ದೆ.''

''ಅಮೆರಿಕಾಕ್ಕೆ ಹೊಸದಾಗಿ ಮದುವೆಯಾಗಿ ಹೋದವರು ಯಾರೂ ಬಾಣಂತನಕ್ಕೆ ಅಂತ ಇಂಡಿಯಾಕ್ಕೆ ಖಂಡಿತ ಬರುಲ್ಲ''

''ಓ... ಹೌದಾ ? ಯಾಕೆ ?''

''ಯಾಕೆ ಅಂದ್ರೆ ? ಹುಟ್ಟು ಮಗುವಿಗೆ ಅಲ್ಲಿಯ ಸಿಟಿಜ಼ನ್‌ಷಿಪ್ ಸಿಗುತ್ತೆ. ಇಲ್ಲಿಗಿಂತ ಅಲ್ಲೇ ಮೆಟರ್ನಿಟಿ ಸೌಲಭ್ಯಗಳು ಜಾಸ್ತಿ''

''ಹೌದಾ ? ಹೌದಾ ಅಂತ ಬಾಯಿಬಿಟ್ಟುಕೊಂಡು ಕೇಳೋದೇ ಆಯ್ತು ನನ್ನ ಯೋಗ್ಯತೆ ! ಅಮೆರಿಕಕ್ಕೆ ಹೋಗೋ ಆಸೆ ಇದ್ದರೂ ನನಗೆಲ್ಲಿದೆ ಆ ಸೌಭಾಗ್ಯ...? ನನಗೆ ಹೆರಿಗೆ ಆದರೆ ಇದೇ ನಿಮ್ಮ ಆಸ್ಪತ್ರೇಲೆ. ಅಷ್ಟೇ ಗೊತ್ತು.''

"ಏನೇ... ಏನು ಹೇಳ್ತಿದೀಯ ? ನೀನು ಪ್ರೆಗ್ನೆಂಟಾ ?"

"ಯಾಕಾಗಬಾರದು ? ನಾನು ಹೆಂಗಸಲ್ವಾ ?"

"ಹಾಗಲ್ಲ...."

"ಹಾಗೆ ಹೀಗೇ ಏನೂ ಅಲ್ಲ ಸುಮ್ಮನೆ ನಡೀರಿ ನನ್ನ ಜೊತೆ. ವಿಶ್ವ ತುಂಬಾ ಚೆನ್ನಾಗಿ ಅಡಿಗೆ ಮಾಡ್ತಾನೆ. ರಸಕವಳ ಮುಕ್ಕೋಣ..."

"ವಿಶ್ವನಿಗೂ ನಿನಗೂ ಎಂತಹ ಸ್ನೇಹ ?"

"ಎಂಥದೋ ಸ್ನೇಹ. ನಿಧಾನವಾಗಿ ಹೇಳ್ತೀನಿ. ಮೊದಲು ನಿಮ್ಮ ಅತ್ತೆಗೆ ಹೇಳಿ ಹೊರಡಿ. ವಿಶ್ವನ ಮನೆಗೆ ಹೋಗ್ತೀವಿ ಅಂದ್ರೆ ಖಂಡಿತಾ ಬೇಡ ಅನ್ನಲ್ಲ."

ಅತ್ತೆಯ ಒಪ್ಪಿಗೆ ಪಡೆದು ಮೇನಕ, ರೇವತಿಯರು ರೂಪಿಣಿಯೊಂದಿಗೆ ಹೊರಟರು.

ವಿಶ್ವ ಮಾಡಿದ್ದ ಸರಳ ಊಟವನ್ನು ಮುಗಿಸಿ ಹರಟುತ್ತಾ ಕೂತರು. ತಾನು ಅಲ್ಲೇ ಇದ್ದರೆ ಅವರಿಬ್ಬರೂ ಸರಿಯಾಗಿ ಏನನ್ನೂ ಹೇಳದೇ ಇರಬಹುದು ಎಂದುಕೊಂಡು ವಿಶ್ವ ಕಟ್ಟಡ ನಿರ್ಮಾಣ ಮಾಡುತ್ತಿದ್ದ ಕಡೆಗೆ ಹೊರಟುಹೋದ.

"ಏನ್ರೇ... ಏನಾಗಿದೆ ನಿಮಗೆ ? ಊಟ ಕೂಡಾ ಸರಿಯಾಗಿ ಮಾಡಲಿಲ್ಲ, ಹುಷಾರಾಗಿದೀರಿ ತಾನೇ ? ಅಥವಾ ಡಯಟ್ ಅದೂ ಇದೂ ಅಂತ ಅಮೆರಿಕನ್ನರ ತರಹ ನೀವೂ ಆಡ್ತೀರೋ...."

"ಬೆಳಗ್ಗೆ ತಿಂಡಿ ತಿಂದದ್ದೇ ಜೀರ್ಣವಾಗಿರಲಿಲ್ಲ. ಹೊಟ್ಟೆ ಹಸಿವಿರಲಿಲ್ಲ.. ಅದಿರಲಿ, ನಿನಗೂ ವಿಶ್ವನಿಗೂ ಹೇಗೆ ಸ್ನೇಹ ಬೆಳೆಯಿತು ?..."

"ಈ ವಿಶ್ವ ಯಾರೂಂತ ನಿಮಗೆ ಗೊತ್ತಾ ? ನಿಮ್ಮ ಗಂಡಂದಿರು ಹೇಳಿರಬೇಕಲ್ಲ..?"

"ಇಲ್ಲ ಹೇಳಿಲ್ಲ. ಪೃಥ್ವಿಯ ಸ್ನೇಹಿತ ಅಂತ ನೀನು ಹೇಳಿದ್ದಷ್ಟೇ ಗೊತ್ತು."

"ನಿನ್ನ ಗಂಡಂದಿರಿಗೂ ಗೊತ್ತಿದೆಯೋ ಇಲ್ಲವೋ... ವಿಶ್ವ ಅಜಯ ವಿಜಯರಿಗೆ ಅಣ್ಣನಾಗಬೇಕು." ಅವರಿಬ್ಬರೂ ಆ ಮಾತನ್ನು ನಂಬದವರಂತೆ ಅವಳನ್ನೇ ನೋಡಿದಾಗ ಅವಳು ನಿಜ ಎನ್ನುವಂತೆ ತಲೆ ಆಡಿಸಿ ತನಗೆ ರಹಸ್ಯವನ್ನು ವಿಶ್ವನೇ ಹೇಳಿದನೆಂದು ಹೇಳಿದಳು.

"ವಿಶ್ವ ಎಷ್ಟು ಒಳ್ಳೆಯವನು ಅಲ್ಲವಾ ? ತಾಯಿ ಮಾಡಿದ ಅಪಚಾರ ವನ್ನು ಮರೆತು, ಪೃಥ್ವಿಗೆ ಸಹಾಯಕನಾಗಿದ್ದಾನೆ. ಸ್ನೇಹಿತನಾಗಿದ್ದಾನೆ."

''ಅದರಲ್ಲಿ ತಪ್ಪೇನಿಲ್ಲವಲ್ಲ... ಅಲ್ಲದೇ ಈ ವಿಷಯ ನಿನಗೆ ತಿಳಿದಿದ್ದು ನಮಗೇಕೆ ಹೇಳಲಿಲ್ಲ ?''

''ಈಗ ಹೇಳಿದ್ದರಿಂದ ನಿಮಗಾದ ತೊಂದರೆ ಏನು ಬಿಡ್ರೇ... ಈಗ ನೀವು ಹೇಳಿ... ಎಲ್ಲಾ ಸರಿಯಾಗಿದೆ ತಾನೇ ? ಎಷ್ಟು ದಿನದ ರಜದ ಮೇಲೆ ಬಂದಿದೀರಿ... ಯಾವಾಗ ವಾಪಸ್ಸು ಹೋಗ್ತೀರಿ ?'' ಇಬ್ಬರೂ ಮುಖ ಮುಖ ನೋಡಿಕೊಂಡು ಸುಮ್ಮನಾದರು.

''ಅಜಯ ವಿಜಯರು ಮಾತ್ರ ಹೋಗುತ್ತಾರೆ. ನಾವಿಬ್ಬರೂ ಹೋಗುವುದಿಲ್ಲ !''

''ಯಾಕೆ ? ಏನು ಕಷ್ಟ ಅಲ್ಲಿ ?''

''ನಮಗೆ ತಿಳಿದಂತೆ ಅಲ್ಲಿ ಯಾವ ಕಷ್ಟವೂ ಇಲ್ಲ. ಆದರೆ ನಮ್ಮ ಅಗತ್ಯ ಅವರಿಗಿಲ್ಲವಂತೆ. ನಾವು ಡೈವೋರ್ಸ್ ತಗೋಬೇಕಂತೆ....''

''ಡೈವೋರ್ಸ್ ? ಡೈವೋರ್ಸ್ ಯಾಕಂತೆ ? ಏನು ಹುಚ್ಚು ಹಿಡಿದಿದೆಯೋ ಅವರಿಗೆ ? ಮದುವೆಯಾಗಿ ವರ್ಷ ಆಗಿಲ್ಲ ಇನ್ನೂ ? ಅಂಥಾದ್ದೇನು ನಡೀತು ನಿಮ್ಮ ನಿಮ್ಮಲ್ಲಿ? ಅದ್ಯಾಕೆ ಇಬ್ಬರೂ ಹಾಗೆ ಆಡ್ತಿದಾರೆ ? ಯಾಕೆ ಅಂತ ಕೇಳಲಿಲ್ಲವಾ ನೀವು ?''

''ಕೇಳಿದ್ದಕ್ಕೆ ಏನು ಹೇಳಿದ್ರು ಗೊತ್ತಾ?'' ಈಗ ಮೇನಕಾ ಮುಸಿಮುಸಿ ಅಳುತ್ತಿದ್ದಳು.

''ಸರಿಯಾಗಿ ಹೇಳ್ರೇ...'' ರೂಪಿಣಿ ರೋಷದಿಂದ ಅರಚಿದಳು.

''ಅತ್ತೆ ಆಗಾಗ್ಗೆ ಕಾಗದ ಬರೆದು ತಮಗೆ ಮೊಮ್ಮಕ್ಕಳನ್ನು ಆಡಿಸುವ ಭಾಗ್ಯ ಯಾವಾಗ ಸಿಗುತ್ತೆ ಅಂತ ಕೇಳುತ್ತಿದ್ದರು... ಇದೇ ವಿಷಯವನ್ನು ನಾನು ಅಜಯನೊಡನೆ ಹೇಳಿದಾಗ ಅವರು ಮೊದಲು ಮೊದಲು,

ಮಕ್ಕಳು ಹುಟ್ಟಿದರೆ ಸುಮ್ಮನೇ ತಾಪತ್ರಯ... ಜವಾಬ್ದಾರಿ ಹೆಚ್ಚುತ್ತೆ ಅಮ್ಮನಿಗೆ ಆಸೆ ಅಂತ ಅದಕ್ಕೆ ಒಪ್ಪುಕ್ಕಾಗಲ್ಲ. ಇಂಥ ದೇಶದಲ್ಲಿ ಅದಕ್ಕೆಲ್ಲ ಮುಂಚಿತವಾಗಿ ಪ್ಲಾನ್ ಮಾಡಬೇಕಾಗುತ್ತೆ. ಅದಕ್ಕೆ ಅರ್ಜೆಂಟೇನಿಲ್ಲ. ಮದುವೆಯಾಗಿ ಒಂದು ವರ್ಷವಾದರೂ ಕಳೆಯಲಿ'' ಎಂದೇ ಹೇಳುತ್ತಿದ್ದರು.''

''ನಾನು ಇದೇ ವಿಷಯವನ್ನು ವಿಜಯನ ಬಳಿ ಪ್ರಸ್ತಾಪ ಮಾಡಿದೆ...''

ರೇವತಿ ನುಡಿದಳು. ''ನನಗೇನೋ ಕಂಪೆನಿಯಲ್ಲಿ ಒಳ್ಳೆ ಕೆಲಸವಿದೆ. ಎಲ್ಲಾ ಸೌಲಭ್ಯವಿದೆ. ಆದರೆ ಅಜಯ ಇನ್ನೂ ಸರಿಯಾಗಿ ಸೆಟ್ಲ್ ಆಗಿಲ್ಲ. ನಮಗೆ ಮೊದಲು ಮಗುವಾಗಿಬಿಟ್ಟರೆ ಅವನೇನು ಅಂದುಕೊಳ್ತಾನೋ. ಈಗಲೇ ನಾವು ಅವಸರಪಡುವುದು ಬೇಡ. ಅಂದರು.''

''ಆಮೇಲೆ ಅವರಿಬ್ಬರೂ ಏನೇನು ಮಾತನಾಡಿಕೊಂಡರೋ ತಿಳಿಯದು... ನಂತರ ಒಂದು ದಿನ ವಿಜಯ ಹೇಳಿದರು... ಈ ವಿಷಯದಲ್ಲಿ ನಾವು ಮೊದಲು ಡಾಕ್ಟರರ ಸಲಹೆ ತಗೊಳ್ಳೋಣ... ಇಲ್ಲೆಲ್ಲಾ ಮದುವೆಗೆ ಮೊದಲೇ ಗಂಡ ಹೆಂಡತಿಯರು ಅವರವರ ರಕ್ತಪರೀಕ್ಷೆ ಮಾಡಿಸಿಕೊಳ್ಳುತ್ತಾರೆ. ಯಾಕೇಂದ್ರೆ ಮುಂದೆ ಹುಟ್ಟುವ ಮಗು ಸರಿಯಾಗಿ ಹುಟ್ಟಬೇಕು, ಬೆಳೆಯಬೇಕು ಅಂತ ಇದ್ರೆ, ತಂದೆತಾಯಿಯರ ಆರೋಗ್ಯವೂ ಮುಖ್ಯ. ಹಾಗಂತ ಅವರ ಆಫೀಸಿನವರು ಯಾರೋ ಸಲಹೆ ಕೊಟ್ಟರಂತೆ. ಅದನ್ನೇ ನಮಗೂ ತಿಳಿಸಿ ಹೇಳಿದರು.''

''ಅದೆಲ್ಲಾ ವಿಚಿತ್ರಾ ಅಂತೆನ್ನಿಸಿದರೂ, ನಾವೂ ಎಚ್ಚರಿಕೆವಹಿಸುವುದರಲ್ಲಿ ತಪ್ಪಿಲ್ಲ ಅಂತ ಅಂದುಕೊಂಡು, ರಕ್ತಪರೀಕ್ಷೆಯೊಂದಿಗೆ ಕೆಲವು ಮುಖ್ಯವಾದ ಪರೀಕ್ಷೆಗಳನ್ನು ಮಾಡಿಸಿಕೊಂಡೆವು. ನನ್ನ ರಕ್ತದಲ್ಲಾಗಲೀ, ಗರ್ಭಕೋಶ ದಲ್ಲಾಗಲೀ ಯಾವುದೇ ತೊಂದರೆಯಿರಲಿಲ್ಲ. ಎಲ್ಲಾ ನಾರ್ಮಲ್ ಆಗಿದ್ದವು. ಆದರೆ ...'' ರೇವತಿ ಬಿಕ್ಕಿಬಿಕ್ಕಿ ಅಳಲು ಪ್ರಾರಂಭಿಸಿದಳು.

ಈಗ ರೂಪಿಣಿಗೆ ಏನೋ ಅನುಮಾನ ಬರತೊಡಗಿತು. ಹಾಗಾದರೆ ವಿಜಯನಲ್ಲಿ ತಂದೆಯಾಗುವ ಶಕ್ತಿ ಇಲ್ಲದಿರಬಹುದು... ಆದರೆ ಇದೇ ತೊಂದರೆ ಅಜಯನಲ್ಲೂ ಇರಬಹುದೇ ? ಅವಳಿ ಮಕ್ಕಳು ನೋಡಲು ಒಂದೇ ತರಹ ಇದಾರೆ. ನ್ಯೂನತೆಯೂ ಇಬ್ಬರಲ್ಲೂ ಇರಬಹುದು ಎಂದು ಕೊಂಡಳು. ಆದರೂ ಆ ಸಾಧ್ಯತೆ ಹೇಗೆ ಸಾಧ್ಯ ? ಅಂತನ್ನಿಸದೇ ಇರಲಿಲ್ಲ.

''ಸರಿ, ಇದಕ್ಕೆ ನೀವೇಕೆ ಡೈವೋರ್ಸ್ ತಗೋಬೇಕು ?''

''ಅದಲ್ಲ... ಇದಾದ ನಂತರ, ವಿಜಯ ನನ್ನನ್ನು ಬಳಿಗೇ ಸೇರಿಸುತ್ತಿರ ಲಿಲ್ಲ. ದೂರದೂರವೇ ಇರುತ್ತಿದ್ದರು. ಕೇಳಿದರೆ, ನಮಗೀಗಲೇ ಮಕ್ಕಳು ಬೇಡ, ನಾವು ದೂರದೂರ ಇರುವುದೇ ಸರಿ ಎನ್ನುತ್ತಿದ್ದರು. ಆದರೆ ಮೊದಲಿ ನಂತೆ ಪ್ರೀತಿಯಿಂದ ಮಾತನಾಡಿಸುವುದೂ, ಹೊರಗೆ ತಿರುಗಾಡುವುದು

ಇದೆಲ್ಲಾ ಕಮ್ಮಿಯಾಗಿತ್ತು. ಕೇಳಿದರೆ ಸರಿಯಾಗಿ ಮಾತನ್ನಾಡಿಸುತ್ತಿರಲಿಲ್ಲ. ನನಗೆ ತುಂಬಾ ಬೇಸರವಾಗಿತ್ತು.

ನಾನು ನನ್ನ ಈ ವ್ಯಥೆಯನ್ನು ಮೇನಕಾಳಿಗೆ ಹೇಳಿದೆ. ಅಲ್ಲೂ ಅದೇ ಕತೆ. ಯಾಕೆ ಹೀಗೆ ಇಬ್ಬರೂ ಬದಲಾದರು ಅಂತ ನಮಗೆ ಅರ್ಥವಾಗಲಿಲ್ಲ. ಆಮೇಲೆ ಕೆಲವು ವಾರಗಳ ನಂತರ ಒಂದು ದಿನ ಇದ್ದಕ್ಕಿದ್ದಂತೆ, ಇಂಡಿಯಾಕ್ಕೆ ದಿಢೀರನೇ ವಾಪಸ್ಸು ಇಂಡಿಯಾಕ್ಕೆ ಹೊರಡುವ ತಯಾರಿ ಮಾಡಿದರು.

ನಮಗೆ ನಿಮ್ಮ ಅಗತ್ಯವಿಲ್ಲ. ನೀವು ಡೈವೋರ್ಸ್‌ಗೆ ಹಾಕಿ... ಹೆಂಗಸರಿಗಾದರೆ ಬೇಗ ಡೈವೋರ್ಸ್ ಸಿಗುತ್ತದೆ.... ನಿಮಗೆಷ್ಟು ಹಣ ಬೇಕೋ ನಾವು ಕೊಡ್ತೀವಿ ಅಂದರು. ಎಷ್ಟೇ ಕೇಳಿಕೊಂಡರೂ ಕಾರಣ ಮಾತ್ರ ಹೇಳಲಿಲ್ಲ. ಈ ವಿಷಯದಲ್ಲಿ ಅಣ್ಣತಮ್ಮಂದಿರು ತುಂಬಾ ಒಗ್ಗಟ್ಟು. ನಮಗಿದು ಬಿಡಿಸದ ಕಗ್ಗಂಟು. ಇಲ್ಲಿಗೆ ಬಂದರೆ ಹಿರಿಯರು ತಿಳುವಳಿಕೆ ಹೇಳಬಹುದು ಅಂತ ಕಾದ್ವಿ. ಆದರೆ ಯಾರಿಗೂ ಯಾವ ವಿಷಯವನ್ನೇ ತಿಳಿಸಿಲ್ಲ. ನಾವಾಗಿಯೇ ನಾವು ಡೈವೋರ್ಸ್‌ಗೆ ಹಾಕ್ತೀವೀಂತ ಅತ್ತೆಗಾಗಲೀ, ಭಾವನಿಗಾಗಲೀ ಹೇಗೆ ಹೇಳೋಣ. ನೀನೇ ಹೇಳು ? ಅಲ್ಲದೇ ಡೈವೋರ್ಸ್ ತಗೋಬೇಕು ಅಂತ ನಮಗೇನಿಲ್ಲ.''

''ಈ ವಿಷಯಗಳನ್ನು ನಿಮ್ಮ ಅತ್ತೆಗೆ ಯಾರಾದರೂ ಹೇಳದಿದ್ದರೆ ತಿಳಿಯುವುದು ಹೇಗೆ ? ನೀವು ಹೇಳಿದರೆ, ನೀವು ಕೆಟ್ಟವರಾಗ್ತೀರಿ... ಈಗ ಅನ್ಯಾಯವಾಗುತ್ತಿರುವುದು ನಿಮಗೇ... ನೀವು ಹೇಗ್ರೇ ಸುಮ್ಮನಿದೀರಿ ?''

''ನಮಗೂ ಏನು ಮಾಡಬೇಕೆಂದು ಗೊತ್ತಾಗ್ತಿಲ್ಲ. ಭಾವನ ಹತ್ತಿರ ಸಲುಗೆ ಇಲ್ಲ. ಯಾರ ಹತ್ತಿರ ಹೇಗೆ ಹೇಳಬೇಕೂಂತ ತಿಳೀತಿಲ್ಲ.''

''ಏನೋ ಪ್ರಬಲವಾದ ಕಾರಣವಿದೆ. ನೀವುಗಳೇಕೆ ತೊಂದರೆಗೆ ಗುರಿಯಾಗಬೇಕು. ನಾನು ವಿಶ್ವನಿಗೆ ಹೇಳುತ್ತೀನಿ. ವಿಶ್ವ ಮಾತಾಡುತ್ತಾನೆ.''

''ಆಮೇಲೆ ಅಜಯ ವಿಜಯರು ಬೈದರೇ...?''

''ಗಂಡ ಹೆಂಡತಿ ಅನ್ನೋ ಸಂಬಂಧವೇ ಬೇಡ ಅಂತ ಅದನ್ನು ಕಳಚಿಕೊಳ್ತಾ ಇರೋರಿಗೆ ಇನ್ನೂ ಹೆದರುತ್ತೀರಾ ? ನೀವು ಸುಮ್ಮನಿರಿ ನಾನು ಸಮಸ್ಯೆ ಏನೂಂತ ಕಂಡುಹಿಡಿದುಪರಿಹಾರವನ್ನೂ ಹುಡುಕ್ತೀನಿ'' ರೂಪಿಣಿ ಆಶ್ವಾಸನೆಯನ್ನಿತ್ತಳು.

ಮೇನಕ ರೇವತಿಯರು ಅತ್ತ ಹೋದ ಮೇಲೆ, ವಿಶ್ವ ಬಂದ. ಅವರಿಬ್ಬರನ್ನೂ ಕಾರಿನ ತನಕ ಬಿಟ್ಟು ಒಳಗೆ ಬಂದಳು ರೂಪಿಣಿ. ವಿಶ್ವ ಏನು ವಿಷಯ ಅಂತ ಕೇಳದಿದ್ದರೂ ರೂಪಿಣಿ ತಾನಾಗಿಯೇ ತಾನು ಮಾತನಾಡಿ, ಸಂಗ್ರಹಿಸಿದುದನ್ನೆಲ್ಲ ಹೇಳಿದಳು. ವಿಶ್ವ ಗಂಭೀರನಾದ.

''ನಾನು ಅವತ್ತೇ ಅಂದುಕೊಂಡೆ. ಏನೋ ಮಂಕುಕಳೆ ಅವರನ್ನು ಆವರಿಸಿಕೊಂಡಿದೆ ಅಂತ... ಏನೋ ಭಾರಿ ತೊಂದರೆಯೇ ಇದೆ.''

''ಈಗ ಗೊತ್ತಾಯ್ತಲ್ಲ... ಗಂಡಸರಿಗೆ ತಂದೆಯಾಗೋ ಶಕ್ತಿಯೇ ಇಲ್ಲ ಅಂತ ತಿಳಿದರೆ ಅದಕ್ಕಿಂತ ದೊಡ್ಡ ಶಾಕ್ ಬೇಕಾ ? ಗಂಡಸರ ಪೌರುಷ ಕಮ್ಮಿಯಾದ ಹಾಗೇ... ಅದಕ್ಕಿಂತ ಅವಮಾನ ಬೇಕಾ ?''

''ನೀನು ಸುಮ್ಮನಿರು, ಹಾಗೆಲ್ಲ ಹಗುರವಾಗಿ ಮಾತನಾಡಬಾರದು. ಒಂದು ವೇಳೆ ಹಾಗೇನಾದರೂ ಇದ್ದರೆ ಅದರಲ್ಲಿ ಅವರ ತಪ್ಪೇನಿದೆ ? ಎಷ್ಟೋ ಸಲ ಹೆಂಗಸರಿಗೆ, ತಾಯಿಯಾಗುವ ಸಾಧ್ಯತೆ ಕಡಿಮೆ ಇರುತ್ತೆ. ಹಾಗಂತ ಅದನ್ನು ಅವರ ತಪ್ಪೂಂತ ಅನ್ನೋಕಾಗುತ್ತಾ ?''

''ಯಾಕನ್ನಲ್ಲ ? ಈ ಪುರುಷ ಪ್ರಧಾನ ಸಮಾಜದಲ್ಲಿ ತಪ್ಪೆಲ್ಲಾ ಹೆಂಗಸರದ್ದೇ ತಾನೇ... ಅವಳನ್ನು ಬಂಜೆ ಬಂಜೇಂತ ಅಂತ ಹಂಗಿಸಿ, ಹಂಗಿಸೀ ಅರ್ಧ ಸಾಯಿಸೇ ಬಿಡ್ತಾರೆ...''

''ಹಾಗೆಲ್ಲ ಏನಿಲ್ಲ. ಕಾಲ ಬದಲಾಗಿದೆ. ಅಜಯ ವಿಜಯರಲ್ಲೇ ದೋಷವಿದ್ದು, ಅವರು ಡೈವೋರ್ಸ್ ತಗೊಂಡರೆ, ತಪ್ಪೇನಿಲ್ಲ. ಬೇರೆ ಮದುವೆ ಮಾಡಿಕೊಂಡು ಹಾಯಾಗಿರುತ್ತಾರೆ. ಅದೇನು ಅಪರೂಪದ ವಿಷಯವಲ್ಲ.''

''ಹೌದು, ವಿಷಯ ಅಪರೂಪದ್ದೇನಲ್ಲ. ಹೆಂಗಸರು ಸುಲಭವಾಗಿ ಮರುಮದುವೆಯಾಗ್ತಾರೆ. ಯಾರಿಗೂ ಅಂಜಬೇಕಾಗಿಲ್ಲ ಅಲ್ವಾ ?'' ರೂಪಿಣಿ ನಳಿನಿಯನ್ನು ಕುರಿತು ಈ ಮಾತುಗಳನ್ನಾಡುತ್ತಿದ್ದಾಳೆಂದು ಅರಿತ.

''ಸರಿ... ಇಷ್ಟಾದರೂ ಅಜಯ ವಿಜಯರಿಬ್ಬರಲ್ಲೂ ಒಟ್ಟಿಗೇ ಈ ಸಮಸ್ಯೆ ಒದಗಬೇಕಾಗಿಲ್ಲ. ಬೇರೆ ಏನಾದರೂ ಕಾರಣ ಇದ್ದರೂ ಇರಬಹುದು. ಅವಳಿ ಮಕ್ಕಳಾದ ಮಾತ್ರಕ್ಕೆ ಸಮಸ್ಯೆ ದೋಷ ಸಹ ಒಂದೇ ತರಹ ಇರಬೇಕಾಗಿಲ್ಲ. ಬೇರೆ ಏನೋ ಇದೆ. ಅದನ್ನು ಮುಚ್ಚಿಡ್ತಾ ಇದಾರೆ ಅಂತ ಅನ್ನಿಸುತ್ತೆ ನನಗೆ.''

''ಅದೇನೂಂತ ನಾನೇ ಕೇಳಿಬಿಡ್ತೀನಿ ಅಷ್ಟೇ...''

‘‘ಬೇಡ, ಬೇಡ.... ಅತೀ ಸ್ವಂತ ವಿಷಯ...ಅದನ್ನೆಲ್ಲ ಹೆಂಗಸರು ಪ್ರಶ್ನಿಸಲೇ ಬಾರದು...’’

‘‘ಹಾಗಾದರೆ, ನೀನೇ ಆಡಬೇಕು... ಹಾಗೇ ಪೃಥ್ವಿಗೂ ಗೊತ್ತಾಗಬೇಕು ನಿನ್ನ ತಮ್ಮಂದಿರು ಹೀಗೇ ಅಂತ... ಆಗ ಗೊತ್ತಾಗುತ್ತೆ ಅವನಿಗೆ.’’ ವಕ್ರವಾಗಿ ನಕ್ಕಳು. ‘‘ತಡೀ ತಡೀ ಏನೇನೋ ಆಡಬೇಡ.. ಮೊದಲು ನಿಜ ಏನೂಂತ ಗೊತ್ತಾಗಲಿ’’ ವಿಶ್ವ ಮತ್ತೆ ಹೊರಗೆ ಹೊರಟ.

* * * *

‘‘ಪೃಥ್ವೀ... ನಿನ್ನ ತಮ್ಮಂದಿರು ಅವರ ಪತ್ನಿಯರಿಗೆ ಡೈವೋರ್ಸ್ ತಗೊಳ್ಳಿ ಅಂತ ಬಲವಂತ ಮಾಡುತ್ತಿದ್ದಾರಂತೆ. ಕಾರಣ ಏನಿರಬಹುದು...?’’

‘‘ಅವರವರಲ್ಲಿ ಏನೋ ಮನಸ್ತಾಪ ಬಂದಿರಬಹುದು ?’’

‘‘ಅವಳಿ ಮಕ್ಕಳಾದ ಮೇಲೆ ಇಬ್ಬರೂ ಒಂದೇ ತರಹ ವರ್ತಿಸ ಬೇಕಾಗಿಲ್ಲ. ಬೇರೆ ಏನೋ ಕಾರಣ ಇರಬಹುದು ಅಂತ ಅನ್ನಿಸುಲ್ವಾ ?’’

‘‘ಬೇರೆ ಏನೇ ಕಾರಣ ಇದ್ದರೂ ನನಗೆ ತಿಳಿಯೋದು ಹೇಗೆ ? ನಾನು ಕೇಳಿ ತಿಳಿದುಕೊಳ್ತೀನಿ...’’

‘‘ಹಾಗೇ ಮಾಡಿ... ಆಮೇಲೆ ಪರಿಹಾರ ಹುಡುಕೋಣ...’’ ವಿಶ್ವ ಹೊರಟುಹೋದ ಮೇಲೂ ಪೃಥ್ವಿ ಎಷ್ಟೋ ಹೊತ್ತು ಹಾಗೇ ಕುಳಿತಿದ್ದ. ನಂತರ ತಮ್ಮಂದಿರಿಗೆ ಫೋನು ಮಾಡಿ ಈ ಕ್ಷಣ ಆಫೀಸಿಗೆ ಬನ್ನಿ ಎಂದು ಹೇಳಿದ.

ಅರ್ಧಗಂಟೆಯೊಳಗೆ ಅವರಿಬ್ಬರೂ ಅವನ ಛೇಂಬರ್ರಿನಲ್ಲಿದ್ದರು. ಪೃಥ್ವಿ ಸ್ವಲ್ಪ ಗಡುಸಾದ ಧ್ವನಿಯಲ್ಲಿ ಕೇಳಿದ. ‘‘ಏನಿದೆಲ್ಲಾ... ? ಮದುವೆಯಾಗಿ ವರ್ಷ ಸಹ ಆಗಿಲ್ಲ... ನಿಮ್ಮ ಹೆಂಡತಿಯರಿಬ್ಬರಿಗೂ ಡೈವೋರ್ಸ್ ಕೊಡಿ ಅಂತ ಕೇಳ್ತಿದೀರಂತೆ...’’ ಅಜಯ ಕತ್ತು ಬಗ್ಗಿಸಿದ. ವಿಜಯ ನುಡಿದ.

‘‘ನಾವಿಬ್ಬರೂ ಅವರಿಗೆ ಲಾಯಖ್ಖಾದ ಪತಿಗಳಲ್ಲ...’’

‘‘ಅದ್ಹೇಗೆ ನೀವೇ ನಿಶ್ಚಿಯಿಸಿಕೊಂಡಿರಿ ! ಏನು ನಿಮ್ಮ ಪ್ರಾಬ್ಲಂ ?’’

‘‘ಪ್ರಾಬ್ಲಂ... ದೊಡ್ಡದೇ ಅದನ್ನು ಹೇಳುಕ್ಕಾಗುಲ್ಲ!...’’

‘‘ಏನೂಂತ ಹೇಳಿದರೆ ಪರಿಹಾರವನ್ನು ಹುಡುಕೋಣ...’’ ವಿಜಯ ಸುಮ್ಮನಾದ. ಅಜಯಹೇಳಿದ.

''ಅಮ್ಮನಿಗೆ ಮೊಮ್ಮಕ್ಕಳು ಬೇಕು.... ಆದರೆ ಅದನ್ನು ನಾವು ಕೊಡಲಾರೆವು...'' ಪೃಥ್ವಿಗೆ ಈ ವಿಷಯದಲ್ಲಿ ಮಾತು ಮುಂದುವರಿಸುವುದು ಕಷ್ಟವೆನಿಸಿತು. ''ಏನು ನಿಮ್ಮ ಪತ್ನಿಯರಿಗೆ ಮಕ್ಕಳಾಗುಲ್ಲ ಅಂತಾನಾ ! ಯಾರು ಹೇಳಿದ್ರು ? ಡಾಕ್ಟರು ಹೇಳಿದ್ರಾ ? ಇಲ್ಲೂ ಮತ್ತೆ ಪರೀಕ್ಷೆ ಮಾಡಿದರಾಯ್ತು...''

''ನಾವೆಲ್ಲಾ ಪರೀಕ್ಷೆ ಮಾಡಿಸಿದ್ದಾಗಿದೆ....''

''ಮೇನಕಾ ರೇವತಿ ಇಬ್ಬರಿಗೂ ಮಕ್ಕಳಾಗುವ ಸಾಧ್ಯತೆ ಇಲ್ಲ ಅಂತ ಡಾಕ್ಟರು ಹೇಳಿದಾರಾ ? ಅದ್ಹೇಗೆ ಸಾಧ್ಯ ? ಏನೋ ಮೋಸವಿದೆ...''

ಇಬ್ಬರೂ ಸುಮ್ಮನ್ನಾಗಿಬಿಟ್ಟರು. ''ಹೋಗಲಿ... ಇದು ಯಾವ ದೊಡ್ಡ ಪ್ರಾಬ್ಲಂ ? ಈ ಕಾಲದಲ್ಲಿ ಏನೇನು ಬೇಕಾದರೂ ಆಗಬಹುದು. ಸರಿಯಾದ ಡಾಕ್ಟರಿಗೆ ತೋರಿಸೋಣ. ಇನ್ನು ನಾಲ್ಕಾರು ವರ್ಷ ಕಾಯೋಣ... ಒಂದು ವರ್ಷದೊಳಗೇ ಡೈವೋರ್ಸ್ ತಗೋಬೇಕು ಅಂತ ಹೇಗೆ ನಿರ್ಧರಿಸಿದಿರಿ ! ಅದೂ ನನಗಾಗಲೀ, ಚಿಕ್ಕಮ್ಮನಿಗಾಗಲೀ ಈ ಬಗ್ಗೆ ಒಂದು ಮಾತನ್ನು ತಿಳಿಸದೇ... ನಿಮ್ಮ ಅಮ್ಮನಿಗೆ ತಿಳಿದರೆ, ಅವರ ಸ್ಥಿತಿ ಏನಾಗಬಹುದು ? ಅಷ್ಟೂ ತಿಳಿಯಬೇಡ್ವಾ ?''

''ಆದರೆ ಪರಿಸ್ಥಿತಿ ಹಾಗಿದೆ. ಒಂದಲ್ಲ ಒಂದು ದಿನ ಅವರಿಗೆ ಈ ವಿಷಯ ತಿಳಿಯಲೇ ಬೇಕು... ಆದರೆ...''

''ಸರಿ ಹಾಗಾದ್ರೆ... ಆದರೆ ಇದಕ್ಕೆ ಡೈವೋರ್ಸ್ ಒಂದೇ ಪರಿಹಾರವಲ್ಲ. ನಾಳೆ ಆ ಹುಡುಗಿಯರ ಬಾಳು ಹೇಗೆ ಸಾಗಬಹುದು ಅಂತ ಯೋಚಿಸಿದ್ದೀರಾ ?''

''ಜೀವನಾಂಶ ಕೊಡೋಣ... ಅವರುಗಳಿಗೆ ಇಷ್ಟವಾದರೆ ಮತ್ತೆ ಮದುವೆಯಾಗಲಿ... ಇದಕ್ಕೆಲ್ಲ ನಾವು ಅಡ್ಡಿ ಬರುವುದಿಲ್ಲ...''

''ಇದನ್ನೆಲ್ಲ ನಿರ್ಧರಿಸೋಕ್ಕೆ ನೀವು ಯಾರು ? ಮುಂದೆ ಆ ಹುಡುಗಿಯರ ಜೀವನದಲ್ಲಿ, ನಿಮ್ಮ ಈ ನಿರ್ಧಾರದಿಂದ ಏನೇನಾಗಬಹುದು ಅಂತ ಯೋಚಿಸಿದೀರಾ ?'' ಮೇಜಿನ ಮೇಲೆ ಕೈ ಕುಟ್ಟಿದ....

''ನಾವು ಎಲ್ಲಾ ಯೋಚಿಸಿಯೇ ಸರಿಯಾದ ನಿರ್ಧಾರಕ್ಕೆ ಬಂದಿದೀವಿ. ಯಾರು ಏನೇ ಹೇಳಿದರೂ ನಾವು ನಮ್ಮ ನಿರ್ಧಾರವನ್ನು ಬದಲಾಯಿಸುವುದಿಲ್ಲ'' ಅಜಯ ನುಡಿದ.

''ಅಮೆರಿಕಾಕ್ಕೆ ಹೋದ ಮಾತ್ರಕ್ಕೆ ನೀವು ಪೂರ್ಣ ಸ್ವತಂತ್ರರಲ್ಲ. ಇಂಥ

ವಿಷಯಗಳಲ್ಲಿ ಹಿರಿಯರ ಸಲಹೆ ಅಗತ್ಯ. ದುಡುಕಬೇಡಿ. ಬರೀ ಮಕ್ಕಳದ್ದೇ ವಿಷಯ ಆದರೆ ಮಕ್ಕಳನ್ನು ದತ್ತು ತೆಗೆದುಕೊಂಡರಾಯಿತು. ಇದಕ್ಕೆ ನೀವು ನಿಮ್ಮ ನಿಮ್ಮ ಪತ್ನಿಯರನ್ನು ಒಪ್ಪಿಸಿ. ನಾನು ಚಿಕ್ಕಮ್ಮನ್ನ ಒಪ್ಪಿಸ್ತೀನಿ'' ಕಡೇ ಮಾತು ಎಂದಬಂತೆ ಹೇಳಿದ.

''ಥ್ಯಾಂಕ್‌ಯೂ.. ಪೃಥ್ವಿ...'' ಇಬ್ಬರೂ ನುಡಿದರು.

ನಳಿನಯೊಡನೆ ಈ ವಿಷಯವನ್ನು ಮಾತನಾಡುವುದು ಪೃಥ್ವಿಗೆ ಸುಲಭವೆನಿಸಲಿಲ್ಲ. ಹಾಗಾಗಿ ಕೆಲವು ದಿನಗಳು ಕಳೆಯಲಿ ಎಂದು ಸುಮ್ಮನಾಗಿಬಿಟ್ಟ. ಅಜಯ ವಿಜಯರು ತಮ್ಮ ಮೂರು ವಾರದ ರಜ ಮುಗಿಯುತ್ತಾದ್ದರಿಂದ ಅಮೆರಿಕಕ್ಕೆ ಹೊರಟರು. ಈ ವಿಷಯ ತಿಳಿದ ನಳಿನಿ ಅವರಿಬ್ಬರನ್ನು ತಡೆದಳು.

''ಎರಡು ಮೂರು ವರ್ಷ ಅಮೆರಿಕದಲ್ಲಿದ್ದುದು ಸಾಕು. ಇನ್ನು ಎಲ್ಲಿಗೂ ಹೋಗುವುದು ಬೇಡ. ಮದುವೆಯಾಗಿ ವರ್ಷವಾಯಿತು. ಇಷ್ಟು ಹೊತ್ತಿಗೇ ನನಗೆ ಎರಡು ಮೊಮ್ಮಕ್ಕಳಿರಬೇಕಾಗಿತ್ತು. ನಿಮ್ಮಿಬ್ಬರ ನಂತರ ಈ ಮನೆಯಲ್ಲಿ ಯಾವ ಪುಟ್ಟ ಮಕ್ಕಳ ಕೇಕೆ, ನಗು, ಆಟ, ಅಳು, ಚೇಷ್ಟೆ ಯಾವುದೂ ಇಲ್ಲ. ನಿಮ್ಮ ತಾತ ನಿಮ್ಮಿಬ್ಬರನ್ನೂ ಆಟ ಆಡಿಸುತ್ತಿದ್ದ ಹಾಗೇ, ನಿಮ್ಮ ಮಕ್ಕಳನ್ನು ನಾನು ಆಟ ಆಡಿಸಬೇಕೂಂತ ಆಸೆ. ಅಷ್ಟಾದರೆ ಸಾಕು, ನನಗಿನ್ನೇನೂ ಬೇಡ...''

''ನಿನಗೆ ಅಷ್ಟು ಬೇಕಾಗಿದ್ದರೆ ಎರಡು ಮಕ್ಕಳನ್ನು ದತ್ತು ತಗೋ... ನಮಗೆ ಮಕ್ಕಳು ಬೇಡ...'' ಅಜಯ ನುಡಿದ.

''ಥೂ ಹಾಗೆಲ್ಲಾ ಮಾತನಾಡಬಾರದು... ನಿಮಗೆ ಆಸೆ ಇಲ್ಲದಿರಬಹುದು ನಿಮ್ಮ ಹೆಂಡತಿಯರಿಗೆ ಆಸೆ ಇರುಲ್ವಾ ?''

''ಅವರಿಗೆ ಆಸೆ ಇದ್ದರೆ ನಾವು ಏನೂ ಮಾಡೋಕ್ಕಾಗುವುದಿಲ್ಲ'' ವಿಜಯ ಹೇಳಿದ.

''ಅದೇನು ಇಬ್ಬರೂ ಒಂದೇ ತರಹ ಮಾತನಾಡ್ತೀರಿ. ಇಬ್ಬರಿಗೂ ಏನಾಗಿದೆ ?''

''ಏನಾಗಿದೆ ! ಏನಿಲ್ಲ....'' ಆದರೆ ಇಬ್ಬರ ಮುಖವೂ ಬಿಳುಪಾಗಿ ಹೋಗಿತ್ತು. ಇಬ್ಬರೂ ಬೆಚ್ಚಿದವರಂತೆ ಬೆದರಿದ್ದರು. ಏನೋ ಮಾತಿದೆ ಎಂದು ನಳಿನಿಗೆ ಖಂಡಿತವಾಗಿತ್ತು. ಒಂದು ತಿಂಗಳಾಗುತ್ತಾ ಬಂದಿದೆ. ಒಂದು ದಿನವಾದರೂ ಮನೆ ಬಿಟ್ಟು ಹೊರಗೆ ಹೋಗಲಿಲ್ಲ. ಹಿಂದಿನಂತೆ ಮಾತಿಲ್ಲ

ಕತೆಯಿಲ್ಲ, ನಾಳಿದ್ದು ವಾಪಸ್ಸು ಹೊರಟುಹೋಗ್ತಾರೆ ಅವರನ್ನು ತಡೆಯ ಬೇಕೆಂದುಕೊಂಡು,

''ಈ ಸಾರಿ ನೀವಿಬ್ಬರೇ ಹೋಗಿ, ನನ್ನ ಸೊಸೆಯರು ಇನ್ನೊಂದೆರಡು ತಿಂಗಳು ಇಲ್ಲಿರುತ್ತಾರೆ. ಆಮೇಲೆ ನೀವೇ ಬರಬೇಕು ಕರೆದು ಕೊಂಡುಹೋಗುಕ್ಕೆ'' ಅವರಿಬ್ಬರೂ ಏನೂ ಉತ್ತರಿಸದೇ ಒಳಗೆ ಹೊರಟು ಹೋದರು. ನಳಿನಿ ತನ್ನ ಸೊಸೆಯರನ್ನು ಒಳಗೆ ಕರೆದಳು.

''ನೀವು ಇಬ್ಬರೂ ನಾವು ಬರುಲ್ಲ ಅಲ್ಲಿ ನಮಗೆ ಇಷ್ಟವಿಲ್ಲ ಅಂತ ಹಟ ಮಾಡಿ... ನಿಮ್ಮಾಸೆಗೆ ಇಲ್ಲ ಎನ್ನಲಾರದೇ ಅವರುಗಳು ಇಲ್ಲಿಯೇ ಉಳಿದು ಕೊಳ್ತಾರೆ. ನನಗದೇ ಬೇಕಾಗಿರುವುದು...'' ಅವರಿಬ್ಬರೂ ಉತ್ತರಿಸದೇ ಅತ್ತರು. ನಳಿನಿ ಬೆರಗಾದಳು.

ಅಜಯ ವಿಜಯ ಹೆಂಡತಿಯರನ್ನು ಇಲ್ಲಿಯೇ ಬಿಟ್ಟು ಹೊರಡು ತ್ತಿದ್ದಾರೆಂದು ವಿಶ್ವನಿಗೆ ತಿಳಿಯಿತು. ನಳಿನಿಗೆ ಏನೂ ವಿಷಯ ತಿಳಿದಿರಲಾರ ದೆಂದುಕೊಂಡು ಅವರ ಮನೆಗೆ ಬಂದ. ನಳಿನಿಗೆ ಅವನನ್ನು ಕಂಡು ಬಲ ಬಂದಂತಾಯಿತು. ತನ್ನ ಮಗ ತನ್ನ ಸಹಾಯಕ್ಕಾಗಿ ಬಂದಿದ್ದಾನೆನ್ನುವಂತೆ ಗೆಲುವಾದಳು.

''ಬೇಡಾಂತಾಂದ್ರೂ ಅವರು ನನ್ನ ಮಾತು ಮೀರಿ ಅಮೆರಿಕಕ್ಕೆ ಹೊರಟು ನಿಂತಿದ್ದಾರೆ. ನನಗ್ಯಾಕೋ ಆತಂಕವಾಗುತ್ತೆ. ಮನೇಲಿ ಯಾವುದಾದ್ರೂ ಪೂಜೆ ಪುನಸ್ಕಾರ, ಜಪ ತಪ, ಹೋಮ ಹವನ ಯಾವುದಾದ್ರೂ ಸರಿ ಮಾಡಿಸೋಣ ಅಂತ...ಆದರೆ ಪೃಥ್ವಿಗೆ ಇದರಲ್ಲಿ ನಂಬಿಕೆ ಇಲ್ಲ, ಅಜಯ ವಿಜಯರಿಗೆ ಬೇಕಿಲ್ಲ... ಎಲ್ಲಾ ಸರಿ ಹೋಗುವಂತಹ ಯಾವುದಾದರು ಪೂಜೆಯನ್ನು ನೀನು ನಿಂತು ಮಾಡಿಸಬೇಕು'' ಅಪ್ಪಣೆ ಎಂಬಂತೆ ನುಡಿದಳು.

''ಪೂಜೆ ಹೋಮ ಮಾಡಿಸುವುದು ಒಳ್ಳೆಯದೇ... ನವಗ್ರಹ ಹೋಮ, ಶಾಂತಿ ಅಗತ್ಯವಿದೆ... ಎಲ್ಲರಿಗೂ, ಅದರಲ್ಲೂ ಅಜಯ ವಿಜಯರಿಗೆ...''

''ಅಂಥಾದ್ದೇನಾಗಿದೆ ಅವರಿಗೆ ?....''

''ಅವರ ಆರೋಗ್ಯ ಸರಿಯಿಲ್ಲ...''

''ಏನಾಗಿದೆ ಅವರಿಗೆ ?...'' ನಳಿನಿ ಕಿರುಚಿದಳು. ''ಏನಾಗಿದೆ ಅವರಿಗೆ ಅಂತ ನನಗ್ಯಾಕೆ ಯಾರೂ ಹೇಳಲಿಲ್ಲ'' ನಳಿನಿ ಕುಸಿದು ಕುಳಿತಳು. ವಿಶ್ವ ಸುಮ್ಮನಾದ. ಒಂದು ಗಳಿಗೆಯ ನಂತರ ಮತ್ತೆ ನಳಿನಿ ಕೇಳಿದಳು.

"ಏನಾಗಿದೆ ಅಂತ ನಿನಗೆ ಗೊತ್ತಾ ?"

"ನನಗೂ ಸರಿಯಾಗಿ ಗೊತ್ತಿಲ್ಲ. ಅವರಿಬ್ಬರನ್ನು ಡಾಕ್ಟರ ಹತ್ತಿರ ಕರೆದು ಕೊಂಡು ಹೋಗಿ ಸರಿಯಾಗಿ ತಪಾಸಣೆ ಮಾಡಬೇಕು. ಆಗ ಏನಾಗಿದೆ ಏನಾಗಿಲ್ಲ ಅಂತ ಸರಿಯಾಗಿ ತಿಳಿಯುತ್ತೆ. ನಾನು ನನ್ನ ವೈದ್ಯಕೀಯ ಅನುಭವ ದಿಂದ ಹೇಳ್ತಾ ಇದೀನಿ. ನಾಳೇನೇ ಅವರು ಪ್ರಯಾಣ ಬೆಳೆಸುವುದು ಬೇಡ. ಇನ್ನೊಂದೆರಡು ದಿನ ಕಳೆಯಲಿ, ಅಷ್ಟರಲ್ಲಿ ಡಾಕ್ಟರ ಹತ್ರ ಕರೆದುಕೊಂಡು ಹೋಗಿ ಬಂದು ಮುಂದಿನ ವಿಚಾರ ಯೋಚಿಸೋಣ."

ಇಷ್ಟೆಲ್ಲಾ ಮಾತನ್ನು ಜೀರ್ಣಮಾಡಿಕೊಳ್ಳಲು ಅವಳಿಗೆ ಸಾಕಷ್ಟು ಸಮಯ ಹಿಡಿಯಿತು. ತನ್ನ ಮಕ್ಕಳ ಆರೋಗ್ಯ ಸರಿಯಾಗಿಲ್ಲ, ಅವರಿಗೆ ಏನೋ ಆಗಿದೆ ಎಂಬ ಭಯ ಕಾಡಿಸತೊಡಗಿತು. ಹುಶಾರು ತಪ್ಪಿದವಳಂತೆ ತಳಮಳಗೊಂಡಳು.

ಏನಾಗಿದೆ ತನ್ನ ಮಕ್ಕಳಿಗೆ ? ಅಮೆರಿಕಾಕ್ಕೆ ಹೋಗದೇ ತನ್ನ ಕಣ್ಣೆದುರಿಗೇ ಇದ್ದಿದ್ದರೆ ಸರಿಯಾಗಿರುತ್ತಿದ್ದರು. ನಾನು ಬೇಡಾಂತ ಅಂದರೂ ಪೃಥ್ವಿ ಕಳಿಸಿದ. ಅವನಿಗೆ ಈ ವಿಷಯ ತಿಳಿದಿದೆಯೋ ಇಲ್ಲವೋ ? ನನ್ನಿಂದ ಎಲ್ಲರೂ ಏನನ್ನೋ ಮುಚ್ಚಿಡ್ತಾ ಇದಾರೆ ಎಂಬಸಂದೇಹ ಕಾಡಿತು. ಪೃಥ್ವಿಯೊಡನೆ ಮಾತನಾಡ ಬೇಕೆಂದುಕೊಂಡಳು. ಈಚೆಗೆ ಅವನು ತನ್ನ ಕಡೆ ಗಮನವನ್ನೇ ಕೊಟ್ಟಿಲ್ಲ ಅಂತನ್ನಿಸಿತು. ಪೃಥ್ವಿಯನ್ನು ಮಾತಿಗೆ ಕರೆದಳು.

"ನಾಡಿದ್ದು ನಿನ್ನ ತಮ್ಮಂದಿರು ಅಮೆರಿಕಕ್ಕೆ ಹೊರಡ್ತಾ ಇದಾರೆ. ಈ ಸಲವೂ ನೀನು ತಡೆಯಲಿಲ್ಲ. ಸುಮ್ಮನಾಗಿಬಿಟ್ಟೆ. ಯಾಕೆ... ಅವರು ನಿನ್ನ ಜೊತೆ ಇಲ್ಲಿರುವುದು ನಿನಗೆ ಬೇಡವಾ ?"

"ನಾನೇಕೆ ಬೇಡ ಅನ್ನಲಿ ? ಅವರಿಗೆ ಎಲ್ಲಿ ಖುಷಿಯೋ ಅಲ್ಲಿರುತ್ತಾರೆ... ನಾನು ಎಂದೂ ಅವರ ಖುಷಿಗೆ ಅಡ್ಡಬಂದಿಲ್ಲ" ಅಸಮಾಧಾನದಿಂದ ನುಡಿದ.

"ಅದು ನನಗೂ ಗೊತ್ತು... ಆದರೆ ಅವರು ಹೇಳಿದಂತೆ ಕುಣಿಯ ಬೇಡ. ದೂರದೇಶ. ಎಲ್ಲೆಲ್ಲೋ ಹೋಗಿ, ಅವರ ಆರೋಗ್ಯಾನೇ ಕೆಡಿಸಿ ಕೊಂಡಿದಾರಂತೆ. ನಿನಗೆ ಗೊತ್ತಿದ್ದರೂ ನನಗೇಕೆ ಹೇಳಲಿಲ್ಲ ?" ಪೃಥ್ವಿ ತಲೆತಗ್ಗಿಸಿದ.

"ನೀವುಗಳೆಲ್ಲ ನನ್ನಿಂದ ಏನೋ ಮುಚ್ಚಿಡ್ತಾ ಇದೀರಿ ? ಅವರು ಇಲ್ಲೇ

ನನ್ನ ಕಣ್ಣೆದುರಿಗೇ ಇರಲಿ. ಎಷ್ಟೇ ಖರ್ಚಾದರೂ ಪರವಾಗಿಲ್ಲ, ನಾನು ಅವರುಗಳನ್ನು ಸ್ಪೆಷಲಿಸ್‌ಗೆ ತೋರಿಸುತ್ತೀನಿ. ನಾನು ಮಂಕಾಗಿದಾರಲ್ಲ ಯಾಕೋ ಅಂತ ಅಂದುಕೊಂಡಿದ್ದೆ. ವಿಶ್ವ ಹೇಳದೇ ಇದ್ದಿದ್ದರೆ ಗೊತ್ತಾಗ್ತಾನೇ ಇರಲಿಲ್ಲ'' ಆಕ್ಷೇಪಿಸುವ ಧ್ವನಿಯಲ್ಲಿ ನುಡಿದಳು. ಪೃಥ್ವಿ ಮಾತಾಡಲಿಲ್ಲ.

''ಅದಕ್ಕೇ. ಅವರ ಯೋಗಕ್ಷೇಮಕ್ಕೋಸ್ಕರ ನಾಳೇನೇ ನವಗ್ರಹಶಾಂತಿ ಹೋಮ, ಪೂಜೆ ಮಾಡಿಸೋಣ ಅಂತ. ನೀನೂ ವಿಶ್ವ ನಿಂತು ಎಲ್ಲಾ ಮಾಡಬೇಕು.''

''ಸರಿ, ನಿಮ್ಮ ಇಷ್ಟ ಇದ್ದ ಹಾಗೇ ಆಗಲಿ'' ಒಪ್ಪಿಕೊಂಡ.

''ನನ್ನ ಇಷ್ಟ ಏನೇನು ನೆರವೇರಿದೆ ಈ ಮನೆಯಲ್ಲಿ... ಪೂಜೆ ಪುನಸ್ಕಾರಗಳಲ್ಲಿ ದೈವತಾ ಶಕ್ತಿ ಅಡಗಿರುತ್ತೆ. ಆ ಶಕ್ತಿಯೇ ಎಲ್ಲರನ್ನೂ ಕಾಪಾಡುತ್ತೆ.''

ಈ ಮಾತಿಗೆ ಪೃಥ್ವಿ ಏನನ್ನೂ ಹೇಳಲಿಲ್ಲ. ತಾತ ದೇವರನ್ನು ನಂಬುತ್ತಿದ್ದರು. ಆದರೆ ಆ ಶಕ್ತಿ ನನಗೇಕೆ ವಂಚನೆಯನ್ನು ಮಾಡಿತ್ತು ಎಂದು ಕೇಳಬೇಕೆಂದುಕೊಂಡವನು ಸುಮ್ಮನಾದ. ಈ ವಿಷಯದಲ್ಲಿ ವಿಶ್ವನೂ ವಂಚಿತನೇ. ನಾನೂ ಅವನೂ ಸರಿಸಮಾನರು. ಅದಕ್ಕೇ ನಾವಿಬ್ಬರೂ ಸ್ನೇಹಿತರಾಗಿದ್ದೇವೇನೋ... ಅಂತಂದುಕೊಂಡ. ಸತ್ವವಿಲ್ಲದ ನಗೆ ಕಾಣಿಸಿಕೊಂಡಿತು. ನಳಿನಿ ಇದನ್ನು ಗಮನಿಸಲಿಲ್ಲ. ಅವಳ ಚಿಂತೆ ಅವಳಿಗೆ. ತನಗೆ ಜೀವನದಲ್ಲಿ ಸಾಕಷ್ಟು ಅನುಭವಗಳಾಗಿವೆ. ಹೆಚ್ಚು ಕಹಿ ಅನುಭವಗಳೇ. ಇನ್ನೂ ಏನೇನು ಆಗಬೇಕಾಗಿದೆಯೋ... ಯಾಕೆ ಹೀಗಾಯಿತು ? ತಪ್ಪು ಯಾರದು ? ಎದೆ ಭಾರವಾಯಿತು.

* * * *

ನವಗ್ರಹದ ಹೋಮ, ಶಾಂತಿಗಾಗಿ ಎಲ್ಲ ಸಿದ್ಧತೆಗಳನ್ನು ವಿಶ್ವನೇ ಮಾಡಿದ. ಪೃಥ್ವಿ ಅವನಿಗೆ ಸಹಾಯಕನಾಗಿದ್ದ. ವಿಶ್ವನ ಪರಿಚಯದ ಪುರೋಹಿತರು ತಮ್ಮವರೊಂದಿಗೆ ಬಂದಿದ್ದರು. ನಳಿನಿಯಾಗಲೀ ಪೃಥ್ವಿಯಾಗಲೀ ಹೇಳದಿದ್ದರೂ ರೂಪಿಣಿ ಬಂದಿದ್ದಳು. ಸಡಗರದಿಂದ ಮನೆಯವಳಂತೆ ಓಡಾಡುತ್ತಿದ್ದವಳನ್ನೇ ನಳಿನಿ ಗಮನಿಸುತ್ತಿದ್ದಳು. ಉತ್ಸಾಹದ ಚಿಲುಮೆಯಾಗಿದ್ದಾಳೆ ಈ ರೂಪಿಣಿ. ಅವಳ ಚೆಲುವು ಇಮ್ಮಡಿಗೊಂಡಿದೆ. ಅವಳ ಈ ಖುಷಿಗೆ ಏನು ಕಾರಣವಿರಬಹುದು. ನಳಿನಿಯ ಅನುಭವದ

ಕಣ್ಣುಗಳು ರೂಪಿಣಿಯ ಮೈಮೇಲೆ ಹರಿದಾಡಿದವು. ಕಾರಣ ಸ್ಪಷ್ಟವಾಯಿತು. ರೂಪಿಣಿ ಗರ್ಭಿಣಿ ! ನಳಿನಿ ಅಸೂಯೆಗೊಂಡಳು. ಏಕೋ ಏನೋ ಅಹಿತವೆನಿಸಿತು.

ರೂಪಿಣಿಗೆ ಮದುವೆಯಾಗಿಲ್ಲ ಎನ್ನುವುದು ಖಂಡಿತಾ... ಪೃಥ್ವಿ ಮನಸ್ಸು ಮಾಡಿದ್ದರೆ ಇವಳು ನನ್ನ ಸೊಸೆಯಾಗಿರುತ್ತಿದ್ದಳು. ಇವಳ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಮಗು ನನ್ನ ಮೊಮ್ಮಗುವಾಗಿರುತ್ತಿತ್ತು. ಆದರೆ ಆ ಯೋಗ ನನಗೆಲ್ಲಿ ? ಮದುವೆಯಾಗುವುದಿಲ್ಲವೆಂದು ಹಠ ಮಾಡುತ್ತಾನೆ. ಅಜಯವಿಜಯರ ಪತ್ನಿಗೆ ಇನ್ನೂ ಮಕ್ಕಳಾಗುವ ಯೋಗ ಕೂಡಿಬಂದಿಲ್ಲ. ಎಲ್ಲರಿಗೂ ಏನೋ ನಿರುತ್ಸಾಹ... ಏನೋ ಕೊರಗು... ಮಕ್ಕಳಾಗುವ ಕಾಲದಲ್ಲಿ ಆಗಿಬಿಟ್ಟರೆ ಆ ಆನಂದವೇ ಬೇರೆ... ಮೇನಕಾ ರೇವತಿಯರು ಏಕೆ ಸುಮ್ಮನಿದ್ದಾರೋ... ಅವರಿಬ್ಬರಿಗೆ ಈ ರೂಪಿಣಿ ಗರ್ಭಿಣಿ ಎಂದು ತಿಳಿದಿಲ್ಲವೇ ?

ರೂಪಿಣಿಯ ಈ ಮಗುವಿನ ತಂದೆ ಯಾರಿರಬಹುದು ? ಪೃಥ್ವಿಯಂತಹ ಶ್ರೀಮಂತಯುವಕನನ್ನು ಬಲೆಗೆ ಹಾಕಿಕೊಳ್ಳುವ ಆಸೆ ಹೊತ್ತವಳು... ತನಗೆ ತಿಳಿಯದಂತೆ ಅವರಿಬ್ಬರ ಮಧ್ಯೆ ಸಂಬಂಧವಿರಬಹುದೇ ? ಛೇ... ಪೃಥ್ವಿ ಅಂತಹವನಲ್ಲ. ಅವನ ಬಗ್ಗೆ ತಾನು ಸಂಶಯ ಪಡಲೇಬಾರದು. ಬಹುಶಃ ವಿಶ್ವನಿರಬಹುದೇ... ವಿಶ್ವನೊಡನೆ ಅತಿ ಸಲುಗೆಯಿಂದ ಇದ್ದಾಳೆ.... ಆದರೆ ಶ್ರೀಮಂತನಲ್ಲದ, ವಿದ್ಯಾವಂತನಲ್ಲದ ವಿಶ್ವನೊಡನೆ ಹೀಗೆ ಸಂಬಂಧವಿಟ್ಟು ಕೊಂಡಿರಬಹುದೇ...? ಹಾಗೇನಾದರೂ ಇದ್ದರೆ ಅದಕ್ಕೆ ಏನೋ ಪ್ರಬಲವಾದ ಕಾರಣವಿರಬೇಕು ಎಂದುಕೊಂಡಳು.

ನವಗ್ರಹ ಶಾಂತಿ ಹೋಮ, ಶ್ರೀ ಸತ್ಯನಾರಾಯಣ ವ್ರತ, ಕಥೆ ಎಲ್ಲಾ ಸಾಂಗವಾಗಿ ನೆರವೇರಿತು. ಆದರೆ ಯಾರಿಗೂ ಅದರ ಬಗ್ಗೆ ಹೆಚ್ಚಿನ ಆಸಕ್ತಿಯಿಲ್ಲ. ಎಲ್ಲರೂ ಅವರವರ ಸ್ವಂತ ಚಿಂತೆಗಳಲ್ಲಿ ಮುಳುಗಿಹೋಗಿದ್ದಾರೆ.

ಯಥಾವತ್ತಾಗಿ ಶಾಸ್ತ್ರೋಕ್ತವಾಗಿ ಪೂಜೆಯನ್ನು ಮಾಡಿ, ನೆರವೇರಿಸಿ ದಾನ ದಕ್ಷಿಣೆಗಳನ್ನು ಪಡೆದು ಊಟದ ನಂತರ ಸಂತೃಪ್ತಿಯಿಂದ ಪುರೋಹಿತರು ಹೊರಟರು. ಇದ್ದಕ್ಕಿದ್ದಂತೆ ಏನೋ ಹೊಳೆದವಳಂತೆ ನಳಿನಿ ಪ್ರಶ್ನಿಸಿದಳು.

''ನನ್ನ ಮಕ್ಕಳು ಮಂಕಾಗಿಬಿಟ್ಟಿದ್ದಾರೆ. ಇದ್ದಕ್ಕಿದ್ದಂತೆ ಅವರಿಗೆ ಏನಾಯಿತು ಅಂತ ಯಾರಿಗೂ ತಿಳಿಯದು. ನಾಳೆ ಅಮೆರಿಕಾಕ್ಕೆ ಹೊರಟಿದ್ದಾರೆ. ನನಗೇಕೋ

ಮನಸ್ಸಿಗೆ ಸಮಾಧಾನವಿಲ್ಲ. ಏನು ಕಾರಣವಿರಬಹುದು ನೀವಾದರೂ ಹೇಳ್ತೀರಾ ?''

''ಜ್ಯೋತಿಷ್ಯ ಏನು ಹೇಳುತ್ತೇಂತ ಅಷ್ಟನ್ನು ಮಾತ್ರ ನಾನು ಹೇಳಬಲ್ಲೆ. ಅವರಿಬ್ಬರ ಜಾತಕ ಬರೆಸಿದ್ದರೆ ಕೊಡಿ, ಹೇಳ್ತೀನಿ'' ಅಂತ ಮತ್ತೆ ಕೂತರು. ವಿಶ್ವ ಪೃಥ್ವಿ ಮುಖ ಮುಖ ನೋಡಿಕೊಂಡರು. ನಳಿನಿ ಅಜಯ ವಿಜಯರ ಜಾತಕದ ಪ್ರತಿಗಳೊಂದಿಗೆ ಮೇನಕ, ರೇವತಿಯರ ಜಾತಕವನ್ನೂ ತಂದಿತ್ತಳು. ತನಗೆ ಇದರಲ್ಲೆಲ್ಲಾ ನಂಬಿಕೆಯಿಲ್ಲವೆನ್ನುವಂತೆ ಅಲ್ಲಿಂದ ಹೊರಬಂದ. ಆದರೆ ವಿಶ್ವ ಕುತೂಹಲದಿಂದ ಅಲ್ಲೇ ಉಳಿದ.

ಕೂಲಂಕುಷವಾಗಿ ಜಾತಕವನ್ನು ಪರಿಶೀಲಿಸಿದ ಜೋಯಿಸರು ಸಾವಧಾನವಾಗಿ ನುಡಿದರು. ''ಅವರಿಬ್ಬರ ಗ್ರಹಗತಿ ಏನೇನೂ ಚೆನ್ನಾಗಿರಲಿಲ್ಲ. ನೀವು ನವಗ್ರಹ ಶಾಂತಿ ಮಾಡಿಸಿದ್ದು ಒಳ್ಳೆಯದೇ ಆಯಿತು. ಕ್ರಮೇಣ ಎಲ್ಲಾ ಸರಿಹೋಗುತ್ತೆ.''

''ಅಂದರೆ, ನನ್ನ ಮಕ್ಕಳ ಆರೋಗ್ಯ ಸರಿ ಹೋಗುತ್ತಾ ?''

''ಸರಿ ಹೋಗಬಹುದು. ಆದರೆ ಅದರಿಂದ ಯಾರಿಗೂ ತೊಂದರೆ ಏನಿಲ್ಲ. ಆದರೆ ಅದಕ್ಕೆ ಸಂಬಂಧಪಟ್ಟ ವೈದ್ಯರಿಗೆ ತೋರಿಸುವುದು ಒಳ್ಳೆಯದು'' ಎಂದಾಗ ನಳಿನಿ ಬೆವತುಹೋದಳು....

''ನನ್ನ ಸೊಸೆಯರಿಗೆ ಯಾವಾಗ ಮಕ್ಕಳಾಗುತ್ತವೆ...?'' ಮತ್ತೆ ಪ್ರಶ್ನಿಸಿದಳು.

''ಇನ್ನು ಒಂದು ವರ್ಷದೊಳಗೆ ನೀವು ಅಜ್ಜಿಯಾಗ್ತೀರಿ...'' ಎಂದು ಪುರೋಹಿತರು ನಸುನಗುತ್ತ ನುಡಿದರೂ ನಳಿನಿಗೆ ಸಮಾಧಾನವಾಗಲಿಲ್ಲ. ಪುರೋಹಿತರು ಅಪ್ಪಣೆ ಪಡೆದು ಹೊರಟುಹೋದರು. ನಳಿನಿ ಬಲವಂತವಾಗಿ ವಿಶ್ವನನ್ನು ಉಳಿಸಿಕೊಂಡಳು.

''ನೀನು ನಿನಗೆ ನೀನೇ ವೈದ್ಯ ಅಂತ ಹೇಳಿಕೊಳ್ತೀಯಾ... ನಿನ್ನ ತಮ್ಮಂದಿರಿಗೆ ಏನಾಗಿರಬಹುದು ಅಂತ ಗೊತ್ತಾಗಲಿಲ್ಲವಾ ! ಗೊತ್ತಾಗದೇ ಇದ್ದರೆ ಯಾರಾದರೂ ಸ್ಪೆಷಲಿಸ್ಟ್‌ಗೆ ತೋರಿಸಬೇಕು. ನೀನಾಗಲೀ, ಪೃಥ್ವಿಯಾಗಲೀ ಅವರಿಬ್ಬರನ್ನು ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗಿ ತೋರಿಸಿ, ಏನು ವಿಷಯ ತಿಳಿದುಕೊಳ್ಳಲೇಬೇಕು. ಇಲ್ಲದಿದ್ದರೆ ನಾನು ಅವರಿಬ್ಬರೂ ಮತ್ತೆ ಅಮೆರಿಕಕ್ಕೆ ಹೋಗಲು ಬಿಡುವುದಿಲ್ಲ.... ಉಪವಾಸ ಸತ್ಯಾಗ್ರಹ ಮಾಡ್ತೀನಿ... ಆಗಲೇ ನಿಮಗೆಲ್ಲ ಬುದ್ಧಿಬರುವುದು.''

"ನನ್ನನ್ನೇನು ಹೆದರಿಸಬೇಕಾಗಿಲ್ಲ. ಆದರೂ ನನಗೆ ತಿಳಿದಿರುವ ವಿಷಯ ವನ್ನು ತಿಳಿಸ್ತೀನಿ... ನಿಮ್ಮ ಮಕ್ಕಳು ಅವರ ಪತ್ನಿಯರಿಗೆ ಡೈವೋರ್ಸ್ ಕೊಡ ಬೇಕೊಂತ ನಿರ್ಧರಿಸಿದಾರೆ. ಅವರು ಅಮೆರಿಕಾಕ್ಕೆ ಹೋಗಿ ಅಲ್ಲೇ ನೆಲಸುತ್ತಾರಂತೆ."

"ಡೈವೋರ್ಸಾ...? ಯಾಕೆ ?" ಅವಳು ವ್ಯಥೆಗೊಂಡಿದ್ದಳು.

"ಕಾರಣ ಏನೂಂತ ಸರಿಯಾಗಿ ಹೇಳುವುದಿಲ್ಲ. ಬಹುಶಃ ನಿಮ್ಮ ಸೊಸೆಯರಿಗೆ ಮಕ್ಕಳಾಗುವ ಯೋಗ ಇಲ್ಲಾಂತ ಕಾಣುತ್ತೆ."

"ಅದ್ಹೇಗೆ ಹೇಳ್ತೀಯಾ ? ಈಗ ತಾನೇ ಶಾಸ್ತ್ರಿಗಳು ಇನ್ನೊಂದು ವರ್ಷದಲ್ಲಿ ಮೊಮ್ಮಕ್ಕಳಾಗುತ್ತವೆ ಅಂತ ಹೇಳಿದ್ರಲ್ಲ."

"ಜ್ಯೋತಿಷ್ಯ ಎಲ್ಲಾ ಕಾಲದಲ್ಲಿಯೂ ಎಲ್ಲರ ವಿಷಯದಲ್ಲಿಯೂ ನಿಜವಾಗುತ್ತೇಂತ ಹೇಗೆ ಹೇಳೋಕ್ಕಾಗುತ್ತೆ. ನಿಮ್ಮ ಸಮಾಧಾನಕ್ಕೆ ಅವರು ಹಾಗೆ ಹೇಳಿರಬಹುದು ಅಲ್ವಾ ?..."

"ಏನೇ ಇರಲಿ, ನನ್ನ ಸೊಸೆಯರಿಗೆ ಮಕ್ಕಳಾಗುವ ಯೋಗ್ಯತೆ ಇಲ್ಲದಿದ್ದರೆ ನಾನು ಅಜಯ ವಿಜಯರಿಗೆ ಮತ್ತೆ ಮದುವೆ ಮಾಡ್ತೀನಿ. ಈ ವಂಶ ಮುಂದುವರಿಯಬೇಡವೇ ? ಇಲ್ಲದಿದ್ದರೆ ನಾನು ಈ ಮನೆಗೆ ದ್ರೋಹ ಮಾಡಿದಂತಾಗುತ್ತದೆ..."

"ಅಜಯ ವಿಜಯರಿಗೇ ಮಕ್ಕಳಾಗುವ ಸಾಧ್ಯತೆ ಇಲ್ಲದಿದ್ದರೆ... ?"

"ಏನು ಹೇಳ್ತಿದೀಯ ನೀನು ? ನಿನ್ನ ಜ್ಞಾನ ನೆಟ್ಟಗಿದೆ ತಾನೇ ...?"

"ನಾನು ಸರಿಯಾಗಿಯೇ ಇದೀನಿ... ನನಗೆ ದ್ರೋಹ ಮಾಡಿ ಈ ವಂಶ ವನ್ನು ಬೆಳಸುವ ಆಸೆಯಿಂದ ಈ ಮನೆಗೆ ಬಂದು ಸೇರಿಕೊಂಡೆ. ಈಗ ನಿಮ್ಮ ಮಕ್ಕಳಿಂದಲೇ ನಿಮ್ಮ ವಂಶಕ್ಕೆ ದ್ರೋಹವಾಗುತ್ತಿದೆ. ಅವರಿಗೆ ಮಕ್ಕಳಾಗುವ ಸಾಧ್ಯತೆ ಇಲ್ಲ. ಹಾಗಂತ ಡಾಕ್ಟರ್ ಹೇಳಿದ್ದಾರಂತೆ..." ಮುಖದ ಬಣ್ಣ ಕೆಟ್ಟುಹೋಯಿತು. ಮಕ್ಕಳಂತೆ ತಲೆಯ ಮೇಲೆ ಕೈ ಹೊತ್ತಳು. "ಇದೆಲ್ಲಾ ನಿನಗೆ ಹೇಗೆ ಗೊತ್ತಾಯಿತು ? ನನ್ನನ್ನು ಮತ್ತೆ ಹೀಯಾಳಿಸಿ ಆಡುಕ್ಕೆ ನಿನಗೆ ಅವಕಾಶ ಸಿಕ್ಕಿತು ಅಲ್ವಾ ?" ಅತ್ತಳು.

"ಈಗ ಅತ್ತರೆ ಏನೂ ಪ್ರಯೋಜನವಿಲ್ಲ. ನಿಮ್ಮ ಮಕ್ಕಳು ಒಂದಲ್ಲಾ ನಾಲ್ಕು ನಾಲ್ಕು ಮದುವೆಯಾದರೂ ಅವರಿಗೆ ಮತ್ತೆ ಮಕ್ಕಳಾಗುವುದಿಲ್ಲ. ನಿಮ್ಮ

ಸೊಸೆಯರು ಡೈವೋರ್ಸ್ ತಗೊಂಡು ಹೊರಟುಹೋದರೆ, ಆಗ ? ಆಗ ಏನು ಮಾಡ್ತೀರಿ ?''

ವಿಶ್ವನ ಕಪಾಳಕ್ಕೆ ಹೊಡೆಯಬೇಕೆನಿಸಿತ್ತು. ಆದರೆ ತನಗಿಂತ ಎತ್ತರಕ್ಕೆ ಬೆಳೆದು ನಿಂತವನ ಮೇಲೆ ಕೈ ಮಾಡಲಾರಳು. ವಿಶ್ವ ಹೊರಬಂದ.

* * * *

ಇಷ್ಟೆಲ್ಲ ಮಾತುಕತೆ ನಡೆಯುವಾಗ ಅಜಯ ವಿಜಯರು ಒಂದು ತೀರ್ಮಾನಕ್ಕೆ ಬಂದಿದ್ದರು. ವಿಶ್ವನೊಡನೆ ಮಾತನಾಡಿದರು.

''ನಾವು ಹೇಗೂ ಅಮೆರಿಕಕ್ಕೆ ಹೊರಟುಹೋಗ್ತೇವೆ. ಮತ್ತೆ ವಾಪಸ್ಸು ಎಂದಿಗೆ ಬರುತ್ತೇವೋ... ನಮಗೆ ಅಲ್ಲೇ ಸೆಟ್ಲ್ ಆಗುವ ಆಸೆ. ಯಾಕೆಂದರೆ ಅಲ್ಲಿಯ ಜನಜೀವನ ಒಗ್ಗಿಹೋಗಿದೆ. ಅಲ್ಲಿಯ ಒಬ್ಬರ ವಿಷಯಕ್ಕೆ ಇನ್ನೊಬ್ಬರು ಬರುವುದಿಲ್ಲ. ಅವರವರ ಪಾಡು ಅವರಿಗೆ. ಇಲ್ಲಿ ಹಾಗಲ್ಲ... ನಮ್ಮ ನಿರ್ಧಾರದಿಂದ ನಮ್ಮ ತಾಯಿಗೆ ನೋವಾಗುತ್ತೆ... ಆದರೆ ವಿಧಿ ಇಲ್ಲ. ಅದಕ್ಕೆ ಕಾರಣ ಏನೂಂತ ತಿಳಿಸುವುದು ಸುಲಭವಲ್ಲ. ಆದರೂ ತಿಳಿಸಲೇ ಬೇಕಾಗಿದೆ.... ನೀವೂ ಡಾಕ್ಟರು ಆಗಿರುವುದರಿಂದ ನಿಮಗೆ ಅರ್ಥವಾಗ ಬಹುದು... ಆದರೆ ಇಲ್ಲಿ ಯಾವ ಮಾತೂ ಬೇಡ. ಹೊರಗೆ ಎಲ್ಲಾದರೂ ಕೂತು ಮಾತಾಡೋಣ'' ಎಂದರು. ವಿಶ್ವ ಒಪ್ಪಿದ. ಆದರೆ ನುಡಿದ.

''ಯಾವುದೇ ವಿಷಯ ನನಗೆ ತಿಳಿಯುವುದು ಎಷ್ಟು ಮುಖ್ಯವೋ ಪೃಥ್ವಿಗೂ ತಿಳಿಯುವುದು ಅಷ್ಟೇ ಮುಖ್ಯ. ಅವರಿಗೇಕೆ ಏನನ್ನೂ ಹೇಳಿಲ್ಲ... ?''

''ಅವರ ಮೇಲೆ ನನಗೆ ತುಂಬಾ ಗೌರವ. ಅಲ್ಲದೇ ಅವರು ತುಂಬಾ ನೊಂದುಕೊಳ್ಳುತ್ತಾರೆ...''

''ಒಂದಲ್ಲ ಒಂದು ದಿನ ಅವರಿಗೂ ತಿಳಿಯಬೇಕಲ್ಲವೇ...?''

''ಅದು ನಿಜ... ನಾವು ಅತ್ತ ಹೋದ ಮೇಲೆ ತಿಳಿಸಿ... ನಾವು ಬಂದಾಗಲೇ ತಿಳಿಸಿದ್ದರೆ, ಇದುವರೆಗೂ ಈ ಮನೆಯಲ್ಲಿರಲು ಆಗುತ್ತಿರಲಿಲ್ಲ.... ನಮಗೆ''

''ಆದರೂ ಈಗ ಪೃಥ್ವಿಗೂ ಈ ವಿಷಯ ತಿಳಿಯುವುದು ಅಗತ್ಯ. ನಡೆಯಿರಿ. ನಾವು ಅವನ ಆಫೀಸಿನಲ್ಲೇ ಕೂತು ಮಾತನಾಡೋಣ...''

''ಬೇಡ... ಬೇಡ...'' ಎನ್ನುತ್ತಾ ಅವರಿಬ್ಬರೂ ಅವನ ಕೈ ಹಿಡಿದರು.

''ನಿಮ್ಮ ಪರಿಚಯದ ಯಾರಾದರೂ ಡಾಕ್ಟರರ ಬಳಿ ಹೋಗೋಣ. ನಮ್ಮ ಫ್ಯಾಮಿಲಿ ಡಾಕ್ಟರ್ ಬೇಡ, ಈಗ ಬಂದೆ...'' ಎನ್ನುತ್ತಾ ಅಜಯ ಒಳಗಿನಿಂದ ಏನೋ ಒಂದು ಫೈಲ್ ಹಿಡಿದುಕೊಂಡು ಬಂದ. ವಿಶ್ವ ಅವರಿಬ್ಬರನ್ನೂ ತನ್ನ ಪರಿಚಯದ ಡಾಕ್ಟರೊಬ್ಬರ ಬಳಿಗೆ ಕರೆದುಕೊಂಡು ಹೋದ. ಡಾಕ್ಟರರ ಬಳಿ ಅಜಯವಿಜಯರು ಇಂಗ್ಲೀಷಿನಲ್ಲಿ ಮಾತನಾಡಿ, ತಮ್ಮ ಮೆಡಿಕಲ್ ರಿಪೋರ್ಟ್‌ನ್ನು ಅವರ ಮುಂದಿಟ್ಟರು.... ಡಾಕ್ಟರರ ಮುಖ ಗಂಭೀರವಾಯಿತು.

''ಇದು ಸರಿಯಾಗಿಲ್ಲ ಅಂತ ನಿಮಗೆ ಅನುಮಾನವಿದ್ದರೆ, ನಾವು ಮತ್ತೊಮ್ಮೆ ನಿಮ್ಮ ರಕ್ತ ಪರೀಕ್ಷೆ ಮಾಡುತ್ತೇವೆ'' ಎಂದರು.

''ನಾವು ಅಮೆರಿಕಾದಲ್ಲೇ ರಕ್ತಪರೀಕ್ಷೆ ಮಾಡಿಸಿಕೊಂಡಿರುವುದರಿಂದ ನಮಗೆ ಏನೂ ಸಂದೇಹವಿಲ್ಲ. ಆದರೆ ನಮ್ಮ ಮನೆಯವರ ಮನದಟ್ಟಾಗ ಬೇಕಾದರೆ, ಮತ್ತೊಮ್ಮೆ ರಕ್ತ ಪರೀಕ್ಷೆ ಮಾಡಿಸಿಕೊಳ್ಳುವುದು ನಮಗೆ ಅಭ್ಯಂತರವೇನಿಲ್ಲ''

''ಆಗಲಿ, ಮತ್ತೊಮ್ಮೆ ರಕ್ತ ಪರೀಕ್ಷೆ ಮಾಡಿಸುವುದು ಸರಿ. ಹೋಗಿ ಅಲ್ಲಿ ಒಳಗೆ ಹೋಗಿ, ನಿಮ್ಮ ರಕ್ತದ ಸ್ಯಾಂಪಲ್ ತಗೊಳ್ಳುತ್ತಾರೆ'' ಎಂದು ಒಳಗೆ ಕಳಿಸಿದರು. ವಿಶ್ವ ಡಾಕ್ಟರನ್ನೇ ನೋಡುತ್ತಿದ್ದ. ಅವರತ್ತ ಹೋದ ಕೂಡಲೇ ಕೇಳಿದ. ''ಏನಾಗಿದೆ ಅವರಿಗೆ ? ರಕ್ತ ಪರೀಕ್ಷೆ ಏಕೆ ?''

ವಿಶ್ವನಿಗೆ ಏನೂ ಅರ್ಥವಾಗಿಲ್ಲ. ಅವರುಗಳೂ ಹೇಳಿಲ್ಲವೆನ್ನುವುದನ್ನು ತಿಳಿದರು. ''ಅವರ ರಕ್ತದಲ್ಲಿ ಏಡ್ಸ್ ರೋಗವನ್ನುಂಟು ಮಾಡುವ ಎಚ್.ಐ.ವಿ.ಯ ರೋಗಾಣುಗಳು ಸೇರಿಕೊಂಡು ಅವರ ರಕ್ತ ಕಲುಷಿತ ಗೊಂಡಿದೆ...'' ಕನ್ನಡದಲ್ಲಿ ವಿವರಿಸಿದರು.

ವಿಶ್ವ ಕಲ್ಲಾದ. ತನ್ನ ತಮ್ಮಂದಿರು ಏಡ್ಸ್ ಎಂಬ ಭಯಂಕರ ರೋಗಕ್ಕೆ ಬಲಿಯಾಗಲಿದ್ದಾರೆ. ಏಡ್ಸ್ ಎಂದರೇನು ಅಂತ ಅರ್ಥವಾಗದಷ್ಟು ಮೂಢನಲ್ಲ. ಆ ಖಾಯಿಲೆಯ ಲಕ್ಷಣಗಳನ್ನು ಕುರಿತು, ಅನೇಕ ಜಾಹಿರಾತುಗಳನ್ನು ಓದಿದ್ದ. ಮುನ್ನೆಚ್ಚರಿಕೆಯ ಜಾಗ್ರತಾಕ್ರಮಗಳ ಬಗ್ಗೆ ಓದಿದ್ದ. ಏಡ್ಸ್ ರೋಗಿಗಳ ಮಾನಸಿಕ, ದೈಹಿಕ ಅನಾರೋಗ್ಯಗಳನ್ನು ಕುರಿತು ಪ್ರಕಟಗೊಂಡ ಲೇಖನಗಳನ್ನು ಓದಿದ್ದ. ಏಡ್ಸ್ ರೋಗಕ್ಕೆ ಇದುವರೆಗೂ ಸರಿಯಾದ ಯಾವುದೇ ಔಷಧಿಯನ್ನು ಕಂಡು ಹಿಡಿಯಲಾಗಿಲ್ಲ... ಆದ್ದರಿಂದ ಗಂಡಸು ಹೆಂಗಸರ ದೈಹಿಕ ಸಂಬಂಧದಲ್ಲಿ ಅತಿ ಎಚ್ಚರಿಕೆ ಇರಬೇಕು. ರಕ್ತಕ್ಕೆ

ಎಚ್.ಐ.ವಿ. ಸೋಂಕು ತಗಲುವ ಬಗ್ಗೆ ಆಸ್ಪತ್ರೆಗಳಲ್ಲಿ ಇಂಜೆಕ್ಷನ್ ಕೊಡುವಾಗ, ರಕ್ತ ಪರೀಕ್ಷೆ ಮಾಡಿಸಿಕೊಳ್ಳುವಾಗ, ರಕ್ತದಾನ ಮಾಡುವಾಗ, ಆದಷ್ಟೂ ಜಾಗರೂಕರಾಗಿರಬೇಕೆಂಬ ಫಲಕಗಳನ್ನು ಓದಿದ್ದ... ಆದರೆ ಈಗ ? ಇದ್ದಕ್ಕಿದ್ದಂತೆ ಅವನ ಶರೀರಾದ್ಯಂತ ಯಾವುದೋ ಭಯ ಆವರಿಸಿ ಕೊಂಡಿತು.... ಮೈ ಬೆವರಿನಿಂದ ತೋಯ್ದು ಹೋಗಿತ್ತು. ತನ್ನ ತಮ್ಮಂದಿರಿಗೆ ಏಡ್ಸ್ ರೋಗದ ಸೋಂಕು... ಹೇಗೆ, ಎಲ್ಲಿಂದ, ಯಾವಾಗ ಇವರಿಗೆ ಹತ್ತಿತು ? ಸ್ವೇಚ್ಛೆಯಾಗಿ ವಿಹರಿಸುವವರಿಗೆ ಏಡ್ಸ್ ರೋಗ ಬರುವ ಸಾಧ್ಯತೆ ಇರುತ್ತದೆ ಅನ್ನುತ್ತಾರೆ. ಅಮೆರಿಕಾದಲ್ಲಿ ಕ್ಲಬ್ಬು, ಕ್ಯಾಬರೇ... ಅದೂ ಇದೂ ಅಂತ ಏನೇನು ಸಹವಾಸ ಮಾಡಿದ್ದಾರೋ... ಎಷ್ಟಾಗಲೀ ಪಾಶ್ಚಾತ್ಯ ಸಂಸ್ಕೃತಿಯ ಆಕರ್ಷಣೆಯೇ ಬೇರೆ... ಆದರೆ ಈಗೀಗ ಭಾರತದಲ್ಲೂ ಅನೇಕ ಏಡ್ಸ್ ರೋಗಿಗಳಿದ್ದಾರೆಂದು, ಕಂಡುಹಿಡಿದಿದ್ದಾರೆಂದು ಎಷ್ಟೋ ಪತ್ರಿಕೆಗಳಲ್ಲಿ ಪ್ರಕಟವಾಗಿದೆ... ಲಕ್ಷಾಂತರ ಮಂದಿ ಏಡ್ಸ್ ಖಾಯಿಲೆಯ ರೋಗಿಗಳು ಒಟ್ಟಿಗೇ ಒಂದೇ ಸಲಕ್ಕೆ ಹುಟ್ಟುವುದಿಲ್ಲ. ಅನೇಕ ವರ್ಷಗಳಿಂದ ನಿಧಾನವಾಗಿ ಜನರಲ್ಲಿ ಹರಡಿ, ರೋಗಿಗಳ ಸಂಖ್ಯೆ ಹೆಚ್ಚಾಗಿರಬಹುದು... ಏಡ್ಸ್ ರೋಗಕ್ಕೆ ಕಾರಣ ವಾದ ಎಚ್. ಐ. ವಿ. ರೋಗಾಣುಗಳು ರಕ್ತದಲ್ಲಿ ಬೀಡು ಬಿಟ್ಟು, ದೇಹವನ್ನೆಲ್ಲಾ ಆಕ್ರಮಿಸಿ, ರೋಗ ನಿರೋಧಕ ಶಕ್ತಿಯನ್ನು ನಾಶ ಮಾಡಿ, ಆ ವ್ಯಕ್ತಿ ಸಾವಿಗೆ ಕಾರಣವಾಗುತ್ತದೆ, ಎನ್ನುವುದನ್ನ ಬಲ್ಲ.... ಈಗ... ಈಗ, ಅಜಯ ವಿಜಯರೇ ಈ ಭಯಂಕರ ರೋಗಕ್ಕೆ ಬಲಿಯಾಗಲಿದ್ದಾರೆ... ನಿಧಾನವಾಗಿ... ದಿನೇ ದಿನೇ... ಡಾಕ್ಟರ ಧ್ವನಿ ಅವನನ್ನು ಎಚ್ಚರಿಸಿತು. ಬೆಚ್ಚಿ ಬಿದ್ದು ಇತ್ತ ತಿರುಗಿದ.

''ಈಗಾಗಲೇ ಅವರಿಬ್ಬರನ್ನು ಏಡ್ಸ್ ರೋಗಿಗಳೆಂದು ಪರಿಗಣಿಸ ಲಾಗುವುದಿಲ್ಲ. ಮನಸ್ಸಿಗೆ ತುಂಬಾ ಬೇಜಾರಾಗಿರುತ್ತದೆಯೇ ಹೊರತು, ದಿನನಿತ್ಯದ ಯಾವುದೇ ಚಟುವಟಿಕೆಗಳಿಗೆ ಅಥವಾ ಉದ್ಯೋಗಕ್ಕೆ ಯಾವುದೇ ತೊಂದರೆ ಬರುವುದಿಲ್ಲ. ಆದರೆ ಇವರಿಬ್ಬರೂ ಮದುವೆ ಮಾಡಿಕೊಂಡರೆ, ಮುಂದೆ ಅವರವರ ಪತ್ನಿಯರಿಗೆ, ಹುಟ್ಟುವ ಮಕ್ಕಳಿಗೆ ಈ ರೋಗಾಣುಗಳು ತಗಲುವ ಸಂಭವವಿದೆ... ಆದ್ದರಿಂದ ಜಾಗರೂಕರಾಗಿರಬೇಕು.''

ವಿಶ್ವ ನಡುಗಿದ. ''ಇಬ್ಬರಿಗೂ ಈಗ ಒಂದು ವರ್ಷದ ಕೆಳಗೆ ಮದುವೆ ಯಾಯಿತು.... ಹಾಗಾದರೆ ಅವರುಗಳಿಗೂ ಸೋಂಕು ತಗುಲಿರಬಹುದೇ..?

''ಅವರಿಬ್ಬರೂ ರಕ್ತ ಪರೀಕ್ಷೆ ಮಾಡಿಸಿಕೊಳ್ಳುವುದು ಒಳ್ಳೆಯದು... ಮಕ್ಕಳಾಗದಂತೆ ಎಚ್ಚರಿಕೆ ವಹಿಸಿದರೆ... ಅದೂ ಒಳ್ಳೆಯದೇ...'' ವಿಶ್ವ ಪೆಚ್ಚಾಗಿದ್ದ.

''ನೀವು ಇಷ್ಟು ಆತಂಕ ಪಡುವ ಕಾರಣವಿಲ್ಲ. ಈಗ ಇದು ವಿಶ್ವದ ಎಲ್ಲಾ ದೇಶದಲ್ಲೂ, ಲಕ್ಷಾಂತರ ಜನಗಳಲ್ಲಿ ಈ ರೋಗದ ಮುನ್ಸೂಚನೆ ಕಂಡಿದೆ. ಅವಿವೇಕದಿಂದ ಅಜ್ಞಾನದಿಂದ ಇದು ದಿನ ದಿನ ವೇಗವಾಗಿ ಒಬ್ಬರಿಂದ ಒಬ್ಬರಿಗೆ ಹರಡುತ್ತಿದೆ ಅಷ್ಟೇ...'' ಅಷ್ಟರಲ್ಲಿ ಅಜಯ ವಿಜಯರು ಮತ್ತೆ ಆ ಕೋಣೆಗೆ ಬಂದಿದ್ದರು... ಮತ್ತೊಮ್ಮೆ ಡಾಕ್ಟರು ಅವರಿಗೆ ತಿಳುವಳಿಕೆ, ಸಲಹೆ ನೀಡಿದರು.

''ನಾಳೆ ದಿನ ಇಷ್ಟು ಹೊತ್ತಿಗೆ ನಿಮ್ಮ ರಕ್ತದ ರಿಪೋರ್ಟ್ ಬಂದಿರುತ್ತೆ. ಒಂದು ವೇಳೆ ಇದೇ ರಿಪೋರ್ಟ್‌ನ್ನು ಖಚಿತ ಪಡಿಸಿದರೆ, ನೀವು ನಿರಾಶ ರಾಗಬೇಡಿ... ಯಾಕೆಂದರೆ ಈಗಾಗಲೇ ನಿಮಗೆ ಈ ವಿಷಯ ತಿಳಿದಿದೆ... ನೀವು ಸದಾ ಅದೇ ವಿಷಯವನ್ನು ಮನಸ್ಸಿಗೆ ಹಚ್ಚಿಕೊಂಡು ಕೊರಗಿ ಹಾಳಾಗುವ ಬದಲು, ಆದಷ್ಟೂ ಹವ್ಯಾಸಗಳನ್ನು ಹಚ್ಚಿಕೊಳ್ಳುವುದು ಒಳ್ಳೆಯದು.... ಓದುವುದು, ಬರೆಯುವುದು, ಸಿನಿಮಾ, ಟಿ.ವಿ. ಯಾವುದೇ ಮನೋರಂಜನಾ ಕಾರ್ಯಕ್ರಮ ನೋಡುವುದು ಇತ್ಯಾದಿ ಇತ್ಯಾದಿಗಳಲ್ಲಿ ನಿಮ್ಮನ್ನು ನೀವು ಸದಾ ತೊಡಗಿಸಿಕೊಳ್ಳಿ. ನಿಮಗೇನೋ ಒಂದು ಭಾರಿ ತೊಂದರೆ ಒದಗಿದೆ ಎನ್ನುವುದನ್ನು ಮರೆಯಲು ಪ್ರಯತ್ನಿಸಿ. ನೀವೂ ಸಂತೋಷವಾಗಿದ್ದು, ನಿಮ್ಮ ಮನೆಯ ಜನರನ್ನೂ ಸಂತೋಷವಾಗಿರುವಂತೆ ನೋಡಿಕೊಳ್ಳಿ. ಈಗ ಸದ್ಯಕ್ಕೆ ನೀವು ದೈಹಿಕವಾಗಿ ಆರೋಗ್ಯವಾಗಿದ್ದೀರಿ.... ಆದ್ದರಿಂದ ಆದಷ್ಟೂ ಆರೋಗ್ಯ ವಂತರಾಗಿರಲು ಪ್ರಯತ್ನಿಸಿ... ಯಾವಾಗ ಬೇಕಾದರೂ ಡಾಕ್ಟರರ ಸಲಹೆ ಪಡೆಯಬಹುದು...'' ಎಂದು ನುಡಿದರು.

''ಯಾಕೆ ಹೀಗಾಯ್ತು? ... ಹೇಗೆ ಇದು ಬಂತು ಅಂತ ತಿಳಿಯುವುದು ಹೇಗೆ ?'' ವಿಶ್ವ ಪ್ರಶ್ನಿಸಿದ.

''ರಕ್ತಕ್ಕೆ ಯಾವುದೇ ರೀತಿಯಿಂದ ಈ ರೋಗಾಣುಗಳು ಸೇರುತ್ತವೆ ಅನ್ನೋದರ ಬಗ್ಗೆ ಈಗಾಗಲೇ ಅನೇಕ ರೀತಿಯ ಲೇಖನಗಳು, ಪ್ರಾಯೋಗಿಕ ಚಿತ್ರಗಳು ಪ್ರಕಟವಾಗಿವೆ... ಅದನ್ನು ಕಂಡು ಹಿಡಿಯುವುದು ಕಷ್ಟ... ಯಾಕೆಂದರೆ, ಒಂದು ಸಾರಿ ಈ ರೋಗಾಣುಗಳು ದೇಹ ರಕ್ತನಾಳಕ್ಕೆ ಸೇರಿತೆಂದರೆ, ಹತ್ತು ಹನ್ನೆರಡು, ಇಪ್ಪತ್ತು ವರ್ಷಗಳ ನಂತರ ಗೊತ್ತಾಗಬಹುದು ಅಥವಾ ಕೆಲವೊಮ್ಮೆ ದೇಹದ ಶಕ್ತಿ ಕುಂದುತ್ತಾ ಬಂದ ನಂತರ ಗೊತ್ತಾಗಬಹುದು. ಅಗತ್ಯವಿಲ್ಲದೇ ಯಾರೂ ರಕ್ತ ಪರೀಕ್ಷೆಯನ್ನು ಮಾಡಿಸಿ

ಕೊಳ್ಳುವುದಿಲ್ಲವಾದ್ದರಿಂದ, ಯಾರಿಗೂ ಅನುಮಾನ ಕೂಡಾ ಬರುವುದಿಲ್ಲ. ಕೆಲವೊಮ್ಮೆ ರಕ್ತಪರೀಕ್ಷೆ ಮಾಡಿಸಿಕೊಳ್ಳಲು ಭಯಪಡುವ ಉದಾಹರಣೆಗಳಿವೆ... ಇದನ್ನೆಲ್ಲ ತಡೆಗಟ್ಟಲು ಮುನ್ನೆಚ್ಚರಿಕಾ ಕ್ರಮವೆಂದರೆ, ಜನರಲ್ಲಿ ತಿಳುವಳಿಕೆ ಮೂಡಿಸಿ, ಅವರು ಎಚ್ಚೆತ್ತುಕೊಳ್ಳುವಂತೆ ಮಾಡುವುದು. ಇದು ತುಂಬಾ ಮುಖ್ಯ. ಈಗಾಗಲೇ ಈ ದಿಸೆಯಲ್ಲಿ ಅನೇಕ ಸಂಘ ಸಂಸ್ಥೆಗಳು, ಆರೋಗ್ಯಕೇಂದ್ರಗಳು ಶ್ರಮಿಸುತ್ತಿವೆ... ಹ್ಲಾಂ... ನೀವುಗಳು ಆದಷ್ಟು ಬೇಗ ನಿಮ್ಮ ಪತ್ನಿಯರ ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು.''

''ಮಾಡಿಸಿದ್ದೇವೆ... ಅವರಿಗೆ ಈ ಸೋಂಕು ತಗುಲಿಲ್ಲ. ಬೇಕಾದರೆ ಮತ್ತೆ ಪರೀಕ್ಷೆ ಮಾಡಿಸುತ್ತೇವೆ. ಆದರೆ ಅವರಿಗೆ ಈ ವಿಷಯವನ್ನು ತಿಳಿಸಿಲ್ಲ. ಅವರಿಗೆ ಡೈವೋರ್ಸ್ ಕೊಡುತ್ತಿದ್ದೇವೆ... ಅವರು ಹಾಯಾಗಿರಲಿ ಅಂತ.''

''ಕೋರ್ಟಿನಲ್ಲಿ ನೀವು ಈ ವಿಷಯ ತಿಳಿಸಬೇಕಾಗುತ್ತದೆ...'' ಇಬ್ಬರೂ ಮುಖ ಮುಖ ನೋಡಿಕೊಂಡರು.

''ಬೇರೆ ಏನೂ ಉಪಾಯವಿಲ್ಲವೇ...?'' ವಿಶ್ವ ಪ್ರಶ್ನಿಸಿದ.

''ನಿಮ್ಮ ಪತ್ನಿಯರು ಒಪ್ಪಿದರೆ, ಈಗಿನಂತೆ, ಸುರಕ್ಷಿತವಾಗಿ, ಸಂಬಂಧವನ್ನಿಟ್ಟುಕೊಂಡು ಸಂಸಾರ ನಡೆಸಬಹುದು. ಇದರಿಂದ ನಿಮ್ಮ ನಿಮ್ಮ ದಾಂಪತ್ಯ ಜೀವನಕ್ಕೆ ಯಾವುದೇ ತೊಂದರೆ ಬರುವುದಿಲ್ಲ.''

''ಆದರೆ, ನಾವು ಅವರನ್ನು ವಂಚಿಸಿದಂತಾಗುವುದಿಲ್ಲವೇ... ಅವರಿಬ್ಬರಿಗೂ ಮಕ್ಕಳ ತಾಯಿಯಾಗಬೇಕೆಂಬ ಆಸೆ ಇದೆ. ನಮಗೆ ಆ ಆಸೆ ಏನೂ ಇಲ್ಲ.''

''ಹೌದು, ನಿಮ್ಮ ಅನಿಸಿಕೆ ಸರಿ. ಆದರೆ ಅದಕ್ಕೆ ಚಿಂತೆಯಾಕೆ ? ಈ ಬಗ್ಗೆ ನಿಮ್ಮ ಪತ್ನಿಯರಿಗೆ ತಿಳಿಸಿದರೆ ಒಳ್ಳೆಯದು. ಅವರು ಒಪ್ಪಿಕೊಂಡರೆ, ಯಾವುದಾದರೂ ಮಕ್ಕಳನ್ನು ದತ್ತು ತೆಗೆದುಕೊಂಡು ಸಾಕಬಹುದು... ನೀವೇನಂತೀರಿ...?'' ಎನ್ನುತ್ತಾ ವಿಶ್ವನ ಕಡೆ ತಿರುಗಿದರು.

ತಳಮಳ, ಭಯ, ಗೊಂದಲಗಳಿಂದ ವಿಶ್ವ ಪೆಚ್ಚಾಗಿ ಬಿಟ್ಟಿದ್ದ. ನನಗೇ ಹೀಗಾಗಬೇಕಾದರೆ ಇನ್ನು ಇವರಿಬ್ಬರ ಪರಿಸ್ಥಿತಿ ಹೇಗಿರಬೇಡ ? ಅಂತಂದುಕೊಂಡಾಗ ತಮ್ಮಂದಿರ ಬಗ್ಗೆ ಮರುಕವುಂಟಾಗಿತ್ತು. ಯೌವನಾವಸ್ಥೆಗೆ ಕಾಲಿಡುತ್ತಿದ್ದಾರೆ... ಇನ್ನೂ ಎಷ್ಟು ವರ್ಷ ಹೀಗೇ ಇರಬೇಕೋ... ಒಂದು ವೇಳೆ ನನಗೇ ಈ ಸೋಂಕು ಇದ್ದರೇ... ಆದಷ್ಟು ಬೇಗ ತಾನು ರಕ್ತ ಪರೀಕ್ಷೆ ಮಾಡಿಸಿ

ಕೊಳ್ಳುವುದು ಒಳ್ಳೆಯದು... ತಾನು ಈಗಾಗಲೇ ರೂಪಿಣಿಯೊಡನೆ ಸಂಬಂಧ ಮಾಡಿದ್ದಾಗಿದೆ... ಅವಳಿಗೂ ಹೇಳಬೇಕು.. ಆದರೆ ಅವಳಿಗೆ ತಿಳಿಸುವುದು ಹೇಗೆ.. ಇದರಿಂದ ಏನೇನು ಅನಾಹುತಗಳಾಗುತ್ತವೋ...? ಮುಖದ ಬೆವರನ್ನು ಒರೆಸಿಕೊಂಡ.

''ನೀವು ಇವರಿಬ್ಬರಿಗೆ ಅಣ್ಣ ಅಂತ ಅಂತೀರಿ... ನೀವೇ ಹೀಗೆ ಧೃತಿಗೆಟ್ಟರೆ ಹೇಗೆ ? ನೀವು ಇವರಿಗೆ ಧೈರ್ಯ ಹೇಳಬೇಕು....'' ವಿಶ್ವ ಎದ್ದ, ಇನ್ನು ಹೊರಡೋಣ ಎನ್ನುವಂತೆ... ಡಾಕ್ಟರಿಗೆ ಕೈ ಮುಗಿದು ಅಲ್ಲಿಂದ ಹೊರಟರು.

ಅಜಯ ವಿಜಯರು ತಮ್ಮ ಮನೆಗೆ ಹೋದರು. ವಿಶ್ವನಿಗಾಗಿಯೇ ಕಾದು ಕುಳಿತಿದ್ದ ರೂಪಿಣಿಯನ್ನು ಕಂಡು ಅವನ ಮುಖ ಅರಳಲಿಲ್ಲ, ಬದಲಿಗೆ ಆತಂಕ ಹೆಚ್ಚಾಗಿತ್ತು.

''ಯಾಕೆ ವಿಶ್ವ ಹೀಗಿದೀರಿ...? ಏನಾಯ್ತು? ಎಲ್ಲಿಗೆ ಹೋಗಿದ್ರೀ...?'' ಅವಳು ಹತ್ತಿರಕ್ಕೆ ಬಂದಾಗ ಅವನು ದೂರ ಸರಿದ.

''ದೂರ.... ದೂರ... ದೂರ ನಿಂತು ಮಾತನಾಡು'' ರೇಗಿದ. ಅವಳು ನಕ್ಕಳು.

''ಯಾಕೆ ನಾನು ಇಷ್ಟು ಬೇಗ ಬೇಡವಾದೆನಾ ? ಅಥವಾ ನನಗಿಂತ ಚೆನ್ನಾಗಿರೋಳು ನಿಮಗೆ ಸಿಕ್ಕಿದಾಳಾ ?''

''ಸಾಕು ಮಾಡು, ಈ ವ್ಯಂಗ್ಯ, ವೈಯಾರವೆಲ್ಲಾ ನನಗಿಷ್ಟವಿಲ್ಲ''

''ಪೃಥ್ವಿಯ ಗಾಳಿ ನಿಮಗೂ ಬೀಸಿತಾ ? ಅವನು ತಾನೂ ಕೆಟ್ಟ; ತನ್ನ ತಮ್ಮಂದಿರನ್ನು ಕೆಡಿಸಿದ. ಅವನ ಮಾತನ್ನು ಕೇಳಿಕೊಂಡು, ಅವರ ಹೆಂಡತಿಯರನ್ನು ದೂರ ಮಾಡ್ತಿದಾರೆ. ಈಗ ನೀವೂ ಅದೇ ದಾರಿ ಹಿಡಿತಿದೀರಿ... ನಾನು ಅಷ್ಟು ಸುಲಭವಾಗಿ ಬಿಟ್ಟುಕೊಡುವುದಿಲ್ಲ'' ಎನ್ನುತ್ತಾ ಅವನನ್ನು ತಬ್ಬಿಕೊಂಡಳು. ಅವನು ತಳ್ಳಿದ.

''ಸುಳ್ಳು.... ನಿಜ ಏನೂಂತ ತಿಳೀದೇ ಏನೇನೋ ಆಡಬೇಡ.'' ಸಿಡುಕಿದ.

''ನಿಜ ಏನೂಂತ ನಿಮಗೆ ಗೊತ್ತಲ್ಲ... ಹೇಳಿ...'' ಗೇಲಿ ಮಾಡಿದಳು.

''ಹೇಳ್ತೀನಿ...'' ಎನ್ನುತ್ತಾ ವಿಶ್ವ ಸಂಕ್ಷಿಪ್ತವಾಗಿ ತನಗೆ ತಿಳಿದದ್ದನ್ನು ತಿಳಿಸಿದ. ರೂಪಿಣಿ ಚಪ್ಪಾಳೆ ತಟ್ಟಿ ತನ್ನ ಸಂತಸವನ್ನು ವ್ಯಕ್ತಪಡಿಸಿದಳು.

''ಒಳ್ಳೇದಾಯ್ತು. ಹಾಗೇ ಆಗೇಬೇಕು... ಮೇಷ್ಟ್ರು ಬದುಕಿದ್ದಿದ್ದರೆ

ಖಂಡಿತಾ ಸಂತಸದಿಂದ ಕುಣಿದಾಡುತ್ತಿದ್ದರು.... ನಳಿನಿ ಇನ್ನೇನೂ ಮಾಡುಕ್ಕಾಗುಲ್ಲ. ಪೃಥ್ವಿಗೆ ಮದುವೆಯಾಗಲಿಲ್ಲ. ಇವರಿಬ್ಬರೂ ಹೀಗೇ... ಇನ್ನು ಈ ಆಸ್ತಿಯೆಲ್ಲಾ ನನ್ನ ಮಗುವಿಗೇ...''

''ಏನಂದೇ ? .... ನಿನ್ನ ಮಗು ? ನಿನ್ನ ಮಗು ಆ ಆಸ್ತಿಗೆ ಹೇಗೆ ವಾರಸುದಾರನಾಗುತ್ತೆ? ಏನೇನೋ ತಲೆಹರಟೆ ಮಾತನ್ನಾಡಬೇಡ... ಒಂದು ವೇಳೆ ನನಗೇ ಈ ಸೋಂಕು ತಗುಲಿದ್ದರೇ...'' ರೂಪಿಣಿ ಬೆದರಿದಳು.

''ನೋಡಿದ್ಯಾ ? ಆ ಆಲೋಚನೆಯೇ ಎಷ್ಟು ಗಾಬರಿಗೊಳಿಸುತ್ತೆ...? ಅವರಿಬ್ಬರ ಮನಸ್ಥಿತಿ ಹೇಗಿರಬಹುದು ಯೋಚಿಸು...''

''ಅವರು ಹೇಗಿದ್ದರೆ ನನಗೇನು ಬಿಡಿ... ವಿಶ್ವಾ... ಈ ವಿಷಯ ನಳಿನಿಗೆ, ಪೃಥ್ವಿಗೆ ಗೊತ್ತಾಗಿದೆಯಾ ?''

''ಇಲ್ಲ, ಅವರು ಇನ್ನು ಯಾರಿಗೂ ಹೇಳಿಲ್ಲ... ತನ್ನ ತಮ್ಮಂದಿರಿಗೆ ಹೀಗೆ ಅಂತ ತಿಳಿದರೆ ಪೃಥ್ವಿ ಕಲ್ಲಾಗಿ ಹೋಗ್ತಾನೆ. ನಳಿನಿಯ ಎದೆ ಒಡೆದು ಹೋಗುತ್ತದೆ.''

''ನನಗೆ ಅದೇ ಬೇಕಾಗಿರುವುದು... ನಾನೀಗಲೇ ಹೋಗಿ ನಳಿನಿಗೆ ಈ ವಿಷಯ ತಿಳಿಸ್ತೀನಿ. ಅವಳು ಕುಸಿದು ಬೀಳುವುದನ್ನು ನಾನು ನೋಡಿ ಆನಂದಿಸ ಬೇಕು... ಪೃಥ್ವಿಗೂ ನಾನೇ ಹೇಳ್ತೀನಿ. ಅವನ ಮುಖ ಭಯ ಅಪಮಾನ ಗಳಿಂದ ಕಪ್ಪಾಗುವುದನ್ನು ನಾನು ನೋಡಿ ಕೇಕೆ ಹಾಕಬೇಕು...''

''ಛೀ... ಎಷ್ಟು ಸಣ್ಣಬುದ್ಧಿ ನಿನ್ನದು... ನೀನೂ ಹೆಂಗಸು... ಹೀಗೆಲ್ಲಾ ಆಡಬಾರದು.''

''ಓಹೋಹೋ... ಇದ್ದಕ್ಕಿದ್ದ ಹಾಗೇ ಅವರ ಮೇಲಿನ ಪ್ರೀತಿ ಹೆಚ್ಚಾಗಿದೆ.''

''ಎಷ್ಟಾಗಲೀ ನಳಿನಿ ನನ್ನ ತಾಯಿ, ಅಜಯ ವಿಜಯರು ನನ್ನ ತಮ್ಮಂದಿರು... ಪೃಥ್ವಿ ನನ್ನ ಸ್ನೇಹಿತ...''

''ನಾನು ?.... ನನ್ನ ಮೇಷ್ಟ್ರು ?.... ನಾವಿಬ್ಬರೂ ಯಾರೂ ಅಲ್ವಾ ?''

''ಆ ಮೇಷ್ಟ್ರು ಮಾಡಿದ ದ್ರೋಹದಿಂದಲೇ ಇಷ್ಟೆಲ್ಲಾ ನಡೆದಿರುವುದು... ನಿನ್ನಲ್ಲಿ ಇಷ್ಟು ವಿಷ ತುಂಬಿದೆ ಅಂತ ತಿಳಿದಿದ್ರೆ ನಿನ್ನ ಸಹವಾಸನೇ ಮಾಡ್ತಿರಲಿಲ್ಲ.''

''ಈಗ ಮಾಡಿದ್ದಾಗಿದೆ. ಇನ್ನು ಬಿಡುಗಡೆಯೇ ಇಲ್ಲ.'' ಅವಳು ನಕ್ಕಾಗ

ಅವಳ ನಗು ವಿಚಿತ್ರವೆನಿಸಿತು... ''ಈಗ ನಾನು ಸಧ್ಯಕ್ಕೆ ನಿಮ್ಮನ್ನು ಬಿಡುವಂತೆಯೇ ಇಲ್ಲ....'' ಎಂದಳು ಮತ್ತೆ ನಕ್ಕು, 'ಯಾಕೆ' ಎಂದು ಅವನು ಕೇಳಲಿಲ್ಲ. ಅವಳೇ ಮತ್ತೆ ನುಡಿದಳು...

''ಇನ್ನು ಆರು ತಿಂಗಳಿಗೆ, ನೀವು ನನ್ನ ಮಗುವಿನ ತಂದೆಯಾಗಲಿದೀರಿ...''

''ಆ.... ಏನಂದೆ? ಏನಿದೆಲ್ಲಾ? ಹೇಗಾಯ್ತು?...'' ಕೋಪಗೊಂಡಿದ್ದ.

''ಏನೂ ತಿಳಿಯದವರ ತರಹ ಆಡಬೇಡಿ ವಿಶ್ವಾ... ನೀವೂ ವೈದ್ಯರು ಅಂತ ಹೇಳಿಕೊಳ್ತೀರಿ... ಎಷ್ಟೋ ತಿಂಗಳಿಂದ ನನ್ನ ನಿಮ್ಮ ಸಂಬಂಧ ಹೇಗಿದೆ ಅಂತ ನಿಮಗೇ ಗೊತ್ತು. ನಾನು ತಾಯಿಯಾಗ್ತೀನಿ.... ನೀವು ತಂದೆಯಾಗ್ತೀರಿ... ಅದಕ್ಕೆ ಕೋಪ ಏಕೆ ? ಹೆಮ್ಮೆ ಪಟ್ಟುಕೊಳ್ಳಿ.... ನನ್ನ ಈ ಮಗುವಿಗೆ ನಳಿನೀನೇ ಅಜ್ಜಿ''

''ಶ್... ಇದೆಲ್ಲ ಯಾರಿಗೂ ಗೊತ್ತಾಗಬಾರದು... ಮೆಲ್ಲಗೆ ಮಾತನಾಡು.''

''ಯಾಕೆ ಗೊತ್ತಾಗಬಾರದು ? ಏನು ಹೆದರಿಕೆ ? ನನಗೇನೂ ಭಯವಿಲ್ಲ''

''ಮೊದಲು ನೀನು ರಕ್ತ ಪರೀಕ್ಷೆ ಮಾಡಿಸಿಕೋ... ಹುಟ್ಟಿದರೆ ಆರೋಗ್ಯವಂತ ಮಗು ಹುಟ್ಟಬೇಕು... ಇಲ್ಲದಿದ್ದರೆ... ತೆಗೆಸಿಬಿಡು.''

''ಛೀ... ಎಂತಹ ಕಟುಕರು ನೀವು ?.... ಹೀಗೆಲ್ಲಾ ಮಾತಾಡ್ತೀರಲ್ಲ.''

''ಹಾಗಲ್ಲ ರೂಪಿಣಿ... ಯಾಕೋ ಇದೆಲ್ಲ ಸರಿ ಅಂತ ಅನ್ನಿಸ್ತಿಲ್ಲ... ನೀನು ತಾಯಿಯಾಗುವುದರಿಂದ, ನನಗೆ ನಿನಗೆ ಅಪಾಯವೇ ಜಾಸ್ತಿ....''

''ಏನು ಅಪಾಯ ? ನೀವೇನೂ ಹೆದರಬೇಡಿ... ನನ್ನನ್ನು ಮದುವೆಯಾಗಿ ಅಂತ ನಾನು ನಿಮ್ಮನ್ನು ಒತ್ತಾಯ ಮಾಡುವುದಿಲ್ಲ. ಮಗುವನ್ನು ನಾನೇ ಬೆಳೆಸ್ತೀನಿ. ನಿಮಗೆ ಆ ಶ್ರಮವೂ ಬೇಡ... ಈಗ ನನಗೆ ತಿನ್ನಕ್ಕೆ ಏನಾದ್ರೂ ಕೊಡಿ. ಹೊಟ್ಟೆ ಹಸಿಯುತ್ತಿದೆ.'' ಅವಳು ನಕ್ಕಳು, ಅವನಿಗೆ ನಗಬೇಕೆನಿಸಲಿಲ್ಲ.

ಊಟದ ನಂತರ ರೂಪಿಣಿ, ಮೇನಕಾ ರೇವತಿಯರನ್ನು ನೋಡಿ ಬರುತ್ತೀನೆಂದು ಹೊರಟಳು. ವಿಶ್ವನೂ ಅವಳ ಜೊತೆಯಲ್ಲಿ ಹೊರಟ. ''ನನಗೆ ನಿನ್ನ ಮೇಲೆ ನಂಬಿಕೆ ಇಲ್ಲ... ನೀನು ನಳಿನಿಗಾಗಲೀ, ಪೃಥ್ವಿಗಾಗಲೀ ಏನನ್ನೂ ಹೇಳದಿರಲಿ ಅಂತ ನಾನು ನಿನ್ನ ಜೊತೆಗೆ ಬರುತ್ತಿದ್ದೇನೆ'' ಎಂದ.

''ನಿಮಗೆ ನನ್ನ ಮೇಲೆ ನಂಬಿಕೆ ಇಲ್ಲ... ನನಗೆ ಗೊತ್ತು. ಆದರೆ ನನಗೆ ನಿಮ್ಮ ಮೇಲೆ ನಂಬಿಕೆ ಇದೆ.... ಅದು ಸರಿ.. ನನಗೆ ನೀವು ಹಣವನ್ನೇ ಕೊಡಲಿಲ್ಲ.... ಯಾವಾಗ ಕೊಡ್ತೀರಿ ?''

''ಕೊಡ್ತೀನಿ... ಸಮಯ ಬಂದಾಗ, ಸುಮ್ಮನಿರು'' ಗದರಿದ. ನಳಿನಿ

ರೂಪಿಣಿಯನ್ನೇ ಅಸೂಯೆಯಿಂದ ನೋಡಿದಳು. ರೂಪಿಣಿ, ಮೇನಕಾ, ರೇವತಿಯರೊಡನೆ ಮಾತನ್ನಾಡುತ್ತಿದ್ದಾಗ ವಿಶ್ವ ಕೇಳಿದ.

''ಅವತ್ತು... ನಾನು ಒಂದು ಒಡವೆ ಪೆಟ್ಟಿಗೆ, ಹಾಗೂ ಸ್ವಲ್ಪ ಹಣದ ಕಟ್ಟನ್ನು ಕೊಟ್ಟಿದ್ದೆನಲ್ಲ.... ಅದನ್ನೆಲ್ಲಾ ರೂಪಿಣಿಗೆ ಕೊಟ್ಟುಬಿಡಿ...'' ಎಂದ.

''ರೂಪಿಣಿಗಾ ? ಯಾಕೆ ?... ಅವಳಿಗೇಕೆ ಕೊಡಬೇಕು ?''

''ಅದೆಲ್ಲ ನಿಮಗೇಕೆ ? ನಿಮಗೆ ಬೇಡವಾದ ಮೇಲೆ ನನಗೆ ಯಾರು ಇಷ್ಟವೋ ಅವರಿಗೇ ಕೊಡ್ತೀನಿ...''

''ನಿನಗೂ ರೂಪಿಣಿಗೂ ಏನು ಸಂಬಂಧ ?''

''ಅದು ನನ್ನ ಸ್ವಂತ ವಿಷಯ... ನಿಮಗೆ ಕೊಡಲು ಇಷ್ಟವಿಲ್ಲದಿದ್ದರೆ ಹೇಳಿ ಆ ಮಾತೇ ಬೇಡ...''

''ಹಾಗಲ್ಲ ವಿಶ್ವಾ... ನಿನಗೂ ಅವಳಿಗೂ ಎಂತಹ ಸ್ನೇಹ ? ... ಪೃಥ್ವಿಯನ್ನು ಸತಾಯಿಸಿದ ಹಾಗೇ ನಿನ್ನನ್ನೂ ಸತಾಯಿಸುತ್ತಾಳೆ ಅಷ್ಟೇ...''

''ಹಾಗೇನೂ ಆಗುಲ್ಲ.. ನಾನು ಅವಳಿಗೆ ಹಣ ಕೊಡ್ತೀವಿ ಅಂತ ಮಾತು ಕೊಟ್ಟಿದ್ದೆ. ನನ್ನ ಹತ್ತಿರ ಹಣವಿಲ್ಲ... ಅದಕ್ಕೇ ಈ ಹಣ, ಈ ಒಡವೇನ ಕೊಡ್ತೀನಿ''

''ಸರಿ, ನಾನು ಹಣ ಕೊಡ್ತೀನಿ, ಆದರೆ ಒಡವೆಗಳನ್ನು ಅವಳಿಗೇಕೆ ಕೊಡಬೇಕು ಅಂತ ? ಅದು ನಿನ್ನ ಹೆಂಡತಿಗೆ ಸೇರಬೇಕಾದದ್ದು... ನೀನು ಬೇಕಾದರೆ ರೂಪಿಣಿಯನ್ನೇ ಮದುವೆಯಾಗು. ಆಗ ನಾನೇ ಅವಳಿಗೆ ಕೊಡ್ತೀನಿ.''

''ಮದುವೆ, ಸಂಸಾರ, ಆ ಆಸೆ ನನಗಿಲ್ಲ; ಯಾವ ಅರ್ಥವೂ ಇಲ್ಲ... ಸುಮ್ಮನೆ ಚರ್ಚೆಬೇಡ. ಕೊಡುವುದು ಬಿಡುವುದು ನಿಮ್ಮ ಇಷ್ಟ'' ಎಂದು ಹೇಳಿ ಅಲ್ಲಿಂದ ಹೊರಟವನು ಸೀದಾ ಪೃಥ್ವಿಯ ಆಫೀಸಿಗೆಬಂದ.

''ಕಾಫಿ ತರಿಸ್ಲಾ ವಿಶ್ವಾ... ?'' ಪೃಥ್ವಿ ಕೇಳಿದಾಗ ಬೇಡವೆಂದು ತಲೆಯಾಡಿಸಿದ.

''ಯಾಕೆ ಏನಾಗಿದೆ ಹುಶಾರಿಲ್ವಾ ? ಒಂಥರಾ ಇದೀರಲ್ಲ...''

''ಯಾಕೋ ಮನಸ್ಸಿಗೆ ಬೇಜಾರು... ನಾಳೆ ಅಜಯ ವಿಜಯರು ಎಷ್ಟು ಹೊತ್ತಿಗೆ ಹೊರಡುತ್ತಾರೆ ? ಇನ್ನೊಂದೆರಡು ದಿನ ಇದ್ದಿದ್ದರೆ ಚೆನ್ನಾಗಿತ್ತು ಅಲ್ವಾ ?''

''ಮೊನ್ನೆನೇ ಹೋಗಬೇಕಾಗಿತ್ತು. ಈಗಾಗಲೇ ಎರಡು ದಿನ ಮುಂದೆ ದುಡಿದ್ದಾರೆ. ಪ್ಲೇನ್ ಟಿಕೆಟ್ ಕನ್‌ಫರ್ಮ್ ಆಗಿಲ್ಲದೇ ಇದ್ದರೆ, ಯಾವ ದಿನಕ್ಕೆ ಸಿಗುತ್ತೋ ಅಲ್ಲೀವರೆಗೆ ಇರುತ್ತಾರೆ ಯಾಕೆ ?''

''ಒಂದು ಸಾರಿ ಇಲ್ಲಿಂದ ಹೊರಟು ಹೋದರೆ ಸಾಕು ಅಂತ ಅವರುಗಳು ಕಾಯ್ತಾ ಇದಾರೆ ಅಂತ ನಿಮಗನ್ನಿಸುಲ್ವಾ ...?''

''ಏನೇನೋ ತಲೆ ಕೆಡಿಸಿಕೊಂಡಿದಾರೆ. ಹೆಂಡತಿಯರಿಗೂ ಬೇಜಾರು ಮಾಡಿದ್ದಾರೆ. ಅಲ್ಲಿ ಒಂದೆರಡು ತಿಂಗಳು ಕಳೆಯುವಷ್ಟರಲ್ಲಿ ಸರಿ ಹೋಗ್ತಾರೆ. ಅಷ್ಟರಲ್ಲಿ ನಾವು ಯಾವುದಾದರೂ ಅನಾಥಾಶ್ರಮಕ್ಕೆ ಹೋಗಿ ದತ್ತು ತೆಗೆದುಕೊಳ್ಳುವ ಪ್ರಯತ್ನ ಮಾಡೋಣ. ಆಮೇಲೆ ಎಲ್ಲಾ ಸರಿಹೋಗುತ್ತದೆ.''

''ಇಲ್ಲ, ಪೃಥ್ವೀ ಯಾವುದೂ ಸರಿ ಹೋಗುವಂತೆ ಕಾಣುವುದಿಲ್ಲ...''

''ಯಾಕೆ ಹೀಗೆ ಹೇಳ್ತಿದೀರಿ...?''

''ನಾನು ಏನು ಹೇಳ್ತೀನೋ ಅದನ್ನ ಕೇಳಿದರೆ ನಿಮ್ಮ ಹೃದಯ ಕಲಕಿ ಹೋಗುವುದು ಖಂಡಿತಾ....'' ಪೃಥ್ವಿ ಆತಂಕದಿಂದ ಎದ್ದು ನಿಂತ.

''ಏನಾಯ್ತು ಅಂತ ನೇರವಾಗಿ ಹೇಳಬಾರದಾ ?...''

ವಿಶ್ವ, ಅಜಯ ವಿಜಯರನ್ನು ಡಾಕ್ಟರ ಬಳಿ ಕರೆದುಕೊಂಡು ಹೋಗಿದ್ದನ್ನು, ಅವರಿಬ್ಬರಿಗೆ ಇರುವ ತೊಂದರೆಯ ಬಗ್ಗೆ ತಿಳಿಸಿದಾಗ, ಪೃಥ್ವಿ ನಿಂತಿದ್ದವನು ಕುರ್ಚಿಯಲ್ಲಿ ಕುಸಿದು ಕುಳಿತ.

''ಯಾಕೆ ಹೀಗಾಯ್ತು ವಿಶ್ವಾ ? ಇದಕ್ಕೆ ಕಾರಣ ಏನು ?...'' ಪೃಥ್ವಿಯ ಮುಖ ಕಳೆಗುಂದಿತ್ತು. ತಾನೇ ತೊಂದರೆಗೊಳಗಾದವನಂತೆ ಚಡಪಡಿಸಿದ.

''ನನಗೂ ಗೊತ್ತಿಲ್ಲ ಪೃಥ್ವಿ... ಈಗ ಅದರ ಮೂಲವನ್ನು ಹುಡುಕುವುದರಲ್ಲಿ ಅರ್ಥವಿಲ್ಲ... ಮುಂದೇನು ಮಾಡಬಹುದು ಅಂತ ಯೋಚಿಸಬೇಕಾಗಿದೆ.''

''ನನಗೇನೂ ತೋಚುತ್ತಿಲ್ಲ. ಈಗ ನಾನು ಏನೂ ಯೋಚಿಸಲಾರೆ... ನೀವೇ ಹೇಳಿ. ಏನು ಮಾಡಬಹುದು ಅಂತ.''

''ಹೇಗೂ ಅವರು ಅಮೆರಿಕಾಕ್ಕೆ ಹೊರಟು ನಿಂತಿದಾರೆ. ಅವರನ್ನು ಸಂತೋಷವಾಗಿ ಕಳಿಸಿಕೊಡೋಣ. ನಮ್ಮೆಲ್ಲರಿಗಿಂತ ಹೆಚ್ಚಿನ ಮಾನಸಿಕ ಹಿಂಸೆಯನ್ನು ಅವರು ಅನುಭವಿಸುತ್ತಿದ್ದಾರೆ. ಅಮೆರಿಕಾದಲ್ಲಿ ಅವರು ಈ ನೋವನ್ನೆಲ್ಲಾ ಮರೆತು ಹಾಯಾಗಿರುವುದಾದರೆ, ಅದೇ ಮುಖ್ಯವಾಗಿ ಬೇಕಾಗಿರುವುದು...''

ಪೃಥ್ವಿ ತನ್ನ ಯೋಚನೆಯಲ್ಲಿ ಮುಳುಗಿಹೋದ. ''ನನ್ನ ತಮ್ಮಂದಿರಿಗೆ ದೇಶದಲ್ಲಿ ವ್ಯಾಪಕವಾಗಿ ಹರಡಿ, ಜನರಲ್ಲಿ ಭಯಂಕರ ಭಯವನ್ನುಂಟು

ಮಾಡಿರುವ ಏಡ್ಸ್ ರೋಗದ ರೋಗಾಣು, ನನ್ನ ತಮ್ಮಂದಿರ ದೇಹವನ್ನು ಆಕ್ರಮಿಸಿಕೊಂಡಿದೆ ಅಂತಂದ್ರೆ... ಇದು ಹೇಗೆ ಆಯ್ತು ? ಯಾಕೆ ಆಯ್ತು ? ಇಲ್ಲಿ ತಪ್ಪು ಯಾರದು ? ಯಾರನ್ನು ದೂಷಿಸುಕ್ಕೆ ಆಗುತ್ತೆ ?... ಅವರಿಗೂ ಮೂಲ ಕಾರಣ ಏನೂಂತ ಗೊತ್ತಿದೆಯೋ ಇಲ್ಲವೋ...? ಈಗ ತನ್ನ ತಮ್ಮಂದಿರಿಗೆ ಏನು ಮಾಡಬಹುದು ? ಎಷ್ಟೇ ಖರ್ಚಾದರೂ ಪರವಾಗಿಲ್ಲ.. ಈ ರೋಗಕ್ಕೆ ತುತ್ತಾಗದಂತೆ ತಡೆಯಬಲ್ಲೆ..! ಆದರೆ ಅದಕ್ಕೆ ಯಾವ ಔಷಧಿಯನ್ನೂ ಇದುವರೆಗೆ ಕಂಡು ಹಿಡಿದಿಲ್ಲ... ತನ್ನ ಬಳಿ ಎಷ್ಟು ಹಣವಿದ್ದರೇನು ? ಈಗ ಅವರ ಉಪಯೋಗಕ್ಕೆ ಬರದೇ ಇದ್ದ ಮೇಲೆ... ತಾನೀಗ ಅತೀ ಬಡವ'' ಎಂಬ ಪ್ರಜ್ಞೆ ಕಾಡಿತು. ಈ ವಿಷಯ ಚಿಕ್ಕಮ್ಮನಿಗೆ ತಿಳಿದರೆ, ಚಿಕ್ಕಮ್ಮನ ಸ್ಥಿತಿ ಏನಾಗಬಹುದು ?.......

ಫೋನು ಟ್ರಿನ್ ಗುಟ್ಟಿತು. ಪೃಥ್ವಿ ಎತ್ತಲಿಲ್ಲ. ವಿಶ್ವನೇ ಎತ್ತಿಕೊಂಡ. ಆ ಕಡೆಯಿಂದ ರೂಪಿಣಿ ಮಾತನಾಡಿದಳು.

''ಪೃಥ್ವೀ... ನಿಮ್ಮ ಚಿಕ್ಕಮ್ಮ ಜ್ಞಾನ ತಪ್ಪಿ ಬಿದ್ದು ಬಿಟ್ಟಿದಾರೆ... ಡಾಕ್ಟರಿಗೆ ಫೋನು ಮಾಡಿದೀನಿ ಬೇಗ ಬನ್ನಿ'' ವಿಶ್ವನ ಹೃದಯ ನಿಂತಂತಾಯಿತು. ಬೇಡವೆಂದರೂ, ಎಲ್ಲೋ ರೂಪಿಣಿ ಅಜಯ ವಿಜಯರ ಖಾಯಿಲೆ ಬಗ್ಗೆ ಹೇಳಿಬಿಟ್ಟಿರಬಹುದು... ನಳಿನಿ ಷಾಕ್‌ನಿಂದ ಮೂರ್ಛೆ ಬಿದ್ದಿರಬಹುದು... ಎಂದುಕೊಂಡ.... ಪೃಥ್ವಿ... ''ಯಾಕಂತೆ ?'' ಅಂತ ಕೇಳಿದ. ''ನಡೀರಿ ಹೋಗೋಣ'' ಎಂದ. ''ನನಗೂ ಗೊತ್ತಿಲ್ಲ'' ವಿಶ್ವ ಕಣ್ಣು ತಪ್ಪಿಸಿದ.

ರೂಪಿಣಿ ಯಾಕೆ ಹೀಗೆ ಮಾಡಿದಳು ? ನಳಿನಿಗೆ ಏನಾದರೂ ಆದರೆ, ನಾವಿಬ್ಬರೂ ಪೃಥ್ವಿಯಿಂದ ಬೈಸಿಕೊಳ್ಳುವುದು ಖಂಡಿತಾ...

ಇಬ್ಬರೂ ಮನೆಗೆ ಬಂದಾಗ, ಡಾಕ್ಟರು ಬಿ.ಪಿ. ಚೆಕ್ ಮಾಡುತ್ತಿದ್ದರು. ಪೃಥ್ವಿಯನ್ನು ಕಂಡೊಡನೆ ನುಡಿದರು.

''ಬಿ.ಪಿ. ಹೆಚ್ಚಾಗಿದೆ. ಈ ಕ್ಷಣ ನರ್ಸಿಂಗ್ ಹೋಂಗೆ ಸೇರಿಸಿಬಿಡಿ'' ಪೃಥ್ವಿ ಮುಖದ ಬೆವರನ್ನು ಒರೆಸಿಕೊಂಡ. ವಿಶ್ವ ಅವನ ಬೆನ್ನ ಮೇಲೆ ಕೈ ಇಟ್ಟ. ಅವನ ಕಣ್ಣು ರೂಪಿಣಿಯನ್ನು ಹುಡುಕಿತು. ಅವಳು ಅಲ್ಲಿಂದ ಹೊರಟು ಹೋಗಿದ್ದಳು. ಕೆಲವೇ ನಿಮಿಷಗಳಲ್ಲಿ ನಳಿನಿಯನ್ನು ಸಮೀಪದಲ್ಲಿದ್ದ ನರ್ಸಿಂಗ್ ಹೋಂಗೆ ಸೇರಿಸಿದರು... ಆ ರಾತ್ರಿಯೆಲ್ಲಾ ನಳಿನಿ ನಿದ್ದೆ ಮಂಪರಿನಲ್ಲಿ ಕಳೆದಳು. ಬೆಳಗಿನ ಒಂದು ಹೊತ್ತಿನಲ್ಲಿ ಅವಳಿಗೆ ಎಚ್ಚರವಾಗಿದ್ದಾಗ, ತಾನು ಎಲ್ಲಿದ್ದೇನೆಂದು

ತಿಳಿಯಲೇ ಕೆಲವು ಸಮಯ ಹಿಡಿಯಿತು. ಕಣ್ಣುಬಿಟ್ಟು ಅತ್ತಿತ್ತ ನೋಡಿದಳು. ಎದುರಿನ ಕುರ್ಚಿಯಲ್ಲಿ ಕುಳಿತಿದ್ದ ವಿಶ್ವನನ್ನು ಕಂಡಳು. ಮುಗುಳ್ನಗುವ ಪ್ರಯತ್ನ ಮಾಡಿದಳು... ವಿಶ್ವ ನಗಲಿಲ್ಲ. ''ಪೃಥ್ವಿ ಎಲ್ಲಿ?'' ಕೇಳಿದಳು.

''ಮನೆಗೆ ಹೋಗಿದ್ದಾರೆ...''

''ನನಗೇನಾಯ್ತು ಅಂತ ನರ್ಸಿಂಗ್ ಹೋಂಗೆ ಸೇರಿಸಿದ್ದೀರಿ! ನಾನು ಮನೆಗೆ ಹೋಗಬೇಕು.. ಅಜಯ ವಿಜಯರು ಎಷ್ಟು ಹೆದರಿದ್ದಾರೋ...'' ನಳಿನಿ ತನ್ನನ್ನೇನೂ ವಿಚಾರಿಸಲಿಲ್ಲವೆನ್ನುವುದು ವಿಶ್ವನ ಗಮನಕ್ಕೆ ಬಂತು. ಮುಖ ಚಿಕ್ಕದಾಯಿತು...

''ನೆನ್ನೆ ರೂಪಿಣಿ ಯಾಕೆ ಬಂದಿದ್ದಳು ?...'' ವಿಶ್ವ ಗಲಿಬಿಲಿಗೊಂಡ. ಏನನ್ನಾದರೂ ಕೇಳಲು ಹೆದರಿದ.

''ನೀನು ಹೇಳಿದೆ ಅಂತ ಒಡವೆಗಳನ್ನು ಅವಳಿಗೆ ಕೊಟ್ಟೆ... ಅವಳೇನಂದಳು ಗೊತ್ತಾ?...'' ಇಲ್ಲವೆನ್ನುವಂತೆ ತಲೆಯಾಡಿಸಿದ. ಅವನು ಬೆವತಿದ್ದ.

''ವಿಶ್ವಾ... ನನ್ನ ಹಿಂದೆ ಎಲ್ಲರೂ ಏನೋ ಗುಸುಗುಸು ಮಾತಾಡಿಕೊಳ್ಳುತ್ತಾರೆ... ಮೇನಕಾ ರೇವತಿಯರು ಅಳುತ್ತಾರೆ. ಅಜಯ ವಿಜಯರು ಮುಂಚಿನಂತಿಲ್ಲ... ರೂಪಿಣಿ ಏನು ಹೇಳಿದಳು ಗೊತ್ತಾ... ಅಜಯ ವಿಜಯರಿಗೆ ಮಕ್ಕಳಾಗುವುದಿಲ್ಲವಂತೆ. ಹೌದಾ ?... ಇದಕ್ಕೆಲ್ಲ ಪೃಥ್ವೀನೇ ಕಾರಣ... ರೂಪಿಣಿಗೆ ಮಗುವಾಗುತ್ತಂತೆ... ಏನೇನೋ ಅಸಂಬದ್ಧ ಮಾತನಾಡಿದಳು'' ಎಂದಳು.

ಈಗ ಅಸಂಬದ್ಧ ಮಾತನ್ನಾಡುತ್ತಿರುವುದು ನೀನು... ನಿಜವಾದ ವಿಷಯ ನಿನಗೇನೂ ಗೊತ್ತಿಲ್ಲ ಅಂತ ಹೇಳಬೇಕೆಂದುಕೊಂಡು, ನಳಿನಿಯ ಕಡೆ ತಿರುಗಿದ. ಅವಳ ಕಣ್ಣುಗಳಿಂದ ನೀರು ಹರಿಯುತ್ತಿತ್ತು... ಮುಜುಗರವೆನಿಸಿತು. ತಾನು ಏನೇನನ್ನೋ ಆಡಿ ಅವಳ ಮನಸ್ಸನ್ನು ಮತ್ತೂ ನೋಯಿಸಬಾರದೆಂದೆನಿಸಿತು.

''ಅಂಥದ್ದೆಲ್ಲಾ ಏನಿಲ್ಲ... ನೀವು ಆಯಾಸ ಮಾಡ್ಕೋಬೇಡಿ...'' ಅಂತಂದ.

''ಇಲ್ಲ, ನಿಜ ಏನೂಂತ ತಿಳಿಯದ ಹೊರತು ನಾನು ಒಂದು ಹನಿ ನೀರನ್ನೂ ಕುಡಿಯುವುದಿಲ್ಲ. ನನ್ನ ಮೇಲಾಣೆ...''

''ವಿಷಯ ಏನೂ ಅಷ್ಟು ಗಂಭೀರವಾದುದಲ್ಲ. ಮಕ್ಕಳಾಗದಿದ್ದರೆ

ಅದಜು ಯಾವ ದೊಡ್ಡ ಸಮಸ್ಯೆ ? ಮಕ್ಕಳನ್ನು ದತ್ತು ತೆಗೆದುಕೊಂಡು ಸಾಕಿದರಾಯ್ತು.''

''ಹಾಗಾದ್ರೆ ಈ ವಿಷಯ ನಿಜಾನಾ ?'' ಬಿಕ್ಕಿ ಬಿಕ್ಕಿ ಅತ್ತಳು.

''ಹೇಳಿದ್ರೆ ನಿಮಗೆ ಬೇಸರವಾಗುತ್ತೆ ನಿಮಗೆ ಯಾರೂ ಹೇಳಿಲ್ಲ ಅಷ್ಟೇ... ನೀವು ಅಳಬೇಡಿ... ಡಾಕ್ಟರು ಏನಂದುಕೊಳ್ಳುತ್ತಾರೆ ?''

''ಅಳದೇ ಏನು ಮಾಡಲೋ ವಿಶ್ವಾ...? ಪೃಥ್ವಿ ಮದುವೇನೇ ಮಾಡಿಕೊಳ್ಳಲ್ಲ ಅಂತ ನಿರ್ಧಾರ ಮಾಡಿಬಿಟ್ಟಿದಾನೆ... ಇವರಿಬ್ಬರಿಗೂ ಮಕ್ಕಳಾಗುಲ್ಲ ಅಂತ ತಿಳಿದರೆ, ಇನ್ನೇನು ಮಾಡಲಿ ಹೇಳು... ಅಳೋದೊಂದೇ ದಾರಿ... ನನ್ನ ಗಂಡ, ನನ್ನ ಮಾವ ಅವರ ಆತ್ಮಕ್ಕೆ ಶಾಂತಿಯೇ ಇಲ್ಲವಾಗುತ್ತೆ... ಅವರ ವಂಶ ಇಷ್ಟಕ್ಕೇ ನಿಂತು ಬಿಟ್ಟರೇ...'' ಮತ್ತೆ ಅತ್ತಳು.

''ಚೆನ್ನಾಗಿದೆ, ಅತ್ತರೆ ಏನನ್ನು ಸಾಧಿಸಿದಂತಾಗುತ್ತದೆ. ಮೊದಲು ನಿಮ್ಮ ಆರೋಗ್ಯ ಸುಧಾರಿಸಲಿ-ಮಕ್ಕಳನ್ನು ದತ್ತು ತೆಗೆದುಕೊಂಡು, ಅವನ್ನೇ ಸ್ವಂತ ಮಕ್ಕಳಂತೆ ಸಾಕಿದರಾಯ್ತು...''

''ಮತ್ತೆ ಮತ್ತೆ ಅದೇ ಮಾತನ್ನಾಡಬೇಡ... ಯಾವುದೋ ಮಕ್ಕಳು ನಮ್ಮ ಸ್ವಂತ ಮಕ್ಕಳಾಗುವುದಿಲ್ಲ. ಸ್ವಂತ ಮಕ್ಕಳೇ ಬದಲಾಗಿ ಹೋಗ್ತಾರೆ... ನನ್ನ ಮಕ್ಕಳೇ ನನಗೆ ವಂಚನೆ ಮಾಡ್ತಿದಾರಲ್ಲ.''

''ಇದೇನು ಈ ಮನೆಗೆ ಹೊಸದೇ. ಎಲ್ಲರೂ ಒಬ್ಬರನ್ನೊಬ್ಬರು ವಂಚಿಸುತ್ತಲೇ ಬಂದಿದಾರೆ...''

''ಇನ್ನೂ ಎಷ್ಟು ವರ್ಷ ನನ್ನನ್ನು ಹಂಗಿಸಿ ಅನ್ನುವ ಆಸೆ ನಿನಗೆ, ನನಗೂ ವಯಸ್ಸಾಯ್ತು. ಮೊಮ್ಮಕ್ಕಳನ್ನು ಆಡಿಸಿಕೊಂಡು ಕಾಲ ಕಳೆಯುವ ಆಸೆ... ವಂಶವನ್ನು ಬೆಳೆಸುವ ಮೊಮ್ಮಕ್ಕಳೇ ಇಲ್ಲದಿದ್ದ ಮೇಲೆ, ನನ್ನ ಆಸೆಗೇನು ಬೆಲೆ ಇದೆ ? ಆ ಯೋಗ್ಯತೆಯೂ ಇಲ್ಲವಾಯಿತು...'' ಅವಳು ಮುಸಿ ಮುಸಿ ಅಳುತ್ತಾ ಗೋಡೆ ಕಡೆಗೆ ತಿರುಗಿದಳು. ವಿಶ್ವ ಅಲ್ಲಿಂದ ಹೊರಬಂದ.

ಪೃಥ್ವಿ ಡಾಕ್ಟರೊಡನೆ ವಾರ್ಡಿನೊಳಗೆ ಬಂದಾಗ, ನಳಿನಿ ಅತ್ತ ತಿರುಗಿ ಮಲಗಿದ್ದಳು... ವಿಶ್ವ ಎಲ್ಲಿ ಹೋದ ಅಂತ ಅಂದುಕೊಂಡು ಹೊರಬಂದ. ಕಾರಿಡಾರಿನ ಕಂಭಕ್ಕೆ ಒರಗಿನಿಂತು ಎತ್ತಲೋ ನೋಡುತ್ತಿದ್ದ. ಪೃಥ್ವಿ ಹತ್ತಿರ ಬಂದ. ''ಏನಾಯ್ತು ವಿಶ್ವಾ... ಇಲ್ಲೇಕೆ ಒಬ್ಬರೇ ನಿಂತಿದೀರಿ ?'' ಕೇಳಿದ. ವಿಶ್ವ.

ರುಗಿದ. ಅವನ ಕಣ್ಣಂಚಿನಲ್ಲಿ ಜಿನುಗಿದ್ದ ನೀರನ್ನು ಪೃಥ್ವಿ ಗಮನಿಸಿ ಪೆಚ್ಚಾದ.

''ಎರಡು ದಿನ ಇಲ್ಲಿರಲಿ ಅಂತ ಡಾಕ್ಟರು ಹೇಳಿದಾರೆ... ನಿಮಗೆ ೊಂದರೆ ಇಲ್ಲದಿದ್ದರೆ, ನಿಮ್ಮ ಮನೆಯಿಂದ ನಮ್ಮಿಬ್ಬರಿಗೂ ಊಟ ತರ್ತೀರಾ ?''

''ಯಾಕೆ ಮನೆಗೆ ಹೋಗುಲ್ವಾ...?'' ಕೇಳಿದ.

''ಇಲ್ಲ ವಿಶ್ವಾ... ನಾನು ಮನೆಗೆ ಹೊರಟು ಹೋದರೆ, ಇಲ್ಲಿ ಚಿಕ್ಕಮ್ಮ ಬ್ಬರೇ ಆಗಿಬಿಡ್ತಾರೆ. ಅಲ್ಲಿ ಹೇಗೂ ಅಜಯ ವಿಜಯರು ಇದಾರಲ್ಲ... ಿಕ್ಕಮ್ಮ ಮನೆಗೆ ಹೋದ ಮೇಲೆ ಅವರುಗಳು ಊರಿಗೆ ಹೋಗ್ತಾರೆ...'' ಶ್ವನನ್ನು ಅತ್ತ ಕಳಿಸಿ, ನರ್ಸಿಗೆ ಹೇಳಿ, ಪೃಥ್ವಿ ತನ್ನ ಆಫೀಸಿನ ಗೆಸ್ಟ್‌ಹೌಸ್‌ಗೆ ಂದ. ಅಲ್ಲಿಯೇ ಸ್ನಾನ, ತಿಂಡಿ, ಕಾಫಿ ಮುಗಿಸಿ, ಮತ್ತೆ ನರ್ಸಿಂಗ್ ಹೋಂಗೆ ಂದ. ನಳಿನಿ ನಿದ್ರಿಸುತ್ತಿದ್ದಳು. ಅಲ್ಲಿದ್ದ ಕುರ್ಚಿಯ ಮೇಲೆ ಕೂತ. ಕೈಯಲ್ಲಿ ಿಪಕ್ಕೆ ಒಂದು ಪುಸ್ತಕ. ಮನಸ್ಸು ಮಾತ್ರ ಎಲ್ಲೋ.

ವಿಶ್ವ ವಾಪಸ್ಸು ಬರುವ ಹೊತ್ತಿಗೆ ಸಾಕಷ್ಟು ಸಮಯವೇ ಹಿಡಿದಿತ್ತು. ಾಲ್ಕು ಬಟ್ಟಲಿನ ಕ್ಯಾರಿಯರ್‌ನಲ್ಲಿ ಕಲೆಸಿದ ತಿಳಿಸಾರು ಅನ್ನ, ಮೊಸರನ್ನ, ುರುಳಿಕಾಯಿಯ ಪಲ್ಯ, ಉಪ್ಪಿನಕಾಯಿಯನ್ನೂ ಹಾಕಿಕೊಂಡು ತಂದಿದ್ದ. ಸುದನಿಯಲ್ಲಿವರಿಬ್ಬರೂ ಮಾತನಾಡಿಕೊಂಡರೂ ನಳಿನಿಗೆ ಎಚ್ಚರವಾಯಿತು.

''ಊಟ ಮಾಡ್ತೀರಾ ?'' ವಿಶ್ವ ಕೇಳಿದಾಗ ಹೂಂ ಎನ್ನುವಂತೆ ಲೆಯಾಡಿಸಿದಳು. ಇಬ್ಬರ ಸಹಾಯದಿಂದ ದಿಂಬಿಗೆ ಒರಗಿ ಕೂತಳು. ಒಂದು ಟ್ಟೆಗೆ ಅನ್ನ ಪಲ್ಯವನ್ನು ಹಾಕಿಕೊಟ್ಟು ಚಮಚವನ್ನಿಟ್ಟ. ಘಂ ಎನ್ನುವ ಸಾರಿನ ಗ್ಗರಣೆ... ಅವಳ ಹಸಿವನ್ನು ಕೆರಳಿಸಿತ್ತು. ನಿಧಾನವಾಗಿ ತಿಂದಳು. ಳಿದುದನ್ನು ಪೃಥ್ವಿಯೂ ತಿಂದಿದನ್ನು ಕಂಡು, ಕೇಳಿದಳು.

''ಯಾಕೆ ಪೃಥ್ವಿ ...? ಊಟಕ್ಕೆ ಮನೆಗೆ ಹೋಗಲಿಲ್ವಾ ? ಮತ್ತೆ ಈ ೂಟ ಎಲ್ಲಿಂದ ತಂದಿದ್ದು ?''

''ವಿಶ್ವನ ಮನೆಯಿಂದ... ಅವರೇ ಅಡಿಗೆ ಮಾಡಿಕೊಂಡು ತಂದಿದಾರೆ. ೂಟ ಚೆನ್ನಾಗಿತ್ತು ಅಲ್ವಾ ?'' ನಾಗೇಶ ತನ್ನ ಕೈನ ಸರಳವಾದ ಅಡಿಗೆಯನ್ನು ೊಗಳಿಕೊಂಡು ಊಟ ಮಾಡಿದ್ದು ನಳಿನಿಗೆ ನೆನಪಿಗೆ ಬಂತು. ಅದರ ಂದೆಯೇ ಒಂದೊಂದಾಗಿ ಎಲ್ಲಾ ವಿಷಯಗಳೂ ನೆನಪಿಗೆ ಬಂದವು. ಕಣ್ಣು ುಚ್ಚಿ ತನ್ನಲ್ಲೇ ರೋಧಿಸತೊಡಗಿದಳು.

''ನನಗೊಂದು ಮೀಟಿಂಗ್ ಇದೆ. ಸಾಯಂಕಾಲದ ಹೊತ್ತಿಗೆ ಬಂದು

ಬಿಡ್ತೀನಿ. ಅಲ್ಲೀವರೆಗೂ ನೀವು ಇರುಕ್ಕೆ ಆಗುತ್ತಾ?'' ಪೃಥ್ವಿ ಕೇಳಿಕೊಂಡ. ಪೃಥ್ವಿ ಅತ್ತ ಹೋದ ಕೂಡಲೇ ವಿಶ್ವನನ್ನು ತನ್ನ ಬಳಿಗೆ ಕರೆದಳು. ಅವನ ಕೈ ಹಿಡಿದಳು.

''ಪೃಥ್ವಿಯನ್ನು ಮದುವೆಯಾಗುವಂತೆ ನೀನು ಒಪ್ಪಿಸಬೇಕು.. ಈಗ ಉಳಿದಿರುವುದು ಅದೊಂದೇ ದಾರಿ...''

''ನೀವೇ ಆಡಬಹುದಲ್ಲ...''

''ನೀನೆಂತಹ ಸ್ನೇಹಿತನೋ...? ಹೋಗಲಿ ನೀನ್ಯಾಕೆ ಮದುವೆಯಾಗಲಿಲ್ಲ? ನಿನ್ನ ಮಕ್ಕಳಿಗೆ ನಾನೇ ನಿಜವಾದ ಅಜ್ಜಿ....'' ವಿಶ್ವ ಕೆಂಗಣ್ಣು ಬಿಟ್ಟ.

''ಬರೀ ಮದುವೆ, ಮಕ್ಕಳು, ಮೊಮ್ಮಕ್ಕಳು... ಇದನ್ನು ಬಿಟ್ಟು ಬೇರೆ ಬದುಕೇ ಇಲ್ವಾ ?''

''ನನ್ನಂಥೋಳಿಗೆ ಇನ್ನೇನಿದೆ ಹೇಳು ? ಈ ಮನೆಗೆ ಸೇರಿದ ಮೇಲೆ ಈ ಮನೆಯ ಚಿಂತೆ ನನ್ನದೇ ತಾನೇ ? ಆ ಹುಡುಗಿಯರಾದರೂ ಅಷ್ಟೇ... ಅವರಿಗೆಷ್ಟು ಕೊರಗಿರುತ್ತೆ... ಎಷ್ಟು ಕಣ್ಣೀರು ಹಾಕ್ತಾರೋ...?''

''ಅದಕ್ಕೆಲ್ಲ ಚಿಂತೆ ಮಾಡುಕ್ಕಾಗುತ್ತಾ ? ಎಷ್ಟೋ ಜನರಿಗೆ ಮಕ್ಕಳು ಹುಟ್ಟುವುದಿಲ್ಲ. ಹಾಗಂತ ಅವರು ಜೀವಮಾನವೆಲ್ಲಾ ಕೊರಗಿದ್ರೆ ಏನು ಬಂತು ? ಮಕ್ಕಳು ಹುಟ್ಟಿದ ಮೇಲೆ ಬೆಳೆಸಲು ಆಗದೇ ಅವರನ್ನು ದೂರ ಮಾಡುವುದಕ್ಕಿಂತ ಮಕ್ಕಳಾಗದಿರುವುದೇ ಮೇಲು...'' ಮಾತು ತಾನಾಗಿಯೇ ಹೊರಬಿದ್ದಿತು.

''ಯಾರನ್ನ ಕುರಿತು ಈ ಮಾತುಗಳನ್ನಾಡ್ತಿದ್ದೀಯ ಅಂತ ನನಗೂ ಅರ್ಥವಾಗುತ್ತೆ ವಿಶ್ವ... ಹೇಳದೇ ಕೇಳದೇ ಬಿಟ್ಟು ಹೋದ ಆ ಗಂಡಸಿನದು ಏನೂ ತಪ್ಪು ಅಂತ ಅನ್ನಿಸುಲ್ವಾ ನಿನಗೆ?'' ವಿಶ್ವ ಸುಮ್ಮನಾದ. ರೂಪಿಣಿ ಹೇಳಿದ್ದ ಮೇಷ್ಟ್ರ ಬಗ್ಗೆ ಹೇಳಲು ಇದು ಸಮಯವಲ್ಲ ಅಂತಂದುಕೊಂಡ.

''ವಿಶ್ವ, ನನ್ನದೇ ತಪ್ಪು ಅಂತ ನಿನ್ನ ಮನಸ್ನಲ್ಲಿ ಇದೆ. ಅದನ್ನು ಆಡಿಯೂ ಇದೀಯ. ಆದರೆ ಪೃಥ್ವಿ ಇಂತಹ ಮಾತುಗಳನ್ನಾಡಿನನ್ನ ಮನಸ್ಸನ್ನು ಎದೂ ನೋಯಿಸಿಲ್ಲ... ಅವರ ತಂದೆಯನ್ನು ಎಂದೂ ಟೀಕಿಸಲಿಲ್ಲ...''

''ಪೃಥ್ವಿ ಒಳ್ಳೆಯವನು ; ನಾನು ಕೆಟ್ಟವನು, ಸರೀನಾ ?''

''ಪೃಥ್ವಿ ಅವನ ಕರ್ತವ್ಯವನ್ನು ಪಾಲಿಸುತ್ತಿದಾನೆ. ನೀನು ಮರೆತಿದ್ದೀಯ. ಅಷ್ಟೇ ವ್ಯತ್ಯಾಸ...''

''ಈಗ ನನ್ನಿಂದ ಏನಾಗಬೇಕು ?...'' ಅಷ್ಟರಲ್ಲಿ ನರ್ಸು ಬಂದು ನಳಿನಿಯನ್ನು ಕುರಿತು ನುಡಿದಳು, ''ಸುಮ್ಮನೇ ಮಾತನಾಡಿ ಆಯಾಸ ಮಾಡ್ಕೋಬೇಡಿ. ಆಮೇಲೆ ಕಾಂಪ್ಲಿಕೇಷನ್ ಆಗುತ್ತೆ'' ವಿಶ್ವ ಹೊರ ಬಂದು ನಿಂತ.

* * * *

ಎರಡು ದಿನಗಳ ನಂತರ ನಳಿನಿ ಡಿಸ್ಚಾರ್ಜ್ ಆಗಿ ಮನೆಗೆ ಬಂದಳು. ಮನೆಯವರಂತೆಯೇ ಓಡಾಡಿಕೊಂಡಿದ್ದ ರೂಪಿಣಿಯನ್ನೇ ಗಮನಿಸಿದಳು. ರೂಪಿಣಿ ಅವಿವಾಹಿತೆ. ಈಗ ಗರ್ಭಿಣಿ ! ಆದರೆ ಯಾವ ಸಂಕೋಚವೂ ಇಲ್ಲದೇ ಮೆರೆಯುತ್ತಿದ್ದಾಳೆ... ಆ ದಿನ ಏನದಂಳು ? ಈ ಮಗುವಿಗೆ ನೀವೇ ಅಜ್ಜಿ ಅಂತ.. ಅಂದರೆ ಈ ಮಗು ವಿಶ್ವನದೇ, ಪೃಥ್ವಿಯದೇ.. ರೂಪಿಣಿ ಬಯಸಿದ್ದು ಪೃಥ್ವಿಯನ್ನು... ಆದರೆ ಸಲುಗೆಯಿಂದ ಇರುವುದು ವಿಶ್ವನೊಡನೆ... ಅಲ್ಲದೇ ಮತ್ತೇನಂದಳು ? ಅಜಯ ವಿಜಯರಿಗೆ ಮಕ್ಕಳಾಗುವುದೇ ಇಲ್ಲ. ಈಗಾಗಲೇ ಹೆಂಡತಿಯರನ್ನು ದೂರ ಮಾಡಿ ಬಿಟ್ಟಿದಾರೆ ಅಂತ. ಈ ಮಾತನ್ನು ಆಡುವಾಗ ಅವಳ ಮುಖದಲ್ಲಿ ಏನೋ ವಿಚಿತ್ರದ ಕಳೆ! ತನ್ನ ತಂಗಿಯರಿಗೆ ಅನ್ಯಾಯವಾಗುತ್ತಿದೆಯೆಂಬ ಸಂಕಟವೇನೂ ಇರುವಂತಿರಲಿಲ್ಲ... ನನಗಂತೂ ಯಾರೂ ಏನನ್ನೂ ಸರಿಯಾಗಿ ಹೇಳುವುದಿಲ್ಲ... ಅಜಯ ವಿಜಯರೇಕೆ ಪತ್ನಿಯರನ್ನು ದೂರ ಮಾಡಿದ್ದಾರೆ ? ತಾವಾಗಿಯೇ ಏಕೆ ಡೈವೋರ್ಸ್‌ಗೆ ಬಲವಂತ ಮಾಡುತ್ತಿದ್ದಾರೆ... ಹೆಂಡತಿಯರನ್ನೇಕೆ ಒಪ್ಪಿಸಬಾರದು ? ... ಡೈವೋರ್ಸ್ ಆಗದಂತೆ ತಾನು ತಡೆಯಬೇಕು ! ಒಂದು ವೇಳೆ ಅಜಯ ವಿಜಯರಲ್ಲೇ ದೋಷವಿದ್ದರೆ ಡೈವೋಸ್ ಆದರೂ ಒಂದೇ, ಆಗದಿದ್ದರೂ ಒಂದೇ... ವಂಶವನ್ನು ಮುಂದುವರಿಸುವ ಮಕ್ಕಳಂತೂ ಹುಟ್ಟುವುದಿಲ್ಲ... ಈ ಹುಡುಗಿಯರಿಗೆ ಎಲ್ಲಾ ರೀತಿಯಿಂದಲೂ ಅನ್ಯಾಯವಾಗುವುದಿಲ್ಲವೇ ? ಅವರಿಬ್ಬರಿಗೂ ಮತ್ತೆ ಮದ್ವೆಯಾಗುತ್ತೆ ಅಂತ ಹೇಗೆ ಹೇಳುಕ್ಕಾಗುತ್ತೆ ? ಹೆಚ್ಚಿಗೆ ಓದಿಲ್ಲ, ಕೆಲಸ ಉದ್ಯೋಗವಿಲ್ಲ. ಅನುಕೂಲಸ್ಥರಲ್ಲಿ ಅಂತ ತಿಳಿದೂ ಅವರು ಆಚೆಗೆ ಹೋಗುವುದ್ಕಕೆ ಬಿಟ್ಟರೇ... ಜನ ತಮ್ಮನ್ನೇ ಆಡಿಕೊಂಡು ನಗುತ್ತಾರೆ. ಡೈವೋರ್ಸಿನ ಕಾರಣ ತಿಳಿದರಂತೂ, ಮನೆಯ ಮರ್ಯಾದೆಯೇ ಹೊರಟುಹೋಗಿರುತ್ತದೆ. ಇಬ್ಬರಿಗೂ ಮಕ್ಕಳಾಗುವುದಿಲ್ಲ ಅಂತ ಊರಿಗೆಲ್ಲಾ ನಾವಾಗಿಯೇ ಪ್ರಚಾರ ಮಾಡಿದಂತಾಗುತ್ತದೆ. ಇದಕ್ಕಿಂತ ಅವಮಾನ ಬೇಕಾ ?

ಹೀಗಾಗಲೇ ಬಾರದು. ಮೇನಕಾ ರೇವತಿಯರು ಈ ಮನೆಯಿಂದ ಹೊರಹೋಗಬಾರದು... ಹೇಗಾದರೂ ಸರಿ ಮೇನಕಾ ರೇವತಿಯರಿಗೆ ಮಗುವಾದರೂ ಆಗಲೇಬೇಕು. ಜನರು ನಮ್ಮನ್ನು ಹಾಸ್ಯ ಮಾಡುವಂತಾಗ ಬಾರದು. ಈಗಾಗಲೇ ಈ ವಿಷಯ ರೂಪಿಣಿಗೆ ತಿಳಿದಿರುವುದೇ ತಪ್ಪು. ಅವಳು ಅಜಯ ವಿಜಯರ ಬಗ್ಗೆ ಅಪಪ್ರಚಾರ ಮಾಡುವ ಮೊದಲೇ ಏನಾದರೂ ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು... ತನ್ನಲ್ಲೇ ಆಲೋಚನೆಯ ಮಂಥನವನ್ನು ನಡೆಸಿದಳು.

ಅಜಯ ವಿಜಯರು ಏರ್‌ಪೋರ್ಟಿಗೆ ಹೋಗುವ ಮೊದಲು, ತಾಯಿಗೆ ನಮಸ್ಕಾರ ಮಾಡಿ, ಅಪ್ಪಣೆ ಪಡೆದರು. ನಳಿನಿ ಭಾವುಕಳಾದಳು. ಕಣ್ಣೀರು ಜಿನುಗಿತು.

''ನೀವು ಮನಸ್ನಲ್ಲಿ ಏನೇನೋ ದುರಾಲೋಚನೆಗಳನ್ನು ಮಾಡಬೇಡಿ... ನಿಮ್ಮಿಂದ ನಿಮ್ಮ ಹೆಂಡತಿಯರಿಗೆ ಅನ್ಯಾಯವಾಗುತ್ತಿದೆ ಎಂದು ಕೊರಗಬೇಡಿ. ನಾನು ಸರಿ ಮಾಡ್ತೀನಿ. ನೀವುಗಳು ಖುಷಿಯಾಗಿರುವುದು ನನಗೆ ಮುಖ್ಯ'' ಎಂದಳು.

ಅಲ್ಲಿಂದ ಹೊರಟರೆ ಸಾಕು ಎನ್ನುವಂತೆ ಅವರಿಬ್ಬರು ಹೊರಬಿದ್ದರು. ಪೃಥ್ವಿ, ವಿಶ್ವ ಇಬ್ಬರೇ ಏರ್‌ಪೋರ್ಟಿಗೆ ಹೋಗಿದ್ದರು. ರೂಪಿಣಿ ಸಹ ಎಲ್ಲೋ ಹೊರಗೆ ಹೋಗಿದ್ದಳು. ನಳಿನಿ ತನ್ನ ಸೊಸೆಯರನ್ನ ಹತ್ತಿರಕ್ಕೆ ಕರೆದಳು.

''ನಿಮ ವ್ಯಸನ ಏನೂಂತ ನನಗೆ ಅರ್ಥವಾಗುತ್ತೆ... ನಿಮಗೂ ಡೈವೋರ್ಸ್ ಬೇಕು ಅಂತ ಇದ್ದರೆ ನಾನು ಬೇಡ ಎನ್ನುವುದಿಲ್ಲ. ನೀವೇ ನಿರ್ಧರಿಸಿ'' ಎಂದಳು.

''ಇಲ್ಲ ಅತ್ತೆ... ನಮಗೆ ಅಜಯ ವಿಜಯರು ಏಕೆ ಹೀಗೆ ಬದಲಾದರು ? ನಮ್ಮನ್ನು ದೂರ ಮಾಡುವಂಥ ಬುದ್ಧಿ ಏಕೆ ಬಂತು ಅಂತ ಅರ್ಥವಾಗುತ್ತಿಲ್ಲ''

''ಯಾಕೆ ? ನಿಮಗೆ ನಿಜ ಏನೂಂತ ಗೊತ್ತಿಲ್ವಾ ? ಸುಳ್ಳು ಹೇಳಬೇಡಿ...''

''ಗೊತ್ತು... ಮನಗೆ ರೂಪಿಣಿ ಹೇಳಿದಳು... ನಮಗೆ ಮಕ್ಕಳಾಗುವುದಿಲ್ಲ ಅಂತ... ಅದು ನಮ್ಮ ತಪ್ಪಾ... ನೀವೇ ಹೇಳಿ...''

''ತಪ್ಪು ನಿಮ್ಮದಲ್ಲ. ಅವರದೇ.. ಅದಿರಲಿ, ರೂಪಿಣಿ ಇನ್ನೇನೇನು ಹೇಳಿದಳು ?''

"ಅವಳು ಒಂದೊಂದು ಸಾರಿ ಒಂದೊಂದು ತರಹ ಮಾತನಾಡ್ತಾಳೆ. ನಮಗೆ ಮಕ್ಕಳಾಗುವಂತಿಲ್ಲ ಅಂತ ಅವಳಿಗೆ ಒಳಗೊಳಗೇ ಖುಷಿ... ಅವಳೀಗ ಗರ್ಭಿಣಿ... ಅದಕ್ಕೇ ಅವಳಿಗೆ ಜಂಭ...!" ಇಬ್ಬರೂ ಮುಸಿಮುಸಿ ಅತ್ತರು.

"ಅವಳ ಮಾತಿಗೆ ಬೆಲೆ ಕೊಡಬೇಡಿ... ಹೆಂಗಸರಿಗೆ ತಾಯಿಯಾಗುವ ಆಸೆ ಸಹಜ... ಅದು ತಪ್ಪಿದರೆ ಕೊರಗು ಉಂಟಾಗದೇ ಇರುತ್ತಾ? ಹಾಗಾದರೆ ನೀವು ಬೇರೆ ಮದುವೆ ಮಾಡಿಕೊಂಡು ಹೋಗುವುದಕ್ಕೆ ನಾನು ಸಹಾಯ ಮಾಡ್ತೀನಿ. ನೀವು ಚಿಂತಿಸಬೇಡಿ..."

"ಏನೂ ಬೇಡ ಅತ್ತೆ... ನಮ್ಮನ್ನು ಬೇರೆ ಯಾರು ಮದುವೆಯಾಗ್ತಾರೆ ? ಅಲ್ಲದೇ ಕೇಳಿದವರಿಗೆಲ್ಲ ಅಜಯ ವಿಜಯರ ದುರ್ಬಲತೆಯನ್ನು ಹೇಳಿಕೊಂಡು ಅವರಿಗೆ ಅವಮಾನ ಮಾಡುವ ಇಚ್ಛೆ ನಮಗಿಲ್ಲ. ನಮಗೆ ಮಕ್ಕಳಾಗದಿದ್ದರೂ ಪರವಾಗಿಲ್ಲ. ನಾವು ಇಲ್ಲೇ ಇರ್ತೀವಿ. ಅಜಯ ವಿಜಯರು ಅಮೆರಿಕಾದಿಂದ ವಾಪಸ್ಸು ಬರುವುದುನ್ನು ಕಾಯ್ತೀವಿ."

"ಬೇಡ, ಬೇಡ, ನನಗಾಗಿ, ಅಜಯ ವಿಜಯರಿಗಾಗಿ, ನಿಮ್ಮ ಬದುಕನ್ನು ತ್ಯಾಗ ಮಾಡಬೇಡಿ... ಮುದಂಎ ಪಶ್ಚಾತ್ತಾಪ ಪಡುತ್ತೀರಿ ಅಷ್ಟೇ... ಹೇಗೂ ಡೈವೋರ್ಸಿನ ಕಾಗದ ಪತ್ರಗಳು ಸಿದ್ಧವಾಗಿವೆಯಂತೆ... ನಾನೇ ಮುಂದೆ ನಿಂತು ನಿಮಗೆ ಮದುವೆ ಮಾಡಿಸುತ್ತೇನೆ. ಆದರೆ ನೀವು ನನ್ನದೊಂದು ಕೆಲಸವನ್ನು ಮಾಡಿಕೊಡಬೇಕು.." ಏನದು ? ಎನ್ನುವಂತೆ ಇಬ್ಬರೂ ನೋಡಿದರು.

"ಪೃಥ್ವಿ ಮದುವೇನೇ ಮಾಡಿಕೊಳ್ಳುಲ್ಲ ಅಂತ ಶಪಥ ಮಾಡಿಬಿಟ್ಟಿದ್ದಾನೆ. ನನ್ನ ಮಾತನ್ನು ಧಿಕ್ಕರಿಸಿಬಿಟ್ಟ... ನಾನು ಎಷ್ಟಾಗಲೀ ಚಿಕ್ಕಮ್ಮ ತಾನೇ... ನೀವು... ನೀವಿಬ್ಬರೂ ಅವನು ಮದುವೆಯಾಗುವಂತೆ ಒಪ್ಪಿಸಬೇಕು. ಇಲ್ಲದಿದ್ದರೆ ಈ ವಂಶ ಇಲ್ಲಿಗೇ ನಿಂತು ಹೋಗುತ್ತದೆ. ನಿಮ್ಮ ಮಾವ, ನಮ್ಮ ಮಾವ ಇಬ್ಬರಿಗೂ ನಾನು ದ್ರೋಹ ಮಾಡಿದಂತಾಗುತ್ತದೆ..." ಇಬ್ಬರೂ ಮುಖ ಮುಖ ನೋಡಿಕೊಂಡರು.

"ಪೃಥ್ವಿ ತುಂಬಾ ಒಳ್ಳೆಯ ಹುಡುಗ, ಅವನನ್ನು ಮದುವೆಯಾಗುವವಳು ನಿಜಕ್ಕೂ ಅದೃಷ್ಟವಂತೆಯೇ... ಅವನು ಮದುವೆಯಾಗಿ ಸಂಸಾರಿಯಾದರೆ ನಾನು ಈ ವ್ಯಥೆಯನ್ನೆಲ್ಲ ಮರೆತು ಇರಬಲ್ಲೆ..." ನಳಿನಿ ಆಯಾಸದಿಂದ ಕಣ್ಣು ಮುಚ್ಚಿ ಮಲಗಿದಳು. ಅತ್ತೆಯ ಮಾತುಗಳು ವಿಚಿತ್ರವೆನಿಸಿತ್ತು. ತಾವು ಪೃಥ್ವಿಯನ್ನು ಒಪ್ಪಿಸಲು ಸಾಧ್ಯವೇ ? ಭಾವನೊಂದಿಗೆ ಸಲುಗೆ ಇಲ್ಲ; ಹಿರಿಯ

ನೆಂಬ ಗೌರವವಿದೆ. ತಾವು ಏನೇನ್ನೋ ಮಾತನ್ನಾಡಿದರೆ, ಬೈಯುವುದಿಲ್ಲವೇ?... ಮೆಲ್ಲಗೆ ಎದ್ದು ಅಲ್ಲಿಂದ ಹೊರಗೆ ಬಂದರು.

ಆ ರಾತ್ರಿ ಪೃಥ್ವಿ ಗೆಸ್ಟ್‌ಹೌಸ್‌ನಲ್ಲಿ ಉಳಿದುಕೊಂಡ. ರೂಪಿಣಿ ಮನೆಗೆ ಮತ್ತೆ ಬರುತ್ತಾಳೆಂದುಕೊಂಡಿದ್ದ. ಆದರೆ ರೂಪಿಣಿ ವಿಶ್ವನ ಮನೆಯಲ್ಲಿ ಉಳಿದುಕೊಂಡಳು... ಮಧ್ಯರಾತ್ರಿಯ ಹೊತ್ತಿಗೆ ವಿಶ್ವ ತನ್ನ ಮನೆಗೆ ಬಂದ. ಅಲ್ಲಿದ್ದ ರೂಪಿಣಿಯನ್ನು ಕಂಡು ಚಕಿತನಾದ.

''ನೀನೇಕೆ ಇಲ್ಲಿದೀಯ ? ಅಲ್ಲಿ ಮೇನಕಾ, ರೇವತಿಯರು ಇಬ್ಬರೇ, ನಳಿನಿಗೆ ಆರೋಗ್ಯ ಚೆನ್ನಾಗಿಲ್ಲ. ಪೃಥ್ವಿ ಗೆಸ್ಟ್ ಹೌಸಿಗೆ ಹೋದ.''

''ಯಾಕೆ ? ನನಗೆ ಹೆದರಿದಾನಾ ?'' ನಕ್ಕಳು.

''ಅದೆಲ್ಲ ನನಗೆ ಗೊತ್ತಿಲ್ಲ.... ನೀನು ಇನ್ನು ಮೇಲೆ ಹೆಚ್ಚಿಗೆ ಇಲ್ಲಿಗೆ ಬರಬೇಡ. ಪಂಡಿತರಿಗೂ ಅನುಮಾನ ಬರುತ್ತೆ.''

''ಯಾಕೆ ? ನೀವೂ ಹೆದರುತ್ತೀರಾ ? ನಾನು ಯಾರಿಗೂ ಹೆದರುಲ್ಲ.... ನಾನು ನಿಮಗೆ ಬೇಡವಾದರೆ, ನಾನು ಮೇನಕಾ ರೇವತಿಯರ ಜೊತೇನೇ ಇರ್ತೀನಿ.''

''ಸದ್ಯಕ್ಕೆ ನೀನು ಅಲ್ಲಿರುವುದು ಎಲ್ಲಾ ರೀತಿಯಿಂದಲೂಒಳ್ಳೆಯದೇ.. ನೀನು ನಿನ್ನ ತಂಗಿಯರ ಹತ್ತಿರ ಮಾತನಾಡು. ಅವರು ಡೈವೋರ್ಸ್ ತಗೊಳ್ಳಲಿ... ನಳಿನಿ ಬೇರೆ ಮದುವೆ ಮಾಡಿಸುತ್ತಾಳೆ.''

''ನಿಮ್ಮ ನಳಿನೀನ ನಾನು ನಂಬುಲ್ಲ. ಅವಳು ಸ್ವಾರ್ಥಿ.. ನನ್ನ ತಂಗಿಯರಿಗೆ ಹೇಗೆ ನೆರವಾಗುತ್ತಾಳೆ ?''

''ಮರ್ಯಾದೆ ಕೊಟ್ಟು ಮಾತನಾಡು ರೂಪಿಣಿ, ನಳಿನಿ ನನ್ನ ತಾಯಿ..''

''ತಾಯಿ ಮಗನ ಮಧ್ಯೆ ಎಷ್ಟು ವಿಶ್ವಾಸವಿದೆ ಅಂತ ನನಗೆ ಚೆನ್ನಾಗಿ ಗೊತ್ತು... ಎಲ್ಲಾ ಸೇರಿ ನನ್ನ ತಂಗಿಯರಿಗೆ ಮೋಸ ಮಾಡಲು ನೋಡ್ತಿದೀರಿ.. ಇದಕ್ಕೆ ನಾನು ಅವಕಾಶ ಕೊಡುವುದಿಲ್ಲ.''

''ಇದರಲ್ಲಿ ಮೋಸ ಏನು ಬಂತು ? ನಿನ್ನ ತಂಗಿಯರ ಬಾಳನ್ನು ಸರಿ ಮಾಡುಕ್ಕೆ ನೋಡಿದ್ರೆ ಅದನ್ನ ಮೋಸ ಅಂತ ಅಂತೀಯಲ್ಲ...''

''ಯಾಕೆ ನಿಮಗೆ ಮೋಸ ಮಾಡಿದ್ದನ್ನು ಮರೆತುಬಿಟ್ರಾ ?''

"ನನ್ನ ವಿಷಯ ಬೇರೆ... ಈಗ ಅವಳಿಗೂ ವಯಸ್ಸಾಗಿದೆ. ಇನ್ನೆಷ್ಟು ರ್ಷ ಬದುಕಿಯಾಳು ?''

''ಹಾಗಾದರೆ ನಳಿನಿ ಬದುಕಿರುವಾಗಲೇ ಒಂದು ವಿಷಯ ಇತ್ಯರ್ಥ ಾಗಬೇಕು. ನನಗೆ ಹುಟ್ಟುವ ಮಗುವನ್ನು ನಾನು ನಳಿನಿಗೇ ಕೊಟ್ಟುಬಿಡ್ತೀನಿ. ದು ಪೃಥ್ವಿಗೆ ಹುಟ್ಟಿದ ಮಗು ಅಂತ ಹೇಳ್ತೀನಿ. ನಂಬದೇ ಇರಲು ಸಾಧ್ಯವಿಲ್ಲ. ಾನಂತೂ ಅವನನ್ನು ಮದುವೆಯಾಗಿ ಅವನ ಮಗುವನ್ನು ಹೆರಲಿಲ್ಲ. ಈ ಗುವನ್ನು ಅಲ್ಲಿ ಬಿಟ್ಟು ಅವನನ್ನು ಮದುವೆಯಾಗುವ ಪ್ರಯತ್ನ ಪಡ್ತೀನಿ.''

''ಛೀ, ರೂಪಿಣಿ ನಿನಗೆ ನಾಚಿಕೆ ಆಗುಲ್ವಾ ಹೀಗೆಲ್ಲ ಮಾತನಾಡುಕ್ಕೆ ? ದೆಲ್ಲಾ ಶುದ್ಧ ತಪ್ಪು. ಪೃಥ್ವಿ ಮೇಲೆ ಅವಳಿಗೆ ಅಪಾರ ನಂಬಿಕೆ. ಇಬ್ಬರೂ ಸೇರಿ ನಗೇ ಛೀಮಾರಿ ಹಾಕ್ತಾರೆ. ಆಗ ನನಗೂ ಅವಮಾನವಾಗುತ್ತೆ.''

''ಮಾನ ಹೋಗುವುದು ಅವರಿಗೇ ವಿಶ್ವಾ... ನಾನು ಪ್ರಚಾರ ಮಾಡಿದರೆ, ಅವರಿಬ್ಬರ ಸ್ಥಿತಿ ಏನಾಗುತ್ತೆ ಅಂತ ನನಗೆ ಗೊತ್ತು... ನಿಮಗೂ ಳಿನಿಯ ಮೇಲೆ ದ್ವೇಷವಿತ್ತು ಅಲ್ವಾ ವಿಶ್ವಾ... ಈಗ ನಿಮ್ಮ ಮಗುವನ್ನೇ ನಳಿನಿ ಾಕಬೇಕಾಗಿ ಬರುತ್ತೆ... ನಿಮ್ಮನ್ನು ದೂರ ಮಾಡಿದವರಿಗೆ ಸರಿಯಾದ ಬುದ್ಧಿ ರುತ್ತೆ.''

''ನನಗೆ ಪೃಥ್ವಿಯ ಮೇಲೆ ಯಾವ ದ್ವೇಷವಿಲ್ಲ. ನಾನು ಅವನಿಗೆ ಯಾವುದೇ ರೀತಿಯಲ್ಲೂ ಅವಮಾನವಾಗುವುದನ್ನು ಸಹಿಸುವುದಿಲ್ಲ''

''ಚೆನ್ನಾಗಿ ಅಪಾರ ಆಸ್ತಿಯ ವಾರಸುದಾರನಾಗುವ ಸುಯೋಗ ನಿಮ್ಮ ಗನಿಗೆ ಸಿಗುತ್ತದೆ. ಅದಕ್ಕೇಕೆ ಅಡ್ಡಿ ಬರುತ್ತೀರಿ ?''

''ಇದೆಲ್ಲ ಸರಿಯಿಲ್ಲ ರೂಪಿಣಿ... ನೀನು ಹೀಗೆಲ್ಲಾ ಕಿತಾಪತಿ ಮಾಡಿದರೆ, ಹೊಟ್ಟೆಲಿರುವ ನನ್ನ ಮಗುವಿನ ಮೇಲಾಣೆ'' ರೂಪಿಣಿ ಮುನಿಸಿಕೊಂಡು ದೂರ ರಿದಳು. ಅವಳನ್ನು ರಮಿಸಬೇಕೆಂದೇನೂ ಅನ್ನಿಸಲಿಲ್ಲ ಅವನಿಗೆ.

ಬೆಳಿಗ್ಗೆ ಎದ್ದ ನಂತರ, ರೂಪಿಣಿ ಬೇಗಬೇಗನೇ ಸಿದ್ಧಳಾಗಿ ಎದ್ದು ೊರಟಳು. ''ನಾನೀಗ ಪೃಥ್ವಿಯ ಮನೆಗೆ ಹೋಗ್ತಾ ಇದೀನಿ, ನೀವೂ ರ್ತೀರಾ ?'' ತಾನಾಗಿಯೇ ಪ್ರಶ್ನಿಸಿದಳು.

''ಇಲ್ಲ, ನನಗೆ ಆಸ್ಪತ್ರೆಯ ಕಟ್ಟಡದ ಕೆಲಸವಿದೆ. ನೀನು ಹೋಗು. ಆದರೆ ೀನು ಅಲ್ಲಿ ಬಾಯಿ ಮುಚ್ಚಿಕೊಂಡು ಇರಬೇಕು. ಯಾರಿಗೂ ಏನೂ ೇಸರವಾಗುವಂತೆ ಮಾತನಾಡಕೂಡದು'' ಅವಳು ನಕ್ಕು ಬಿಟ್ಟಳು.

* * * *

ರೂಪಿಣಿ ತನ್ನ ತಂಗಿಯರೊಂದಿಗೆ ಇಲ್ಲೇ ಇರುವುದನ್ನು ಕಂಡು, ಪೃಥ್ವಿ ಗೆಸ್ಟ್‌ಹೌಸ್‌ನಲ್ಲೇ ಇರತೊಡಗಿದ. ಅವರಿಬ್ಬರೂ ಬೇಸರಗೊಂಡಿದ್ದಾರೆ. ಅವರಿಗೂ ಯಾರಾದರೂ ಬೇಕು. ಒಂದು ವೇಳೆ ಅವರುಗಳು ಬೇಸರವಾಗುತ್ತದೆ ಅಂತ ತಮ್ಮ ತಾಯಿಯ ಮನೆಗೆ ಹೊರಟುಹೋದರೆ, ಚಿಕ್ಕಮ್ಮ ಒಂಟಿಯಾಗಿಬಿಡುತ್ತಾರೆ ಎಂದುಕೊಂಡು ರೂಪಿಣಿಯ ಇರುವಿಕೆಯನ್ನು ಸಹಿಸಿಕೊಂಡ. ರೂಪಿಣಿಗೆ ಸರಾಗವಾಗಿತ್ತು.

ಕಣ್ಣೆದುರಿಗೇ ಓಡಾಡುತ್ತಿದ್ದ ರೂಪಿಣಿಯನ್ನು ಆಗಾಗ್ಗೆ ವಿಶೇಷವಾಗಿ ಗಮನಿಸುತ್ತಿದ್ದಳು ನಳಿನಿ. ರೂಪಿಣಿಯ ಬೆಡಗು, ಬಿನ್ನಾಣ, ಸೊಗಸು ಮತ್ತೂ ಹೆಚ್ಚಾಗಿದೆ ಎನಿಸಿತ್ತು. ತಾಯಿಯಾಗಲಿರುವ ವಿಶೇಷ ಕಳೆ ಮುಖದಲ್ಲಿ ಬಿಂಬಿಸಿತ್ತು. ಈ ಸೌಭಾಗ್ಯವನ್ನು ಎಲ್ಲಾ ಹೆಂಗಸರೂ ಬಯಸುತ್ತಾರೆ. ಇವಳನ್ನು ನೋಡಿ ನೋಡಿ ಮೇನಕಾ ರೇವತಿಯರಲ್ಲೂ ಈ ಬಯಕೆ ಉದಿಸದೇ ಇರುತ್ತದೆಯಾ ? ಈ ಬಯಕೆಯ ಬಿರುಗಾಳಿ ಏನೇನು ಬೆಂಕಿಯನ್ನು ಹಚ್ಚಿಸುತ್ತದೆಯೋ? ತನಗೆ ತಿಳಿಯದಂತೆ, ಏನಾದರೂ ದಾರಿಯನ್ನು ಹುಡುಕಿಕೊಂಡರೇ.. ಇವರಿಗೆ ಈ ರೂಪಿಣಿಯೇ ಗುರು... ಇದನ್ನೆಲ್ಲ ನಿವಾರಿಸುವಂತಹ ಯಾವುದಾದರೂ ಮಾರ್ಗವಿದ್ದರೇ...?

ತಾಯಿಯಾಗುವ ಬಯಕೆಯನ್ನು ಅದುಮಿಡಲಾರದೇ, ತಾವು ತಾವೇ ಮಾರ್ಗಗಳನ್ನು ಕಂಡುಕೊಂಡ ಅನೇಕ ಮಹಿಳೆಯರ ವಿಚಾರಗಳನ್ನು ಓದಿರುತ್ತೇವೆ, ಕೇಳಿರುತ್ತೇವೆ. ಆ ಸಾಲಿಗೆ ಈ ಮೇನಕಾ ರೇವತಿಯರೂ ಸೇರಿಬಿಟ್ಟರೇ... ವಂಶದ ಉದ್ಧಾರಕ್ಕಾಗಿ, ಅನೀತಿ, ಅವ್ಯವಹಾರಗಳ ಮಾರ್ಗವನ್ನು ಅನುಸರಿಸುವಂತೆ, ಮನೆ ಮನೆಯವರೇ ಮಾರ್ಗಗಳನ್ನು ತೋರಿಸಿಕೊಡುವ ಕತೆಗಳನ್ನು ಓದಿಲ್ಲವೇ ? ಇದ್ದಕ್ಕಿದ್ದಂತೆ ಅವಳಿಗೆ ಮಹಾಭಾರತದ ಕಥೆ ನೆನಪಿಗೆ ಬಂತು. ಮಹಾಭಾರತದ ಕಥೆಯಲ್ಲಿ ಆದಿಯಿಂದ ಅಂತ್ಯದವರೆಗೂ ಅದೆಷ್ಟು ತಿರುವು ! ಕಾಮನೆಗಾಗಿ, ಕುತೂಹಲಕ್ಕಾಗಿ, ಮದುವೆಗೆ ಮೊದಲೇ, ತಾಯಿಯರಾಗುವ ಉದಾಹರಣೆಗಳಿವೆ... ಸಂತಾನಕ್ಕಾಗಿ ವಂಶೋದ್ಧಾರಕ್ಕಾಗಿ ಕುಂಟುಬದವರೇ ಯೋಜಿಸಿ, ಮಕ್ಕಳಾದ ಉದಾಹರಣೆಗಳಿವೆ. ಧೃತರಾಷ್ಟ್ರ, ಪಾಂಡು ಹುಟ್ಟಿದ್ದೇ ಹಾಗೆ. ಪಾಂಡವರ ಜನ್ಮ ರಹಸ್ಯವಂತೂ ಒಂದು ವರದಾಗ ಆ ಯುಗದಲ್ಲಿ!

ಆದರೆ ಈ ಯುಗದಲ್ಲಿ ? ಈ ರೀತಿಯ ಅವಕಾಶಗಳಿಲ್ಲ. ದ್ವಾಪರ

ಯುಗದ ಆ ನಿಯೋಗ ಪದ್ಧತಿಯನ್ನು ಈ ಯುಗದಲ್ಲೂ ಅನುಸರಿಸುವಂತಿದ್ದರೆ ನನ್ನಂತಹವಳ ಮನಃಕ್ಲೇಶ ಕಡಿಮೆಯಾಗುತ್ತಿತ್ತು. ಏನೋ... ಈಗ ಈ ರೂಪಿಣಿಯ ಕತೆಯೋ... ಆದರೆ ಅವಳೆಷ್ಟು ಧೈರ್ಯದಿಂದಿದ್ದಾಳೆ. ಅಲ್ಲಿಯೇ ಕೂತಿದ್ದ ರೂಪಿಣಿಯನ್ನು ತನ್ನ ಬಳಿಗೆ ಕರೆದಳು.

''ಅಲ್ಲಾ ರೂಪಿಣಿ, ನಮಗೆಲ್ಲಾ ತಿಳಿಯದಂತೆ, ಅದ್ಯಾವಾಗ ಗುಟ್ಟಾಗಿ ಮದುವೆಯಾದೆ ?'' ತಮಾಷೆ ಮಾಡಿದಳು.

''ನನ್ನ ಮದುವೆ ! ಇಲ್ಲವಲ್ಲ...'' ಸಂಕೋಚವಿಲ್ಲದೇ ನುಡಿದಳು.

''ಮತ್ತೆ ? ಈಗಲೇ ಸಾಕಷ್ಟು ತಡವಾಗಿ ಹೋಗಿದೆ. ಆದಷ್ಟು ಬೇಗ ಮದುವೆಯಾಗಿ ಬಿಡು.... ಜನರು ನಗುವಂತಾಗಬಾರದು.... ಇಲ್ಲದಿದ್ದರೆ ಮುಂದೆ ಹುಟ್ಟುವ ಮಗುವಿಗೆ ಭದ್ರವಾದ ನೆಲೆ ಸಿಗುವುದಿಲ್ಲ.''

''ಪರವಾಗಿಲ್ಲ ಬಿಡಿ. ನನ್ನ ಮಗುವನ್ನು ಸಾಕುವ ಯೋಗ್ಯತೆ ನನಗಿದೆ. ಅಲ್ಲದೇ ನಾನು ಯಾರಿಗೂ ಕೇರ್ ಮಾಡುವುದಿಲ್ಲ. ಅದಕ್ಕೆ ಮದುವೆಯೇ ಆಗಬೇಕೂಂತ ಏನಿಲ್ಲ.''

''ಏನಮ್ಮಾ ಹೀಗಂತೀಯಾ ? ಹೆಣ್ಣು ಹುಡುಗಿಯರು ಹಾಗೇ ಇರಲು ಸಾಧ್ಯವೇ ? ಸಮಾಜ ಏನನ್ನುತ್ತೆ ? ಅದಕ್ಕೆ ಆಸ್ಪದ ಕೊಡಬಾರದು.''

''ಏಕೆ ಸಾಧ್ಯವಿಲ್ಲ. ನಾವು ಹೇಗೇ ಇದ್ದರೂ ಸಮಾಜದ ಜನ ಆಡಿ ಕೊಳ್ಳುವುದನ್ನು ಬಿಡುವುದಿಲ್ಲ. ಎಷ್ಟೋ ಜನ ಸಿನಿಮಾ ತಾರೆಯರು, ಮದುವೇನೇ ಮಾಡಿಕೊಂಡಿಲ್ಲ. ಮಕ್ಕಳನ್ನು ಹೆತ್ತು ಸಾಕುತ್ತಿದ್ದಾರೆ... ನಿಮಗೆ ಗೊತ್ತಿಲ್ಲವೇನೋ...''

''ನಾವು... ಸಿನಿಮಾ ನಟಿಯರಂತೆ ಇರಲು ಸಾಧ್ಯವೇ... ಅವರೇ ಬೇರೆ ಲೋಕದವರು, ನಾವೇ ಬೇರೆ...''

''ನಾವೇಕೆ ಅವರಂತೆ ಇರಬಾರದು ? ಸಿನಿಮಾ ನೋಡಿ ಫ್ಯಾಷನ್ ಕಲಿಯುತ್ತೇವೆ. ನಮ್ಮಿಂದ ಅವರು ಸಿನಿಮಾ ನಾಟಕಗಳಿಗೆ ಕತೆಗಳನ್ನು, ಪಾತ್ರಗಳನ್ನೂ ಆರಿಸಿಕೊಳ್ಳುತ್ತಾರೆ. ನಾವು ಎಷ್ಟೋ ವಿಧದಲ್ಲಿ ಅವರನ್ನು ಅನುಸರಿಸುತ್ತೇವೆ. ನಮ್ಮಂತಹ ಎಷ್ಟೋ ಮಂದಿಗೆ ಅವರೇ ಆದರ್ಶ.''

''ಸಿನಿಮಾ ನಾಟಕವೇ ಬೇರೆ ವಾಸ್ತವ ಜೀವನವೇ ಬೇರೆ. ನಾಯಕ ನಾಯಕಿರು ಮಾಡುವುದು ಬರೀ ನಟನೇನೇ... ನಿಮ್ಮಂತಹವರ ಸಮಸ್ಯೆಯನ್ನು

ಅವರು ಬಯಸುವುದಿಲ್ಲ; ಎದುರಿಸುವುದಿಲ್ಲ. ಇರುವ ಸಣ್ಣ ವಿಷಯವನ್ನೂ ದೊಡ್ಡದನ್ನಾಗಿ ಮಾಡಿ ಪರದೆಯ ಮೇಲೆ ತೋರಿಸುತ್ತಾರೆ. ನಿಮ್ಮಂತಹವರ ಬದುಕಿನ ಎಳೆ ಅವರಿಗೆ ಕಥಾವಸ್ತುವಾಗುತ್ತದೆ. ನಟನೆಯೇ ಅಲ್ಲಿ ಜೀವಾಳ.''

''ಓಹ್ ಬಿಡಿ... ಹೀಗೇ ನಿಜ ಜೀವನದಲ್ಲಿಯೂ ನಟಿಸುವವರು ಬೇಕಾದಷ್ಟು ಜನರಿದ್ದಾರೆ. ಅಂಥೋರಿಗೆ ಗೊತ್ತಾಗಲಿ.''

''ನಿನ್ನ ಮಾತುಗಳೇ ನನಗರ್ಥವಾಗುಲ್ಲ ರೂಪಿಣಿ....''

''ಸಮಯ ಬಂದಾಗ ಎಲ್ಲಾ ತಾನಾಗಿಯೇ ಅರ್ಥವಾಗುತ್ತೆ. ಆಗ ನಿಮ್ಮವರೇ ನಟರು ಅಂತ ನಿಮಗೆ ಅರ್ಥವಾಗುತ್ತೆ... ಹೋಗಲಿ ಬಿಡಿ. ನೀವೇಕೆ ತಲೆ ಕೆಡಿಸಿಕೊಳ್ತೀರಾ ? ಮೊದಲೇ ನಿಮಗೆ ರಕ್ತದ ಒತ್ತಡ ಹೆಚ್ಚು. ಹೇಗೋ ಎಲ್ಲಾ ನಡೆಯುತ್ತದೆ. ಕೆಲವರು ಮಕ್ಕಳು ಬೇಕೆಂದು ತಪಸ್ಸು ಮಾಡಿದರೂ ಅವರಿಗೆ ಮಕ್ಕಳಾಗುವುದಿಲ್ಲ; ಆದ್ದರಿಂದ ನಾನು ನನಗೆ ಹುಟ್ಟುವ ಮಗುವನ್ನು ಸಂತೋಷದಿಂದ ಬೆಳೆಸ್ತೀನಿ. ನನಗೆ ಬೇಸರವೇನಿಲ್ಲ.''

''ಸರಿಯಮ್ಮ ನೀನೇ ಇಷ್ಟು ಧೈರ್ಯವಂತೆ ! ನಾನೇಕೆ ವಾದ ಮಾಡಲಿ ?''

''ಮತ್ತೆ ? ಧೈರ್ಯವಾಗಿದ್ದರೇ ಏನನ್ನಾದರೂ ನಿಭಾಯಿಸಲು ಸಾಧ್ಯ... ನೀವು ಧೈರ್ಯ ಮಾಡಿ ಮತ್ತೆ ಮದುವೆಯಾಗದೇ ಇದ್ದಿದ್ದರೆ, ಹೀಗೆ ಶ್ರೀಮಂತೆ ಯಾಗಲು ಸಾಧ್ಯವಿತ್ತಾ ? ಅದೇ ಕೊಂಪೆಯಲ್ಲಿರ ಬೇಕಾಗುತ್ತಿತ್ತು.'' ಅವಳ ನೇರವಾದ ನುಡಿಗಳು ನಳಿನಿಯನ್ನು ಚುಚ್ಚಿದವು. ಆದರೂ ಸುಮ್ಮನಾದಳು. ಅವಳು ಹೇಳಿದ್ದು ಸುಳ್ಳಲ್ಲ. ತಾನು ಮದುವೆಯಾಗುವ ಧೈರ್ಯ ವಹಿಸದೇ ಇದ್ದಿದ್ದರೆ, ಈದಿನ ತನ್ನ ಗತಿ ಏನಾಗಿರುತ್ತಿತ್ತೋ... ಅದನ್ನು ನೆನೆಸಿಕೊಳ್ಳಲೇ ಹಿಂಜರಿದಳು.

''ನೀವು ಮಾಡಿದ್ದು ತಪ್ಪು ಅಥವಾ ಸರಿ ಅಂತ ನಾನು ಹೇಳುವುದಿಲ್ಲ. ಆದರೆ ಈ ಧೈರ್ಯ ಎಲ್ಲರಿಗೂ ಬರುವುದಿಲ್ಲ. ಈಗ ನೋಡಿ ನಿಮ್ಮ ಸೊಸೆಯರಿಗೆ ಡೈವೋರ್ಸ್ ತಗೊಳ್ಳಲು ಇಷ್ಟವಿಲ್ಲವೋ ಅಥವಾ ಧೈರ್ಯವಿಲ್ಲವೋ... ಅವರಿಗೇ ತಿಳಿಯದು. ಅಥವಾ ನನ್ನ ಹಾಗೆ ಸ್ವೇಚ್ಛೆಯಾಗಿದ್ದು ತಮ್ಮ ತಮ್ಮ ಆಸೆಗಳನ್ನು ಪೂರೈಸಿಕೊಳ್ಳುವ ಧೈರ್ಯ..? ಅದೂ ಇಲ್ಲ. ಇಂಥ ಬದುಕು ಸರಿ ಅಂತ ಅನ್ನಿಸುತ್ತಾ ನಿಮಗೆ ?''

ನಳಿನಿ ಪೆದ್ದಳಂತೆ, ಅವಳನ್ನೇ ಮಿಕಿ ಮಿಕಿ ನೋಡಿದಳು. ಆದರೆ ಏನನ್ನೂ ಆಡುವ ಇಷ್ಟವಾಗಲಿಲ್ಲ. ರೂಪಿಣಿ ಆಡಿದ ಮಾತುಗಳನ್ನೇ ಮತ್ತೆಮತ್ತೆ ಮೆಲಕು

ಹಾಕಿದಳು. ಹಾಗೇ ಮಹಾಭಾರತದ ಸ್ತ್ರೀ ಪಾತ್ರಗಳಲ್ಲಿ ಅನೇಕರು ಬೇರೆಬೇರೆ ಉಪಾಯಗಳನ್ನು ಹುಡುಕಿ, ಪದ್ಧತಿಗಳನ್ನು ಅನುಸರಿಸಿ ತಾಯಿಯರಾದುದು ನೆನಪಿಗೆ ಬರಲಾರಂಭಿಸಿತು. ಆ ಕುತೂಹಲ, ಆ ಕನಸು, ಆ ಆಸೆ ತನ್ನ ಸೊಸೆಯರಿಗೂ ಮೂಡಿದರೇ..?

ವ್ಯಾಸನಂತಹವನೊಬ್ಬ ಪ್ರತ್ಯಕ್ಷನಾಗಿ, ನಿಯೋಗಕ್ಕೆ ಒಪ್ಪುವಂತಿದ್ದರೇ... ದೂರ್ವಾಸನಂತಹ ಮುನಿಯೊಬ್ಬ ಬಂದು, ಕುಂತಿಗೆ ಕೊಟ್ಟಂತೆ ಆರು ವರಗಳನ್ನು ಕೊಡುವಂತಿದ್ದರೇ... ಆ ದ್ವಾಪರಯುಗ ಮತ್ತೆ ಮರುಕಳಿಸಬಾರದೇ... ಆಗ ನನ್ನ ಆಸೆಗಳು ನಿರಾತಂಕವಾಗಿ ನೆರವೇರುತ್ತಿತ್ತು.... ಸಮಾಜದ ಆಡುವ ಮಾತುಗಳಿಗೆ ಹೆದರಬೇಕಾಗಿರಲಿಲ್ಲ.... ಹೀಗೆ ಮನಸ್ಸಿನಲ್ಲಿ ನಾನಾ ಆಲೋಚನೆಗಳು ಮನಸ್ಸಿನಲ್ಲಾದರೇ, ಕನಸುಗಳೋ... ವಿಚಿತ್ರ ವಿಲಕ್ಷಣ ಕನಸುಗಳು ! ಅಸ್ಪಷ್ಟ ಮುಖಗಳು...! ಯಾರದ್ದೆಂದು ಅರಿವಾಗುವ ಮೊದಲೇ, ಇನ್ನೊಂದು ಮುಖ. ಒಬ್ಬ ಗಂಡಸು, ಒಬ್ಬ ಹೆಂಗಸಿಗೆ ಒಂದು ಮಗುವನ್ನು ತನ್ನ ಕೈಯಾರ ಎತ್ತಿ ಕೊಡುತ್ತಿರುವಂತೆ. ಆ ಗಂಡಸಾಗಲೀ, ಹೆಂಗಸಾಗಲೀ ಯಾರೆಂದು ತಿಳಿಯಲಿಲ್ಲ. ತನ್ನ ಆಲೋಚನೆಗಳೇ ಕನಸಿನ ರೂಪ ತಾಳಿರಬಹುದು ಅಂತೆನ್ನಿಸಿದರೂ ಕನಸಿನ ರೂಪಗಳನ್ನು ರೂಪಿಣಿ ಆಡಿದ ಮಾತುಗಳನ್ನು ಪದೇ ಪದೇ ಮೆಲುಕು ಹಾಕಿ, ಕಡೆಗೆ ಒಂದು ನಿರ್ಧಾರಕ್ಕೆ ಬಂದಳು. ಕನಸಿನ ರೂಪುಗಳಿಗೆ ಒಂದು ಆಕಾರವನ್ನು ಕೊಡುವ ಆಸೆಗೆ ಒತ್ತು ಕೊಡುವ ತೀರ್ಮಾನವನ್ನು ತೆಗೆದುಕೊಂಡಳು.

ಮೊದಲು ರೇವತಿಯನ್ನು ತನ್ನ ಬಳಿಗೆ ಕರೆಸಿ ಏಕಾಂತದಲ್ಲಿ ಮಾತನಾಡಿದಳು.

''ವಂಶ ಮುಂದುವರೆಯಲಿ ಅಂತ ಹಿರಿಯರು ತಮ್ಮ ಗಂಡು ಮಕ್ಕಳಿಗೆ ಮದುವೆ ಮಾಡುತ್ತಾರೆ.... ಆದರೆ ಈಗ ಇಲ್ಲಿ ಈ ವಂಶ ಬೆಳೆಯುತ್ತೋ ಇಲ್ಲವೋ ಎಂಬ ಅನುಮಾನವೇ ಅಧಿಕವಾಗಿದೆ. ನೀವೂ ಡೈವೋರ್ಸ್ ತೆಗೆದುಕೊಂಡು ಬೇರೆ ಮದುವೆ ಮಾಡಿಕೊಂಡು ಹೊರಟು ಹೋದರೆ, ಈ ಮನೆ ಇನ್ನೂ ಭಣಭಣ ಅನ್ನುತ್ತೆ. ಅದಕ್ಕೆ ನಾನು ಒಂದು ತೀರ್ಮಾನಕ್ಕೆ ಬಂದಿದೀನಿ. ನಿನಗೆ ಇನ್ನೂ ಒಂದು ಅವಕಾಶ ಕೊಡ್ತೀನಿ...''

''ನೀವಿಬ್ಬರೂ ಇದುವರೆಗೂ, ಪೃಥ್ವಿಯ ಹತ್ತಿರ ಮಾತನಾಡಿಲ್ಲ ಅಂತ ತಿಳೀತು. ನಾನಂತೂ ಅವನನ್ನು ಒಪ್ಪಿಸಲಾಗಲಿಲ್ಲ. ನೀವಾದರೂ ಅವನನ್ನು ಒಪ್ಪಿಸಲಾಗಲಿಲ್ಲ. ನೀವಾದರೂ ಅವನನ್ನು ಒಪ್ಪಿಸಬಹುದು ಅಂತ ಅಂದುಕೊಂಡಿದ್ದೆ. ನೀವುಗಳು ಇಲ್ಲಿರುವುದರಿಂದ ಅವನು ಗೆಸ್ಟ್‌ಹೌಸಿನಲ್ಲೇ

ಇರತೊಡಗಿದಾನೆ. ಹೀಗೇ ಮುಂದುವರೆದರೆ ಮನೆಯಿಂದ ದೂರವೇ ಆಗಿ ಬಿಡ್ತಾನೆ. ರೂಪಿಣಿಯನ್ನು ನೋಡಿ ಅವಳು ಎಷ್ಟು ಧೈರ್ಯವಂತೆ...! ಅವಳು ಗರ್ಭಿಣಿ ಅಂತ ನಿಮಗೆ ಗೊತ್ತಾ?''

ರೂಪಿಣಿಯಂತೆ ನಾವು ಪರ ಗಂಡಸರ ಸಹವಾಸ ಮಾಡಿ, ಮಕ್ಕಳನ್ನು ಹೆರಲಿ ಎಂದು ಅತ್ತೆಯ ಆಸೆ ಇರಬಹುದು ಎನಿಸಿರಲಿಲ್ಲ ರೇವತಿಗೆ. ಆದರೆ ರೂಪಿಣಿ ಮಾಡಿದ್ದು ತಪ್ಪು ಎನಿಸಲಿಲ್ವಾ ಇವರಿಗೆ ಎಂದುಕೊಂಡು,

''ನೀವು ಹೇಗೆ ಹೇಳ್ತೀರೋ ಹಾಗೇ ಮಾಡ್ತೀವಿ. ಆದರೆ ಡೈವೋರ್ಸ್ ತಗೊಂಡು ಈ ಮನೆಯಿಂದ ಹೋಗಿ ಅಂತ ಮಾತ್ರ ಹೇಳಬೇಡಿ...'' ಎಂದಳು.

ಈ ಮನೆಯ ಶ್ರೀಮಂತಿಕೆಗೆ ಒಗ್ಗಿ ಹೋಗಿದ್ದಾರೆ... ಅದಕ್ಕೇ ಡೈವೋರ್ಸ್ ಎಂದರೆ ಭಯ ಎಂದುಕೊಂಡು ನಳಿನಿ, ''ಸರಿ ನೀನು ಇಷ್ಟು ಹೇಳಿದ ಮೇಲೆ ಇನ್ನೇನು...? ನೀನೀಗ ಹೋಗು, ಮೇನಕೆಯನ್ನು ಕಳಿಸು'' ಎಂದಳು. ಅವಳೂ ಸಹ

''ನಮಗೆ ಈ ಮನೆಯಿಂದ ಹೊರಗೆ ಇದ್ದು ಬದುಕಲು ಇಷ್ಟವಿಲ್ಲ; ಧೈರ್ಯವೂ ಇಲ್ಲ. ಈ ಮನೆಗೆ ಬಂದು ಸೇರಿದ ಮೇಲೆ, ಇಲ್ಲಿಯ ಸಮಸ್ಯೆಗಳಿಗೆ ನಾವೂ ಸಹ ಸಮಭಾಗಿಗಳು. ಇದನ್ನು ಪರಿಹರಿಸುವ ಬದಲು, ಸ್ವಾರ್ಥಿಗಳಾಗಿ, ಹೆದರಿ ಹೋಗುವ ಇಚ್ಛೆ ನಮಗಿಲ್ಲ. ನಾವು ನಮ್ಮ ಪಾಡಿಗೆ, ಹೊರಟು ಹೋದರೆ, ಈ ಮನೆ ಬರಿದಾಗಿಯೇ ಇರುತ್ತದೆ. ಆದ್ದರಿಂದ ಯೋಚಿಸಿ, ನಾನು ಒಂದು ತೀರ್ಮಾನಕ್ಕೆ ಬಂದಿದೀನಿ. ನಿಮಗೆ, ಭಾವನಿಗೆ ಒಪ್ಪಿಗೆಯಾಗುವುದಾದರೆ, ನಾನು ಭಾವನನ್ನು ಮತ್ತೆ ಮದುವೆಯಾಗ್ತೀನಿ...'' ಎಂದು ತಲೆ ತಗ್ಗಿಸಿ ನುಡಿದಾಗ, ನಳಿನಿಗೆ ಒಂದು ಕಡೆ ಸಂತಸವೂ ಆಗಿತ್ತು; ಸ್ವಲ್ಪ ವ್ಯಥೆಯೂ ಆಗಿತ್ತು. ಸ್ವಲ್ಪ ತಡೆದು ನುಡಿದಳು.

''ನಿನ್ನ ಮಾತಿನಲ್ಲಿ ತಪ್ಪಿದೆ ಎಂದು ನಾನು ಹೇಳಲಾರೆ. ಆದ್ದರಿಂದ ನೀನಾಗಿಯೇ ಪೃಥ್ವಿಯನ್ನು ಒಪ್ಪಿಸಬೇಕು'' ಎಂದಳು. ಈ ಮೇನಕೆ ತಾನಾಗಿಯೇ ಅವನ ಬಳಿಗೆ ಹೋದರೆ, ಆ ಋಷಿಶೃಂಗನ ಬ್ರಹ್ಮಚರ್ಯಕ್ಕೆ ಕೊನೆ ಬರಬಹುದೇನೋ ಎಂಬ ದೂರದ ಆಸೆ. ಇಂಥದೊಂದು ಉಪಾಯ ಮೇನಕೆಗೆ ಹೊಳೆದದ್ದು ನಳಿನಿಗೆ ಅನುಕೂಲವೇ ಆಗಿತ್ತು.

* * * *

ಆದರೆ ಎಷ್ಟು ದಿನಗಳು ಕಳೆದರೂ ಯಾವುದೇ ಮಾತು ಮುಂದುವರೆದಿರಲಿಲ್ಲ. ಪೃಥ್ವಿ ಗೆಸ್ಟ್‌ಹೌಸ್‌ನಲ್ಲಿಯೇ ಇರುವುದನ್ನು ಗಮನಿಸಿ, ರೂಪಿಣಿ ಇಲ್ಲೇ ಇದ್ದಳು. ಅವಳೊಡನೆ ಓಡಾಡುತ್ತಿದ್ದರೆ, ರೇವತಿ ಮೇನಕೆಯರಿಗೂ ತಾಯಿಯಾಗುವ ಹಂಬಲ ಕಡಿಮೆಯಾಗುವುದಿಲ್ಲ, ಎಂದುಕೊಂಡು ನಳಿನಿ ರೂಪಿಣಿಯನ್ನು ಸಹಿಸಿಕೊಂಡಿದ್ದಳು. ಅಲ್ಲದೇ ಅವಳ ಗರ್ಭದಲ್ಲಿ ಬೆಳೆಯುತ್ತಿರುವುದು ತನ್ನ ಮೊಮ್ಮಗು ಎನ್ನುವ ಮಮತೆ ಬೇರೆ !

ಈ ಕಾರಣದಿಂದಲೋ ಅಥವಾ ಬೇರೆ ಯಾವ ಕಾರಣದಿಂದಲೋ ವಿಶ್ವ ಈ ಮನೆಗೆ ಆಗಾಗ ಬರುವುದು ಹೆಚ್ಚಾಗಿತ್ತು. ಇದು ನಳಿನಿಗೂ ಬೇಕಾದ ವಿಷಯವೇ. ರೂಪಿಣಿಗಾಗಿ ಅವನು ಬರುತ್ತಿದ್ದಾನೆಂದು ಭಾವಿಸಿದ್ದಳು.

ಈ ಮಧ್ಯೆ ಮೇನಕೆ ಪೃಥ್ವಿಯೊಡನೆ ಮಾತನಾಡಿ ತನ್ನ ಆಸೆಯನ್ನು ವ್ಯಕ್ತಗೊಳಿಸಿದ್ದಳು.

''ನನಗೆ ಬಾಳು ಕೊಡಿ. ನನ್ನನ್ನು ಮದುವೆಯಾಗಿ'' ಎಂದು ಸಂಕೋಚದಿಂದ ಕೇಳಿಕೊಂಡಿದ್ದಳು. ಪೃಥ್ವಿ ದಂಗಾಗಿಬಿಟ್ಟ. ಅವನಿಗೆ ರೂಪಿಣಿಯ ಮೇಲೆ ಸಂದೇಹ.

''ನಿಮಗೆ ತಿಳುವಳಿಕೆ ಸಾಲದು. ನಿಮಗೆ ಯಾರೋ ಹೇಳಿಕೊಟ್ಟಿದ್ದಾರೆ. ಈ ಜನ್ಮದಲ್ಲಿ ಪೃಥ್ವಿ ಮದುವೆಯಾಗುವುದಿಲ್ಲ ಅಂತ ಹೇಳಿಬಿಡಿ ಅವರಿಗೆ'' ಎಂದು ರೇಗಿ ಅಲ್ಲಿಂದ ಎದ್ದು ಹೊರಟುಹೋಗಿದ್ದ. ಅವಳಿಗೆ ಮುಖಭಂಗವಾದಂತಾಗಿತ್ತು. ಆನಂತರ ಪೃಥ್ವಿ ಅವರೊಡನೆ, ಯೋಗಕ್ಷೇಮಕ್ಕೆ ಸಹ ಮಾತನಾಡುವುದನ್ನು ಬಿಟ್ಟ. ಆದರೆ ವಿಶ್ವನನ್ನು ಭೇಟಿಯಾದಾಗ ಈ ವಿಷಯವನ್ನು ತಿಳಿಸಿದ.

''ರೂಪಿಣಿ ಏನೇನನ್ನೋ ಹೇಳಿಕೊಟ್ಟು, ಅವರತಲೆಗೆ ಏನೇನೋ ತುಂಬುತ್ತಾಳೆ. ಎಲ್ಲರೂ ಅದ್ಯಾಕೆ ಹೀಗಾಡ್ತಾರೋ... ಬರೀ ಮದುವೆ, ಸಂಸಾರದ ಚಿಂತೆ... ಇದನ್ನು ಬಿಟ್ಟು ಬೇರೆ ಬದುಕೇ ಇಲ್ವಾ !'' ವಿಶ್ವ ನಕ್ಕ.

''ನಿಮಗೆ ಹಾಗನ್ನಿಸಬಹುದು ಪೃಥ್ವಿ. ಆದರೆ ಅವರ ಪರಿಸ್ಥಿತಿ ಹೇಗಿರಬಹುದು ಅಂತ ಯೋಚಿಸಿ. ಗಂಡ ಬಿಟ್ಟವರು ಎಂಬ ಅಪಖ್ಯಾತಿ ಹೊತ್ತು ಈ ಮನೆಯಿಂದ ಹೊರಗಿರುವ ಆಸೆ ಅವರಿಗಿಲ್ಲ. ಮೊಮ್ಮಕ್ಕಳು ಬೇಕು ಎಂಬ ಆಸೆ ನಿಮ್ಮ ಚಿಕ್ಕಮ್ಮನಿಗೆ. ಅವರೇ ನಿಮ್ಮ ಬಳಿಗೆ ಕಳಿಸಿರಬಹುದು ಅಲ್ವಾ ?''

''ಛೇ... ಚಿಕ್ಕಮ್ಮ ಅಂತಹವರಲ್ಲ...''

''ಆಸೆಗಳು ಬಗೆಬಗೆಯಾಗಿರುವಾಗ, ಆಲೋಚನೆಯ ದಿಕ್ಕು ಬೇಕಾದ ಕಡೆ ತಿರುಗುತ್ತದೆ. ಅವರ ಆಸೆ ಅಸಹಜವಲ್ಲ, ಪರಕೃತಿ ನಿಯಮ. ನಿಮ್ಮ ತಮ್ಮಂದಿರು ಪೂರೈಸಲಾಗದ್ದನ್ನು ನಿಮ್ಮಿಂದ ಅಪೇಕ್ಷೆ ಪಟ್ಟಿರಬಹುದು. ಅದು ತಪ್ಪು ಅಂತ ಅವರಿಗೆ ಅನ್ನಿಸದಿರಬಹುದು.''

''ಅದು ತಪ್ಪು ಅಂತ ನನಗೆ ಅನ್ನಿಸುತ್ತೆ... ಅವರು ನಮ್ಮ ಮನೆಯಲ್ಲಿರುವುದು ಬೇಡ. ಅಮೆರಿಕಾಕ್ಕೆ ವಾಪಸ್ಸು ಹೋಗಿ, ಗಂಡಂದಿರ ಅಪ್ಪಣೆ ಪಡೆದು ಏನು ಬೇಕಾದರೂ ಮಾಡಿಕೊಳ್ಳಲಿ ಅಥವಾ ತಾಯಿ ಮನೆಗೆ ಹೋಗಲಿ... ನನಗೆ ಇವರೆಲ್ಲರ ಸಹವಾಸ ಸಾಕಾಗಿ ಹೋಗಿದೆ...''

''ನಿಮ್ಮ ಮನೆ ಬರಿದಾಗಿಯೇ ಉಳಿದು ಹೋಗುತ್ತಲ್ಲ... ಎಂದುಕೊಂಡು ಅವರೆಲ್ಲರೂ ಈ ಉಪಾಯವನ್ನು ಮಾಡಿರಬಹುದು. ಅದೂ ಒಂದು ಕೊರತೆ ಇದೆ ಅಂತ ನಿಮಗೆ ಅನ್ನಿಸುವುದಿಲ್ಲವಾ? ನಿಮಗೇಕೆ ಏನೂ ಅನ್ನಿಸುವುದಿಲ್ಲ?''

''ಅದೆಲ್ಲಾ ನನಗೆ ತಿಳಿಯದು. ಎಲ್ಲರ ಕೊರತೆಗೂ ನಾನು ಹೊಣೆಗಾರನಲ್ಲ. ಅದನ್ನೆಲ್ಲಾ ತಿಳಿದಿದ್ದೂ ನನ್ನ ಬಳಿಗೆ ಬಂದಿದಾರಲ್ಲ.. ಅದರ ಬದಲು ನಿಮ್ಮ ಬಳಿಗೆ ಏಕೆ ಬರಲಿಲ್ಲ?'' ವಿಶ್ವ ನಕ್ಕ.

''ನನಗಿಂತ ನೀವೂ ಎಲ್ಲಾ ವಿಷಯದಲ್ಲೂ ಸರಿ ಅನಿಸಿರಬಹುದು.''

''ಒಂದು ವೇಳೆ, ನಿಮ್ಮ ಬಳಿಗೆ ಬಂದರೆ ಏನು ಮಾಡ್ತಿದ್ರಿ ?''

''ನಾನೇನು ಮಾಡಬೇಕು, ನೀವು ಹೇಳಿಬಿಡಿ...'' ತಮಾಷೆಯಾಗಿ ಹೇಳಿದ.

''ಆ ಹೆಂಗಸರಿಗೆಲ್ಲ ಸರಿಯಾಗಿ ತಿಳುವಳಿಕೆ ಹೇಳಿ... ಇಲ್ಲೇ ಇರುವ ಆಸೆ ಇದ್ದರೆ ಸುಮ್ಮನೇ ಸರಿಯಾಗಿರಲಿ. ನನ್ನ ತಂಟೆಗೆ ಮಾತ್ರ ಬರುವುದು ಬೇಡ.'' ಪೃಥ್ವಿ ಕೋಪದಿಂದ ನುಡಿದುದನ್ನು ಕಂಡು ವಿಶ್ವ ನಕ್ಕ. ಪೃಥ್ವಿ ಎದ್ದ.

ಇವನೆಂತಹ ಗಂಡಸು ! ಹಣಕಾಸು ಇದೆ, ಯೌವನವಿದೆ. ಆದರೆ ಯೌವನಕ್ಕೆ ಸಹಜವಾದ ಆಸೆಯೇ ಇಲ್ಲವಲ್ಲ ಅಥವಾ ಆಸೆಗೆ ಬಲವಾದ ಕಡಿವಾಣವನ್ನು ಹಾಕಿಕೊಂಡು, ಏನನ್ನು ಸಾಧಿಸಲು ನೋಡುತ್ತಾನೆ! ಮನೇಕಾ ರೇವತಿಯರು ತನ್ನ ತಮ್ಮಂದಿರ ಪತ್ನಿಯರು ಅಂತ ನಾನು ಯೋಚಿಸಬೇಕು ಅಷ್ಟೇ... ಆದರೆ ಅವರಿಗಾಯೇ ನನ್ನ ಬಳಿಗೆ ಬಂದರೆ, ತನಗೆ ಯಾವ ಅಂಜಿಕೆಯೂ ಇಲ್ಲ. ಆದರೆ ನಳಿನಿ ನನ್ನ ಬಳಿಗೆ ಹೋಗಿ ಅಂತ ಏಕೆ ಹೇಳಲಿಲ್ಲ? ಅವರಲ್ಲಿ ಒಬ್ಬರನ್ನಾದರೂ ಮದುವೆಯಾಗುವ ಯೋಗ್ಯತೆ ತನಗಿಲ್ಲವೆಂದೇ?

ಅಥವಾ ತಾನು ಈಗಾಗಲೇ ರೂಪಿಣಿಯೊಡನೆ ಸಂಬಂಧವಿಟ್ಟುಕೊಂಡಿರುವವನೆಂದೇ...? ನನಗೆ ರೂಪಿಣಿ, ಮೇನಕಾ, ರೇವತಿ, ಎಲ್ಲರೂ ಒಂದೇ... ಆದರೆ ಅವರಾಗಿಯೇ ನನ್ನ ಬಳಿಗೆ ಬರಬೇಕು... ಅಲ್ಲಿಯವರೆಗೆ ಕಾಯ್ತೀನಿ ಅಂತ ತನಗೆ ತಾನೇ ಹೇಳಿಕೊಂಡ... ಆದರೆ ಕೆಲವಾರು ದಿನಗಳು ಕಳೆದರೂ ಅವರುಗಳು ಬರದಿದ್ದಾಗ, ಅವನಿಗೆ ಏನೋ ಒಂದು ರೀತಿಯ ನಿರಾಸೆಯಾಗಿತ್ತು. ಇದಕ್ಕೆ ನಳಿನಿಯೇ ಕಾರಣ ಎಂದು ಭಾವಿಸಿದ. ಈಗಲೂ ಅವಳಿಗೆ ನನಗಿಂತ ಪೃಥ್ವಿಯೇ ಹೆಚ್ಚು... ಎಷ್ಟಾಗಲೀ ಪೃಥ್ವಿ ಆ ಮನೆಯವನು, ನಾನು ಹೊರಗಿನವನು... ನನಗೆ ಎಂದಿಗೂ ಆ ಮನೆಯಲ್ಲಿ ಹಿರಿಮಗನ ಸ್ಥಾನ ಸಿಗುವುದಿಲ್ಲ ಅಂತಂದುಕೊಂಡಾಗ ಏನೋ ಒಂದು ರೀತಿಯ ಕೀಳರಿಮೆ ಉಂಟಾಗಿತ್ತು. ನಳಿನಿಯ ಮನೆಯಲ್ಲಿ ತನಗೆ ಯಾವ ಸ್ಥಾನ ? ಪೃಥ್ವಿಯ ಸ್ನೇಹಿತನೆಂದೇ! ರೂಪಿಣಿಯ ಸ್ನೇಹಿತನೆಂದೇ... ತಾನು ಪೃಥ್ವಿಯ ಸ್ನೇಹಕ್ಕೆ ಆಕರ್ಷಿತನಾಗಿ, ನನ್ನ ತಾತನ ಆಸ್ತಿಯನ್ನೆಲ್ಲಾ ಹಿಂದಕ್ಕೆ ಕೊಟ್ಟು, ಅವರಿಗೆ ಕೀರ್ತಿ ಬರುವಂತೆ ಆಸ್ಪತ್ರೆ ಕಟ್ಟಿಸುವಷ್ಟು ಮಟ್ಟಿಗೆ ಧಾರಾಳ ವ್ಯಕ್ತಿಯಾದೆ. ಇದರಿಂದ ನಳಿನಿಗೆ ನನ್ನ ಮೇಲಿನ ಅಭಿಮಾನ, ಹೆಮ್ಮೆ ಜಾಸ್ತಿಯಾಗಿರಬಹುದು ಎಂದುಕೊಂಡಿದ್ದೆ. ಆದರೆ ಈಗಲೂ ಅವಳಿಗೆ ನನ್ನ ಮೇಲೆ ಯಾವ ಅಭಿಪ್ರಾಯವಿದೆಯೋ... ಮೇನಕ ರೇವತಿಯರಿಗೆ ತಾನು ತಕ್ಕವನಲ್ಲ ಅಂತ ಭಾವಿಸಿರಬಹುದು ಅಥವಾ ರೂಪಿಣಿಯಂತೆ ತಾನು, ಅವರ ಸಹವಾಸ ಮಾಡಬಹುದು ಎಂದು ಅನುಮಾನಪಟ್ಟಿರಬಹುದು ಎಂದುಕೊಂಡಾಗ, ತನಗೆ ಏನೋ ಭಾರಿ ಅವಮಾನವಾಯಿತು ಎಂದೆನ್ನಿಸಿತ್ತು. ನಳಿನಿಯ ಮೇಲಿನ ಆಕ್ರೋಶ ಮರುಕಳಿಸಿತ್ತು. ಆದರೆ ತನ್ನ ಅಸಮಾಧಾನವನ್ನು ಬಹಿರಂಗಗೊಳಿಸಲಿಲ್ಲ. ಮತ್ತೆ ಮತ್ತೆ ಯೋಚಿಸುವಾಗ, ಮನದಲ್ಲಿ ನಾನಾ ವಿಕೃತ ಭಾವನೆಗಳು ಮೂಡಿ ಮರೆಯಾಗುತ್ತಿದ್ದವು.

ಈ ನಡುವೆ ಒಂದು ದಿನ ರೂಪಿಣಿ ಒಂದು ಮುದ್ದಾದ ಗಂಡು ಮಗುವಿಗೆ ಜನ್ಮವಿತ್ತಳು. ವಿಶ್ವನಿಗೆ ಹೆಮ್ಮೆ. ವೀರನಂತೆ ರೂಪಿಣಿಯ ಕಡೆ ನೋಡಿ ವಿಜಯದ ನಗೆ ನಕ್ಕ, ನಳಿನಿ ತನ್ನ ಮೊಮ್ಮಗುವನ್ನು ಕಣ್ತುಂಬಾ ನೋಡಿ ಆನಂದಿಸಿದಳು. ಇದರೊಂದಿಗೆ ತನ್ನ ಮನೆಯ ಕೊರತೆಯ ಅಭಾವ ಅಧಿಕವಾಗಿ ತೋರಿತು. ಮೇನಕಾ ರೇವತಿಯರು ಮೇಲ್ನೋಟಕ್ಕೆ ನಗು ನಗುತ್ತಿದ್ದರೂ, ಅಸೂಯೆ ಮನದೊಳಗೆ ಸೇರಿಕೊಂಡಿದ್ದ. ಪೃಥ್ವಿ ಇದೆಲ್ಲದರಿಂದ ದೂರನಾಗಿದ್ದ. ಪೃಥ್ವಿಯನ್ನು ರೇಗಿಸಲೆಂದು ಸಮಯ ಕಾಯುತ್ತಿದ್ದಳು ರೂಪಿಣಿ. ಎರಡು ಮೂರು ದಿನಗಳು ಕಳೆದ ನಂತರ ಅವನಿಗೆ ಫೋನು ಮಾಡಿದ್ದಳು.

‘‘ಯಾಕೆ ಪೃಥ್ವಿ ಬರಲೇ ಇಲ್ಲ? ನಿಮ್ಮ ಮಗುವನ್ನು ನೋಡಲು ನಿಮಗೇನು ಹೆದರಿಕೆ?’’ ಎಂದು ಕಿಲಕಿಲನೆ ನಕ್ಕಿದ್ದಳು. ಪೃಥ್ವಿ ಹಲ್ಲುಗಳನ್ನು ಕಡಿದ.

‘‘ಏನದು ನಾನ್ಸೆನ್ಸ್ ? ಬಾಯ್ಮುಚ್ಚು... ಬೊಗಳಬೇಡ’’ ಎಂದಿದ್ದ.

‘‘ಬೊಗಳ್ತಾ ಇರೋದು ನೀವು. ಈ ಮಗು ನಿಮ್ಮದೆಂದು ನೀವು ಈಗ ಒಪ್ಪಿಕೊಳ್ಳಬೇಕಾದ ಸ್ಥಿತಿ ಬಂದಿದೆ. ಜನರ ಬಾಯಿಗೆ ಹೆದರುತ್ತೀರಿ ಅಲ್ವಾ...? ಮರ್ಯಾದೆಯಾಗಿ ನನ್ನನ್ನು ಮದುವೆಯಾಗಿದ್ದಿದ್ರೆ... ನಿಮಗೆ ಈ ಸ್ಥಿತಿ ಬರುತ್ತಿರಲಿಲ್ಲ. ದುರಹಂಕಾರದಿಂದ ನನ್ನನ್ನು ದೂರ ಮಾಡಿದುದಕ್ಕೆ ಇದೇ ಶಿಕ್ಷೆ...’’ ಎಂದು ಮತ್ತೆ ನಕ್ಕಳು. ಪೃಥ್ವಿ ಕೆಂಪಾಗಿದ್ದ. ರಿಸೀವರ್‌ನ್ನು ಕುಕ್ಕಿ ರೋಷವನ್ನು ಪ್ರಕಟಗೊಳಿಸಿದ. ರೂಪಿಣಿ ಯಾಕೆ ಹೀಗೆ ಮಾಡಿದಳು ಎನ್ನುವುದನ್ನು ಈಗ ಚಿಂತಿಸುವಂತಾಗಿತ್ತು. ಈ ಮಗುವಿನ ತಂದೆ ಯಾರಿರಬಹುದು? ಒಂದು ವೇಳೆ ವಿಶ್ವನೇ ಆಗಿದ್ದರೆ, ಅವನೂ ಶಾಮೀಲಾಗಿರಬಹುದೇ ? ಸ್ನೇಹಿತನ ಮುಖವಾಡ ಧರಿಸಿ ತನಗೆ ಒಳಗೊಳಗೇ ಹೀಗೇ ದ್ರೋಹ ಮಾಡಿದನೆ ? ಚಿಕ್ಕಮ್ಮನ ಮೇಲಿನ ಕೋಪಕ್ಕೆ ತನಗೆ ಹೀಗೆ ಮಾಡಿದ್ದು ಸರಿಯೇ ? ತಾನೀಗ ಸುಮ್ಮನಿರಬಾರದು ಎಂದುಕೊಂಡು ಚಿಕ್ಕಮ್ಮನೊಡನೆ ಮಾತನಾಡಿದ.

‘‘ನನ್ನದು ಯಾವ ತಪ್ಪು ಇಲ್ಲದಿದ್ದರೂ ಮನೆಯ ಮರ್ಯಾದೆಗಾಗಿ ರೂಪಿಣಿಯ ಕಿರುಕುಳವನ್ನು ಸಹಿಸಿಕೊಂಡೆ. ಈಗ ಮರ್ಯಾದೆಯನ್ನು ಬೀದಿ ಪಾಲು ಮಾಡುವ ಮಾತನ್ನಾಡುತ್ತಿದ್ದಾಳೆ. ಮೊದಲಿನಿಂದ ನೀವು ಸುಮ್ಮನಿದ್ದು ಬಿಟ್ಟಿರಿ. ಈಗ ನೀವು ಬುದ್ಧಿ ಹೇಳಿ. ನನ್ನ ತಂಟೆಗೆ ಬರದಂತೆ ಹೇಳಿಬಿಡಿ. ಆದಷ್ಟು ಬೇಗ ಇಲ್ಲಿಂದ ಹೊರಟು ಹೋಗಲಿ.’’

‘‘ಹುಂ, ನಾನು ತಿಳುವಳಿಕೆ ಹೇಳ್ತೀನಿ. ಒಂದು ಮಾತು ಕೇಳಲಾ ನಾನು? ರೂಪಿಣಿಗೆ ಒಪ್ಪಿಗೆಯಾದರೆ ಆ ಮಗುವನ್ನು ನಮ್ಮ ಮನೆಗೆ ಕರೆತಂದು ಸಾಕೋಣ ಅಂತ, ಏನಂತೀಯಾ ?’’

‘‘ಬೇಡ... ಖಂಡಿತಾ ಬೇಡ. ಅದೇ ಅವಳು ಹಾಕಿರುವ ಹೊಂಚು’’ ರೇಗಿದ.

ವಿಶ್ವ ಬರುವುದನ್ನೇ ಕಾದಿದ್ದ ನಳಿನಿ ಅವನ ಮೇಲೆ ರೇಗಿದಳು.

‘‘ನಿನಗೂ ರೂಪಿಣಿಗೂ ಏನು ಸಂಬಂಧ ? ಇಬ್ಬರೂ ಸೇರಿ ಪೃಥ್ವಿಯ ಮೇಲೆ ಏನು ಪಿತೂರಿ ನಡೆಸಿದೀರಿ ?....’’

‘‘ನಾನೇನೂ ಪಿತೂರಿ ನಡೆಸ್ತಿಲ್ಲ... ಅದೆಲ್ಲ ನಿಮ್ಮಂತಹವರ ಉಪಾಯ’’

‘‘ಪೃಥ್ವಿಯ ಮೇಲೆ ಆಪಾದನೆ ಹೊರೆಸಿ, ಅವನಿಗೆ ಅವಮಾನ ಮಾಡುವ ಹೊಂಚು ಹಾಕ್ತಾ ಇದಾಳೆ. ನಿನಗೆ ಗೊತ್ತಿಲ್ವಾ ?’’

‘‘ಇಲ್ಲ, ನನಗೇನೂ ಗೊತ್ತಿಲ್ಲ.’’

‘‘ನನಗೆಲ್ಲ ಗೊತ್ತು... ನನ್ನ ಮೇಲಿನ ಸಿಟ್ಟಿಗೆ ನೀನು ಪೃಥ್ವಿಗೆ ಅವಮಾನ ಮಾಡುಕ್ಕೆ ಅವಳಿಗೆ ಸಹಾಯ ಮಾಡ್ತಿದೀಯ.... ಹುಟ್ಟಿರುವ ಮಗು ಪೃಥ್ವೀದು ಅಂತ ಅವಳು ಅವನಿಗೆ ಹೆದರಿಸುತ್ತಿದಾಳಂತೆ. ಇದನ್ನೆಲ್ಲ ನೀನಲ್ಲದೆ ಇನ್ಯಾರು ಹೇಳಿಕೊಡ್ತಾರೆ ಅವಳಿಗೆ ?’’

‘‘ಚೆನ್ನಾಗಿದೆ. ನಿಮಗೇಕೆ ನನ್ನ ಮೇಲೆ ಅನುಮಾನ ? ನಾನೇಕೆ ಹಾಗೆಲ್ಲ ಹಚ್ಚಿಕೊಡಲಿ ? ಪೃಥ್ವಿ ನನ್ನ ಸ್ನೇಹಿತ.. ಅವನ ಮೇಲೆ ನನಗೆ ಗೌರವವಿದೆ... ಅಲ್ಲದೇ ಆ ಮಗು ಪೃಥ್ವಿಯದಲ್ಲ ಅಂತ ನನಗೂ ಗೊತ್ತು ; ನಿನಗೂ ಗೊತ್ತು...’’

‘‘ಹಾಗಾದರೆ ಈ ನಾಟಕವೆಲ್ಲಾ ಯಾಕೆ ? ಅವಳು ಎಂತಹವಳು ಅಂತ ತಿಳಿದೂ ನೀನು ಅವಳ ಸಹವಾಸ ಮಾಡಿದ್ದು ತಪ್ಪು... ಈಗ ಆ ಮಗುವಿನ ತಂದೆ ನಾನೇ ಅಂತ ನೀನು ಬಹಿರಂಗವಾಗಿ ಒಪ್ಪಿಕೋ. ಆಗ ಪೃಥ್ವಿಯ ಮೇಲೆ ಕಳಂಕ ಬರುವುದಿಲ್ಲ.’’

‘‘ಇಲ್ಲ ಈ ಬಂಧನವೆಲ್ಲ ನನಗೆ ಬೇಕಿಲ್ಲ... ಅವಳ ಜವಾಬ್ದಾರಿಯನ್ನು ನಾನು ಹೊತ್ತಿಲ್ಲ’’ ಎಂದುಬಿಟ್ಟ.

‘‘ಹಾಗಾದರೆ ಅಪ್ಪನ ಹಣ, ಅಮ್ಮನ ಒಡವೆಯನ್ನೆಲ್ಲ ನೀನೇಕೆ ಅವಳಿಗೆ ಕೊಡಿಸಿದೆ?...’’

‘‘ಅವಳಿಗೆ ಕೊಡ್ತೀನಿ ಅಂತ ವಾಗ್ದಾನ ಮಾಡಿದ್ದೆ. ಅಲ್ಲದೇ ಅದೆಲ್ಲ ನಿಮಗೆ ಬೇಕಾಗಿರಲಿಲ್ಲವಲ್ಲ.’’

‘‘ಆ ಒಡವೆಗಳನ್ನು ನಿನ್ನ ಹೆಂಡತಿಗೆ ಕೊಡು ಅಂತ ಹೇಳಿದ್ದೆ. ರೂಪಿಣೀನ ನಿನ್ನ ಹೆಂಡತಿ ಅಂತ ಒಪ್ಪಿಕೊಳ್ತಿಲ್ಲ. ಇದೆಲ್ಲ ಏನೂಂತ ? ಆದಷ್ಟು ಬೇಗ ರೂಪಿಣಿಯನ್ನು ಮದುವೆಯಾಗು...’’

‘‘ನನ್ನ ಮದುವೆಯ ಜವಾಬ್ದಾರಿಯನ್ನು ನಾನು ಹೊತ್ತುಕೊಳ್ಳುವುದಿಲ್ಲ. ಆದರೆ, ಅವಳಿಂದ ಪೃಥ್ವಿಗೆ ತೊಂದರೆ ಆಗದಂತೆ ನಾನು ನೋಡಿಕೊಳ್ತೀನಿ.’’

‘‘ಅನೀತಿಯಿಂದ ಹುಟ್ಟೋ ಮಕ್ಕಳ ಭವಿಷ್ಯ ಏನಾಗುತ್ತೆ ಅಂತ

ಬಲ್ಲೆಯಾ?... ಇಂತಹ ಹೇಯಕಾರ್ಯಕ್ಕೆ ಇಳಿಯುವ ಮೊದಲು ಏಕೆ ಯೋಚಿಸಲಿಲ್ಲ ?''

''ಇದು ಹೇಯಕಾರ್ಯ ಅಂತ ನಿಮಗೆ ಅನ್ನಿಸಬಹುದು. ಆದರೆ ಈಗಿನ ಕಾಲದ ಸ್ತ್ರೀಯರಿಗೆ ಇದೊಂದು ಹೊಸಾ ಪ್ಯಾಷನ್... ಅದು ಹೋಗಲಿ, ಪುರಾಣ ಕಾಲದಸ್ತ್ರೀಯರು ಸಹ ವಂಶೋದ್ಧಾರಕ್ಕಾಗಿ, ಬೇರೆ ಬೇರೆ ಮಾರ್ಗವನ್ನೂ ಪದ್ಧತಿಗಳನ್ನು ಅನುಸರಿಸುತ್ತಿದ್ದರು. ಅದನ್ನು ಒಪ್ಪುವ ನೀವುಗಳು ಇದನ್ನೇಕೆ ಖಂಡಿಸುತ್ತೀರಿ ?''

''ಅದು ಆ ಕಾಲದ ವಿಷಯ... ಈ ಯುಗಕ್ಕೆ ಅನ್ವಯಿಸುವುದಿಲ್ಲ''

''ಆಯಾಯ ಕಾಲದಲ್ಲಿ ಅವರವರಿಗೆ ಬೇಕಾದ ಪದ್ಧತಿಗಳನ್ನು ಜಾರಿಗೆ ತಂದು, ಅದನ್ನು ಶಾಸ್ತ್ರ ಸಮ್ಮತವೆಂದರು. ಬೇಡವೆನಿಸಿದಾಗ ಅದನ್ನು ನಿಷಿದ್ಧ ವೆಂದು ಬಹಿಷ್ಕರಿಸಿದರು, ಅಷ್ಟೇ. ಅದನ್ನೆಲ್ಲ ಮಾಡಿಕೊಂಡವರೂ ಬಿಟ್ಟವರೂ ಎಲ್ಲರೂ ಪ್ರಜೆಗಳೇ. ಹಾಗೇ ಈ ಯುಗದ ಸ್ತ್ರೀಯರು ಅತಿ ಪ್ರಚಂಡರು. ಏನು ಮಾಡೋದಕ್ಕೂ ತಯಾರು. ಯಾವ ಕ್ಷೇತ್ರದಲ್ಲಿ ಅವರಿಲ್ಲ ? ಮನೆಯ ಹೊರಗೆ, ಒಳಗೆ ಏನನ್ನು ಬೇಕಾದರೂ ನಿಭಾಯಿಸಬಲ್ಲ ಪ್ರಚಂಡ ಶಕ್ತಿ ಅವರಲ್ಲಿದೆ... ರೂಪಿಣಿ ಸ್ವಇಚ್ಛೆಯಿಂದ ನನ್ನ ಬಳಿಗೆ ಬಂದಳು. ನಾನು ತಿರಸ್ಕರಿಸಲಿಲ್ಲ ಅಷ್ಟೇ. ನನಗಿಂತ ಮುಂಚೆ ಅವಳು ಪೃಥ್ವಿಯಬಳಿಗೆ ಹೋಗಿದ್ದಳು. ಅವನು ತಿರಸ್ಕರಿಸಿದ್ದ. ಅದು ಅವನ ಇಷ್ಟ. ಅದಕ್ಕೆ ನಾನೇನೂ ಹೇಳಲಾರೆ. ಆದರೆ ಅದನ್ನು ಕುರಿತು ನನಗೆ ತಿಳುವಳಿಕೆಯನ್ನು ಹೇಳುವ ಹಕ್ಕನ್ನು ನಾನೆಂದೂ ನಿಮಗೆ ಕೊಟ್ಟಿಲ್ಲ'' ಎಂದುಬಿಟ್ಟ, ನಳಿನಿ ಪೆಚ್ಚಾದಳು.

''ಈ ಕಾಲದಲ್ಲಿ ಎಲ್ಲರೂ ಅವರವರಿಗೆ ಅನಿಸಿದಂತೆ ಬದುಕುವವರೇ... ತಿಳುವಳಿಕೆಯ ಮಾತು ಯಾರಿಗೂ ಬೇಕಾಗಿಲ್ಲ... ಪೃಥ್ವಿ ನಿನ್ನ ಮಾತನ್ನು ಕೇಳಿದ್ದರೇ... ಸಂಸಾರಿಯಾಗಿರುತ್ತಿದ್ದ.... ಅಜಯ ವಿಜಯರು ಅಮೆರಿಕಾಕ್ಕೆ ಹೋಗುತ್ತಿರಲಿಲ್ಲ... ಇನ್ನು ನಿನ್ನ ಮುದ್ದಿನ ಸೊಸೆಯರ... ಅವರನ್ನೂ ನಿಮ್ಮ ಹದ್ದುಬಸ್ತಿನಲ್ಲಿಟ್ಟುಕೊಳ್ಳಕಾಗುಲ್ಲ. ರೂಪಿಣಿಯಂತೆ ಅವರು ಎಂದಾದರೂ ಪೃಥ್ವಿಯ ಬಳಿಗೆ ಹೋದರೆ ಅವನು ಅವರನ್ನು ತಿರಸ್ಕರಿಸಬಹುದು. ನಿರಾಶರಾದ ಅವರು ನನ್ನ ಬಳಿಗೆ ಬಂದರೇ... ನಾನು ಆ ಅವಕಾಶವನ್ನು ಖಂಡಿತಾ ಕಳೆದುಕೊಳ್ಳುವುದಿಲ್ಲ'' ನಿಸ್ಸಂಕೋಚವಾಗಿ ನುಡಿದನು.

ನಳಿನಿ ಹೊಡೆಯಲೆಂದು ಕೈ ಎತ್ತಿದಳು.... ''ಸಾಕು ನಿಲ್ಲಿಸು ಅಸಂಬದ್ಧ

ವಾದ ಮಾತುಗಳನ್ನಾಡಬೇಡ... ನೀನು ಇಷ್ಟು ಸಂಭಾವಿತ ಅಂತ ನನಗೆ ಗೊತ್ತಿರಲಿಲ್ಲ''

''ಇದು ಅಸಂಬದ್ಧವೆನಿಸಬಹುದು ಈಗ.. ಆದರೆ ನಿಮ್ಮ ಸೊಸೆಯರು ಕೆಟ್ಟ ಹಾದಿ ತುಳಿದರೆ ಆಗೇನು ಮಾಡ್ತೀರಿ ?... ಯಾರೂ ಸಂಭಾವಿತರಲ್ಲ... ಎಲ್ಲರಿಗೂ ಬರೀ ಅವರವರ ಚಿಂತೆ ಮಾತ್ರ... ಏನಾಗಿದೆ ಅಂತ ತಿಳಿಯುವಷ್ಟರಲ್ಲಿ ಏನೇನೋ ನಡೆದುಹೋಗಿರುತ್ತದೆ. ಹಾಗಿದೆ ಕಾಲ. ಈ ಕಾಲದಲ್ಲಿ ಯಾರೂ ಸಂಭಾವಿತರಲ್ಲ. ಎಲ್ಲಾ ಗೊತ್ತು'' ಎಂದ ವ್ಯಂಗ್ಯವಾಗಿ. ನಳಿನಿಯ ತಲೆ ಕೆಟ್ಟು ಹೋದ ಹಾಗಾಗಿತ್ತು.ತಲೆ ತುಂಬಾ ವಿಶ್ವನ ಮಾತೇ. ಬಹುಶಃ ಇದಕ್ಕೆಲ್ಲ ತಾನು ಮರುಮದುವೆಯಾದುದೇ ಕಾರಣವೆನಿಸತೊಡಗಿತ್ತು. ಏನಾದರೂ ಆಗಿ ಹೋಗಲಿ, ದೇವರು ಮಾಡಿಸಿದಂತಾಗುತ್ತದೆ ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡು ಸುಮ್ಮನಾಗಿ ಬಿಟ್ಟಳು.

ತಕ್ಷಣಕ್ಕೆ ರೂಪಿಣಿ ಮಗುವಿನೊಂದಿಗೆ ವಿಶ್ವನ ಮನೆಯಲ್ಲೇ ಇರತೊಡಗಿದಳು. ಅವಳ ಸಹಾಯಕ್ಕೆಂದು ಕೆಲವೊಮ್ಮೆ ಮೇನಕ, ಕೆಲವೊಮ್ಮೆ ರೇವತಿ ಅವಳ ಜೊತೆಗಿರುತ್ತಿದ್ದರು. ನಳಿನಿಗೆ ಏನೋ ಅವ್ಯಕ್ತ ಭಯ, ತನ್ನ ಸೊಸೆಯರು ಹೋಗಿ ವಿಶ್ವನ ಮನೆಯಲ್ಲಿ ಇರುವುದು ತರವಲ್ಲ... ಆದರೆ ಅದನ್ನು ಬಾಯಿಬಿಟ್ಟು ಯಾರೊಂದಿಗೂ ಆಡಲಾರಳು. ವಿಶ್ವನ ಬಗ್ಗೆ ಎಚ್ಚರದಿಂದಿರಲು, ಸೊಸೆಯರಿಗೆ ಹೇಳಲು ಏನೋ ಭಯ. ಹೇಳಿದರೂ, ಅವರು ಮುಂದುವರೆದರೆ ತಾನು ತಡೆಯಲು ಸಾಧ್ಯವೇ ಎಂದೇ ಆತಂಕ. ಪೃಥ್ವಿಗೆ ಹೇಳಿದಳು.

''ಯಾಕೋ ಇದೆಲ್ಲಾ ಸರಿ ಇಲ್ಲ ಅಂತ ಅನ್ನಿಸ್ತಿದೆ. ಇವರಿಬ್ಬರನ್ನೂ ಅಮೆರಿಕಾಕ್ಕೆ ಕಳಿಸಿಬಿಡು. ಅಲ್ಲಿ ಏನಾದರೂ ಮಾಡಿಕೊಳ್ಳಲಿ'' ಅಂತ.

''ಮೊದಲು ಅಜಯ ವಿಜಯರ ಹತ್ತಿರ ಮಾತನಾಡಬೇಕು... ಆಸ್ಪತ್ರೆಯ ಕಟ್ಟಡದ ಕೆಲಸ ನಡೆಯುತ್ತಿದೆ. ಅದ್ನೆಲ್ಲಾ ಅವರೇ ಮಾಡಿಕೊಳ್ಳಲಿ... ನಾನೋ ವಿಶ್ವನೋ ಅವರಿಗೆ ಸಹಾಯ ಮಾಡ್ತೀನಿ... ಅವರುಗಳು ಅಮೆರಿಕಾಕ್ಕೆ ಬರುವುದೇ ಬೇಡಾಂತ ಹೇಳಿಬಿಟ್ಟರೆ, ಇವರೇನು ಮಾಡ್ತಾರೆ...?''

''ಆಗ ಅವರಿಬ್ಬರನ್ನೂ ಅವರ ತಾಯಿಯ ಮನಗೆ ಕಳಿಸಿ ಬಿಡೋಣ. ಇಲ್ಲಿರುವುದಂತೂ ಬೇಡ....''

''ಯಾಕೆ ? ಅವರಿಂದ ಏನಾದರೂ ತೊಂದರೆಯಾಗುತ್ತಿದೆಯೇ ?...''

''ಏನೋ ಆತಂಕವಾಗುತ್ತದೆ... ಮೇನಕಾ, ರೇವತಿಯರು ಚಿಕ್ಕವರು. ವಿಶ್ವ ಆಗಾಗ ಈ ಮನೆಗೆ ಬರುತ್ತಾನೆ. ಅವನಿಗೆ ಸಹಾಯಕಳು ಈ ರೂಪಿಣಿ. ಎಲ್ಲಾ ಸೇರಿ ನಿನ್ನ ತಲೆಯ ಮೇಲೆ ಏನಾದರೂ ಅಪವಾದ ಹೊರಿಸಿದರೇ... ಅಂತ ಭಯ''

ಪೃಥ್ವಿ ಕೆಂಪಾದ. ''ಯಾಕೆ ? ನಿಮಗೆ ನನ್ನ ಮೇಲೆ ನಂಬಿಕೆ ಇಲ್ಲವೆ ?'' ಎಂದು ಕೇಳಿದ.

''ಹಾಗಲ್ಲ ಪೃಥ್ವಿ... ಜನರ ಬಾಯನ್ನು ಮುಚ್ಚಿಸುಕ್ಕೆ ಆಗುತ್ತಾ ?''

''ಹಾಗಾದ್ರೆ ನಾನೇ ಇಲ್ಲಿಂದ ಎಲ್ಲಾದರೂ ಹೊರಟುಹೋಗ್ತೀನಿ...''

''ಆ ಮಾತನ್ನು ಮಾತ್ರ ಆಡಬೇಡ. ನಿನ್ನನ್ನು ಈ ಮನೆಯಿಂದ ಹೊರಗೆ ಕಳಿಸುವ ಆಲೋಚನೆಯನ್ನು ನಾನೆಂದೂ ಮಾಡಿಲ್ಲ. ಅವರಿಬ್ಬರೇ ಹೊರಗಿನಿಂದ ಬಂದವರು, ಅವರೇ ಹೋಗಲಿ... ಅವರಿಗೆ ಸಾಕಷ್ಟು ಜೀವನಾಂಶವನ್ನು ಕೊಡೋಣ...''

''ಆಗಲಿ, ನಾನು ಯೋಚಿಸ್ತೀನಿ...'' ಎಂದಷ್ಟೇ ಹೇಳಿದ.

* * * *

ರೂಪಿಣಿ, ಮೇನಕಾ ರೇವತಿಯರಿಗೆ ಪ್ರತಿಯೊಂದು ವಿಷಯವನ್ನೂ ಹೇಳಿದಳು. ತಮ್ಮ ಮನೆಯ ಕಥೆ ತಮಗಿಂತ ರೂಪಿಣಿಗೇ ಹೆಚ್ಚು ಗೊತ್ತು ಅಂತ ತಿಳಿದಾಗ ತಾವೆಷ್ಟು ದಡ್ಡರು ಅಂತೆನ್ನಿಸುತ್ತಿತ್ತು. ಆಗ ಈಗ ರೂಪಿಣಿ ಅವರಿಬ್ಬರನ್ನು ಕೆರಳಿಸುತ್ತಿದ್ದಳು. ''ನೀವೇನೂ ಮುದುಕಿಯರಲ್ಲ... ನಿಮಗೂ ಸುಖವಾಗಿರಬೇಕು ಅಂತ ಅನ್ನಿಸುವುದಿಲ್ಲವೇ ?'' ಅಂತ. ಆಗ ಅವರಿಬ್ಬರ ಭಾವನೆಗಳೂ ಕೆರಳುತ್ತಿದ್ದವು. ತಮಗೆ ಇಂಥ ಸ್ಥಿತಿಯನ್ನು ತಂದಿಟ್ಟ ಗಂಡಂದಿರ ಮೇಲೆ ಕೋಪ ಬರುತ್ತಿತ್ತು. ಕೆಲವೊಮ್ಮೆ ಅಳುತ್ತಿದ್ದರು. ರೂಪಿಣಿ ಹೇಳಿಕೊಡುತ್ತಿದ್ದಳು.

''ನಾನು ಪೃಥ್ವಿಯ ಮೇಲಿನ ಛಲದಿಂದ ಏನೇನೋ ಮಾಡಿದೆ. ನಿಮಗೆ ಧೈರ್ಯವಿಲ್ಲ, ನೀವೂ ನಿಮ್ಮ ಗಂಡಂದಿರಿಗೆ, ನಿಮ್ಮ ಅತ್ತೆಗೆ ಬುದ್ಧಿ ಕಲಿಸಬೇಕೂಂತ ಇದ್ದರೆ, ವಿಶ್ವನ ಬಳಿಗೆ ಹೋಗಿ'' ಅವರಿಬ್ಬರೂ ಕೆಂಪಾಗಿದ್ದರು.

''ಪೃಥ್ವಿಗೆ ಹೆಂಗಸರ ಸಹವಾಸ ಬೇಕಿಲ್ಲ; ವಿಶ್ವ ಹಾಗಲ್ಲ... ವಿಶ್ವನಿಗೂ ನಳಿನಿಯ ಮೇಲೆ ಕೋಪವಿದೆ. ನಿಮಗೆ ಸಹಾಯವಾಗಲಿ ಅಂತ ಖಂಡಿತಾ

ಒಪ್ಪಿಕೊಳ್ಳುತ್ತಾನೆ. ಜೀವಮಾನವೆಲ್ಲಾ ಬರಡು ಬಂಜೆಯರಂತೆ ಇರುತ್ತೀರಾ ? ಅದೂ ಆ ಮುದುಕಿಯ ಜೊತೆ ? ಆದರೆ ಅವಳೇನೂ ತನ್ನ ಸೊಸೆಯರಿಗೆ ಹಾಗೇ ಇರಿ, ಹೀಗೇ ಇರಿ ಎಂದು ಹೇಳಿಕೊಡುವ ಅಧಿಕಾರವಿಲ್ಲ. ತನ್ನ ಯೌವನದ ಕಾಲದಲ್ಲಿ ವಿಶ್ವನ ತಂದೆಯನ್ನು ಪ್ರೀತಿಸಿ ಮದುವೆಯಾದಳು. ಆದರೆ ಅವರು ಬಿಟ್ಟು ಹೋದ ಮೇಲೆ ಆ ಬರಡು ಬಾಳನ್ನೇ ಅಪ್ಪಿಕೊಳ್ಳಲಿಲ್ಲ. ಸಿಕ್ಕ ಅವಕಾಶವನ್ನು ಬಿಡದೇ ಪೃಥ್ವಿಯ ತಂದೆಯನ್ನು ಮದುವೆಯಾದಳು. ಈಗ ನಿಮಗೆ ಸಿಕ್ಕಿರುವ ಶ್ರೀಮಂತರ ಪತಿಯರನ್ನು ಬಿಟ್ಟರೆ ನೀವು ಮೂರ್ಖರಾಗು ತ್ತೀರಿ. ನಿಮ್ಮಿಬ್ಬರಿಗೂ ಮಕ್ಕಳಾದರೆ, ನೀವು ಇಲ್ಲೇ ಇರಬಹುದು. ಆಗ ಅಜಯ ವಿಜಯರು ಸಹ ಬಹಿರಂಗವಾಗಿ ಈ ಮಕ್ಕಳು ತಮ್ಮವೇ ಅಂತ ಒಪ್ಪಿಕೊಳ್ಳ ಬೇಕಾಗುತ್ತದೆ. ಬೇರೆ ಮಾರ್ಗವೇ ಇಲ್ಲ. ನಿಮ್ಮ ನೆಲೆ ಭದ್ರವಾಗುತ್ತದೆ. ಇಲ್ಲದಿದ್ದರೆ ಹಾಳಾಗಿ ಹೋಗುತ್ತೀರಿ'' ಎಂದು ಹೇಳಿಕೊಟ್ಟಿದ್ದಳು.

''ಆದರೆ ನಾನು ಹೇಳಿಕೊಟ್ಟೆ ಅಂತ ಹೇಳಬೇಡಿ. ನಳಿನಿಯೇ ನಿಮ್ಮ ಬಳಿಗೆ ಕಳಿಸಿದ್ದಾಳೆಂದು ಹೇಳಿ'' ಎಂದಾಗ ಅವರು ಗಾಭರಿಗೊಂಡಿದ್ದರು. ಆದರೆ ಕಡೆಗೊಮ್ಮೆ ಧೈರ್ಯ ಮಾಡಿ ವಿಶ್ವನೊಡನೆ ಮಾತನಾಡಿದರು. ವಿಶ್ವ ಗಲಿಬಿಲಿಗೊಂಡ. ತಾನು ಹಿಂದೊಮ್ಮೆ ನಳಿನಿಯೊಡನೆ ಮಾತನಾಡಿದ್ದುಂಟು. ಆದರೆ ನಳಿನಿಯೇ ಈಗ ತನ್ನ ಬಳಿಗೆ ಕಳಿಸಿದ್ದಾಳೆಂದರೇ... ಇದರಲ್ಲಿ ಏನೋ ಕುತಂತ್ರವಿರಬೇಕು. ಒಂದುವೇಳೆ ಪೃಥ್ವಿಗೆ ಈ ವಿಷಯ ತಿಳಿದರೆ ಏನಂದು ಕೊಳ್ಳಬಹುದು ? ತಮ್ಮಿಬ್ಬರ ಸ್ನೇಹಕ್ಕೆ ಭಂಗ ಬರುವುದಂತೂ ಖಂಡಿತಾ. ಈ ಆಸ್ಪತ್ರೆಯ ಕಟ್ಟಡವೂ ನಿರ್ಮಾಣಗೊಳ್ಳದೇ ಅರ್ಧಕ್ಕೇ ನಿಂತು ಹೋಗ ಬಹುದು... ಬಹುಶಃ ಇದೆಲ್ಲಾ ರೂಪಿಣಿಯದೇ ಪಿತೂರಿ... ಈ ಹುಡುಗಿ ಯರೋ ರೂಪಿಣಿಯ ಮಾತುಗಳಿಗೆ ಒಪ್ಪಿ, ನಾಚಿಕೆಯನ್ನು ಬಿಟ್ಟು ನನ್ನ ಬಳಿಗೆ ಬಂದಿದಾರೆ. ಈಗ ಇವರ ಮಾತಿಗೆ ಒಪ್ಪಿದರೆ, ಮುಂದೆ, ನಳಿನಿ, ಪೃಥ್ವಿ, ರೂಪಿಣಿ, ಅಜಯ ವಿಜಯರೆಲ್ಲಾ ದೂಷಿಸುವುದು ನನ್ನನ್ನೇ... ನಾನು ಮೊದಲಿ ನಿಂದ ಕೆಟ್ಟವನು ಎಂದೇ ಎಲ್ಲರೂ ಭಾವಿಸಿದ್ದಾರೆ. ಈಗ ನಾನು ಕೆಟ್ಟವನಾಗಿಯೇ ಇರಬೇಕೋ, ಒಳ್ಳೆಯವನಾಗಬೇಕೋ...? ಯಾವುದು ಸರಿ ? ...ಯಾವುದು ತಪ್ಪು ? ಒಂದು ವೇಳೆ ಸ್ವಂತ ತಾಯಿಯಾದ ನಳಿನಿಯೇ, ಈಗ ನನ್ನ ಸಹಾಯ ವನ್ನು ಅಪೇಕ್ಷಿಸಿದ್ದಾಳೆಂದರೇ... ಈಗ ಅವಳಿಗೆ ನನ್ನ ಅಗತ್ಯ ಈ ರೀತಿಯಲ್ಲಿ ಬೇಕಾಯಿತು ಅಂತ. ಇದೂ ಒಂದು ತನಗೆ ಸಿಕ್ಕಿರುವ ಅವಕಾಶ ಇದನ್ನು ಬಿಟ್ಟು ಬಿಟ್ಟರೆ, ನಳಿನಿಗೆ ಬುದ್ಧಿಯನ್ನು ಕಲಿಸಲಾಗುವುದಿಲ್ಲ. ನಳಿನಿಯ ಬಗ್ಗೆ ನನಗೆ

ಈಗಲೂ ಒಳ್ಳೆಯ ಭಾವನೆ ಇಲ್ಲ. ಪೃಥ್ವಿಗಾಗಿ ಎಲ್ಲವನ್ನೂ ಮರೆತವನಂತೆ ಇದೀನಿ ಅಷ್ಟೇ... ಆದರೆ ನಾನು ಈಗ ಯಾವುದೇ ನಿರ್ಧಾರಕ್ಕೆ ಬರುವ ಮೊದಲು, ಪೃಥ್ವಿಗೆ ಈ ವಿಷಯವನ್ನು ತಿಳಿಸಲೇ ಬೇಕು. ಅವನು ಮಾತ್ರ ನನ್ನನ್ನು ಕೆಟ್ಟವನೆಂದು ಭಾವಿಸಬಾರದು ಎಂದುಕೊಂಡು ಪೃಥ್ವಿಯನ್ನು ಭೇಟಿಯಾಗಿ ಅವನೊಡನೆ ಮಾತನಾಡಿದ.

''ನಿಮ್ಮ ಮನಸ್ಸಿನಲ್ಲಿ ಏನಿದೆಯೋ ನನಗೆ ತಿಳಿಯದು. ಆದರೆ ಒಬ್ಬೊಬ್ಬರ ಆಲೋಚನೆ ಒಂದೊಂದು ತರಹ ಇರುತ್ತೆ... ನಿಮ್ಮ ಚಿಕ್ಕಮ್ಮನಿಗೆ ಮೊಮ್ಮಕ್ಕಳು ಬೇಕೆಂಬ ಆಸೆ. ನಿಮ್ಮ ನಾದಿನಿಯರಿಗೆ ಸ್ತ್ರೀ ಸಹಜವಾದ ಆಸೆ ಇರಬಹುದು... ಅದಕ್ಕೆ ಈ ರೂಪಿಣಿಯೂ ಸಹಾಯಕಳು. ಏನೇನೋ ಮಾತನಾಡಿಕೊಳ್ಳುತ್ತಾರೆ. ಅದನ್ನೆಲ್ಲ ನಿಮಗೆ ಹೇಳಲು ಕಷ್ಟವಾಗುತ್ತದೆ. ನೀವು ನಿಮ್ಮ ತಮ್ಮಂದಿರೊಂದಿಗೆ ಮಾತನಾಡಿ, ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು'' ಎಂದ.

ಪೃಥ್ವಿ ತಲೆ ಕೆಟ್ಟುಹೋಯಿತು. ''ಸಂಸಾರ ಅಂದರೆ ಬರೀ ಮದುವೆ, ಮಕ್ಕಳು ಅಂತ ಅಷ್ಟೇನಾ...? ಇಂಥ ಜಂಝಾಟಗಳಿಗೆ ಸಿಕ್ಕಿ ಬೀಳಬಾರದೆಂದು ನಾನು ಎಷ್ಟು ದೂರ ದೂರ ಇರುತ್ತೀನೋ... ಅಷ್ಟೇ ನನಗೇ ಅಂಟಿಕೊಳ್ಳುತ್ತೆ. ಅವರವರ ಸಮಸ್ಯೆಗಳನ್ನು ಅವರವರೇ ಬಗೆಹರಿಸಿಕೊಳ್ಳಬಾರದಾ ? ನಾನೇ ಬೇಕಾ ಎಲ್ಲಾ ವಿಷಯಕ್ಕೂ...?''

''ನೀವು ಏನು ಯೋಚಿಸ್ತಿದೀರಿ ಅಂತ ನನಗೂ ಅರ್ಥವಾಗುತ್ತೆ ಪೃಥ್ವಿ. ನೀವು ಈ ಮನೆಗೆ ಹಿರಿಯರು, ನಿಮಗೆ ಎಲ್ಲ ವಿಷಯ ತಿಳಿದಿರಲೇ ಬೇಕು... ಇಲ್ಲದಿದ್ದರೆ ನಾನು ಕೆಟ್ಟವನಾಗ್ತೀನಿ....'' ತಡವರಿಸಿದ.

''ನೀವು ಹೇಗೆ ಕೆಟ್ಟವರಾಗ್ತೀರಿ....?'' ಅಷ್ಟರಲ್ಲಿ ಫೋನು ರಿಂಗಾಯಿತು. ಪೃಥ್ವಿ ಎತ್ತಿಕೊಂಡ. ಅತ್ತ ಕಡೆಯಿಂದ ರೇವತಿ ಮಾತನಾಡಿದ್ದಳು.

''ಮೇನಕಾಳಿಗೆ ಹುಶಾರಿಲ್ಲ... ಡಾಕ್ಟರ ಬಳಿಗೆ ಹೋಗಿದ್ದೆವು... ಆಪರೇಷನ್ ಆಗಬೇಕೂಂತ ಹೇಳ್ತಿದಾರೆ... ನೀವು ಈಗಲೇ ಬನ್ನಿ...'' ಎಂದಳು. ಪೃಥ್ವಿಯ ಮುಖ ಕಪ್ಪಿಟ್ಟಿತು. ಇದೇನಪ್ಪಾ ಹೊಸ ಸಮಸ್ಯೆ ಎಂದುಕೊಂಡು ವಿಶ್ವನಿಗೆ ವಿಷಯ ತಿಳಿಸಿ ಅವನೊಡನೆ ಆಸ್ಪತ್ರೆಗೆ ಬಂದ. ಡಾಕ್ಟರನ್ನು ಕಂಡ. ಅವರು ನುಡಿದರು.

''ಆದಷ್ಟು ಬೇಗ ಇವರಿಗೆ, ಅಪೆಂಡಿಸೈಟಿಸ್ ಆಪರೇಷನ್ ಆಗಬೇಕು'' ಅಂತ. ಮೇನಕಾಳನ್ನು ತಕ್ಷಣವೇ ಆಸ್ಪತ್ರೆಗೆ ಸೇರಿಸಿದರು. ಅಲ್ಲಿಯೇ ರೇವತಿ, ವಿಶ್ವರನ್ನು ಬಿಟ್ಟು ಮನೆಗೆ ಬಂದ. ನಳಿನಿ ಕಂಗೆಟ್ಟಿದ್ದಳು.

"ನೆನ್ನೆಯಿಂದ ಹೊಟ್ಟೆ ನೋಯುತ್ತಿದೆಯಂತೆ. ಒಂದೆರಡು ಸಲ ವಾಂತಿ ಸಹ ಆಗಿದೆ... ಏನಾಗಿದೆ ಅವಳಿಗೆ ?" ಅವಳಿಗೆ ಏನೋ ಆತಂಕ, ಭಯ. ಪೃಥ್ವಿ ಡಾಕ್ಟರು ಹೇಳಿದ್ದನ್ನು ಹೇಳಿ ಆಸ್ಪತ್ರೆಗೆ ಸೇರಿಸಿರುವುದಾಗಿ ಹೇಳಿದ.

"ಈ ಆಪರೇಷನ್ ಮೈನರ್. ಏನೂ ಭಯವಿಲ್ಲ. ಹುಶಾರಾಗಿ ಬಂದ ಮೇಲೆ ಅಜಯನಿಗೆ ತಿಳಿಸಿದರಾಯ್ತು..." ಅಂತ ತಾನೇ ಹೇಳಿದ.

"ಬೇಜಾರು ಮಾಡ್ಕೋಬೇಡಪ್ಪಾ... ನಿನಗಂತೂ ಓಡಾಟಕ್ಕೆ ಏನಾದರೂ ಇದ್ದೇ ಇರುತ್ತೆ. ಈ ಸಾರಿ ಇದೆಲ್ಲಾ ಕಳೆದು ಹೋದ ಮೇಲೆ ಅವರಿಬ್ಬರನ್ನೂ ಅವರ ತಾಯಿಯ ಮನೆಗ ಕಳಿಸಿಬಿಡೋಣ... ಎಲ್ಲಾದಕ್ಕೂ ನಿನಗೇಕೆ ತೊಂದರೆ ಕೊಡಬೇಕು ? ನನಗೆ ನಿನ್ನದೇ ಚಿಂತೆ ಆಗಿದೆ."

ಪೃಥ್ವಿ ಏನೂ ಆಡಲಿಲ್ಲ. "ನಾನೀಗ ಅಲ್ಲಿಗೇ ಹೋಗ್ತಿದೀನಿ. ನೀವೂ ಬರ್ತೀರಾ ?" ಕೇಳಿದ. ನಳಿನಿ ಅವನೊಡನೆ ಹೊರಟಳು.

ಕೆಲವೇ ಗಂಟೆಗಳಲ್ಲಿ ಮೇನಕಾಳನ್ನು ಆಪರೇಷನ್‌ಗೆಂದು ಕರೆದೊಯ್ದರು. ನನಗೇಕೆ ಈ ಎಲ್ಲಾ ಜವಾಬ್ದಾರಿ ಅಂತ ಅಂದುಕೊಂಡ ಪೃಥ್ವಿಯೇ ಫಾರಂಗೆ ಸಹಿ ಹಾಕಿದ್ದ. ಆಪರೇಷನ್ ಮುಗಿದು ಮೇನಕಾಳನ್ನು ವಾರ್ಡಿಗೆ ಕರೆತರುವವರೆಗೂ ಎಲ್ಲರೂ ಅಲ್ಲೇ ಇದ್ದು ನಂತರ ಮನೆಗೆ ವಾಪಸ್ಸಾದರು.

ಮೂರು ದಿನಗಳ ನಂತರ ಮೇನಕಾ ಮನೆಗೆ ವಾಪಸ್ಸಾದಳು. ಮತ್ತೆರಡು ಬಾರಿ ಅವಳನ್ನು ವಿಶ್ವನೇ ಆಸ್ಪತ್ರೆಗೆ ಕರೆತಂದು ತೋರಿಸಿದ್ದ. ಒಮ್ಮೊಮ್ಮೆ ರೇವತಿಯೂ ಅವನ ಜೊತೆಗೆ ಬರುತ್ತಿದ್ದಳು. ಪೃಥ್ವಿ ತನ್ನ ಕರ್ತವ್ಯವೆಂಬಂತೆ ಅವಳ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದ... ಈ ನೆವದಲ್ಲಿ ವಿಶ್ವನ ಓಡಾಟ ಜಾಸ್ತಿಯಾಗಿದೆ ಎನ್ನುವುದನ್ನು ನಳಿನಿ ಗಮನಿಸಿದ್ದಳು. ಏನನ್ನೂ ಕೇಳಲಾರಳು; ಏನನ್ನೂ ಆಡಲಾರಳು. ಈಗ ರೂಪಿಣಿಯೂ ಇರಲಿಲ್ಲ. ಕೆಲವು ದಿನಗಳ ಮಟ್ಟಿಗೆ ಊರಿಗೆ ಹೋಗುತ್ತಿರುವುದಾಗಿ ಹೇಳಿದ್ದಳು. ಅವಳ ಕಸಿವಿಸಿ ಹೆಚ್ಚಾಗಿತ್ತು.

* * * *

ಕೆಲವು ವಾರಗಳು ಉರುಳಿ ಹೋದವು. ನಳಿನಿಗೆ ಏನೋ ತಳಮಳ ಪ್ರಾರಂಭವಾಗಿತ್ತು. ಡಾಕ್ಟರು ಸಲಹೆ ಕೊಟ್ಟಿದ್ದರು. ನಾಲ್ಕು ದಿನ ಎಲ್ಲಿಯಾದರೂ ಪ್ರಶಾಂತ ವಾತಾವರಣವಿರುವ ಸ್ಥಳಕ್ಕೆ ಹೋಗಿ ಬನ್ನಿ ಅಂತ. ಪೃಥ್ವಿಯೂ ಆ ಮಾತನ್ನು ಅನುಮೋದಿಸಿದ. "ನನ್ನ ಜೊತೆಗೆ ಯಾರು ಬರ್ತಾರೆ ? ಯಾರಿಗೂ

ಬಿಡುವಿಲ್ಲ...'' ಎಂದಾಗ ಪೃಥ್ವಿ ಸಲಹೆ ಕೊಟ್ಟ. ''ವಿಶ್ವನ್ನ ಕರೆದುಕೊಂಡು ಹೋಗಿ... ನನಗೆ ಇಲ್ಲಿ ಬಹಳ ಕೆಲಸವಿದೆ'' ಎಂದ. ವಿಶ್ವ ''ನನಗೆ ಆಸ್ಪತ್ರೆಯ ಕಟ್ಟಡದ ಕೆಲಸ ಬೇಕಾದಷ್ಟಿದೆ, ನನಗೆ ಬಿಡುವಿಲ್ಲ'' ಎಂದ. ನಳಿನಿ ಅತ್ತಳು. ಅಜಯ ವಿಜಯರನ್ನು ನೆನೆಸಿಕೊಂಡಳು. ''ನಿಮ್ಮನ್ನು ಅಮೆರಿಕಾಕ್ಕೆ ಕಳಿಸಿ ಕೊಡ್ತೀವಿ. ಇದೇ ನೆವದಲ್ಲಿ, ನೀವು ವಿಜಯ ಅಜಯರೊಂದಿಗೆ ಇದ್ದ ಹಾಗಾಗುತ್ತೆ'' ಎಂದು ಹೇಳಿ ಬಲವಂತವಾಗಿ ಅವಳನ್ನು ಒಪ್ಪಿಸಿದರು. ನಳಿನಿಯ ವಿದೇಶಯಾತ್ರೆಗೆ ಸಿದ್ಧತೆಗಳು ನಡೆದವು. ಪೃಥ್ವಿ ತನ್ನ ತಮ್ಮಂದಿರೊಡನೆ ಮಾತನಾಡಿ, ಕೆಲವು ತಿಂಗಳುಗಳ ವುಟ್ಟಿಗೆ ತಾಯಿಯನ್ನು ಕಳಿಸುತ್ತಿರು ವುದಾಗಿಯೂ, ಚೆನ್ನಾಗಿ ನೋಡಿಕೊಳ್ಳಬೇಕೆಂದು ಹೇಳಿದ. ಒಂದು ದಿನ ನಳಿನಿಯನ್ನು ಪ್ಲೇನು ಹತ್ತಿಸಿದರು. ನಳಿನಿ ವಿದೇಶಕ್ಕೆ ಹಾರಿದಳು.

ಒಂದು ತಿಂಗಳು ಕಳೆಯುವಷ್ಟರಲ್ಲಿ ನಳಿನಿಗೆ ಅಲ್ಲಿ ಬೇಜಾರಾಗ ತೊಡಗಿತ್ತು. ತಾನು ವಾಪಸ್ಸು ಹೋಗಬೇಕೆಂದು ಹೇಳುತ್ತಿದ್ದಳು. ಮಕ್ಕಳಿಬ್ಬರೂ ಆಫೀಸಿಗೆ ಹೊರಟುಹೋದರೆ, ಅವಳಿಗೆ ಕಾಲ ಕಳೆಯುವುದು ಕಷ್ಟವೆನಿಸು ತ್ತಿತ್ತು. ಅಲ್ಲಿ ಹೇಗೋ ಸಮಯ ಹೋಗುತ್ತಿತ್ತು. ತಾನು ಪೃಥ್ವಿಯ ಮಾತನ್ನು ಕೇಳಿಕೊಂಡು ಇಲ್ಲಿಗೆ ಬರಬಾರದಾಗಿತ್ತು ಎನಿಸುತ್ತಿತ್ತು. ವಾರದ ರಜೆಯಲ್ಲಿ ಅಜಯ ವಿಜಯರೊಡನೆ ಹೊರಗೆ ತಿರುಗಾಡಿಕೊಂಡು ಬರಲು ಹೋಗುತ್ತಿ ದ್ದಳು. ಆಗ ತನ್ನ ಸೊಸೆಯರ ನೆನಪಾಗುತ್ತಿತ್ತು. ಇಲ್ಲಿ ಇವರಿಬ್ಬರು ಒಂಟಿ... ಅಲ್ಲಿ ಅವರಿಬ್ಬರೂ ಒಂಟಿ... ಹೀಗೇಕಾಯ್ತು ಎಂದುಕೊಳ್ಳುವಾಗ ಬಹಳ ಬೇಸರವೆನಿಸುತ್ತಿತ್ತು. ತಾಯಿ ಯಾವುದೇ ಬೇರೆ ಮಾತುಗಳನ್ನು ಎತ್ತದಂತೆ ಅಜಯ ವಿಜಯರು ಎಚ್ಚರಿಕೆ ವಹಿಸಿದ್ದರು.

ಮೇನಕಾ ರೇವತಿಯರು ಇನ್ನೂ ಚಿಕ್ಕವರು... ಪೃಥ್ವಿ ಒಬ್ಬನೇ ಗಂಡಸು... ತಾನು ಬಿಟ್ಟು ಬಂದುದು ಸರಿಯಲ್ಲವೆನಿಸುತ್ತಿತ್ತು. ಆದರೆ ಪೃಥ್ವಿಯ ಮೇಲೆ ಅಪಾರ ನಂಬಿಕೆ. ಆದರೆ ಆ ನಂಬಿಕೆ ವಿಶ್ವನ ಮೇಲಿರಲಿಲ್ಲ. ಏನಾದರೂ ಅಪಚಾರವಾದರೆ ಎಂಬ ಹೆದರಿಕೆ ಇದ್ದರೂ ತಾನು ಅಸಹಾಯಕಳು, ಅದೇನೇನು ಆಗಬೇಕೋ ಅದು ನಡೆದೇ ನಡೆಯುತ್ತೆ. ಅದನ್ನು ತನ್ನಿಂದ ತಡೆಯಲು ಸಾಧ್ಯವೇ ಎಂದುಕೊಳ್ಳುವಳು. ಕಡೇ ಪಕ್ಷ, ಮೇನಕಾ ರೇವತಿಯರ ತಾಯಿಯನ್ನಾದರೂ ಅವರಿಬ್ಬರ ಜೊತೆಗೆ ಬಿಟ್ಟುಬರಬೇಕಾಗಿತ್ತು ಎಂದು ಕೊಂಡಳು. ರೂಪಿಣಿಯೂ ಅಲ್ಲಿರಲಿಲ್ಲ. ಅವಳಾದರೂ ಇದ್ದಿದ್ದರೇ ಎಂದೆನಿಸುತ್ತಿತ್ತು. ವಿದೇಶದಲ್ಲಿದ್ದರೂ, ತನ್ನ ಮುದ್ದಿನ ಮಕ್ಕಳ ಜೊತೆ ಇದ್ದರೂ

ನಳಿನಿಗೆ ನೆಮ್ಮದಿ ಇಲ್ಲವಾಗಿತ್ತು. ಎರಡು ತಿಂಗಳು ಕಳೆಯುವಷ್ಟರಲ್ಲಿ ಚಡಪಡಿಸಿದಳು. ಮೂರು ತಿಂಗಳು ಕಳೆಯುವಷ್ಟರಲ್ಲಿ ಸಾಕು ಸಾಕೆನಿಸಿ ವಾಪಸ್ಸಾದಳು.

* * * *

ನಳಿನಿ ಯಾವ ಆತಂಕದಿಂದ ತೊಳಲಾಡಿದ್ದಳೋ ಅದು ನಿಜವೆನ್ನುವಂತೆ ಮೇನಕಾ, ರೇವತಿಯರನ್ನು ನೋಡಿದ ಕೂಡಲೇ ಅವರಲ್ಲಾದ ಬದಲಾವಣೆಯನ್ನು ಗುರುತಿಸಿದ್ದಳು. ಇದು ತನಗೆ ಅನಿರೀಕ್ಷಿತವಲ್ಲ. ಹೀಗಾಗಬಹುದು ಎಂದು ತನಗೆ ಅನುಮಾನವಿತ್ತು. ತಾನೀಗ ಯಾರನ್ನು ದೂಷಿಸುವುದು ? ತನ್ನದೇ ತಪ್ಪು.... ತಪ್ಪು ಎಂಬ ಭಯ ಆವರಿಸಿಕೊಂಡಿತು. ಅಜಯ ವಿಜಯರಿಗೆ ಈ ವಿಷಯ ತಿಳಿದರೆ ಖಂಡಿತಾ ಇವರನ್ನು ಈ ಮನೆಯಿಂದ ಓಡಿಸದೇ ಇರುತ್ತಾರೆಯೇ ? ... ಈಗ ತಾನೂ ಕಳಿಸಿಬಿಟ್ಟರೆ ಹೊರಗಿನವರೆಲ್ಲರಿಗೂ ಈ ವಿಚಾರ ತಿಳಿಯುತ್ತದೆ. ಇದು ಕೇವಲ ನಮ್ಮ ಮನೆಯ ರಹಸ್ಯವಾಗಿ ಉಳಿಯಬೇಕು... ಮೊದಲು ಇವರಿಬ್ಬರಿಗೂ ಸುಖಮುಖವಾಗಿ ಹೆರಿಗೆಯಾಗಲಿ, ನಂತರ ಮುಂದೇನು ಮಾಡಬಹುದು ಅಂತ ಯೋಚಿಸಿದರಾಯ್ತು.... ಇದರಲ್ಲಿ ನಮ್ಮೆಲ್ಲರದ್ದೂ ತಪ್ಪಿದೆ... ಅಂತಂದುಕೊಂಡರೂ ಆತಂಕ ಹೆಚ್ಚಾಗುತ್ತಿತ್ತು. ಮೇನಕಾ ರೇವತಿಯರು ಗರ್ಭಿಣಿಯರಾಗಿದ್ದಾರೆ ಎನ್ನುವುದು ಖಚಿತವಾಗಿತ್ತು. ಪೃಥ್ವಿಯನ್ನು ದೂಷಿಸಲಾರಳು, ವಿಶ್ವನನ್ನು ಬೈಯಲಾರಳು. ಸೊಸೆಯರನ್ನು ಯಾಕೆ ಹೀಗೆ ಮಾಡಿದಿರಿ ಎಂದು ಕೇಳಲಾರಳು. ''ನಮ್ಮ ಇಷ್ಟ'' ಎಂದುಬಿಟ್ಟರೇ... ಇದಕ್ಕೆಲ್ಲಾ ರೂಪಿಣಿಯೇ ಕಾರಣ ಎಂದು ಅವಳನ್ನು ದೂಷಿಸಿದಳು ತನ್ನೊಳಗೇ. ದಿನ ದಿನ ಸರಿದಂತೆ, ಮೇನಕಾ ರೇವತಿಯರು ಆರೋಗ್ಯದ ಚಿಲುಮೆಯಂತೆ ಹೊಳೆಯತೊಡಗಿದ್ದರು. ಗಮನಿಸಿದಷ್ಟೂ ನಳಿನಿಗೆ ಏನೋ ದಿಗಿಲು. ಮೇನಕಾ ರೇವತಿಯರಿಗೆ ನಳಿನಿಯ ಈ ಉದಾಸೀನ ವಿಚಿತ್ರವಾಗಿ ಕಂಡಿತ್ತು. ಮೊಮ್ಮಕ್ಕಳು ಬೇಕು ಎಂದು ಹಂಬಲಿಸುತ್ತಿದ್ದ ಈ ಅತ್ತೆಗೆ ಹೀಗೇಕೆ ಉದಾಸೀನ ? ನಮಗೇನು ಭಯ ? ನಮ್ಮದೇನೂ ತಪ್ಪಿಲ್ಲ ಎಂದು ತಮಗೆ ತಾವೇ ಸಮಾಧಾನ ಹೇಳಿಕೊಳ್ಳುತ್ತಿದ್ದರು. ನಿರ್ಭಯವಾಗಿ ತಿರುಗಾಡಿಕೊಂಡಿದ್ದರು.

ಆಸ್ಪತ್ರೆಯ ಕಟ್ಟಡದ ಕೆಲಸವಿನ್ನೂ ಪೂರ್ಣವಾಗಿರಲಿಲ್ಲ. ಆದಷ್ಟು ಬೇಗ ಮುಗಿದರೆ ಸಾಕು ಎಂದೆನಿಸಿತ್ತು ವಿಶ್ವನಿಗೆ. ಅಮೆರಿಕಾದಿಂದ ವಾಪಸ್ಸಾದ ನಳಿನಿಯ ಕಳವಳ ವಿಶ್ವನಿಗೆ ತಿಳಿದಿತ್ತು. ಅವಳ ಚಡಪಡಿಕೆಗೆ ಕಾರಣ ತಾನೇ

ಅಂತಂದುಕೊಂಡಾಗ ಏನೋ ಒಂದು ರೀತಿಯ ಸಮಾಧಾನವಾಗುತ್ತಿತ್ತು. ಕೆಲವೊಮ್ಮೆ ಅದು ಸರಿಯಲ್ಲ ಎಂದೆನಿಸುತ್ತಿತ್ತು. ಮೊಮ್ಮಕ್ಕಳ ಹಂಬಲದ ಬಯಕೆಯನ್ನು ತನ್ನೆದುರು ಪ್ರಕಟಗೊಳಿಸಿದ್ದವಳು ಈಗೇಕೆ ಹೆದರುತಿದ್ದಾಳೆ...? ತನ್ನ ಗಂಡನ ವಂಶವನ್ನು ಬೆಳೆಸಲು ಈ ಮನೆಯಲ್ಲಿ ಏನೋ ಅಪಚಾರ ನಡೆದಿದೆ ಅಂತ ಈಗ ಮುಜುಗರಗೊಳ್ಳುತ್ತಿರಬಹುದೇ ಅಂತಂದುಕೊಂಡಾಗ ಒಂದು ರೀತಿಯ ವಿಲಕ್ಷಣ ನಗೆ ಅವನ ತುಟಿಗಳಲ್ಲಿ ಮೂಡಿತು.

ಮನೆಯಲ್ಲಿ ಮೊಮ್ಮಕ್ಕಳು ಹುಟ್ಟಲಿದ್ದಾರೆ. ಆದರೆ ಯಾವುದೇ ಸಡಗರ ಸಂಭ್ರಮಗಳಿಲ್ಲ. ಸೀಮಂತ, ಆರತಕ್ಷತೆಯ ಸಡಗರವಿಲ್ಲ. ಏನೋ ಆಗಬಾರದ್ದು ಆಗಿಹೋಗಿದೆ. ಅದು ಕಳೆದುಹೋದರೆ ಸಾಕು ಎನ್ನುವ ದುಗುಡ... ಈ ಪೃಥ್ವಿಗೇಕೆ ಏನೂ ಗೊತ್ತಾಗುತ್ತಿಲ್ಲ... ತೀರಾ ಅಷ್ಟು ಮುಗ್ಧನೇ.. ಅಥವಾ ನನಗೇನು ಎನ್ನುವ ಉದಾಸೀನವೇ...

ಈಗ ರೂಪಿಣಿ ಚುರುಕಾಗಿದ್ದಳು. ಮೇನಕಾ ರೇವತಿಯರನ್ನು ಹೆದರಿಸಿದ್ದಳು ''ನಾನು ಊರಿನಲ್ಲಿಲ್ಲದಾಗ ನೀವು ವಿಶ್ವನ ಸಹವಾಸ ಮಾಡಿದ್ದೀರಿ... ಎಲ್ಲಾ ತಮಾಷೆ ಅಂತ ಅಂದುಕೊಂಡಿದೀರಿ... ನಾಳೆ ನಿಮ್ಮ ಮಕ್ಕಳನ್ನು ಕಿತ್ತುಕೊಂಡು ನಳಿನಿ ನಿಮ್ಮಿಬ್ಬರನ್ನೂ ಮನೆಬಿಟ್ಟು ಓಡಿಸಿದರೆ ಎಲ್ಲಿಗೆ ಹೋಗ್ತೀರಿ... ಹಾಳಾಗಿ ಹೋಗ್ತೀರಿ ಅಷ್ಟೇ...''

ಆದರೆ ಅವಳ ಮಾತಿಗೆ ಅವರಿಬ್ಬರೂ ಹೆದರಿದಂತೆ ಅನ್ನಿಸಲಿಲ್ಲ. ''ನಮಗೆ ಈ ಆಸೆ, ಈ ಧೈರ್ಯ ಬರುಕ್ಕೆ ನೀನೇ ಕಾರಣ. ಎಲ್ಲಾ ತಿಳಿದೂ, ನೀನು ಬೇಕೂಂತ ನಮಗೆ ಅನ್ಯಾಯ ಮಾಡಿದೆ... ಇಲ್ಲದಿದ್ದರೆ ಈ ಮನೆಯ ಸೊಸೆಯರಾಗುತ್ತಿದ್ದೆವೋ ಇಲ್ಲವೋ... ಈಗ ನಿನ್ನನ್ನು ಅಂದು ಏನು ಪ್ರಯೋಜನ ? ಅದೇನು ಬರುತ್ತೋ ಬರಲಿ. ಅದನ್ನು ಎದುರಿಸುತ್ತೀವಿ. ನಮಗೀಗ ಯಾವ ಭಯವೂ ಇಲ್ಲ'' ಎಂದುಬಿಟ್ಟರು. ರೂಪಿಣಿಗೆ ಅವಮಾನವಾದಂತಾಗಿತ್ತು.

''ಇರಲಿ, ಇರಲಿ, ನಿಮ್ಮ ಒಳ್ಳೇದಕ್ಕೆ ನಾನು ಎಲ್ಲಾ ಮಾಡಿದ್ದು ಅನ್ನೋದನ್ನು ಮರೆತಿದ್ದೀರಿ. ನಾನು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಲ್ಲೆ ನೆನಪಿರಲಿ...'' ಎಂದು ಬೆಟ್ಟು ತೋರಿಸಿ ಬೆದರಿಸಿದಳು ಇಬ್ಬರನ್ನೂ ದುರದುರನೆ ನೋಡುತ್ತಾ ಅಲ್ಲಿಂದ ಹೊರಟು ಹೋದಳು. ಮೇನಕಾ ರೇವತಿಯರು ಆತಂಕಗೊಂಡರೂ ಈ ಮಾತನ್ನು ಯಾರಿಗೂ ಹೇಳಲಿಲ್ಲ.

* * * *

ದಿನ ತುಂಬುವ ಮೊದಲೇ ರೇವತಿ ಒಂದು ಗಂಡುಮಗುವಿಗೆ ಜನ್ಮವಿತ್ತಳು. ನಳಿನಿ ಅಪಚಾರವಾದವಳಂತೆ, ನರ್ಸಿಂಗ್ ಹೋಂಗೆ ಸಹ ಹೋಗದೇ ಮನೆಯಲ್ಲಿಯೇ ಇದ್ದಳು. ಪೃಥ್ವಿ ಸಹ ಅಸಮಾಧಾನಗೊಂಡಂತೆ ಅನ್ನಿಸಲಿಲ್ಲವಾದ್ದರಿಂದ ನಳಿನಿಗೆ ಆಶ್ಚರ್ಯವೆನಿಸಿತ್ತು. ಪೃಥ್ವಿ ಹೀಗೇಕೆ ಸುಮ್ಮನಿದ್ದಾನೆ ? ರೇವತಿಯದು ತಪ್ಪು ಅಂತ ಇವನಿಗೆ ಅನ್ನಿಸುತ್ತಿಲ್ಲವೇ ? ಅಥವಾ ಎಲ್ಲಾ ತಿಳಿದು ತನಗಾಗಿ ಸುಮ್ಮನಿದ್ದಾನೆಯೇ ಅಂತಂದುಕೊಂಡಾಗ ಹೀನಾಯವೆನಿಸಿತ್ತು.

ವಾರ ಕಳೆಯುವಷ್ಟರಲ್ಲಿ ಮೇನಕಾಳು ನರ್ಸಿಂಗ್ ಹೋಂಗೆ ಸೇರುವ ಸಮಯವಾಗಿತ್ತು. ಅವಳ ದೇಹಸ್ಥಿತಿಯಲ್ಲಿ ಸ್ವಲ್ಪ ಏರುಪೇರು ಇದ್ದುದರಿಂದ, ಡಾಕ್ಟರು ಸಿಸೇರಿಯನ್ ಆಪರೇಷನ್ ಮಾಡಬೇಕಾಗಬಹುದೆಂದು ತಿಳಿಸಿದ್ದರು. ಆ ಸಮಯದಲ್ಲಿಯೂ ಸಹ ಪೃಥ್ವಿ ಯಾವ ಅಸಮಾಧಾನವನ್ನೂ ವ್ಯಕ್ತಪಡಿಸದೇ ನಿರಾತಂಕದಿಂದಿರುವುದನ್ನು ನಳಿನಿ ಗಮನಿಸಿದಳು. ಕಾರನ್ನೇರುವಾಗ ಚಿಕ್ಕಮ್ಮನ್ನ ಪ್ರಶ್ನಿಸಿದ.

''ನೀವು ಆಸ್ಪತ್ರೆಗೆ ಬರುಲ್ವಾ ? ಮೇನಕಾ ಹೆದರಿದ್ದಾಳೆ ಅಂತ ಡಾಕ್ಟರು ಹೇಳಿದ್ದಾರೆ. ನೀವು ಬಂದು ಸಮಾಧಾನ ಹೇಳಿ.''

''ಪೃಥ್ವಿ ನೀನೇಕೆ ಹೀಗೆ ಎಲ್ಲವನ್ನು ಸಹಿಸಿಕೊಳ್ಳುತ್ತಿದ್ದೀಯ ? ತಪ್ಪು ಮಾಡಿರುವವರು ಅವರು... ನೀನೇಕೆ ಸಹಾಯ ಮಾಡ್ತಿದೀಯ ?''

''ಅದ್ನೆಲ್ಲ ಆಮೇಲೆ ಯೋಚಿಸೋಣ... ಈಗ ನೀವು ಹೊರಡಿ. ನಿಮಗೆ ಮೊಮ್ಮಕ್ಕಳನ್ನು ನೋಡಬೇಕೂಂತ ಅನ್ನಿಸುಲ್ವಾ !'' ಸಮಾಧಾನದಿಂದ ಹೇಳಿದ.

''ಮೊಮ್ಮಕ್ಕಳ ಹಂಬಲದಲ್ಲಿ ನಾನು ಏನೇನನ್ನೋ ಯೋಚಿಸಿದ್ದುಂಟು. ಅದೆಲ್ಲ ಸರಿಯಲ್ಲ ಅಂತ ಈಗ ಅನ್ನಿಸ್ತಿದೆ. ನನ್ನನ್ನು ಕ್ಷಮಿಸಪ್ಪಾ...'' ಅವನ ಕೈ ಹಿಡಿದುಕೊಂಡಳು.

''ಛೇ... ಅಂಥ ತಪ್ಪು ಈಗ ಏನು ನಡೆದಿದೆ ?'' ಎಂದು ಕೈಗಳನ್ನು ಬಿಡಿಸಿಕೊಂಡ. ''ಈಗಾಗಲೇ ಸಮಯವಾಗಿದೆ. ನಿಧಾನವಾದರೆ, ಮೇನಕಾಳ ಪ್ರಾಣಕ್ಕೆ ಅಪಾಯವಾಗಬಹುದು...'' ಎಂದು ಪೃಥ್ವಿ ಕಾರನ್ನೇರಿದ. ನಳಿನಿ ತಾನು ಹತ್ತಿದಳು.

''ಹೆಸರಿಗೆ ತಕ್ಕ ಹಾಗೆ ನಿನ್ನದು ವಿಶಾಲವಾದ ಮನಸ್ಸು. ಎಲ್ಲರನ್ನು ಕ್ಷಮಿಸುವ ದೊಡ್ಡ ಗುಣ. ಹಾಗಂತ ಎಷ್ಟು ತಪ್ಪುಗಳನ್ನು ಸಹಿಸಲು ಸಾಧ್ಯ ?....

ನಿನ್ನ ಮನೆತನಕ್ಕೆ ಮಸಿ ಬಳಿಯುವಂತಹ ಕೆಲಸವನ್ನು ಮೇನಕಾ ರೇವತಿಯರು ಮಾಡಿದ್ದಾರೆ. ವಿಶ್ವನಿಂದ ನಿನಗೆ ಅನ್ಯಾಯವಾಗಿದೆ. ಅಷ್ಟಾದರೂ ಅದೇಕೆ ಏನೂ ತಿಳಿಯದದವನಂತೆ ಸುಮ್ಮನಿದೀಯ ? ವಿಶ್ವನೂ ನನ್ನ ಮಗನೇ, ಆದರೆ ಅವನಿಂದ ನಿನಗೆ ದ್ರೋಹವಾಗುವುದು ನನಗೆ ಸಹಿಸದ ವಿಷಯ... ನನ್ನ ತಂದೆ ನಿನ್ನ ತಾತನಿಗೆ ದ್ರೋಹ ಮಾಡಿದರು. ಈಗ ವಿಶ್ವನ ಸರದಿ.... ನೀನು ಅವನನ್ನು ಕ್ಷಮಿಸಿದರೂ ನಾನು ಅವನನ್ನು ಕ್ಷಮಿಸುವುದಿಲ್ಲ.''

ಪೃಥ್ವಿ ಸುಮ್ಮನೆ ನಕ್ಕ. ಪೃಥ್ವಿಗೆ ತಿಳುವಳಿಕೆ ಸಾಲದು ಎಂದುಕೊಂಡಳು ನಳಿನಿ. ನರ್ಸಿಂಗ್ ಹೋಂ ಸಮೀಪಿಸಿತು. ಇಬ್ಬರೂ ಇಳಿದರು. ಮೇನಕಾಳನ್ನು ಆಪರೇಷನ್ ಥಿಯೇಟರ್‌ಗೆ ಕರೆದೊಯ್ಯುವ ಸಮಯ ಸಮೀಪಿಸಿತ್ತು. ಅಲ್ಲಿ ನಿಂತಿದ್ದ ವಿಶ್ವನನ್ನು ಕಂಡು ನಳಿನಿಯ ರಕ್ತದ ಒತ್ತಡ ಹೆಚ್ಚಿದಂತಾಯಿತು. ಫಾರಂಗೆ ಸಹಿ ಹಾಕಲು ಮುಂದಾದ ಪೃಥ್ವಿಯನ್ನು ತಡೆದಳು.

''ಮೇನಕಾ ನನ್ನ ಸೊಸೆ, ಅವಳ ಜೀವನಕ್ಕೆ ಅಥವಾ ಮರಣಕ್ಕೆ ನಾನೇ ಕಾರಣಳು. ಈ ಪೃಥ್ವಿ ಮುಗ್ಧ ಅವನಿಗೆ ಏನೂ ತಿಳಿಯದು, ನಾನು ಸಹಿ ಹಾಕ್ತೀನಿ'' ಎಂದಳು. ಅವಳ ಮೈಯೆಲ್ಲಾ ಬೆವತುಹೋಗಿತ್ತು. ಗೋಡೆಗೆ ಒರಗಿದಳು.

ಡಾಕ್ಟರು ನಕ್ಕರು. ''ಆಗಲಿ.... ನಿಮ್ಮ ಸಹಿಯ ಅಗತ್ಯವಿದ್ದಾಗ, ನಾವು ನಿಮ್ಮಿಂದಲೂ ಸಹಿ ಹಾಕಿಸಿಕೊಳ್ಳುತ್ತೇವೆ. ಈಗ ನಿಮಗೆ ವಿಶ್ರಾಂತಿಯ ಅಗತ್ಯವಿದೆ. ನೀವು ಬೇಕಾದರೆ ಮನೆಗೆ ಹೋಗಬಹುದು'' ಎಂದರು.

''ನನಗೆ ನೆಮ್ಮದಿಯೇ ಇಲ್ಲವಾಗಿದೆ ಡಾಕ್ಟರೇ... ಇದ್ದಕ್ಕಿದ್ದ ಹಾಗೇ ನನಗೇನು ಆಗಿಹೋಗುತ್ತೋ ಅಂತನ್ನಿಸುತ್ತೆ....''

''ಅದಕ್ಕೆಲ್ಲ ಗಾಭರಿ ಪಡಬೇಕಾಗಿಲ್ಲ. ರಕ್ತದ ಒತ್ತಡ ಸ್ವಲ್ಪ ಹೆಚ್ಚಿರಬಹುದು. ನಿಮ್ಮ ಮೊಮ್ಮಕ್ಕಳ ಮುಖ ನೋಡಿದ ಕೂಡಲೇ, ಎಲ್ಲಾ ತಾನೇ ತಾನಾಗಿ ಸರಿಹೋಗುತ್ತದೆ'' ಎಂದು ಡಾಕ್ಟರು ನಕ್ಕು ಅಲ್ಲಿಂದ ಸರಿದು ಹೋಗಿದ್ದರು.

ಮುಳ್ಳಿನ ಮೇಲೆ ಕುಳಿತವಳಂತೆ ಚಡಪಡಿಸುತ್ತಿದ್ದವಳನ್ನು ಕಂಡು ವಿಶ್ವ ಅವಳ ಬಳಿಗೆ ಬಂದ. ''ರಕ್ತದ ಒತ್ತಡ ಎಷ್ಟಿದೆ ಅಂತ ಪರೀಕ್ಷಿಸಿಕೊಳ್ಳುವಿರಂತೆ ಬನ್ನಿ...'' ಎಂದ.

''ದೂರ... ದೂರ ನಿಂತ್ಕೋ... ನನ್ನ ಬಳಿಗೆ ಬರಬೇಡ. ನನಗೇನಾದರೆ

ನಿನಗೇನು...? ನೀನು ನನ್ನ ಮಗನಲ್ಲ. ನನ್ನ ಮಗ ಪೃಥ್ವಿ... ನನಗೇನಾದರೂ ಹೆಚ್ಚು ಕಡಿಮೆ ಆದರೆ, ನೀನು ಏನೂ ಮಾಡಕೂಡದು. ಅದೇ ನನ್ನ ಕಡೆಯಾಸೆ'' ಎಂದು ಎತ್ತರದ ಧ್ವನಿಯಲ್ಲಿ ಹೇಳುತ್ತಿದ್ದಂತೇ ನಳಿನಿ ಕುಸಿದು ಬಿದ್ದಳು. ತಕ್ಷಣವೇ ಅವಳನ್ನು ನರ್ಸಿಂಗ್ ಹೋಂಗೆ ಸೇರಿಸಿದ. ಅವಳ ಶುಶ್ರೂಷೆ ಪ್ರಾರಂಭವಾಯಿತು.

ಒಂದು ವಾರದವರೆಗೂ ಅತ್ತೆ ತನ್ನ ಮಗುವನ್ನು ನೋಡಲು ಬಂದಿಲ್ಲ ವೆನ್ನುವುದನ್ನು ರೇವತಿ ಗಮನಿಸಿದ್ದಳು. ಆದರೆ ತನ್ನ ದುಗುಡವನ್ನು ಹೇಳಿಕೊಳ್ಳಲು ತನ್ನ ಬಳಿ ಯಾರಿಲ್ಲ. ಈಗ ಅತ್ತೆಗೂ ಹುಶಾರಿಲ್ಲ... ಮೇನಕಾಳಿಗೆ ಆಪರೇಷನ್. ಏನಾಗುತ್ತದೋ ಅಂತಂದುಕೊಂಡಾಗ, ತನ್ನ ಗಂಡನ ಮೇಲೆ ಕೋಪ ಬಂದಿತ್ತು. ಇಷ್ಟಕ್ಕೆಲ್ಲ ಅವರುಗಳೇ ಕಾರಣ. ಅವರು ಸರಿಯಾಗಿದ್ದಿದ್ದರೆ ಹೀಗೇಕೆ ಆಗುತ್ತಿತ್ತು ? ಈಗ ಅವರು ಒಪ್ಪಲಿ ಬಿಡಲಿ, ಈ ಮಗು ತನ್ನದು. ನಳಿನಿ ಒಪ್ಪಲಿ ಬಿಡಲಿ, ಈ ಮಗು ಈ ಮನೆಗೆ ಸೇರಿದ್ದು... ಆದರೆ ತಂದೆ ಯಾರೆಂದು ಹೇಗೆ ಹೇಳುವುದು ?

ಅಷ್ಟರಲ್ಲಿ ನರ್ಸು ಬಂದು ಹೇಳಿದ್ದಳು. ''ಮೇನಕಾಳಿಗೆ ಆಪರೇಷನ್ ಆಯಿತು. ಗಂಡು ಮಗು. ನಿಮ್ಮ ಮಗುವಿನಂತೆಯೇ ಮುದ್ದಾಗಿದೆ.'' ಈಗ ರೇವತಿಗೆ ತನ್ನ ತಾಯಿಯ ನೆನಪಾಗಿತ್ತು. ತಾವು ತಮ್ಮ ತಾಯಿಗೆ ಯಾವ ವಿಷಯ ವನ್ನು ತಿಳಿಸಿರಲಿಲ್ಲ. ರೂಪಿಣಿ ಏನು ಹೇಳಿದ್ದಳೋ ''ಚಿಕ್ಕಮ್ಮನಿಗೆ ನಿಮ್ಮಿಬ್ಬರ ಮೇಲೆ ಸಿಟ್ಟು'' ಎಂದಷ್ಟೇ ಹೇಳಿದ್ದಳು. ಅಮ್ಮನಿಗೆ ಹೆದರಿಕೆ, ಏನಾದರೂ ಎಡವಟ್ಟಾಗಿ, ತಾವಿಬ್ಬರೂ ಗಂಡ ಬಿಟ್ಟವರು ಎಂಬ ಅಪಖ್ಯಾತಿಯೊಡನೆ ತನ್ನ ಮನೆ ಸೇರಿದರೆ, ನೋಡಿದ ಜನ ಏನಂದಾರು ಅಂತ... ಈ ಕಾಲದಲ್ಲಿ ಎಲ್ಲರೂ ಸ್ವಾರ್ಥಿಗಳೇ... ನಮ್ಮ ನಮ್ಮ ಸ್ವಾರ್ಥದಲ್ಲಿ ನಮಗೆ ಸುಖವಿದೆ ಅಂತ ಎಲ್ಲಾರು ಅಂದುಕೊಳ್ತಾರೆ ಅಂತಂದುಕೊಂಡಾಗ, ಅವಳಿಗೆ ದುಃಖವುಂಟಾಗಿತ್ತು... ಅವಳು ಅತ್ತಾಗ ನರ್ಸು ಸಮಾಧಾನ ಹೇಳಿದಳು. ''ಹಸೀಮೈ ಬ್ತಿ... ಅಳಬೇಡಿ ನಂಜಾಗುತ್ತೆ'' ಅಂತ. ರೇವತಿ ಕಣ್ಣೊರೆಸಿಕೊಂಡು ಕೇಳಿದಳು.

''ಈಗ ನಮ್ಮತ್ತೆ ಹೇಗಿದಾರೆ ?... ಮನೆಗೆ ಹೋದ್ರಾ ?''

''ಇಲ್ಲ, ಈ ರಾತ್ರಿ ಇಲ್ಲಿರುತ್ತಾರೆ... ಅವರಿಗೆ ವಿಶ್ರಾಂತಿಯ ಅಗತ್ಯವಿದೆ. ಈಗ ನಿದ್ದೆಯ ಮಂಪರಿನಲ್ಲಿದಾರೆ'' ನರ್ಸು ಅತ್ತ ಹೊರಟುಹೋದಳು.

ಮೇನಕಾಳಿಗೆ ಜ್ಞಾನ ಬಂದಾಗ ಇನ್ನೂ ಅರೆ ಎಚ್ಚರ. ನರ್ಸು ಮಕ್ಕದ ತೊಟ್ಟಿಲಿನಲ್ಲಿ ಮಲಗಿದ್ದ ಮಗುವನ್ನು ಎತ್ತಿ ತೋರಿಸಿದಳು. ಮೇನಕಾ ನೋಡಿದಂತೆ ಮಾಡಿ ಮತ್ತೆ ಕಣ್ಣು ಮುಚ್ಚಿದಳು. ನರ್ಸು ಮಗುವನ್ನು ಅಲ್ಲಿಂದ ಎತ್ತಿಕೊಂಡು ಬೇರೆ ರೂಮಿಗೆ ಕರೆದುಕೊಂಡು ಹೋಗಿದ್ದಳು.

* * * *

ನಳಿನಿಯನ್ನು ಪರೀಕ್ಷಿಸಲೆಂದು ಬಂದ ಡಾಕ್ಟರು ನಗುತ್ತಾ ಪ್ರಶ್ನಿಸಿದರು. ''ಈಗ ಹೇಗಿದೀರಿ ?... ನಿಮ್ಮ ಮೊಮ್ಮಕ್ಕಳನ್ನು ನೋಡಬೇಕೂಂತ ಅನ್ನಿಸಿದ್ದರೆ ಹೇಳಿ... ಇಲ್ಲಿಗೇ ಕರೆತರುವಂತೆ ಹೇಳ್ತೀನಿ...''

''ಬೇಡ'' ಎನ್ನುವಂತೆ ತಲೆಯಾಡಿಸಿದಳು.

''ಯಾಕೆ ಬೇಡ ? ಎಷ್ಟು ಮುದ್ದಾಗಿವೆ ಅಂತ ಗೊತ್ತಾ ? ಆ ಮಕ್ಕಳ ಮುಖ ನೋಡಿದ ಕೂಡಲೇ ನಿಮ್ಮ ಬಿ.ಪಿ. ಗೀಪಿ ಎಲ್ಲಾ ತಾನಾಗಿಯೇ ಸರಿ ಹೋಗುತ್ತದೆ'' ಎಂದು ಅವರು ಮುಗುಳ್ನಕ್ಕು ನುಡಿದಾಗ ಮುಖ ಅತ್ತ ತಿರುಗಿಸಿದಳು.

''ಯಾಕೆ ನಳಿನಿಯವರೇ.... ನಿಮಗೆ ಏನೋ ಅಸಮಾಧಾನವಿದ್ದಂತೆ ಅನ್ನಿಸುತ್ತೆ. ಯಾಕೆ ನಿಮ್ಮ ಮಕ್ಕಳು ಅಮೆರಿಕಾದಿಂದ ಬಂದಿಲ್ಲ ಅಂತ ಬೇಸರಾನಾ ?''

'ಅಲ್ಲ' ಅನ್ನುವಂತೆ ತಲೆಯಾಡಿಸಿದಳು. ''ಅವರು ಬರದೇ ಇದ್ದುದ್ದೇ ಸರಿ ಡಾಕ್ಟರ್... ಅವರು ಬಂದರೆ ಏನೇನು ಹಗರಣವಾಗುತ್ತೋ...?'' ನಳಿನಿ ಹೆದರಿದವಳಂತೆ ನುಡಿದಾಗ, ಡಾಕ್ಟರು ನಳಿನಿಯ ಕೈ ಮುಟ್ಟಿದರು.

''ಅಂಥಾದ್ದೇನೂ ಆಗಿಲ್ಲ... ನಳಿನಿಯವರೇ... ನಿಮಗೆ ಏನೋ ಸಂದೇಹ. ನಿಜ ಏನೂಂತ ತಿಳಿದರೆ ನೀವೂ ಕುಣಿದಾಡ್ತೀರಿ...''

''ನಿಜ ಏನೂಂತ ನಿಮಗೆ ತಿಳಿಯದು ಡಾಕ್ಟರೇ... ನಮ್ಮ ಮನೆಯಲ್ಲಿ ನಡೆದಿರುವುದು ನಿಮಗೆ ಹೇಗೆ ತಿಳಿಯುತ್ತೆ ?... ಎಲ್ಲಾ ಮೋಸಗಾರರು...''

''ನನಗೆ ಎಲ್ಲಾ ತಿಳಿದಿದೆ... ಪೃಥ್ವಿ, ವಿಶ್ವ ಎಲ್ಲಾ ಹೇಳಿದ್ದಾರೆ...''

''ಏನಂತ ?...'' ಎದ್ದು ಕೂರಲು ಪ್ರಯತ್ನಿಸಿದ ನಳಿನಿಗೆ ಸಾಂತ್ವನ ಹೇಳಿದರು.

''ನೀವು ಉದ್ವೇಗಗೊಳ್ಳಬೇಡಿ... ನನಗೆ ಎಲ್ಲಾ ತಿಳಿದಿದೆ'' ಎನ್ನುತ್ತಾ ಫ್ಯಾಮಿಲಿ ಡಾಕ್ಟರು ಅಲ್ಲಿದ್ದ ಕುರ್ಚಿಯ ಮೇಲೆ ಕುಳಿತರು.

''ನಿಮ್ಮ ಮನೆಯ ವಿಷಯವೆಲ್ಲಾ ನಮಗೆ ತಿಳಿದಿದೆ. ಇದರಲ್ಲಿ ನಾಚಿಕೆ ಪಟ್ಟುಕೊಳ್ಳುವಂಥಾದ್ದು ಏನಿಲ್ಲ. ಈಗ ವಿಜ್ಞಾನ ಎಷ್ಟು ಮುಂದುವರೆದಿದೆ ಅಂತ ನಿಮಗೇ ತಿಳಿದಿರಬಹುದು. ಈ ಊರಿನ ಹೆಸರಾಂತ ನರ್ಸಿಂಗ್ ಹೋಂಗಳಲ್ಲಿ ಒಂದು ನಮ್ಮ ನರ್ಸಿಂಗ್ ಹೋಂ. ಆರೋಗ್ಯಕ್ಕೆ ಸಂಬಂಧಿಸಿದಂತೆ, ಇಲ್ಲಿ ಅನೇಕ ವಿಭಾಗಗಳಿವೆ... ಹಾಗೇ ಒಂದು ವಿಭಾಗ, ಮಕ್ಕಳಾಗದೇ ಇರುವ ದಂಪತಿಗಳಿಗೆ ಸೂಕ್ತ ಸಲಹೆಯನ್ನು ನೀಡಿ, ಸಹಾಯ ಮಾಡುವ ವಿಭಾಗ. ಅಲ್ಲಿ ಸ್ಪೆಷಲಿಸ್ಟ್‌ಗಳಿರುತ್ತಾರೆ. ತಾಯಿಯಾಗುವ ಹಂಬಲವಿದ್ದು ಮಕ್ಕಳಾಗದ ದೋಷವಿರುವ ಯಾವುದೇ ಗಂಡ ಹೆಂಡತಿಯರಿಗೆ ಸಲಹೆ ನೀಡಿ, ಮಕ್ಕಳನ್ನು ಪಡೆಯುವ ಹೊಸ ಹೊಸ ವಿಧಾನಗಳನ್ನು ಡಾಕ್ಟರುಗಳು ಕಂಡು ಹಿಡಿದಿದ್ದಾರೆ. ಅಂಥ ಒಂದು ನವ ಪ್ರಯೋಗ ಪ್ರನಾಳ ಶಿಶು.''

''ಪ್ರನಾಳ ಶಿಶು ! ಹಾಗಂದ್ರೇನು ?...'' ನಳಿನಿ ಕಣ್ಣರಳಿಸಿದಳು.

''ಈಗ ನಿಮ್ಮ ಸೊಸೆಯರನ್ನೇ ಉದಾಹರಣೆಯನ್ನಾಗಿ ತೆಗೆದುಕೊಳ್ಳಿ. ಇಬ್ಬರೂ ಆರೋಗ್ಯವಾಗಿದಾರೆ. ಆದರೆ ನಿಮಗೇ ಗೊತ್ತು, ನಿಮ್ಮ ಅವಳಿ ಮಕ್ಕಳಿಬ್ಬರಿಗೂ ಏಡ್ಸ್ ತಗಲುವ ಸಂಭವವಿದೆ. ಅವರ ರಕ್ತ ಎಚ್.ಐ.ವಿ. ರೋಗಾಣುಗಳಿಂದ ಕಲುಷಿತವಾಗಿದೆ ಅಂತ ಅವರ ರಿಪೋರ್ಟ್ ಹೇಳುತ್ತೆ.''

''ಏಡ್ಸ್ ! ಹಾಗಂದ್ರೇನು ?....'' ನಳಿನಿ ಭಯಗೊಂಡಿದ್ದಳು.

''ಓ... ನಿಮಗೇನೂ ತಿಳಿಯದು ಅಂತ ಕಾಣುತ್ತೆ... ನಿಮಗೆ ಬೇಸರ ವಾಗದಿರಲಿ ಅಂತ ಯಾರೂ ಹೇಳಿಲ್ಲ ಅಂತ ಕಾಣುತ್ತೆ...''

''ಹೌದು, ನನಗೆ ಸರಿಯಾಗಿ ಯಾರೂ ಏನನ್ನೂ ಹೇಳಿಲ್ಲ. ನನ್ನ ಮಕ್ಕಳಿಗೆ ಮಕ್ಕಳಾಗುವ ಭಾಗ್ಯ ಇಲ್ಲ ಅಂತ ಅಷ್ಟೇ ತಿಳಿದಿರುವುದು...'' ತೊದಲಿದಳು.

''ಮಕ್ಕಳಾಗಬಹುದು... ಆದರೆ ಆ ಮಕ್ಕಳು ಹುಟ್ಟುವಾಗಲೇ, ತಮ್ಮ ರಕ್ತದಲ್ಲಿ ಈ ರೋಗಾಣುಗಳನ್ನು ತುಂಬಿಕೊಂಡು ಹುಟ್ಟುವ ಸಾಧ್ಯತೆಯೇ ಹೆಚ್ಚು. ಎಲ್ಲರಿಗೂ ಆರೋಗ್ಯವಂತ ಮಕ್ಕಳು ಹುಟ್ಟಲಿ ಅಂತ ಹಂಬಲವಿರುವುದಿಲ್ಲವೇ ?''

''ಹಾಗಾದರೇ...'' ನಳಿನಿಗೆ ಮುಂದೆ ಮಾತನಾಡಲಾಗಲಿಲ್ಲ.

''ಏಡ್ಸ್ ರೋಗ ಪ್ರಾಣಾಂತಿಕವಲ್ಲ, ಆದರೆ ಅದಕ್ಕೆ ಯಾವುದೇ ಔಷಧಿ ಯನ್ನಾಗಲೀ, ವ್ಯಾಕ್ಸಿನ್‌ನನ್ನಾಗಲೀ ಕಂಡುಹಿಡಿದಿಲ್ಲ... ಆದ್ದರಿಂದ ಈ ರೋಗ ಹರಡದಂತೆ ಮುನ್ನೆಚ್ಚರಿಕೆ ಕ್ರಮವನ್ನನುಸರಿಸುವುದೇ ಸೂಕ್ತ ಮಾರ್ಗ...

ಮುಂದೆ ಎಂದಾದರೂ ವಿಜ್ಞಾನಿಗಳು ಔಷಧಿಯನ್ನು ಕಂಡುಹಿಡಿಯಬಹುದು. ಈಗಾಗಲೇ ಈ ಪ್ರಯತ್ನಗಳು ನಡೆಯುತ್ತಿವೆ.''

ನಳಿನಿ ಭಯದಿಂದ ಥರಥರ ನಡುಗುತ್ತಿದ್ದಳು. ಡಾಕ್ಟರು ಸಾಂತ್ವನ ಹೇಳುತ್ತಿದ್ದರು. ''ಈಗ ಭಯಪಡುವಂಥಾದ್ದೇನೂ ನಡೆದಿಲ್ಲ. ನಿಮ್ಮ ಸೊಸೆಯರು ಆರೋಗ್ಯವಾಗಿದ್ದರೆ. ಯಾಕೆಂದ್ರೆ ಅವರಿಗೆ ಯಾವ ರೋಗಾಣುವಿನ ಸೋಂಕು ತಗುಲಿಲ್ಲ.''

''ಹಾಗಾದ್ರೆ... ಈ ಮಕ್ಕಳು..? ನನಗೆ ಮೊದಲೇ ಅನುಮಾನವಿತ್ತು. ಮಕ್ಕಳ ಆಸೆಗೆ ನನ್ನ ಸೊಸೆಯರು ತಪ್ಪು ಹಾದಿ ಹಿಡಿದಿದ್ದಾರೆ.''

ಡಾಕ್ಟರು ನಕ್ಕರು. ''ಹಾಗೇನಿಲ್ಲ. ನೀವು ಸೊಸೆಯರನ್ನು ಯಾವ ರೀತಿಯಿಂದಲೂ ಆಕ್ಷೇಪಿಸುವಂತಿಲ್ಲ... ಅವರು ಧೈರ್ಯದಿಂದ ಮುಂದುವರೆದಿರುವುದರಿಂದ ನಮ್ಮ ನರ್ಸಿಂಗ್ ಹೋಂಗೂ ಹೆಮ್ಮೆ... ನಮ್ಮ ಪ್ರತಿಷ್ಠತೆ ಹೆಚ್ಚಿದೆ.''

''ಇದರಲ್ಲಿ ಹೆಮ್ಮೆ ಪಡುವಂಥಾದ್ದು ಏನಿದೆ ಡಾಕ್ಟರೇ... ಮನೆಯ ಮರ್ಯಾದೆಯೇ ಹೋಯ್ತಲ್ಲಾ... ನೀವೇಕೆ ಹೀಗೆ ಹೇಳ್ತಿದೀರಿ?''

''ಮನೆಯ ಮರ್ಯಾದೆ ಏನೂ ಹೋಗಿಲ್ಲ. ನೀವು ತಪ್ಪು ತಿಳಿದುಕೊಂಡಿದೀರಿ. ನಿಮ್ಮ ಮನೆಯ ಬೆಳಕನ್ನು ಹೆಚ್ಚಿಸುವ ಮೊಮ್ಮಕ್ಕಳು ಹುಟ್ಟಿದಾರೆ. ನಿಮಗೆ ಖುಷಿಯಾಗಬೇಕು'' ನಳಿನಿ ತಲೆಯಾಡಿಸಿದಳು.

''ನಾನ್ಹೇಗೆ ಖುಷಿಯಾಗಿರಲಿ ಡಾಕ್ಟರೇ... ನನ್ನ ಮಕ್ಕಳಿಗೆ ಅಂದಂಥದೋ ಏಡ್ಸ್ ಅನ್ನೋ ಭಯಂಕರ ರೋಗ ಅಂತ ಅಂತೀರಿ... ಹಾಗಾದರೆ ಈ ರೋಗ ನಮ್ಮ ವಿಶ್ವನಿಗೂ, ಪೃಥ್ವಿಗೂ ಅಂಟಿರಬಹುದು ಅಂತೀರಾ ? ಈ ಮೊಮ್ಮಕ್ಕಳೋ...''

''ಛೆ...ಛೆ... ಇಲ್ಲ... ನಿಮ್ಮ ವಿಶ್ವ ಸಂಪೂರ್ಣವಾಗಿ ಆರೋಗ್ಯವಾಗಿದಾರೆ. ಹಾಗೇ ನಿಮ್ಮ ಪೃಥ್ವಿ ಸಹ... ಆದರೆ ನಿಮ್ಮ ವಿಶ್ವನ ಸಹಕಾರದಿಂದಲೇ ಈ ದಿನ ನಿಮಗೆ ಆರೋಗ್ಯವಂತ ಮಕ್ಕಳು ಹುಟ್ಟಿರುವುದು...''

''ನನಗೆ ಗೊತ್ತಿತ್ತು. ಪೃಥ್ವಿ ಅಂತೋನಲ್ಲ ಅಂತ. ವಿಶ್ವನೇ ಕೇಡಿಗ. ಅವನು ನನ್ನ ಸೊಸೆಯರನ್ನು ಕೆಡಿಸಿದ್ದಾನೆ. ಅದು ಸರಿ ಅಂತೀರಾ ಡಾಕ್ಟರೇ....'' ಅತ್ತಳು.

ಡಾಕ್ಟರು ಮತ್ತೆ ನಕ್ಕರು. ''ನಿಮಗೆ ಸರಿಯಾಗಿ ಅರ್ಥವಾಗಿಲ್ಲ... ಅಂಥ ಯಾವ ಕೆಟ್ಟ ಕೆಲಸವೂ ನಡೆದಿಲ್ಲ... ನಿಮ್ಮ ಅಭಿಪ್ರಾಯ ತಪ್ಪು ನಳಿನಿಯವರೇ... ವಿಶ್ವನೇ ಈ ಮಕ್ಕಳ ತಂದೆ ಹೌದು. ಆದರೆ ನೇರವಾದ ದೇಹ ಸಂಬಂಧದಿಂದ ಅಲ್ಲ. ನೈಸರ್ಗಿಕವಾಗಿ ನಡೆಯುವ ಬದಲು, ಪ್ರಾಯೋಗಿಕವಾಗಿ ನಡೆಸಿದ ಕ್ರಮ ಇದು. ನಿಮ್ಮ ಮಗ ವಿಶ್ವನ ಆರೋಗ್ಯವಂತ ವೀರ್ಯಾಣುಗಳನ್ನು ಸಂಗ್ರಹಿಸಿ, ಅದನ್ನು ನಿಮ್ಮ ಸೊಸೆಯರ ಸಂಗ್ರಹಿಸಿಟ್ಟ ಅಂಡಾಣುಗಳೊಡನೆ, ಪ್ರಯೋಗಾಲಯದಲ್ಲಿ ಸಂಯೋಜಿಸಿ, ಭ್ರೂಣಾವಸ್ಥೆಗೆ ಬರುತ್ತಿದ್ದಂತೆಯೇ ಅದನ್ನು ತಾಯಿಯ ಗರ್ಭಕೋಶದೊಳಕ್ಕೆ ಕ್ಷೇಮವಾಗಿ ಇಟ್ಟು, ಬೆಳೆಯುವಂತೆ ಮಾಡುತ್ತೇವೆ. ಹಾಗೆ ಮಾಡುವುದು ನಮ್ಮ ಪ್ರಯೋಗ. ಅಂಥ ಪ್ರಯೋಗವನ್ನು ನಮ್ಮ ನರ್ಸಿಂಗ್ ಹೋಂನಲ್ಲಿ ನಡೆಸಿದ್ದಾರೆ. ಅದರ ಫಲವೇ... ನಿಮ್ಮ ಮೊಮ್ಮಕ್ಕಳು ! ಪ್ರನಾಳ ಶಿಶುಗಳು !!''

ನಳಿನಿ ಬಾಯಿಬಿಟ್ಟುಕೊಂಡು ಡಾಕ್ಟರು ಹೇಳಿದ್ದನ್ನು ಕೇಳಿಕೊಂಡಳು. ಅರ್ಥವಾಗಲು ಸಾಕಷ್ಟು ಸಮಯ ಬೇಕಾಯಿತು... ತಾನು ವಿಶ್ವನ ಮೇಲೆ ಇಲ್ಲಸಲ್ಲದ ಆರೋಪವನ್ನು ಹೊರಿಸಿದ್ದಕ್ಕೆ ನಾಚಿದಳು. ಆದರೆ ತನಗೆ ಒಂದು ಮಾತೂ ತಿಳಿಸದೇ ಇದ್ದುದಕ್ಕೆ ಎಲ್ಲರ ಮೇಲೂ ಕೋಪ ಬಂತು. ಪೃಥ್ವಿ ಸಹ, ತನಗೆ ಒಂದು ಮಾತು ತಿಳಿಸಲಿಲ್ಲ. ಅವನೇ ಈ ಪ್ರಯೋಗಕ್ಕೆ ಒಪ್ಪಿದ್ದರೆ... ಈ ಮಕ್ಕಳು ಪೃಥ್ವಿಯವು ಆಗಿರುತ್ತಿದ್ದವು... ಅಥವಾ ಒಂದಾದರೂ ಪೃಥ್ವಿಯ ಮಗುವಾಗಿದ್ದಿದ್ದರೆ ಅಂತ ಅಂದುಕೊಂಡಾಗ ಏನನ್ನೋ ಕಳೆದುಕೊಂಡ ಅನುಭವ...

''ಯಾಕೆ ? ಇನ್ನೂ ನಿಮ್ಮ ಅನುಮಾನ ಪರಿಹಾರವಾಗಲಿಲ್ಲವೇ ?''

''ಹೌದು ಡಾಕ್ಟರೇ... ಎಲ್ಲಾ ಅವರವರೇ ಒಂದಾಗಿ, ಗುಟ್ಟಾಗಿ ಮಾಡಿಕೊಂಡಿದಾರೆ. ನನಗೆ ತಿಳಿಸಲಿಲ್ಲ. ಅಜಯ ವಿಜಯರಿಗೆ ತಿಳಿದರೆ ಪರಿಣಾಮ ಏನಾಗುತ್ತೋ ಅಂತ ನನಗೆ ಭಯ....''

''ಭಯ ಪಡಬೇಡಿ. ಅವರ ಒಪ್ಪಿಗೆಯಿಲ್ಲದೇ ನಾವು ಈ ಪ್ರಯೋಗ ಮಾಡಿಲ್ಲ. ಅವರಿಬ್ಬರೂ ತಮ್ಮ ಒಪ್ಪಿಗೆಯನ್ನು ಫ್ಯಾಕ್ಸ್ ಮುಖಾಂತರ ಕಳಿಸಿದ್ದಾರೆ. ಇಂಥ ಪ್ರಯೋಗ ಮಾಡುವಾಗ, ಅನೇಕ ವಿಷಯಗಳ ಬಗ್ಗೆ ಗಮನ ಕೊಡಬೇಕಾಗುತ್ತದೆ. ಅದರಲ್ಲಿ ಈ ಕಾನೂನು ಮುಖ್ಯವಾದುದು. ಅವರ ಒಪ್ಪಿಗೆ ಇಲ್ಲದೇ ಮಾಡಿದರೆ ಅದು ನೀತಿಬಾಹಿರವಾಗುತ್ತದೆ. ಅಂಥದ್ದಕ್ಕೆಲ್ಲಾ ಆಸ್ಪದವಿರಬಾರದು.''

''ಆದರೆ ನನಗೇಕೋ ನೆಮ್ಮದೀನೇ ಇಲ್ಲ ಡಾಕ್ಟರೇ... ಅಲ್ಲ ನನ್ನ ಮಕ್ಕಳಿಗೇ ಯಾಕೆ ಹೀಗಾಯ್ತು? ಅವರಿಗೆ ಹೇಗೆ ಹರಡಿರಬಹುದು ?''

''ಅದು ಹೇಗೆ ಹರಡಿತು ಅಂತ ಹೇಳುಕ್ಕೆ ಬರುಲ್ಲ... ಅಂಥ ಸೋಂಕಿರುವ ಸ್ತ್ರೀಯರ ಸಹವಾಸವನ್ನು ನಿಮ್ಮ ಮಕ್ಕಳು ಮಾಡಿರಬಹುದು, ಅಥವಾ ಹುಟ್ಟಿನಿಂದಲೇ ಬಂದಿರಬಹುದು...'' ಡಾಕ್ಟರ ಮಾತು ಭಯವನ್ನುಂಟು ಮಾಡಿತ್ತು.

''ಅಂದರೆ... ನನಗೆ..? ಅಥವಾ ನನ್ನ ಗಂಡ ನಾಗೇಶನಿಗೆ...'' ಇರಲಾರದು... ಇರಲಾರದು ತನಗೆ ತಾನೇ ಹೇಳಿಕೊಂಡು ಕಿವಿಗಳನ್ನು ಕೈನಿಂದ ಮುಚ್ಚಿಕೊಂಡಳು.

''ಎಷ್ಟೋ ವೇಳೆ ಮಕ್ಕಳು ಹುಟ್ಟುವಾಗ, ಬೇಜವಾಬ್ದಾರಿಯಿಂದ ಈ ಸೋಂಕು ತಗುಲಿ ಬಿಡುತ್ತದೆ. ಆದರೆ ಈಗ ಆ ಬಗ್ಗೆ ಆಸ್ಪತ್ರೆಗಳಲ್ಲಿ ಅತಿ ಎಚ್ಚರ ವಹಿಸುತ್ತಾರೆ. ಸುಕ್ಷೇಮದಿಂದ ಹೆರಿಗೆಯನ್ನು ಮಾಡಿಸುತ್ತಾರೆ. ಯಾವುದೇ ಭಯಕ್ಕೆ ಆತಂಕಕ್ಕೆ ಕಾರಣವಿಲ್ಲ.'' ಡಾಕ್ಟರು ಮಾತು ಮುಗಿಸಿದಾಗ, ನಳಿನಿ ಪೆಚ್ಚುನಗೆ ನಕ್ಕಳು. ತಮ್ಮ ಮನೆಯಲ್ಲಿ ನಡೆದ ವಿಚಿತ್ರ ಘಟನೆಗೆ ಮುಜುಗರಗೊಂಡಿದ್ದಳು.

''ಎರಡೆರಡು ಮೊಮ್ಮಕ್ಕಳ ಅಜ್ಜಿಯಾಗಿದೀರಿ. ಕಂಗ್ರಾಟ್ಸ್...'' ಎಂದು ಡಾಕ್ಟರು ಹಾರೈಸಿ ಹೊರಟುಹೋದರು. ನನ್ನ ಮಕ್ಕಳು ನನಗೆ ದ್ರೋಹ ಮಾಡಲಿಲ್ಲ ಅಂತ ತಿಳಿದರೂ ನಳಿನಿಗೆ ನೆಮ್ಮದಿ ಇಲ್ಲ. ಅಜ್ಜಿಯಾದರೂ ತೃಪ್ತಿ ಇಲ್ಲ. ಏನೋ ನಡೆಯಬಾರದ್ದು ನಡೆದಿದೆಯೆಂದೇ ಭಾವನೆ. ಒಳಗೊಳಗೇ ಕೊರಗಿದಳು. ಕೆಲವೇ ನಿಮಿಷಗಳಲ್ಲಿ ಇಬ್ಬರೂ ನರ್ಸುಗಳು ಒಟ್ಟಾಗಿ ಎರಡೂ ಮಕ್ಕಳನ್ನು ಕರೆತಂದು ತೋರಿಸಿದರು. ನಳಿನಿಗೆ ಕಣ್ತುಂಬಾ ನೋಡಲೂ ಭಯ... ಇದರಲ್ಲಿ ತನ್ನನ್ನು ಹೆದರಿಸುವ, ತನಗಿಷ್ಟವಿಲ್ಲದ ಯಾವ ರೂಪ ಕಂಡು ಬರುವುದೋ ಎಂಬ ದಿಗಿಲು ! ವಿಶ್ವ ಪೃಥ್ವಿ ಇಬ್ಬರೂ ವಾರ್ಡಿನೊಳಕ್ಕೆ ಬಂದರು.

''ಈಗ ಹೇಗಿದೀರಿ ಚಿಕ್ಕಮ್ಮ... ಏನಾದ್ರೂ ತಿನ್ನಕ್ಕೆ ಕುಡಿಯುಕ್ಕೆ ಬೇಕಾ !'' ಪೃಥ್ವಿ ವಿಶ್ವಾಸದಿಂದ ಕೇಳಿದ.

''ನನಗೇನೂ ಬೇಡ. ಮೊದಲು ಮನೆಗೆ ಹೋಗೋಣ...'' ನಳಿನಿ ಮುನಿಸಿನಿಂದ ನುಡಿದಾಗ ವಿಶ್ವ ನಕ್ಕ.

''ವಿಶ್ವ ಇದೆಲ್ಲ ಏನು ? ನನಗೆ ತಿಳಿಸದೇ ನಿನಗೆ ಇದನ್ನೆಲ್ಲ ಮಾಡಲು ಯಾರು ಅಧಿಕಾರ ಕೊಟ್ಟರು ?'' ಅವನ ಮೇಲೆ ರೇಗಿದಳು.

''ಚೆನ್ನಾಗಿದೆ. ಮೊಮ್ಮಕ್ಕಳು ಬೇಕೂಂತ ಹಂಬಲಿಸಿ, ಈಗ ಹೀಗೆ ಆಡ್ತೀರಿ ಅಂತ ನನಗೆ ಗೊತ್ತಿರಲಿಲ್ಲ. ಕಾನೂನಿನ ಪ್ರಕಾರ ಈ ಮಕ್ಕಳು ಅಜಯ ವಿಜಯರದು. ನಾನು ಯಾವುದೇ ಹಕ್ಕನ್ನು ಚಲಾಯಿಸುವುದಿಲ್ಲ. ಧೈರ್ಯವಾಗಿರಿ'' ಎಂದವನು ಹೊರಗೆ ಬಂದು ಬಿಟ್ಟ. ನಳಿನಿಗೆ ಪೆಚ್ಚಾಗಿತ್ತು. ಪೃಥ್ವಿಗೆ ಕೆಡುಕೆನಿಸಿತು. ಮೇನಕೆಕೆ 'ಅಪೆಂಡಿಸೈಟಿಸ್' ಆಪರೇಷನ್ ಆದ ಸಮಯದಲ್ಲಿ ವಿಶ್ವ ಡಾಕ್ಟರುಗಳೊಡನೆ ಮಾತನಾಡಿ ಈ ಪ್ರಯೋಗದ ಬಗ್ಗೆ ತಿಳಿದುಕೊಂಡಿದ್ದ. ನಂತರ ಪೃಥ್ವಿಯೊಡನೆ ಸಮಾಲೋಚನೆ ನಡೆಸಿ, ಮೇನಕಾ, ರೇವತಿಯರ ಒಪ್ಪಿಗೆಯನ್ನು ಕೇಳಿದ್ದ. ಅವರಿಬ್ಬರೂ ಸಂತಸದಿಂದ ಒಪ್ಪಿಕೊಂಡಿದ್ದರು. ನಂತರ ಅಜಯ ವಿಜಯರೊಡನೆ ಮಾತನಾಡಿ ಒಪ್ಪಿಗೆಯನ್ನು ಪಡೆದುಕೊಂಡಿದ್ದರು. ಆಗ ಪೃಥ್ವಿ ವಿಶ್ವನಿಗೆ ಯಾವುದೇ ಸ್ವಾರ್ಥತನವಿಲ್ಲವೆಂದು ತಿಳಿದ. ತನ್ನ ತಮ್ಮಂದಿರಿಗೆ ಸಹಾಯ ಮಾಡುತ್ತಿದ್ದಾನೆಂದೇ ಭಾವಿಸಿದ. ಅದು ತಪ್ಪು ಎನಿಸಲಿಲ್ಲ. ವಿಜ್ಞಾನ ಇಷ್ಟು ಮುಂದುವರಿದಿದೆ. ಅದು ಅಜಯ ವಿಜಯರಂಥ ನತದೃಷ್ಟರಿಗೆ ವರದಾನ. ತಾನಂತೂ ಮದುವೆಯಾಗಬಾರದೆಂದು ನಿರ್ಧರಿಸಿದ್ದಾಗಿದೆ. ವಿಶ್ವ ಎಷ್ಟಾಗಲೀ ಹೊರಗಿನವನೇ. ಆದರೆ ಕಾನೂನಿನ ಪ್ರಕಾರ ಈ ಮಕ್ಕಳು ಅಜಯ ವಿಜಯರದ್ದೇ. ಅವರು ಈಗಾಗಲೇ ಒಪ್ಪಿಕೊಂಡಿದಾರೆ. ಅಮೆರಿಕಾದಂತಹ ಮುಂದುವರೆದ ದೇಶದಲ್ಲಿರುವುದೇ ಇದಕ್ಕೆ ಕಾರಣವಿರಬಹುದು. ಇದೊಂದು ಮಾರ್ಗವಿಲ್ಲದೇ ಹೋಗಿದ್ದಿದ್ದರೇ, ಬಹುಶಃ ಈ ಮನೆ ಬರಿದಾಗಿಯೇ ಇರುತ್ತಿತ್ತೋ ಏನೋ... ತಾನು ವಿಶ್ವನಿಗೆ ಥ್ಯಾಂಕ್ಸ್ ಹೇಳಬೇಕು. ಇಷ್ಟಾದರೂ ಚಿಕ್ಕಮ್ಮನಿಗೇಕೆ ಕೋಪ ?

ವಿಶ್ವ ಈ ಮಾತನ್ನು ಎತ್ತಿದಾಗ ತನಗೆ ಅನಿಸಿದ್ದುಂಟು. ''ಪ್ರಪಂಚದಲ್ಲಿ ಈಗಾಗಲೇ ಜನಸಂಖ್ಯೆ ಗಗನಕ್ಕೇರಿದೆ. ಇಷ್ಟು ಕಷ್ಟದಿಂದಲಾದರೂ ಯಾವುದೇ ಬೇರೆ ಬೇರೆ ಮಾರ್ಗವನ್ನಾದರೂ ಆರಿಸಿ, ಮಕ್ಕಳು ಹುಟ್ಟಿ ಈ ಪ್ರಪಂಚಕ್ಕೆ ಬರಲೇ ಬೇಕು ಎಂಬ ಆಸೆ ಏಕೆ ?'' ವಿಶ್ವನನ್ನು ಪ್ರಶ್ನಿಸಿದ್ದ.

''ಅದು ಅವರವರ ಅನಿಸಿಕೆ ಪೃಥ್ವಿ. ಜನಸಂಖ್ಯೆ ಹೆಚ್ಚಾಗುತ್ತದೆ ಅಂತ ಯಾರೂ ಮದುವೆಯಾಗದೇ ಉಳಿಯುವುದಿಲ್ಲ. ಗಂಡು ಹೆಣ್ಣು ಇಬ್ಬರಲ್ಲೂ ಆ ಹಂಬಲವಿರುತ್ತದೆ. ಇದರ ಜೊತೆಗೆ ಹೆಣ್ಣು ಮಕ್ಕಳಿಗೆ ತಾಯ್ತನದ ಹಂಬಲ.

ಆದರೆ ಈ ಪ್ರಕಾರಕ್ಕೆ ನಾನೂ ನೀವೂ ಇಬ್ಬರೂ ಹೊರತು. ಆದರೆ ನಮ್ಮ ನಿರ್ಧಾರಕ್ಕೆ ಜನಸಂಖ್ಯೆ ಹೆಚ್ಚಿದೆ ಅನ್ನೋ ಕಾರಣ ಖಂಡಿತಾ ಅಲ್ಲ, ಅಲ್ಲವಾ?'' ವಿಶ್ವ ಕೇಳಿದ. ಇಬ್ಬರೂ ನಕ್ಕರು.

ರೂಪಿಣಿಗೆ ವಿಷಯ ತಿಳಿದು, ಮಕ್ಕಳನ್ನು ನೋಡಲೆಂದು ಬಂದಳು. ಆದರೆ ಮಕ್ಕಳು ಪ್ರನಾಳ ಶಿಶುಗಳೆಂದು ಅವಳಿಗೂ ತಿಳಿದಿರಲಿಲ್ಲ. ಮುದ್ದಾಗಿದ್ದ ಮಕ್ಕಳನ್ನು ನೋಡಿ, ಅಸೂಯೆಗೊಂಡಳು. ಇವು ವಿಶ್ವನಿಗೆ ಹುಟ್ಟಿದ ಮಕ್ಕಳು, ನನ್ನ ಮಗುವನ್ನು ನಾನು ಪೃಥ್ವಿಗೆ ಹುಟ್ಟಿದ್ದು ಎಂದು ಸಾಧಿಸಿ, ಆ ಆಸ್ತಿಯನ್ನೆಲ್ಲಾ ತನ್ನ ಮಗನಿಗೇ ಸೇರುವಂತೆ ಮಾಡಬೇಕು ಎಂದುಕೊಂಡಳು.

ಹಾಗೇ ರೂಪಿಣಿ ನಳಿನಿಯೊಡನೆ ಅನುನಯದಿಂದ ಮಾತನಾಡಿದಳು. ನಳಿನಿ ತನ್ನ ಕೋಪವನ್ನು ಕಾರಿದಳು. ''ಅಂತೂ ನಿನ್ನ ದಾರಿಗೇ ನನ್ನ ಸೊಸೆಯರನ್ನೂ ಎಳೆದೆಯಲ್ಲ...'' ಅಂತ.

''ಬಿಡಿ, ಆಂಟಿ. ಕಾಲವೇ ಹಾಗಿದೆ ಈಗ. ಈಗ ಏನು ನಷ್ಟವಾಯಿತು ಅಂತ ಹೀಗಾಡ್ತೀರಿ ? ಮೊಮ್ಮಕ್ಕಳೇ ಇಲ್ಲ ಅಂತ ಅಳ್ತಿದ್ರಿ. ಈಗ ನೋಡಿ ಮೂರು ಮೊಮ್ಮಕ್ಕಳು. ಮತ್ತೆ ಪೃಥ್ವಿ ಮನಸ್ಸು ಮಾಡಿದರೆ, ಇನ್ನೆರಡು ವರ್ಷಕ್ಕೆ ಇನ್ನೂ ಮೂರು ಮಕ್ಕಳು ಹುಟ್ಟುತ್ತವೆ...''

''ಛೀ... ಏನೇನೋ ಅಸಂಬದ್ಧ ಮಾತನ್ನಾಡಬೇಡ. ಇದು ನಮ್ಮ ಪೃಥ್ವಿಯ ಮಕ್ಕಳಲ್ಲ...'' ಎಂದು ಹೇಳಹೊರಟವಳನ್ನು ರೂಪಿಣಿಯೇ ತಡೆದಳು.

''ಈಗ ಮನೆ ತುಂಬಿದ ಹಾಗಿದೆ...''ಎಂದು ತನ್ನ ಮಗನನ್ನು ಎತ್ತಿಕೊಂಡು ಮುದ್ದಾಡಿದಳು. ''ಹಾಗೇ ಹೇಳಬೇಡಿ ಆಂಟಿ, ನನ್ನ ಮಗನಿಗೂ ಕಾನೂನಿನ ಬೆಂಬಲ ಸಿಕ್ಕೇ ಸಿಗುತ್ತದೆ'' ಎಂದಳು. ಪೃಥ್ವಿ ಒಂದಲ್ಲ ಒಂದು ದಿನ ಈ ಮಗು ತನ್ನದೆಂದು ಒಪ್ಪಲೇ ಬೇಕಾಗುತ್ತದೆ ಎಂದು ತನ್ನಲ್ಲೇ ಹೇಳಿಕೊಂಡಳು.

''ಮಗೂಗೆ ''ಕೃಷ್ಣಾ'' ಅಂತ ಯಾಕೆ ಹೆಸರಿಟ್ಟೆ ? ಬೇರೆ ಹೊಸ ಹೆಸರುಗಳಿರಲ್ವಾ ?'' ನಳಿನಿ ಸುಮ್ಮನೇ ಎಂಬಂತೆ ಕೇಳಿದಳು. ವಿಶ್ವನ ತಂದೆಯ ಹೆಸರು ಸಹ ಕೃಷ್ಣಮೂರ್ತಿಯೇ ಎನ್ನುವುದನ್ನು ಅವಳು ಮರೆತಿರಲಿಲ್ಲ.

''ಕೃಷ್ಣನ ಜನ್ಮ ಕೂಡಾ ಎಷ್ಟೋ ವರ್ಷ ರಹಸ್ಯವಾಗಿತ್ತು ಅಲ್ಲವೇ... ಹಾಗೇ ಕಾಲ ಬಂದಾಗ ಈ ಕೃಷ್ಣನ ಜನ್ಮರಹಸ್ಯ ಕೂಡಾ ಬದಲಾಗುತ್ತೆ... ಅದಕ್ಕೇ ಕೃಷ್ಣ ಅಂತ ಹೆಸರನ್ನಿಟ್ಟೆ'' ಎಂದಳು ನಗುತ್ತಾ. ತನ್ನನ್ನು ತಾನು ಸಮರ್ಥಿಸಿಕೊಂಡಳು.

''ಆದಷ್ಟು ಬೇಗ ವಿಶ್ವನ್ನ ಒಪ್ಪಿಸಿ ಮದುವೆಯಾಗು ರೂಪಿಣಿ, ಹೀಗೇ ಎಷ್ಟು ವರ್ಷ ಇರೋಕಾಗುತ್ತೆ?''

''ಆ ಅಳಲೇಕಾಯಿ ಪಂಡಿತನ್ನ ಯಾರು ಮದುವೆಯಾಗ್ತಾರೆ? ಈಗಲೂ ನಿಮಗೆ ಪೃಥ್ವಿಯನ್ನು ಒಪ್ಪಿಸುಕ್ಕೆ ಆಗೋದಾದ್ರೆ ಹೇಳಿ. ನಾನು ಈಗಲೇ ರೆಡಿ. ಇಲ್ಲದಿದ್ದರೇ ಆ ಮಾತನ್ನಾಡಬೇಡಿ...'' ಎಂದು ಮುಖಕ್ಕೆ ಹೊಡೆದಂತೆ ಹೇಳಿದಳು. 'ರೂಪಿಣಿ ನಿನಗೆ ವಿಷಸರ್ಪಿಣಿ ಎಂದು ಹೆಸರನ್ನಿಡಬೇಕಾಗಿತ್ತು' ಎಂದು ತನ್ನಲ್ಲೇ ಹೇಳಿಕೊಂಡು ಕೋಪವನ್ನು ನುಂಗಿಕೊಂಡಳು.

''ಹೋಗು, ಅಜ್ಜಿಯ ಹತ್ತಿರ ಹೋಗು'' ಎಂದು ಮಗುವನ್ನು ಮುಂದೆ ಚಾಚಿದಾಗ, ಮಗುವಿನ ಮುಗ್ಧತೆಗೆ ಮರುಳಾಗಿ ನಳಿನಿ ಮಗುವನ್ನೆತ್ತಿಕೊಂಡಳು.

* * * *

ಆಸ್ಪತ್ರೆಯ ಕಟ್ಟಡದ ಕೆಲಸ ತ್ವರಿತಗತಿಯಲ್ಲಿ ಸಾಗುತ್ತಿತ್ತು. ಉದ್ಘಾಟನೆಯನ್ನು ನಳಿನಿಯ ಕೈಯಲ್ಲಿ ಮಾಡಿಸಬೇಕು ಎಂಬ ಆಸೆ ಪೃಥ್ವಿಗೆ. ವಿಶ್ವ ಸಹ ಬೇಡವೆನ್ನಲಾರ. ಎಷ್ಟಾಗಲೀ ಆ ಸ್ವತ್ತು ಅವರ ಮನೆಯದು. ತನಗೇನನ್ನೂ ಕೊಡಲಿಲ್ಲವೆಂದು ರೂಪಿಣಿ ಹಂಗಿಸಿದ್ದಳು. ''ಉಳಿದರೆ ಕೊಡುತ್ತೀನಿ... ಈಗಾಗಲೇ ಒಡವೆ ಸ್ವಲ್ಪ ಹಣ ಕೊಟ್ಟಿದೀನಲ್ಲ'' ಅಂತಂದ.

''ಆ ಹಣ ಯಾತಕ್ಕೂ ಸಾಲದು. ಪೃಥ್ವಿಯನ್ನು ಕೇಳಿದರೆ ಇಲ್ಲ ಎನ್ನಲಾರ. ಈ ಮಗು ಅವನದೆಂದು ನಾನು ಕೇಸ್ ಹಾಕ್ತೀನಿ. ನೀವು ನನಗೆ ಸಾಕ್ಷಿ ಹೇಳಬೇಕು. ಅವನು ಒಪ್ಪದಿದ್ದರೆ ಅವನಿಗೆ ನಷ್ಟ'' ಎಂದಳು.

''ಬೇಡ ರೂಪಿಣಿ, ಈ ಆಸ್ಪತ್ರೆಯ ಕೆಲಸವೊಂದು ಮುಗಿದುಹೋಗಲಿ, ಹೇಗಾದರೂ ಸರಿ, ನಿನಗೆ ನಾನು ಹಣ ಕೊಡ್ತೀನಿ. ಏಕೆಂದರೆ ಈ ಕಂದ ನನ್ನದು ಅಲ್ವಾ..?'' ಎಂದಿದ್ದ ಮಗುವಿನ ಕೆನ್ನೆ ಚಿವುಟಿ... ಅವಳನ್ನು ಮೆಚ್ಚಿಸಲೆಂದು.

''ವಿಶ್ವ ನೀವೇಕೆ ಹೇಳಲಿಲ್ಲ? ಮೇನಕಾ ರೇವತಿಯರ ಮಕ್ಕಳ ತಂದೆ ನೀವೇ ಅಂತ. ನಾನು ಪೃಥ್ವಿ ಅಂತ ಅಂದುಕೊಂಡಿದ್ದೆ..'' ಹುಸಿಕೋಪ ತೋರಿದ್ದಳು.

''ಒಟ್ಟಿನಲ್ಲಿ ಅವನ ಮೇಲೆ ಕಿಡಿ ಕಾರುತ್ತಿದೀಯ...''

''ಹೌದು, ಹೇಗಾದರೂ ಸರಿ, ಅವನು ನನ್ನನ್ನು ಮದುವೆಯಾಗಬೇಕು. ಇಲ್ಲದಿದ್ರೆ ಬ್ಲಾಕ್‌ಮೇಲ್ ಮಾಡಿ, ಅವನ ಮಾನವನ್ನು ಹರಾಜು ಹಾಕ್ತೀನಿ'' ಎಂದಳು ವಿಚಿತ್ರವಾಗಿ.

ಅದು ಅಷ್ಟು ಸುಲಭವಲ್ಲ ಅಂತ ಮನಸ್ಸು ಹೇಳಿದರೂ, ಅವಳು ಏನು ಮಾಡಲೂ ಹೇಸುವುದಿಲ್ಲ. ಪೃಥ್ವಿಗೆ ಹುಶಾರಾಗಿರುವಂತೆ ಹೇಳಬೇಕೆಂದು ಕೊಂಡ. ಅವಳ ಕೈಗೆ ಒಂದೆರಡು ಸಾವಿರ ರೂಪಾಯಿಗಳನ್ನು ಕೊಟ್ಟ... ''ನಿನಗೆ ದುಡ್ಡು ಬೇಕೆನಿಸಿದಾಗ ನನ್ನನ್ನೇ ಕೇಳು.. ನಾನು ಕೊಡ್ತೀನಿ'' ಎಂದ. ಆ ರಾತ್ರಿ ರೂಪಿಣಿ ಅಲ್ಲಿಯೇ ಉಳಿದಳು.

* * * *

ಆಸ್ಪತ್ರೆಯ ಕಟ್ಟಡದ ನಿರ್ಮಾಣ ಒಂದು ಹಂತಕ್ಕೆ ಬಂದಿತ್ತು. ವಿಶ್ವನ ತಾತನ ಕಡೆಯಿಂದ ಬಂದಿದ್ದ ಹದಿನೈದು ಲಕ್ಷದ ಜೊತೆಗೆ, ಪೃಥ್ವಿ ತನ್ನ ತಾತ ತನಗಾಗಿ ಇಟ್ಟಿರುವ ಹಣವನ್ನು ವಿನಿಯೋಗಿಸಬೇಕೆಂದು ತೀರ್ಮಾನಿಸಿ ಕೊಂಡಿದ್ದ. ತಾತನ ಹೆಸರಿನಲ್ಲಿ ನಾಲ್ಕು ಜನಕ್ಕೆ ಸಹಾಯವಾಗಬೇಕು. ಅವರ ಹೆಸರು ಜನಜನಿತವಾಗಬೇಕೂಂತ ಅವನ ಆಸೆ. ಇದೇ ಮಾತನ್ನು ವಿಶ್ವನೊಡನೆ ಹೇಳಿದಾಗ, ಅವನಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ.

''ನಿಮ್ಮ ತಾತನ ಬಗ್ಗೆ ನನಗೆ ಗೌರವವಿದೆ. ಆದರೆ ನಿಮ್ಮ ಚಿಕ್ಕಮ್ಮ ಏನಂತಾರೋ'' ಎಂದಿದ್ದ.

''ಚಿಕ್ಕಮ್ಮ ಏನೂ ಹೇಳುವುದಿಲ್ಲ. ಅಲ್ಲದೇ ಇದು ನನಗೆ ಸೇರಬೇಕಾದ ಹಣ. ಇದನ್ನು ನಾನು ಖರ್ಚು ಮಾಡಿದರೆ ಅಜಯ ವಿಜಯರಿಗೆ ಏನೂ ಕಡಿಮೆ ಆಗುವುದಿಲ್ಲ. ಈಗಾಗಲೇ ಅವರೂ ಅಮೆರಿಕಾದಲ್ಲಿ ಸಾಕಷ್ಟು ಸಂಪಾದಿಸಿದ್ದಾರೆ...'' ಎಂದವನು ಒಂದು ಗಳಿಗೆ ತಡೆದು ನುಡಿದ.

''ಈ ಹೊಸ ಆಸ್ಪತ್ರೆಯಲ್ಲಿ ಒಂದು ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸಬೇಕು ವಿಶ್ವಾ... ಅಲ್ಲಿ ಏಡ್ಸ್ ರೋಗಕ್ಕೆ ಔಷಧಿಯನ್ನು, ವ್ಯಾಕ್ಸಿನ್‌ನನ್ನು ಕಂಡುಹಿಡಿಯಬೇಕು. ಅದಕ್ಕೆ ಬೇಕಾದ ಸೌಕರ್ಯವನ್ನೆಲ್ಲ ನಾನು ಒದಗಿಸಿ ಕೊಡ್ತೀನಿ'' ಎಂದ.

''ಅದಕ್ಕೆ ಡಾಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳಬೇಕಾಗುತ್ತಲ್ಲ'' ಅಂತಂದ.

''ಈಗೀಗ ಆಯುರ್ವೇದ, ಯುನಾನಿ ಪದ್ಧತಿಗಳಿಗೆ ಜನರು ಮನ್ನಣೆ ನೀಡಿ ಗುರುತಿಸುತ್ತಿದ್ದಾರೆ ಅಂತ ನೀವೇ ಹೇಳುತ್ತಿರುವಿರಿ... ನಿಮಗೆ ಆಯುರ್ವೇದ ವೈದ್ಯಕೀಯ ಪದ್ಧತಿಯ ಅರಿವಿದೆ... ನೀವೇ ಏಕೆ ಸಂಶೋಧನೆ ನಡೆಸಬಾರದು ?''

''ನಾನಾ ? ಈ ಅಳಲೆಕಾಯಿ ಪಂಡಿತ ಡಾಕ್ಟರನಾಗುವುದು ಸಾಧ್ಯವಿಲ್ಲ. ಶೀಘ್ರವಾಗಿ ಪರಿಣಾಮ ಬೀರುವ ಇಂಗ್ಲೀಷ್ ಔಷಧದ ಬಳಕೆಯೇ ಇನ್ನೂ ಇದೆ. ಅವರುಗಳೇ ಇನ್ನೂ ಔಷದಿ ಕಂಡು ಹಿಡಿದಿಲ್ಲ ಅಂತಂದ ಮೇಲೆ ನಮ್ಮಿಂದ ಸಾಧ್ಯಾನಾ ?....'' ವಿಶ್ವ ನಕ್ಕ.

''ಹಾಗಲ್ಲ ಯಾವುದೇ ವೈದ್ಯಕೀಯ ಪದ್ಧತಿಯಲ್ಲೂ ಗುಣ, ಪರಿಣಾಮ ಇರದೇ ಇರುವುದಿಲ್ಲ. ಇಂಗ್ಲಿಷ್ ಔಷಧಿಗಳಲ್ಲಿ ಸೈಡ್ ಎಫೆಕ್ಟ್ ಜಾಸ್ತಿ ಎನ್ನುತ್ತಾರೆ. ಆಯುರ್ವೇದ ಮದ್ದುಗಳು ಶೀಘ್ರ ಪರಿಣಾಮಕಾರಿ ಅಲ್ಲದೇ ಇರಬಹುದು. ಕ್ರಮೇಣ ಜನ ಇದನ್ನೇ ಅನುಸರಿಸುತ್ತಾರೆ ಅಂತ ಕೂಡಾ ನೀವೇ ಹೇಳ್ತೀರಿ...''

''ನಾನು ಹೇಳ್ತೀನಿ ನಿಜ. ಆದರೆ ನಾನೇ ಅಷ್ಟು ಶೀಘ್ರದಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ. ಇಂಗ್ಲೀಷ್‌ನವರು ಬಂದು ಹೊಸ ಹೊಸ ವಿಧಾನಗಳನ್ನು ತಿಳಿಸಿದರು. ಪುರಾತನ ಹಿಂದೂ ವೈದ್ಯ ಪದ್ಧತಿಯನ್ನು ಜನ ಮರೆತರು. ಮನೆಮದ್ದಿಗೆ ಬೆಲೆ ಇಲ್ಲವಾಯಿತು. ಉದಾಹರಣೆಗೆ, ಈಗ ನಾನು ಯಾರಿಗಾದರೂ ಆಯಾಸವಾದಾಗ, ಒಂದು ಚೂರು ಬೆಲ್ಲ ತಿಂದು ನೀರು ಕುಡಿಯಿರಿ ಅಂತ ಹೇಳಿದರೆ ನಗ್ತಾರೆ ಅಷ್ಟೇ. ಆದೇ ಬಿ. ಕಾಂಪ್ಲೆಕ್ಸ್ ತಿನ್ನಿ ಅಂತ ಹೇಳಿದರೆ ಮೆಡಿಕಲ್ ಸ್ಟೋರ್ಸ್‌ಗೆ ಹೋಗಿ ಕೊಂಡುಕೊಂಡು ನುಂಗ್ತಾರೆ. ಗೊತ್ತಾ ?'' ಎಂದ ಮತ್ತೆ ನಗುತ್ತಾ.

ಹೌದು ಎನ್ನುವಂತೆ ತಲೆಯಾಡಿಸಿದ ಪೃಥ್ವಿ. ''ಕ್ಯಾಪ್ಸ್ಯೂಲುಗಳ ಬಣ್ಣ ಆಕರ್ಷಕವಾಗಿರುತ್ತದೆ. ನುಂಗಲು ಸುಲಭ. ಅದಕ್ಕೆ ಜನರಿಗೆ ಇಷ್ಟವಾಗುತ್ತೆ. ಅದೇ ಮನೇಲಿ ದಿನಾ ಬೆಲ್ಲದ ಉಂಡೆ, ಅಚ್ಚುಗಳನ್ನು ನೋಡಿರುತ್ತಾರೆ. ಆಗ ಈಗ ತಿಂದಿರುತ್ತಾರೆ. ಅಡಿಗೆಗೆ ಉಪಯೋಗಿಸುವ ಬೆಲ್ಲದ ಗುಣ ಹೇಗೆ ಗೊತ್ತಾಗುತ್ತೆ ? ಅದು ಬೇಡಾಂತ ಅನ್ನಿಸುತ್ತೆ'' ಎಂದ ಪೃಥ್ವಿ. ಇರಬಹುದು ಎಂದು ವಿಶ್ವ ತಲೆದೂಗಿದ.

''ಅದಕ್ಕೇ ಹಿತ್ತಲಗಿಡ ಮದ್ದಲ್ಲ ಅಂತ ಅನ್ನುವುದು. ಈ ಗಿಡಮೂಲಿಕ, ಹಸಿರುಸೊಪ್ಪುಗಳ ಬೆಲೆಯೇ ಗೊತ್ತಿಲ್ಲ. ಬೆಲೆ ಬರುವುದಕ್ಕೆ ಇನ್ನೂ ತಡವಾಗುತ್ತೆ.''

''ಒಂದಲ್ಲ ಒಂದು ದಿನ ಬಂದೇ ಬರುತ್ತೆ... ತಡವಾದರೇನೀಗ. ?''

''ಎಂತೆಂತಹ ಮಹಾ ವಿಜ್ಞಾನಿಗಳೇ ಇನ್ನೂ ಏಡ್ಸ್ ರೋಗಕ್ಕೆ ಲಸಿಕೆಯನ್ನು ಕಂಡು ಹಿಡಿಯಲಾಗಲಿಲ್ಲ ಅಂತ ಲೇಡಿ ಡಾಕ್ಟರು ಹೇಳಲಿಲ್ಲವೇ... ಒಂದುವೇಳೆ ಕಂಡು ಹಿಡಿದರೂ, ಅದುಪ್ರಚಾರಕ್ಕೆ ಬಂದು, ಜನರು ನಂಬಬೇಕಾದರೆ,

ಸಾಕಷ್ಟು ಸಮಯವೇ ಹಿಡಿಯುತ್ತೆ... ಯಾವುದೂ ಬೇಗಬೇಗ ಆಗುಲ್ಲ.''

''ಹಿಡಿಯಲಿ ಬಿಡಿ, ಈಗಾಗಿಲ್ಲ ಅಂತಂದರೆ ಯಾವಾಗಲೂ ಆಗುವುದಿಲ್ಲ ಅಂತ ಅರ್ಥವಲ್ಲ. ಪ್ಲೇಗು, ಸಿಡುಬು ಎಂತೆಂತಹ ಭಯಂಕರ ರೋಗಗಳ ಬುಡವನ್ನೇ ಕಿತ್ತು ಹಾಕಿದಾರೆ ಎಂದಮೇಲೆ, ಈ ರೋಗವನ್ನು ನಿರ್ಮೂಲ ಮಾಡುವ ಕಾಲ ಒಂದಲ್ಲ ಒಂದು ದಿನ ಖಂಡಿತಾ ಬರುತ್ತದೆ.''

''ನಿಮ್ಮ ನಂಬಿಕೆ ನೆರವೇರಲಿ ಅಂತ ನಾನು ಹಾರೈಸ್ತೀನಿ ಪೃಥ್ವಿ. ಈ ಏಡ್ಸ್ ರೋಗ ಪ್ಲೇಗು, ಸಿಡುಬಿನಂತೆ ಅಲ್ಲ. ಜನರು ಆಸ್ಪತ್ರೆಗೆ ಹೋಗಿ ಇಂಜೆಕ್ಷನ್ ವ್ಯಾಕ್ಸಿನೇಶನ್ ಹಾಕಿಸಿಕೊಂಡು ಅಲ್ಲಿಗೆ ನಿರಾಳವಾಗಿರುತ್ತಿದ್ದರು. ಈಗ ಈ ರೋಗ ಹಾಗಲ್ಲ. ತಮಗಿದೆಯೋ ಇಲ್ಲವೋ ಅಂತ ತಿಳಿದುಕೊಳ್ಳಕ್ಕೇ ಹೆದರುತ್ತಾರೆ. ಯಾಕೆಂದ್ರೆ ಆ ಮುನ್ಸೂಚನೆ ರಕ್ತದ ಪರೀಕ್ಷೆಯಿಂದ ಮಾತ್ರ ತಿಳಿಯುತ್ತದೆ. ಒಂದು ವೇಳೆ ಗೊತ್ತಾದರೂ ಜನರಲ್ಲಿ ಅಂಜಿಕೆ, ನಾಚಿಕೆಯೇ ಹೆಚ್ಚು... ಪ್ಲೇಗಾದರೆ ಗಡ್ಡೆಯಾಗುತ್ತಿತ್ತು. ಸಿಡುಬಾದರೆ ಮೈತುಂಬಾ ಏಳುತ್ತಿತ್ತು. ಇದು ಹಾಗಲ್ಲ. ಇದು ತಿಳಿಯುವ ಹೊತ್ತಿಗೆ ಅವನು ರೋಗ ನಿರೋಧಕ ಶಕ್ತಿಯನ್ನು ತಡೆದುಕೊಂಡು ಭಯದಿಂದ ಉಳಿದ ದಿನಗಳನ್ನು ಎಣಿಸುವ ಸ್ಥಿತಿಯಲ್ಲಿರುತ್ತಾನೆ... ಈಗ ಸಮಾಜ ಅವರಿಗೇ ಅಂತ ಏನಾದ್ರೂ ಮಾಡೋದಿದ್ರೆ ಧೈರ್ಯ, ಸ್ಥೈರ್ಯ ತುಂಬಬೇಕು ಅಷ್ಟೇ...''

''ಈಗ ಅಜಯ ವಿಜಯರು ಅಂಥ ಪಂಜರದೊಳಗೆ ಸಿಕ್ಕಿ ಬಿದ್ದಿದಾರಲ್ಲ ವಿಶ್ವ. ಅದರಿಂದ ಅವರಿಗೆ ಬಿಡುಗಡೆಯೇ ಇಲ್ಲವಲ್ಲ ಅಂತ ನೆನೆಸಿಕೊಂಡರೆ ವ್ಯಥೆಯಾಗುತ್ತೆ.'' ಪೃಥ್ವಿಯ ಧ್ವನಿ ಮೆತ್ತಗಾಗಿತ್ತು. ಕಣ್ಣಂಚಿನಲ್ಲಿ ನೀರು ಜಿನುಗಿತ್ತು. ವಿಶ್ವ ಪೃಥ್ವಿಯ ಬೆನ್ನ ಮೇಲೆ ಕೈ ಇಟ್ಟ.

''ಅದೆಲ್ಲ ಅವರವರ ಕರ್ಮಫಲ... ಅನುಭವಿಸಲೇ ಬೇಕು.''

''ನೀವೂ ಈ ಫಿಲಾಸಫೀನ ನಂಬ್ತೀರಾ ?''

''ಕೆಲವೊಮ್ಮೆ ನಂಬಬೇಕು ಎನ್ನುವ ಜಿಜ್ಞಾಸೆ ಹುಟ್ಟುತ್ತೆ. ಪಂಡಿತರು ಹೇಳುವ ಮಾತಿನಲ್ಲಿ ಅರ್ಥ ಇದೆ ಅಂತನ್ನಿಸುತ್ತೆ. ನನ್ನನ್ನು ಪಕ್ಕದಲ್ಲಿ ಕೂರಿಸಿಕೊಂಡು ರಾಮಾಯಣ ಮಹಾಭಾರತದ ಕಥೆಗಳನ್ನು ಸ್ವಾರಸ್ಯವಾಗಿ ಹೇಳುತ್ತಿದ್ದರು. ಇತಿಹಾಸ ಪುರಾಣಗಳ ಬಗ್ಗೆ ಓದಿ ಹೇಳುತ್ತಿದ್ದರು. ಆದರೆ ಅವರಿಂದ ನನ್ನನ್ನು ವಿದ್ಯಾವಂತನನ್ನಾಗಿ ಮಾಡಲು ಸಾಧ್ಯವಾಗಲಿಲ್ಲ. ಅಳಲೇ ಕಾಯಿ ಪಂಡಿತನಾಗಿಯೇ ಉಳಿದೆ. ನಿಮ್ಮಂತಹ ಜಾಣ ಹುಡುಗನಾಗಿದ್ದಿದ್ದರೆ,

ನಾನು ಡಾಕ್ಟರ್ ಆಗಿರುತ್ತಿದ್ದೆ...'' ವಿಶ್ವ ನಕ್ಕ. ''ಈಗೇಕೆ ಆ ಹಳೆಯ ಮಾತುಗಳು'' ಎನ್ನುತ್ತಾ ಮೈ ಒದರಿ ನಿಂತ.

ತಮ್ಮ ತಮ್ಮ ಮಗುವನ್ನು ಎತ್ತಿಕೊಂಡು ಮೇನಕಾ, ರೇವತಿ ಮನೆಯೊಳಗೆ ಕಾಲಿಟ್ಟರು. ಮಕ್ಕಳಿಗೆ ಆರತಿ ಎತ್ತಿ ಒಳಗೆ ಬರಮಾಡಿಕೊಂಡಾಗ ರೂಪಿಣಿಗೆ ಚುಚ್ಚಿದಂತಾಗಿತ್ತು. ತಾನು ತನ್ನ ಮಗು ಈ ಆದರ, ವಿಶ್ವಾಸದಿಂದ ವಂಚಿತರು ಎಂಬ ಬಾಧೆ ತಲೆದೋರಿತು.

''ನನ್ನ ಮಗೂದು ಏನು ತಪ್ಪಿತು ? ಅದೂ ಈ ವಂಶದ್ದೇ ಮಗು. ಇದು ಅಸ್ಪೃಶ್ಯರ ಮಗುವಲ್ಲ. ನಿಮ್ಮ ಮಕ್ಕಳಿಗೆ ಎಷ್ಟು ಹಕ್ಕು ಇದೆಯೋ, ಅಷ್ಟು ಹಕ್ಕು ಈ ಮಗೂಗೂ ಇದೆ ತಿಳೀತಾ ?'' ರೂಪಿಣಿ ತನ್ನ ಕಹಿಯನ್ನು ಉಗುಳಿದಳು.

''ಅದು ಹೇಗೆ ಹೇಳ್ತೀಯ ರೂಪಿಣಿ ? ಕಾನೂನಿನ ಪ್ರಕಾರ ಈ ಮಕ್ಕಳಿಗೆ ಮಾತ್ರ ಈ ಹಕ್ಕು. ನೀನು ವಿಶ್ವನ್ನ ಮದುವೆಯಾಗಿದ್ದರೂ ಈ ಹಕ್ಕು ಈ ಮಗುವಿಗಿಲ್ಲ...''

''ಸಾಕು ಸುಮ್ಮನಿರ್ರೇ... ನಿಮಗಿಂತ ಚೆನ್ನಾಗಿ ಗೊತ್ತು ಈ ಮನೆಯ ಗುಟ್ಟು. ಅದನ್ನೆಲ್ಲ ಬಹಿರಂಗಗೊಳಿಸಿದರೆ ತಾವಾಗಿಯೇ ದಾರಿಗೆ ಬರುತ್ತಾರೆ.''

''ನಿನ್ನ ಮಾತನ್ನು ಯಾರು ನಂಬ್ತಾರೆ ?''

''ಹೇಗೆ ನಂಬಿಸಬೇಕೂಂತ ನನಗೆ ಗೊತ್ತು... ಪೃಥ್ವಿ, ನಳಿನಿ ಇಬ್ಬರೂ ತಲೆ ಎತ್ತಿ ತಿರುಗಾಡದ ಹಾಗೆ ಮಾಡ್ತೇನಿ''

''ನೀನೇಕೆ ಹೀಗೆ ಆಡ್ತೀಯೋ... ನಮಗೆ ತಿಳೀದು.''

''ನಾನು ಹೆಡೆ ತುಳಿಸಿಕೊಂಡ ಸರ್ಪಿಣಿ... ಎಲ್ಲರಿಗೂ ಹೇಗೆ ಬುದ್ಧಿ ಕಲಿಸಬೇಕೂಂತ ನನಗೆ ಗೊತ್ತು'' ಅಂತ ಹೆದರಿಸಿ ನುಡಿದಿದ್ದಳು.

ಈ ಮಾತುಗಳನ್ನು ಕೇಳಿಸಿಕೊಂಡ ನಳಿನಿ ವಿಶ್ವನೊಡನೆ ನುಡಿದಿದ್ದಳು.

''ನಿನಗೂ ರೂಪಿಣಿಗೂ ಸಂಬಂಧವಿದೆ ಅಂತ ತಿಳಿದಿರುವುದರಿಂದ ಸುಮ್ಮನಿದೀನಿ. ಅವಳು ನಮ್ಮ ಮನೆಯ ವಿಷಯಕ್ಕೆ ಬಾಯಿ ಹಾಕದಂತೆ ತಿಳುವಳಿಕೆ ಹೇಳು.''

''ಅವಳು ನನ್ನ ಮಾತನ್ನು ಕೇಳಲ್ಲ. ಅವಳಿಗೆ ಏನನ್ನಾದರೂ ಹೇಳುವ ಹಕ್ಕು ನನಗಿಲ್ಲ. ಅವಳೇನು ನನ್ನ ಹೆಂಡತಿಯೇ ?'' ಎಂದಿದ್ದ.

''ಹೆಂಡತಿ ಅಲ್ಲ, ಪ್ರೇಯಸಿ ಅಂತ ನನಗೆ ಗೊತ್ತು. ಆ ಮಗು ನಿನ್ನದೇ ಅಂತ ಗೊತ್ತು... ಪೃಥ್ವಿ ಮಗು ಅದು ಅಂತ ಹೇಳ್ತಾಳಂತಲ್ಲ, ನಾಚಿಕೆ ಆಗಲ್ವಾ ?''

''ತಮಾಷೆಗೆ ಹೇಳಿರಬಹುದು. ಅವಳಿಗೆ ಪೃಥ್ವಿಯನ್ನೇ ಮದುವೆಯಾಗಬೇಕು ಅಂತ ಆಸೆ ಇತ್ತಲ್ಲ''

''ಇದೆಂತಹ ತಮಾಷೆ? ಅವಳೇನೂ ಚಿಕ್ಕವಳಲ್ಲ. ಪೃಥ್ವಿ ಘನತೆ ಗೌರವಗಳನ್ನು ಗಳಿಸಿರುವ ವ್ಯಕ್ತಿ. ಅಲಾಲ್‌ಟೋಪಿ ಅಲ್ಲ!'' ವಿಶ್ವ ಅವಳನ್ನೇ ನೋಡಿದ.

''ಅಂದರೇ...? ನಾನು ಅಲಾಲ್‌ಟೋಪಿ ಅಂತ ತಾನೇ..?''

''ಅದು, ನಿನಗೆ ನಿಮ್ಮಪ್ಪನಿಗೆ ಮಾತ್ರ ಗೊತ್ತು'' ಎಂದುಬಿಟ್ಟಳು.

''ನನ್ನ ವಿಷಯ ಮಾತ್ರ ಮಾತನಾಡಿ... ನಮ್ಮಪ್ಪನ ಸುದ್ದಿ ನನಗೆ ಬೇಕಿಲ್ಲ. ನಾನು ಅವರ ಮುಖವನ್ನೇ ನೋಡಿರಲಿಲ್ಲ...'' ಎಂದ ಖಾರವಾಗಿ.

''ಹೌದು, ನೀನು ಹುಟ್ಟುವ ಮೊದಲೇ ನಮ್ಮನ್ನು ಬಿಟ್ಟು ಹೋದ ಪುಣ್ಯಾತ ಅವರು. ಆದರೆ ಈಗ ರೂಪಿಣಿಯ ಹೊಟ್ಟೆಯಲ್ಲಿ ಮತ್ತೆ ಹುಟ್ಟಿ ನನ್ನ ಹೊಟ್ಟೆ ಉರಿಸಲು ಬಂದಿರುವಂತಿದೆ.''

''ಛೆ... ಏನ್ಮಾತು ಅದು ?'' ಸಿಡುಕಿದ.

''ನಿಂಗೆ ಗೊತ್ತಿಲ್ಲ ವಿಶ್ವಾ... ನಿಮ್ಮಪ್ಪನ ತದ್ರೂಪು ಇದು. ಅದರ ಮುಖವನ್ನು ನೋಡಿದಾಗಲೆಲ್ಲಾ, ನನಗೆ ಹಳೆಯ ನೆನಪುಗಳು ಮರುಕಳಿಸುತ್ತವೆ'' ವಿಶ್ವ ಬೆಚ್ಚಿದ.

''ನನಗೆ ಸಾಲದು ಅಂತ ಪೃಥ್ವೀಗೂ ಅವಮಾನ ಮಾಡಲು ಹೊರಟಿದ್ದಾಳೆ. ಅವಳು ವಿಷಯ ಹಾವಿನಂತೆ ಅವಳಿಗೆ ನೀನು ಹಾಲೆರೆಯಬಾರದಾಗಿತ್ತು.''

''ನನಗೇನು ಗೊತ್ತಿತ್ತು ಹೀಗೆಲ್ಲಾ ಆಗುತ್ತೆ ಅಂತ ? ಅವಳ ಪರಿಚಯವಾದದ್ದೇ ನಿಮ್ಮಿಂದ... ?'' ಅವನಿಗೆ ಆ ಮಾತುಗಳು ಇಷ್ಟವಾಗಿರಲಿಲ್ಲ.

''ಆ ಮಗು ನಿನ್ನದು ಅಂತ ಎಲ್ಲರಿಗೂ ತಿಳಿಯಬೇಕು... ನೀನು ಬಹಿರಂಗವಾಗಿ ಒಪ್ಪಿಕೋ ಬೇಕು.''

''ಅದು ಸಾಧ್ಯವಿಲ್ಲ. ಇವತ್ತು ರೂಪಿಣಿ, ನಾಳೆ ಮೇನಕಾ, ರೇವತಿಯರ ಮಕ್ಕಳ ತಂದೆಯೂ ನಾನೇ ಅಂತ ನಾನು ಯಾರಿಗೂ ತಿಳಿಸಲು ಇಚ್ಛಿಸುವುದಿಲ್ಲ.''

''ಅದು ಬೇರೆ ಮಾತು.......... ಅದಕ್ಕೂ ಇದಕ್ಕೂ ಸಂಬಂಧವಿಲ್ಲ.''

''ಏನೇ ಇರಲಿ.... ಪೃಥ್ವಿಯನ್ನು ಬಯಸಿದ್ದಳು ಹುಡುಗಿ... ಅದು ಗೊತ್ತಾ?''

''ಅದು ಬಯಕೆ ಅಲ್ಲ; ದ್ವೇಷ.... ಅವಳ ಹಿಂದೆ ನಿಂತು ಯಾರೋ ಹೀಗೆ ಹೇಳಿಕೊಡ್ತಿದ್ದಾರೆ ಅಂತ ನನಗೆ ಅನುಮಾನ... ಅದು ನೀನೇ... ಇರಬಹುದು''

''ಚೆನ್ನಾಗಿದೆ ಈ ಆರೋಪ ! ನನ್ನ ಸ್ನೇಹಿತನ ಮೇಲೆ ನನಗೆ ದ್ವೇಷ ? ರೂಪಿಣಿಯಿಂದ ಅವನಿಗೆ ತೊಂದರೆ ಅನ್ನೋದಾದ್ರೆ, ನಾನು ಅವಳನ್ನು ಅವಳ ಮಗುವನ್ನೂ ಕೊಂದು ಜೈಲಿಗೆ ಹೋಗ್ತೀನಿ... ಸರೀನಾ?...''

''ಸಾಕು ಈ ಆಕ್ರೋಶದ ಮಾತು. ಅವಳಿಗೆ ಸಾಕಷ್ಟು ಹಣವನ್ನು ನಾನು ಕೊಡ್ತೀನಿ. ನಮ್ಮ ಕಣ್ಣೆದುರಿನಿಂದ ದೂರ ಎಲ್ಲಾದರೂ ಕಳಿಸಿಬಿಡು. ಇದಿಷ್ಟನ್ನೂ ನೀನು ಮಾಡಲೇಬೇಕು...'' ವಿಶ್ವ ಅಸಹನೆಯಿಂದ ಅವಳನ್ನು ನೋಡಿದ.

''ಚೆನ್ನಾಗಿದೆ. ನಿಮ್ಮ ಕೆಲಸವಾಗಬೇಕಾದರೆ, ನನ್ನ ಅವಶ್ಯಕತೆ ಬೀಳುತ್ತೆ ಅಂತಾಯ್ತು... ನೋಡೋಣ, ಪೃಥ್ವಿಗೋಸ್ಕರ... ಪ್ರಯತ್ನ ಮಾಡ್ತೀನಿ....'' ಎಂದು ನುಡಿದ.

* * * *

ವಿಶ್ವ ಅನುನಯದಿಂದ ರೂಪಿಣಿಯೊಡನೆ ಮಾತನಾಡಿ ಅವಳು ಹಾಗೆಲ್ಲಾ ಮಾತನಾಡಬಾರದೆಂದು ಹೇಳಿದ. ಅವಳು ಮೆಟ್ಟಿಬಿದ್ದಳು.

''ನೀವು ಹೀಗೆ ಡಬಲ್‌ಕ್ರಾಸ್ ಮಾಡ್ತೀರಾ ಅಂತ ನಾನಂದುಕೊಂಡಿರ ಲಿಲ್ಲ. ನನಗಿಂತ ಪೃಥ್ವಿಯೇ ಹೆಚ್ಚಾದ. ನಿಮ್ಮ ತಾತನ ಹಣದಲ್ಲಿ ಅರ್ಧ ಕೊಡ್ತೀನಿ ಅಂತ ಹೇಳಿ, ಅವನ ಮಾತು ಕೇಳಿಕೊಂಡು, ಆಸ್ಪತ್ರೆಗೆ ಸುರಿದಿರಿ.... ನಿಮಗೆ ನಿಮ್ಮ ತಾಯಿ ಮಾಡಿದ್ದ ದ್ರೋಹವನ್ನು ಮರೆತು, ಈಗ ಆ ಶ್ರೀಮಂತಿನಿಯ ಮಗನಾಗಿ ಮೆರೆಯುತ್ತಿದ್ದೀರಿ... ನನಗೆ, ನನ್ನ ಮಗುವಿಗೆ ನೀವು ಮಾಡುತ್ತಿರು ವುದೇನು ? ನಾನು ಪೃಥ್ವಿಯನ್ನು ಮದುವೆಯಾದರೆ, ನಿಮ್ಮನ್ನು ಸಾಕಬಲ್ಲೆ... ತಿಳೀತಾ ?''

ಅವಳ ಬಾಯನ್ನು ಮುಚ್ಚಿಸಲೆಂದು ವಿಶ್ವ ಕೈ ಎತ್ತಿದ. ರೂಪಿಣಿ ತಡೆದಳು ''ನಿಮಗೆ ನನ್ನ ಮೇಲೆ ಕೈ ಎತ್ತಲು ಯಾವ ಅಧಿಕಾರವೂ ಇಲ್ಲ... ನಾನು ಬ್ಲಾಕ್ ಮೇಲ್ ಮಾಡಿಯೇ ಮಾಡ್ತೀನಿ...'' ಅವಳು ರೋಷದಿಂದ ಹಲ್ಲು ಕಡಿದಳು.

''ಹಾಗೆಲ್ಲಾ ಏನೂ ಮಾಡಲಾಗದಂತೆ ನಾನು ತಡೀತೀನಿ... ಹಾಗಂತ ನಾನು ನಳಿನಿಗೆ ಮಾತು ಕೊಟ್ಟಿದೀನಿ...''

''ಈಗ ಆ ನಳಿನಿ ಯಾರು ? ನನಗೆಲ್ಲಾ ಗೊತ್ತು... ಮೇನಕಾ ರೇವತಿಯರನ್ನು ನಿಮ್ಮವರನ್ನಾಗಿ ಮಾಡಿಕೊಂಡಿದೀರಿ... ಈಗ ನಾನು ಬೇಡ... ಅದಕ್ಕೇ ಈಗ ಅವರೆಲ್ಲಾ ಬೇಕಾಗಿದ್ದಾರೆ.... ನನಗೆ ನನ್ನ ಮಗುವಿಗೆ ಸಿಗದ ಆ ಶ್ರೀಮಂತಿಕೆ, ಅವರಿಬ್ಬರಿಗೂ, ಅವರ ಮಕ್ಕಳಿಗೂ ಸಿಗದಂತೆ ಮಾಡ್ತೀನಿ... ಎಲ್ಲರನ್ನೂ ನಾಶ ಮಾಡಿ ಬಿಡ್ತೀನಿ.

''ಅದೆಲ್ಲಾ ಅಷ್ಟು ಸುಲಭವಲ್ಲ, ಪೋಲೀಸ್ನೋರು, ಕೋರ್ಟು ನಿನ್ನನ್ನು ಸುಮ್ಮನೇ ಬಿಡುವುದಿಲ್ಲ'' ಹೆದರಿಸಲು ನೋಡಿದ.

''ಗೊತ್ತು... ಆದರೂ ನಾನು ಹೆದರುಲ್ಲ... ಅಂತೂ ನೀವೂ ಅವರ ಕಡೆಗೆ ಸೇರಿ ನನಗೆ ಮೋಸ ಮಾಡಿದಿರಿ. ಹಣ ವಸೂಲಿ ಮಾಡುವ ಮಾರ್ಗ, ದ್ವೇಷ ತೀರಿಸಿಕೊಳ್ಳುವ ವಿಧಾನ ನನಗೆ ಗೊತ್ತು... ಇಲ್ಲದಿದ್ದರೆ ನಿಮ್ಮ ತಂದೆಯ ಋಣವನ್ನು ಈ ಜನ್ಮದಲ್ಲಿ ತೀರಿಸಲಾಗುವುದಿಲ್ಲ... ಈಗಲೂ ನನ್ನ ಮಾತು ಕೇಳಿ ವಿಶ್ವ... ನಿಮ್ಮ ತಂದೆಯ ಬಗ್ಗೆ ಏನೂ ಅನ್ನಿಸುಲ್ವಾ ? ಅಥವಾ ತಾಯಿಯ ಮುಖ ಕಂಡು ಸೋತುಹೋದ್ರಾ ?''

''ನಾನು ಏಕಾಂಗಿಯಾಗಿದ್ದಾಗ ಅನೇಕ ದುರಾಲೋಚನೆಗಳನ್ನು ಮಾಡಿದ್ದೇನೆ. ಈ ಜನ್ಮಕ್ಕೆ ಅಷ್ಟು ಸಾಕು... ಈಗ ನೀನು ತಾಯಿಯಾಗಿದೀಯ... ಹಗುರವಾಗಿ ಮತನ್ನಾಡಬೇಡ...''

''ಈಗ ಗೊತ್ತಾಗಿದೆ. ನೀನೆಷ್ಟು ಹೇಡಿ ಅಂತ.. ಪೃಥ್ವಿಯ ಸ್ನೇಹದ ನೆವ ಮಾಡಿಕೊಂಡು, ಮೇನಕ ರೇವತಿಯರನ್ನು ಒಲಿಸಿಕೊಂಡು, ಆ ಮನೆಗೇ ಹೋಗಿ ಸೇರಿಕೊಳ್ಳುವ ಆಲೋಚನೆ ನಿಮ್ಮದು. ನನ್ನನ್ನು ದೂರ ಮಾಡಿ, ನೀವೆಲ್ಲಾ ಒಂದಾಗಿ ಅದ್ಹೇಗೆ ಇರುತ್ತೀರೋ ನಾನೂ ನೋಡಿ ಬಿಡ್ತೀನಿ...'' ಎನ್ನುತ್ತಾ ತನ್ನ ಬಟ್ಟೆಗಳನ್ನು ಪೆಟ್ಟಿಗೆಗೆ ತುರುಕಿ, ಅಲ್ಲಿಂದ ಮಗುವಿನೊಂದಿಗೆ ಹೊರಬಿದ್ದಳು. ವಿಶ್ವ ತಡೆಯಲಿಲ್ಲ.

ಆಸ್ಪತ್ರೆಯ ಕಟ್ಟಡದ ಒಂದು ಭಾಗದ ಕೆಲಸ ಸಂಪೂರ್ಣವಾಗಿ ಮುಗಿದಿತ್ತು. ಸರಳವಾಗಿ ಉದ್ಘಾಟನಾ ಸಮಾರಂಭವನ್ನು ನೆರವೇರಿಸ ಬೇಕೆಂದುಕೊಂಡು ವಿಶ್ವ ಪೃಥ್ವಿಯೊಡನೆ ಮಾತನಾಡಿದ.

''ಒಳ್ಳೆಯದೇ... ಆಸ್ಪತ್ರೆ ಪ್ರಾರಂಭವಾಗಿದೆ ಅಂತ ಹತ್ತಿರದ ಜನರಿಗೆ ಗೊತ್ತಾಗುತ್ತದೆ'' ಎಂದ ಪೃಥ್ವಿ.

''ನಿಮ್ಮ ಚಿಕ್ಕಮ್ಮನೇ ಉದ್ಘಾಟನೆ ಮಾಡಲಿ ಅಂತ ನನ್ನ ಆಸೆ. ಅವರನ್ನು ಒಪ್ಪಿಸುವ ಭಾರ ನಿಮ್ಮದು.... ಯಾಕೇಂದ್ರೆ ಅವರಿಗೆ ನಿಮ್ಮ ಮೇಲೆ ಅಕ್ಕರೆ

ಜಾಸ್ತಿ... ನೀವಾದರೋ ಗೌರವ ಆದರಗಳಿಂದ ನಿಮ್ಮ ಚಿಕ್ಕಮ್ಮನನ್ನ ನೋಡಿಕೊಂಡಿದೀರಿ... ನಾನು ನನ್ನ ಕರ್ತವ್ಯಗಳಿಂದ ವಂಚಿತನಾದವನು. ಅವರನ್ನು ದೂಷಿಸಿದವನು. ನಿಮ್ಮ ಮಾತಿಗೆ ಅವರು ಬೆಲೆ ಕೊಟ್ರೋ ಕೊಡುತ್ತಾರೆ.''

''ಆಗಲಿ ಪ್ರಯತ್ನ ಮಾಡ್ತೀನಿ'' ಎಂದಷ್ಟೇ ಹೇಳಿದ. ಮೊಮ್ಮಕ್ಕಳಿಬ್ಬರಿಗೂ ಮೂರು ತಿಂಗಳು ತುಂಬುತ್ತಾ ಬಂದಿತ್ತು. ಅಜಯ ವಿಜಯರು ಸಧ್ಯದಲ್ಲೇ ರಜ ಹಾಕಿ ಬರುತ್ತೀವೆಂದು ಹೇಳಿದ್ದರು. ಆಸ್ಪತ್ರೆಯ ಕಟ್ಟಡದ ಉದ್ಘಾಟನೆ ಎಂದು ತಿಳಿದ ರೂಪಿಣಿ ಎರಡು ದಿನ ಮುಂಚಿತವಾಗಿಯೇ ತನ್ನ ಮಗುವನ್ನು ಕರೆದುಕೊಂಡು ವಿಶ್ವನ ಮನೆಗೆ ಬಂದಿಳಿದಳು. ಮುದ್ದಾಗಿ ತೊದಲು ಮಾತುಗಳನ್ನಾಡುತ್ತಾ, ಪುಟ್ಟ ಪುಟ್ಟ ಹೆಜ್ಜೆಗಳನ್ನಿಟ್ಟು ನಡೆಯುತ್ತಿದ್ದ ಮಗುವನ್ನು ನೋಡಿ ವಿಶ್ವನಿಗೆ ಏನೋ ಆನಂದವಾಗಿತ್ತು. ಮಗುವನ್ನು ಎತ್ತಿಕೊಂಡು ಮುದ್ದಿಸಿದ.

ಪೃಥ್ವಿ ನಳಿನಿಯನ್ನು ಉದ್ಘಾಟನೆ ಮಾಡಲು ಕೇಳಿದಾಗ, ಮೊದಲಿಗೆ ಒಪ್ಪಲಿಲ್ಲ. ತಲೆಯಾಡಿಸಿದಳು.

''ನನಗೆ ಇದೆಲ್ಲ ಇಷ್ಟವಿಲ್ಲ. ನನಗಿಂತ ಹಿರಿಯವರಾದ ಪಂಡಿತರಿದಾರೆ. ಅವರೇ ಮಾಡಲಿ'' ಎಂದಿದ್ದಳು.

''ಪಂಡಿತರು ಶಂಕುಸ್ಥಾಪನೆ ಮಾಡಿದ್ದರು. ಈಗ ನೀವು ಉದ್ಘಾಟನೆಯನ್ನು ಮಾಡಿ... ಅದರಲ್ಲಿ ಏನು ತೊಂದರೆ ?''

''ತೊಂದರೆ ಬೇಕಾದಷ್ಟು ಇದೆ ಪೃಥ್ವಿ. ಅದು ನಿನಗೆ ಅರ್ಥವಾಗುತ್ತೋ ಇಲ್ಲವೋ... ವಿಶ್ವ ಖರ್ಚು ಮಾಡಿರುವ ಹಣವೆಲ್ಲಾ ನಿಮ್ಮ ತಾತನದು, ನಿಮ್ಮ ತಂದೆಯದು... ನಾನು ಉದ್ಘಾಟನೆ ಮಾಡಿದ ಮಾತ್ರಕ್ಕೆ ಯಾರೂ ನಿಮ್ಮ ತಾತನ್ನ ಸ್ಮರಿಸುಲ್ಲ. ಅದೆಲ್ಲ ನನ್ನ ಮನಸ್ಸನ್ನು ಕಲಕುತ್ತೆ.''

ಪೃಥ್ವಿ ಒಂದು ಗಳಿಗೆ ತಡೆದ. ತಾತ ತನಗೆಂದು ಕೊಟ್ಟಿದ್ದ ಹಣವನ್ನೂ ಸಹ ಹಾಕಿದ್ದೇನೆಂದು ತಿಳಿಸಲು ಇಷ್ಟಪಡಲಿಲ್ಲ.... ಆದರೆ ನುಡಿದ. ''ಹಣ ಯಾರದ್ದೇ ಆಗಲಿ, ಒಂದು ಒಳ್ಳೆಯ ಕಾರ್ಯಕ್ಕೆ ಉಪಯೋಗವಾಗುತ್ತಿದೆಯಲ್ಲ ಅಂತ ನನಗೆ ಸಮಾಧಾನ. ನಮ್ಮ ತಾತನ ಆತ್ಮಕ್ಕೂ ಶಾಂತಿ ಸಿಗುತ್ತೆ'' ಅಂತಂದ.

ತಾತ, ತಾತನ ಆತ್ಮ ಅಂತೆಲ್ಲ ಪೃಥ್ವಿ ನುಡಿದಾಗ, ನಳಿನಿ ಭಾವುಕಗೊಂಡಳು. ಕಡೆಗೆ ಒಪ್ಪಿಕೊಂಡಳು.

* * * *

ಸಮಾರಂಭಕ್ಕೆ ಎಲ್ಲಾ ಸಿದ್ಧತೆಗಳೂ ಮುಗಿದಿದ್ದವು. ಸಮಯಕ್ಕೆ ಸರಿಯಾಗಿ ಪೃಥ್ವಿ ನಳಿನಿಯನ್ನು ಕರೆದುಕೊಂಡು ಸ್ಥಳಕ್ಕೆ ಬಂದ. ಊಟಕ್ಕೆ ಅಲ್ಲಿಯೇ ಎಲ್ಲರಿಗೂ ಸಿದ್ಧತೆಯಾಗಿತ್ತು. ಮೇನಕಾ ರೇವತಿಯರು ಮನೆಯ ಉಳಿದ ಕೆಲಸದವರು, ಅಡಿಗೆಯವರೊಂದಿಗೆ ನಿಧಾನವಾಗಿ ಬರುವುದೆಂದು ತೀರ್ಮಾನ ಮಾಡಿಕೊಂಡಿದ್ದರು. ಮೇನಕಾ, ರೇವತಿಯರು ಮಕ್ಕಳಿಗೆ ಅಲಂಕರಿಸಿ, ತಾವು ಅಲಂಕರಿಸಿಕೊಡು ಚಂದ್ರುಗಾಗಿ ಕಾಯುತ್ತಿದ್ದರು.

ಅಷ್ಟರಲ್ಲಿ ಮನೆಯ ಮುಂದೆ ಒಂದು ಮಾರುತಿ ವ್ಯಾನ್ ಬಂದು ನಿಂತಿತು. ಅದರೊಳಗಿನಿಂದ ಇಳಿದ ನಾಲ್ಕಾರು ಜನರು ಬಂದು ಹೆಂಗಸರನ್ನು ಹೆದರಿಸಿ, ಕೆಲಸದವರನ್ನು ಸದೆ ಬಡಿದು, ಮಕ್ಕಳನ್ನು ಎತ್ತಿಕೊಂಡರು. ಕೂಗಾಟ, ಕಿರುಚಾಟ ಮಾಡದಿರಲೆಂದು ಮಕ್ಕಳ ಬಳಿಯಿದ್ದ ಮೇನಕಾ ರೇವತಿಯರಿಗೆ ಜ್ಞಾನ ಹೋಗುವಂತೆ ತಲೆಗೆ ಹೊಡೆದು, ಮಕ್ಕಳೊಂದಿಗೆ ಕಾರನ್ನು ಹತ್ತಿ ಮಾಯವಾದರು. ಕೆಲಸಕಾರ್ಯದವರು, ಆಳುಕಾಳುಗಳು ಬರುತ್ತಿದ್ದುದರಿಂದ ಹೊರಗಿನವರಿಗೆ ಯಾವ ಅನುಮಾನವೂ ಬರಲಿಲ್ಲ.

ಹೊಡೆಸಿಕೊಂಡು ಬಿದ್ದವರೆಲ್ಲ ನರಳುತ್ತಾ ದಿಗ್ಭ್ರಮೆಗೊಂಡವರಂತೆ ದಿಕ್ಕು ತೋಚದೇ ಹೊರಳಾಡುತ್ತಿದ್ದರು. ಮೇನಕಾ ರೇವತಿಯರಿಗೆ ಜ್ಞಾನವೇ ಇರಲಿಲ್ಲ. ಅವರುಗಳನ್ನು ಕರೆದುಕೊಂಡು ಹೋಗಲೆಂದು ಬಂದ ಚಂದ್ರು ಹೆದರಿ, ತಕ್ಷಣವೇ ಹತ್ತಿರದ ಪೋಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೇಂಟ್ ಕೊಟ್ಟು ಬಂದ. ಕೆಲವೇ ಕ್ಷಣಗಳಲ್ಲಿ ಪೋಲೀಸು ವ್ಯಾನೊಂದು, ಆಂಬ್ಯುಲೆನ್ಸ್‌ಗಳು ಸೈರನ್ ಕೂಗುತ್ತಾ ಬಂದಾಗ, ಸುತ್ತಮುತ್ತಲಿನ ಜನ ಸುತ್ತುವರೆದರು.

ಪೋಲೀಸರು ತನಿಖೆ ನಡೆಸಿ, ಚಂದ್ರುವಿನ ಹೇಳಿಕೆಯನ್ನು ಬರೆದುಕೊಂಡು, ಗಾಯಗೊಂಡಿದ್ದವರನ್ನೆಲ್ಲಾ ಆಸ್ಪತ್ರೆಗೆ ಸಾಗಿಸಿದರು. ಪೋಲೀಸ್ ನಾಯಿಗಳು ಮನೆಯ ಒಳಗೂ ಹೊರಗೂ ತಿರುಗಿ, ರಸ್ತೆಯ ಮೂಲೆಯವರೆಗೂ ಹೋಗಿ ನಿಂತವು. ಚಂದ್ರು ಪೋಲೀಸಿನವರೊಂದಿಗೆ ಹೋಗಿ, ಪೃಥ್ವಿಗೆ ವಿಷಯ ತಿಳಿಸಿದ. ನಳಿನಿ, ವಿಶ್ವನೊಂದಿಗೆ ಪೃಥ್ವಿ ಮನೆಯ ಕಡೆಗೆ ಧಾವಿಸಿದ. ಪೋಲೀಸರು ಪೃಥ್ವಿಯೊಡನೆ ಮಾತನಾಡಿ ಕೆಲವು ವಿಷಯಗಳನ್ನು ಸಂಗ್ರಹಿಸಿಟ್ಟುಕೊಂಡರು. ಯಾರ ಮೇಲಾದರೂ ಅನುಮಾನವಿದೆಯೇ ಅಂತ ಕೇಳಿದಾಗ, ಇಲ್ಲವೆನ್ನುವಂತೆ ತಲೆಯಾಡಿಸಿದ. ವಿಶ್ವನಿಗೆ ಇದು ರೂಪಿಣಿಯ ಕೆಲಸವೇ ಎಂಬ ಅನುಮಾನ ಕಾಡಿತ್ತು.

ಮಕ್ಕಳನ್ನು ಅಪಹರಿಸಿದವರು, ಹಣಕ್ಕಾಗಿ ಫೋನು ಮಾಡಿಯೇ

ಮಾಡುತ್ತಾರೆ ಎಂದುಕೊಂಡು ಪೃಥ್ವಿ ಮನೆಯಲ್ಲಿಯೇ ಉಳಿದ. ವಿಶ್ವ ಮಾತ್ರ ಏನೋ ಅನುಮಾನದಿಂದ ಮೊದಲು ಆಸ್ಪತ್ರೆಗೆ ಬಂದ. ಮೇನಕಾ, ರೇವತಿಯರಿಬ್ಬರಿಗೂ ಇನ್ನೂ ಜ್ಞಾನ ಬಂದಿರಲಿಲ್ಲ. ಸೀದಾ ತನ್ನ ಮನೆಗೆ ಬಂದ. ರೂಪಿಣಿ ಅವನ ಮನೆಯಲ್ಲಿಯೇ ಕೂತಿದ್ದಳು. ಮಗು ಮಲಗಿತ್ತು. ನಡೆದಿದ್ದ ವಿಷಯವನ್ನೆಲ್ಲ ತಿಳಿಸಿದ. ಶಾಂತವಾಗಿಯೇ ಇದ್ದ ಅವಳ ಮೇಲಿನ ಸಂದೇಹ ಹೆಚ್ಚಾಗಿತ್ತು.

''ನಿನಗೇನೂ ಅನ್ನಿಸ್ತಾ ಇಲ್ವಾ ?'' ಕೇಳಿದ.

''ನನ್ನ ಹೊಟ್ಟೆ ತಣ್ಣಗಾಯ್ತು'' ಎಂದಳು ನಗುತ್ತಾ.

''ಛೆ... ನಿನಗ್ಯಾಕೆ ಇಂಥ ದುರ್ಬುದ್ಧಿ? ಇದರಲ್ಲಿ ಆ ಹಸುಗೂಸುಗಳ ತಪ್ಪೇನು ? ನಿನ್ನ ತಂಗಿಯರ ಅಪರಾಧವೇನು ?''

''ಯಾರ ತಪ್ಪೋ... ಏನೋ ನನಗಂತೂ ಗೊತ್ತಿಲ್ಲ...''

''ಅಪಹರಣಕಾರರಿಗೆ ಶಿಕ್ಷೆಯಾಗದೇ ಇರುವುದಿಲ್ಲ... ಜೀವಾವಧಿ ಶಿಕ್ಷೆ ಗೊತ್ತಾ ?...'' ಅವನಿಗೆ ಸಂದೇಹ ಇನ್ನೂ ಹೆಚ್ಚಾಗಿತ್ತು.

''ಹಾಗಾದರೆ ಪೃಥ್ವಿ ಹಣ ಕೊಡುವುದಿಲ್ಲವಾ ?''

''ಅವನೇಕೆ ಹಣ ಕೊಡುತ್ತಾನೆ ? ಮಕ್ಕಳು ಅವನವಲ್ಲ...''

''ಹಾಗಾದರೆ ನೀವು ಕೊಡ್ತೀರಾ ? ಮಕ್ಕಳು ನಿಮ್ಮವು ತಾನೇ...'' ಎಂದಳು ನಗುತ್ತಾ...

''ನೀನು ಹೀಗೆ ಮಾತಾಡುತ್ತಿರುವುದನ್ನು ಕೇಳಿದರೆ, ನಿನ್ನ ಮೇಲಿನ ಸಂದೇಹ ಹೆಚ್ಚಾಗುತ್ತಿದೆ. ನೀನು ಹೀಗೆ ಮಾಡ್ತೀಯ ಅಂತ ನಾನು ಅಂದು ಕೊಂಡಿರಲಿಲ್ಲ...''

''ಈಗ ಗೊತ್ತಾಯ್ತಲ್ಲ ನಾನೇ ಅಂತ. ನನಗೆ ಹಣ ಬೇಕಾಗಿತ್ತು. ಸೇಡನ್ನೂ ತೀರಿಸಿಕೊಳ್ಳಬೇಕಾಗಿತ್ತು. ಯಾರಿಗೆ ಏನಾಗುತ್ತೆ ಅನ್ನೋ ಚಿಂತೆ ನನಗಿಲ್ಲ. ನನಗೆ ಇಪ್ಪತ್ತೈದು ಲಕ್ಷ ರೂಪಾಯಿ ಬೇಕು... ಪೃಥ್ವಿ ಕೊಡಬೇಕು. ಅಥವಾ ನೀವು ಕೊಡಬೇಕು. ಯಾರಾದರೂ ಸರಿ...'' ವಿಚಿತ್ರವಾಗಿ ನಕ್ಕಳು.

'ಪೃಥ್ವಿ, ನಳಿನಿ ಹೇಳಿದ್ದು ಸರಿ. ಇವಳು ನಾಗಿಣಿಯೇ... ಇವಳ ಸಹವಾಸ ಮಾಡಿದ್ದು ಖಂಡಿತಾ ತಪ್ಪು...' ಎಂದುಕೊಂಡ ಮನದಲ್ಲೇ.

''ವಿಶ್ವಾ ಈಗ ನೀವು ಹೇಳಿ, ನೀವು ನನ್ನ ಕಡೆಗೋ... ಪೃಥ್ವಿಯ

ಕಡೆಗೋ... ನಾನು ನಿಮಗೂ ಕಾಲುಭಾಗದಷ್ಟು ಹಣ ಕೊಡ್ತೀನಿ. ಯಾಕೇಂದ್ರೆ ನೀವು ನನಗೆ ಸಹಾಯ ಮಾಡಿದ್ದೀರಿ, ರಕ್ಷಣೆ ಕೊಟ್ಟಿದೀರಿ... ಹ್ಞಾಂ... ಹ್ಞಾಂ.... ನೀವೇನಾದರೂ ಪೋಲೀಸರಿಗೆ ತಿಳಿಸಿದಿರೋ... ನೀವೇ ಜೈಲಿಗೆ ಹೋಗೋರು.... ಯಾಕೆ ಗೊತ್ತಾ ? ನಿಮಗೆ ತಾನೇ ನಳಿನಿಯ ಮೇಲೆ ದ್ವೇಷವಿದ್ದದ್ದು ?''

''ನನ್ನ ತಾಯಿಯ ಮೇಲೆ ದ್ವೇಷಕ್ಕೆ, ನಾನು ಇಂತಹ ಹೀನ ಕೆಲಸಕ್ಕೆ ಮಾತ್ರ ಇಳಿಯುತ್ತಿರಲಿಲ್ಲ. ಈಗ ಆದದ್ದಾಯ್ತು. ಪೋಲೀಸು, ಕೇಸು ಯಾವುದೂ ಬೇಡ... ನಾನೇ ನಿನಗೆ ಹಣ ಕೊಡ್ತೀನಿ. ಮಕ್ಕಳಿಗೆ ಮಾತ್ರ ತೊಂದರೆ ಮಾಡಬೇಡ...''

''ಯಾಕೆ ? ಮಕ್ಕಳು ನಿಮ್ಮದು ಅನ್ನೋ ಮಮತೇನಾ ?''

''ಈ ಮಗುವೂ ನನ್ನದೇ ರೂಪಿಣಿ... ಆದರೆ ನಾನು ಅಧಿಕಾರದಿಂದ ಹೇಳುತ್ತಿಲ್ಲ. ನಿನಗೇನಾದರೂ ಆದರೆ, ನಿನ್ನ ಮಗು ಅನಾಥವಾಗಿಬಿಡುತ್ತೆ. ಅದು ನನಗೆ ಸಹಿಸದ ವಿಷಯ...''

''ಹಾಗಾದರೆ ಪೃಥ್ವಿಗೆ ಹೇಳಿ.. ಒಂದೋ ಅವನು ಈ ಮಗು ತನ್ನದೆಂದು ಒಪ್ಪಿಕೋ ಬೇಕು.. ಅಥವಾ ಇಪ್ಪತ್ತೈದು ಲಕ್ಷ ರೂಪಾಯಿ ಕೊಡಬೇಕು...''

''ನಾನು ಪ್ರಯತ್ನ ಪಡ್ತೀನಿ... ಈಗಾಗಲೇ ಮೇನಕಾ ರೇವತಿಯರ ಸ್ಥಿತಿ ಏನಾಗಿದೆಯೋ... ನಾನು ಹೋಗಿ ನೋಡಿಕೊಂಡು ಬರ್ತೀನಿ... ನೀನು ಇಲ್ಲೇ ಇರು''

''ನಿಮ್ಮನ್ನು ಕಳಿಸ್ತೀನಾ ಈಗ ? ನಿಮ್ಮ ಮೇಲೆ ನನಗೆ ನಂಬಿಕೆ ಇಲ್ಲ ವಿಶ್ವ... ನೀವು ಡಬಲ್‌ಕ್ರಾಸ್ ಮಾಡುಲ್ಲ ಅಂತ ಯಾವ ಖಾತರಿ... ? ಈಗ ನೀವು ನನ್ನ ಜೊತೆಗೇ ಹೊರಡಿ... ನಾನು ಹೋಗುವುದು ಸ್ವಲ್ಪ ಲೇಟಾದರೂ, ಆ ಮಕ್ಕಳ ಗತಿ ಏನಾಗಬಹುದೋ... ಅಲ್ಲಿಂದ ಪೃಥ್ವಿಗೆ ಫೋನು ಮಾಡೋರಂತೆ. ರ್‍ಯಾನ್ಸಮ್ ಕೇಳೋರು ನೀವು...''

''ನಾನು ಅವನಿಗೆ ಫೋನು ಮಾಡೋಲ್ಲ, ನನ್ನ ಧ್ವನಿ ಗೊತ್ತಾಗುತ್ತೆ.''

''ಅದೇ ನನ್ನ ಪ್ಲಾನು ವಿಶ್ವಾ... ನೀವೇ ಹೀಗೆ ಮಾಡಿಸಿದೀರಿ ಅಂತ ಅವನಿಗೆ ತಿಳಿಯಬೇಕು.''

''ಅವನು ನನ್ನ ಸ್ನೇಹಿತ, ನಾನು ಅವನಿಗೆ ಮೋಸ ಮಾಡಲಾರೆ.''

''ಸ್ನೇಹ, ಸ್ನೇಹಿತ ಯಾವುದೂ ಹಣದ ಮುಂದೆ ಅಲ್ಲ. ನಿಮ್ಮದಾಗಿದ್ದ ಹಣದಲ್ಲಿ ಅವನು ಆಸ್ಪತ್ರೆ ಕಟ್ಟಿಸಿದ. ನಿಮಗೆ ಸಿಕ್ಕಿದ್ದೇನು ?'' ವಿಶ್ವ ತನ್ನಲ್ಲೇ ಏನೋ ಆಲೋಚನೆ ನಡೆಸಿದ್ದ. ಮಾತು ಬದಲಾಯಿಸಿದ.

''ಒಂಥರಕ್ಕೆ ನೀನು ಹೇಳೋದು ನಿಜ ರೂಪಿಣಿ... ಈ ಹಣದಲ್ಲಿ ಪೃಥ್ವಿಗೆ ಹಕ್ಕು ಇರಲಿಲ್ಲ. ನನ್ನಿಂದ ಖರ್ಚು ಮಾಡಿಸಿ, ತನ್ನ ತಾತನ ಹೆಸರನ್ನು ಅಮರಗೊಳಿಸಿದ. ನನಗಾಗಲೀ ನನ್ನ ತಾತನಿಗಾಗಲೀ ಯಾವ ಹೆಸರಿಲ್ಲ.''

''ಅದನ್ನೇ ಹೇಳಿದ್ದು, ನಿಮಗೆ ವಿದ್ಯೆ ಬುದ್ಧಿ ಇಲ್ಲ, ಸಂಸ್ಕೃತಿ ಇಲ್ಲ, ಅವನಿಗೆ ತಕ್ಕ ಆಸ್ತಿ ಇಲ್ಲ, ಅಂತಸ್ತಿಲ್ಲ. ನಿಮಗೆ ಸಿಕ್ಕ ನಿಧಿಯ ಮೇಲೂ ಅವನ ಕಣ್ಣು ಬಿತ್ತು... ನಿಮಗೆ ಸಿಕ್ಕಿದ್ದೇನು ? ನೀವು ಹೂಂ ಅನ್ನಿ. ನಾನೂ ನೀವೂ ಇಬ್ಬರೂ ಒಂದಾಗಿ ಪೃಥ್ವಿಗೆ, ನಳಿನಿಗೆ ಬುದ್ಧಿ ಕಲಿಸೋಣ...''

''ನಿನ್ನಷ್ಟು ಧೈರ್ಯವಿಲ್ಲ ರೂಪಿಣಿ... ಸ್ತ್ರೀ ಬುದ್ಧಿ ಪ್ರಳಯಾಂತಕ ಅಂತ ಅನ್ನುತ್ತಾರೆ... ನನ್ನ ಬುದ್ಧಿಗೆ ಮಂಕು ಕವಿದಿತ್ತು... ಸರಿ ಬಾ... ನಾನು ನಿನ್ನ ಜತೆಗಿದೀನಿ... ನಾನು ಹೋಗಿ ಟ್ಯಾಕ್ಸಿ ತರಲಾ ?...''

''ಟ್ಯಾಕ್ಸಿ ಏನೂ ಬೇಡ... ನಿಮ್ಮ ಆಸ್ಪತ್ರೆಯ ಕಟ್ಟಡದಲ್ಲೇ ಅವರುಗಳೆಲ್ಲ ಅವಿತುಕೊಂಡಿರುತ್ತಾರೆ... ನಾವು ಅಲ್ಲಿಗೆ ಹೋಗೋಣ... ಇನ್ನು ಸ್ವಲ್ಪ ಹೊತ್ತಿನಲ್ಲಿ ಒಂದು ಕಾರು ಬರುತ್ತದೆ. ಯಾರಿಗೂ ನಿಮ್ಮ ಮೇಲಾಗಲಿ, ನನ್ನ ಮೇಲಾಗಲಿ ಅನುಮಾನ ಬರುವುದಿಲ್ಲ. ಆದರೆ ಏನಾದರೂ ಹೆಚ್ಚು ಕಡಿಮೆ ಯಾದರೆ, ನಿಮ್ಮ ಮಕ್ಕಳಿಗೇ ಬರುವುದಿಲ್ಲ. ಆದರೆ ಏನಾದರೂ ಹೆಚ್ಚು ಕಡಿಮೆ ಯಾದರೆ, ನಿಮ್ಮ ಮಕ್ಕಳಿಗೇ ತೊಂದರೆ... ಅವರ ಹತ್ತಿರ ರಿವಾಲ್ವರ್‌ಗಳಿವೆ... ನೆನಪಿರಲಿ'' ಅವಳು ಎಚ್ಚರ ಹೇಳಿದಳು. ಇಬ್ಬರೂ ಅರ್ಧಂಬರ್ಧ ಕಟ್ಟಿದ ಆಸ್ಪತ್ರೆಯ ಕಟ್ಟದ ಒಳಗಿನ ಒಂದು ಕೋಣೆಗೆ ಬಂದರು. ಅವರು ಅಲ್ಲಿಯ ಕೂಲಿಕೆಲಸಗಾರರೇ ಇರಬಹುದೇ ಎಂಬ ಅನುಮಾನ ಸಹ ಕಾಡಿತು ಅವನಿಗೆ. ವಿಶ್ವ ಅಲ್ಲಿದ್ದವರ ಕಡೆ ಹಾಗೂ ಮಕ್ಕಳ ಕಡೆ ನೋಡಿದ. ಅವರು ಯಾರೂ ಕೇಡಿಗರಂತೆ ಅನ್ನಿಸಲಿಲ್ಲ. ಮಕ್ಕಳು ಹಾಲು ಕುಡಿದು ಆರಾಮವಾಗಿ ಮಲಗಿದ್ದವು. ಸ್ವಲ್ಪ ನೆಮ್ಮದಿ ಎನಿಸಿತ್ತು. ಅಷ್ಟರಲ್ಲಿ ಕಾರು ಬಂತು.

''ನಾನು ಪಂಡಿತರಿಗೆ ಹೇಳಿ ಬರ್ತೀನಿ... ಇಲ್ಲದಿದ್ದರೆ ಅವರು ನನ್ನನ್ನು ಹುಡುಕಿಸುತ್ತಾರೆ''

''ಏನೂ ಬೇಡ. ಎಲ್ಲ ಕೆಲಸವನ್ನೂ ನೀವು ಪಂಡಿತರಿಗೆ ಹೇಳಿ ಮಾಡಿಲ್ಲ.

ಕಾರಿನಲ್ಲಿ ಫೋನು ಇದೆ. ಅಲ್ಲಿಂದ ಪೃಥ್ವಿಗೆ ಫೋನು ಮಾಡೋರಂತೆ... ಹೊರಡಿ ಹೊತ್ತಾಯ್ತು''

ಎಲ್ಲರೂ ಕಾರನ್ನು ಏರಿದರು. ಎರಡು ಮಕ್ಕಳನ್ನು ಎತ್ತಿಕೊಳ್ಳಲು ಇಬ್ಬರು. ಕಾರಿನ ಡ್ರೈವರ್ ಒಬ್ಬ.. ಅವನ ಬಳಿ ಫೋನು ಇತ್ತು. ಇವನ್ಯಾರು ? ಇವನು ಹೇಗೆ ಪರಿಚಯ ಇವಳಿಗೆ ಎಂದು ಅವನಿಗೆ ಅರ್ಥವಾಗಿರಲಿಲ್ಲ. ಆ ಆಸು ಪಾಸಿನ ಜಾಗವೆಲ್ಲ ವಿಶ್ವನಿಗೆ ಪರಿಚಯವೇ... ಆದರೆ ಹೆಚ್ಚಿಗೆ ಓಡಾಡಿರಲಿಲ್ಲ. ಎರಡು ಮೂರು ಗಂಟೆಗಳ ಪ್ರಯಾಣದ ನಂತರ, ಕಾರು ಒಂದು ಹಳೇ ಕಾಲದ ಹೆಂಚಿನ ಮನೆಯ ಮುಂದೆ ನಿಂತಿತು. ಮನೆಯ ಸುತ್ತಮುತ್ತ ಕಾಡಿನಂತೆ ಬೆಳೆದುಕೊಂಡಿದ್ದ ಗಿಡಬಳ್ಳಿಗಳನ್ನು ಕಂಡ. ಎಲ್ಲರೂ ಇಳಿದು ಒಳಗೆ ಬಂದರು... ಒಳಗೆ ಮನೆ ವಾಸಕ್ಕೆ ಯೋಗ್ಯವಾದಂತಿತ್ತು... ಒಳಗೆ ಹೋದ ರೂಪಿಣಿ ಒಬ್ಬ ವಯಸ್ಸಾದ ವ್ಯಕ್ತಿಯನ್ನು ತನ್ನೊಡನೆ ಕರೆತಂದಳು... ವಿಶ್ವನಿಗೆ ಅವರ ಗುರುತು ಸಿಕ್ಕಲಿಲ್ಲ.

''ವಿಶ್ವಾ ಇವರು ಯಾರು ಗೊತ್ತಾ ? ನನ್ನ ಮೇಷ್ಟ್ರು.... ನಿಮ್ಮ ತಂದೆ'' ಎಂದಳು. ವಿಶ್ವನಿಗೆ ನಂಬಿಕೆ ಬರಲಿಲ್ಲ. ಸುಮ್ಮನಿದ್ದ.

''ಯಾಕೆ ವಿಶ್ವಾ ನಿಮಗೆ ನಿಮ್ಮ ತಂದೆಯನ್ನು ನೋಡಿ ಖುಷಿಯಾಗಲಿಲ್ವಾ ?''

''ಖುಷಿ ಪಡವಂಥ ಕೆಲಸವನ್ನು ಇವರೇನು ಮಾಡಿದಾರೆ'' ಅಂತ ತನ್ನಲ್ಲೇ ಹೇಳಿಕೊಂಡ. ಹಾಗಾದರೆ.... ರೂಪಿಣಿಗೆ ಈ ಉಪಾಯಗಳನ್ನೆಲ್ಲ ಹೇಳಿಕೊಟ್ಟವರನ್ನು... ತಾನು, ಸುಮ್ಮನೆ ಬಿಡಬಾರದು. ಅವರು ನನ್ನ ತಂದೆಯಾದರೂ ಸರಿ, ತಾತನೇ ಆದರೂ ಸರಿ ಎಂದುಕೊಂಡ.....

ವಿಶ್ವನ ತಂದೆ ಎನಿಸಿಕೊಂಡ ವ್ಯಕ್ತಿ ಯಾವ ಮಾತನ್ನೂ ಆಡಲಿಲ್ಲ. ರೂಪಿಣಿ ಒಳಗಿನ ರೂಮಿಗೆ ಹೋದಳು. ವಿಶ್ವ ಅಲ್ಲಿದ್ದ ಕುರ್ಚಿಯ ಮೇಲೆ ಕೂತ. ಆ ವ್ಯಕ್ತಿಯೂ ಅಲ್ಲೇ ಕೂತಿತ್ತು. ರೂಪಿಣಿ ಎಲ್ಲರಿಗೂ ತಿಂಡಿ ಕಾಫಿಯನ್ನು ತಂದಿತ್ತಳು. ಮಕ್ಕಳಿಗೆ ಫೀಡಿಂಗ್ ಬಾಟಲಿಯಲ್ಲಿ ಹಾಲು ಕುಡಿಸಿದಳು. ನಂತರ ವಿಶ್ವನಿಗೆ ಹೇಳಿದಳು. ಫೋನನ್ನು ಅವನ ಕೈಗಿತ್ತಳು.

''ತಗೊಳ್ಳಿ ವಿಶ್ವಾ... ಪೃಥ್ವಿಗೆ ಫೋನು ಮಾಡಿ... ಈಗಾಗಲೇ ಅವನಿಗೆ ಕಾದು ಕಾದು ಸಾಕಾಗಿರುತ್ತೆ. ಐವತ್ತು ಲಕ್ಷ ರೂಪಾಯಿ ಕೇಳಿ... ನಾವೆಲ್ಲಾ ಇಲ್ಲಿಂದ ಹೊರದೇಶಕ್ಕೆ ಹೊರಟುಹೋಗೋಣ. ಅವನ ಮನೆ ಮಕ್ಕಳನ್ನು ಅವನಿಗೇ ಕೊಟ್ಟುಬಿಡೋಣ... ಬೇಕಾದರೆ ಈ ಮಗೂನೂ ಅವನಿಗೆ ಕೊಟ್ಟು ಬಿಡ್ತೀನಿ... ಬ್ರಹ್ಮಚಾರಿಯ ಮಕ್ಕಳು ಚೆನ್ನಾಗಿ ಬೆಳೆಯಲಿ....''

ಫೋನನ್ನು ಎತ್ತಿಕೊಂಡವಳು ನಳಿನಿ. ಅವಳು ವಿಶ್ವನ ಧ್ವನಿಯನ್ನು ಗುರುತಿಸಿದಳು. ''ವಿಶ್ವಾ ಎಲ್ಲಿದೀಯೋ...? ರೇವತಿ ಮೇನಕಾರಿಗೆ ಇನ್ನೂ ಜ್ಞಾನ ಬಂದಿಲ್ಲ... ಪೃಥ್ವಿ ಹೊರಗೆ ಹೋಗಿದಾನೆ...'' ವಿಶ್ವ ರೂಪಿಣಿಯ ಕಡೆ ನೋಡಿದ. ಅವಳು ಹುಂ, ಹೇಳು ಅನ್ನುವಂತೆ ಸಂಜ್ಞೆ ಮಾಡಿದಳು.

''ನನಗೆ ಐವತ್ತು ಲಕ್ಷ ರೂಪಾಯಿ ಬೇಕು... ನಾನು ಮತ್ತೆ ಫೋನು ಮಾಡ್ತೀನಿ... ಹಣ ಸಿಗದಿದ್ದರೆ, ಪೋಲೀಸರಿಗೆ ತಿಳಿಸಿದರೆ, ನಿಮ್ಮ ಮಕ್ಕಳು ಕೈ ಸೇರುವುದಿಲ್ಲ...'' ಎಂದು ಹೇಳಿ ಬಟನ್ ಒತ್ತಿ ಲೈನ್ ಕಟ್ ಮಾಡಿದ.

''ನಿಮಗೆ ಸರಿಯಾಗಿ ಮಾತನಾಡುಕ್ಕೆ ಬರುಲ್ಲ, ವಿಶ್ವಾ... ಹೀಗಾ ರ್‍ಯಾನ್ಸಮ್ ಕೇಳೋದು...?'' ನಕ್ಕಳು.

''ನಾನು ಮಕ್ಕಳನ್ನು ಅಪಹರಿಸಿಲ್ಲ... ನೀನೇ ಮಾತನಾಡು....''

''ಇಷ್ಟು ಹೊತ್ತಿಗೆ ವಿಶ್ವ ಎಂಥವನು ಅಂತ ಪೃಥ್ವಿಗೂ ಅರ್ಥವಾಗಿರುತ್ತೆ. ನೋಡೇ ಬಿಡ್ತೀನಿ... ಅವನಿಗೆ ಸ್ನೇಹಿತ ಹೆಚ್ಚೋ...? ಮಕ್ಕಳು ಹೆಚ್ಚೋ ಅಂತ.''

''ಅಸಂಬದ್ಧ ಮಾತನಾಡಬೇಡ ರೂಪಿಣಿ... ನಿನ್ನ ತಲೆ ಸರಿ ಇಲ್ಲ ಅಂತ ಪೃಥ್ವಿ ಹೇಳಿದ್ದು ನಿಜ... ನಿನಗೆ ಡಾಕ್ಟರರ ಸಲಹೆಯ ಅಗತ್ಯವಿದೆ.''

''ನನ್ನ ಕೈಗೆ ಹಣ ಬರಲಿ... ನಾನು ಸರಿಹೋಗ್ತೀನಿ'' ನಕ್ಕಳು.

ಮತ್ತೆ ಪೃಥ್ವಿ ಫೋನನ್ನೆತ್ತಿಕೊಂಡಾಗ ವಿಶ್ವನ ಧ್ವನಿಯನ್ನು ಗುರುತಿಸಿದ. ''ವಿಶ್ವಾ... ಹೀಗೇಕೆ ಮಾಡಿದ್ರಿ? ಆ ಮಕ್ಕಳು ನಿಮ್ಮವೇ ತಾನೇ... ಆ ಹುಡುಗಿಯರು ನಿಮಗೇನು ಅನ್ಯಾಯ ಮಾಡಿದ್ರು? ನಿಮಗೆ ನಿಮ್ಮ ತಾತನ ಆಸ್ತಿಯ ಹಣ ಬೇಕಾಗಿದ್ರೆ, ಆಸ್ಪತ್ರೆಕಟ್ಟಿಸುವ ನಾಟವನ್ನೇಕೆ ಆಡಿದ್ರಿ?'' ಅದಕ್ಕೆ ಉತ್ತರವಾಗಿ ವಿಶ್ವ ನುಡಿದ.

''ನಾನು ನಾಳೆ ಮಧ್ಯಾಹ್ನ ಮತ್ತೆ ಫೋನು ಮಾಡ್ತೀನಿ. ಹಣವನ್ನು ಎಲ್ಲಿ ಹೇಗೆ ತಲುಪಿಸಬೇಕೂಂತ ಹೇಳ್ತೀನಿ... ಪೋಲೀಸರಿಂದ ದೂರ ಇರಿ ಅಂತ ನಾನೇನೂ ಹೇಳಬೇಕಾಗಿಲ್ಲ'' ಎಂದು ಫೋನು ಇಟ್ಟ. ರೂಪಿಣಿ ನಕ್ಕಳು. ಆ ರಾತ್ರಿ ರೂಪಿಣಿಯೇ ಅಡಿಗೆ ಮಾಡಿ ಎಲ್ಲರಿಗೂ ಬಡಿಸಿದಳು. ಮೂರು ಮಕ್ಕಳನ್ನೂ ಮಲಗಿಸಿ ರೂಪಿಣಿ ವಿಶ್ವನ ಮಗ್ಗುಲಿಗೆ ಬಂದಳು. ವಿಶ್ವ ನಿದ್ದೆ ಬಂದವನಂತೆ ನಟಿಸಿದ.

ತಂಗಿಯರು ಜ್ಞಾನವಿಲ್ಲದೆ ಬಿದ್ದಿದಾರೆ. ಇವಳಿಗೆ ಹಣದ ಚಿಂತೆ. ಪೃಥ್ವಿ ತನ್ನ ಬಗ್ಗೆ ಏನಂದುಕೊಂಡಿರಬಹುದು ? ಆ ತಾತನಿಗೆ ತಕ್ಕ ಮೊಮ್ಮಗ ಅಂತ ಅಂದುಕೊಂಡಿರಬಹುದು... ಛೆ... ಎಂಥಾ ನಾಚಿಕೆಗೇಡು..! ಈ ರೂಪಿಣಿಯ ಸಹವಾಸ ಮಾಡಿದ್ದಕ್ಕೆ ನನಗೆ ಶಿಕ್ಷೆಯಾಯಿತು ಎಂದುಕೊಂಡ... ಇಲ್ಲಿಂದ ಈ ಮಕ್ಕಳನ್ನು ಸುರಕ್ಷಿತವಾಗಿ ಹೇಗೆ ಕರೆದುಕೊಂಡು ಹೋಗುವುದು ಎಂದು ಚಿಂತಿಸುತ್ತಿದ್ದ. ಎದ್ದು ಕಿಟಕಿಯ ಬಳಿಗೆ ಬಂದು ನಿಂತ. ರೂಪಿಣಿಯ ಗೊರಕೆ ಕೇಳಿಸುತ್ತಿತ್ತು. ಹೊರಗೆ ಆ ಕೇಡಿಗರು ಮಲಗಿರುವುದು ತಿಳಿದಿತ್ತು. ಆದರೆ ತನ್ನ ಹತ್ತಿರ ಯಾವುದೇ ಆಯುಧವಿಲ್ಲ. ಇದ್ದರೂ ರಿವಾಲ್ವರ್‌ನಿಂದ ಗುಂಡು ಹಾರಿಸುವುದು ನನಗೆ ತಿಳಿಯದು... ಚಾಕು ಇದ್ದರೆ ಗುರಿ ಇಟ್ಟು ಚುಚ್ಚುವುದು ಸಹ ನನಗೆ ತಿಳಿಯದು. ಬೇರೆ ಉಪಾಯವನ್ನೇ ಹುಡುಕಬೇಕು ಎಂದು ಕೊಂಡು ಹೊರಗೆ ನೋಡಿದ. ಹೊರಗೆ ನಿಂತ ಕಾರನ್ನು ನೋಡಿದ. ಕಾರನ್ನು ನಡೆಸಲು ಬರುವುದಿಲ್ಲ ತನಗೆ... ಹಾಗೆಂದುಕೊಂಡು ಮತ್ತೆ ಬಂದು ಜಮಖಾನದ ಮೇಲೆ ಉರುಳಿಕೊಂಡ. ನಿದ್ದೆ ಬರಲಿಲ್ಲ. ಏನೇನೋ ಚಿಂತೆ... ಪೃಥ್ವಿ ತನ್ನ ಬಗ್ಗೆ ತಪ್ಪು ತಿಳಿದುಕೊಂಡು, ಪೋಲೀಸರಿಗೆ ತಿಳಿಸಿದರೆ, ತನಗೆ ಜೈಲೇ ಗತಿ. ಈ ಜನ್ಮದಲ್ಲಿ ಬಿಡುಗಡೆ ಇಲ್ಲ ಅಂತ ಅಂದುಕೊಂಡಾಗ ಮೈ ಬೆವತಿತು... ನಿದ್ದೆ ಇಲ್ಲದೇ ಹೊರಳಾಡಿದ.

ಬೆಳಿಗ್ಗೆ ಎಚ್ಚರವಾದಾಗ ಏಳುವ ಮನಸ್ಸಾಗಲಿಲ್ಲ. ಈ ದಿನ ಏನಾಗ ಲಿದೆಯೋ... ಪೃಥ್ವಿಗೆ ಐವತ್ತು ಲಕ್ಷವನ್ನು ಹೊಂದಿಸಲಾಗುತ್ತೋ ಇಲ್ಲವೋ... ಈ ಮಕ್ಕಳ ಗತಿ ಏನಾಗುತ್ತೋ... ತನ್ನದು ತಪ್ಪಿಲ್ಲ. ಆದರೆ ತಪಿತಸ್ಥ ಈಗ ನಾನೇ.

ಕಾರು ಹೊರಟ ಸದ್ದು ಕೇಳಿಸಿತು. ಎದ್ದು ಕಿಟಕಿಯ ಬಳಿ ಬಂದು ನಿಂತ... ರೂಪಿಣಿ ಒಳಗೆ ಬಂದಳು. ''ಏನು ನೋಡ್ತಿದೀರಿ ? ಅವರುಗಳು ಹಾಲಿನ ಡಬ್ಬ... ಬಿಸ್ಕತ್ತು, ಹಣ್ಣು ತರಲು ಹೋಗಿದ್ದಾರೆ... ಕಾಫಿ ಕುಡೀತೀರಾ ?''

''ಹೂಂ, ಮೊದಲು ಹಲ್ಲುಜ್ಜಿ ಮುಖ ತೊಳೆದು ಬರ್ತೀನಿ'' ಅಂದ.

''ಅದೆಲ್ಲಾ ನಿಮ್ಮ ಮನೇಲಿ. ಇಲ್ಲಿ ಬೆಡ್‌ಕಾಫಿ...'' ಎಂದು ಅಡಿಗೆಯ ಮನೆ ಕಡೆ ನಡೆದಳು. ಕಿಟಕಿಯ ಬಳಿ ಕೈಗೆ ಸಿಗುವಂತೆ ಇದ್ದ ಬಳ್ಳಿಯನ್ನು ಎಳೆದು ಎಲೆಗಳನ್ನು ಕಿತ್ತು ಬೆರಳಲ್ಲಿ ಉಜ್ಜಿದ... ಅಷ್ಟರಲ್ಲಿ ರೂಪಿಣಿ ಕಾಫಿಯನ್ನು ತಂದಿತ್ತಳು. ಬಿಸಿ ಕಾಫಿಯನ್ನು ಅಸಹ್ಯದಿಂದ ನುಂಗಿದ. ಎಲೆಯ ರಸ ಹತ್ತಿದ್ದ ಕೈ ಬೆರಳುಗಳಲ್ಲಿ ಕಡಿತ ಶುರುವಾಗಿತ್ತು. ಕೆರೆದಷ್ಟೂ ಕಡಿತ ಹೆಚ್ಚಾಗಿತ್ತು. ಅತ್ತಿತ್ತ

ಎಲ್ಲಿಯೂ ಮನೆ ಇದ್ದಂತಿಲ್ಲ ಅಂದುಕೊಂಡು ಬೆರಳುಗಳನ್ನು ಕಿಟಕಿಯ ಸರಳುಗಳಿಗೆ ಉಜ್ಜಿದ. ಕಡಿತ ಕಡಿಮೆಯಾಗಲಿಲ್ಲ. ಇದು ನಸುಗುನ್ನಿ ಬಳ್ಳಿ ಇರಬಹುದೇ ಎಂದುಕೊಂಡು, ಬಾಗಿ ಬಳ್ಳಿಯನ್ನು ಎಳೆದ... ನಸುಗುನ್ನಿ ಕಾಯಿಯ ಬಳ್ಳಿಯ ಎಲೆಗಳಿಂದ ಕಡಿತವಾಗುತ್ತೆ ಎನ್ನುವುದನ್ನು ಅರಿತಿದ್ದ... ಅತ್ತಿತ್ತ ನೋಡಿದ ರೂಪಿಣಿ ಸ್ನಾನದ ಮನೆಗೆ ಹೋಗಿದ್ದಳು. ಮೇಷ್ಟ್ರು ಇನ್ನೂ ಮಲಗಿಯೇ ಇದ್ದರು. ವಿಶ್ವ ಕೈಗೆ ಸಿಕ್ಕಷ್ಟು ಎಲೆಗಳನ್ನು, ಕಾಯಿಗಳನ್ನು ಕಿತ್ತಿಟ್ಟುಕೊಂಡ. ರೂಪಿಣಿ ಸ್ನಾನದ ಮನೆಯಿಂದ ಆಚೆ ಬರುವುದನ್ನ ಕಾದಿದ್ದು ಅವಳೊಡನೆ ನಗುನಗುತ್ತಾ ಮಾತಾಡಿದ.

''ನಾನೂ ಎಷ್ಟು ಪೆದ್ದ... ಸುಲಭವಾಗಿ ಹಣ ಗಳಿಸುವ ಉಪಾಯ ವಂತೂ ತಿಳಿದಿರಲಿಲ್ಲ... ಅಥವಾ ತಾತನ ಹಣವನ್ನೂ ಉಳಿಸಿಕೊಳ್ಳಲಿಲ್ಲ ನಾನು...''

''ಅದಕ್ಕೇ ಹೇಳಿದ್ದು ವಿಶ್ವಾ, ತಲೆ ಬೇಕು ತಲೆ ! ಬರಿ ಮೈ ಬೆಳೆದರೆ ಸಾಲದು..'' ಎನ್ನುತ್ತಾ ಅವನನ್ನು ತಬ್ಬಿಕೊಂಡಳು. ''ವಿಶ್ವ ನನ್ನ ಮೇಲಿನ ಕೋಪದಿಂದ ನನ್ನನ್ನು ದೂರ ಮಾಡಬಿಟ್ಟಿದೀರಾ...'' ಎಂದಳು ಮುನಿಸಿನಿಂದ.

''ಇಲ್ಲ... ರೂಪಿಣಿ ಹತ್ತಿರ ಬಂದ ಹೆಂಗಸನ್ನು ದೂರ ಮಾಡುವಷ್ಟು ಹೇಡಿ ನಾನಲ್ಲ'' ಎನ್ನುತ್ತಾ ಅವಳನ್ನು ಬಳಸಿದ. ತನ್ನ ಕೈಲಿದ್ದ ಎಲೆ, ಕಾಯಿಗಳನ್ನು ಕಿತ್ತು ಅವಳ ಕತ್ತು, ಬೆನ್ನು, ಹೊಟ್ಟೆಗಳ ಮೇಲೆ ಆಡಿಸಿದ. ಕಚಗುಳಿ ಇಡಿಸಿ ಕೊಂಡವಳಂತೆ ಕೊಸರಾಡಿದಳು. ಕಿಲಕಿಲ ನಕ್ಕಳು. ಅವಳ ನಕ್ಕಷ್ಟೂ ಅವನು ಎಲೆಗಳ ರಸವನ್ನು ತಿಕ್ಕಿದ. ಕೆಲವೇ ಕ್ಷಣಗಳಲ್ಲಿ ಅವಳ ಬೆನ್ನು ಕತ್ತುಗಳಲ್ಲಿ ತುರಿಕೆ ಪ್ರಾರಂಭವಾಗಿತ್ತು... ಕೊಸರಿಕೊಂಡಳು. ಸೀರೆಯನ್ನು ಕಿತ್ತು ಎಸೆದಳು. ''ಥೂ, ಕಂಬಳಿ ಹುಳು ಇತ್ತೋ ಏನೋ... ತಣ್ಣೀರಿನಲ್ಲಿ ತೊಳೆದುಕೊಳ್ಳೀನಿ'' ಎನ್ನುತ್ತಾ ಬಚ್ಚಲು ಮನೆಯ ಕಡೆ ಓಡಿದಳು. ಅವಳ ಸೀರೆ ಇವನ ಕೈಯಲ್ಲಿತ್ತು. ಪರಪರನೆ ಸೀರೆಯನ್ನು ಹರಿದು ಅವಳ ಹಿಂದೆಯೇ ಹೋದ. ಅವಳ ಕೆನ್ನೆಗೆ ರಪರಪನೆ ಬಾರಿಸಿ, ಅವಳ ಕೈಗಳನ್ನು ಹಿಂದಕ್ಕೆ ಎಳೆದು ಸೇರಿಸಿ ಕಟ್ಟಿದ. ಕಿರಚಲೆಂದು ಬಾಯಿತೆಗೆದವಳ ಬಾಯಿಗೆ ಬಟ್ಟೆ ತುರಿಕಿ, ಅಲ್ಲಾಡಲಾಗದಂತೆ ಅವಳ ಕಾಲುಗಳನ್ನು ಬಿಗಿದು ಕಟ್ಟಿ ಹೊರಬಂದು, ಬಾಗಿಲನ್ನು ಭದ್ರಪಡಿಸಿದ.

ಅಲ್ಲಿಂದ ತನ್ನ ತಂದೆ ಎಂದು ಹೇಳಿದ್ದ ವ್ಯಕ್ತಿಯ ಬಳಿಗೆ ಬಂದ. ಮುಸುಕು ಬೀರಿ ಮಲಗಿದ್ದವನನ್ನು ಎಬ್ಬಿಸಿ ಚೆನ್ನಾಗಿ ಥಳಿಸಬೇಕೆಂದೆನಿಸುತ್ತಿತ್ತು. ಆ ವ್ಯಕ್ತಿ

ಉಟ್ಟಿದ್ದ ಪಂಚೆಯನ್ನೇ ಕಿತ್ತು ಹರಿದು, ಉಂಡೆ ಮಾಡಿ, ಬಾಯಿಗೆ ತುರಿಕಿದ. ರೂಪಿಣಿ... ಎಂದು ಕಿರುಚಲಾಗದೇ ಲೊಳಲೊಳ ಎಂದು ಒದರುತ್ತಿದ್ದವನ ಕೈಗಳನ್ನು ಹಿಂದಕ್ಕೆ ಸೇರಿಸಿ ಕಟ್ಟಿದ. ಆ ವ್ಯಕ್ತಿಯ ಕಾಲುಗಳಲ್ಲಿ ಶಕ್ತಿ ಇಲ್ಲವೆನ್ನುವುದು ಈ ಮುಂಚೆಯೇ ಗಮನಿಸಿದ್ದ. ಎದ್ದು ಎಲ್ಲಿಯೂ ಓಡಲಾರ ಎಂದು ಅರಿವಾಗಿತ್ತು. ಅವನನ್ನೂ ಅಲ್ಲಿಯ ಬೆಡ್‌ಶೀಟ್‌ನೊಳಗೆ ಸೇರಿಸಿ ಕಟ್ಟಿ, ಮಲಗಿಸಿ, ಮೇಲೆ ಹೊದಿಕೆಯನ್ನು ಹೊದೆಸಿದ.

ಅಷ್ಟರಲ್ಲಿ ಕಾರು ಬಂದು ನಿಂತ ಸದ್ದು ಕೇಳಿಸಿತು. ವಿಶ್ವ ಏನೂ ತಿಳಿಯದ ವನಂತೆ ಮತ್ತೆ ತಾನು ಕುಳಿತಿದ್ದ ಜಾಗಕ್ಕೇ ಬಂದು ಕುಳಿತ. ಕೈಯಲ್ಲಿ ಹಾಲಿನ ಡಬ್ಬ, ತಿಂಡಿಯ ಪೊಟ್ಟಣಗಳನ್ನು ಹಿಡಿದು ಆ ಇಬ್ಬರು ವ್ಯಕ್ತಿಗಳು ಬಂದರು... ಅದನ್ನು ಅಡಿಗೆಯ ಮನೆಯಲ್ಲಿಟ್ಟು ಹಾಗೇ ಬಂದರು.

''ನನಗೆ ತಲೆ ನೋಯ್ತಿದೆ. ಆಸ್ಪಿರಿನ್ ಬೇಕಾಗಿತ್ತು. ಇಲ್ಲಿ ಹತ್ತಿರ ದಲೆಲ್ಲಾದರೂ ಸಿಗುತ್ತಾ?'' ವಿಶ್ವ ಕೇಳಿದ.

''ನಮಗೆ ಗೊತ್ತಿಲ್ಲ. ಡ್ರೈವರನ್ನು ಕೇಳ್ತೀವಿ'' ಎಂದು ಮತ್ತೆ ಇಬ್ಬರೂ ಹೊರಕ್ಕೆ ಬಂದರು. ಮತ್ತೆ ಕಾರು ಹೊರಟ ಸದ್ದಾಯಿತು. ವಿಶ್ವ ಕಾರಿನ ನಂಬರನ್ನು ಗುರುತಿಸಿಟ್ಟುಕೊಂಡ. ರೂಪಿಣಿಯ ಹ್ಯಾಂಡ್‌ಬ್ಯಾಗ್‌ನಲ್ಲಿದ್ದ ಮೊಬೈಲ್ ಫೋನನ್ನೆತ್ತಿಕೊಂಡು, ಪೃಥ್ವಿಯ ನಂಬರನ್ನು ತಿರುಗಿಸಿದ. ಸಂಕ್ಷಿಪ್ತ ವಾಗಿ ಪೃಥ್ವಿಗೆ ವಿಷಯವನ್ನು ತಿಳಿಸಿ, ಕ್ಷಮೆ ಕೇಳಿ, ತನ್ನನ್ನು ನಂಬಬೇಕೆಂದು ಹೇಳಿ, ಕಾರಿನ ನಂಬರನ್ನು, ಬಣ್ಣವನ್ನು, ಡ್ರೈವರನ ಹಾಗೂ ಉಳಿದಿಬ್ಬರ ಚಹರೆಯನ್ನು ತಿಳಿಸಿ, ತಾವು ಇರುವ ಸ್ಥಳ ಆಸ್ಪತ್ರೆಗೆ ಸುಮಾರು ಎರಡು ಮೂರು ಗಂಟೆಗಳ ಪ್ರಯಾಣದ ಅವಧಿಯಷ್ಟು ದೂರದಲ್ಲಿದೆ. ಆದರೆ ಯಾವ ಊರು ಅಂತ ಸರಿಯಾಗಿ ತಿಳಿದಿಲ್ಲ. ಹತ್ತಿರದಲ್ಲಿ ಎಲ್ಲೂ ಅಂಗಡಿಗಳಿಲ್ಲ. ಪ್ರದೇಶ ಕಾಡಿನಂತಿದೆ ಎಂದು ವಿವರಣೆಗಳನ್ನು ಕೊಟ್ಟ.

ಪೃಥ್ವಿಗೆ ತನ್ನ ಮೇಲೆ ನಂಬಿಕೆ ಬರುತ್ತದೋ ಇಲ್ಲವೋ.. ಏನು ಅನಾಹುತ ನಡೆಯಲಿದೆಯೋ ಎಂದು ಹೆದರಿ, ಮಕ್ಕಳು ಮಲಗಿದ್ದ ರೂಮಿನ ಬಾಗಿಲನ್ನು ಹೊರಗಿನಿಂದ ಭದ್ರ ಪಡಿಸಿ, ಅಲ್ಲಿದ್ದ ಬೀಗವನ್ನು ಹಾಕಿದ. ನಗು ಬಂತು. ಇದರ ಉಪಯೋಗವೇ ತನಗೆ ತಿಳಿಯದಲ್ಲ. ಆ ಕಾರು ಮತ್ತೆ ವಾಪಸ್ಸಾಗಿತ್ತು. ಅದರಿಂದ ಇಳಿದ ಆ ದಾಂಡಿಗರು ಒಳಗೆ ಬಂದರು. ವಿಶ್ವ ಕುಳಿತಲ್ಲಿಂದ ಅಲ್ಲಾಡಲಿಲ್ಲ.

"ಆ ಮುದುಕರಿಗೆ ಏನೋ ಬೇಕಂತೆ. ಕೇಳ್ತಾ ಇದ್ದರು.. ಏನಾಗಿದೆ ಅವರಿಗೆ ?" ಏನೂ ತಿಳಿಯದವನಂತೆ ಕೇಳಿದ.

"ಲಕ್ವ ಹೊಡೆದಿದೆ... ಕಾಲು ಬಿದ್ದು ಹೋಗಿದೆ. ಮಲಗಿದ್ದಲ್ಲೇ ಎಲ್ಲಾ ಸೇವೆ ಮಾಡಿಸ್ಕೋತಾನೆ.. ಆವಯ್ಯ" ಎಂದು ಬೈದುಕೊಂಡು ಇಬ್ಬರೂ ರೂಮಿನ ಒಳಕ್ಕೆ ಹೋದರು. ವಿಶ್ವ ಸರ್ರನೆ ಎದ್ದು ರೂಮಿನ ಬಾಗಿಲನ್ನು ಎಳೆದುಕೊಂಡು ಹೊರಗಿನಿಂದ ಚಿಲುಕ ಹಾಕಿದ. ಇಬ್ಬರೂ ಬಾಗಿಲನ್ನು ದಬದಬನೆ ಬಡಿದರು. ಡ್ರೈವರನ್ನು ಕೂಗಿದರು... ಡ್ರೈವರ್ ಒಳಗೆ ಬಂದ.

"ಏನು ? ಏನು ಗಲಾಟೆ ?" ವಿಶ್ವನನ್ನು ಕೇಳಿದ.

"ಆ ನಿಮ್ಮ ಮೇಷ್ಟ್ರು ಸತ್ತು ಹೋದರು ಅಂತ ಕಾಣಿಸುತ್ತೆ... ಬಾಯಿ ಬಡಿದುಕೊಳ್ಳುತ್ತಿದ್ದಾರೆ..." ಎಂದ. ಸಂದೇಹದಿಂದ ಅವನನ್ನೇ ನೋಡಿದ ಡ್ರೈವರು. ವಿಶ್ವ ತನ್ನ ಬಳಿ ಇದ್ದ ಪಿಸ್ತೂಲನ್ನು ಅವನ ಎದೆಗೆ ಗುರಿ ಇಟ್ಟು ನೋಡಿದ.

"ಬಾಯಿಬಿಟ್ಟರೆ, ಅಲ್ಲಾಡಿದರೆ ಸುಟ್ಟು ಬಿಡ್ತೀನಿ... ನಾನು ಕೇಳಿದ್ದಕ್ಕೆ ಉತ್ತರ ಕೊಡು..." ಎಂದ. ಡ್ರೈವರ್ ಸುಮ್ಮನೆ ನಿಂತ.

"ಈ ಕೆಲಸ ಮಾಡುವುದಕ್ಕೆ ಈ ಮೇಡಂ ನಿನಗೆಷ್ಟು ಹಣ ಕೊಡ್ತಾಳೋ ಅದರ ಎರಡರಷ್ಟು ಹಣ ನಾನು ಕೊಡ್ತೀನಿ... ನನ್ನ ಕೆಲಸ ಮಾಡಬೇಕು... ಏನಂತೀಯಾ ? ... ಎಷ್ಟು ಕೊಡ್ತೀನಿ ಅಂತ ಅಂದಿದಾರೆ..?"

"ಐವತ್ತು ಸಾವಿರ... ಈಗಾಗಲೇ ಇಪ್ಪತ್ತು ಸಾವಿರ ರೂಪಾಯೀನ ಅಡ್ವಾನ್ಸ್ ಕೊಟ್ಟಿದಾರೆ" ಎಂದ. ವಿಶ್ವ ನಕ್ಕ.

"ಈ ಮಕ್ಕಳ ಬದಲಿಗೆ ಐವತ್ತು ಲಕ್ಷ ಹಣ ಕೇಳಿದ್ದಾಳೆ. ನಿಮಗೆ ಕೇವಲ ಐವತ್ತು ಸಾವಿರ ! ನಾನು ನಿಮಗೆ ಒಂದು ಲಕ್ಷ ಒಬ್ಬೊಬ್ಬರಿಗೂ ಕೊಡ್ತೀನಿ. ಏನಂತೀರಿ...?"

"ನೀವು ಅವರ ಗಂಡ ಅಂತೆ... ನೀವೇಕೆ ಹೀಗೆ ಹೇಳ್ತಿದೀರಿ..."

"ಅದೆಲ್ಲ ನಿಮಗೇಕೆ ? ಈ ಮಕ್ಕಳು ನನ್ನವು.... ನಿಮ್ಮ ಮೇಡಂಗೆ ಸ್ವಲ್ಪ ತಲೆ ಸರಿ ಇಲ್ಲ. ಎಲ್ಲ ಕೆಲಸ ಮುಗಿದ ಮೇಲೆ ನಿಮ್ಮನ್ನು ಪೋಲೀಸರಿಗೆ ಒಪ್ಪಿಸಿದರೂ ಒಪ್ಪಿಸಬಹುದು. ಆಗ ನಿಮಗೆ ಜೀವಾವಧಿ ಶಿಕ್ಷೆ ಆಗುತ್ತೆ... ನನ್ನ ಮಾತು ಕೇಳಿದರೆ, ನಿಮಗೆ ಏನೂ ತೊಂದರೆಯಾಗದಂತೆ ನೋಡಿಕೊಳ್ತೀನಿ. ನನ್ನ ಆಸ್ಪತ್ರೆಯಲ್ಲಿ ಕೆಲಸ ಕೊಡಿಸ್ತೀನಿ. ಈ ಕೆಟ್ಟ ಕೆಲಸಗಳನ್ನು ಬಿಟ್ಟುಬಿಡಿ."

''ನಿಮ್ಮ ಉಪದೇಶ ನಮಗೆ ಬೇಕಾಗಿಲ್ಲ.'' ಡ್ರೈವರ್ ಗುರ್ ಅಂದ.

''ಸರಿ, ನಿರ್ಧಾರ ನಿಮ್ಮ ಕೈಲಿದೆ... ನಾನು ಅವರಿಗೆ ಫೋನು ಮಾಡಿದೀನಿ. ಇನ್ನು ಒಂದು ಗಂಟೆಯೊಳಗೆ ಇಲ್ಲಿಗೆ ಬರುತ್ತಾರೆ. ಅವರ ಬಳಿ ಹಣ ಇರುತ್ತೆ. ನಾನು ಹೇಳಿದ ಹಾಗೆ ಹಣ ಕೊಡಿಸ್ತೀನಿ. ಇಲ್ಲ ಅಂತಂದರೆ ಪೋಲೀಸರು ನಿಮ್ಮನ್ನು ಅರೆಸ್ಟ್ ಮಾಡಿಕೊಂಡು ಹೋಗ್ತಾರೆ...'' ಒಳಗಿನಿಂದ ಅವರಿಬ್ಬರೂ ಬಾಗಿಲನ್ನು ದಬದಬನೆ ಬಡಿಯುತ್ತಿದ್ದರು.

''ಅವರಿಬ್ಬರಿಗೂ ಸುಮ್ಮನಿರುವಂತೆ ಹೇಳು... ಇಲ್ಲದಿದ್ದರೆ ನಿನ್ನನ್ನು ಕೊಂದು ಹಾಕಿ ಬಿಡ್ತೀನಿ.'' ವಿಶ್ವ ಪಿಸ್ತೂಲನ್ನು ಅವನ ಎದೆಯ ಸಮೀಪಕ್ಕೆ ಹಿಡಿದ. ಡ್ರೈವರ್ರು ಕೈಗಳನ್ನು ಮೇಲಕ್ಕೆ ಎತ್ತಿದ.

ಸ್ವಲ್ಪ ಹೊತ್ತಿನಲ್ಲೇ ಪೃಥ್ವಿ ಕಾರಿನಲ್ಲಿ ಬಂದ. ಅವನ ಜೊತೆ ಬೇರೆ ಇಬ್ಬರು ವ್ಯಕ್ತಿಗಳಿದ್ದರು. ವಿಶ್ವ ಡ್ರೈವರನಿಗೆ ಹೇಳಿದ.

''ನೀನೂ ಆ ರೂಮಿನೊಳಕ್ಕೆ ಹೋಗು... ಯಾರೂ ಗಲಾಟೆ ಮಾಡಬೇಡಿ. ಅವರು ಹಣವನ್ನು ತಂದಿದಾರೆ. ಅವರು ಮಕ್ಕಳನ್ನು ಕರೆದುಕೊಂಡು ಹೋಗಲಿ... ನೀವು ಗಲಾಟೆ ಮಾಡಿದರೆ ಅವನು ನಿಮ್ಮನ್ನು ಖಂಡಿತಾ ಕೊಂದು ಹಾಕ್ತಾನೆ. ನಿಮಗೂ ಮನೆ ಮಠ, ಮಕ್ಕಳು ಸಂಸಾರ ಅಂತ ಇದ್ದರೆ, ನಾನು ಹೇಳಿದ ಹಾಗೆ ಕೇಳಿ...'' ಡ್ರೈವರು ಹೆದರಿರಲಿಲ್ಲ. ಆದರೂ ವಿಶ್ವನನ್ನು ನಂಬಿದ. ವಿಶ್ವ ಅವನನ್ನು ಒಳಕ್ಕೆ ತಳ್ಳಿ ಬಾಗಿಲನ್ನು ಎಳೆದುಕೊಂಡು.

ಪೃಥ್ವಿ ಹಾಗೂ ಆ ಇಬ್ಬರು ವ್ಯಕ್ತಿಗಳು ಒಳಗೆ ಬಂದರು. ಅವರಿಬ್ಬರ ಕೈಯಲ್ಲಿ ಪಿಸ್ತೂಲುಗಳು ಇರುವುದನ್ನು ವಿಶ್ವ ಗಮನಿಸಿದ. ಪೃಥ್ವಿ ತನ್ನ ಕೈಲಿದ್ದ ಸೂಟ್‌ಕೇಸನ್ನು ವಿಶ್ವನ ಮುಂದಿಟ್ಟ.

''ವಿಶ್ವ ನಿಮಗೆ ಹಣ ಬೇಕಾಗಿದ್ದರೆ, ನನ್ನನ್ನು ಕೇಳಿದ್ದರೆ, ಎಷ್ಟು ಬೇಕೋ ಅಷ್ಟು ಕೊಡುತ್ತಿದ್ದೆ. ಈ ನಾಟಕವೆಲ್ಲಾ ಏಕೆ... ತಗೊಳ್ಳಿ... ಇದರಲ್ಲಿ ನಮ್ಮ ತಂದೆಯ ಹಣವೆಲ್ಲ ಇದೆ. ಸದ್ಯಕ್ಕೆ ಐವತ್ತು ಲಕ್ಷವಿಲ್ಲ... ನಿಧಾನವಾಗಿ ಹೊಂದಿಸಿ ಕೊಡ್ತೀನಿ'' ವಿಶ್ವ ಪೃಥ್ವಿಯ ಕೈ ಹಿಡಿದು, ಪಿಸುದನಿಯಲ್ಲಿ ಪೃಥ್ವಿಗೆ ಹೇಳಿದ.

''ನನ್ನನ್ನು ನಂಬಿ ಪೃಥ್ವಿ... ನನಗೂ ಈ ಅಪಹರಣಕ್ಕೂ ಏನೂ ಸಂಬಂಧವಿಲ್ಲ... ಬೇಕಾದರೆ ಈ ಮಕ್ಕಳ ಮೇಲೆ ಆಣೆ ಇಡ್ತೀನಿ. ಮೊದಲು ಈ ಮಕ್ಕಳನ್ನು ನಿಮ್ಮ ಮನೆಗೆ ಕರೆದುಕೊಂಡು ಹೋಗಿ.. ಪೋಲೀಸರನ್ನು ಕರೆಸಿ. ಅಲ್ಲಿ ರೂಪಿಣಿಯನ್ನು ಇಲ್ಲಿ ಆ ಮೇಷ್ಟ್ರನ್ನು ಕಟ್ಟಿಹಾಕಿದ್ದೇನೆ... ಮೊದಲು ಅವರಿಬ್ಬರನ್ನೂ ಅರೆಸ್ಟ್ ಮಾಡಿಸಿ...''

''ನನಗೆ ಗೊತ್ತಿತ್ತು ರೂಪಿಣಿ ಇಂಥವಳೇ ಅಂತ...''

''ನನಗೆ ಗೊತ್ತಾಗಲಿಲ್ಲ ಪೃಥ್ವಿ. ಈಗ ಪಶ್ಚಾತ್ತಾಪವಾಗುತ್ತಿದೆ. ಈಗ ತಡ ಮಾಡಬೇಡಿ... ಆಮೇಲೆ ಕಷ್ಟವಾದೀತು...'' ಎಂದು ಹೇಳಿ ತಾನು ಮಾಡಿದ ಉಪಾಯವನ್ನು ತಿಳಿಸಿದ. ಪೋಲೀಸರಿಗೆ ಫೋನು ಮಾಡಬೇಕೆಂದು ಹೇಳಿದ.

''ಆ ಇನ್ನು ಮೂವರು ಹಣಕ್ಕಾಗಿ ಇಂತಹ ಕೆಲಸ ಮಾಡುವವರು... ಅವರಿಗೆ ಹಣ ಕೊಟ್ಟರೆ ನಮ್ಮ ಕಡೆಗೆ... ನೀವೇ ನಿರ್ಧರಿಸಿ... ನನಗೇನೂ ಆಗ ಬೇಕಾಗಿಲ್ಲ'' ಎಂದ. ಪೃಥ್ವಿ ಪೋಲೀಸ್ ಸ್ಟೇಷನ್‌ಗೆ ಫೋನು ಮಾಡಿದ.

''ನೀವು ಮಕ್ಕಳನ್ನು ಕರೆದುಕೊಂಡು ಹೋಗಿ ವಿಶ್ವಾ... ನಾನು ಮುಂದಿನ ಕೆಲಸಗಳನ್ನು ನೋಡಿಕೊಳ್ತೀನಿ'' ಎಂತಂದ. ಪೃಥ್ವಿಯ ಜತೆಯಲ್ಲಿದ್ದವರು ಪೋಲೀಸಿನವರೇ. ಯೂನಿಫಾರಂನಲ್ಲಿ ಬಂದಿರಲಿಲ್ಲ ಅಷ್ಟೇ. ವಿಶ್ವ ಮಕ್ಕಳನ್ನು ಎತ್ತಿಕೊಂಡು ಹೋಗಿ ಕಾರಿನಲ್ಲಿ ಮಲಗಿಸಿ ಅಲ್ಲೇ ಉಳಿದ. ಪೃಥ್ವಿ ಮೊದಲು ರೂಮಿನ ಬಾಗಿಲನ್ನು ತೆಗೆಸಿ, ಆ ಮೂವರಿಗೆ ಕೋಳ ತೊಡಿಸಿದ. ''ನಮ್ಮದೇನೂ ತಪ್ಪಿಲ್ಲ'' ಅಂತ ಹೇಳಿದವರ ಬಾಯಿ ಬಡಿದರು ಆ ಪೋಲೀಸರು.

ನಿಲ್ಲಲು ಕಷ್ಟಪಡುವ ಮೇಷ್ಟ್ರನ್ನು ಕಂಡು ಪೃಥ್ವಿಗೆ ಕನಿಕರವೆನಿಸಿತು. ತನ್ನ ತಂದೆಯ ವಯಸ್ಸಿನವರಿರಬಹುದು. ರೂಪಿಣಿಯ ಜತೆಗೆ ಸೇರಿ ಇಂತಹ ದುಷ್ಕಾರ್ಯಕ್ಕೆ ಇಳಿದರು ಅಂತನ್ನಿಸಿತ್ತು. ಅವರ ಕಟ್ಟುಗಳನ್ನು ಬಿಚ್ಚಿಸಿದ. ''ರೂಪಿಣಿ ಎಲ್ಲಿ? ಹೇಗಿದಾಳೆ ?'' ಅವರು ಕೇಳಿದಾಗ ಪೃಥ್ವಿ ಮಾತನಾಡಲಿಲ್ಲ.

ಅಷ್ಟರಲ್ಲಿ ಪೋಲೀಸು ವ್ಯಾನು ಬಂದಿತು. ಅದರಲ್ಲಿ ಒಬ್ಬಳು ಹೆಂಗಸು ಕಾನ್‌ಸ್ಟೇಬಲ್ ಇದ್ದಳು. ಅವಳು ರೂಪಿಣಿಯ ಕಟ್ಟುಗಳನ್ನು ಬಿಚ್ಚಿದಳು. ಕೈಗೆ ಕೋಳ ತೊಡಿಸಿದಳು. ಬೇರೆ ಸೀರೆ ಉಡಿಸಿದಳು. ಅಲ್ಲಲ್ಲಿ ಕೆಂಪು ಕೆಂಪು ಗಾಯ ಗಳಾಗಿತ್ತು. ಕೆರೆದುಕೊಂಡು ಭಾಗವೆಲ್ಲಾ ಪರಚಿದಂತೆ ಆಗಿತ್ತು. ರೂಪಿಣಿ ಅಸಹಾಯಕತೆಯಿಂದ ಅಳುತ್ತಿದ್ದಳು. ಪೃಥ್ವಿಗೆ ಕನಿಕರ ಹುಟ್ಟಲಿಲ್ಲ. ಅವಳ ಕಡೆ ತಿರುಗಿಯೂ ನೋಡಲಿಲ್ಲ.

ಪೋಲೀಸರು ಎಲ್ಲರನ್ನೂ ವ್ಯಾನು ಹತ್ತಿಸಿದರು. ಆ ಕಾರನ್ನು ತಮ್ಮ ವಶಕ್ಕೆ ತೆಗೆದುಕೊಂಡು ಕೇಸ್‌ಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಬರೆದಿಟ್ಟು ಕೊಂಡರು. ವ್ಯಾನು ಹೊರಟಿತು. ವಿಶ್ವ ಮೇಷ್ಟ್ರನ್ನೊಮ್ಮೆ ರೂಪಿಣಿಯನ್ನೊಮ್ಮೆ ಅನುಕಂಪದಿಂದ ನೋಡಿದ. ಇಬ್ಬರೂ ತಲೆತಗ್ಗಿಸಿದ್ದರು. ಪೋಲೀಸರು ಮನೆಗೆ ಬೀಗ ಜಡಿದರು.

ಪೃಥ್ವಿ ತಾನು ನಂತರ ಮತ್ತೆ ಪೋಲೀಸ್ ಸ್ಟೇಷನ್‌ಗೆ ಬರುವುದಾಗಿ ತಿಳಿಸಿ ತನ್ನ ಕಾರನ್ನೇರಿದ. ಹಣದ ಸೂಟ್‌ಕೇಸುಗಳನ್ನು ಮರೆಯದೇ ಕಾರಿನಲ್ಲಿ ತಂದಿರಿಸಿಕೊಂಡಿದ್ದ. ಕಾರನ್ನು ಆಸ್ಪತ್ರೆಯ ದಿಕ್ಕಿಗೆ ಓಡಿಸಿದ.

ಹಿಂದಿನ ಸೀಟಿನಲ್ಲಿ ಮಕ್ಕಳನ್ನು ಕೂರಿಸಿಕೊಂಡು ಕೂತಿದ್ದ ವಿಶ್ವನ ಬಗ್ಗೆ ಪೃಥ್ವಿ ಚಿಂತಿಸುತ್ತಿದ್ದರೆ, ಮುಂದಿನ ಸೀಟಿನಲ್ಲಿ ಕುಳಿತು ಕಾರನ್ನೋಡಿಸುತ್ತಿರುವವನನ್ನೇ ಕುರಿತು ಚಿಂತಿಸುತ್ತಿದ್ದ ವಿಶ್ವ. ಹೀಗೇಕಾಯಿತು ?.... ಮುಂದೇನು ? ಎಂದೇ ಇಬ್ಬರ ಚಿಂತೆ.

ಮೇನಕಾ, ರೇವತಿಯರಿಗೆ ಇನ್ನೂ ಜ್ಞಾನ ಬಂದಿರಲಿಲ್ಲ. ತಲೆಗೆ ಬಿದ್ದ ಭಾರೀ ಏಟುಗಳಿಂದ ಅವರಿಬ್ಬರೂ ಬದುಕಿ ಉಳಿಯುವ ಸಾಧ್ಯತೆ ಕಡಿಮೆ ಎಂದು ಡಾಕ್ಟರು ಹೇಳಿದ್ದರು. ಆದರೂ ತಮ್ಮ ಪ್ರಯತ್ನವನ್ನು ಮುಂದುವರೆಸಿದ್ದರು. ಚಿಂತೆಯಿಂದ ಬಳಲಿ ಹೋಗಿದ್ದ ನಳಿನಿ ಮೊಮ್ಮಕ್ಕಳನ್ನು ಕಂಡು ನೆಮ್ಮದಿಯ ನಿಟ್ಟುಸಿರುಬಿಟ್ಟಳು. ವಿಶ್ವ ನಾಚಿಕೆಯಿಂದ ದೂರ ನಿಂತಿದ್ದ. ಪೃಥ್ವಿಯ ಅತಿ ಗಂಭೀರತೆ ಅವಳನ್ನು ಹೆದರಿಸಿತ್ತು.

ವಿಶ್ವನನ್ನು ಪೃಥ್ವಿ ತಪ್ಪು ತಿಳಿದಿದ್ದಾನೆ. ಅವನು ಸಹಾಯ ಮಾಡದೇ ಇದ್ದಿದ್ದರೆ ಈ ಮಕ್ಕಳ ಗತಿ ಏನಾಗುತ್ತಿತ್ತೋ... ಆದರೆ ತಿಳಿಯ ಪಡಿಸುವುದು ಹೇಗೆ ?... ಅಲ್ಲದೇ ಈ ಮೂರು ಮಕ್ಕಳ ತಂದೆ ಈ ವಿಶ್ವನೇ... ಆದರೆ ಎಲ್ಲಾ ಜವಾಬ್ದಾರಿ ಈಗ ಪೃಥ್ವಿಯ ಮೇಲೆ... ಮುಂದೇನಪ್ಪಾ ಗತಿ ? ಚಿಂತಿಸುತ್ತಿದ್ದಳು.

ನಳಿನಿ ಮೊಮ್ಮಕ್ಕಳೊಂದಿಗೆ ಮನೆಗೆ ಬಂದಳು. ವಿಶ್ವ ಪೃಥ್ವಿ ಪೋಲೀಸ್ ಸ್ಟೇಷನ್‌ಗೆ ಹೋದರು. ಮಕ್ಕಳನ್ನು ಅಪಹರಿಸಿದ ತಪ್ಪಿಗೆ ರೂಪಿಣಿ, ಅವಳಿಗೆ ಸಹಾಯ ಮಾಡಿದ ತಪ್ಪಿಗೆ ಆ ಮೇಷ್ಟ್ರಿಗೆ ಶಿಕ್ಷೆಯಾಗುವುದು ಖಂಡಿತಾ ಎಂದು ಇನ್‌ಸ್ಪೆಕ್ಟರ್ ಹೇಳಿದ.

ನಳಿನಿಗೆ, ಆ ಮೇಷ್ಟ್ರೆ ಈ ಅಪಹರಣದಲ್ಲಿ ಶಾಮೀಲಾಗಿದ್ದಾರೆ ಎಂದು ತಿಳಿಸಲು ವಿಶ್ವ ಹೆದರಿದ. ರೂಪಿಣಿಗೆ, ವಿಶ್ವನೊಡನೆ ಮಾತನಾಡಬೇಕೆಂದೆನಿಸಿತ್ತು. ಅವಕಾಶವನ್ನು ಕೇಳಿದ್ದಳು. ವಿಶ್ವ ಹೋಗಿ ಅವಳೆದುರಿಗೆ ನಿಂತ.

''ಮೇಷ್ಟ್ರು ನಿಮ್ಮ ತಂದೆ, ಅವರದ್ದೇನೂ ತಪ್ಪಿಲ್ಲ. ಅವರನ್ನು ಬಿಡಿಸಿಕೊಂಡು ಹೋಗಿ ನಿಮ್ಮ ಮನೆಯಲ್ಲಿಟ್ಟುಕೊಳ್ಳಿ... ನನ್ನ ಮಗುವನ್ನೂ ನೀವೇ ಸಾಕಬೇಕು ವಿಶ್ವಾ... ನನ್ನ ಮೇಲಿನ ದ್ವೇಷಕ್ಕೆ ಪೃಥ್ವಿ ಸಾಕುವುದಿಲ್ಲ'' ವಿಶ್ವ ಏನೂ ಮಾತಾಡಲಿಲ್ಲ.

''ಹಣಕ್ಕಾಗಿ ಅಥವಾ ದ್ವೇಷಕ್ಕಾಗಿ ಏನನ್ನೂ ಸಾಧಿಸಲು ಆಗುವುದಿಲ್ಲ ಅಂತ ನನಗೀಗ ಅರ್ಥವಾಯಿತು. ನನ್ನನ್ನು ಕ್ಷಮಿಸಿ ವಿಶ್ವಾ....'' ಕೈ ಮುಗಿದಳು. ವಿಶ್ವ ಅವಳೆಡೆ ನೋಡಲು ಅಂಜಿದ.

ಪೃಥ್ವಿ ಅಜಯ ವಿಜಯರಿಗೆ ಫೋನು ಮಾಡಿ ಈ ತಕ್ಷಣವೇ ಹೊರಟು ಬರಬೇಕೆಂದು ತಿಳಿಸಿದ. ಎರಡು ಮೂರು ದಿನಗಳ ಕಾಲ ಬದುಕಲು ಹೋರಾಟ ನಡೆಸಿದ ಮೇನಕಾ ರೇವತಿಯರು ಕಡೆಗೊಮ್ಮೆ ಕೊನೆ ಉಸಿರೆಳೆದರು. ಅದೇ ರಾತ್ರಿ ಅಜಯ ವಿಜಯರು ಬಂದಿಳಿದರು.

ಈ ದುರಂತಕ್ಕೆ ಕಾರಣರಾದ ಮಕ್ಕಳ ಬಗ್ಗೆ ಅವರಿಗೆ ಏನೂ ಅನ್ನಿಸಲೇ ಇಲ್ಲ. ಈಗಾಗಲೇ ಹೆಂಡತಿಯರನ್ನು ದೂರ ಮಾಡಿಬಿಟ್ಟಿದ್ದರಿಂದ ತಮ್ಮ ದುಃಖ ವಿಚಾರಿಸುವವರೇ. ವಿಷಯ ತಿಳಿದ, ರೂಪಿಣಿಯ ಚಿಕ್ಕಮ್ಮ ಅವಳಿಗೆ ಹಿಡಿ ಶಾಪ ಹಾಕಿದಳು. ಬಂದ ಕೆಲಸ ಮುಗಿದ ಕೂಡಲೇ ಅಜಯ ವಿಜಯರು ಮತ್ತೆ ಅಮೆರಿಕಾಕ್ಕೆ ಹೊರಟು ನಿಂತರು.

''ಈಗ ಮಕ್ಕಳ ಗತಿಯೇನು ? ಒಂದು ಇತ್ಯರ್ಥವಾಗಲೇ ಬೇಕು... ಇಲ್ಲಿಗೇ ಬಂದು ಬಿಡಿ. ಮತ್ತೆ ಮದುವೆಯಾಗಿ ಹೊಸದಾಗಿ ಜೀವನ ಪ್ರಾರಂಭಿಸುವರಂತೆ'' ನಳಿನಿ ನುಡಿದಾಗ ಅವರಿಬ್ಬರೂ ನಕ್ಕರು.

''ನಮಗೇ ಜೀವನ ಭಾರವೆನಿಸುತ್ತಿದೆ. ನಮಗೆ ಹೊಸ ಜೀವನದ ಬಗ್ಗೆ ಯಾವ ಆಸೆಯೂ ಇಲ್ಲ. ಈ ಮಕ್ಕಳನ್ನು ಅನಾಥಾಶ್ರಮಕ್ಕೆ ಕೊಟ್ಟುಬಿಡಿ'' ನಮ್ಮ ನಿರ್ಧಾರವನ್ನು ತಿಳಿಸಿದರು.

''ಛೀ... ಬಿಡ್ತು ಅನ್ನಿ. ನಾವೆಲ್ಲಾ ಬದುಕಿದ್ದ ಈ ಮಕ್ಕಳನ್ನು ಯಾರಾದರೂ ಅನಾಥಾಶ್ರಮಕ್ಕೆ ಸೇರಿಸ್ತಾರಾ ? ನಿಮ್ಮೊಂದಿಗೇ ಕರೆದುಕೊಂಡು ಹೋಗಿ'' ಎಂದಳು.

''ಈ ಮಕ್ಕಳು ನಮ್ಮವಲ್ಲ. ಮೇನಕಾ ರೇವತಿಯರ ಹಂಬಲಕ್ಕೆ ಒಪ್ಪಿದ್ದೆವು ಅಷ್ಟೇ... ಅಲ್ಲದೇ ಅಮೆರಿಕಾಕ್ಕೆ ಈ ಮಕ್ಕಳನ್ನು ಕರೆದೊಯ್ಯುವುದು ಸುಲಭವಲ್ಲ. ನಮಗೆ ಈ ಸಂಬಂಧವೇ ಬೇಡ'' ಎಂದು ಬಿಟ್ಟರು.

ನಳಿನಿ ವ್ಯಥೆಯಿಂದ ವಿಶ್ವನನ್ನು ಪೃಥ್ವಿಯನ್ನು ನೋಡಿದಳು. ರೂಪಿಣಿ ಯಿಲ್ಲದೇ ಈ ಮಗು ಬೆಳೆಯುವುದು ಹೇಗೆ ಎಂದು ಚಿಂತಿಸುತ್ತಿದ್ದ ನಳಿನಿಗೆ ಈ ಮಕ್ಕಳ ಹೊಣೆ ಈಗ ಯಾರ ಮೇಲಿದೆ ಎಂದು ಚಿಂತಿಸುವಂತಾಗಿತ್ತು. ಮೇನಕಾ, ರೇವತಿಯರ ತಾಯಿ ಈ ಮೂರು ಮಕ್ಕಳನ್ನು ಕರೆದೊಯ್ದು

ಸಾಕುವುದು ಸುಳ್ಳು... ಅಲ್ಲದೇ ಮೊಮ್ಮಕ್ಕಳಿಗಾಗಿ ಹಂಬಲಿಸಿದವಳು ನಾನು... ಈಗ ನನ್ನ ಜವಾಬ್ದಾರಿ ಮತ್ತೆ ಹೆಚ್ಚಾಯಿತು. ಇದಕ್ಕೆ ಪೃಥ್ವಿ ವಿಶ್ವ ಒಪ್ಪುವರೇ... ಎಂದುಕೊಂಡಳು.

ನಳಿನಿಯ ಮನಸ್ಸಿನ ಭಾವನೆಗಳನ್ನು ಅರಿತವರಂತೆ, ವಿಶ್ವ ಪೃಥ್ವಿ ಇಬ್ಬರೂ ಮುಖ ಮುಖ ನೋಡಿಕೊಂಡರು.

''ತನಗೆ ಬೇಡವಾದರೂ ಈ ಹೊಸ ಜವಾಬ್ದಾರಿ ನನ್ನ ಹೆಗಲಿಗೇರಿದೆ... ಇದರಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ'' ಎಂದು ಪೃಥ್ವಿ ಯೋಚಿಸುತ್ತಿದ್ದರೆ... ''ಪಾಪ ಈ ಪೃಥ್ವಿ ಎಷ್ಟು ಅಸಹಾಯಕ..? ಈ ಅನಾಹುತಗಳಿಗೆಲ್ಲ ನಾನು ಕಾರಣ. ತಾನೀಗ ಅವನಿಗೆ ಹೇಗೆ ಸಹಾಯಕನಾಗಬಲ್ಲೆ?'' ಎಂದು ವಿಶ್ವ ಯೋಚಿಸುತ್ತಿದ್ದ.

ತನ್ನ ಆಸೆ ಆಕಾಂಕ್ಷೆಗಳನ್ನು ಬದಿಗಿಟ್ಟು, ಬೇರೆಯವರ ಭಾವನೆಗಳಿಗೇ ಬೆಲೆಕೊಟ್ಟು ಭೀಷ್ಮಾಚಾರಿಯಂತೆ ಬದುಕುತ್ತಿರುವ ಪೃಥ್ವಿಯ ಜವಾಬ್ದಾರಿ ಈಗ ಹೆಚ್ಚಿತ್ತು. ವಿಶ್ವನ ಮನಸ್ಸು ಕಲಕಿತ್ತು.

ಸೇಡಿನ ಮನೋಭಾವನೆಯಿದ್ದರೂ ಪೃಥ್ವಿಯ ವ್ಯಕ್ತಿತ್ವಕ್ಕೆ ಆಕರ್ಷಿತನಾಗಿದ್ದ. ರೂಪಿಣಿಯ ಯೌವನಕ್ಕೆ ಮರುಳಾಗಿ, ಈ ವರ್ತುಲಕ್ಕೆ ಸಿಕ್ಕಿ ಬಿದ್ದು ಈ ಮಕ್ಕಳ ತಂದೆ ತಾನೇ ಎಂದು ಬಹಿರಂಗವಾಗಿ ಹೇಳಿಕೊಳ್ಳಲಾರ. ಈಗ ಈ ವಿಚಿತ್ರ ಸ್ಥಿತಿಗೆ, ಅವನೇ ಕಾರಣನಾದರೂ, ಈ ಹೊಸ ಜವಾಬ್ದಾರಿಗಳನ್ನು ಯೋಚಿಸುವುದೂ ಬೇಕಿರಲಿಲ್ಲ. ಪರಿಸ್ಥಿತಿ ಕಠಿಣವೆನಿಸಿತ್ತು. ಆದರೂ....

ಈಗ ಒಂದು ಹೊಸ ಅಧ್ಯಾಯ ಪ್ರಾರಂಭವಾಗಿದೆ. ಈ ಹೊಸ ಅಧ್ಯಾಯದ ಕರ್ತೃ ನಾನು..... ನಾನು ಆಧುನಿಕ ವ್ಯಾಸನಂತೆ... ಎಂದು ತನಗೆ ತಾನೇ ಹೇಳಿಕೊಂಡರೂ, ಮಹದಾನಂದವೇನೂ ಆಗಿರಲಿಲ್ಲ. ಕಸಿವಿಸಿಯಾಗಿತ್ತು. ಆದರೆ... ತನ್ನದಲ್ಲದ ಜವಾಬ್ದಾರಿಗಳಿಗೆ ಹೆಗಲು ಕೊಟ್ಟು ಕರ್ಮಿಷ್ಠನಾದ ಪೃಥ್ವಿ ಆಧುನಿಕ ಭೀಷ್ಮಾಚಾರ್ಯ... ಅವನು ನಿಷ್ಠ, ಅವನು ನನಗಿಂತ ಶ್ರೇಷ್ಠ ಎಂದುಕೊಂಡಾಗ ಅವನ ಮೇಲಿನ ಅಭಿಮಾನ ಅಧಿಕವಾಗಿತ್ತು. ತಾನೇ ಒಂದು ನಿರ್ಧಾರಕ್ಕೆ ಬಂದ. ಇನ್ನು ಮುಂದೆ ತಾವಿಬ್ಬರೂ ಒಂದಾಗಿ, ಈ ಮಕ್ಕಳನ್ನು ಈ ಯುಗದ ಸತ್ಪ್ರಜೆಗಳನ್ನಾಗಿ ಬೆಳೆಸುವುದು ನಮ್ಮ ಕರ್ತವ್ಯ. ಅದನ್ನು ನಾವು ಪಾಲಿಸಬೇಕು. ಈ ಮಕ್ಕಳು ನನ್ನಂತೆ, ಪೃಥ್ವಿಯಂತೆ, ರೂಪಿಣಿಯಂತೆ, ಆಸೆಗಳನ್ನು ಅದುಮಿಟ್ಟು ಬೆಳೆಯಬಾರದು... ಈ ಪುನರಾವರ್ತನೆಯಾಗ

ಬಾರದು ಎಂದುಕೊಂಡು ಪೃಥ್ವಿಯ ಬಳಿಗೆ ಬಂದು ನಿಂತ. ಆದರೆ ಮನದಲ್ಲಿದುದನ್ನು ಬಾಯಿಬಿಟ್ಟು ಹೇಳಲಾಗಲಿಲ್ಲ. ಅವನ ಮನಸ್ಸನ್ನು ಓದಿಕೊಂಡವನಂತೆ, ಪೃಥ್ವಿ ನುಡಿದ.

''ಈಗ ನನ್ನ ಸ್ಥಿತಿ ಏನೂಂತ, ನಿಮಗಲ್ಲದೇ ಇನ್ಯಾರಿಗೂ ಅರ್ಥವಾಗುವುದು ಸಾಧ್ಯವಿಲ್ಲ. ನಿಮ್ಮ ಸಹಕಾರ, ಸಹಾಯ.. ಸ್ನೇಹ ನನಗೀಗ ಅತ್ಯಗತ್ಯ. ನಿಮ್ಮ ಹೊರತು ನಮಗೆ ಬೇರೆ ಯಾರಿಲ್ಲ. ದಯವಿಟ್ಟು ಇನ್ನು ಮುಂದೆ ನಮ್ಮ ಜೊತೆಗಿದ್ದು ಈ ಮಕ್ಕಳನ್ನು ಮುಂದೆ ತರಲು ಸಹಾಯ ಮಾಡಬೇಕು. ಇಲ್ಲದಿದ್ದರೆ ನನ್ನ ಬದುಕು ದುಸ್ತರವಾಗುತ್ತೆ...'' ಅವನ ಧ್ವನಿ ಉಡುಗಿದಂತಾಗಿತ್ತು.

''ಛೆ... ಎಂಥಾ ಮಾತಾಡ್ತೀರಿ ಪೃಥ್ವೀ.... ನಿಮ್ಮಂತಹ ನಿಸ್ವಾರ್ಥ ವ್ಯಕ್ತಿಗಳು ನೂರು ವರ್ಷ ಬದುಕಬೇಕು. ಉಳಿದವರಿಗೆ ಮಾರ್ಗದರ್ಶನವಾಗಬೇಕು. ನಿಮ್ಮಂಥೋರ ಜತೇಲಿದ್ರೆ, ನನ್ನಂಥೋನ ಪುಣ್ಯವೃದ್ಧಿಯಾಗುತ್ತೆ.. ನನಗೆ ಅದೇ ಶ್ರೇಯಸ್ಸು... ಇಂದಿನಿಂದ ನಿಮ್ಮ ಸುಖದುಃಖಗಳಲ್ಲಿ ನಾನು ಸಮಭಾಗಿ'' ಎಂದ ವಿಶ್ವಾಸಪೂರ್ವಕವಾಗಿ. ಇಬ್ಬರೂ ನಳಿನಿ ಕುಳಿತಿದ್ದೆಡೆಗೆ ಬಂದರು.

ರಾಮಲಕ್ಷ್ಮಣರಂತೆ, ಅನ್ಯೋನ್ಯವಾಗಿ ಒಳಗೆ ಬಂದವರನ್ನೇ ನಳಿನಿ ಮೆಚ್ಚುಗೆಯಿಂದ ನೋಡಿದಳು. ಒಂದಲ್ಲ ಒಂದು ರೀತಿಯಲ್ಲಿ ಇಬ್ಬರೂ ನನ್ನನ್ನು ಸಾಕಷ್ಟು ಚಿಂತೆಗೀಡು ಮಾಡಿದ್ದಾರೆ. ಆದರೆ ಈಗ ಇಬ್ಬರೂ ಒಂದಾಗಿದ್ದಾರೆ. ಈ ಸಮಸ್ಯೆಯನ್ನು ಪರಿಹರಿಸಲು ಇವರೇ ಸಮರ್ಥರು... ಇವರಿಬ್ಬರಿಗೆ ಈ ಮಕ್ಕಳ ಜವಾಬ್ದಾರಿಯನ್ನು ವಹಿಸಿ ನಾನು ನಿಶ್ಚಿಂತೆಯಾಗಿರುತ್ತೇನೆ ಎಂದು ಹೇಳಿಕೊಂಡಳು.

ತೊಟ್ಟಿಲುಗಳಲ್ಲಿ ನಿರಾತಂಕವಾಗಿ ಮಲಗಿ ನಿದ್ರಿಸುತ್ತಿದ್ದ ಮೊಮ್ಮಕ್ಕಳ ಮುಗ್ಧ ಮುಖಗಳನ್ನೇ ನೋಡಿದಳು. ಪೃಥ್ವಿಯ ರಕ್ಷಣೆ, ಅದರೊಂದಿಗೆ ವಿಶ್ವನ ಬೆಂಬಲ ಈ ಮಕ್ಕಳ ಮೇಲಿದೆ. ಏನೇ ಸಮಸ್ಯೆ ಬಂದರೂ ಒಟ್ಟಾಗಿ ಎದುರಿಸುವ ಛಲ, ಬಲ ಇವರಲ್ಲಿದೆ... ಇವರಿಬ್ಬರೂ ನನ್ನ ಭುಜಬಲರು... ನನಗೆ ಇನ್ನು ಯಾವ ಭಯವೂ ಇಲ್ಲ ಎಂದುಕೊಂಡು ನಿರಾಳವಾಗಿ ಉಸಿರನ್ನು ಬಿಟ್ಟಳು.

ತನ್ನ ಎಡಬಲಗಳಲ್ಲಿ ನಿಂತಿದ್ದವರನ್ನು ಉದ್ದೇಶಿಸಿ ನುಡಿದಳು.

''ಇನ್ನಾದರೂ ನೀವಿಬ್ಬರೂ ಮದುವೆಯಾಗ್ತೀರಾ? ತಾಯಿಯಿಲ್ಲದೇ ಈ ಮಕ್ಕಳು ಹೇಗೆ ಬೆಳೆದಾವು ?'' ಇಬ್ಬರೂ ಮುಖ ಮುಖ ನೋಡಿಕೊಂಡರು.

''ತಾಯಿಯಿಲ್ಲದೇ ಅನೇಕ ವರ್ಷಗಳು ಬೆಳೆದವನು ನಾನು. ನನಗೆ ಅಜ್ಜಿ ಸಹ ಇರಲಿಲ್ಲ. ಈ ಮಕ್ಕಳಿಗೆ ಆ ಕೊರತೆ ಇಲ್ಲ.... ದಯವಿಟ್ಟು ನನ್ನ ಮದುವೆಯ ಮಾತನ್ನು ಮಾತ್ರ ಎತ್ತಬೇಡಿ'' ಎಂದ ಪೃಥ್ವಿ.

''ತಾಯಿಯಿದ್ದೂ ಆ ಪ್ರೀತಿಯಿಂದ ವಂಚಿತನಾದವನು ನಾನು. ವಿಧಿ ಈ ಮಕ್ಕಳನ್ನು ಬೇರೊಂದು ರೀತಿಯಲ್ಲಿ ವಂಚಿಸಿದೆ. ಈಗ ನಿಮಗಿಂತ ಬೇರೆ ತಾಯಿಯ ಅವಶ್ಯಕತೆ ಈ ಮಕ್ಕಳಿಗಿಲ್ಲ. ಮದುವೆಯ ಮಾತನ್ನೆತ್ತುವುದಾದರೆ ನಾನು ಈ ಮನೆಯಲ್ಲಿ ಇರುವುದಿಲ್ಲ'' ವಿಶ್ವ ನುಡಿದ.

''ಸರಿಯಪ್ಪಾ... ನೀವಿಬ್ಬರೂ ಹಠವಾದಿಗಳು. ಬ್ರಹ್ಮಚಾರಿಯ ಮಕ್ಕಳಾಗಿ ಬೆಳೆಯಬೇಕೂಂತ ವಿಧಿನಿಯಮವಿದ್ದರೆ, ನಾನು ಅದನ್ನು ಬದಲಾಯಿಸಲಾಗುವುದಿಲ್ಲ... ಇನ್ನು ನಾನು ಏನೂ ಹೇಳುವುದಿಲ್ಲ. ನೀವುಂಟು.. ನಿಮ್ಮ ಈ ಮಕ್ಕಳುಂಟು...'' ಎಂದಳು ಗಂಭೀರವನ್ನು ನಟಿಸಿ. ಪೃಥ್ವಿ, ವಿಶ್ವ ಇಬ್ಬರೂ ಸಮಾಧಾನದ ನಗೆಯನ್ನು ನಕ್ಕರು.... ವಿಶ್ವಾಸದಿಂದ ಕೈ ಕುಲುಕಿಕೊಂಡರು, ಹೆಗಲನ್ನೇರಿದ ಹೊಣೆ ಭಾರವೆನಿಸಿದ್ದರೂ.......

* * * * * *

ಹೊಣೆಗಾರ

ಪದ್ಮಾ ಶ್ರೀಧರ್



ನಂದಿನಿ ವಿಶ್ವನಿಗೆ ಸ್ವಂತ ತಾಯಿ ; ಪೃಥ್ವಿಗೆ ಮಲತಾಯಿ. ವಿಶ್ವ ತನ್ನ ತಾಯಿ ತನಗೆ ದ್ರೋಹ ಮಾಡಿದಳೆಂದು ಸಮಯ ಬಂದಾಗ ಸೇಡನ್ನು ತೀರಿಸಿ ಕೊಳ್ಳುವ ಮನೋಭಾವದವನು. ಆದರೆ ಪೃಥ್ವಿ, ತನ್ನ ತಾಯಿಯ ಸ್ಥಾನವನ್ನು ಆಕ್ರಮಿಸಿಕೊಂಡ ಚಿಕ್ಕಮ್ಮನ ಮೇಲೆ ಯಾವ ಆಕ್ರೋಶವೂ ಇಲ್ಲ, ಅಗೌರವವೂ ಇಲ್ಲ. ವಿದ್ಯಾವಂತ, ಸುಸಂಸ್ಕೃತ ಯುವಕ. ಚಿಕ್ಕಮ್ಮ ತನ್ನ ಜವಾಬ್ದಾರಿ, ಅವಳನ್ನು ನೋಡಿಕೊಳ್ಳಬೇಕಾದುದು ತನ್ನ ಕರ್ತವ್ಯ ಎಂದು ಅದರಂತೆ ನಡೆದುಕೊಳ್ಳುತ್ತಾನೆ.

ವಿಶ್ವ ಹಾಗೂ ಪೃಥ್ವಿ, ಇಬ್ಬರೂ ಸಮಾನಾಂತರ ವಾಗಿ, ತಮ್ಮ ತಮ್ಮ ಅನಿಸಿಕೆಗಳಿಗೆ ತಕ್ಕಂತೆ ವರ್ತಿಸಿದರೂ ತಮ್ಮ ತಮ್ಮ ಭಾವನೆಗಳಿಗೆ ಸ್ಪಂದಿಸಿದರೂ ಇಬ್ಬರೂ ಒಬ್ಬರಿಗೊಬ್ಬರು ಪೂರಕವಾಗುತ್ತಾರೆ. ವಿಶ್ವನ ನೋವು ಪೃಥ್ವಿಗೆ ಅರ್ಥವಾಗಿ ಮನಮರುಗಿ ಅವನನ್ನು ತನ್ನ ಆಪ್ತಮಿತ್ರನನ್ನಾಗಿ ಮಾಡಿಕೊಳ್ಳುತ್ತಾನೆ. ಪೃಥ್ವಿ ತನ್ನ ತಾಯಿಯ ಮಲಮಗ ಎಂದು ತಿಳಿದೂ ಪೃಥ್ವಿಯ ನಡೆನುಡಿ, ತಿಳುವಳಿಕೆಗೆ ಮಾರು ಹೋಗಿ ವಿಶ್ವ ಅವನನ್ನು ತನ್ನ ಸ್ನೇಹಿತನನ್ನಾಗಿ ಮಾಡಿಕೊಳ್ಳುತ್ತಾನೆ.

ಒಬ್ಬನನ್ನು ಹೆತ್ತತಾಯಿ ; ಮತ್ತೊಬ್ಬನನ್ನು ಸಾಕಿದ ತಾಯಿ, ಈ ದ್ವಂದ್ವಗಳ ನಡುವೆಯೂ ನಂದಿನಿ ತಾನು ಸೇರಿದ ಮನೆಯ ವಂಶ ಬೆಳೆಯಲೆಂದು ಹಂಬಲಿಸು ತ್ತಾಳೆ. ಅವಳ ಈ ಹಂಬಲದಿಂದ ವಿಶ್ವನ ಹಾಗೂ ಪೃಥ್ವಿಯ ಹೊಣೆ ಹೆಚ್ಚುತ್ತದೆ. ಹೊಣೆ ಎಂಬ ನೊಗಕ್ಕೆ ಇಬ್ಬರೂ ತಮ್ಮ ಹೆಗಲನ್ನು ಕೊಡುತ್ತಾರೆ.

ಸೌಮ್ಯ ಎಂ.

ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು,

ನಂ. 7/1, ಎಂ.ಎನ್. ಕೃಷ್ಣರಾವ್ ಪಾರ್ಕ್ ಎದುರು,

ಬಸವನಗುಡಿ, ಬೆಂಗಳೂರು - 560 004.